SATYANVESHANA TRUST
102, 2nd 'A' Cross,
Near N.E.T. School, Gavipuram Extn,.
BANGALORE South - 560 019. Karnataka

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ

ದ್ವಿತೀಯ ರತ್ನವು — ಆರನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಅಧಿಕಾರಿವಿಭಾಗಾಧಿಕಾರೋಽಷ್ಟಮಃ

ಉಪಾಯವಿಭಾಗಾಧಿಕಾರೋ ನವಮಃ

ಪ್ರಪತ್ತಿಯೋಗ್ಯಾಧಿಕಾರೋ ದಶಮಃ

11

12

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡು ಸರ್ಕಲ್ ಇನ್ಸ್ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

" ಆಚಾರ್ಯ ಹೃದಯಾನ್ವೇಷಿಣೀ "
ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ
ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ :
ಗಿರಿಜಾವಿಲಾಸ ಪ್ರೆಸ್, ಅವಿನ್ಯೂರೋಡ್
೧೯೩೧

ಕ್ರಯ ೯ ಆಣೆಗಳು

ಶ್ರಿಯೈ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತಮಹಾದೇಶಿಕಾಯ ನಮಃ 13.2.2002

ಅಥ ಅಧಿಕಾರಿವಿಭಾಗಾಧಿಕಾರಃ ೮.

ಮುಮುಕ್ಷುತ್ವೇ ತುಲ್ಯೇ ಸತಿ ಚ ಮಧುವಿದ್ಯಾದಿಷು ಯಥಾ ।
ವ್ಯವಸ್ಥಾ ಸಂಸಿಧ್ಯತ್ಯಧಿಕೃತಿವಿಶೇಷೇಣ ವಿದುಷಾಂ ।

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಅವತಾರಿಕೆ. ಹಿಂದಿನ ಅಧಿಕಾರದಲ್ಲಿ ಮುಮುಕ್ಷುವಾದ ಅಧಿಕಾರಿ ಎಂದು ಹೇಳಿಸಿಕೊಳ್ಳಲು ಈತನು ಹೇಗೆ ವರ್ತಿಸತಕ್ಕದ್ದೆಂಬುವದನ್ನು ವಿಶದವಾಗಿ ತಿಳಿಸಿ, ಅಂತಹ ಅಧಿಕಾರಿಗಳು ಭಕ್ತಿನಿಷ್ಠರೆಂದೂ, ಪ್ರಪತ್ತಿನಿಷ್ಠರೆಂದೂ, ಎರಡು ವಿಧವೆಂದು ಹೇಳಿ, ಉಕ್ತಿನಿಷ್ಠರೆಂದೂ ಆಚಾರ್ಯನಿಷ್ಠರೆಂದೂ ವಿಭಾಗಿಸಿ ಹೇಳುವ ಅಧಿಕಾರಿಗಳು ಪ್ರಪತ್ತಿನಿಷ್ಠರಲ್ಲೇ ಅಂತರ್ಗತರೆಂದೂ ಹೇಳುತ್ತಾರೆ.

ಅರ್ಥ—ವಿದುಷಾಂ - ಬ್ರಹ್ಮವಿದ್ಯಾನಿಷ್ಠರಾದ ಭಕ್ತಿಯೋಗದಲ್ಲಿಳಿದು ಉಪಾಸನಾನುಷ್ಠಾನದಲ್ಲಿರುವವರಿಗೆಲ್ಲಾ, **ಮುಮುಕ್ಷುತ್ವೇ** - ಮೋಕ್ಷಾರ್ಥಿಗಳಾಗಿರುವಭಾವವು, **ತುಲ್ಯೇಸತಿ ಚ** - ಸಮವಾಗಿದ್ದರೂ ಕೂಡ, **ಯಥಾ**- ಹೇಗೆ, **ಮಧುವಿದ್ಯಾದಿಷು**-ಮಧು ವಿದ್ಯೆ ಪಂಚಾಗ್ನಿವಿದ್ಯೆ, ಸದ್ವಿದ್ಯೆ, ದಹರವಿದ್ಯೆ ನೊದಲಾದವುಗಳಲ್ಲಿ, **ಅಧಿಕೃತಿವಿಶೇಷೇಣ** - ಅಧಿಕಾರವ್ಯತ್ಯಾಸದಿಂದ, **ವ್ಯವಸ್ಥಾ**- ಅನುಷ್ಠಾನ ನಿಯಮವು, **ಸಂಸಿಧ್ಯತಿ** - ಸಿದ್ಧಿಸುತ್ತದೋ, ಉಂಟಾಗುತ್ತದೋ, ಎಂದರೆ ಹೇಗೆ ಅನುಷ್ಠಾನ ನಿಯಮವು ವ್ಯತ್ಯಾಸವಾದುದಾಗಿ ಏರ್ಪಟ್ಟಿರುತ್ತದೋ,

ವಿಕ(ಲ್ಪ್ಯೇ) ಲ್ಪ್ಯೇತ ನ್ಯಾಸೇ ಸ್ಥಿತಿರಿತರವಿದ್ಯಾಸು ಚ ತಥಾ ।
ನಿಯತ್ಯಾ ವೈಯಾತ್ಯಂ ನಿಯಮಯಿತುಮೇವಂ ಪ್ರಭವತಿ ॥೩೦॥

ತಥಾ - ಹಾಗೆಯೇ, **ನ್ಯಾಸೇ** - ನ್ಯಾಸವಿದ್ಯೆಯಲ್ಲೂ ಎಂದರೆ ಪ್ರಪತ್ತಿಮಾರ್ಗದಲ್ಲೂ, **ಇತರವಿದ್ಯಾಸು ಚ** - ಇತರ ಬ್ರಹ್ಮವಿದ್ಯೆಗಳಲ್ಲೂ, **ಸ್ಥಿತಿಃ** - ನಿಷ್ಠೆಯು ಅನುಷ್ಠಾನವು, **ವಿಕಲ್ಪ್ಯೇತ** - ವಿಕಲ್ಪಿಸುತ್ತದೆ. **ಏವಂ**-ಹೀಗೆ, **ನಿಯಮಯಿತುಂ** - ವಿಕಲ್ಪಿಸಿ ವ್ಯವಸ್ಥೆ ಮಾಡುವದಕ್ಕೆ, **ನಿಯತ್ಯಾಃ** - ದೈವದ, **ವೈಯಾತ್ಯಂ** - ಧಾಷ್ಟ್ರ್ಯವು ಎಂದರೆ ಅಪ್ರತಿಹತವಾದ ಶಕ್ತಿಯು, **ಪ್ರಭವತಿ** - ಸಮರ್ಥವಾಗಿರುತ್ತದೆ.

ತಾತ್ಪರ್ಯ :— ಕರ್ಮಯೋಗ ಜ್ಞಾನಯೋಗಗಳಲ್ಲಿ ಪ್ರವರ್ತಿಸಿದವನಿಗೆ ಪರಭಕ್ತಿಯುತ್ಪನ್ನವಾಗಿ ಅನಂತರ ಯೋಗದಲ್ಲಿ ಎಂದರೆ ಉಪಾಸನೆಯಲ್ಲಿ ಪ್ರವರ್ತಿಸುವನು. ಅಂತಹ ಉಪಾಸನಾರೂಪ (*) ಬ್ರಹ್ಮವಿದ್ಯೆಯು ೩೨ ವಿಧವಾಗಿರುತ್ತದೆ. ಈ ಮೂವತ್ತೆರಡೂ ಬ್ರಹ್ಮವಿದ್ಯೆಗಳಿಗೂ ಭಕ್ತಿಮಾರ್ಗ-ವೆಂದು ಹೆಸರು. ಈ ಮೂವತ್ತೆರಡು ವಿಧ ಉಪಾಸಕರೂ ಇಲ್ಲಿ **ವಿದುಷಾಂ** ಎಂಬ ಶಬ್ದದಿಂದ ಹೇಳಲ್ಪಟ್ಟರು. ವಿದುಷಾಂ ಎಂಬ ಶಬ್ದದಲ್ಲಿರುವ ವೇದನವು ಉಪಾಸನವನ್ನು ಬೋಧಿಸುತ್ತದೆ. ಆದುದರಿಂದ ವಿದುಷಾಂ ಎಂದರೆ ಈ ೩೨ ಉಪಾಸಕರಿಗೆಲ್ಲಾ, **ಮುಮುಕ್ಷುತ್ವೇ ತುಲ್ಯೇ ಸತಿ ಚ** - ಮೋಕ್ಷದಲ್ಲಿ ಅಪೇಕ್ಷೆಯು ಸಮಾನವಾದುದು.

(*) ಈ ಮೂವತ್ತೆರಡು ಬ್ರಹ್ಮವಿದ್ಯೆಗಳು ಯಾವುವೆಂದರೆ :—(೧) ಈಶಾವಾಸ್ಯವಿದ್ಯಾ (೨)ಪರಮಪುರುಷ ವಿದ್ಯಾ (೩) ಸದ್ವಿದ್ಯಾ (೪) ಆನಂದಮಯವಿದ್ಯಾ (೫) ಅಂತರಾದಿತ್ಯವಿದ್ಯಾ (೬) ಆಕಾಶವಿದ್ಯಾ (೭) ಪ್ರಾಣವಿದ್ಯಾ (೮) ಪರಂಜ್ಯೋತಿ ವಿದ್ಯಾ (೯) ಪ್ರತರ್ದನ ವಿದ್ಯಾ (೧೦) ಶಾಂಡಿಲ್ಯ ವಿದ್ಯಾ (೧೧) ನಾಚಿಕೇತವಿದ್ಯಾ (೧೨) ಉಪಕೋಸಲವಿದ್ಯಾ (೧೩) ಉದ್ದಾಲಕಾಂತರ್ಯಾಮಿವಿದ್ಯಾ (೧೪) ಅಕ್ಷರ ಪರವಿದ್ಯಾ (೧೫) ವೈಶ್ವಾನರ ವಿದ್ಯಾ (೧೬) ಭೂಮವಿದ್ಯಾ (೧೭) ಗಾರ್ಗ್ಯಕ್ಷರ ವಿದ್ಯಾ (೧೮) ಸತ್ಯ ಕಾಮ ವಿದ್ಯಾ (೧೯) ದಹರ ವಿದ್ಯಾ (೨೦) ಅಂಗುಷ್ಠ ಪ್ರಮಿತಿ ವಿದ್ಯಾ (೨೧) ಸಂವರ್ಗವಿದ್ಯಾ (೨೨) ಅಜಾ ವಿದ್ಯಾ (೨೩) ಮಧುವಿದ್ಯಾ (೨೪) ಜ್ಯೋತಿಷಾಂ ಜ್ಯೋತಿರ್ವಿದ್ಯಾ (೨೫) ಬಾಲಕಿ ವಿದ್ಯಾ (೨೬) ಮೈತ್ರೇಯಿ ವಿದ್ಯಾ (೨೭) ರುದ್ರವಿದ್ಯಾ (೨೮) ಉಷಸ್ತಿ ಕಹೋಳ ವಿದ್ಯಾ(೨೯) ಚತುರ್ಮುಖ ವಿದ್ಯಾ (೩೦) ಪಂಚಾಗ್ನಿ ವಿದ್ಯಾ (೩೧) ಅಕ್ಷಿಸ್ಥ ಸತ್ಯ ಬ್ರಹ್ಮವಿದ್ಯಾ (೩೨) ಆದಿತ್ಯಮಂಡಲಸ್ಥ ಸತ್ಯಬ್ರಹ್ಮವಿದ್ಯಾ.

ಇವೆಲ್ಲವೂ ಬ್ರಹ್ಮವಿದ್ಯೆಗಳೇ, ಎಲ್ಲಾದಕ್ಕೂ ಮೋಕ್ಷವೇ ಫಲವು. ಹೀಗೆ ಫಲವು ಎಲ್ಲಾದಕ್ಕೂ ಸಮವಾಗಿದ್ದರೂ, ಎಲ್ಲಾದಕ್ಕೂ ಅಧಿಕಾರದಲ್ಲೂ ಅನುಷ್ಠಾನಕ್ರಮ ದಲ್ಲೂ ವ್ಯತ್ಯಾಸವು ಏರ್ಪಟ್ಟಿರುತ್ತದೆ. ಹೇಗೆಂದರೆ ಒಬ್ಬ ಅಧಿಕಾರಿಗೆ ಮಧುವಿದ್ಯೆ ಯಲ್ಲೂ, ಇನ್ನೊಬ್ಬರಿಗೆ ಪಂಚಾಗ್ನಿವಿದ್ಯೆಯಲ್ಲೂ, ಇನ್ನೊಬ್ಬರಿಗೆ ದಹರವಿದ್ಯೆಯಲ್ಲೂ, ಮತ್ತೊಬ್ಬರಿಗೆ ಸದ್ವಿದ್ಯೆಯಲ್ಲೂ ಅಭಿರುಚಿಯುಂಟಾಗಬಹುದು. ಇವುಗಳಲ್ಲಿ ಉಪಾಸನದಲ್ಲೇ ವ್ಯತ್ಯಾಸವಿರುವದಲ್ಲದೆ, ಮಧುವಿದ್ಯಾನಿಷ್ಠನಿಗೆ ಕೆಲವುಕಾಲ ವಸು ಲೋಕದಲ್ಲಿದ್ದು ಅನಂತರ ಮೋಕ್ಷಪ್ರಾಪ್ತಿಯೂ, ಪಂಚಾಗ್ನಿವಿದ್ಯಾನಿಷ್ಠನಿಗೆ ಕೆಲವು ಕಾಲ ಕೈವಲ್ಯಪ್ರಾಪ್ತಿಯುಂಟಾಗಿ ಅನಂತರ ಮೋಕ್ಷವೂ, ದಹರವಿದ್ಯಾ ಸದ್ವಿದ್ಯಾ ನಿಷ್ಠರಿಗೆ ಹಾಗೆ ಕೈವಲ್ಯಪ್ರಾಪ್ತಿಯಿಲ್ಲದೆ ನೆಟ್ಟಗೆ ಮೋಕ್ಷವೂ ಉಂಟಾಗುತ್ತದೆಂದು ಹೇಳಿರುತ್ತದೆ. ಹೀಗೆ ಒಬ್ಬ ಅಧಿಕಾರಿಗೆ ವಸುಲೋಕದಲ್ಲಿದ್ದು ಅನಂತರ ಮೋಕ್ಷ ಬೇಕೆಂಬ ಇಚ್ಛೆಯೂ, ಇನ್ನೊಬ್ಬ ಅಧಿಕಾರಿಗೆ ಕೈವಲ್ಯದಲ್ಲಿ ಕೊಂಚಕಾಲವಿದ್ದು ಅನಂತರ ಮೋಕ್ಷಬೇಕೆಂಬ ಇಚ್ಛೆಯೂ ಇನ್ನೂ ಕೆಲವರಿಗೆ ಹಾಗಲ್ಲದೆ ನೆಟ್ಟಗೆ ಮೋಕ್ಷಬೇಕೆಂಬ ಇಚ್ಛೆಯೂ ಹೀಗೆಲ್ಲಾ **ಅಧಿಕೃತಿವಿಶೇಷಣ** ಅಧಿಕಾರಭೇದ ದಿಂದ, **ವ್ಯವಸ್ಥಾ ಸಂಸಿಧ್ಯತಿ** ಈ ವ್ಯತ್ಯಾಸವು ಏರ್ಪಡುತ್ತದೆ.

ಹೀಗೆ ಬ್ರಹ್ಮವಿದ್ಯೆಗಳಲ್ಲೇ ಹೇಗೆ ವ್ಯತ್ಯಾಸಉಂಟೋ, ಹಾಗೆಯೇ ಈ ಎಲ್ಲಾ ಬ್ರಹ್ಮವಿದ್ಯೆಗಳು ಸೇರಿದ ಈ ಭಕ್ತಿಮಾರ್ಗಕ್ಕೂ ನ್ಯಾಸವಿದ್ಯೆಯಾದ ಪ್ರಪತ್ತಿಮಾ ರ್ಗಕ್ಕೂ ಕೂಡ **ಅಧಿಕೃತಿವಿಶೇಷ** ವೆಂದರೆ ಅಧಿಕಾರವ್ಯತ್ಯಾಸ ಉಂಟು ಎಂದು **"ತಥಾ ನ್ಯಾಸೇ ಇತರವಿದ್ಯಾಸು ಚ ಸ್ಥಿತಿಃ ವಿಕಲ್ಪ್ಯೇತ"** ಎಂಬುವದರಿಂದ ಉಪಪಾದಿಸುತ್ತಾರೆ. ನ್ಯಾಸವಿದ್ಯೆಯೇ ಪ್ರಪತ್ತಿಮಾರ್ಗವು. ಅದಕ್ಕೆ ಇತರ ವಿದ್ಯೆ ಗಳಾದ ಮೇಲೆ ಹೇಳಿದ ಮೂವತ್ತೆರಡು ಬ್ರಹ್ಮವಿದ್ಯೆಗಳಿಗೂ, **ಸ್ಥಿತಿಃ**-ಅನುಷ್ಠಾನವು ವ್ಯತ್ಯಸ್ತವಾದುದು, ಹೇಗೆಂದರೆ ಭಕ್ತಿಮಾರ್ಗದಲ್ಲಿ ಪ್ರಾರಬ್ಧವೆಲ್ಲಾ ಕಳೆದನಂತರ ಮೋಕ್ಷಪ್ರಾಪ್ತಿಯುಂಟಾಗಲಿ ಎಂದು ಒಬ್ಬ ಅಧಿಕಾರಿಗೆ ಅಪೇಕ್ಷೆಯು; ಉಪಾಸನ ಕಾಲದಲ್ಲಿ ಪರಬ್ರಹ್ಮಸಾಕ್ಷಾತ್ಕಾರರೂಪ ಆನಂದವು ಮಹತ್ತಾದುದರಿಂದ ಭಕ್ತಿ ಮಾರ್ಗವನ್ನು ಒಬ್ಬರು ಅವಲಂಬಿಸಬಹುದು. ಪ್ರಪತ್ತಿಮಾರ್ಗದಲ್ಲಿ ಪ್ರಾರಬ್ಧ ವು ಪೂರಾಕಳೆಯಲಿ ಅಥವಾ ಕಳೆಯದೇ ಹೋಗಲಿ, ದೇಹಾವಸಾನವಾದ ಒಡ ನೆಯೇ ಮೋಕ್ಷಬೇಕೆಂದು ಇನ್ನೊಬ್ಬ ಅಧಿಕಾರಿಗೆ ಅಪೇಕ್ಷೆಯು; ಪರಬ್ರಹ್ಮ ಸಾಕ್ಷಾ ತ್ಕಾರರೂಪ ಆನಂದದಲ್ಲಿ ಅಷ್ಟು ಅಭಿಲಾಷೆಯಿಲ್ಲವು, ಹೀಗೆ ಅನುಷ್ಠಾನವು ವಿಕ ಲ್ಪಿಸಬಹುದು ಎಂದು ಹೇಳುತ್ತಾರೆ.

ಆದರೆ ಹೀಗೆ ಎರಡು ವಿಧದಲ್ಲೂ ಮೋಕ್ಷಬೇಕೆಂಬ ಅಭಿಲಾಷೆಯೇ ಇರು ವಾಗ, ಈ ವಿಧವಾಗಿ ಒಬ್ಬರು ಭಕ್ತಿಮಾರ್ಗವನ್ನವಲಂಬಿಸುವದೂ, ಇನ್ನೊ

ಅಧಿಕಾರಿವಿಭಾಗಃ

ಇಪ್ಪಡಿ ಪರಮ ಪುರುಷಾರ್ಥೋಪಾಯಙ್ಗಳಾನ ನಿವೃತ್ತಿ ಧರ್ಮಙ್ಗಳಿಲೇ ಪ್ರವೃತ್ತರಾನ ಅಧಿಕಾರಿಗಳ್ ಇರುವರ್. ಅವರ್ಗಳಾಕಿರಾರ್:— ಅದ್ವಾರಕ ಪ್ರಪತ್ತಿ ನಿಷ್ಠನುಮ್, ಸದ್ವಾರಕ ಪ್ರಪತ್ತಿನಿಷ್ಠನುಮ್.

direct way ...
step by step ...

ಬ್ಬರು ಪ್ರಪತ್ತಿಮಾರ್ಗವನ್ನೇ ಅವಲಂಬಿಸುವದೂ, ಹೀಗೆ ವ್ಯತ್ಯಾಸವು ಏತರಿಂದೆಂದರೆ ಹೇಳುತ್ತಾರೆ:—

"ನಿಯುತ್ಯಾ ವೈಯಾತ್ಯಂ ನಿಯಮಯಿತುಮೇವಂ ಪ್ರಭವತಿ"

ಒಬ್ಬ ಅಧಿಕಾರಿಯು ಹಾಗೆ, ಇನ್ನೊಬ್ಬ ಅಧಿಕಾರಿಯು ಹೀಗೆ, ವರ್ತಿಸುವದಕ್ಕೆ ಕಾರಣವು, **"ನಿಯುತ್ಯಾ ವೈಯಾತ್ಯಂ"** ಅವರುಗಳ ಸುಕೃತ ಪರಿಪಾಕತಾರತಮ್ಯದಿಂದುಂಟಾಗುವ ಸಾಮರ್ಥ್ಯವು **"ಏವಂಪ್ರಭವತಿ"** ಹಾಗೆ ಮಾಡುತ್ತದೆ ಎಂದು ಹೇಳುತ್ತಾರೆ. ಒಬ್ಬ ಅಧಿಕಾರಿಯು ಶಕ್ತನಾಗಿರುವದರಿಂದ ಯೋಗದಲ್ಲಿ ಪ್ರವರ್ತಿಸಲು ಅರ್ಹನಾಗಿರಬಹುದು. ಇನ್ನೊಬ್ಬನು ಅಶಕ್ತನಾಗಿರುವದರಿಂದ ಸುಲಭೋಪಾಯವಾದ ನ್ಯಾಸವಿದ್ಯೆಯನ್ನು ಅವಲಂಬಿಸುವನು ಎಂಬ ಭಾವವು. ಹೀಗೆ ಉಪಾಯಭೇದದಿಂದ ಇಂತಹ ವ್ಯತ್ಯಾಸಗಳು ಇಲ್ಲಿ ತೋರಿಬಂದರೂ ಫಲದಲ್ಲಿ ಮಾತ್ರ ಏನೊಂದೂ ವ್ಯತ್ಯಾಸವಿಲ್ಲವೆಂದು ಹೇಳಲ್ಪಟ್ಟಿತು. ಕಷ್ಟತರವಾಗಿ ದೇಹಾವಸಾನದವರಿವಿಗೂ ಮಾಡುವ ಉಪಾಸನೆಗೂ ಲಘುತರವಾಗಿ ಕ್ಷಣಕಾಲ ಸಕೃದನುಷ್ಠಿಸುವ ಸ್ವತಂತ್ರಪ್ರಪತ್ತಿಗೂ ಒಂದೇ ಫಲ ಹೇಗೆ, ಇವೇ ಮೊದಲಾದ ಅನೇಕ ಶಂಕಾಗಳು ಉತ್ಪನ್ನವಾಗುತ್ತವೆ. ಇಂತಹ ಆಕ್ಷೇಪಣೆಗಳಿಗೆಲ್ಲಾ ಮುಂದೆ ಸಮಂಜಸವಾದ ಸಮಾಧಾನಗಳು ಹೇಳಲ್ಪಡುತ್ತವೆ.

ಅಧಿಕಾರಿವಿಭಾಗವು

ಇಪ್ಪಡಿ - ಹೀಗೆ; ಹೇಗೆಂದರೆ ಹಿಂದಿನ ಅಧಿಕಾರದಲ್ಲಿ ಮುಮುಕ್ಷುಧರ್ಮವನ್ನು ವಿಶದೀಕರಿಸಿದ ಹಾಗೆ, **ಪರಮಪುರುಷಾರ್ಥೋಪಾಯಙ್ಗಳಾನ,** ಪರಮಪುರುಷಾರ್ಥವು ಮೋಕ್ಷವು; ತತ್ಸಾಧಕವಾದ ಉಪಾಯಗಳಾದ, **ನಿವೃತ್ತಿ ಧರ್ಮಙ್ಗಳಿಲೆಪ್ರವೃತ್ತರಾನ ಅಧಿಕಾರಿಗಳ್** - ನಿವೃತ್ತಿಧರ್ಮಗಳಲ್ಲಿ ಪ್ರವರ್ತಿಸುವ ಅಧಿಕಾರಿಗಳು ಎರಡು ವಿಧವು. **ಅವರ್ಕಳಾಕಿರಾರ್**- ಅವರು ಯಾರೆಂದರೆ:— **ಸದ್ವಾರಕಪ್ರಪತ್ತಿ ನಿಷ್ಠನುಮ್** - ಮೋಕ್ಷಪ್ರಾಪ್ತಿಯುಂಟಾಗುವದಕ್ಕೆ ಭಕ್ತಿ

ಸ್ವತಂತ್ರಾಂಗಪ್ರಪತ್ತಿಭ್ಯಾಂ ಪ್ರಪನ್ನಾವತ್ರತಾವುಭೌ ।
ಫಲಸಾಧನಭಕ್ತಿಭ್ಯಾಂ ಭಕ್ತಾವಪಿ ಚ ದರ್ಶಿತೌ ॥ ೩ ॥

ಯೋಗವನ್ನು ದ್ವಾರವಾಗಿ ಉಳ್ಳ ಪ್ರಪತ್ತಿಯನ್ನು ಅನುಷ್ಠಿಸುವವನೂ, ಮತ್ತು **ಅದ್ವಾರಕಪ್ರಪತ್ತಿ ನಿಷ್ಠನುವಃ** - ಹಾಗೆ ಭಕ್ತಿಯೋಗದ್ವಾರಾವಲ್ಲದೇ ಇರುವ ಪ್ರಪತ್ತಿಯನ್ನು ಅನುಷ್ಠಿಸುವವನೂ, ಹೀಗೆ ಎರಡು ವಿಧ ಅಧಿಕಾರಿಗಳು ಎಂಬ ಭಾವವು. ಸುಮ್ಮನೆ ಭಕ್ತರು ಪ್ರಪನ್ನರು ಎಂದು ಹೇಳದೆ ಸದ್ವಾರಕ ಅದ್ವಾರಕ ಪ್ರಪತ್ತಿನಿಷ್ಠರೆಂದು ಹೇಳಲು ಕಾರಣವೇನೆಂದರೆ, ಇಲ್ಲಿ ಭಕ್ತಿ ಶಬ್ದವು ಪ್ರೀತಿಪೂರ್ವಕವಾದ ಧ್ಯಾನವೆಂಬರ್ಥದಲ್ಲಿ ಉಪಯೋಗಿಸಿರುವದರಿಂದ ಅಂತಹ ಭಕ್ತಿಯೂ, ಪ್ರಪತ್ತಿಯೂ ಈ ಎರಡು ವಿಧ ಉಪಾಯಗಳಿಗೂ ಸಮವಾದುದರಿಂದ ಹಾಗೆ ಹೇಳದೆ ಸದ್ವಾರಕ, ಅದ್ವಾರಕ ಪ್ರಪತ್ತಿ ಎಂದು ಹೇಳಲ್ಪಟ್ಟಿರುತ್ತದೆ. ಪ್ರಪತ್ತಿನಿಷ್ಠನಿಗೂ ಕೂಡ ಫಲರೂಪಭಕ್ತಿಯು ಉಂಟು. ಆದರೆ ಈ ಎರಡು ಉಪಾಯಗಳಿಗೆ ಸಾಧಾರಣವಾಗಿ ಭಕ್ತಿಪ್ರಪತ್ತಿ ಎಂಬ ಪ್ರಯೋಗವುಂಟು, ಇಲ್ಲಿ ಭಕ್ತಿ ಎಂದರೆ ಸಾಧ್ಯರೂಪವಾದ ಭಕ್ತಿಯೋಗವು ಎಂದು ತಿಳಿಯತಕ್ಕದ್ದು. ಎರಡಕ್ಕೂ ಭಕ್ತಿಯೂ ಉಂಟು, ಪ್ರಪತ್ತಿಯೂ ಉಂಟು, ಭಕ್ತಿಯೋಗದಲ್ಲಿ ಭಕ್ತಿಯು ಸಾಧನರೂಪವಾದುದು, ಪ್ರಪದನಮಾರ್ಗದಲ್ಲಿ ಫಲರೂಪಭಕ್ತಿಯು. ಹಾಗೆಯೇ ಪ್ರಪತ್ತಿಯೂ ಎರಡಕ್ಕೂ ಉಂಟು. ಭಕ್ತಿಯೋಗದಲ್ಲಿ ಪ್ರಪತ್ತಿಯು ಅಙ್ಗವು, ಪ್ರಪದನದಲ್ಲಿ ಪ್ರಪತ್ತಿಯು ಅಙ್ಗಿಯು. ಆದುದರಿಂದ ಸದ್ವಾರಕ ಅದ್ವಾರಕ ಪ್ರಪತ್ತಿ ಎಂಬ ವಿಭಾಗವು ಯುಕ್ತವಾಗಿರುತ್ತದೆ.

ಈ ಎರಡು ವಿಧ ಅಧಿಕಾರದಲ್ಲೂ ಭಕ್ತಿಪ್ರಪತ್ತಿಗಳೆರಡೂ ಉಂಟೆಂದೂ ಆ ಭಕ್ತಿ ಪ್ರಪತ್ತಿಗಳೆರಡೂ ಎರಡರಲ್ಲೂ ವ್ಯತ್ಯಸ್ತವಾಗಿವೆ ಎಂದೂ ಒಂದು ತಮ್ಮ ಸ್ವಂತಕಾರಿಕೆಯಾದ ಶ್ಲೋಕದಿಂದ ತಿಳಿಸುತ್ತಾರೆ. ಎಲ್ಲೆಲ್ಲಿ ವಿವಾದಾಸ್ಪದವಾಗಿರುವ ವಿಷಯವನ್ನು ಚೆನ್ನಾಗಿ ಕ್ರೋಡೀಕರಿಸಿ ಸಿದ್ಧಾನ್ತರೂಪದಲ್ಲಿ ವ್ಯವಸ್ಥೆ ಮಾಡಿ ಹೇಳುತ್ತಾರೋ, ಅಲ್ಲೆಲ್ಲಾ ಶ್ಲೋಕರೂಪದಲ್ಲಿ ತಮ್ಮ ಕಾರಿಕೆಯನ್ನನುಗ್ರಹಿಸುತ್ತಾರೆ :—

ಅತ್ರ–ಈ ಮೋಕ್ಷೋಪಾಯಾನುಷ್ಠಾನಮಾಡುವ ಅಧಿಕಾರಿಗಳಲ್ಲಿ, **ತೌ ಉಭೌ** – ಆ ಅದ್ವಾರಕ ಸದ್ವಾರಕ ಪ್ರಪತ್ತಿನಿಷ್ಠರಾದ ಇಬ್ಬರೂ, **ಸ್ವತನ್ತ್ರಾಙ್ಗಪ್ರಪತ್ತಿಭ್ಯಾಂ**–ಇನ್ನೊಂದರಪೇಕ್ಷೆಯಿಲ್ಲದ ಸ್ವತನ್ತ್ರಪ್ರಪತ್ತಿಯಿಂದಲೂ ಮತ್ತು ಅಙ್ಗಪ್ರಪತ್ತಿ ಎಂದರೆ ಪ್ರಪತ್ತಿಯು ಭಕ್ತಿಯೋಗಕ್ಕೆ ಅಙ್ಗವಾಗಿರುವದರಿಂದಲೂ, **ಪ್ರಪನ್ನೌ**–ಪ್ರಪನ್ನರೆಂಬದಾಗಿ, **ದರ್ಶಿತೌ**-ತೋರಿಸಲ್ಪಟ್ಟಿರುತ್ತಾರೆ. "ಪ್ರಮಾಣ

(†) "ಸ್ನಾನಂ ಸಪ್ತವಿಧಂ ಸ್ಮೃತಂ" ಎಙ್ಗಿರಪಡಿಯೇ ಯಥಾಧಿಕಾರಮ್, ಮಾಂತ್ರಮಾನಸ ದಿವ್ಯ ವಾಯವ್ಯಾದಿಗಳುಮ್ ತುಲ್ಯಫಲಙ್ಗಳಾನ ಸ್ನಾನ ಭೇದಙ್ಗಳಾನಾರ್ಪ್ಪೋಲೆ, ಉಕ್ತಿ ಆಚಾರ್ಯ ನಿಷ್ಠೈಯೆಙ್ಗಿರ ವಿವೇಕಯುಮ್, ಪ್ರಪತ್ತಿಯಿಲ್ ಮುಖ ಬೇದಙ್ಗಳ್.

ಗಳಿಂದ" ಎಂದು ಇಟ್ಟುಕೊಳ್ಳತಕ್ಕದ್ದು, ಇದು ಕ್ರಮಾಲಂಕಾರವು. ಇಬ್ಬರೂ ಪ್ರಪನ್ನರೆಂದು ಪ್ರಮಾಣಗಳು ಹೇಳುತ್ತವೆ. ಆದರೆ ಭಕ್ತಿಯೋಗನಿಷ್ಠನಿಗೆ ಪ್ರಪತ್ತಿಯು ಅಙ್ಗವು. ಶರಣಾಗತಿನಿಷ್ಠನಿಗಾದರೋ ಪ್ರಪತ್ತಿಗೆ ಇತರಾಪೇಕ್ಷೆಯಿಲ್ಲದುದರಿಂದ, ಸ್ವತನ್ತ್ರಪ್ರಪತ್ತಿನಿಷ್ಠನೆಂದು ಆತನು ಹೇಳಲ್ಪಡುವನು. ಉತ್ತರಾರ್ಧದಿಂದ ಇಬ್ಬರೂ ಭಕ್ತರೆಂದು ಹೇಳಿ, ಆ ಭಕ್ತಿಯಲ್ಲಿರುವ ವ್ಯತ್ಯಾಸವನ್ನು ತಿಳಿಸುತ್ತಾರೆ. **ತೌ ಉಭೌ**–ಅವರಿಬ್ಬರೂ, **ಫಲಸಾಧನಭಕ್ತಿಭ್ಯಾಂ** - ಫಲರೂಪಭಕ್ತಿಯಿಂದಲೂ ಮತ್ತು ಸಾಧನಭೂತಭಕ್ತಿಯಿಂದಲೂ, ಸ್ವತಂತ್ರಪ್ರಪನ್ನನ ವಿಷಯದಲ್ಲಿ ಸ್ವಯಂಪ್ರಯೋಜನರೂಪವಾಗಿ, ಅಂಗಪ್ರಪನ್ನನ ವಿಷಯದಲ್ಲಿ ಮೋಕ್ಷಕ್ಕೆ ಉಪಾಯವಾಗಿಯೂ, ಇರುವ ಭಕ್ತಿಯಿಂದ. **ಭಕ್ತಾವಪಿ** - **ಭಕ್ತ**ರುಗಳು ಹೀಗೆ ಎರಡು ವಿಧವೆಂದು, **ದರ್ಶಿತೌ** - ಪ್ರಮಾಣದಿಂದ **ತೋರಿಸಲ್ಪಟ್ಟರು**. ಮುಖ್ಯಾಭಿಪ್ರಾಯವು ಇಷ್ಟೇ. "ಪ್ರಪತ್ತಿಯೂ ಎರಡು ವಿಧವು, ಸ್ವತಂತ್ರಪ್ರಪತ್ತಿ, ಅಙ್ಗಪ್ರಪತ್ತಿ ಎಂದು. ಹಾಗೆಯೇ ಭಕ್ತಿಯೂ ಎರಡು ವಿಧವು. ಫಲಭೂತವಾದುದು, ಸಾಧನಭೂತವಾದುದು ಎಂದು. ಆದುದರಿಂದ ಇಬ್ಬರೂ ಪ್ರಪನ್ನರು. ಒಬ್ಬನಿಗೆ ಪ್ರಪತ್ತಿಯು ಸ್ವತಂತ್ರವಾದುದು ಎಂದರೆ ಅನ್ಯಾಪೇಕ್ಷೆಯಿಲ್ಲದುದು. ಇನ್ನೊಬ್ಬನಿಗೆ ಪ್ರಪತ್ತಿಯು ಅಂಗವು. ಹಾಗೆಯೇ ಇಬ್ಬರೂ ಭಕ್ತರು. ಒಬ್ಬನಿಗೆ ಭಕ್ತಿಯು ಫಲರೂಪವಾದುದು, ಇನ್ನೊಬ್ಬನಿಗೆ ಸಾಧನರೂಪವಾದುದು" ಎಂಬಭಿಪ್ರಾಯವು.

"ಸ್ನಾನಂ ಸಪ್ತವಿಧಂ ಸ್ಮೃತಂ,–ಸ್ನಾನವು ಏಳು ವಿಧವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುತ್ತದೆ." **ಎಙ್ಗಿರಪಡಿಯೇ**–ಎಂದು ಹೇಳಿರುವ ಮೇರಿಗೆ, **ಯಥಾಧಿಕಾರಂ** - ಅಧಿಕಾರಿಯು ಶಕ್ತನೋ ಅಶಕ್ತನೋ. ಅಥವಾ ಆತನ ಅನುಕೂಲ ಹೇಗೋ ಹಾಗೆ, ಅದಕ್ಕೆ ಅನುಸಾರವಾಗಿ, **ಮಾಂತ್ರ**ವೆಂದೂ, **ಮಾನಸ**ವೆಂದೂ, **ದಿವ್ಯ**ವೆಂದೂ, **ವಾಯವ್ಯ**ವೆಂದೂ, ಇವೇ ಮೊದಲಾದವುಗಳು,

(†) ಬೋಧಾಯನಗೃಹ್ಯಸೂತ್ರಂ, ೪—೨

ತುಲ್ಯಫಲಙ್ಗಳಾನ - ಸಮಾನವಾದ ಫಲಗಳುಳ್ಳ, **ಸ್ನಾನ ಭೇದಙ್ಗಳೈನ್ದಾರ್ಪೋಲೆ** - ಸ್ನಾನಭೇದಗಳಾದಹಾಗೆ, **ಉಕ್ತಿನಿಷ್ಠೈ, ಆಚಾರ್ಯನಿಷ್ಠೈ, ಎಙ್ಗಿರ ಇವೈಯುಮ್** - ಎಂದು ಹೇಳಿಕೊಳ್ಳುವುವುಗಳೂ ಕೂಡ, **ಪ್ರಪತ್ತಿಯಿಲ್** - ಸ್ವತಂತ್ರ ಪ್ರಪತ್ತಿಯಲ್ಲಿ, **ಮುಖಭೇದಙ್ಗಳ್** - ಆಕಾರದಲ್ಲಿ ವ್ಯತ್ಯಾಸಗಳು, ಸದ್ವಾರಕ ಪ್ರಪತ್ತಿ, ಅದ್ವಾರಕ ಪ್ರಪತ್ತಿ ಎಂದು ಎರಡುವಿಧ ಮೋಕ್ಷಸಾಧನಮಾರ್ಗಗಳೆಂದು ಹೇಳಲ್ಪಟ್ಟವು, ಆದರೆ ಉಕ್ತಿನಿಷ್ಠೆಯೂ, ಆಚಾರ್ಯನಿಷ್ಠೆಯೂ ಕೂಡ ಸಾಧನಗಳೆಂದು ಹೇಳುವಾಗ ನಾಲ್ಕು ವಿಧಸಾಧನಗಳೂ, ಇವುಗಳನ್ನನುಷ್ಠಿಸುವವರು ನಾಲ್ಕು ವಿಧ ಅಧಿಕಾರಿಗಳೆಂದೂ, ಹೇಳದೆ ಮೋಕ್ಷಾಧಿಕಾರಿಗಳು ಇಬ್ಬರು ಎಂದು ಹೇಳಿದುದು ಹೇಗೆ ಎಂದರೆ, ಉಕ್ತಿ ನಿಷ್ಠೆಯೂ, ಆಚಾರ್ಯನಿಷ್ಠೆಯೂ ಸಹ ಪ್ರಪತ್ತಿಯ ಪ್ರಭೇದಗಳಾದುದರಿಂದ ಎರಡೇ ಮುಖ್ಯಸಾಧನಗಳೆಂದು ತಿಳಿಸಿದರು. ಸ್ನಾನಪ್ರಕಾರಗಳು ಏಳುವಿಧಗಳಾಗಿದ್ದರೂ ಎಲ್ಲಾ ಒಂದೇವಿಧವಾದ ಫಲವುಳ್ಳವುಗಳಾದ ಪ್ರಯುಕ್ತ ಹೇಗೆ ಸ್ನಾನವೆಂಬ ಹೆಸರಿನಿಂದ ಹೇಳಲ್ಪಡುತ್ತವೆಯೋ, ಹಾಗೆಯೇ ಇಲ್ಲಿಯೂ ಕೂಡ ಆಚಾರ್ಯನಿಷ್ಠೆ, ಉಕ್ತಿನಿಷ್ಠೆಗಳೂ ಕೂಡ ಪ್ರಪತ್ತಿಯ ಪ್ರಭೇದಗಳೆಂಬಭಿಪ್ರಾಯವು, ಏಳು ವಿಧಸ್ನಾನಗಳು ಈ ಮುಂದಿನ ಶ್ಲೋಕದಲ್ಲಿ ಉಪಪಾದಿತವಾಗಿವೆ:—

ಮಾನ್ತ್ರಂ ಭೌಮಂ ತಥಾಗ್ನೇಯಂ ವಾಯವ್ಯಂ ದಿವ್ಯಮೇವಚ ।
ವಾರುಣಂ ಮಾನಸಂ ಚೇತಿ ಸಪ್ತಸ್ನಾನಾನ್ಯನುಕ್ರಮಾತ್ ।
ಆಪೋಹಿಷ್ಠಾದಿಭಿರ್ಮಾನ್ತ್ರಂ ಮೃದಾಲಂಭಸ್ತು ಪಾರ್ಥಿವಂ ।
ಆಗ್ನೇಯಂ ಭಸ್ಮನಾ ಸ್ನಾನಂ ವಾಯವ್ಯಂ ಗೋರಜಸ್ಸ್ಮೃತಂ ॥
ಯತ್ತು ಸಾತಪವರ್ಷೇಣ ದಿವ್ಯಂ ತತ್ಸ್ನಾನಮುಚ್ಯತೇ ।
ವಾರುಣಂ ಚಾವಗಾಹಸ್ತು ಮಾನಸಂ ವಿಷ್ಣುಚಿನ್ತನಂ ।
ಮಾನಸಂ ಪ್ರವರಂ ಸ್ನಾನಂ ಸರ್ವೇ ಶಂಸಂತಿ ಸೂರಯಃ ।

ಉಕ್ತಿನಿಷ್ಠೆಯು ಜ್ಞಾನಾತ್ಮಕವಲ್ಲದುದರಿಂದ ಬರೀಶಬ್ದೋಚ್ಚಾರಣೆಯಿಂದ ಮೋಕ್ಷಸಾಧನೆ ಹೇಗಾದೀತು ಎಂಬ ಶಂಕಾನಿವಾರಣಾರ್ಥವಾಗಿ, ಪ್ರಥಮತಃ ಉಕ್ತಿನಿಷ್ಠೆಯ ಸ್ವರೂಪವನ್ನು ತಿಳಿಸುತ್ತಾರೆ.

ಉಕ್ತಿನಿಷ್ಠೆ

ಇವತ್ತಿಲ್ ಉಕ್ತಿಯಾವದು?—ಆನುಕೂಲ್ಯ ಸಙ್ಕಲ್ಪಾದ್ಯಙ್ಗಙ್ಗ ಳಿಲ್ ವೈಶದ್ಯ ಮಿಲ್ಲಾದಾರ್ ಅವನ್ನೈಯೊಳಿಯ ಪೋಕ್ಕತ್ತನಿರ್ಕ್ಕಿರ ವಧಿಕಾರಮುಮ್, ಅಪೇಕ್ಷಿತ್ತಾಲ್ ರಕ್ಷಿಕ್ಕು ಮೆನ್ಗಿರ ವಿಶ್ವಾಸಮುಂ, ಉಡೈಯವರಾಯ್ಕ್ಕೊಣ್ಡು, ಶರಣ್ಯ ನರಿಯ ಪೂರ್ಣಪ್ರಪತ್ತಿಗರ್ಭಮಾನ ಆಚಾರ್ಯೋಪದಿಷ್ಟ ವಾಕ್ಯತ್ತಾಲೆ ದಾದಿಮಾರ್ ಶೊನ್ನ ಪಾಶುರತ್ತೈ

ಉಕ್ತಿನಿಷ್ಠೆಯ ಸ್ವರೂಪವು.

ಇವತ್ತಿಲ್ - ಈ ಪ್ರಪತ್ತಿಪ್ರಭೇದಗಳಾದ ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳಲ್ಲಿ **ಉಕ್ತಿಯಾವದು**-ಉಕ್ತಿನಿಷ್ಠೆ ಎಂಬುವದು ಯಾವುದು? **ಆನುಕೂಲ್ಯಸಙ್ಕಲ್ಪಾದ್ಯಙ್ಗಙ್ಗಳಿಲ್** - ಆನುಕೂಲ್ಯಸಙ್ಕಲ್ಪ, ಪ್ರಾತಿಕೂಲ್ಯವರ್ಜನ, ಗೋಪ್ತೃತ್ವವರಣವೇ ಮೊದಲಾದ ಅಙ್ಗಗಳಲ್ಲಿ, **ವೈಶದ್ಯಮಿಲ್ಲಾದಾರ್** - ಸ್ಪಷ್ಟವಾದ, ವಿಶದವಾದ ಜ್ಞಾನವಿಲ್ಲದ ಮಂದರಾದ ಅಧಿಕಾರಿಗಳು, **ಅವನ್ನೈಯೊಳಿಯ** - ಆ ಲೋಕಶರಣ್ಯನನ್ನು ಬಿಟ್ಟು, **ಪೋಕ್ಕತ್ತು** - ಬೇರೆ ಗತಿಯಿಲ್ಲದಿರುವ ಎಂದರೆ ಅನನ್ಯಗತಿಕವಾದ, **ನಿರ್ಕ್ಕಿರವಧಿಕಾರಮುಂ** - ಸ್ಥಿತಿಯುಳ್ಳ ಅಧಿಕಾರವನ್ನೂ ಎಂದರೆ ಆಕಿಂಚನತ್ವವನ್ನೂ, **ಅಪೇಕ್ಷಿತ್ತಾಲ್ ರಕ್ಷಿಕ್ಕು ಮೆನ್ಗಿರ ವಿಶ್ವಾಸಮುಂ** - ಅಪೇಕ್ಷಿಸಿದರೆ ಸರ್ವೇಶ್ವರನು ರಕ್ಷಿಸಿಬಿಡುವನು ಎನ್ನುವ ಮಹಾವಿಶ್ವಾಸವನ್ನೂ, **ಉಡೈಯ ವರಾಯ್ಕ್ಕೊಂಡು** - ಹೊಂದಿದವರಾಗಿ, ಇಲ್ಲಿ ಶರಣಾಗತಿಗೆ ಯಾವಯಾವುವು ಅಙ್ಗಗಳು ಎಂಬುವ ವಿಶದವಾದ ಜ್ಞಾನವಿಲ್ಲದಿದ್ದರೂ ಸಮುದಾಯದಲ್ಲಿ, ಈ ಸರ್ವಲೋಕಶರಣ್ಯನನ್ನು ಬಿಟ್ಟರೆ ತನಗೆ ಬೇರೆ ಗತಿಯಿಲ್ಲವೆಂಬ ಆಕಿಂಚನ್ಯತ್ವವೂ ಪ್ರಾರ್ಥಿಸಿದರೆ ಆ ಶರಣ್ಯನು ರಕ್ಷಿಸಿಯೇ ರಕ್ಷಿಸುವನೆಂಬ ಪರಿಪೂರ್ಣವಾದ ಮಹಾವಿಶ್ವಾಸವೂ ಈ ಮಂದಾಧಿಕಾರಿಗಳಿಗೂ ಆವಶ್ಯಕವೆಂಬ ಭಾವವು. ಹೀಗೆ ಆಕಿಂಚನ್ಯತ್ವವನ್ನೂ ಮಹಾವಿಶ್ವಾಸವನ್ನೂ ಹೊಂದಿದವರಾಗಿ, **ಶರಣ್ಯನರಿಯ** - ಸರ್ವರಿಗೂ ರಕ್ಷಕನಾದ ಸರ್ವೇಶ್ವರನು ತಿಳಿಯುವ ಹಾಗೆ, **ಪೂರ್ಣಪ್ರಪತ್ತಿಗರ್ಭಮಾನ** - ಸಂಪೂರ್ಣಪ್ರಪತ್ತಿಯನ್ನು ಒಳಗೊಂಡಿರುವ, **ಆಚಾರ್ಯೋಪದಿಷ್ಟವಾಕ್ಯತ್ತಾಲೇ** - ಆಚಾರ್ಯರಿಂದ ಉಪದೇಶಿಸಲ್ಪಟ್ಟ ವಾಕ್ಯವಾದ ದ್ವಯಮಂತ್ರದಿಂದ, **ದಾದಿಮಾರ್ ಶೊನ್ನ** - ದಾದಿಗಳು ಹೇಳಿಕೊಟ್ಟ, **ಪಾಶುರತ್ತೈ** - ಶ್ಲೋಕವನ್ನು, **ಚೊಲ್ಲಿ** - ಹೇಳಿ, **ಸಾರ್ವಭೌಮನ್ನೈ** - ಚಕ್ರವರ್ತಿಯನ್ನು, **ಶರಣಂ ಪುಕುಂ** - ರಕ್ಷಕನಾಗಿ ಹೊಂದುವ

ಚೊಲ್ಲಿ ಸಾರ್ವಭೌಮನ್ನೈ ಶರಣಂ ಪುಕುಮ್ ಮುಗ್ಧರಾನ ಸಾಮನ್ತ ಕುಮಾರರ್ಗಳ್ಪೋಲೇ ಯೆನ್ನುಡೈಯ ರಕ್ಷೈಯುನಕ್ಕೇ ಭರಮಾಕ ನೇರಿಟ್ಟುಕ್ಕೊಳ್ಳವೇಣು ಮೆನ್ಕೈ. ಪದವಾಕ್ಯಾದಿ ವೃತ್ತಾನ್ತಙ್ಗಳರಿ

ಮುಗ್ಧರಾನ - ತಿಳವಳಿಕೆ ಸಾಲದ, **ಸಾಮನ್ತ ಕುಮಾರರ್ಗಳ್ಪೋಲೆ** - ಆ ಚಕ್ರವರ್ತಿಗೆ ಅಧೀನರಾದ, ಹತ್ತಿರ ಪ್ರದೇಶದ ರಾಜಕುಮಾರರುಗಳ ಹಾಗೆ, **ಎನ್ನುಡೈಯ ರಕ್ಷೈಯುನಕ್ಕೇಭರಮಾಕ** - ನನ್ನ ರಕ್ಷಣೆಯು ನಿನಗೇ ಸೇರಿದುದು ಹೇಗಾಗಬೇಕೋ ಹಾಗೆ, **ಏರಿಟ್ಟುಕೊಳ್ಳವೇಣುಂ** – ನೀನೇ ಸ್ವತಃ ವಹಿಸತಕ್ಕದ್ದು, **ಎನ್ಗೈ** - ಎಂದು ಹೇಳೋಣವು.

ಉಕ್ತಿನಿಷ್ಠೆಗೆ ಮೂರು ಮುಖ್ಯವೆಂದು ಈ ಮೇಲಿನ ವಾಕ್ಯದಿಂದುಪದೇಶಿಸಿವರು. ಏನೆಂದರೆ:–ಎಲ್ಲಾ ಪ್ರಪತ್ತ್ಯಂಗಗಳ ವಿಶದವಾದ ಜ್ಞಾನವಿಲ್ಲದಿದ್ದರೂ, ಆ ಸರ್ವೇಶ್ವರನನ್ನು ಬಿಟ್ಟರೆ ತನಗೆ ಬೇರೇ ಗತಿಯಿಲ್ಲವೆಂಬ ಆಕಿಂಚನ್ಯಭಾವವೂ ಮತ್ತು ಆತನನ್ನು ನಂಬಿಬಿಟ್ಟರೆ ರಕ್ಷಿಸಿಯೇ ರಕ್ಷಿಸುವನು, ಈ ವಿಷಯದಲ್ಲಿ ಈಷದಪಿ ಸಂದೇಹವಿಲ್ಲವೆಂಬ ಮಹಾ ವಿಶ್ವಾಸವೂ, ಇವುಗಳಿಂದ ಯುಕ್ತನಾಗಿರಬೇಕು ; ಮತ್ತು ಆಚಾರ್ಯನನ್ನು ಅವಲಂಬಿಸಿ, ಆತನು ಉಪದೇಶಿಸಿದ ದ್ವಯಮಂತ್ರದಿಂದ ಸೇರಿದ "ತವಾಹಂ" "ತವಾಸ್ಮಿ" ಇತ್ಯಾದಿ ಅರ್ಥಗರ್ಭಿತವಾದ ವಾಕ್ಯಗಳನ್ನು ಉಚ್ಚರಿಸುವದೇ ಉಕ್ತಿನಿಷ್ಠೆಯು. ಯಾವಾಗ ಅರ್ಥಗರ್ಭಿತ ವಾಕ್ಯೋಚ್ಚಾರಣವಾಯಿತೋ, ಆಗ ಉಕ್ತಿನಿಷ್ಠೆಯೂ ಕೂಡ ಜ್ಞಾನರೂಪವೆಂಬುವದರಲ್ಲೇನೂ ಸಂದೇಹವಿಲ್ಲವೆಂಬ ಭಾವವು. ಮುಂದೆ ಪರಿಕರವಿಭಾಗಾಧಿಕಾರದಲ್ಲಿ ಸ್ವತಂತ್ರ ಪ್ರಪತ್ತಿಗೆ ಐದು ಅಙ್ಗಗಳೂ, ಒಂದು ಅಙ್ಗಿಯೂ ಆವಶ್ಯಕವೆಂದು ಹೇಳಲ್ಪಡುತ್ತದೆ. ಹೀಗಿರುವಲ್ಲಿ ಆ ಅಙ್ಗಗಳೆಲ್ಲಾ ಇಲ್ಲಿ ಬೇಡವೋ, ಅಂತಹ ಜ್ಞಾನವೂ ಬೇಡವೋ ಎಂದರೆ, ಅಂತಹ ವಿಶದ ಜ್ಞಾನ ಬೇಕಾಗಿಲ್ಲವು. ಆಕಿಂಚನ್ಯಭಾವವೂ, ಮಹಾವಿಶ್ವಾಸವೂ ಇಷ್ಟು ಆಚಾರ್ಯಮುಖೇನ ಅನುಷ್ಠಿಸಿದರೆ ಸಾಕೆಂದು ಹೇಳಿರುತ್ತಾರೆ. ಪೂರ್ಣಜ್ಞಾನಶೂನ್ಯರಾದವರಿಗೂ ಕೂಡ ಶರಣ್ಯನೆಂದು "ಸರ್ವಸ್ಯ ಶರಣಂ ಸುಹೃತ್" ಎಂಬ ಶ್ರುತಿಯೂ, "ಇದಂ ಶರಣಮಜ್ಞಾನಾಂ," "ಬಾಲಮೂಕಜಡಾಂಧಾಶ್ಚ" ಇತ್ಯಾದಿ ಪ್ರಮಾಣಗಳೂ ಉದ್ಘೋಷಿಸುತ್ತವೆ. ಆದುದರಿಂದ ಮುಂದಾಧಿಕಾರಿಗಳಿಗೂ ಕೂಡ ಸರ್ವೇಶ್ವರನು ಶರಣ್ಯನಾಗುವದರಲ್ಲಿ ಅಭ್ಯಂತರವಿಲ್ಲವು. ಆದರೆ ಆಚಾರ್ಯನು ಮಾತ್ರ ಆವಶ್ಯಕವು. ಅವರು ಉಪದೇಶಿಸುವ ಉಕ್ತಿ ಮಾದರೋ, ಪರಿಪೂರ್ಣ ಶರಣಾಗತಿರೂಪವಾದುದರಿಂದ ಫಲಕಾರಿ

ಯಾದ ಬಾಲನೊರುಕ್ಕಾಲ್, "ಭವತಿ ಭಿಕ್ಷಾಂ ದೇಹಿ" ಎನ್ನಾಲ್, ಆಢ್ಯರಾನ ಸತ್ತುಕ್ಕಳ ಕತ್ತಿಲೇ ಅಪ್ಪೋದೇ ಅಪೇಕ್ಷಿತ ಸಿದ್ಧಿಯುಣ್ಡಾನಾಪ್ಪೋಲೆ (೧) "**ಕೊಳ್ಳಕ್ಕುರೈವಿಲನ್ಙೊಣ್ಡೆಲ್ಲಾತರುಳ್**" ಎನ್ನುಮದಿ ಯಾಗುವದರಲ್ಲಿ ಸಂದೇಹವಿಲ್ಲವು. ಈ ಆಚಾರ್ಯೋಪದೇಶರೂಪವಾದ ಉಕ್ತಿಯು ಹೇಗೆ ಕಾರ್ಯಕಾರಿಯಾಗುತ್ತದೆಂಬುವದಕ್ಕೆ ಒಂದು ಲೋಕದೃಷ್ಟಾಂತವನ್ನು ಉದಾಹರಿಸುತ್ತಾರೆ. ಏನೂ ತಿಳಿಯದ ಸಾಮಂತರಾಜರ ಮಕ್ಕಳು ತಮ್ಮ ಚಿಕ್ಕ ವಯಸ್ಸಿನಲ್ಲಿ ಪಾಲಕರಾದ ದಾದಿಗಳು ಹೇಳಿಕೊಟ್ಟ ಕೆಲವು ವಾಕ್ಯಗಳನ್ನು ಹೇಳಿ, ತಮ್ಮ ಸಾರ್ವಭೌಮನು ತಮ್ಮನ್ನು ರಕ್ಷಿಸುವ ಹಾಗೆ ಹೇಗೆ ಮಾಡಿಕೊಳ್ಳುತ್ತಾರೆಯೋ, ಹಾಗೆಯೇ ಈ ಆಚಾರ್ಯರವರು ಹೇಳಿಕೊಟ್ಟ ಕೆಲವು ವಾಕ್ಯಗಳನ್ನು ಹೇಳಿ, ಲೋಕಕ್ಕೆಲ್ಲಾ ಸಾರ್ವಭೌಮನಾದ ಸರ್ವೇಶ್ವರನು ತಮ್ಮನ್ನು ರಕ್ಷಿಸುವ ಹಾಗೆ ಈ ಉಕ್ತಿನಿಷ್ಠರು ಮಾಡಿಕೊಳ್ಳುತ್ತಾರೆಂಬ ಭಾವವು. ಆಚಾರ್ಯರವರ ಉಪದೇಶರೂಪವಾದ ಉಕ್ತಿಯ ಅಭಿಪ್ರಾಯವೇನೆಂದರೆ "ನಾನು ಅನುಕೂಲನಾಗಿರುವೆನು, ಪ್ರತಿಕೂಲನಲ್ಲವು, ನನಗೆ ಯಾವ ಗತಿಯಿಲ್ಲವು, ನೀವೇ ರಕ್ಷಕರು, ದಾಸನಾದ ನನ್ನ ರಕ್ಷಣೆಯ ಭಾರವನ್ನು ನೀವೇ ವಹಿಸತಕ್ಕದ್ದು" ಎಂಬದಾಗಿ. ಹೀಗೆ ಆಚಾರ್ಯರು ಹೇಳಿಕೊಡತಕ್ಕದ್ದೇ ಉಕ್ತಿನಿಷ್ಠೆಯು. ಆದರೆ ಇಂತಹ ಸರಿಯಾದ ಜ್ಞಾನವಿಲ್ಲದ ಉಕ್ತಿನಿಷ್ಠಾರೂಪವು ಫಲಕಾರಿಯಾದೀತೋ ಎಂಬ ಶಂಕಾ ನಿವಾರಣಾರ್ಥವಾಗಿ ಮುಂದೆ ಒಂದು ಲೋಕದೃಷ್ಟಾಂತದ ಮೂಲಕ ಫಲಪ್ರದವಾಗುವದರಲ್ಲಿ ಸಂದೇಹವಿಲ್ಲವೆಂದು ತಿಳಿಸುತ್ತಾರೆ.

ಪದವಾಕ್ಯಾದಿವ್ಯುತ್ಪತ್ತ್ಯಜ್ಞರಿಯಾದ - ಪದ, ವಾಕ್ಯ, ಅವುಗಳ ಅರ್ಥ ಮೊದಲಾದ ಸಮಾಚಾರಗಳೊಂದನ್ನೂ ತಿಳಿಯದ ಎಂದರೆ ಪದಗಳನ್ನು ಹೇಗೆ ಅನ್ವಯಿಸಿ ಅರ್ಥಹೇಳತಕ್ಕದ್ದು ಮೊದಲಾದ ವಿಷಯಗಳನ್ನು ತಿಳಿಯದ, ಚಿಕ್ಕ ಬಾಲಕನು, **ಒರುಕ್ಕಾಲ್** – ಒಂದಾವರ್ತಿ, ಸಕೃತ್, "**ಭವತಿ ಭಿಕ್ಷಾಂ ದೇಹಿ**" **ಎನ್ನಾಲ್** - ಭವತಿ ಭಿಕ್ಷಾಂ ದೇಹಿ ಎಂದು ಹೇಳಿದರೆ, ಇಲ್ಲಿ ಸಕೃತ್ ಎಂದು ಹೇಳಿದುದರಿಂದ ಪ್ರಪತ್ತಿಯೂ ಕೂಡ ಸಕೃತ್ ಅನುಷ್ಠಿಸತಕ್ಕದ್ದೆಂಬ ಭಾವವು, **ಆಢ್ಯರಾನ** - ಧನಸಮೃದ್ಧಿಯುಳ್ಳ, **ಸತ್ತುಕ್ಕಳಕತ್ತಿಲೇ** - ಸಾಧುಜನಗಳ ಗೃಹದಲ್ಲಿ, **ಅಪ್ಪೋದೇ** - ಆ ತಕ್ಷಣವೇ ಎಂದರೆ ಒಂದಾವರ್ತಿ "**ಭವತಿ ಭಿಕ್ಷಾಂ ದೇಹಿ**" ಎಂದು ಹೇಳಿದ ಒಡನೆಯೇ, **ಅಪೇಕ್ಷಿತಸಿದ್ಧಿಯುಣ್ಡಾನಾಪ್ಪೋಲೆ** - ಬೇಕಾದ ಮನೋರಥವು ಪೂರ್ಣವಾಗುವ ಹಾಗೆ, "**ಕೊಳ್ಳಕ್ಕುರೈವಿಲನ್** – ಅನವರತ ಪಡೆದರೂ ಕಮ್ಮಿಯಾಗದವನು, ಎಂದರೆ ಧನಿಕನಿಂದ

ಯಿರುಕ್ಕಿರ ಪರಿಪೂರ್ಣ ಪರಮೋದಾರ ವಿಷಯತ್ತಿಲ್, ಇವ್ವುಕ್ತಿಕ್ಕುಮ್ ಫಲಾವಿನಾಭಾವಮುಣ್ಡು.

ಹಣವನ್ನು ಪಡೆದರೆ ಅಷ್ಟು ಹಣ ಆತನಿಗೆ ಕಮ್ಮಿಯಾಗುತ್ತದೆ, ಸರ್ವೇಶ್ವರನಾದರೋ ಎಷ್ಟು ಅವನಿಂದ ಪಡೆದರೂ ಆತನ ಐಶ್ವರ್ಯಾದಿಗಳಿಗೆ ಸ್ವಲ್ಪವೂ ನ್ಯೂನತೆ ಇಲ್ಲವು, ಇದರಿಂದ **ಪರಿಪೂರ್ಣ**ನೆಂದು ಹೇಳಲ್ಪಟ್ಟಿತು, **ವೇಣ್ಡಿದೆಲ್ಲಾ ತರುಮ್** - ಯಾವಯಾವದನ್ನು ಅಪೇಕ್ಷಿಸಿದರೂ, ಆ ಚತುರ್ವಿಧ ಪುರುಷಾರ್ಥಗಳನ್ನೂ ಕೊಡುವವನು, ಇದರಿಂದ ಸರ್ವೇಶ್ವರನ ಪರಮೋದಾರಭಾವವು ಉಪದೇಶಿಸಲ್ಪಟ್ಟಿತು.

ಕೊಳ್ಳುಮ್ ಪಯನಿಲ್ಲೈ ಕುಪ್ಪೈ ಕಿಳರ್ತ್ತನ್ನ ಶೆಲ್ವತ್ತೈ ।
ವಳ್ಳಲ್ ಪುಕಳ್ನ್ದು ನುಮ್ ನಾಯ್ಮೈ ಇಳಕ್ಕುಂ ಪುಲವೀರ್ ಕಾಳ್ ।
ಕೊಳ್ಳಕ್ ಕುರೈವಿಲನ್ ವೇಣ್ಡಿತ್ತೆಲ್ಲಾನ್ದರುಂ ಕೋದಿಲೆನ್ ।
ವಳ್ಳಲ್ ಮಣಿವಣ್ಣನ್ ತನ್ನೈಕ್ ಕವಿಶೊಲ್ಲವಮ್ಮಿನೋ ॥

“ಹೊಂದಲೊಂದೂ ಪ್ರಯೋಜನವಿಲ್ಲದೆ ತಿಪ್ಪೆಯನ್ನು ಕೆದಕಿದ ಹಾಗೆ ಅತಿ ಕ್ಷುದ್ರ ಸಂಪತ್ತುಗಳನ್ನು ಹೊಂದಿದವನನ್ನು, ಬಹಳ ಉದಾರನೆಂದು ಸ್ತುತಿಸಿ ನಿಮ್ಮ ಅಮೋಘ ವಾಕ್ಯಗಳನ್ನು ದೋಷಯುಕ್ತಮಾಡಿಕೊಳ್ಳುವ ಓ ಕವಿಗಳಿರಾ, ಎಷ್ಟು ಕೊಟ್ಟರೂ ಕಮ್ಮಿಯಾಗದ ಹಾಗೆ ನಿರವಧಿಕ ಸಂಪತ್ತಿನಿಂದ ಪರಿಪೂರ್ಣನಾಗಿಯೂ, ಸಕಲಾಭೀಷ್ಟಪ್ರದನಾಗಿ ಪರಮೋದಾರನಾಗಿಯೂ, ಇರುವ ಇಂದ್ರನೀಲ ಮಣಿಯ ಹಾಗೆ ಕಾಂತಿಶೋಭೆಯುಳ್ಳ, ಶ್ರಿಯಃಪತಿಯನ್ನು ಸ್ತುತಿಸೋಣ ಬನ್ನಿ ಎಂದು ನಮ್ಮಾಳ್ವಾರವರು ಕವಿಗಳನ್ನು ಕರೆಯುತ್ತಾರೆ.” ಈ ಅಭಿಪ್ರಾಯವೇ ಶ್ರೀ ಕುಲಶೇಖರಾಳ್ವಾರವರ **“ನಾಥೇ ನಃ ಪುರುಷೋತ್ತಮೇ”** ಎಂಬ ಶ್ಲೋಕದಲ್ಲೂ ಉಪಪಾದಿತವಾಗಿರುತ್ತದೆ. **ಎನ್ನುಮ್ಪಡಿಯಿರುಕ್ಕಿರ** – ಈ ಮೇಲಿನ ಪಾಶುರದಲ್ಲಿ ಹೇಳಿರುವ ರೀತಿಯಲ್ಲಿರುವ, **ಪರಿಪೂರ್ಣ ಪರಮೋದಾರ ವಿಷಯತ್ತಿಲ್** - ಐಶ್ವರ್ಯಸಮೃದ್ಧಿಯೂ, ವಿಶೇಷ ಉದಾರಭಾವವೂ ಇರುವವನ ವಿಷಯದಲ್ಲಿ, **ಇವ್ವುಕ್ತಿಕ್ಕುಂ** – ಈ ಉಕ್ತಿನಿಷ್ಠೆಯಲ್ಲಿ ಆಚಾರ್ಯೋಪದೇಶಾತ್ ಹೇಳುವ ಉಕ್ತಿಗೂ ಕೂಡ, **ಫಲಾ ವಿನಾ ಭಾವಂ** – ಫಲವನ್ನು ಬಿಡದೇ ಇರುವ ಭಾವವು ಫಲದೊಂದಿಗೇನೇ ಸೇರಿರುವ ಭಾವವೂ, **ಉಣ್ಡು** – ಉಂಟು.

(*) ತಿರುವಾಯ್‌ಮೊಳಿ, ೩—೯—೫,

ಸರ್ವೇಶ್ವರನು ಪರಿಪೂರ್ಣ ಸಮೃದ್ಧಿಯುಳ್ಳವನು, ಮತ್ತು ನಿರತಿಶಯ ಉದಾರಭಾವವುಳ್ಳವನು. ಅಂಥಾವನನ್ನು ಈ ಉಕ್ತಿಯಿಂದ ಪ್ರಾರ್ಥಿಸಿದಾವರೆ ಫಲ ಉಂಟಾಗುವದರಲ್ಲಿ ಸಂದೇಹವಿಲ್ಲನೆಂಬ ಭಾವವು. ಹೇಗೆಂದರೆ ಸರ್ವೇಶ್ವರನು ತ್ಯಾಗದಲ್ಲಿ "**ಧನದೇನಸಮಸ್ತ್ಯಾಗೇ**" ಎಂದು ಹೇಳಿರುವಹಾಗೆ ನಿರತಿಶಯವಾದ ಉದಾರಿಯು. ಅದಕ್ಕನುಗುಣವಾಗಿ ಪರಿಪೂರ್ಣತೆಯೂ ಉಂಟು. ಆದುದರಿಂದ ಮನೋರಥವು ಸಫಲವಾಗುವದರಲ್ಲಿ ಸಂದೇಹವಿಲ್ಲವು, ಪರಿಪೂರ್ಣತೆಯಿಲ್ಲದ ಉದಾರಭಾವವೂ ಕಾರ್ಯಕಾರಿಯುಲ್ಲವು, ಏಕೆಂದರೆ ದರಿದ್ರನ ಉದಾರಭಾವವು ಪ್ರಯೋಜನಕಾರಿಯುಲ್ಲವು. ಹಾಗೆಯೇ ಉದಾರಭಾವವಿಲ್ಲದ ಪರಿಪೂರ್ಣತೆಯೂ ಕಾರ್ಯಕಾರಿಯುಲ್ಲವು. ಏಕೆಂದರೆ ಉದಾರವಿಲ್ಲದ ಮಹಾಧನ ಸಮೃದ್ಧಿಯೂ ಪ್ರಯೋಜನವಲ್ಲವು, ಸರ್ವೇಶ್ವರನಲ್ಲಿ ಪರಿಪೂರ್ಣತೆಯೂ ಉದಾರಭಾವವೂ ಎರಡೂ ಇರುವದರಿಂದ ಉಕ್ತಿ ಇಷ್ಟೆಯೂ ಕೂಡ ಕಾರ್ಯಕಾರಿಯೇ ಎಂಬ ಭಾವವು, **ಪರಿಪೂರ್ಣಪರಮೋದಾರನಾನ ಶ್ರಿಯಃಪತಿಯ ವಿಷಯತ್ತಿಲ್** ಎಂದು ಹೇಳದೆ ಸಾಮಾನ್ಯವಾಗಿ **ಪರಿಪೂರ್ಣಪರಮೋದಾರ ವಿಷಯತ್ತಿಲ್** ಎಂದು ಹೇಳಿದುದರಭಿಪ್ರಾಯವೇನೆಂದರೆ:—ಈಲೋಕದಲ್ಲೂ ಸಮೃದ್ಧಿಯೂ ಔದಾರ್ಯವೂ ಇರುವ ಆಢ್ಯರೂ ರಾಜರುಗಳೂಕೂಡ ಅಂತಹ ಉಕ್ತಿಯಿಂದಲೇ ಸಂತುಷ್ಟರಾಗಿ ಅಭೀಷ್ಟಪ್ರದರಾಗಿರುವದನ್ನು ಕಂಡಿರುವೆವು ಎಂಬ ಭಾವನೆಯಿಂದ ಹಾಗೆ ಪ್ರಯೋಗಿಸಿರುತ್ತಾರೆ. ಜ್ಞಾನರಹಿತರಿಗೂಕೂಡ ಫಲಪ್ರಾಪ್ತಿಯುಂಟೆಂಬುವದಕ್ಕೆ

(೧) "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ।
ದೋಷೋಯದ್ಯಪಿ ತಸ್ಯಸ್ಯಾತ್ಸತಾಮೇತದಗರ್ಹಿತಂ"

ಇಲ್ಲಿ ಮಿತ್ರಶಬ್ದವು ಧಾತ್ವರ್ಥಮೂಲಕ ಸರ್ವಭೂತಗಳಲ್ಲಿಯೂ ಅತ್ಯಂತ ಸ್ನೇಹಉಳ್ಳವನೆಂಬರ್ಥವು. ಇದರಿಂದ ಆಶ್ರಯೋಚಿತ ಗುಣಗಳೆಲ್ಲಾ ತನ್ನಲ್ಲಿದೆ ಎಂಬ ನಂಬಿಕೆಯಿಂದ, **ಮಿತ್ರಭಾವೇನಸಂಪ್ರಾಪ್ತಃ**, ವಿಭೀಷಣನು ಬಂದು ತನ್ನನ್ನಾಶ್ರಯಿಸಿರುವನು, ಅಂಥಾವನನ್ನು **ನತ್ಯಜೇಯಂ ಕಥಂಚನ** - ಎಂದಿಗೂ ಬಿಡಲಾರೆನು. ಬಿಡಬಹುದೋ? ಬಿಟ್ಟರೆ ದೋಷವಲ್ಲವೋ? ಎಂಬ ತಾತ್ಪರ್ಯವು. ಆತನು ಮಹಾ ದೋಷಿ ಎಂದೇನಾದರೂ ಹೇಳುವಿರೋ ಎಂದರೆ, **ದೋಷೋಯದ್ಯಪಿ ತಸ್ಯಸ್ಯಾತ್** ಒಂದುವೇಳೆ ನೀವು ಹೇಳುವಹಾಗೆ ಆತನಲ್ಲಿ ದೋಷವೇ ಇರಲಿ, ಅಂಥಾವನನ್ನು ರಕ್ಷಿಸುವದೂಕೂಡ, **ಏತತ್ ಸತಾಂ ಅಗ**

(೧) ರಾ. ಯುದ್ಧ.

ಅರಿವಿಲಿಗಳಾಯ್ ಇವ್ವುಕ್ಕಿವಾತ್ರನೈ ಪತ್ತಾಶಾನವರ್ಗಳ್ ತಿರ

ರ್ದ್ದಿತಂ - ಸತ್ಪುರುಷರಿಗೆ ನಿಂದ್ಯವಾದುದಲ್ಲವು ಎಂಬ ತಾತ್ಪರ್ಯವು. ಶ್ರೀ ಎಂಬಾರರು ಈ ಶ್ಲೋಕಕ್ಕೆ ಅರ್ಥ ಹೇಳುವಾಗ, ಉಪದೇಶಿಸಿದುದು ಏನೆಂದರೆ:—''ಸರ್ವಜ್ಞನಾದ ಸರ್ವೇಶ್ವರನಿಗೆ ವಿಜಾತೀಯವಾದ ಅಜ್ಞಾನವೂ ವಿಸ್ಮೃತಿಯೂ ಉಂಟು. ಹಾಗೆಯೇ ಅಂತಹ ಸರ್ವಶಕ್ತನಿಗೂ ಒಂದು ಅಶಕ್ತಿಯುಂಟೆಂದು'' ಈ ಶ್ಲೋಕದಿಂದ ವ್ಯಕ್ತಪಡುತ್ತದೆಂದು ಹೇಳಿದರು. ಹೇಗೆಂದರೆ;—**ದೋಷೋಯದ್ಯಪಿ** ಎಂಬುವವರಿಂದ ಒಬ್ಬನು ಬಂದು ಆಶ್ರಯಿಸಿದರೆ, ಹಿಂದೆ ಆತನು ಮಾಡಿದ ಅಪರಾಧಗಳ ವಿಷಯದಲ್ಲಿ, ಸಹಸ್ರನಾಮದಲ್ಲಿ "**ಅವಿಜ್ಞಾತಾ**'' ಎಂದು ಹೇಳಿರುವಹಾಗೆ ವಿಸ್ಮೃತಿಯನ್ನು ತೋರ್ಪಡಿಸಿ, ಪ್ರಾಮಾದಿಕವಾಗಿ ಮಾಡಿದ ದೋಷಗಳಲ್ಲಿ ಅಜ್ಞಾನವನ್ನು ವ್ಯಕ್ತಪಡಿಸಿ, ಆತನನ್ನು ಕೈಬಿಡುವ ವಿಷಯಗಳಲ್ಲಿ ಅಶಕ್ತನೆಂದು ''**ನತ್ಯಜೇಯಂ**" ಎಂಬುವವರಿಂದ ಹೇಳಿಕೊಂಡಿರುತ್ತಾನೆ. ಆದುದರಿಂದ ಆಶ್ರಿತನ ವಿಷಯದಲ್ಲಿ ''**ನಸ್ಮರತ್ಯಪಕಾರಾಣಾಂ**'' ಎಂದು ಹೇಳಿರುವಹಾಗೆ ದೋಷಗಳನ್ನು ಸ್ಮರಿಸುವದಿಲ್ಲವೆಂಬ ಭಾವವು. (ಈ ಶ್ಲೋಕಕ್ಕೆ ಇನ್ನೂ ಇತರ ಅರ್ಥಗಳುಂಟು) ಎಂಬ ಮತ್ತು

(೨) "ದುರಾಚಾರೋಪಿ ಸರ್ವಾಶೀ ಕೃತಘ್ನೋ ನಾಸ್ತಿಕಃಪುರಾ ।
ಸಮಾಶ್ರಯೇ ದಾದಿದೇವಂ ಶ್ರದ್ಧಯಾ ಶರಣಂ ಯದಿ ।
ನಿರ್ದೋಷಂ ವಿದ್ಧಿ ತಂ ಜನ್ತುಂ ಪ್ರಭಾವಾತ್ಪರಮಾತ್ಮನಃ"

"ಮೊದಲು ದುರಾಚಾರನಾಗಿಯೂ, ಆಹಾರನಿಯಮವಿಲ್ಲದೆ ದೋಷಯುಕ್ತವಾದ ಅನ್ನವನ್ನು ತಿನ್ನುವನಾಗಿಯೂ, ಕೃತಘ್ನನಾಗಿಯೂ ನಾಸ್ತಿಕನಾಗಿಯೂ ಇದ್ದರೂ, ಆದಿಪುರುಷನನ್ನು ಶ್ರದ್ಧೆಯಿಂದ ಶರಣು ಹೊಂದಿದುದಾದರೆ, ಪರಮಾತ್ಮನ ಪ್ರಭಾವದಿಂದ ಆತನನ್ನು ನಿರ್ದೋಷಿಯೆಂದೇ ತಿಳಿಯತಕ್ಕದ್ದು" ಇತ್ಯಾದಿ ಪ್ರಮಾಣಗಳುಂಟು. ಇಲ್ಲಿ ಜನ್ತು ಎಂಬ ಪದದಿಂದ ಜ್ಞಾನಶೂನ್ಯನೆಂಬ ಭಾವವು ತೋರಿಬರುತ್ತದೆ. **ಶ್ರದ್ಧಯಾಸಮಾಶ್ರಯೇತ್** ಎಂದು ಹೇಳಿರುವದರಿಂದ, ಆಕಿಂಚನ್ಯ ಮಹಾವಿಶ್ವಾಸ ಭಾವಗಳು ಬೋಧಿಸಲ್ಪಟ್ಟವು. ಆದುದರಿಂದ ಇಂತಹ ಉಕ್ತನಿಷ್ಠಗೂ ಕೂಡ ಪ್ರಪತ್ತಿಯಹಾಗೆ ಫಲ ಉಂಟೆಂಬುವದರಲ್ಲಿ ಸಂದೇಹವಿಲ್ಲವೆಂಬ ಭಾವವು.

ಅರಿವಿಲಿಗಳಾಯ್ - **ಅರಿವಿಲ್ಲಾದವರ್ಗಳಾಯ್**, ಜ್ಞಾನರಹಿತರಾಗಿ,

(೨) ಸಾಸ್ವತ ಸಂಹಿತೆ ೧೬. ೨೩.

ತ್ತಿಲ್ (೧) **“ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾತ್ವಂ” ಎನ್ರು ಶೊಲ್ಲುಗಿರಪಡಿಯೇ ಇವ್ವುಕ್ತಿಮಾತ್ರಮು ಮೂಣ್ಣುರುಕ್ಕ ಮಾಟ್ಟಾದು**

ಇವ್ವುಕ್ತಿಮಾತ್ರಮೇಪತ್ತಾಶಾನವರ್ಗಳ್ ತಿರತ್ತಿಲೆ - ಈ ಉಕ್ತಿಮಾತ್ರವೇ ಅವಲಂಬನವಾಗಿ ಉಳ್ಳವರುಗಳ ವಿಷಯದಲ್ಲಿ, **“ಯೇನಕೇನಪ್ರಕಾರೇಣ ದ್ವಯವಕ್ತಾತ್ವಂ”** ಹೇಗಾದರೂ ಮಾಡಿ ಯಾವುದಾದರೂ ಒಂದು ರೀತಿಯಲ್ಲಿ ನೀನು ದ್ವಯಮಂತ್ರವನ್ನು ಉಚ್ಚರಿಸುವವನಾಗಿ ಎಂದರೆ ಸರಿಯಾದ ಜ್ಞಾನವುಳ್ಳವನಾಗಿ ಅನುಸಂಧಾನಮಾಡಿಕೊಂಡಾಗಲಿ ಅಥವಾ ಹಾಗೆ ಜ್ಞಾನವಿಲ್ಲದೆ ಸುಮ್ಮನೆ ಪಠಿಸುವವನಾಗಿಯಾಗಲಿ, ಹೀಗೆ ಯಾವುದಾದರೂ ಒಂದು ರೀತಿಯಲ್ಲಿ ನಿಯಮವೇನೂ ಇಲ್ಲವೆ ಎಂಬ ಭಾವವು, **ಎನ್ರು ಶೊಲ್ಲುಗಿರಪಡಿಯೇ** - ಎಂದು ಹೇಳಿರುವಹಾಗೆ, **ಶರಣ್ಯನ್ ಕೃಪೈ** – ಸಮಸ್ತರಿಗೂ ಗತಿಯಾಗಿರುವ ಸರ್ವೇಶ್ವರನ ಕೃಪೆಯು, **ಇವ್ವುಕ್ತಿಮಾತ್ರಮುಂ ಊಣ್ಣು** - ಈ ಉಕ್ತಿಯನ್ನು ಮಾತ್ರ ಭುಜಿಸಿ, **ಅರುಕ್ಕಮಾಟ್ಟಾದು** - ಜೀರ್ಣಿಸಿಕೊಳ್ಳಲಾರದು ಎಂದರೆ ಪ್ರತಿಫಲವನ್ನು ಕೊಡದಹಾಗೆ ವ್ಯರ್ಥವಾಗಿ ಮಾಡಲಾರದು, ಭಗವತ್ಕೃಪೆಯು ಫಲವನ್ನು ಕೊಟ್ಟೇಕೊಡುತ್ತದೆಂಬ ಭಾವವು. ಈ ಉಕ್ತಿಮಾತ್ರವೇ ಅವಲಂಬನವಾಗಿ ಮತ್ತೆ ಯಾವಜ್ಞಾನವೂ ಇಲ್ಲವೆ, ಸರ್ವಶರಣ್ಯನನ್ನೇ ಆಕಿಂಚನತ್ವ ಮಹಾವಿಶ್ವಾಸಗಳ ಮೂಲಕ ಶರಣುಹೊಂದಿದರೆ ಸ್ವಾಮಿಕೃಪೆಯು ಅಂಥಾವನ ವಿಷಯದಲ್ಲಿ ಎಂದಿಗೂ ವಿತಥವಾಗಲಾರದು ಎಂದು ಹೇಳಿರುತ್ತಾರೆ. ಈ ಅಭಿಪ್ರಾಯವನ್ನೇ ಪೂರ್ವಾಚಾರ್ಯರುಗಳೂ ಕೂಡ ಸಮರ್ಥಿಸಿರುತ್ತಾರೆಂದು ಅವರುಗಳ ಸೂಕ್ತಿಗಳನ್ನು ಉದಾಹರಿಸುತ್ತಾರೆ. **“ಪಾಪೀಯಸೋಪಿ”** ಎಂಬುವದು ಕೂರೇಶರ ಅತಿಮಾನುಷಸ್ತವದ ಕೊನೇ ಶ್ಲೋಕವು:—

ಪಾಪೀಯಸೋಪಿಶರಣಾಗತಿಶಬ್ದಭಾಜೋ ನೋಪೇಕ್ಷಣಂ ಮಮ ತವೋಚಿತಮೀಶ್ವರಸ್ಯ । ತ್ವಜ್ಜ್ಞಾನಶಕ್ತಿಕರುಣಾಸು ಸತೀಷು ನೇಹ ಪಾಪಂ ಪರಾಕ್ರಮಿತುಮರ್ಹತಿ ಮಾಮಕೀನಂ॥

ಎಂಬುವದು ಪೂರಾ ಶ್ಲೋಕವು. ಇದರ ಅರ್ಥವೇನೆಂದರೆ:—(೧) **ಪಾಪೀಯಸೋಪಿ** - ಹೆಚ್ಚಾದ ಪಾಪಮಾಡಿದವನಾದರೂ, **ಶರಣಾಗತಿ ಶಬ್ದಭಾಜಃ**- ಶರಣಾಗತಿ ಶಬ್ದವನ್ನು ಹೊಂದಿದ ಎಂದರೆ ಉಚ್ಚರಿಸಿದ, **ಮಮ** – ನನ್ನ, **ಉಪೇಕ್ಷಣಂ** - ನಿರಾಕರಣವು, **ಈಶ್ವರಸ್ಯ** - ಸರ್ವೇಶ್ವರನಾದ, **ತವ**-ನಿನಗೆ,

---

(೧) ಶರಣಾಗತಿ ಗದ್ಯವು.

ಶರಣ್ಯಸ್ಯ ಸ್ಪೃಷ್ಯೈ." ಇತ್ಯರ್ಥಕ್ತ್ಯೈ "ಸಾಪೀಯಮಸೋಽಪಿ ಶರಣಾಗತಿ ಶಬ್ದ ಭಾಜಃ" ಎನ್ನುವುದು (೨) "ಶರಣವರಣವಾಗಿಯಂ ಯೋದಿತಾ ನಭವತಿ ಬತಸಾಪಿ ಧೀಪೂರ್ವಿಕಾ" ಎನ್ನುವುದು, (೩) "ಪ್ರಪತ್ತಿ ವಾಚೈವ

ನೋಚಿತಂ - ಉಚಿತವಲ್ಲವು. ಏಕೆಂದರೆ, **ತ್ವದ್ಜ್ಞಾನ ಶಕ್ತಿ ಕರುಣಾಸು ಸತೀಷು** - ನಿನ್ನ ಜ್ಞಾನಶಕ್ತಿ ಕರುಣೆಗಳು ಇರುತ್ತಿರಲಾಗಿ, **ಮಾಮಕೀನಂ ಪಾಪಂ** - ನನ್ನ ಸಂಬಂಧವಾದ ಪಾಪವು **ಇಹ** - ಈ ನನ್ನ ವಿಷಯದಲ್ಲಿ, **ಪರಾಕ್ರಮಿತುಂ** - ಆಕ್ರಮಿಸಿಕೊಳ್ಳಲು, **ನಾರ್ಹತಿ** - ಯೋಗ್ಯವಾದುದಲ್ಲವು; ಇಲ್ಲಿ ಶರಣಾಗತಿ ಶಬ್ದ ಭಾಜಃ - ಎಂಬುವವರಿಂದ ಉಕ್ತಿಮಾರ್ಗವು ಪ್ರದರ್ಶಿಸಲ್ಪಟ್ಟು ಅವಕ್ಕೂ ಕೂಡ ಮೋಕ್ಷಫಲ ಉಂಟೆಂದು ಹೇಳಲ್ಪಟ್ಟಿತು.

(೨) **ಇಯಂ** - ಈ, **ಯಾ** - ಯಾವ ಪ್ರಸಿದ್ಧವಾದ **ಶರಣವರಣ ವಾಕ್** - ಶರಣವನ್ನು ಪ್ರಾರ್ಥಿಸುವ ಪ್ರಯೂಸವಾಕ್ಯವು, **ಉದಿತಾ** - ಹೇಳಲ್ಪಟ್ಟಿತೋ, **ಸಾಪಿ** - ಅದೂ ಕೂಡ, **ಧೀಪೂರ್ವಕಾ** - ಬುದ್ಧಿ ಪೂರ್ವಕವಾಗಿ, **ನ ಭವತಿ** - ಉಂಟಾಗಲಿಲ್ಲವು. ಮುಂದೆ "**ಇತಿಯದಿ ದಯನೀಯತಾ ಮಯ್ಯಹೋ ವರದತವ ಭವೇತ್ತತಃ ಪ್ರಾಣಿಮಿ**" ಎಂಬುವುದು ಕೂರೇಶರ ಶ್ರೀ ವರದರಾಜಸ್ತವದ ೮೪ ನೇ ಶ್ಲೋಕದ ಉತ್ತರಾರ್ಧವು. ಹೀಗಾದರೂ, ನೀನು ದಯೆ ತೋರಿಸುವ ಭಾವವು ನನ್ನಲ್ಲಿದ್ದುದಾದರೆ, ನಾನು ಅದರಿಂದ ಓ ವರದನೇ ಉಜ್ಜೀವಿಸುವೆನು. ಎಂದರೆ ನಿನ್ನಿಂದ ರಕ್ಷಿಸಲ್ಪಡುವೆನು ಎಂಬ ಭಾವವು"

(೩) ಇದೂ ಶ್ರೀ ಕೂರೇಶರ ವರದರಾಜಸ್ತವ ಶ್ಲೋಕವು. ೯೨.

"**ಯಥಾಸಿ ಯಾವಾನಸಿ ಯೋಽಸಿ ಯದ್ಗುಣಃ ಕರೀಶ ಯಾದೃಗ್ವಿಭವೋ ಯದಿಂಗಿತಃ । ತಥಾವಿಧಂ ತ್ವಾಂ ಬತ ಭಕ್ತಿ ದುರ್ಗ್ರಹಂ ಪ್ರಪತ್ತಿ ವಾಚೈವ ನಿರೀಕ್ಷಿತುಂ ವೃಣೇ**" ॥

ಎಂಬುವುದು ಪೂರಾ ಶ್ಲೋಕವು. "**ಯಥಾಸಿ**-ಯಾವರೀತಿಯುಳ್ಳ ಯಾವಪ್ರಕಾರವಾಗಿದ್ದೀಯೋ, **ಯಾವಾನಸಿ**-ಯಾವಪರಿಮಾಣವವನಾಗಿದ್ದೀಯೋ, ಇಲ್ಲಿ **ಅಣೋರಣೀಯಾನ್ ಮಹತೋಮಹೀಯಾನ್** ಇತ್ಯಾದಿ ಶ್ರುತಿಯು ವಿವಕ್ಷಿತವು, **ಯೋಽಸಿ** - ಯಾರಾಗಿದ್ದೀಯೋ, **ಯದ್ಗುಣಃ**-ಯಾವ ಕಲ್ಯಾಣಗುಣಗಳುಳ್ಳವನೋ, **ಹೇ ಕರೀಶ**- ಹೇ ಕರಿಗಿರಿ ಸ್ವಾಮಿಯಾದ ವರದನೇ, **ಯಾದೃಗ್ವಿಭವಃ** - ಎಂತಹ ವಿಭವವುಳ್ಳವನೋ, **ಯದಿಂಗಿತಃ** - ಯಾವ ಇಂಗಿತವುಳ್ಳವನೋ, **ತಥಾವಿಧಂ** - ಅಂತಹ, **ಭಕ್ತಿದುರ್ಗ್ರಹಂ** - ಭಕ್ತಿಮಾರ್ಗದಿಂದ

ನಿರೀಕ್ಷಿತುಂ ವೃಣೇ" ಎನ್ರುವರ್ ಅಭಿಯುಕ್ತರ್ ಪೇಶಿನಾರ್ಗಳ್, ಇವ್ವುಕ್ತಿಮಾತ್ರ ನಿಷ್ಠನುಡೈಯಾವ್ರುನರ್, ಆಚಾರ್ಯನಿಷ್ಠನುಡೈಯವ್ರುವರ್, ನಿಲೈಗಳಿರಣ್ಡೈಯುವರ್, "ತವಭರೋ ಹಮಕಾರಿಷಿ ಧಾರ್ಮಿ

ಸಾಕ್ಷಾತ್ಕರಿಸಲು ತುಂಬಾ ಕಷ್ಟಸಾಧ್ಯನಾದ, **ತ್ವಾಂ** - ನಿನ್ನನ್ನು, **ಪ್ರಪತ್ತಿ ವಾಚೈವ** - ಶರಣಾಗತಿ ಬೋಧಿಸುವ ಶಬ್ದವೆಂಬುದರ ದ್ವಯಮಾತ್ರದಿಂದಲೇ, **ನಿರೀಕ್ಷಿತುಂ**-ನಿರೀಕ್ಷಿಸಲು ಎಂದರೆ ಪ್ರತ್ಯಕ್ಷದಲ್ಲಿ ಅನುಭವಿಸಲು, **ವೃಣೇ**-ಅಪೇಕ್ಷಿಸುತ್ತೇನೆ, ಇಲ್ಲಿಯೂ ಶರಣಾಗತಿ ಮಂತ್ರವನ್ನುಚ್ಚರಿಸುವವಕ್ಕೂ ಕೂಡ ಮೋಕ್ಷಫಲ ಉಂಟೆಂದು ಹೇಳಲ್ಪಟ್ಟಿತು" **ಎನ್ರುವರ್** - ಇಂತಹ ಶ್ಲೋಕಗಳ ಮೂಲಕ, **ಅಭಿಯುಕ್ತರ್**-ಪೂಜ್ಯರಾದ ಕೂರೇಶರು, **ಪೇಶಿನಾರ್‌ಗಳ್** - ಹೇಳಿರುತ್ತಾರೆ. ಭಾಷ್ಯಕಾರರ ಪ್ರಿಯಶಿಷ್ಯರಾಗಿ, ಶ್ರೀ ಭಾಷ್ಯಕಾರರ ಅಭಿಪ್ರಾಯಗಳನ್ನು ಚೆನ್ನಾಗಿ ತಿಳಿದ ಶ್ರೀ ಕೂರನಾಥರ ಅಭಿಪ್ರಾಯವೂ ಕೂಡ ಈ ಉಕ್ತಿನಿಷ್ಠೆಯನ್ನು ಸಮರ್ಥಿಸುತ್ತದೆ ಎಂಬ ಭಾವವು. ಆದರೆ ಕೆಲವರು ಉಕ್ತಿನಿಷ್ಠೆಯೇ ಸ್ವತಂತ್ರವಾಗಿ ಸಾಕ್ಷಾತ್ ಮೋಕ್ಷದಾಯಕವಾಗಲಾರದು, ಅದು ಆಚಾರ್ಯ ನಿಷ್ಠೆಯೊಂದಿಗೆ ಸೇರಿದರೇನೇ ಕಾರ್ಯಕಾರಿಯಾಗುವದು ಎಂದು ಹೇಳುವರು. ಈ ಅಭಿಪ್ರಾಯವನ್ನು ಶ್ರೀ ಪರಾಶರ ಭಟ್ಟಾರ್ಯರ ಶ್ರೀರಂಗ ಸ್ತವಶ್ಲೋಕವಾದ (ಉತ್ತರ. ೧೦೩) "ತವಭರೋಽಹಂ" ಎಂಬುವದರಿಂದ ಸಮರ್ಥನೆಮಾಡುತ್ತಾರೆ. ಆದರೆ ಈ ಅಭಿಪ್ರಾಯವು ಸರಿಯಲ್ಲವು ಎಂದು ಹೇಳಿ, ಶ್ಲೋಕಾಭಿಪ್ರಾಯವು ಏನೆಂಬುವದನ್ನು ಮುಂದೆ ವಿಶದೀಕರಿಸುತ್ತಾರೆ. **ಇವ್ವುಕ್ತಿಮಾತ್ರ ನಿಷ್ಠನುಡೈಯವ್ರುನರ್** - ಈ ಉಕ್ತಿಮಾತ್ರನಿಷ್ಠನ ಮತ್ತು **ಆಚಾರ್ಯನಿಷ್ಠನುಡೈಯವ್ರುನರ್** - ಆಚಾರ್ಯನಿಷ್ಠನ, **ನಿಲೈಗಳಿರಣ್ಡೈಯುವರ್**-ಸ್ಥಿತಿಗಳೆರಡನ್ನೂ, **"ತವಭರೋಽಹಂ" ಎನ್ರು** - ಎಂಬುದಾಗಿ, **ಶೇರ್‌ತ್ತನು ಸಂಧಿತ್ತಾರ್‌ಗಳ್** - ಕೇಳಿ ಅನುಸಂಧಾನ ಮಾಡಿದರು. ಕೆಲವರಭಿಪ್ರಾಯವು, ಉಕ್ತಿನಿಷ್ಠೆ ಮಾತ್ರವೇ ಸಾಧನವಾಗಲಾರದೆಂದೂ ಉಕ್ತಿನಿಷ್ಠೆ ಆಚಾರ್ಯನಿಷ್ಠೆ ಎರಡೂ ಈ ಮೇಲಿನ ಶ್ಲೋಕದಲ್ಲಿ ಹೇಳಿರುವಹಾಗೆ, ಎರಡೂ ಸೇರಿಯೇ ಸಾಧನವೆಂದು ಅಭಿಪ್ರಾಯವು ಇದು ಸರಿಯಲ್ಲವೆಂದೂ. ಶ್ರೀ ಪರಾಶರಭಟ್ಟರ ಅಭಿಪ್ರಾಯವು ಹಾಗಲ್ಲವೆಂದು ತೋರಿಸಿಕೊಡಿಸುತ್ತಾರೆ. ಈ ಶ್ಲೋಕಾಭಿಪ್ರಾಯವು ಹೇಗೆಂದರೆ:— **ಅಹಂ** - ಅನನ್ಯಗತಿಕನಾದ ನಾನು, **ಧಾರ್ಮಿಕೈಃ** - ಧರ್ಮಿಷ್ಠರಾದ ಪೂರ್ವಾಚಾರ್ಯರುಗಳಿಂದ, **ತವ** - ಪರಿಪೂರ್ಣನಾಗಿಯೂ ಮನೋಹರನಾಗಿಯೂ ಇರುವ ನಿನ್ನ, **ಭರಃ** - ರಕ್ಷಿಸುವ ಭಾರವನ್ನಾಗಿ, **ಅಕಾರಿಷಿ**-ಮಾಡಲ್ಪಟ್ಟೆನು. ಇದರಿಂದ

ಕ್ತೈಶ್ಶರಣಮಿತ್ಯಪಿ ವಾಚಮುದೈರಿರಂ । ಇತಿ ಸಸಾಕ್ಷಿಕಮಿದಮದ್ಯ ಮಾಂ ಕುರು ಭರಂ ತವ ರಂಗಧುರಂಧರ" ಎನ್ರು ಶೇರ್ತ್ತನುಸಂಧಿತ್ತಾರ್ಗಳ್. ಇದಿಲ್ ಮಿಗುದಿ ಕಾಟ್ಟುಕಿರ "ಅಪಿ" ಶಬ್ದತ್ತಾಲೆ ಓರೊನ್ರೇಯಮಮೈಯುಮೆನ್ರು ಸೂಚಿತಮಾಯಿತ್ತು.

ಆಚಾರ್ಯ ನಿಷ್ಠೆಯು ಹೇಳಲ್ಪಟ್ಟಿತು. **ಶರಣಮಿತಿ** - ಶರಣವೆಂಬುವ, **ವಾಚಮಪಿ** - ವಾಕ್ಯವನ್ನು ಕೂಡ, **ಉದೈರಿರಂ** - ಹೇಳಿದೆನು. **ಇತಿ** - ಈ ಕಾರಣದಿಂದ **ಇದಂ** ಈ ವ್ಯಾಜವನ್ನು, **ಸಸಾಕ್ಷಿಕಮ್**-ಸಾಕ್ಷಿಯೊಂದಿಗೆಸೇರಿದ ಹಾಗೆ ಮಾಡಿಕೊಂಡು ಎಂದರೆ ಈ ಆಚಾರ್ಯರು ಸಾಕ್ಷಿಗಳೆಂದು ತೋರಿಸಿ, **ಹೇ ರಙ್ಗಧುರಂಧರ** - ಓ ರಂಗನಾಥನೇ, **ಅದ್ಯ** – ಈಗ, **ಮಾಂ**- ನನ್ನನ್ನು, **ತವ ಭರಂ** - ನಿನಗೆ ಭಾರವಾಗಿ, **ಕುರು** – ಮಾಡು, ಎಂದರೆ ನನ್ನನ್ನು ರಕ್ಷಿಸುವ ಭಾರವು ನಿನಗೆ ಸೇರಿದುದೆಂಬಭಿಪ್ರಾಯವು. ಆಚಾರ್ಯ ನಿಷ್ಠೆಯನ್ನೂ, ಹಾಗೆಯೇ ಉಕ್ತಿನಿಷ್ಠೆಯನ್ನೂ ನಾನು ಅವಲಂಬಿಸಿದವನಾದ ಪ್ರಯುಕ್ತ ನನ್ನನ್ನು ರಕ್ಷಿಸುವ ಭಾರವು ನಿನ್ನದು. ಇದನ್ನು ನೀನು ಸಾಕ್ಷಿಭೂತವಾದುದಾಗಿ ಅಙ್ಗೀಕರಿಸಿ, ನನ್ನನ್ನು ರಕ್ಷಿಸುವ ಭಾರವನ್ನು ವಹಿಸು ಎಂಬರ್ಥವು. ಈ ವ್ಯಾಜಗಳಿರುವದರಿಂದ ನಿನಗೆ ವೈಷಮ್ಯ ನೈರ್ಘೃಣ್ಯ ಮೊದಲಾದ ದೋಷಗಳು ಸಂಭವಿಸುವುದಿಲ್ಲವು; ಎಂಬುವದು ಶ್ಲೋಕಾಭಿಪ್ರಾಯವು. ಹೀಗೆ ಶ್ರೀ ಪರಾಶರಭಟ್ಟರು ಎರಡನ್ನೂ ಹೀಗೆ ಒಂದೇ ಶ್ಲೋಕದಲ್ಲೇ ಒಟ್ಟಿಗೆ ಸೇರಿಸಿ ಹೇಳಿದುದರಭಿಪ್ರಾಯವು ಗ್ರಂಥಲಾಘವಕ್ಕಾಗಿ ಹೇಳಿದುದಾಗಿರುತ್ತದೆ. ಆದರೆ **ಶರಣಮಿತ್ಯಪಿ ವಾಚಮುದೈರಿರಂ** ಎಂಬಲ್ಲಿ ಅಪಿಶಬ್ದವು ಸಮುಚ್ಚಯಾರ್ಥದಲ್ಲಿ ಎರಡೂ ಹೇಳಲ್ಪಟ್ಟವೆಂದು ಯೋಚಿಸಬಹುದಲ್ಲವೇ ಎಂದರೆ ಇಲ್ಲಿ **ಅಪಿ** ಶಬ್ದವು **ಸಮುಚ್ಚಯವನ್ನು** ತೋರಿಸುವದಿಲ್ಲವೆಂದು ಹೇಳುತ್ತಾರೆ. **ಇದಿಲ್**- ಈ ಶ್ಲೋಕದಲ್ಲಿ **ಮಿಗುದಿ ಕಾಟ್ಟುಕಿರ ಅಪಿಶಬ್ದತ್ತಾಲೇ** – ಅತಿಶಯಭಾವವನ್ನು ತೋರಿಸುವ "ಅಪಿ" ಎಂಬ ಶಬ್ದದಿಂದ, **ಓರೊನ್ರೇ ಅಮೈಯುಮ್** - ಅವೆರಡರಲ್ಲಿ ಒಂದೇ ಸಾಕು, ಎಂದು **ಸೂಚಿತಮಾಯಿತ್ತು** - ಸೂಚಿಸಲ್ಪಟ್ಟಿತು.

ಉಕ್ತಿನಿಷ್ಠೆಮಾತ್ರವೇ ಮೋಕ್ಷಸಾಧಕೋಪಾಯವೇ ಆಗ್ಗುವೇ ಎಂಬ ವಿಷಯದಲ್ಲಿ ಈಗ ಸ್ವಲ್ಪ ಚರ್ಚೆಯು ನಡೆಯುತ್ತಲಿದೆ. ಇದು ಹಾಗಿರಲಿ.

ತಸ್ಮಾತ್ಸಕೃತ್ಕೃತೇನೈವ ಕರ್ಮಣಾ ಯೇನ ಮಾನವಃ ।
ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯಸ್ಸುಖೀಭವೇತ್ ।
ತದ್ಬ್ರೂಹಿ ಕರ್ಮ ತನ್ಮನ್ತ್ರಂ ದಯಾರ್ದ್ರಹೃದಯೋಽಹ್ಯಪಿ ॥

ಯಾವ ಒಂದುಸಲ ಮಾಡಿದ ಕರ್ಮದಿಂದಲೂ, ಯಾವ ಒಂದುಸಲ ಜಪಿಸಿದ ಮಂತ್ರದಿಂದಲೂ ಮನುಷ್ಯನು ಕೃತಕೃತ್ಯನಾಗಿ ಸುಖಿಯಾಗುವನೋ, ಆ ಕರ್ಮ ಯಾವುದು, ಆ ಮಂತ್ರ ಯಾವುದು, ಅದನ್ನು ನನಗೆ ತಿಳಿಸಿ; ತಾವು ದಯಾರ್ದ್ರಹೃದಯರಾಗಿರುತ್ತೀರಲ್ಲವೆ; ಎಂದು ಪ್ರಶ್ನಿಸಿದುದಕ್ಕೆ ಭರನ್ಯಾಸವೇ ಕರ್ಮವೆಂದೂ, ಸಕೃಜ್ಜಪಿಸುವ ಮಂತ್ರವು ದ್ವಯವೆಂದೂ, ಹೇಳಲ್ಪಟ್ಟಿತು. ಶ್ರೀಕೂರೇಶರೂ **"ಪ್ರಪತ್ತ್ಯಾವಾಚೈವ"** ಎಂದು ಅವಧಾರಣ ಉಪಯೋಗಿಸಿರುವದರಿಂದಲೂ, ಇವುಗಳನ್ನೆಲ್ಲಾ ಅನುಸರಿಸಿಯೇ ಶ್ರೀ ಪರಾಶರ ಭಟ್ಟರು ಹೇಳಿರುತ್ತಾರಾದುದರಿಂದಲೂ, **"ಶರಣಮಿತ್ಯಪಿವಾಚಮುದೈರಿರಂ"** ಎಂಬುವದರಲ್ಲಿ ಅಪಿ ಶಬ್ದವು ಸಮುಚ್ಚಯಾರ್ಥವುಳ್ಳದ್ದಲ್ಲವು. ಶಾಸ್ತ್ರವಚನಗಳ ಮತ್ತು ಪೂರ್ವಾಚಾರ್ಯ ಸೂಕ್ತಿಗಳ ನಿಷ್ಕರ್ಷಾಭಿಪ್ರಾಯವನ್ನು ಕಂಡುಹಿಡಿದು ಉಪದೇಶಿಸುವದರಲ್ಲಿ ಶ್ರೀನಿಗಮಾಂತದೇಶಿಕರವರು ಅಗ್ರಗಣ್ಯರಾದುದರಿಂದ ಅವರ ಅಭಿಪ್ರಾಯವೇ ನಮಗೆ ಗ್ರಾಹ್ಯವು. ಈ ಅಭಿಪ್ರಾಯವನ್ನೇ ಶ್ರೀ ಶರಣಾಗತಿ ದೀಪಿಕೆಯಲ್ಲೂ ಬಹು ವಿಶದವಾಗಿ ಉಪಪಾದಿಸಿರುತ್ತಾರೆ.

ಭಕ್ತಿಃಪ್ರಪತ್ತಿರಥವಾ ಭಗವಂಸ್ತದುಕ್ತಿ
ಸ್ತನ್ನಿಷ್ಠಸಂಶ್ರಯ ಇತೀವ ವಿಕಲ್ಪ್ಯಮಾನಂ ॥
ಯತ್ಕಿಂಚಿದೇಕ ಮುಪಪಾದಯತಾತ್ವಯೈವ-
ತ್ರಾತಾಸ್ಸ್ಮರಂತ್ಯವಸರೇ ಭವಿನೋಭವಾಬ್ಧಿಂ ॥

ಈ ಶ್ಲೋಕದಲ್ಲಿ ಮೋಕ್ಷಸಾಧಕ ಉಪಾಯಗಳು ಭಕ್ತಿಶಬ್ದದಿಂದ ಭಗವದುಪಾಸನೆಯೂ, ಪ್ರಪದನವೂ, ಉಕ್ತಿನಿಷ್ಠೆಯೂ, ಆಚಾರ್ಯನಿಷ್ಠೆಯೂ, ಹೀಗೆ ನಾಲ್ಕೆಂದು ಉಪಪಾದಿಸಿರುತ್ತಾರೆ. ಮುಂದೆ **ಯತ್ಕಿಂಚಿದೇಕ** ವೆಂದು ಪ್ರಯೋಗವಿರುವದರಿಂದ ಇವುಗಳಲ್ಲಿ ಯಾವುದಾದರೂ ಒಂದರನುಷ್ಠಾನವು ಮೋಕ್ಷಪ್ರಾಪ್ತಿಯನ್ನುಂಟುಮಾಡುವದರಲ್ಲಿ ಸಂದೇಹವಿಲ್ಲವೆಂಬಭಿಪ್ರಾಯವು. ಪುನಃ ಈ ಅಭಿಪ್ರಾಯವೇ ಪರಿಕರ ವಿಭಾಗಾಧಿಕಾರದಲ್ಲಿ **"ಒರು ಸಕೃದನುಸನ್ಧಾನಮಾದಲ್, ಸಮುದಾಯಜ್ಞಾನಪೂರ್ವಕ ಸಕೃದುಕ್ತಿಮಾತ್ರ ಮೊದಲಾಯ್"** ಎಂಬದಾಗಿಯೂ, ದ್ವಯಾಧಿಕಾರದಲ್ಲಿ **"ಆಸ್ತಿಕ್ಯನುಕಿಮನ್ತ್ರಾರ್ಥಂ ಸಮುದಾಯ ಜ್ಞಾನಪೂರ್ವಕಸಕೃದುಚ್ಚಾರಣಮೋ ಉತ್ತಾರಕಮೆನ್ನುಮಿಡಂ ಶಾಸ್ತ್ರಸಿದ್ಧಂ"** ಎಂಬದಾಗಿಯೂ ಅನುವಾದ ಮಾಡಲ್ಪಟ್ಟಿರುತ್ತದೆ.

ಆಚಾರ್ಯ ನಿಷ್ಠೆ

ಇವರ್‌ಗಳಿಲ್ ಆಚಾರ್ಯ ನಿಷ್ಠ್ರ್ * "ಪುತ್ರಃ ಪ್ರೇಷ್ಯಸ್ತಥಾ ಶಿಷ್ಯ ಇತ್ಯೇವಂಚ ನಿವೇದಯೇತ್" ಎನ್ರು ಶಾಂಡಿಲ್ಯಸ್ಮೃತ್ಯಾದಿಗಳಿಲ್ ಶೊಲ್ಲುಗಿರಪಡಿಯೇ ಆಚಾರ್ಯನುಡೈಯ ಆತ್ಮಾತ್ಮೀಯ ಭರಸಮರ್ಪಣತ್ತಿಲೇ ತಾನುಮನ್ತರ್ಭೂತನ್.

ಆಚಾರ್ಯನಿಷ್ಠೆಯು.

ಇವರ್‌ಗಳಿಲ್ – ಈ ಉಕ್ತಿನಿಷ್ಠರು ಆಚಾರ್ಯನಿಷ್ಠರುಗಳ ಮಧ್ಯದಲ್ಲಿ, ಆಚಾರ್ಯನಿಷ್ಠನು, "**ಪುತ್ರಃ** – ಮಗನು, **ಪ್ರೇಷ್ಯಃ** – ದಾಸನು, **ತಥಾ** – ಹಾಗೆಯೇ **ಶಿಷ್ಯಃ** – ಶಿಷ್ಯನು, **ಇತ್ಯೇವಂಚ** – ಎಂಬೀಪ್ರಕಾರವಾಗಿ, **ನಿವೇದಯೇತ್** - ಸಮರ್ಪಿಸತಕ್ಕದ್ದು" **ಎನ್ರು** – ಎಂಬದಾಗಿ, **ಶೊಲ್ಲುಗಿರಪಡಿಯೇ**- ಹೇಳಿರುವಹಾಗೆ, **ಆಚಾರ್ಯನುಡೈಯ ಆತ್ಮಾತ್ಮೀಯ ಭರಸಮರ್ಪಣತ್ತಿಲೇ**- ಆಚಾರ್ಯನ ತನ್ನ ಮತ್ತು ತನ್ನವರ ಪ್ರಪದನಾನುಷ್ಠಾನದಲ್ಲಿ, **ತಾನುಮನ್ತರ್ಭೂತನ್** - ತಾನೂ ಎಂದರೆ ಈ ಆಚಾರ್ಯನಿಷ್ಠನೂ ಸೇರಿದವನೇ.

ಇಲ್ಲಿ **ಆಚಾರ್ಯ ನಿಷ್ಠ್ರ್** ಎಂದು ಹೇಳಲ್ಪಟ್ಟಿರುವವನು ಸುಮ್ಮನೆ ಭಕ್ತಿಯಿಂದ ಆಚಾರ್ಯಸೇವೆ ಮಾಡಿಕೊಂಡಿರುವವನು ಹೇಳಲ್ಪಡಲಿಲ್ಲವು. ಆಚಾರ್ಯ ಸೇವಾನಿರತನೂ ಅಲ್ಲದೆ, ಆಚಾರ್ಯನು ಮಾಡುವ ಆತ್ಮಾತ್ಮೀಯಭರ ಸಮರ್ಪಣದಲ್ಲಿ ಉದ್ದೇಶ್ಯನಾಗಿರಬೇಕೆಂಬಭಿಪ್ರಾಯವು. "**ಪುತ್ರಃಪ್ರೇಷ್ಯಃ**" ಎಂಬುವದು ಉತ್ತರಾರ್ಧವು. "**ತ್ರಿಸನ್ಧ್ಯಂ ಕಾರಯೇದ್ಬಾಲಾನ್ವಂದನಂ ದೇವಪಾದಯೋಃ**" ಎಂಬುವದು ಪೂರ್ವಾರ್ಧವು. ಬೆಳಿಗ್ಗೆ ಮಧ್ಯಾಹ್ನ ಸಾಯಂಕಾಲ ಹೀಗೆ ಮೂರು ಸಂಧ್ಯಾಗಳಲ್ಲೂ, ಸ್ವಾಮಿಯಪಾದದಲ್ಲಿ ಬಾಲರು ವಂದನೆ ಮಾಡುವಹಾಗೆ ಮಾಡಿಸತಕ್ಕದ್ದು; ಪುತ್ರನೆಂದೂ, ದಾಸನೆಂದೂ, ಶಿಷ್ಯನೆಂದೂ ಹೀಗೆ ಅವರನ್ನು ದೇವರಲ್ಲಿ ಸಮರ್ಪಿಸತಕ್ಕದ್ದು ಎಂದು ಹೇಳಿರುತ್ತದೆ. ಯಾರು ಸಮರ್ಪಿಸತಕ್ಕದ್ದು ಎಂದರೆ "**ಕುಟುಂಬಿ**" ಕುಟುಂಬಿಯು ಎಂದು ಇಟ್ಟುಕೊಳ್ಳತಕ್ಕದ್ದು. ಆದರೆ ಆಚಾರ್ಯನು ಮಾಡುವ ಆತ್ಮವಿಷಯಿಕವಾದ ಭರಸಮರ್ಪಣದಲ್ಲಿ ಶಿಷ್ಯನು ಸೇರದಿದ್ದರೂ, ಆತ್ಮೀಯ ಭರಸಮರ್ಪಣದಲ್ಲಿ ಈತನೂ ಅಂತರ್ಭೂತನು ಎಂಬ

---

* ಶಾಂಡಿಲ್ಯ, ೩—೭೫

ಅಭಿಪ್ರಾಯವು. ಆದರೆ ಆಚಾರ್ಯರವರು ಮಾಡಿದ **“ಆತ್ಮಾತ್ಮೀಯ ಭರಸಮರ್ಪಣತ್ತಿಲೇ ಅಂತರ್ಭೂತನ್”** ಎಂಬ ಪ್ರಯೋಗವು ಹೇಗೆ ಎಂದರೆ, ಆಚಾರ್ಯನಾದವನು ತನ್ನ ಶಿಷ್ಯನಿಗಾಗಿ ಭರಸಮರ್ಪಣಕಾಲದಲ್ಲಿ **“ಮದೀಯ ದಾಸಶ್ಚ ಅಹಮಪಿ ತ್ವದೀಯಃ ಸಸ್ತು”** ಎಂದು ಹೇಳಿಕೊಳ್ಳುವದರಿಂದ, ಆತ್ಮಾತ್ಮೀಯ ಭರಸಮರ್ಪಣೆಯೆಂದು ಹೇಳುವದರಲ್ಲೇನೂ ವಿರೋಧವಿಲ್ಲವು. ಅದೂ ಅಲ್ಲದೆ, ಶಾಂಡಿಲ್ಯ ಸ್ಮೃತಿಯನ್ನು ಉದಾಹರಿಸಿರುವದರಿಂದ, ಅಲ್ಲಿಹೊಸದಾಗಿ ಬಂದ ಬಾಲರನ್ನು ಸರ್ವೇಶ್ವರನಲ್ಲಿ ಆಚಾರ್ಯನು ಸಮರ್ಪಿಸುವ ಕ್ರಮವೂ ಕೂಡ ಹೀಗೆಯೇ ಆದುದರಿಂದ ಆತ್ಮಾತ್ಮೀಯವೆಂದು ಹೇಳುವದರಲ್ಲಿ ಅಭ್ಯಂತರವೇನೂ ಇಲ್ಲವು. ತನ್ನ ಆತ್ಮ ಉದ್ದೇಶ್ಯವಾಗಿ ಮಾಡುವ ಭರಸಮರ್ಪಣೆಯೇನೋ ಸಕೃದಾವೃತ್ತಿಯೇ ವಿನಾ ಪುನಃ ಪುನಃ ಮಾಡತಕ್ಕದ್ದಲ್ಲವು. ಶಿಷ್ಯನಿಗೆ ಫಲಸಿದ್ಧಿಗಾಗಿ ಸ್ವಾಮಿಯನ್ನು ಪ್ರಾರ್ಥಿಸುವಾಗ ತಾನೂಕೂಡ ಸರ್ವೇಶ್ವರನ ವಸ್ತುವೇ ಎಂದು ಹೇಳಿ ಆತ್ಮೀಯ ಭರಸಮರ್ಪಣೆಯನ್ನು ಮಾಡುವದರಿಂದ **ಆತ್ಮಾತ್ಮೀಯ ಭರಸಮರ್ಪಣ** ವೆಂಬ ಪ್ರಯೋಗವು. ಈ ಭರಸಮರ್ಪಣೆಯ ಅಭಿಪ್ರಾಯವು ಇಷ್ಟೇ:—ಈಗ ನನ್ನನ್ನಾಶ್ರಯಿಸಿರುವ ಮದೀಯದಾಸನ ಸ್ವರೂಪ, ರಕ್ಷಾಫಲಗಳ ಭರವನ್ನೆಲ್ಲಾ ನೀನೇ ಸ್ವೀಕರಿಸತಕ್ಕದ್ದೆಂಬುವ ಭರವನ್ನು ನಾನು ನಿನ್ನಲ್ಲಿಟ್ಟಿರುತ್ತೇನೆಂಬ ಭಾವವು. ಇದರಿಂದ ಮುಂದೆ ಬರುವ ಆತ್ಮೀಯರಿಗೂ ಕೂಡ, ಈಗಲೇ ಭರಸಮರ್ಪಣೆ ಮಾಡಬಹುದು ಎಂಬ ಅಭಿಪ್ರಾಯವು ನಿರಸ್ತವಾಯಿತು. ಆದರೆ ಶ್ರೀ ಪರಾಶರ ಮಹರ್ಷಿಯು ವಿಷ್ಣು ಪುರಾಣಾಂತ್ಯದಲ್ಲಿ **“ಪ್ರದಿಶತು ಭಗವಾನಶೇಷಪುಂಸಾಂ ಹರಿರಪಜನ್ಮಜರಾತಿಕಾಂ ಸಮೃದ್ಧಿಂ”** ಹೇಯ ಪ್ರತ್ಯನೀಕನಾಗಿ ಷಾಡ್ಗುಣ್ಯಪರಿಪೂರ್ಣನಾದ ಶ್ರೀ ಹರಿಯು. ಜನ್ಮಜರಾಮರಣಾದಿಗಳಿಲ್ಲದಿರುವ ಮೋಕ್ಷಸಾಮ್ರಾಜ್ಯವನ್ನು ಸಮಸ್ತ ಜನರಿಗೂ ಉಂಟುಮಾಡಲಿ” ಎಂದು ಹೇಳಿರುವದು, ಶ್ರೀ ಪರಾಶರರು ನಮ್ಮೆಲ್ಲರಿಗಾಗಿ ಭರಸಮರ್ಪಣೆಮಾಡಿದ್ದಾರೆ, ನಾವು ಶರಣಾಗತಿಯನ್ನನುಷ್ಠಿಸುವದು ಅನಾವಶ್ಯಕವೆಂದೂ, ಹಾಗೆಯೇ ಶ್ರೀ ಭಾಷ್ಯಕಾರರವರು ನಮ್ಮೆಲ್ಲರಿಗಾಗಿ ಭರಸಮರ್ಪಣೆಮಾಡಿರುವದರಿಂದ ನಾವುಗಳು ಅನುಷ್ಠಿಸುವದು ಅನಾವಶ್ಯಕವೆಂದೂ. ಹೇಳುವ ಅಭಿಪ್ರಾಯವು ಸರಿಯಲ್ಲವೆಂದು ಇದರಿಂದ ತೋರಿಬರುತ್ತದೆ. ಈ ಅಭಿಪ್ರಾಯವನ್ನು ಶ್ರೀಮದಾಚಾರ್ಯರವರು ಮುಂದೆ ಉಪಪಾದಿಸುತ್ತಾರೆ. ಆದುದರಿಂದ ಇಲ್ಲಿ **ಪ್ರದಿಶತು** ಎಂದು ಹೇಳಿರುವದು ಮಹರ್ಷಿಯ ಉದಾರಭಾವವನ್ನು ತೋರಿಸುವ ಬರೀ ಆಶೀರ್ವಾದವೆಂದು ಭಾವಿಸತಕ್ಕದ್ದು.

ಆದರೆ ಈ ಆತ್ಮಾತ್ಮೀಯ ಭರಸಮರ್ಪಣೆಯಲ್ಲಿ ಆಚಾರ್ಯರು ತನ್ನ ಶಿಷ್ಯನ ಸ್ವರೂಪ, ರಕ್ಷಾಫಲಗಳ ಭರನ್ಯಾಸಕ್ಕಾಗಿ ತಾವು ಪ್ರಪತ್ತಿಯನ್ನು ಪುನಃಪುನಃ

ಶಿಷ್ಯರು ಬಂದು ಪ್ರಾರ್ಥಿಸಿದ ಹಾಗೆಲ್ಲಾ ಅನುಷ್ಠಿಸುವದು ನ್ಯಾಯವೋ ಎಂದಾಕ್ಷೇಪಿಸಿದರೆ, ಈ ಪ್ರಪತ್ತಿಯು ಶಿಷ್ಯನ ಭರನ್ಯಾಸವನ್ನು ಸ್ವೀಕರಿಸುವದಕ್ಕಾಗಿಯೇ ವಿನಾ, ತಮ್ಮ ಸ್ವರೂಪರಕ್ಷಾಫಲಗಳ ಭರವನ್ನು ಸಮರ್ಪಿಸುವದಿಲ್ಲವು, ಹೀಗೆ ತಮಗಾಗಿ ಮಾಡುವ ಭರನ್ಯಾಸವು ಸಕೃದನುಷ್ಠೇಯವು. ಶ್ರೀ ಭಾಷ್ಯಕಾರರು ಅನುಗ್ರಹಿಸಿರುವ ಶರಣಾಗತಿ ಗದ್ಯದ ಪ್ರತಿನಿತ್ಯವೂ ಮಾಡುವ ಪಠನದಿಂದ ಶರಣಾಗತ್ಯನುಷ್ಠಾನದ ಅನುಸಂಧಾನ ಮಾತ್ರ ಹೇಗೋ, ಹಾಗೆಯೇ ಇಲ್ಲಿಯೂ, ತನ್ನ ದಾಸನೂ ತಾವೂ ಸಹ ನಿನ್ನ ವಸ್ತುವೆಂದು ಹೇಳಿಕೊಂಡಿದುದರಿಂದ ಪುನಃ ಪುನಃ ಶರಣಾಗತಿಯನ್ನು ಅನುಷ್ಠಿಸಿದರೆಂದಾಗುವದಿಲ್ಲವು.

ಕಿಂಚ, ಸ್ಮೃತಿವಾಕ್ಯದಲ್ಲಿ ಆಚಾರ್ಯರ ಆತ್ಮ ಭರಸಮರ್ಪಣ ವಿಷಯವೇ ಹೇಳಲಿಲ್ಲವು, ಅಲ್ಲಿ ಈ ಮೇಲೆ ಉಪಪಾದಿಸಿರುವ ಸಂದರ್ಭದಲ್ಲಿ ಹೇಗೋ, ಹಾಗೆ ಆತ್ಮೀಯ ಭರಸಮರ್ಪಣೆಯೇ ಉದ್ದೇಶ್ಯವು. ಆದರೆ, **ಏವಂ ಚ ನಿವೇದಯೇತ್** ಎಂಬಲ್ಲಿ ಚಕಾರವಿರುವದರಿಂದ ಆತ್ಮಭರಸಮರ್ಪಣಪರವೂ ಕೂಡ ಆಗಬಹುದೆಂದು ಊಹಿಸಬಹುದು. ಇಲ್ಲಿ **ನಿವೇದಯೇತ್** ಎಂಬ ಶಬ್ದವು, **"ನಿವೇದಯತ ಮಾಂ ಕ್ಷಿಪ್ರಂ"** ಎಂದು ವಿಭೀಷಣನು ಕೇಳಿಕೊಂಡಿರುವ ಹಾಗೆ ಭರಸಮರ್ಪಣಾರ್ಥದಲ್ಲೇ ಉಪಯೋಗಿಸಲ್ಪಟ್ಟಿರುತ್ತದೆ. ಈ ಮೇಲಿನ ಶಾಂಡಿಲ್ಯ ವಾಕ್ಯವು ಅಭಿಗಮನ ಕಾಲದಲ್ಲೆಲ್ಲಾ ಹೇಳತಕ್ಕದ್ದಾಗಿರುವಾಗ ಮೋಕ್ಷಾರ್ಥವಾದ ಭರಸಮರ್ಪಣವೂ ಆಗಬಹುದೆಂಬುವದು ಹೇಗೆ ಕೂಡುತ್ತದೆಂದರೆ, ಆಚಾರ್ಯನು ಆಕಾಲದಲ್ಲೇ ಹೊಸದಾಗಿ ಬಂದ ಶಿಷ್ಯನನ್ನು ಕುರಿತು ಆತ್ಮೀಯ ಭರಸಮರ್ಪಣೆ ಮಾಡುವ ಪದ್ಧತಿಯಿರುವದರಿಂದ ಯಾವ ಆಕ್ಷೇಪಣೆಗೂ ಕಾರಣವಿಲ್ಲವು. ಅಥವಾ ಈ ಅಭಿಗಮನಕಾಲದಲ್ಲಿ ಹೇಳುವ ವಾಕ್ಯವು ಭರಸಮರ್ಪಣವಾಗವಿದ್ದರೂ, ಹೊಸದಾಗಿ ಬಂದ ಶಿಷ್ಯನ ವಿಷಯದಲ್ಲಿ ಮಾಡುವ ಭರಸಮರ್ಪಣೆ ಕ್ರಮವೂ ಕೂಡ ಹೀಗೆಯೇ ಆದುದರಿಂದಲೂ ವಿರೋಧವಿಲ್ಲವು.

ಆದರೆ ಆಚಾರ್ಯನು ಭರಸಮರ್ಪಣೆಮಾಡುವದು, ಶಿಷ್ಯರು ಮೋಕ್ಷರೂಪ ಫಲಹೊಂದುವದು, ಹೀಗೆಲ್ಲಾದರೂ ಉಂಟೋ? **"ಶಾಸ್ತ್ರಫಲಂ ಪ್ರಯೋಕ್ತರಿ"** ಎಂಬ ನ್ಯಾಯ ಪ್ರಕಾರ ಯಾವನು ಕರ್ತನೋ ಅವನಿಗೀಗ ಫಲವು ಯುಕ್ತವು, ಎಂದಾಕ್ಷೇಪಿಸಿದರೆ, ಲೋಕದಲ್ಲೂ ಕೂಡ ಸಮರ್ಥನಾದವನು ಅಸಮರ್ಥನಿಗಾಗಿ ರಾಜನಲ್ಲಿ ಪ್ರಾರ್ಥಿಸಿ, ಆ ಅಸಮರ್ಥನಿಗೆ ಫಲಪ್ರಾಪ್ತಿಯುಂಟಾಗುವ ಹಾಗೆ ಮಾಡುವದುಂಟು. ಆದುದರಿಂದ ಅದೇ ನಿಸ್ಸಂಶಯ ಫಲಪ್ರಾಪ್ತಿಗೆ ಸಾಧನವೆಂದು ಪ್ರಮಾಣಮೂಲಕ ತೋರಿಸಿ, ಅದಕ್ಕೆ ಶ್ರೀ ಮುದಲಿಯಾಂಡಾನವರು ಕೊಟ್ಟ ಒಂದು ಲೋಕದೃಷ್ಟಾಂತವನ್ನು ಉದಾಹರಿಸುತ್ತಾರೆ.

* ಸಿದ್ಧಿರ್ಭವತಿ ವಾ ನೇತಿ ಸಂಶಯೋಽಚ್ಯುತಸೇವಿನಾಂ ।
ನ ಸಂಶಯೋತ್ರ ತದ್ಭಕ್ತಪರಿಚರ್ಯಾ ರತಾತ್ಮನಾಂ'' ॥
ಎಜ್ಙ್ಗರಕಣಕ್ಕಿಲೇ ಆಚಾರ್ಯ ನಿಷ್ಠನುಕ್ಕು ಕೈಮುತಕನ್ಯಾಯತ್ತಾಲೇ ಫಲಸಿದ್ಧಿಯಿಲ್ ಸಂದೇಹಮಿಲ್ಲೈ.

ಅಚ್ಯುತಸೇವಿನಾಂ-ಅಚ್ಯುತನೆಂದರೆ ಎಂದಿಗೂ ನಾಶರಹಿತನು ಅಥವಾ ತನ್ನ ಸತ್ಯಸಂಕಲ್ಪತೆಯಿಂದ ಎಂದಿಗೂ ಜಾರದವನು. ಎಂದರೆ ಸ್ಥಿರಸಙ್ಕಲ್ಪನು. ಇಂತಹ ಸರ್ವೇಶ್ವರನನ್ನು ಸೇವಿಸುವವರಿಗೆ, **ಸಿದ್ಧಿಃ** – ಮೋಕ್ಷರೂಪಫಲಸಿದ್ಧಿಯು, **ಭವತಿವಾ** - ಉಂಟಾಗುತ್ತದೋ, **ನೇತಿವಾ** - ಅಥವಾ ಉಂಟಾಗುವದಿಲ್ಲವೋ ಎಂಬ, **ಸಂಶಯಃ** - ಸಂಶಯ ಉಂಟು. ಆದರೆ, **ತದ್ಭಕ್ತಪರಿಚರ್ಯಾರತಾತ್ಮನಾಂ**- ಆ ಸರ್ವೇಶ್ವರನ ಭಕ್ತರಾದ ಮಹಾಭಾಗವತೋತ್ತಮರ ಸೇವೆಯಲ್ಲಿ ಸಕ್ತವಾದ ಮನಸ್ಸುಳ್ಳವರಿಗೆ, **ಅತ್ರ** - ಈ ಮೋಕ್ಷರೂಪಫಲಸಿದ್ಧಿಯಲ್ಲಿ, **ನ ಸಂಶಯಃ** – ಸಂಶಯವಿಲ್ಲವು. **ಎಜ್ಙ್ಗರ ಕಣಕ್ಕಿಲೇ** - ಎನ್ನುವ ರೀತಿಯಲ್ಲಿ, ಆಚಾರ್ಯನಿಷ್ಠನಿಗೆ, **ಕೈಮುತಕನ್ಯಾಯತ್ತಾಲೆ** ಕಿಮುತ, ಕಿಮುತ, ಇನ್ನು ಹೇಳತಕ್ಕದ್ದೇನಿದೆ? ಎಂದರೆ ಸ್ವತಸಿದ್ಧವು ಎಂದು ತೋರುವ ನ್ಯಾಯ ಪ್ರಕಾರ, **ಫಲಸಿದ್ಧಿಯಿಲ್ ಸಂದೇಹಮಿಲ್ಲೈ** - ಫಲಸಿದ್ಧಿಯಲ್ಲಿ ಸಂದೇಹ ವಿಲ್ಲವು.

ಬರೀ ಸರ್ವೇಶ್ವರನನ್ನೇ ನಂಬಿದವರಿಗೆ ಒಂದು ವೇಳೆ ಸಿದ್ಧಿಯುಂಟಾಗುತ್ತದೋ ಇಲ್ಲವೋ ಎಂಬ ಸಂದೇಹವು ಇದ್ದರೂ ಇರಬಹುದು, ಆದರೆ ಆತನ ಪರಮಭಕ್ತರನ್ನು ನಂಬಿದವರಿಗೆ ಎಂದಿಗೂ ಸಂದೇಹವಿಲ್ಲವೆಂಬ ಭಾವವು. ಇಲ್ಲಿ '' **ಪರಿಚರ್ಯಾರತಾತ್ಮನಾಂ**'' ಎಂದು ಆಚಾರ್ಯಕೈಙ್ಕರ್ಯಮಾತ್ರದಲ್ಲೇ ನಿರತನಾಗಿದ್ದರೆ ಸಾಕು, ಸಿದ್ಧಿಯುಂಟಾಗುತ್ತದೆ ಎಂಬದಾಗಿ ತಾತ್ಪರ್ಯವಲ್ಲವು, ಅಂತಹ ಆಚಾರ್ಯ ಕೈಂಕರ್ಯದಲ್ಲಿ ನಿರತನಾದವನಿಗೆ ಆಚಾರ್ಯಕೃಪೆಯು ಒದಗಿ ಅಂತಹ ಶಿಷ್ಯನಿಗಾಗಿ ಆಚಾರ್ಯರು ಭರಸಮರ್ಪಣೆಮಾಡುತ್ತಾರೆ ಎಂಬುವದು ಶ್ಲೋಕಾಭಿಪ್ರಾಯವು. ಹೇಗೆಂದರೆ,

"ಬಾಲಮೂಕ ಜಡಾನ್ಧಾಶ್ಚ ಪಙ್ಗವೋ ಬಧಿರಾಸ್ತಥಾ ।
ಸದಾಚಾರ್ಯೇಣ ಸಂದೃಷ್ಟಾಸ್ತೇಽಪಿ ಯಾನ್ತಿ ಪರಾಂಗತಿಂ ॥ ''

''ಬಾಲಕರು, ಮೂಕರು, ಅಜ್ಞರು, ಕುರುಡರು, ಕುಂಟರು, ಇವರೆಲ್ಲಾ ಸದಾಚಾರ್ಯರಿಂದ ದೃಷ್ಟಿಸಲ್ಪಟ್ಟವರಾದರೆ, ಇವರೂ ಕೂಡ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ" ಎಂದು ಹೇಳಿದರೆ, ಬೀದಿಯಲ್ಲಿ ಹೋಗುವಾಗ ಸದಾಚಾ

---

* ಶಾಂಡಿಲ್ಯ, ೧—೯೫.

ಒರುಮಲೈಯಿ ನಿನ್ರುಮ್ ಒರುಮಲೈಯಿಲೇ ತಾವುಮ್ ಸಿಂಹ ಶರೀರತ್ತಿಲ್ ಜನ್ತುಕ್ಕಳೈಪ್ಪೋಲೆ ಭಾಷ್ಯಕಾರರ್ ಸಂಸಾರಾತ್ತಿಲಂಘನಂ ಪಣ್ಣ ಅವರೋಡುಣ್ಡಾನ ಕುಡಲ್‌ತುವಕ್ಕಾಲೇ ನಾಮುತ್ತೀರ್ಣರಾವು ದೋಃ ಮೆನ್ರು ಮುದಲಿಯಾಣ್ಡಾನರುಳಿಚ್ಚೆಯ್‌ದ ಪಾಶುರಂ

ರ್ಯರುಗಳ ದೃಷ್ಟಿ ಈ ಮೂಗರು ಕಿವುಡರು ಮೊದಲಾದವರುಗಳ ಮೇಲೆ ಬಿದ್ದರೆ ಅವರುಗಳಿಗೆ ಮುಕ್ತಿಯುಂಟಾಗುತ್ತದೆ ಎಂಬಭಿಪ್ರಾಯವಲ್ಲವು. **ಸಂದೃಷ್ಟಾಃ**– ಎಂಬುವದರಿಂದ ಆಚಾರ್ಯರುಗಳ ಕೃಪಾಕಟಾಕ್ಷವು ಚನ್ನಾಗಿಯುಂಟಾಗಿ, ಅದ ಕ್ಕಾಗಿ ಆ ಆಚಾರ್ಯರುಗಳು ಇನರುಗಳಿಗಾಗಿ ಭರಸಮರ್ಪಣೆಮಾಡಿದರೆ ಆಗ ಮುಕ್ತಿಯುಂಟು ಎಂಬುವದೀಗ ಇಲ್ಲಿ ಹೇಗೆ ಅಭಿಪ್ರಾಯವೋ; **ಪರಿಚರ್ಯಾರತಾ ತ್ಮನಾಂ** ಎಂಬಲ್ಲಿಯೂ ಕೂಡ, ಆ ಪರಿಚರ್ಯದಿಂದ ಆಚಾರ್ಯ ಕೃಪೆಯುಂಟಾಗಿ ಆಚಾರ್ಯರು ಇವರುಗಳಿಗಾಗಿ ಭರಸಮರ್ಪಣೆಮಾಡಿದರೆ, ಸಿದ್ಧಿಯುಂಟಾಗುವದರಲ್ಲಿ ಸಂಶಯವಿಲ್ಲವೆಂಬ ಭಾವವು.

ಬರೀ ಸರ್ವೇಶ್ವರನನ್ನೇ ನಂಬಿದ ಭಕ್ತರಿಗೆ ತಾನೇ ಫಲಸಿದ್ಧಿಯಲ್ಲಿ ಸಂದೇ ಹವಿದ್ದೀತೋ? ಅಗಲೂ ಇಲ್ಲವು. ಆದರೆ ಸರ್ವೇಶ್ವರನಿಗೆ ತನ್ನ ಭಕ್ತರ ವಿಷ ಯದಲ್ಲಿ ವಿಶೇಷ ಮಮತೆಯಾದುದರಿಂದ ಅಂತಹ ಭಕ್ತರನ್ನು ನಂಬಿದವರ ವಿಷಯ ದಲ್ಲಿ ಇನ್ನೂ ವಿಶೇಷ ಕೃಪೆಯಾದುದರಿಂದ ಕೈಮುತಿಕ ನ್ಯಾಯಪ್ರಕಾರ ಫಲಸಿದ್ಧಿ ಯಲ್ಲಿ ಇಲ್ಲಿ ಸಂದೇಹವೇ ಇಲ್ಲವು ಎಂಬ ತಾತ್ಪರ್ಯವು. ಈ ಅಭಿಪ್ರಾಯವನ್ನು ತಿಳಿಸುವದಕ್ಕಾಗಿ ಶ್ಲೋಕದಲ್ಲಿ ಅಚ್ಯುತಸೇವಿಗಳಿಗೆ ಒಂದು ವೇಳೆ ಸಂಶಯವಿದ್ದರೂ ಇರಬಹುದು. ಆಚಾರ್ಯಸೇವಿಗಳಿಗಾದರೋ ಸಂಶಯವಿಲ್ಲವೇ ಇಲ್ಲವು ಎಂದು ಹೇಳಲ್ಪಟ್ಟಿತು.

ಒರುಮಲೈಯಿಲ್ ನಿನ್ರುಮ್ - ಒಂದು ಗುಡ್ಡದ ಮೇಲೆ ನಿಂತು, **ಒರು ಮಲೈಯಿಲ್ ತಾವುಂ** - ಇನ್ನೊಂದು ಗುಡ್ಡಕ್ಕೆ ದಾಟುವ, **ಸಿಂಹಶರೀರತ್ತಿಲ್ ಜನ್ತುಕ್ಕಳೈಪ್ಪೋಲ** - ಸಿಂಹದ ಶರೀರದಲ್ಲಿರುವ ಕ್ರಿಮಿಗಳ ಹಾಗೆ, **ಭಾಷ್ಯಕಾರ ರ್‌ಸಂಸಾರಾತಿಲಂಘನಂಪಣ್ಣ** - ಶ್ರೀ ಭಾಷ್ಯಕಾರರವರು ತಾವು ಮಾಡಿದ ಭರ ಸಮರ್ಪಣೆಯ ಮೂಲಕ ಸಂಸಾರ ಸಾಗರವನ್ನು ದಾಟಿದವರಾಗಲಾಗಿ, **ಅವರೋ ಡುಣ್ಡಾನ** - ಆ ಭಾಷ್ಯಕಾರರೊಂದಿಗೆ ಉಂಟಾಗಿರುವ, **ಕುಡಲ್‌ತುವಕ್ಕಾಲ್** - ಸಹಜವಾದ ಸಂಬಂಧದಿಂದ, ಆಚಾರ್ಯಶಿಷ್ಯಸಂಬಂಧದಿಂದ, **ನಾಮುತ್ತೀರ್ಣರಾ ವುದೋಂ** – ನಾವುಗಳೂ ಕೂಡ ಸಂಸಾರವನ್ನು ದಾಟಿದವರು ಆಗುವೆವು, **ಎನ್ರು** – ಎಂದು, **ಮುದಲಿಯಾಂಡಾನ್** - ಶ್ರೀ ಭಾಷ್ಯಕಾರ ಶಿಷ್ಯರಾದ ಮುದ ಲಿಯಾಂಡಾನ್ರವರು ಇವರಿಗೆ ದಾಶರಥಿ ಎಂದೂ ಹೆಸರು, **ಅರುಳಿಚ್ಚೆಯ್ದ**-ಕೃಪೆ ಗೈದ ಎಂದರೆ ಹೇಳಿದ, **ಪಾಶುರಂ** - ಉಕ್ತಿಯು.

(೧) ಅಂಧೋಽನಂಧ ಗ್ರಹಣವಶಗೋ ಯಾತಿ ರಙ್ಗೇಶ ಯದ್ವತ್।
ಪಂಗುರ್ನೌಕಾ ಕುಹರ ನಿಹಿತೋ ನೀಯತೇ ನಾವಿಕೇನ ॥

(ಶ್ರೀ ಮುದಲಿಯಾಂಡಾನ್ ರವರು ಹೇಳಿದ ಅಭಿಪ್ರಾಯವೇನೆಂದರೆ ಒಂದು ಗುಡ್ಡದ ಮೇಲೆ ನಿಂತು ಇನ್ನೊಂದು ಗುಡ್ಡಕ್ಕೆ ಒಂದು ಸಿಂಹವು ಹಾರಿದರೆ ಆ ಸಿಂಹದೊಂದಿಗೆ ಅದರ ಮೈಮೇಲಿರುವ ಕ್ರಿಮಿಗಳೂ ಕೂಡ ಸ್ವತಃ ಶಕ್ತಿ ಯಿಲ್ಲದಿದ್ದರೂ ಹೇಗೆ ಇನ್ನೊಂದು ಗುಡ್ಡಕ್ಕೆ ಹಾರಿದ ಫಲವನ್ನು ಹೊಂದುತ್ತವೆಯೋ, ಹಾಗೆಯೇ ಆಚಾರ್ಯಾಗ್ರೇಸರರಾದ ಶ್ರೀ ಭಾಷ್ಯಕಾರರನ್ನು ನಂಬಿರುವ ನಾವೂ ಕೂಡ, ಅವರ ಮಾಡಿದ ಆತ್ಮಾತ್ಮೀಯ ಭರಸಮರ್ಪಣೆ ಮೂಲಕ ಅವರೊಂದಿಗೇನೇ ಸಂಸಾರ ಸಮುದ್ರವನ್ನು ತಾವೂ ಕೂಡ ದಾಟಿರುವೆವು ಎಂದು ಹೇಳಿದರು. ಆದರೆ ಸಿಂಹ ದೃಷ್ಟಾಂತದಲ್ಲಿ, ಸಿಂಹದ ಯಾವುದೊಂದು ಪ್ರಯತ್ನವಿಲ್ಲದೇನೇ ಅದರ ಶರೀರದಲ್ಲಿದ್ದ ಕ್ರಿಮಿಗಳು ಹೇಗೆ ದಾಟಿದವೋ, ಹಾಗೆಯೇ ಆಚಾರ್ಯನನ್ನು ಆಶ್ರಯಿಸಿದರೆ ಸಾಕು ಸಿದ್ಧಿಯುಂಟಾಗುತ್ತದೆ ಎಂಬಭಿಪ್ರಾಯವಲ್ಲವು. ಈ ದೃಷ್ಟಾಂತದಲ್ಲಿ ಸಿಂಹವೂ ಕ್ರಿಮಿಗಳೂ ಕೂಡ ಅವರುಗಳಿಗಿರುವ ಸಂಬಂಧಜ್ಞಾನಶೂನ್ಯರಾದ ಚೇತನರುಗಳು; ಆದರೆ ಆಚಾರ್ಯಶಿಷ್ಯ ಸಂಬಂಧದಲ್ಲಿ ಹಾಗಿಲ್ಲವಾದುದರಿಂದ, ಆಚಾರ್ಯನ ಶಿಷ್ಯನಿಗಾಗಿ ಭರಸಮರ್ಪಣಮಾಡುವದು ಆವಶ್ಯಕವು. ಮತ್ತು ಈ ದೃಷ್ಟಾಂತದಿಂದ, ಆ ಕಾಲದಲ್ಲೇ ಸಿಂಹಶರೀರದೊಂದಿಗೆ ಸಂಬಂಧಿಸಿಕೊಂಡಿರುವ ಜನ್ತುಗಳು ಮಾತ್ರವೇ ದಾಟುತ್ತವೆ, ಅದಕ್ಕೆ ಉತ್ತರಕಾಲೀನವಾದ ಸಮಾನ ಜನ್ತುಗಳು ಹೇಗೆ ದಾಟಲಾರವೋ ಹಾಗೆಯೇ ಶ್ರೀ ಭಾಷ್ಯಕಾರರ ಕಾಲದಲ್ಲಿದ್ದು ಅವರ ಶಿಷ್ಯರಾಗಿರುವವರು, ಅವರು ಈ ಶಿಷ್ಯರಿಗಾಗಿ ಮಾಡಿದ ಪ್ರಪತ್ತಿಯಿಂದ ಉತ್ತೀರ್ಣರಾಗಬಹುದು. ಆದರೆ ಅವರ ಶಿಷ್ಯ ಪ್ರಶಿಷ್ಯರಿಗೆ ಸೇರಿದವರಾಗಿ ಅವರ ಕಾಲದ ಈಚಿನವರೂಕೂಡ ಆ ಕಾಲದಲ್ಲಿ ಶ್ರೀ ಭಾಷ್ಯಕಾರರು ಮಾಡಿದ ಭರಸಮರ್ಪಣೆಯಿಂದಲೇ ಉತ್ತೀರ್ಣರಾಗುತ್ತಾರೆಂದೂ ಇವರುಗಳು ಸ್ವತಂತ್ರನಿಯಾಗಲಿ, ಉಕ್ತಿನಿಷ್ಠೆ ಆಚಾರ್ಯನಿಷ್ಠೆ ಮೂಲಕವಾಗಿಯಾಗಲಿ ಭರಸಮರ್ಪಣೆಮಾಡುವ ಆವಶ್ಯಕತೆಯಿಲ್ಲವೆಂದೂ ಹೇಳುವ ಅಭಿಪ್ರಾಯವು, ಈ ದೃಷ್ಟಾಂತದಿಂದಲೇ ನಿರಾಕರಿಸಲ್ಪಟ್ಟಿತು. ಈ ಮೇಲೆ ಹೇಳಿದ ಶ್ರೀ ಮುದಲಿಯಾಂಡಾನ್ರವರ ಅಭಿಪ್ರಾಯವನ್ನು ಗರ್ಭೀಕರಿಸಿ ತಾವೂ ನ್ಯಾಸತಿಲಕದಲ್ಲಿ ಹೇಳಿರುವ ಶ್ಲೋಕವನ್ನು ಉದಾಹರಿಸುತ್ತಾರೆ).

(೧)ನ್ಯಾಸತಿಲಕ ೨೧. **ಹೇರಙ್ಗೇಶ**-ಓ ರಂಗನಾಥನೇ, **ಅಂಧಃ** - ಕುರುಡನು, **ಅನಂಧಗ್ರಹಣವಶಗಃ** - ಕುರುಡನಲ್ಲದವನನ್ನು ಹಿಡಿದುಕೊಳ್ಳುವದರಿಂದ ಅವನ ವಶವನ್ನು ಹೊಂದಿದವನಾಗಿ **ಯದ್ವತ್ ಯಾತಿ** – ಹೇಗೆ ಹೋಗುತ್ತಾನೋ, ಇದರಿಂದ ಪ್ರಪದನಕ್ಕೆ ಬೇಕಾದ ಜ್ಞಾನವಿಲ್ಲದಿದ್ದರೂ ಆಚಾರ್ಯಾನು

ಭುಙ್ಕ್ತೇ ಭೋಗಾನವಿದಿತನೃಪಸ್ಸೇವಕಸ್ಯಾರ್ಭಕಾದಿಃ ।
ತ್ವತ್ಸಂಪ್ರಾಪ್ತೌ ಪ್ರಭವತಿ ತಥಾ ದೇಶಿಕೋ ಮೇ ದಯಾಳುಃ ॥

ಎನ್ನು ನ್ಯಾಸತಿಲಕತ್ತಿಲೇ ಶೊನ್ನೋಮ್.

ಗ್ರಹಿಸೊಂಡಿ ತನ್ಮೂಲಕ ಭರಸಮರ್ಪಣೆಯಿಂದ ಫಲಸೊಂದಬಹುದೆಂದು ಹೇಳಲ್ಪಟ್ಟಿತು: **ಪಙ್ಗುಃ** - ಕುಂಟನು, **ನೌಕಾಕುಹರನಿಹಿತಃ** - ದೋಣಿಯ ಅಥವಾ ಹಡಗಿನ ಮಧ್ಯಸ್ಥಳದಲ್ಲಿಡಲ್ಪಟ್ಟವನಾಗಿ, ಕುಹರವೆಂದರೆ ರಂಧ್ರವು, ಇಲ್ಲಿ ಮಧ್ಯಪ್ರದೇಶವೆಂಬರ್ಥವು, **ಯದ್ವತ್**-ಹೇಗೆ, **ನಾವಿಕೇನ**-ಹಡಗು ನಡಿಸುವವನಿಂದ, **ನೀಯತೇ** - ಆಚೇ ದಡಕ್ಕೆ ಕರೆದುಕೊಂಡು ಹೋಗಲ್ಪಡುವನೋ, ಇದು ಶಕ್ತಿಯಿಲ್ಲದವನೂ ಕೂಡ ಆಚಾರ್ಯನನ್ನು ಹೊಂದಿ ಆತನು ಅನುಗ್ರಹಿಸಿ ಮಾಡಿದ ಭರಸಮರ್ಪಣೆಯಿಂದ ಮೋಕ್ಷಪ್ರಾಪ್ತಿ ಹೊಂದುವದಕ್ಕೆ ದೃಷ್ಟಾಂತವು. **ಸೇವಕಸ್ಯ** - ರಾಜಸೇವಕನ, **ಅವಿದಿತನೃಪಃ**-ತಿಳಿಯದೇ ಇರುವ ರಾಜನುಳ್ಳ **ಅರ್ಭಕಾದಿಃ** - ಮಕ್ಕಳು ಮೊದಲಾದವರು, ಇಲ್ಲಿ ಮೊದಲಾದವರು ಎಂಬುವದರಿಂದ, ಮನೆಯಲ್ಲಿರುವ ಹೆಂಡತಿ ಮೊದಲಾದವರೂ ಕೂಡ ಹೇಳಲ್ಪಟ್ಟರು, **ಯದ್ವತ್** - ಹೇಗೆ, **ಭೋಗಾನ್ ಭುಙ್ಕ್ತೇ** – ರಾಜಭೋಗಗಳನ್ನೆಲ್ಲಾ ಅನುಭವಿಸುವರೋ, ಇದು ಜ್ಞಾನ ಶಕ್ತಿ ಎರಡೂ ಇಲ್ಲದವರ ವಿಷಯದಲ್ಲಿ ಆಚಾರ್ಯನು ಅನುಗ್ರಹಿಸಿ ಮಾಡುವ ಭರಸಮರ್ಪಣೆಯಿಂದುಂಟಾಗುವ ಮೋಕ್ಷಪ್ರಾಪ್ತಿಗೆ ದೃಷ್ಟಾಂತವು. **ತಥಾ** - ಹಾಗೆಯೇ, ಎಂದರೆ ಈ ಮೂರು ದೃಷ್ಟಾಂತಗಳಲ್ಲಿ ಹೇಗೋ ಹಾಗೆಯೇ, **ತ್ವತ್ಸಂಪ್ರಾಪ್ತೌ** - ನಿನ್ನ ಪ್ರಾಪ್ತಿಯಲ್ಲೂ ಸಹ, **ದಯಾಳುಃ** - ಕೃಪಾಶಾಲಿಯಾದ, **ದೇಶಿಕಃ** - ಆಚಾರ್ಯನು, **ಮೇ** – ನನಗೆ **ಪ್ರಭವತಿ** – ಸಮರ್ಥನಾಗುತ್ತಾನೆ.

ಈ ಶ್ಲೋಕವು ಆಚಾರ್ಯನಿಷ್ಠೆಯ ಮಹಿಮೆಯನ್ನು ತಿಳಿಸುವ ಶ್ಲೋಕವು. ಉಕ್ತಿನಿಷ್ಠೆಯಲ್ಲಿ ಆನುಕೂಲ್ಯಾದಿಗಳ ವಿಶದಜ್ಞಾನವಿಲ್ಲದಿದ್ದರೂ ಆಕಿಂಚನ್ಯತ್ವ, ಮಹಾವಿಶ್ವಾಸಗಳೊಂದಿಗೆ, ತನ್ನ ರಕ್ಷಣಾವು ನಿನಗೆ ಭರವೆಂದು ನೀನೇ ಸ್ವೀಕರಿಸತಕ್ಕದ್ದೆಂಬ ಪ್ರಾರ್ಥನೆಯಿರಬೇಕು. ಸ್ವತಂತ್ರಿಸಿ ಮಾಡುವ ಪ್ರಪತ್ತಿಯಲ್ಲಿ ಆ ಕಾಲದಲ್ಲಿ ಅಂಗಗಳೆಲ್ಲಾ ಅವಶ್ಯಕವಾಗಿರಬೇಕು. ಆದರೆ ಆಚಾರ್ಯನಿಷ್ಠೆಯಲ್ಲಿಯಾದರೋ ಜ್ಞಾನವೂ, ಪ್ರಪದನಾನುಷ್ಠಾನಕ್ಕೆ ಶಕ್ತಿಯೂ ಇವೆರಡರಲ್ಲಿ ಒಂದಿಲ್ಲದಿದ್ದರೂ, ಅಥವಾ ಎರಡೂ ಇಲ್ಲದಿದ್ದರೂ ಆಚಾರ್ಯಮಹಿಮೆಯಿಂದ ಫಲವುಂಟೆಂದು ನಿರ್ಣಯಿಸಲ್ಪಟ್ಟಿತು. ಆದುದರಿಂದ ಆಚಾರ್ಯನು ಇಷ್ಟಪಟ್ಟು ಸಂಕಲ್ಪಿಸಿದರೆ, ಶಿಶುವಿಗಾಗಲಿ, ಬಾಲಕಿಗಾಗಲಿ, ಮುಚ್ಚರಿಗಾಗಲಿ ಯಾರಿಗಾಗಲಿ ಅನುಗ್ರಹಮಾಡಿ ಮುಕ್ತಿ

ಪ್ರಪತ್ತಿಂ ವಿನಾ ಭಗವತೋ ಮೋಕ್ಷಪ್ರದತ್ವಾಭಾವಃ

ಏದೇನುಮೊರುಪ್ರಕಾರಮಾಕವುಮಾಮ್, ಆರೇನುಮೊರುವರ್

ಯನ್ನು ಕಲ್ಪಿಸಬಹುದು. ಆದರೆ ಹಾಗೆ ದಯಾಳುವಾಗಿ ಏಕೆ ಎಲ್ಲರಿಗೂ ಮೋಕ್ಷ ಪ್ರಾಪ್ತಿಯಾಗುವ ಹಾಗೆ ಮಾಡಕೂಡದು ಎಂದು ಪ್ರಶ್ನಿಸಿದರೆ,

"ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ॥"

ಎಂದು ಗೀತಾಂತ್ಯದಲ್ಲಿ ಹೇಳಿರುವ ಹಾಗೆ ಸಾರ್ವತ್ರಿಕಪ್ರಯೋಗವು ಕೂಡದೆಂದು ಈ ಆಚಾರ್ಯರಿಗೆ ತಮ್ಮ ಆಚಾರ್ಯರುಗಳ ಆಜ್ಞೆಯಿರುವುದರಿಂದ, ಹಾಗೆ ಎಲ್ಲರಿಗಾಗಿ ಈ ಆಚಾರ್ಯರು ಆತ್ಮಾತ್ಮೀಯ ಭರನ್ಯಾಸವನ್ನು ಮಾಡುವುದಿಲ್ಲವು. ಅರ್ಹರಾಗಿರುವವರಿಗೆ ಮಾತ್ರವೇ ಕೃಪೆಮಾಡುವರು. ಈ ಆಚಾರವು ಲೋಕದಲ್ಲಿ ಕೂಡ ಉಂಟು. ರಾಜಸಚಿವರು ರಾಜಾನುಗ್ರಹಕ್ಕೆ ಪಾತ್ರರೆಂದು ತಿಳಿದವರಲ್ಲದೆ ಎಲ್ಲರನ್ನೂ ರಾಜನ ದರ್ಬಾರಿಗೆ ಕಳುಹಿಸುವುದಿಲ್ಲವಷ್ಟೇ. ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು. ರಾಜಸಚಿವರು ಅನರ್ಹರನ್ನು ಸಹ ರಾಜನ ದರ್ಬಾರಿಗೆ ಕಳುಹಿಸುವುದು ರಾಜರಿಗೆ ಹೇಗೆ ಅಸಮ್ಮತವೋ, ಹಾಗೆಯೇ ಈ ಆಚಾರ್ಯರು ಸರ್ವೇಶ್ವರನಿಗೆ ಪರಮಭಕ್ತರಾದರೂ, ಅನರ್ಹರನ್ನು ಸ್ವಾಮಿಸನ್ನಿಧಿಗೆ ಕಳುಹಿಸಿ ಕೊಡುವುದು ಶ್ರಿಯಃಪತಿಯ ಸಂಕಲ್ಪಕ್ಕೆ ವಿರೋಧವಾದುದೆಂದು ಎಣಿಸಿ, ಅನರ್ಹರ ವಿಷಯದಲ್ಲಿ ಶರಣಾಗತಿಯನ್ನನುಷ್ಠಿಸುವುದಿಲ್ಲವು. **ಎನ್ರು ನ್ಯಾಸತಿಲಕತ್ತಿಲೇ ಶೊನ್ನೋಮ್** - ಎಂದು ನ್ಯಾಸತಿಲಕದಲ್ಲಿನಾವೂ ಈ ಅಭಿಪ್ರಾಯವನ್ನೇ ಸಮರ್ಥಿಸಿ ಹೇಳಿದೆವು.

ಭರಸಮರ್ಪಣೆಯಿಲ್ಲದೆ ಸರ್ವೇಶ್ವರನು ಮೋಕ್ಷವನ್ನು ಕೊಡನು.

ಏದೇನುಮೊರುಪ್ರಕಾರಮಾಕವುಮಾಮ್ - ಯಾವುದಾದರೂ ಒಂದು ರೀತಿಯಲ್ಲಾಗಲಿ ಎಂದರೆ ಸರಿಯಾದ ವಿಶದವಾದ ಜ್ಞಾನಪೂರ್ವಕವಾಗಿಯಾಗಲಿ, ಅಥವಾ ಅಂತಹ ವಿಶದಜ್ಞಾನವಿಲ್ಲದೆ ಸಾಮಾನ್ಯ ಜ್ಞಾನಪೂರ್ವಕವಾಗಿಯೇ ಯಾಗಲಿ, ಪ್ರಪದನವು ಭಕ್ತಿನಿಷ್ಠನ ವಿಷಯದಲ್ಲಿ ಸಹಾಯಕವಾಗಿ ಅಂಗವಾಗಿಯೇ ಆಗಲಿ ಅಥವಾ ಪ್ರಪದನವು ಅನಂಗಕವಾಗಿ ಸ್ವತಂತ್ರವಾಗಿಯೇ ಆಗಲಿ ಎಂಬಭಿಪ್ರಾಯವು; **ಆರೇನುಮೊರುವರ್ ಅನುಷ್ಠಿಕ್ಕವುಮಾಮ್** - ಯಾ

ಅನುಷ್ಠಿಕ್ಕವುಮವಾನ್, ಪ್ರಪತ್ತಿಕ್ಕಲ್ಲದು ಸರ್ವೇಶ್ವರನ್ ಪರಮಪುರುಷಾರ್ಥಮ್ ಕೊಡುಕ್ಕವಿರಙ್ಗಾನೆನ್ರದಾಯಿತ್ತು.

ಯಾರಾದರೂ ಒಬ್ಬರು ಪ್ರಪತ್ತಿಯನ್ನು ಅನುಷ್ಠಿಸಿಯೇ ಯಾಗಲಿ ಎಂದರೆ ಇಲ್ಲವೇ ತಾನೇ ಸ್ವತಂತ್ರನಾಗಿ ಭರಸಮರ್ಪಣೆಯನ್ನು ಮಾಡಿಯೇ ಆಗಲಿ, ಅಥವಾ ಆಚಾರ್ಯ ಮೂಲಕ ತಾನೇ ಆಗಲಿ ಅಥವಾ ತನಗಾಗಿ ತಮ್ಮ ಆಚಾರ್ಯರವರು ಅನುಷ್ಠಿಸಿಯೇ ಆಗಲಿ, **ಪ್ರಪತ್ತಿಕ್ಕಲ್ಲದು** - ಭರಸಮರ್ಪಣೆಮಾಡಿದಲ್ಲದೆ, ಸರ್ವೇಶ್ವರನು ಪರಮಪುರುಷಾರ್ಥವಾದ ಮೋಕ್ಷವನ್ನು, **ಕೊಡುಕ್ಕವಿರಂಗಾನ್** - ಕೊಡಲು ದಯಮಾಡುವದಿಲ್ಲನ, **ಎನ್ರದಾಯಿತ್ತು** - ಎಂದು ಹೇಳಿದಂತಾಯಿತು.

ಇದರಿಂದ ಈ ಮೇಲೆ ಹೇಳಿದ ಭಕ್ತಿ, ಪ್ರಪತ್ತಿ, ಉಕ್ತಿನಿಷ್ಠೆ, ಆಚಾರ್ಯನಿಷ್ಠೆ ಈ ಎಲ್ಲಾ ಉಪಾಯಗಳಿಗೂ ಪ್ರಪದನವು ಆವಶ್ಯಕವು ಎಂದು ಸ್ಥಾಪಿಸಲ್ಪಟ್ಟಿತು. ಪ್ರಪದನವಿಲ್ಲದೆ ಸರ್ವೇಶ್ವರನು ಮೋಕ್ಷವನ್ನು ದಯಪಾಲಿಸುವದಿಲ್ಲವು. ಪ್ರಪದನವು ಭಕ್ತಿಮಾರ್ಗಕ್ಕೆ ಅಙ್ಗವು, ಪ್ರಪತ್ತಿಯಲ್ಲಿ ಸ್ವತಂತ್ರವಾಗಿ ಅಙ್ಗಿಯು. ಈ ಎರಡರಲ್ಲೂ, ತಾನೇ ಪ್ರಪದನಾನುಷ್ಠಾನಮಾಡತಕ್ಕದ್ದು. ಮೊದಲನೇದು ಭಕ್ತಿನಿಷ್ಠೆಯೆಂದೂ, ಎರಡನೇದು ಸ್ವನಿಷ್ಠೆಯೆಂದೂ ಹೇಳಿಸಿಕೊಳ್ಳುತ್ತದೆ. ಈ ಎರಡರಲ್ಲೂ ಅನುಷ್ಠಾನದ ಪರಿಜ್ಞಾನವೂ ಆವಶ್ಯಕವು. ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳಲ್ಲಿ, ಪ್ರಪದನವು ಆಚಾರ್ಯರ ಮೂಲಕ ನಡೆಯತಕ್ಕದ್ದು. ಇವುಗಳಲ್ಲಿ ವಿಶದಜ್ಞಾನವು ಬೇಕಾಗಿಲ್ಲ, ಸಾಮಾನ್ಯಜ್ಞಾನವಿದ್ದರೆ ಸಾಕೆಂಬ ಅಭಿಪ್ರಾಯವು. ಆದುದರಿಂದ ಯಾವನಾದರೂ ಒಂದು ಪ್ರಕಾರವಾಗಿ ತಾನಾಗಲಿ ತನ್ನ ಆಚಾರ್ಯನಾಗಲಿ ಪ್ರಪತ್ತಿಯನ್ನು ಮಾಡಬೇಕು. ಹಾಗೆ ಪ್ರಪತ್ತ್ಯನುಷ್ಠಾನವಿಲ್ಲದೆ ಸರ್ವೇಶ್ವರನು ಮೋಕ್ಷವನ್ನು ದಯಪಾಲಿಸನು ಎಂಬರ್ಥವು. ಹೀಗೆ ಪ್ರಪತ್ತಿಯು ಎಲ್ಲಾ ಉಪಾಯಗಳಿಗೂ ಆವಶ್ಯಕವಾದುದರಿಂದಲೇ ಭಕ್ತಿಪ್ರಪತ್ತಿ ಎಂದು ವಿಭಾಗಿಸದೆ, ಸದ್ವಾರಕಪ್ರಪತ್ತಿ, ಅದ್ವಾರಕಪ್ರಪತ್ತಿ ಎಂದು ವಿಭಾಗಿಸಿ, ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳು ಸದ್ವಾರಕಪ್ರಪತ್ತಿಯಲ್ಲಿ ಅಂತರ್ಗತವೆಂದು ಹೇಳಿದರು.

ಆದರೆ ದಿವ್ಯದೇಶವಾಸ, ತೀರ್ಥಯಾತ್ರೆ, ನಾಮಸಂಕೀರ್ತನೆ, ಪುರಾಣಶ್ರವಣ ಅರ್ಚಾವತಾರಿಗೆ ನಾನಾವಿಧ ಕೈಙ್ಕರ್ಯ ಮೊದಲಾದವುಗಳೂ ಮೋಕ್ಷಸಾಧನವೆಂದು ಹೇಳುತ್ತಾರಲ್ಲಾ. ಮೋಕ್ಷಕ್ಕೆ ಪ್ರಪದನವೇ ಆವಶ್ಯಕವೆಂಬ ಉಕ್ತಿಗೆ ವಿರೋಧವಾಗಲಿಲ್ಲವೇ ಎಂದರೆ ಮುಂದೆ ಸಮಾಧಾನವನ್ನು ಹೇಳುತ್ತಾರೆ. ಆ ದಿವ್ಯದೇಶವಾಸಾದಿಗಳು ಸಾಕ್ಷಾತ್ತಾಗಿ ಮೋಕ್ಷಸಾಧಕವಲ್ಲವು; ಈ ಸದ್ವಾರಕ ಅದ್ವಾ

(೧) ಪಶುರ್ಮನುಷ್ಯಃ ಪಕ್ಷೀವಾ ಯೇ ಚ ವೈಷ್ಣವ ಸಂಶ್ರಯಾಃ ।
ತೇನೈವ ತೇ ಪ್ರಯಾಸ್ಯನ್ತಿ ತದ್ವಿಷ್ಣೋಃಪರಮಂ ಪದಂ"ಎನ್ರುಮ್,
(೨) "ತೇ ವಯಂ ಭವತಾ ರಕ್ಷ್ಯಾಃ ಭವದ್ವಿಷಯವಾಸಿನಃ ।
ನಗರಸ್ಥೋವನಸ್ಥೋವಾ ತ್ವಂ ನೋ ರಾಜಾ ಜನೇಶ್ವರಃ"ಎನ್ರುಮ್,
(೩) "ನರ್ಪ್ಪಾಲಯೋತ್ತಿಯಿಲ್ ವಾಳುಮ್ ಶರಾಶರಮುಱ್ಱುಮ್ ।
ನರ್ಪ್ಪಾಲುಕ್ಕುಯ್ತ್ತನನ್" ಎನ್ರುಮ್,

ರಕ ಪ್ರಪತ್ತ್ಯನುಷ್ಠಾನಕ್ಕೆ ಉಪಕಾರಕಂಗಳ್ ಸಹಾಯಭೂತಗಳಾಗುತ್ತವೆ ಎಂದು ಮುಂದೆ ಹೇಳುತ್ತಾರೆ.

(೧) ಶಾಂಡಿಲ್ಯ ಸಂಹಿತೆ, ೧ ೧೫. **ಪಶುರ್ಮನುಷ್ಯಃಪಕ್ಷೀವಾ**- ಪಶು ಮೊದಲಾದ ಮೃಗವೇ ಆಗಲಿ, ಮನುಷ್ಯನೇ ಆಗಲಿ, ಗಿಳಿ ಮೊದಲಾದ ಪಕ್ಷಿಯೇ ಆಗಲಿ, **ಯೇಚ** - ಯಾವುದೇ ಆಗಲಿ, **ವೈಷ್ಣವಸಂಶ್ರಯಾಃ**- ವೈಷ್ಣವನನ್ನು ಆಶ್ರಯಿಸಿರುತ್ತವೋ ಎಂದರೆ ಮಹಾಭಾಗವತನಾದ ವೈಷ್ಣವನ ಕೃಪೆಯನ್ನು ಹೊಂದಿರುವವೋ, **ತೇ** - ಅವುಗಳೆಲ್ಲವೂ, **ತೇನೈವ** - ಆ ಭಾಗವತನನ್ನು ಆಶ್ರಯಿಸಿದ ಮೂಲಕವಾಗಿಯೇ, ಎಂದರೆ ಆ ಭಾಗವತರ ಕೃಪಾಮೂಲಕವಾಗಿಯೇ, **ತದ್ವಿಷ್ಣೋಃ ಪರಮಂಪದಂ** - ಆ ಮಹಾನುಭಾವನಾದ ವಿಷ್ಣುವಿನ ಸ್ಥಾನವಾದ ದಿವ್ಯ ವೈಕುಂಠವನ್ನು ಕುರಿತು, **ಪ್ರಯಾಸ್ಯಂತಿ** - ಹೋಗಿ ಸೇರುವವು, **ಎನ್ರುಂ** - ಎಂಬವಾಗಿಯೂ, ಇಲ್ಲಿ ಭಾಗವತಾಭಿಮಾನದಿಂದ ಮಾಡಲ್ಪಟ್ಟ ಭರನ್ಯಾಸವು ಮೋಕ್ಷದಾಯಕವೆಂದು ಹೇಳಲ್ಪಟ್ಟಿತು.

(೨) ಅರಣ್ಯಕಾಂಡ, ರಾ. ೧. ೨೦. **ಭವದ್ವಿಷಯವಾಸಿನಃ** - ನಿಮ್ಮ ದೇಶದಲ್ಲಿ ವಾಸಮಾಡಿಕೊಂಡಿರುವ, **ತೇ ವಯಂ** - ಅಂತಹ ನಾವುಗಳು: ಎಂತಹ ನಾವುಗಳೆಂದರೆ ಮೊದಲೇ ಆತ್ಮಾತ್ಮೀಯ ಭರಸಮರ್ಪಣೆ ಮಾಡಿದ ಮಹರ್ಷಿಗಳಾದ ನಾವುಗಳು, **ಭವತಾ** - ಸರ್ವಶರಣ್ಯನಾದ ನಿನ್ನಿಂದ, **ರಕ್ಷ್ಯಾಃ** - ರಕ್ಷಿಸಲ್ಪಡಲು ಯೋಗ್ಯರು, **ತ್ವಂ** - ನೀನು, **ನಗರಸ್ಥಃ** - ಅಯೋಧ್ಯಾಪಟ್ಟಣದಲ್ಲೇ ಇರಲಿ, **ವನಸ್ಥೋವಾ** - ವನದಲ್ಲೇ ಇರಲಿ, **ನಃ** - ನಮ್ಮಗಳಿಗೆ **ರಾಜಾ** - ರಾಜನು, ಮನಸ್ಸಿಗೆ ಹರ್ಷದಾಯಕನಾದ ನಾಥನು, ಅಥವಾ ವಿಭೂತಿಯುಕ್ತನು, **ಜನೇಶ್ವರಃ** - ಸರ್ವಚೇತನರಿಗೂ ಸ್ವಾಮಿಯು ಎಂದೂ, ಇಲ್ಲಿ **ಭವದ್ವಿಷಯವಾಸಿನಃ** ಎಂಬ ದಿವ್ಯದೇಶವಾಸದ ಮಹಿಮೆಯು ಹೇಳಲ್ಪಟ್ಟಿತು.

(೩) ತಿರುವಾಯ್ಮೊಳಿ, ೭. ೫. ೧.

ಕರ್ಪ್ಪಾರಿ ರಾಮ ಪಿರಾನೈ ಯಲ್ಲಾಲ್ ಮತ್ತುಮ್ ಕರ್ಪರೋ
ಪುರ್ಪ್ಪಾ ಮುದಲಾಪುಲ್ಲೆರುಮ್ಬಾದಿಯೊನ್ರಿನ್ರಿಯೇ

(೧) "ನನ್ಮೈಯಾವದು ನಿನ್ಕೋಯಿಲಿಲ್ ವಾಳುಮ್ ವೈಟ್ಟಣವ ನೆನ್ನುಂ ನನ್ಮೈ"

ನರ್ಪಾಲಯೋತ್ತಿಯಿಲ್ ವಾಳುಞ್ಜರಾಚರಮುಳ್ಳವು
ನರ್ಪಾಲುಕ್ಕುಯ್ತ್ತನನಾನ್ಮುಕನಾರ್ ಪೆತ್ತನಾಟ್ಟುಳೇ ॥

ಎಂಬುವದು ಪ್ರಾಸಾಶುರವು. **ಪುಲ್ ಎರುಂಬು ಆದಿ** - ಅತಿ ಕ್ಷುದ್ರವಾದ ಇರುವೆ ಮೊದಲಾದವು, **ನರ್ಪಾಲ್ ಅಯೋಧ್ಯಯಿಲೆವಾಳುಮ್** - ಬಹು ಸುಖವಾಗಿ ಏನೊಂದೂ ಆರ್ತಿಗಳಿಲ್ಲದೆ ಜೀವನ ನಡಿಯುವದರಿಂದಲೂ, ಶ್ರೀರಾಮನಾದ ಪರ ತತ್ವದಲ್ಲಿ ಭಕ್ತಿಯನ್ನುಂಟುಮಾಡುವದರಿಂದಲೂ, ಸಮಾಚೀನ ಪ್ರದೇಶವಾದ, **ಅಯೋಧ್ಯೈಯಿಲ್** - ವೈಕುಂಠಕ್ಕೆ ಸಮಾನವಾದ ಅಯೋಧ್ಯೆಯಲ್ಲಿ, **ವಾಳುಮ್ ಚರಾಚರಮ್ ಮುಳ್ಳವುಮ್** - ಅಭಿವೃದ್ಧಿಯನ್ನು ಹೊಂದುತ್ತಿರುವ ಸಮಸ್ತ ಚರಾಚರವಸ್ತುವನ್ನೂ, **ನಾನ್ಮುಕನಾರ್ ಪೆತ್ತ** - ಚತುರ್ಮುಖನು ಸೃಷ್ಟಿಸಿದ, **ನಾಟ್ಟುಳೆ**- ಈ ಜಗತ್ತಿನಲ್ಲಿ, **ಒನ್ರುಇನ್ರಿಯೇ** – ಉಜ್ಜೀವನೋಪಾಯ ಒಂದೂ ಇಲ್ಲದೇ ಇದ್ದರೂ, **ನರ್ಪಾಲಕ್ಕು ಉಯತ್ತನರ್** - ಉತ್ಕೃಷ್ಟಪ್ರದೇಶವಾದ ಪರಮಪದದಲ್ಲಿಟ್ಟನು. ಆದುದರಿಂದ, **ಕರ್ಪಾರ್** – ಪ್ರಿಯ ಹಿತವನ್ನು ಎಣಿ ಸುವವರು **ಇರಾಮಪಿರಾನೈಯಲ್ಲಾಲ್**-ಅತೀವ ಪ್ರಿಯದರ್ಶನನಾಗಿ ಧರ್ಮವೇ ಮೂರ್ತೀಭವಿಸಿದವನಾಗಿ ಮಹೋಪಕಾರಿಯಾಗಿರುವ ಶ್ರೀರಾಮನಲ್ಲದೆ, **ಮತ್ತು ಮ್ ಕರ್ಪರೋ** - ಮತ್ತೊಬ್ಬರನ್ನು ನೆನಸುವರೋ? ಇಲ್ಲವೆಂಬ ಭಾವವು. ಶ್ರೀ ರಾಮನು ಅವತಾರವನ್ನು ಉಪಸಂಹಾರ ಮಾಡುವ ಕಾಲದಲ್ಲಿ ಅಯೋಧ್ಯೆಯ ಸಮಸ್ತ ಚರಾಚರವನ್ನು ಕರೆದುಕೊಂಡು ಹೋಗಿ ಸಾನ್ತಾನಿಕ ಲೋಕದಲ್ಲಿಟ್ಟು ತನ್ನನ್ನು ಹೊಂದುವ ಹಾಗೆ ಮಾಡಿದನೆಂಬುವ ಇತಿಹಾಸವು ಇಲ್ಲಿ ಸೂಚಿಸಲ್ಪಟ್ಟಿತು.

(೧) ಪೆರಿಯಾಳ್ವಾರ್ ತಿರು. ೫.೧.೩.

ನನ್ಮೈ ತೀಮೈಗಳೊನ್ರು ಮರಿಯೇನ್ ನಾರಣಾವೆನ್ನು ಮಿತ್ತನೈ ಯಲ್ಲಾಲ್ । ಪುನ್ಮೈಯಾಲುನ್ನೈಪ್ಪುಳ್ಳುವಂ ಪೇಶಿಪುಗಳ್ವಾನನ್ರುಕಂ ಡಾಯ್ ತಿರುಮಾಲೆ ॥ ಉನ್ನುಮಾರುನ್ನೈಯೊನ್ರು ಮರಿಯೇ ನೋವಾ ದೆ ನನೋ ನಾರಣಾವೆನ್ಬ । ವನ್ಮೈಯಾವುದುನ್ ಕೋಯಿಲಿಲ್ ವಾ ಳುಮ್ ವೈಟ್ಟಣವನೆನ್ನುಂ ವನ್ಮೈ ಕಂಡಾಯೋ ॥

ಎಂಬುವದು ಪ್ರಾಸಾಶುರವು. ಇದರರ್ಥವು:— **ನನ್ಮೈ ತೀಮೈ……ಅರಿ**

ಎನ್ರುವಃ ಶೊಲ್ಲುಗಿರ ಭಾಗವತಾಭಿಮಾನ ಭಗವದ್ವಿಷಯ ವಾಸಾದಿಗಳುಕ್ಕುಮ್ ತನ್ಪಕ್ಕಲಿಲೆಯಾದಲ್, ಪಿರರ್ಪಕ್ಕಲಿಲೆಯಾದಲ್, ಮುನ್ಬೇ

ಯೋಃ - ನಾನು ನಿನ್ನ ತಿರುನಾಮವನ್ನು ಹೇಳಿ ನಿನ್ನ ಕೃಪೆಗೆ ಪಾತ್ರನಾಗಿರುವದು ನಿನ್ನ ಗುಣಮಾಹಾತ್ಮ್ಯದಿಂದಲೋ ಅಥವಾ ನನ್ನ ದೋಷದಿಂದಲೋ ಎಂಬುವದನ್ನು ನಾನು ತಿಳಿಯೆನು. **ನಾರಣಾ .... ಯುಲ್ಲಾಲ್** - ನಾರಾಯಣನೆಂಬ ನಾಮದ ಅನೇಕಾರ್ಥಗಳಲ್ಲಿ ಒಂದಾದ "ಅಪರಾಧಗಳನ್ನು ಸಹಿಸಿಕೊಳ್ಳುವನೆಂ"ಬುವದನ್ನಲ್ಲದೆ ಇನ್ನ್ಯಾವದನ್ನೂ ಅರಿಯೆನು ಎಂಬ ಭಾವವು. ನಾರಶಬ್ದಗಳಿಂದ ಹೇಳಲ್ಪಡುವ ಜೀವಾತ್ಮರುಗಳನ್ನೇ ಆಶ್ರಯವಾಗಿ ಉಳ್ಳವನೆಂಬ ಬಹುವ್ರೀಹಿ ಅರ್ಥದಿಂದ ಜೀವಾತ್ಮರುಗಳ ಅಪರಾಧಗಳನ್ನು ಸಹಿಸಿಕೊಳ್ಳುವನೆಂಬ ಭಾವವೂ ತೋರಿ ಬರುತ್ತದೆ. **ಪುನ್ಮೈ .... ವಾನನ್ರು** - ಪ್ರಯೋಜನದ ಆಶೆಯಿಂದ ಸರ್ವಾಧಿಕನಾದ ನಿನ್ನನ್ನು ಕೃತ್ರಿಮ ಮಾತುಗಳಿಂದ ಸುಳ್ಳಾದ ಸ್ತುತಿಗಳನ್ನು ಮಾಡುವನಲ್ಲವು. "**ವೈಟ್ಟಣರ್ ಎನ್ರುಂ ವನ್ಮೈಕಣ್ಡಾಯೇ**" ಎಂದು ಪಾದಪೂರ್ತಿಯು **ವನ್ಮೈಯಾವದು** - ವನ್ಮೈ ಎಂದರೆ ಬಲವು, ಮೋಕ್ಷಪ್ರಾಪ್ತಿಗೆ ಕಾರಣಭೂತವಾದ ಬಲವು ಯಾವುದೆಂದರೆ:—**ನಿನ್ಕೋಯಿಲಿಲ್ ವಾಳುಮ್** - ನಿನ್ನ ದಿವ್ಯದೇಶದಲ್ಲಿದ್ದುಕೊಂಡು ದೇವಸ್ಥಾನದಲ್ಲಿ ನಿನಗೆ ಕೈಂಕರ್ಯಮಾಡಿಕೊಂಡು ಸುಖವಾಗಿ ಬಾಳುವ. **ವೈಟ್ಟಣವನ್** - ವೈಷ್ಣವನು, ವಿಷ್ಣುಭಕ್ತನು, **ಎನ್ರುಂ ವನ್ಮೈಕಂಡಾಯೇ** - ಎನ್ನುವ ಬಲ ಮಾತ್ರವೇ ಎಂಬುವದು ನಿನಗೇ ತಿಳಿಯುವದು. ವಿಷ್ಣುಭಕ್ತನಾಗಿ ನಿನಗೆ ಅಭಿಮತವಾದ ದಿವ್ಯದೇಶದಲ್ಲಿ ವಾಸಮಾಡಿಕೊಂಡು ನಿನ್ನ ದೇವಾಲಯದಲ್ಲಿ ನಿನ್ನನ್ನು ಸೇವೆಯನ್ನು ಮಾಡಿಕೊಂಡು ವಾಸಮಾಡಿಕೊಂಡಿರುವ ಬಲವೇ ಬಲವು ಎಂಬಭಿಪ್ರಾಯವು. ಇಲ್ಲಿಯೂ ದಿವ್ಯದೇಶವಾಸವು ಮೋಕ್ಷಪ್ರಾಪ್ತಿಗೆ ಹೇತುವಾಗಿ ಹೇಳಲ್ಪಟ್ಟಿರುತ್ತದೆ."

ಎನ್ರುಮ್-ಹೀಗೆಲ್ಲಾ, **ಶೊಲ್ಲುಗಿರಪಡಿಯೇ**-ಹೇಳಿರುವ ಹಾಗೆ **ಭಾಗವತಾಭಿಮಾನ** - ಭಾಗವತರುಗಳಿಗೆ ತನ್ನಲ್ಲಿರುವ ಅಭಿಮಾನವೇನು, **ಭಗವದ್ವಿಷಯವಾಸಾದಿಗಳುಕ್ಕುಮ್**, ಇಲ್ಲಿ ವಿಷಯವೆಂದರೆ ದೇಶವು, ದಿವ್ಯ ದೇಶವಾಸ ಮೊದಲಾದವುಗಳಿಗೂ, ಇಲ್ಲಿ ಆದಿಶಬ್ದದಿಂದ, ಭಗವನ್ನಾಮಸಂಕೀರ್ತನ ಕೈಂಕರ್ಯಾದಿಗಳು ಹೇಳಲ್ಪಟ್ಟವು. **ತನ್ಪಕ್ಕಲಿಲೆಯಾದಲ್** - ಸಾಕ್ಷಾತ್ತಾಗಿ ತಾನೇಯಾಗಲಿ **ಪಿರರ್ಪಕ್ಕಲಿಲೆಯಾದಲ್** - ಅಥವಾ ಯಾರಾವರೂ ಭಾಗವತೋತ್ತಮರ ಮೂಲಕವಾಗಿಯಾಗಲಿ, **ಮುನ್ಬೇಯಾದಲ್**-ಆ ಹೇಳಲ್ಪಟ್ಟ ಕಾಲಕ್ಕೆ ಮುಂಚಿತವಾಗಿಯಾಗಲಿ, ಅಥವಾ **ಪಿನ್ಬೆಯಾದಲ್** - ಅನಂತರವಾಗಿಯೇ ಆಗಲಿ

ಯಾದಲ್, ಪಿನ್ಬೇಯಾದಲ್ ಒರು ಉಪಾಯತ್ತೈವಕ್ಕಣ್ಣು ಎಙ್ಗನೇ

ಒರು ಉಪಾಯಂ - ಮೇಲೆ ಹೇಳಿದ ಉಪಾಯಗಳಲ್ಲಿ ಯಾವುದಾದರೂ ಒಂದು ಉಪಾಯದ, **ತ್ತೈವಕ್ಕಣ್ಣು** - ಸಂಬಂಧವಿರಬೇಕು. ಅಂದರೆ, ದಿವ್ಯದೇಶ ವಾಸ, ಭಾಗವತಾಶ್ರಯ, ನಾಮಸಂಕೀರ್ತನ, ದೀಪಾರೋಪಣ ಇತ್ಯಾದಿಗಳಿಂದ ಮಾತ್ರವೇ ಮೋಕ್ಷಪ್ರಾಪ್ತಿಯಾಗಲಾರದು, ಇವುಗಳು ಈ ಮೇಲೆ ಹೇಳಿದ ನಾಲ್ಕು ವಿಧವಾದ ಉಪಾಯಗಳಲ್ಲಿ ಯಾವದಾದರೂ ಒಂದು ಉಪಾಯವನ್ನು ಅವಲಂಬಿಸಲು ಉಪಕಾರಕಗಳಾಗುತ್ತವೆಂಬ ಭಾವವು. ಹೀಗೆ ಭಾಗವತರ ಆಶ್ರಯವು ದಿವ್ಯದೇಶವಾಸಾದಿಗಳು ಮೋಕ್ಷಹೇತುವಾಗಿ ಪರಿಣಮಿಸಿದ್ದ ಪಕ್ಷದಲ್ಲಿ ಉಪಾಯಾನುಷ್ಠಾನವು ತಾನಾಗಿಯೋ ಇಲ್ಲವೇ ಆ ಭಾಗವತನ ಮೂಲಕವಾಗಿಯೋ ಹಿಂದೆಯೋ ಮುಂದೆಯೋ ಯಾವಾಗಲೋ ನಡೆದಿರಬೇಕೆಂಬಭಿಪ್ರಾಯವು. ದಿವ್ಯದೇಶವಾಸಾದಿಗಳು ಮೋಕ್ಷಸಾಧನೋಪಾಯಕ್ಕೆ ಕಾರಣವಾಗಿ ಮನೋನೈರ್ಮಲ್ಯದ್ವಾರ ಜ್ಞಾನಪ್ರಾಪ್ತಿಗೆ ಹೇತುವು ಎಂದು

> **ದುಷ್ಟೇಂದ್ರಿಯವಶಾಚ್ಚಿತ್ತಂ ನೃಣಾಂ ಯತ್ಕಿಲ್ಬಿಷೈರ್ವೃತಂ ।**
> **ತದನ್ತಕಾಲೇ ಸಂಶುದ್ಧಿಂ ಯಾತಿ ನಾರಾಯಣಾಲಯೇ ॥ "**

ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. ಹಾಗೆಯೇ,

> **ಕೃಷ್ಣಃ ಕೃಷ್ಣಃ ಕೃಷ್ಣ ಇತ್ಯಂತ್ಯಕಾಲೇ**
> **ಜಲ್ಪನ್ ಜಂತುರ್ಜೀವಿತಂ ಯೋ ಜಹಾತಿ ।**
> **ಆದ್ಯಶ್ಶಬ್ದಃ ಕಲ್ಪತೇ ತಸ್ಯ ಮುಕ್ತ್ಯೈ**
> **ವ್ರೀಡಾ ನಮ್ರೌ ತಿಷ್ಠತೋ ನ್ಯಾ ವೃಣಸ್ಥೌ ॥**

ಕೃಷ್ಣ, ಕೃಷ್ಣ, ಕೃಷ್ಣ ಎಂದು ಹೀಗೆ ಮೂರು ಸಲ ಕಷ್ಟದಿಂದ ಉಚ್ಚರಿಸುವನಾಗಿ ಜೀವನನು ಶರೀರವನ್ನು ಬಿಟ್ಟರೆ, ಮೊದಲಿನ ಕೃಷ್ಣಪದವು ಆತನಿಗೆ ಮುಕ್ತಿಗೆ ಸಾಧಕವಾಗುತ್ತದೆ. ಇನ್ನೆರಡು ಸಲ ಹೇಳಿದ ಕೃಷ್ಣಶಬ್ದಗಳು, ತಾವು ಮಾಡತಕ್ಕ ಕೆಲಸಗಳು ಏನೂ ಇಲ್ಲವಾಗಿ, ಆದರಿಂದ ಲಜ್ಜಾಯುಕ್ತಗಳಾಗಿ, ಆತನ ಋಣದಲ್ಲೇ ಇರುವವುಗಳಾಗಿ ನಿಂತು ಹೋಗುತ್ತವೆ"ಎಂದು ಹೇಳುವದರಲ್ಲಿ ಬರೀ ಕೃಷ್ಣಶಬ್ದೋಚ್ಚಾರಣೆಯು ಮೋಕ್ಷಹೇತುವಾಗಲಾರದು. ಹಿಂದೆ ಈತನು ಪ್ರಪನ್ನನಾಗಿ ಉಪಾಯಾನುಷ್ಠಾನಮಾಡಿರಬೇಕು. ಹಾಗೆ ಮಾಡಿದವನಿಗೇನೆ ಈ ಕೃಷ್ಣಶಬ್ದವು ಫಲಸಾಧಕವಾಗುತ್ತದೆಂಬ ಭಾವವು. ಮತ್ತೂ ಈ ಶ್ಲೋಕವು ಅಂತಿಮಸ್ಮರಣೆಯು ಆವಶ್ಯಕತೆಯನ್ನು ನಿದರ್ಶಿಸುತ್ತದೆಂದೂ ಭಾವಿಸಬಹುದು. ಈ ಅಭಿಪ್ರಾಯಗಳನ್ನೇ ಮುಂದಿನ ವಾಕ್ಯದಿಂದ ವಿಶದವಾಗಿ ಉಪಪಾದಿಸುತ್ತಾರೆ.

ಯೆನ್ನಿಲ್:—ಇನ್ನೈಯುಮುಪಾಸನತ್ತಿಲೇಯಾದಲ್, ಪ್ರಪತ್ತಿಲೇ ಯಾದಲ್, ಮೂಟ್ಟೈಯುಮ್, ಉತ್ಪನ್ನೋಪಾಸನುಕ್ಕುತ್ತರೋತ್ತರೋಪಚಯತ್ತೈಪ್ಪಣ್ಣಿಯುಮ್, ಸ್ವತಂತ್ರಪ್ರಪತ್ತ್ಯನುಷ್ಠಾನಮ್ ಪಣ್ಣಿನವನುಕ್ಕು ಇಙ್ಗು ಕೈಙ್ಕರ್ಯಾಭಿವೃದ್ಧಿಯೈಯುಣ್ಡಾಕ್ಕಿಯುಮ್, ಭಗವತ್ಪ್ರಾಪ್ತಿಯಿಲೇ ತ್ವರೈಯೈಯುಣ್ಡಾಕ್ಕಿಯುಮುಪಕಾರಙ್ಗಳಾಮ್.

ಎಟ್ಟನೇ ಎನ್ನಿಲ್ - ಅದು ಹೇಗೆ ಎಂದರೆ, **ಇನ್ನೈಯುಮ್** - ಈ ದಿವ್ಯದೇಶವಾಸ ನಾಮಸಂಕೀರ್ತನಾದಿಗಳು, **ಉಪಾಸನತ್ತಿಲೇಯಾದಲ್** - ಉಪಾಸನದಲ್ಲೇಯಾಗಲಿ, **ಪ್ರಪತ್ತಿಯಿಲೆಯಾದಲ್**-ಭರನ್ಯಾಸದಲ್ಲೇಯಾಗಲಿ, **ಮೂಟ್ಟೈಯುಮ್** - ಇವನನ್ನು ಪ್ರವರ್ತಿಸುವ ಹಾಗೆ ಮಾಡಿ, **ಉತ್ಪನ್ನೋಪಾಸನನುಕ್ಕು** - ಆಂತರ ಪ್ರವರ್ತನೆಯಿಂದ ಉಂಟಾದ ಉಪಾಸನಾನಿಷ್ಠನಿಗೆ **ಉತ್ತರೋತ್ತರೋಪಚಯತ್ತೈಪ್ಪಣ್ಣಿಯುಮ್**-ಉತ್ತರೋತ್ತರಾಭಿವೃದ್ಧಿಯನ್ನುಂಟುಮಾಡಿಯೂ, **ಸ್ವತಂತ್ರಪ್ರಪತ್ತ್ಯನುಷ್ಠಾನಂಪಣ್ಣಿನವನುಕ್ಕು** - ಭರನ್ಯಾಸಾನುಷ್ಠಾನಮಾಡಿದವನಿಗೂ, ಇಙ್ಗು - ಈ ಲೋಕದಲ್ಲಿ ಉಂಟಾದ, **ಕೈಙ್ಕರ್ಯಾಭಿವೃದ್ಧಿಯೈ, ಯುಣ್ಡಾಕ್ಕಿಯುಮ್** - ಕೈಂಕರ್ಯಾಭಿವೃದ್ಧಿಯನ್ನುಂಟುಮಾಡಿಯೂ, **ಭಗವತ್ಪ್ರಾಪ್ತಿಯಿಲೆ ತ್ವರೈಯುಣ್ಡಾಕ್ಕಿಯುಮ್** - ಹೀಗೆ ಭಗವತ್ಪ್ರಾಪ್ತಿಯಲ್ಲಿ ತ್ವರೆಯನ್ನುಂಟುಮಾಡಿ **ಉಪಕಾರಕಙ್ಗಳಾಮ್** - ಉಪಕಾರಕಗಳಾಗವವು. ಈ ಕ್ಷೇತ್ರವಾಸನಾಮಸಂಕೀರ್ತನಾದಿಗಳು ಉಪಾಯಾನುಷ್ಠಾನಮಾಡುವವನಿಗೆ ಉಪಾಯಗಳಾದ ಉಪಾಸನದಲ್ಲಾಗಲಿ, ಪ್ರಪತ್ತ್ಯನುಷ್ಠಾನದಲ್ಲಿಯಾಗಲಿ ಪ್ರವರ್ತಿಸುವ ಹಾಗೆ ಮಾಡುತ್ತವೆ. ಒಂದು ವೇಳೆ ಉಪಾಯಾನುಷ್ಠಾನ ಮುಂಚೆಯೇ ಮಾಡಿದ್ದರೆ, ಈ ದಿವ್ಯದೇಶವಾಸ ನಾಮ ಸಂಕೀರ್ತನಾದಿಗಳು ಹೇಗೆ ಪ್ರಯೋಜನವಾದವೆಂದರೆ:—ಉಪಾಸಕನ ವಿಷಯದಲ್ಲಿ ಉಪಾಸನವು ನಿರ್ವಿಘ್ನವಾಗಿ ನೆರವೇರಿ ಪರಮಾತ್ಮ ಸಾಕ್ಷಾತ್ಕಾರವು ಶೀಘ್ರದಲ್ಲೇ ಪ್ರಾಪ್ತವಾಗುವ ಹಾಗೆ ಮಾಡುತ್ತವೆ. ಭರನ್ಯಾಸವನ್ನು ಅನುಷ್ಠಿಸಿದವನಿಗೆ, ಸ್ವಾಮಿಕೈಂಕರ್ಯಾದಿಗಳಲ್ಲಿ ಅಭಿರುಚಿಯನ್ನುಂಟುಮಾಡಿ, ಐಹಿಕಜಿಹಾಸೆಯನ್ನುಂಟುಮಾಡಿ **ಅಮೃತ ಇಹ ಭವತಿ** ಎಂದು ಹೇಳಿರುವ ಹಾಗೆ ಪರಮಾತ್ಮನನ್ನು ಅನುಭವಿಸುವ ಆನಂದವನ್ನುಂಟುಮಾಡಿ ಮೋಕ್ಷಪ್ರಾಪ್ತಿಯಲ್ಲಿ ತ್ವರೆಯನ್ನುಂಟುಮಾಡುತ್ತವೆಂಬ ಭಾವವು.

ಭಕ್ತಿಪ್ರಪತ್ತಿಗಳಿಲ್ ಫಲೋತ್ಪತ್ತಿಯಿಲ್ ಪ್ರಕಾರಭೇದಂ

ಇವರ್‌ಗಳಿಲ್ ವ್ಯಾಸಾದಿಗಳೈಪ್ಪೋಲೆ ಉಪಾಯಾನ್ತರ ಸಮರ್ಥ ನಾಕೈಯಾಲೇ ಅಕಿಞ್ಚನನುಮನ್ರಿಕ್ಕೆ ವಿಳಂಬಕ್ಷಮನಾಕೈಯಾಲೇ ಅನ

ಮುನ್ಬೆಯಾದಲ್ ಪಿನ್ಬೆಯಾದಲ್ ಉಪಾಯ ತುವಕ್ಕುಣ್ಡು, ಎಂದು ಹೇಳಿದುದು ಭಕ್ತ್ಯುಪಾಯವಿಷಯವು. **ತನ್ಪಕ್ಕಲಿಲೆಯಾದಲ್ ಪಿರರ್ಪಕ್ಕಲಿಲೆಯಾದಲ್** ಎಂಬುವದು ಪ್ರಪತ್ತಿವಿಷಯವು. ತನ್ಪಕ್ಕಲಿಲೆಯಾದಲ್ ಎಂಬುವದರಿಂದ ಸ್ವನಿಷ್ಠೆಯೂ, ಪಿರರ್ಪಕ್ಕಲಿಲೇ ಎಂಬುವದರಿಂದ ಆಚಾರ್ಯಮೂಲಕ ಮಾಡುವ ಆಚಾರ್ಯನಿಷ್ಠೆ ಉಕ್ತಿನಿಷ್ಠೆಗಳು ಹೇಳಲ್ಪಟ್ಟವು. ಈ ದಿವ್ಯದೇಶವಾಸ, ನಾಮಸಂಕೀರ್ತನಾದಿಗಳು ಮೋಕ್ಷಪ್ರಾಪ್ತಿಯಲ್ಲಿ ತ್ವರೆಯನ್ನುಂಟುಮಾಡಿಯೂ ಉಪಕಾರಕಗಳಾಗಬಹುದು. ಆದುದರಿಂದ ಅವುಗಳು ತಾನೇ ಸ್ವತಂತ್ರಿಸಿ ಮೋಕ್ಷಪ್ರಾಪ್ತಿಯನ್ನುಂಟುಮಾಡಲಾಗವು. ಆದರೆ ಮೋಕ್ಷಪ್ರಾಪ್ತಿಗೆ ಬೇಕಾದ ಸಾಧನಾನುಷ್ಠಾನಗಳಿಗೆ ಸಹಾಯಗಳೆಂದು ಭಾವಿಸತಕ್ಕದ್ದು. ಆ ಕಾರಣದಿಂದ ಎಂದರೆ ಇವುಗಳೆಲ್ಲವೂ ಮೋಕ್ಷಪ್ರಾಪ್ತಿಗೆ ಸಾಕ್ಷಾತ್ತಾಗಿ ಕಾರಣಗಳಲ್ಲವಾದುದರಿಂದ ಸದ್ವಾರಕ ಅದ್ವಾರಕಪ್ರಪತ್ತಿ ಎಂದು ವಿಭಾಗಿಸಿ ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳೆಂದು ವಿಭಾಗಿಸಿ ಹೇಳಿದುದು ಸಮಂಜಸವೆಂಬು ಹೇಳಿದಂತಾಯಿತು. ಆದರೆ ಸದ್ವಾರಕ ಅದ್ವಾರಕ ಪ್ರಪತ್ತಿಗಳೆರಡಕ್ಕೂ ಪ್ರಪತ್ತಿಯು ಆವಶ್ಯಕವಾದುದರಿಂದ ಉಪಾಯವು ಶರಣಾಗತಿರೂಪವಾಗಿ ಒಂದೇ ವಿಧವೆಂದು ಏಕೆ ಹೇಳಕೂಡದು ಎಂದರೆ ಫಲಪ್ರಾಪ್ತಿಯು ಎರಡಕ್ಕೂ ಮೋಕ್ಷವೇಯಾದರೂ ಫಲಪ್ರಾಪ್ತಿವಿಧಾನದಲ್ಲಿ ವ್ಯತ್ಯಾಸ ಉಂಟೆಂದು ಮುಂದೆ ಎರಡು ವಾಕ್ಯದಿಂದ ತಿಳಿಸುತ್ತಾರೆ.

ಭಕ್ತಿ ಪ್ರಪತ್ತಿಗಳ ಫಲೋತ್ಪತ್ತಿಯಲ್ಲಿರುವ ವ್ಯತ್ಯಾಸವು.

ಇವರ್‌ಗಳಿಲ್ - ಮುಮುಕ್ಷುಗಳಾದ ಈ ಅಧಿಕಾರಿಗಳಲ್ಲಿ, **ವ್ಯಾಸಾದಿಗಳೈಪ್ಪೋಲೆ** - ವ್ಯಾಸಮಹರ್ಷಿ ಮೊದಲಾದವರುಗಳ ಹಾಗೆ, ಇಲ್ಲಿ ಆದಿಶಬ್ದದಿಂದ ಪರಾಶರ, ಶುಕ, ವಾಲ್ಮೀಕಿ ಮೊದಲಾದ ಮಹರ್ಷಿಗಳು ಹೇಳಲ್ಪಟ್ಟರು, **ಉಪಾಯಾನ್ತರ ಸಮರ್ಥನಾಕೈಯಾಲೇ** - ಪ್ರಪತ್ತಿಯಲ್ಲದೆ ಇನ್ನೊಂದಾದ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳಿಂದ ಕೂಡಿದ ಯೋಗವೆನಿಸುವ ಉಪಾಸನದಲ್ಲಿ ಎಂದರೆ ಸದ್ವಾರಕಪ್ರಪತ್ತಿಯಲ್ಲಿ ಶಕ್ತನಾದುದರಿಂದ, **ಅಕಿಂಚನನುಮನ್ರಿಕ್ಕೆ**- ಸಾಂಗಭಕ್ತಿಯೋಗದಲ್ಲಿ ಶಕ್ತಿಯಿರುವದರಿಂದ ಅಕಿಂಚನನೂ ಅಲ್ಲದೆ, **ವಿಳಂಬ**

ನ್ಯಗತಿಯುಮನ್ರಿಕ್ಕೆ ಇರುಕ್ಕಿರ ಸದ್ವಾರಕ ಪ್ರಪತ್ತಿ ನಿಷ್ಠನುಕ್ಕು ಪ್ರಾರಬ್ಧಕರ್ಮ ಪರ್ಯವಸಾನಭಾವಿಯಾನ ಅನ್ತಿಮ ಪ್ರತ್ಯಯತ್ತೈ ಯವಧಿಯಾಕ ವುಡೈತ್ತಾನ ಉಪಾಸನ ರೂಪಾಂಗಿಯಿನುಡೈಯ ಯಥಾವನ್ನಿಷ್ಪತ್ತಿ ಪೂರ್ವಕಮಾನ ಮೋಕ್ಷಮ್ ಫಲಂ. ಸರ್ವಾಧಿಕಾರಮಾಯ್,

---

ಕ್ಷಮನಾಕೈಯಾಲೇ-ಮೋಕ್ಷಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸುವವನಾದುದರಿಂದ **ಅನನ್ಯಗತಿಯುಮನ್ರಿಕ್ಕೆ** - ಪ್ರಾರಬ್ಧ ಕರ್ಮಾನುಭವದೊಳಗೆ ಉಂಟಾಗುವ ಇತರ ಪ್ರಯೋಜನಗಳನ್ನು ಹೊಂದುವವನಾದುದರಿಂದ ಅನನ್ಯಗತಿಕನೂ ಅಲ್ಲದೆ ಅಥವಾ ಅದ್ವಾರಕಪ್ರಪತ್ತಿನಿಷ್ಠನ ಹಾಗಲ್ಲದೆ ಉಪಾಸನವನ್ನು ಗತಿಯಾಗಿ ಹೊಂದಿದವನಾಗಿ, **ಇರುಕ್ಕಿರ ಸದ್ವಾರಕಪ್ರಪತ್ತಿನಿಷ್ಠನಕ್ಕು** - ಇರುವ ಪರಬ್ರಹ್ಮೋಪಾಸನನಿಗೆ, **ಪ್ರಾರಬ್ಧಕರ್ಮ ಪರ್ಯವಸಾನಭಾವಿಯಾನ** - ಪ್ರಾರಬ್ಧಕರ್ಮ ಮುಗಿದ ನಂತರ ಉಂಟಾಗುವ, **ಅನ್ತಿಮಪ್ರತ್ಯಯತ್ತೈ** - ಪರಮಾತ್ಮಸಾಕ್ಷಾತ್ಕಾರರೂಪವಾದ ಧ್ಯಾನಸ್ಮೃತಿಯನ್ನು **ಅವಧಿಯಾಕ ವುಡೈತ್ತಾನ** - ಅವಧಿಯಾಗಿ ಹೊಂದಿರುವ, **ಉಪಾಸನ ರೂಪಾಂಗಿಯಿನುಡೈಯ** - ಉಪಾಸನರೂಪವಾದ ಅಂಗಿಯ, **ಯಥಾವನ್ನಿಷ್ಪತ್ತಿ ಪೂರ್ವಕಮಾನ** - ಸರಿಯಾಗಿ ಪೂರ್ತಿಯಾಗುವದರ ಮೂಲಕವಾಗಿ ಉಂಟಾಗುವ **ಮೋಕ್ಷಮ್ ಫಲಂ** - ಮೋಕ್ಷವು ಫಲವು.

ಅಕಿಂಚಿನತ್ವವೆಂದರೆ ಸಾಂಗಭಕ್ತಿಯೋಗ ಶಕ್ತಿಯಿಲ್ಲದಿರುವಿಕೆ. ಅಂಥಾವನು ವಿಳಂಬಾಸಹನು ಎಂದು ಹೇಳಿದ್ದತ್ತಿದೆ. ಆತನು ದೇಹಾವಸಾನದಲ್ಲಿ ಮೋಕ್ಷವನ್ನು ಅಪೇಕ್ಷಿಸುವವನು. ದೇಹಾವಸಾನದವರಿವಿಗೆ ವಿಳಂಬವು ಏತಕ್ಕೆಂದರೆ ಪ್ರಾರಬ್ಧಕರ್ಮವನ್ನು ಅನುಭವಿಸಲೇ ತೀರಬೇಕಾದುದರಿಂದ. ಆದರೆ ಭಕ್ತಿಯೋಗನಿಷ್ಠನಿಗಾದರೋ ಪ್ರಾರಬ್ಧಕರ್ಮವು ಜನ್ಮಾಂತರಕ್ಕೂ ಕೂಡ ಸಂಬಂಧಿಸಿ ವಿಳಂಬಿಸಬಹುದು. ಆತನು ಇಂತಹ ವಿಳಂಬವನ್ನು ಸಹಿಸುವಂಥಾವನು. ಆದುದರಿಂದ ಭಕ್ತಿಯೋಗನಿಷ್ಠನಿಗೆ ಅಕಿಂಚನತ್ವವಿಲ್ಲವು, **ಅನನ್ಯ ಗತಿಕನು** ಎಂದರೆ ಬೇರೇ ಪ್ರಯೋಜನಗಳಿಗಲ್ಲ ವಿಮುಖನು. ಪ್ರಾರಬ್ಧಕರ್ಮಾನುಭವಕಾಲದಲ್ಲಿ ಉಂಟಾಗುವ ಪ್ರಯೋಜನಗಳಿಗೂ ಕೂಡ ವಿಮುಖನಾದವನು. ಆದರೆ **ಭಕ್ತಿ** ಯೋಗನಿಷ್ಠನು ಪ್ರಾರಬ್ಧಕರ್ಮಾನುಭವಕಾಲದಲ್ಲಿ ಉಂಟಾಗುವ ಪ್ರಯೋಜನಗಳನ್ನು ಅಙ್ಗೀಕರಿಸುವವನಾದ ಪ್ರಯುಕ್ತ ಅದ್ವಾರಕಪ್ರಪತ್ತಿನಿಷ್ಠನ ಹಾಗೆ ಅನನ್ಯಗತಿಕನಲ್ಲವು. ಮತ್ತು ಯೋಗವನ್ನು ಗತಿಯಾಗಿ ಅಂಗೀಕರಿಸಿರುವದರಿಂದಲೂ ಅನನ್ಯಗತಿಕನಲ್ಲವು. ಈ ಸದ್ವಾರಕಪ್ರಪತ್ತಿನಿಷ್ಠನಿಗೆ ಅಂಗಿನಿಷ್ಪತ್ತಿಯು ಆವಶ್ಯ

ಸರ್ವಾನಿಷ್ಟನಿವರ್ತನ ಕ್ಷಮಃ ಮಾಯಃ, ಸರ್ವೇಷ್ಟ ಸಾಧನಮಾಕವತ್ಯಾ

ಕವಾದುದರಿಂದ, ಅದಕ್ಕಾಗಿ ಪ್ರಾರಬ್ಧಕರ್ಮಾವಸಾನಪರ್ಯಂತವಾಗಿ ವಿಳಂಬ ಉಂಟಾಗುವದರಿಂದಲೇ ಫಲನಿಷ್ಪತ್ತಿಪ್ರಕಾರದಲ್ಲಿ ಈ ವ್ಯತ್ಯಾಸವುಂಟು. ಈ ಅದ್ವಾರಕ ಪ್ರಪತ್ತಿನಿಷ್ಠನಿಗೆಯಾದರೋ, ದೇಹಾವಸಾನವಾದ ಒಡನೆಯೇ ವಿಳಂಬವಿಲ್ಲದೆ ಫಲಪ್ರಾಪ್ತಿಯು ; ಹೀಗೆ ವ್ಯತ್ಯಾಸವೆಂದು ಹೇಳುತ್ತಾರೆ. ಸದ್ವಾರಕ ಪ್ರಪತ್ತಿ ನಿಷ್ಠನಿಗೂ ಕೂಡ ಹೀಗೆಯೇ ಏಕೆ ಫಲಪ್ರಾಪ್ತಿಯು ಕೂಡದು ಎಂಬ ಆಕ್ಷೇಪಕ್ಕೆ ಸಮಾಧಾನವಾಗಿ ಆತನಿಗೆ ಅನ್ತಿಮಪ್ರತ್ಯಯವು ಆವಶ್ಯಕವೆಂದೂ, ಅದಕ್ಕೆ ಅವಧಿಯು ಪ್ರಾರಬ್ಧಕರ್ಮಾವಸಾನಪರ್ಯಂತವೆಂದು ಹೇಳಿರುತ್ತಾರೆ. ಅದ್ವಾರಕ ನಿಷ್ಠಾರೂಪ ಪ್ರಪತ್ತಿಯು ಫಲಸಾಧನದಲ್ಲಿರುವ ವೈಲಕ್ಷಣ್ಯವನ್ನು ಮುಂದೆ ತಿಳಿಸುತ್ತಾರೆ.

ಸರ್ವಾಧಿಕಾರಮಾಯಃ - ಸರ್ವರೂ ಅನುಷ್ಠಿಸಬಹುದಾಗಿ, ಉಪಾಸನವನ್ನು ಮೂರುವರ್ಣದವರು ಮಾತ್ರವೇ ಅನುಷ್ಠಿಸಬಹುದು, ಇದನ್ನಾದರೋ ಸ್ತ್ರೀ ಶೂದ್ರ ಮೊದಲಾದ ಸರ್ವರೂ ಅನುಷ್ಠಿಸಬಹುದು, ಚಂಡಾಲರೂ ಕೂಡ ಅನುಷ್ಠಿಸಿದ ನಿದರ್ಶನಗಳುಂಟು ; **ಸರ್ವಾನಿಷ್ಟನಿವರ್ತನಕ್ಷಮಮಾಯಃ** - ಸಮಸ್ತವಿಧಪುಣ್ಯಪಾಪರೂಪವಾದ ಅನಿಷ್ಟಗಳನ್ನು ಹೋಗಲಾಡಿಸಲು ಶಕ್ತಿಯುಳ್ಳದ್ದಾಗಿ, ಉಪಾಸನಮಾರ್ಗವಾದರೋ ಪ್ರಾರಬ್ಧವನ್ನು ಹೋಗಲಾಡಿಸಲಾರದು, ಪ್ರಾರಬ್ಧವನ್ನನು, ಭವಿಸಿಯೇ ತೀರಬೇಕು, ಪ್ರಪತ್ತಿಯಲ್ಲಿ ಪ್ರಾರಬ್ಧವೂ ಕಳೆದುಹೋಗುತ್ತದೆ. ಹೇಗೆಂದರೆ:—ಪ್ರಾರಬ್ಧಕರ್ಮವು ಅಭ್ಯುಪಗತವೆಂತಲೂ, ಅನಭ್ಯುಪಗತವೆಂದೂ ಎರಡು ವಿಧವು. ಅಭ್ಯುಪಗತವು ಈ ದೇಹದಲ್ಲಿ ಅನುಭವಿಸತಕ್ಕದ್ದು. ಅನಭ್ಯುಪಗತವು ಮುಂದಿನ ಜನ್ಮದಲ್ಲಿ ಅನುಭವಿಸತಕ್ಕದ್ದು. ಭಕ್ತಿಮಾರ್ಗವಾದ ಉಪಾಸನದಲ್ಲಿ ಅನಭ್ಯುಪಗತವಿದ್ದರೆ ಅನುಭವಿಸಲೇಬೇಕು. ಪ್ರಪತ್ತಿಯಲ್ಲಿ ಅನಭ್ಯುಪಗತವೂ ಕ್ಷಯಿಸಿ ಹೋಗುವದರಿಂದ ದೇಹಾವಸಾನದಲ್ಲೇ ಮೋಕ್ಷವೆಂಬ ಭಾವವು. ಪ್ರಪತ್ತಿಯಲ್ಲಿ ಭಕ್ತಿಮಾರ್ಗದಲ್ಲಿನ ಹಾಗೆ ಸಂಚಿತಪುಣ್ಯಪಾಪಗಳು ನಾಶವಾಗುತ್ತವೆ. ಬುದ್ಧಿಪೂರ್ವಕವಲ್ಲದ ಉತ್ತರಾಘವು ಲೇಪಿಸುವದಿಲ್ಲವು. ಬುದ್ಧಿಪೂರ್ವಕಮಾಡಿದ ಉತ್ತರಾಘಗಳನ್ನು ಭಕ್ತಿಮಾರ್ಗದಲ್ಲಿ ಅನುಭವಿಸಿಯೇ ತೀರಬೇಕು. ಪ್ರಪತ್ತಿಯಲ್ಲಾದರೋ ಪ್ರಾಯಶ್ಚಿತ್ತರೂಪದಲ್ಲಿ ಮಾಡಿದ ಪುನಶ್ಶರಣಾಗತಿಯಿಂದ ಈ ಬುದ್ಧಿಪೂರ್ವಕಮಾಡಿದ ಉತ್ತರಾಘವೂ ನಿವರ್ತಿಸುತ್ತದೆ, ಒಂದು ವೇಳೆ ಬುದ್ಧಿಪೂರ್ವಕವಾದ ಉತ್ತರಾಘಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳದಿದ್ದರೂ, ಅಲ್ಪಶಿಕ್ಷೆಗಳಾದ ಕುಂಟನನ್ನಾಗಿಯೂ, ಕುರುಡನನ್ನಾಗಿಯೂ, ಹೆಂಡತಿ ಮಕ್ಕಳನ್ನು ಅವಿಧೇಯರನ್ನಾಗಿಯಾದರೂ ಮಾಡಿ ಕ್ಲೇಶಾನುಭವಮಾಡಿಸಿ ಮೋಕ್ಷವನ್ನೀಯುವನು.

ಯುಮ್, ಸುಕರಮಾಯುಮ್, ಸಕೃತ್ಕರ್ತವ್ಯಮಾಯುಮ್, ಆಶುಕಾರಿಯಾಯುಮ್, ಪ್ರತಿಬನ್ಧಾನರ್ಹಮಾಯುಮ್, ಬ್ರಹ್ಮಾಸ್ತ್ರಬನ್ಧಮ್ ಪೋಲೆ ಸ್ವಫಲತ್ತಿಲ್

ಹೀಗೆ ಪ್ರಪತ್ತಿಯಲ್ಲಿ ಅಧಿಕಾರಿಗಳ ಪ್ರಾರಬ್ಧ ಒಂದು ಬಿನಾ ಮಿಕ್ಕೆಲ್ಲವೂ ನಾಶವಾಗುವದರಿಂದ ಸರ್ವಾನಿಷ್ಟನಿವೃತ್ತಿಕ್ಷಮಮಾಯುಮ್ ಎಂದು ಪ್ರಯೋಗಿಸಿರುತ್ತಾರೆ. **ಸರ್ವೇಷ್ಟಸಾಧನ** ಮಾಕವಲ್ಲತ್ತಾಯುಮ್ - ಸಮಸ್ತ ಇಷ್ಟಾರ್ಥಗಳನ್ನೂ ಸಾಧಿಸಿಕೊಡುವದಾಗಿ, ಭಕ್ತಿಮಾರ್ಗದಲ್ಲಿ ಉಪಾಸನವು ಕೈಗೂಡುವ ತನಕ ಇತರ ಇಷ್ಟಾರ್ಥಗಳು ಪ್ರಾಪ್ತವಾಗಲು ಅನುಕೂಲವಿಲ್ಲವು, ಪ್ರಪದನವಾದರೋ ಅದನ್ನು ಸಕೃದನುಷ್ಠಿಸಿದವನು ತನ್ನ ಪ್ರಿಯಭಕ್ತನಾದುದರಿಂದ ಸರ್ವೇಶ್ವರನಿಂದಲೇ ಅಂತಹ ಭಾಗವತೋತ್ತಮನಿಗೆ ಕಾಲಕ್ಷೇಪವಾಗುವ ಹಾಗೆ ಎಲ್ಲಾ ಅಭೀಷ್ಟಗಳೂ ದೊರೆಯುತ್ತವೆಂಬ ಭಾವವು; **ಸುಕರಮಾಯುಮ್** - ಅಶಕ್ತನಿಗೂ ಕೂಡ ಅನುಷ್ಠಿಸಲು ಯೋಗ್ಯವಾದುದಾಗಿ, ಭಕ್ತಿಮಾರ್ಗದಲ್ಲಿ ಪ್ರತಿದಿನವೂ ಉಪಾಸನವೂ ಬಹುಕಾಲ ನಡೆಯಬೇಕಾದುದರಿಂದ ಅದು ದುಷ್ಕರವು, ಕಷ್ಟಸಾಧ್ಯವಾದುದು; **ಸಕೃತ್ಕರ್ತವ್ಯಮಾಯುಮ್** - ಒಂದೇ ಸಲ ಅನುಷ್ಠಿಸತಕ್ಕದ್ದಾಗಿ, ಪ್ರಪತ್ತಿಯು ಒಂದೇ ಸಲ ಅನುಷ್ಠಿಸತಕ್ಕದ್ದು, ಉಪಾಸನವಾದರೋ, ಅಸಕೃತ್ಕರ್ತವ್ಯವು, ಪ್ರತಿದಿನವೂ ಅನುಷ್ಠಿಸತಕ್ಕದ್ದು. **ಆಶುಕಾರಿಯಾಯುಮ್** - ಶೀಘ್ರಫಲಪ್ರದವಾಗಿ, ಪ್ರಪತ್ತ್ಯನುಷ್ಠಾನ ಮಾಡುವವನು, ಆರ್ತನೆಂದೂ, ದೃಪ್ತನೆಂದೂ ಎರಡು ವಿಧವು; ಆರ್ತನು ಈ ಲೋಕದಲ್ಲಿರುವದು ಬೆಂಕಿಯ ಮಧ್ಯದಲ್ಲಿರುವದು ಹೇಗೆ ದುಸ್ಸಹವೋ ಹಾಗೆ ದುಸ್ಸಹವಾಗಿ ಪ್ರಪತ್ತಿಯ ಉತ್ತರಕ್ಷಣದಲ್ಲೇ ಮೋಕ್ಷವನ್ನು ಪ್ರಾರ್ಥಿಸುವವನು, ಹಾಗೆ ದುಸ್ಸಹವಾಗಿರುವವನಿಗೆ ಆಗಲೇ ಮೋಕ್ಷಪ್ರಾಪ್ತಿಯಾಗುವದು; ದೃಪ್ತಪ್ರಪನ್ನನಾದರೋ ದೇಹಾವಸಾನದಲ್ಲಿ ಮೋಕ್ಷವನ್ನು ಬೇಡುವವನು, ಅವನಿಗೆ ದೇಹಾವಸಾನಾನಂತರ ಮೋಕ್ಷವು ಆದುದರಿಂದ ಇವರಿಬ್ಬರಿಗೂ ಬೇಗನೆ ಮೋಕ್ಷಪ್ರಾಪ್ತಿಯಾಗುವದರಿಂದ **ಆಶುಕಾರಿಯಾಯುಮ್** ಎಂದು ಪ್ರಯೋಗವು. ಭಕ್ತಿನಿಷ್ಠನಾದರೋ ಆತ್ಮಸಾಕ್ಷಾತ್ಕಾರವು ಲಭಿಸಿ, ಅನಭ್ಯಾಸಗಳಪ್ರಾರಬ್ಧವನ್ನೂ ಅನುಭವಿಸಿದ ನಂತರ ಮೋಕ್ಷವಾದುದರಿಂದ ಅದು ವಿಳಂಬಾಕ್ಷಮವಾದುದು. **ಪ್ರತಿಬಂಧಾನರ್ಹಮಾಯುಮ್** - ಯಾವ ಪ್ರತಿಬಂಧಗಳಿಂದಲೂ ತಪ್ಪಿಸಲು ಸಾಧ್ಯವಲ್ಲದುದಾಗಿ ಉಪಾಸನದಲ್ಲಿ ಪರಬ್ರಹ್ಮಸಾಕ್ಷಾತ್ಕಾರಕ್ಕೆ ಮೊದಲು ಪ್ರತಿಬಂಧಕಗಳು ಪ್ರಾಪ್ತವಾಗಿ ಫಲಪ್ರಾಪ್ತಿ ಇಲ್ಲದೆ ಹೋಗಬಹುದು. ಇದನ್ನು ಆಚಾರ್ಯರು ಅರ್ಥಪಂಚಕಾಧಿಕಾರದಲ್ಲಿ ಪ್ರಾಪ್ತಿವಿರೋಧಿಯನ್ನು ಹೇಳುವ ಸಂದರ್ಭದಲ್ಲಿ ಉಪಪಾದಿಸಿರುತ್ತಾರೆ; ಈ ಪ್ರಪತ್ತಿಯಾದರೋ ಸಕೃದನುಷ್ಠಾನದಿಂದಲೇ ಪೂರ್ತಿಯಾಗುವದ

ಉಪಾಯಾನ್ತರ ಪ್ರಯೋಗಾ ಸಹವಾಯ್, ಇರುನ್ದಪ್ರಪತ್ತಿಯೈ ತನ್ನಧಿಕಾರಾನುರೂಪಮಾಕ ಅದ್ವಾರಕವಾಗ ಪ್ರಪತ್ತಿನವನುಕ್ಕು ಪರಿ

ಯಿಂದ ತದನಂತರ ಯಾವ ಪ್ರತಿಬಂಧಕಗಳೂ ಅದನ್ನು ತಪ್ಪಿಸಲಾರವೆಂಬ ಭಾವವು. **ಬ್ರಹ್ಮಾಸ್ತ್ರಬನ್ದಮ್ ಪೋಲೆ** ಬ್ರಹ್ಮಾಸ್ತ್ರದಿಂದುಂಟಾದ ಬಂಧನವು ಹೇಗೆ ಬೇರೆ ಉಪಾಯದ ಸಹಾಯವನ್ನು ಸಹಿಸುವದಿಲ್ಲವೋ ಹಾಗೆ, **ಸ್ವಫಲತ್ತಿಲ್** - ತಾನು ಉಂಟುಮಾಡುವ ಫಲದಲ್ಲಿ, **ಉಪಾಯಾನ್ತರ ಪ್ರಯೋಗಾಸಹವಾಯ್** - ಬೇರೆ ಇನ್ಯಾವ ಉಪಾಯದ ಪ್ರಯೋಗವನ್ನೂ ಸಹಿಸದೆ ಇರುವದಾಗಿ ಭಕ್ತಿಮಾರ್ಗದಲ್ಲಾದರೋ ಉಪಾಸನವು ಪೂರ್ತಿಯಾದರೂ, ಅಂಗವಾದ ಪ್ರಪತ್ತಿಯು ಎಂದರೆ ಶರಣಾಗತಿಯು ಸಾಪೇಕ್ಷವುಂಟು. ಇಲ್ಲಿಯಾದರೋ ಈ ಪ್ರಪತ್ತಿಗೆ ಇನ್ನು ಯಾವುದರ ಸಾಪೇಕ್ಷವೂ ಬೇಕಾಗಿರುವದಿಲ್ಲ. ಇನ್ನು ಯಾವುದಾದರ ಅಪೇಕ್ಷೆಯನ್ನು ಪಡೆದು ಉಪಾಯಾನ್ತರವನ್ನನುಷ್ಠಿಸಿದರೆ, ಎಂದರೆ ರುದ್ರಾದಿ ಅನ್ಯ ದೇವತಾಭಜನಮಾಡಿದುದಾದರೆ, ಈ ಪ್ರಪತ್ತಿಯು ಕೈ ಬಿಟ್ಟು ಹೋಗುತ್ತದೆ; ಹೇಗೆಂದರೆ ಬ್ರಹ್ಮಾಸ್ತ್ರದಿಂದ ಆಂಜನೇಯನು ಬಂಧಿಸಲ್ಪಟ್ಟಿದ್ದನು; ಅದರ ಮಾಹಾತ್ಮ್ಯೆಯನ್ನು ತಿಳಿಯದ ಅವಿವೇಕಿಗಳು ಆತನನ್ನು ಶಣವಲ್ಕಲಗಳಿಂದ ಬಿಗಿಯಲು, ಬ್ರಹ್ಮಾಸ್ತ್ರವು ಬಿಟ್ಟು ಹೋಯಿತು. ಬ್ರಹ್ಮಾಸ್ತ್ರಬಂಧನವು ಹಾಗೆಯೇ ಇದ್ದುದಾದರೆ ಆಂಜನೇಯನು ಪುನಃ ತಪ್ಪಿಸಿಕೊಂಡು ಹೋಗಿ ಲಂಕಾದಹನಾದಿ ವ್ಯಾಘಾತಗಳನ್ನು ಮಾಡುತ್ತಿರಲಿಲ್ಲವು. ಹೀಗೆ ಎಂಟು ವಿಶೇಷಣಗಳಿಂದ ಭಕ್ತಿಮಾರ್ಗಕ್ಕೂ ಪ್ರಪತ್ತಿಗೂ ಇರುವ ವ್ಯತ್ಯಾಸಗಳನ್ನು ವ್ಯಕ್ತಪಡಿಸಿ, ಪ್ರಪತ್ತಿಯು ಭಕ್ತಿಮಾರ್ಗಕ್ಕಿಂತ ಹೇಗೆ ತುಂಬಾ ಅಮೋಘೋಪಾಯವು ಎಂದು ತೋರಿಸಿರುತ್ತಾರೆ. **ಇರುನ್ದಪ್ರಪತ್ತಿಯೈ** - ಹೀಗಿರುವ ಪ್ರಪತ್ತಿಮಾರ್ಗವನ್ನು, **ತನ್ನಧಿಕಾರಾನುರೂಪಮಾಕ** – ತನಗೆ ಅಧಿಕಾರ ಹೇಗೋ ಅದಕ್ಕನುಗುಣವಾಗಿ; ಪ್ರಪತ್ತಿಯು ಅಷ್ಟು ಸುಲಭೋಪಾಯವಾಗಿದ್ದರೆ ಎಲ್ಲರೂ ಅದನ್ನೇ ಅನುಷ್ಠಿಸಬಹುದಲ್ಲಾ ಕಷ್ಟಸಾಧ್ಯವಾದ ಭಕ್ತಿಮಾರ್ಗವು ಏತಕ್ಕೆಂದರೆ, ಭಕ್ತಿಪ್ರಪತ್ತಿಗಳನ್ನು ಅಧಿಕಾರಾನುಗುಣವಾಗಿ ಅನುಷ್ಠಿಸತಕ್ಕದ್ದು, ಶಕ್ತನಿಗೆ ಭಕ್ತಿಮಾರ್ಗವೂ, ಅಶಕ್ತನಿಗೆ ಪ್ರಪತ್ತಿಮಾರ್ಗವು ವಿಧಿಸಲ್ಪಟ್ಟಿರುವದರಿಂದ ಅಧಿಕಾರಾನುಗುಣವಾಗಿ, ಅಶಕ್ತನಿಂದ ಅನುಷ್ಠಿಸಲ್ಪಟ್ಟ, ಎಂಬಭಿಪ್ರಾಯವು. ಹೀಗೆ **ಅದ್ವಾರಕಮಾಕಪ್ಪತ್ತಿನವನುಕ್ಕು** – ಪ್ರಪತ್ತಿಮಾರ್ಗದಲ್ಲಿ ಶರಣಾಗತಿಯು ಅಂಗವಲ್ಲದೆ ಸ್ವತಂತ್ರವಾಗಿ ಅಂಗಿಯೇ ಆಗಿರುವದರಿಂದ, ಅಂತಹ ಸ್ವತಂತ್ರಪ್ರಪತ್ತಿನಿಷ್ಠನಿಗೆ, **ಪರಿಪೂರ್ಣಾನುಭವತ್ತುಕ್ಕು** - ಪರಬ್ರಹ್ಮವನ್ನು ಪರಿಪೂರ್ಣವಾಗಿ ಅನುಭವಿಸುವದಕ್ಕೆ, **ವೇರು**

ಪೂರ್ವಾನುಭವತ್ತುಕ್ಕು ವೇರು ಪ್ರತಿ ಬನ್ಧಕ ಮಿಲ್ಲಾದ ಪಡಿಯಾಲೇ ಪ್ರ ಪತ್ತಿಕ್ಷಣಮುದಲಾಕ,(೧) "ಇಙ್ಗೇ ತಿರಿನ್ದೇರ್ಕ್ಕಿಳುಕ್ಕುತ್ತೇನ್" ಎನ್ರುಮ್ (೨) "ಇಚ್ಚುವೈತವಿರಯಾನ್ಪೋಯಿನ್ದಿರ ಲೋಕವಾಳು ಮಚ್ಚುವೈ

ಪ್ರತಿಬನ್ಧಕಮಿಲ್ಲಾದಪಡಿಯಾಲೇ-ಬೇರೆ ಯಾವ ಪ್ರತಿಬಂಧಕವೂ ಇಲ್ಲದಿರುವದರಿಂದ. ಹಾಗೇನಾದರೂ ಪ್ರತಿಬಂಧಕವುಂಟೋ ಎಂದರೆ ಈ ಸ್ವಾನುಮತಿಯೇ ಎಂದರೆ ಪ್ರಪನ್ನನ ಇಷ್ಟವೇ ಪ್ರತಿಬಂಧವು; ಪ್ರಪತ್ತಿಯಾದ ಕ್ಷಣವೇ ಬೇಕೆಂದು ಸ್ವಾನುಮತಿ ಇದ್ದರೆ ಆರ್ತಪ್ರಪನ್ನನಾಗುವದರಿಂದ ಪ್ರಪತ್ತ್ಯನುಷ್ಠಾನದ **ಉತ್ತರ** ಕ್ಷಣದಲ್ಲೇ ಅಭ್ಯುಪಗತಪ್ರಾರಬ್ಧಕರ್ಮನಾಶಮೂಲಕವಾಗಿಯೂ, ದೇಹಾವಸಾನ ಮೂಲಕವಾಗಿಯೂ ಮೋಕ್ಷಪ್ರಾಪ್ತಿಯು; ಹಾಗಲ್ಲದೆ ಕೆಲವು ಕಾಲ ಇಲ್ಲಿಯೇ ಇದ್ದು, ದಾಸನಾದ ತನಗೆ ಕೈಙ್ಕರ್ಯಮಾಡುವದೇ ಸ್ವರೂಪವಾದುದರಿಂದ, ಸರ್ವೇಶ್ವರನು ಪರಮಕೃಪಾಸೌಲಭ್ಯಾದಿಗಳ ಮೂಲಕ ಅರ್ಚಾವತಾರಿಯಾಗಿ ಅಲ್ಲಲ್ಲೇ ನೆಲೆಸಿರುವದರಿಂದ, ಅಂತಹಸ್ವಾಮಿಗೂ ತದ್ಭಕ್ತರಾದ ಭಾಗವತರುಗಳಿಗೂ ಕೈಙ್ಕರ್ಯವನ್ನೆಸಗುತ್ತಾ, ನಾಮಸಂಕೀರ್ತನಾದಿಗಳನ್ನು ಮಾಡುತ್ತಾ, ಶಾಸ್ತ್ರಜ್ಞಾನಸಂಪಾದಿಸುತ್ತಾ, ಅದನ್ನಿತರರಿಗೆ ಬೋಧಿಸುತ್ತಾ ಸ್ವಲ್ಪಕಾಲವಿಲ್ಲಿಯೇ ಇರಬೇಕೆಂಬ **ಸ್ವಾನುಮತಿಯಾಲೆ** - ಸ್ಥಾಪಿತವಾದ ಶರೀರವುಳ್ಳವರಿಗೆ ದೇಹಾವಸಾನವು ಸ್ವಲ್ಪಕಾಲ ವಿಳಂಬಿಸಿ ಮೋಕ್ಷವನ್ನು ಕೊಡುತ್ತದೆಂದು ಹೇಳಿ, ಮುಂದೆ **ಸ್ವಾನುಮತಿಯಾಲೇ ಸ್ಥಾಪಿತಮಾನಶರೀರತ್ತಿನ್ ಅವಸಾನ**ವೆಂದು ಹೇಳುತ್ತಾರೆ. ಹೀಗೆ **ಪ್ರಪತ್ತಿಕ್ಷಣಮುದಲಾಕ** - ಪ್ರಪದನಾನುಷ್ಠಾನಕ್ಷಣದಲ್ಲೇ ಮೊದಲಾದ, ಮೊದಲಾದ ಎಂಬುವದರಿಂದ ಕೆಲವು ಕಾಲ ಕಳೆದನಂತರದಲ್ಲಿ ಎಂಬುವದೂ ಸೂಚಿಸಲ್ಪಟ್ಟಿತು;

(೧) **ಇಙ್ಗೇ** - ಈ ಲೀಲಾವಿಭೂತಿಯಲ್ಲೇ, **ತಿರುನ್ದೇರ್ಕ್ಕ** - ಸಂಚರಿಸುತ್ತಿರುವ ನನಗೆ, **ಇಳುಕ್ಕುತ್ತುಂ** - ಉಂಟಾಗುವ ತೊಂದರೆಯು, **ಎನ್** - ಯಾವುದು, ಪರಮಕಾರುಣಿಕನಾದ ಭಗವಂತನು ಮನೋವಾಕ್ಕಾಯಗಳಿಂದಲೂ ಆತನನ್ನೂ ತದೀಯರಾದ ಭಾಗವತರನ್ನೂ ಕೈಂಕರ್ಯಮಾಡುವ ಹಾಗೆ ಕರುಣಿಸಿದುದಾದರೆ, ಈ ಲೀಲಾವಿಭೂತಿಯಲ್ಲೇ ಬಹುಕಾಲವಿರುವದರಲ್ಲಿ ದೋಷವೇನು ಎಂಬಭಿಪ್ರಾಯವು. **ಎನ್ರುಂ** - ಎಂದೂ,

(೨) **ಇಚ್ಚುವೈ** - ಈ ರಸಕ್ಕಿಂತ ಎಂದರೆ ಸರ್ವೇಶ್ವರನನ್ನು ನಾಮಸಂಕೀರ್ತನಮಾಡುವ ಆನಂದವನ್ನು, **ತವಿರ** - ಬಿಟ್ಟು, **ಯಾನ್** - ನಾನು, **ಪೋ**

(೧) ತಿರುವಾಯ್ಮೊಳಿ ೮.೧೦.೪. (೨) ತಿರುಮಾಲೈ ೨.

ಪೆರಿನುಮ್ ವೇಣ್ಡೇನ್" ಎನ್ರುಮ್, (೩) "ಏರಾರ್ ಮುಯಲ್ ವಿಟ್ಟು ಕ್ಕಾಕ್ಕೈಪ್ಪಿನ್ಪೋವದೇ" ಎನ್ರುಮ್, (೪) "ಸ್ನೇಹೋ ಮೇ ಪರಮೋ ರಾಜನ್ ತ್ವಯಿ ನಿತ್ಯಂ ಪ್ರತಿಷ್ಠಿತಃ । ಭಕ್ತಿಶ್ಚ ನಿಯತಾ ವೀರಭಾವೋ

ಯ್ - ಅರ್ಚಿರಾದಿಮಾರ್ಗದಲ್ಲಿ ಹೋಗಿ, **ಇನ್ದಿರಲೋಕಂ** - ಪರಮಪದವನ್ನು, **ಆಳುಂ** - ಆಳುವ, **ಅಚ್ಚುವೈ** - ಆನಂದವನ್ನು, **ಪೆರಿನುಂ** - ಹೊಂದಲು, **ವೇಣ್ಡೇನ್** - ಅಪೇಕ್ಷಿಸುವದಿಲ್ಲವು," **ಎನ್ರುಂ** - ಎಂದೂ; ಈ ಲೋಕದಲ್ಲೇ ಭಗವನ್ನಾಮಸಂಕೀರ್ತನದಿಂದುಂಟಾಗುವ ಆನಂದವೇ ನಿರತಿಶಯವಾಗಿರುವಲ್ಲಿ, ಅದನ್ನು ಬಿಟ್ಟುಬೇರೆ ಪರಮಪದಾನಂದವನ್ನೂ ಪ್ರಾರ್ಥಿಸುವದಿಲ್ಲವೆಂಬಭಿಪ್ರಾಯವು-

(೩) **ಏರ್** - ಯೋಗ್ಯವಾದ, **ಆರ್** - ಪೂರ್ಣವಾದ ಎಂದರೆ ಪರಮಭೋಗ್ಯವಾದ, **ಮುಯಲ್ ವಿಟ್ಟು** - ಮೊಲದಮಾಂಸವನ್ನು ಬಿಟ್ಟು. **ಕಾಕ್ಕೈ ಪಿನ್ಪೋವುದೇ** - ಕಾಗೆಯ ಮಾಂಸಕ್ಕಾಗಿ ಕಾಗೆಯ ಹಿಂದೆ ಹೋಗಬಹುದೇ ? ಎಂದರೆ ಸೌಲಭ್ಯ ಸೌಶೀಲ್ಯ, ವಾತ್ಸಲ್ಯಾದಿಗಳು ಹೆಚ್ಚಾಗಿ ಪ್ರಕಾಶಿಸುವ ಈ ಅರ್ಚ್ಯಾವತಾರಿಯಾದ ಕೃಪಾಸಾಗರನನ್ನು ಬಿಟ್ಟು ಬೇರೆ ಪರರೂಪಸ್ವಾಮಿಯನ್ನು ಏಕೆ ಅಪೇಕ್ಷಿಸಬೇಕೆಂಬ ತಾತ್ಪರ್ಯವು.

(೪) ಇದು ಆಂಜನೇಯನು ಶ್ರೀರಾಮನಿಗೆ ಹೇಳುವ ವಾಕ್ಯವು. **ಮೇ** - ನಿನ್ನನ್ನೇ ನಂಬಿ ನಿನ್ನಲ್ಲೇ ಚಿತ್ತವೃತ್ತಿಯುಳ್ಳ ನನಗೆ, **ಹೇ ರಾಜನ್** - ಎಲ್ಲರನ್ನೂ ನಿನ್ನ ಕಲ್ಯಾಣಗುಣಮೊದಲಾದವುಗಳಿಂದ ತೃಪ್ತಿಗೊಳಿಸುವನೇ, "ರಾಮ" ಎಂದು ಪಾಠಾಂತರವು, ಆಗ ಎಲ್ಲರ ಮನಸ್ಸಿನಲ್ಲೂ ರಮಿಸುವನೇ ಎಂಬರ್ಥವು. **ಪರಮಃ ಸ್ನೇಹಃ** - ಅತ್ಯನ್ತ ಉತ್ಕೃಷ್ಟವಾದ ಸ್ನೇಹವು, **ತ್ವಯಿ** - ಕರುಣಾಸಾಗರನಾದ, ಮತ್ತು ಶರಣಾಗತರಕ್ಷಕನೆಂಬ ಬಿರುದನ್ನು ವಹಿಸಿದ ವಿಭವಾವತಾರಿಯಾದ ನಿನ್ನಲ್ಲಿ, **ನಿತ್ಯಂ** - ಯಾವಾಗಲೂ, **ಪ್ರತಿಷ್ಠಿತಃ** - ಸ್ಥಿರವಾಗಿ ನಿಂತಿರುತ್ತದೆ. ಸ್ನೇಹವೆಂದರೆ ಸಖರಲ್ಲಿ ಮಾಡುವ ಪ್ರೀತಿಯು. ಹಾಗಾದರೆ ಶ್ರೀರಾಮನು ಆಂಜನೇಯನಿಗೆ ಸಮಾನನೇ ಎಂದರೆ ಹಾಗಲ್ಲವು ಈ ಸ್ನೇಹವಾದರೋ ಎಂಥಾದ್ದೆಂದರೆ ಭಕ್ತಿರೂಪವಾದುದೆಂದು ಹೇಳುತ್ತಾನೆ. **ಹೇ ವೀರ** - ವೀರ್ಯಗುಣವನ್ನು ಹೊಂದಿದವನೇ ವೀರ್ಯವೆಂದರೆ, ವಿಕಾರವನ್ನು ಹೊಂದದಿರುವಿಕೆ ; ಅಂತಹ ಗುಣವ

---

(೩) ಶಿರಿಯತಿರುಮೊಳಿ, ೧೬.　　(೪) ರಾಮಾ. ಉತ್ತ. ೪೦. ೧೫

ನಾನ್ಯತ್ರಗಚ್ಛತಿ,'' ಎನ್ರುಮ್, ಶೊಲ್ಲುಗಿರಪಡಿಯೇ ಇಶ್ಶರೀರತ್ತೋಡೆ ಯಿರುನ್ದು ಕೈಙ್ಕರ್ಯಾದ್ಯನುಭವಂ ಪಣ್ಣವೇಣು ಮೆಙ್ಗಿರ ಅಭಿಸನ್ಧಿಕ್ಕು ಕಾರಣಮಾನ ಅರ್ಚಾವತಾರಾದಿ ಸಙ್ಗಮಡಿಯಾಕ ವನ್ದಸ್ವಾನುಮತಿ ಯಾಲೆ ಸ್ಥಾಪಿತಮಾನ ಶರೀರತ್ತಿನ್ ಅವಸಾನತ್ತೈ ಎಲ್ಲೈ ಯಾಹ,

---

ನ್ನಳ, ಶ್ರೀರಾಮನೇ, **ಭಕ್ತಿಶ್ಚ** - ದಾಸನಾದವನು ಸ್ವಾಮಿಯಲ್ಲೂ, ಶಿಷ್ಯನಾದವನು ಗುರುವಿನಲ್ಲೂ, ಪುತ್ರನಾದವನು ಪಿತಾಮಾತಾವಿನಲ್ಲೂ ತೋರಿಸುವ ಪ್ರೀತಿಯೂ ಕೂಡ ನಿನ್ನ ವಿಷಯದಲ್ಲಿ, **ನಿಯತಾ** - ನಿಯತವಾದುದು. ನಿನಗೂ ನನಗೂ ಇರುವ ಸಂಬಂಧಗಳಿಂದ ಸ್ವಾಭಾವಿಕವಾಗಿ ಉಂಟಾದುದು ಎಂದು ತಾತ್ಪರ್ಯವು. ಭಕ್ತಿಯು **"ಪ್ರೀತಿರೂಪಮನುಧ್ಯಾನಂ ಭಕ್ತಿರಿತ್ಯಭಿಧೀಯತೇ"** ಎಂದು ಹೇಳಿರುವ ಹಾಗೆ ಗುರು, ಸ್ವಾಮಿ ಮೊದಲಾದವರುಗಳಲ್ಲಿ ಮಾಡುವ ಪ್ರೀತಿ ಪುರಸ್ಸರವಾದ ಧ್ಯಾನಕ್ಕೆ ಭಕ್ತಿ ಎಂದು ಹೆಸರು. ಆದುದರಿಂದ **ಭಾವಃ** - ಈರೀತಿಯಾದ ನನ್ನ ಮನೋಭಿಪ್ರಾಯವು, **ಅನ್ಯತ್ರ** - ಬೇರೇ ವಿಷಯದಲ್ಲಿ ಎಂದರೆ ಪರರೂಪವೇ ಮೊದಲಾದುದರಲ್ಲಿ, **ನಗಚ್ಛತಿ** - ಹೋಗುವದಿಲ್ಲವು ಎಂದರೆ ಉಂಟಾಗುವದಿಲ್ಲವು. ಮುಂದೆ,

> **"ಯಾವದ್ರಾಮ ಕಥಾಂ ವೀರ ಶ್ರೋಷ್ಯೇಽಹಂ ಪೃಥಿವೀತಲೇ।**
> **ತಾವಚ್ಛರೀರೇ ವತ್ಸ್ಯಂತಿ ಮಮ ಪ್ರಾಣಾಃ ನ ಸಂಶಯಃ ॥**

ಎಂದಿರುತ್ತದೆ. ನಾನು ಎದುವರಿವಿಗೆ ನಿನ್ನ ಕಥೆಗಳನ್ನು ಈ ಜಗತ್ತಿನಲ್ಲಿ ಕೇಳುತ್ತಿರುವೆನೋ, ಅದುವರಿವಿಗೆ ನನ್ನ ಪ್ರಾಣಗಳು ನನ್ನ ಶರೀರದಲ್ಲಿ ವಾಸಿಸುತ್ತವೆ, ಸಂದೇಹವಿಲ್ಲವು ಎಂದು ಹೇಳುತ್ತಾನೆ." **ಎನ್ರುಮ್** - ಎಂದು, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, **ಇಶ್ಶರೀರತ್ತೋಡೆ ಯಿರುನ್ದು** - ಈಗಿರುವ ಶರೀರದೊಂದಿಗೇ ಕೆಲವು ಕಾಲವಿದ್ದು, **ಕೈಙ್ಕರ್ಯಾದ್ಯನುಭವಮ್ ಪಣ್ಣವೇಣುಂ** - ಭಗವತ್ಕೈಂಕರ್ಯವೇ ಮೊದಲಾದವುಗಳ, (ಇಲ್ಲಿ **ಆದಿ**ಪದದಿಂದ ನಾಮಸಂಕೀರ್ತನಾದಿಗಳು ಹೇಳಲ್ಪಟ್ಟವು) ಅನುಭವವನ್ನು ಮಾಡತಕ್ಕದ್ದು, **ಎಙ್ಗಿರ ಅಭಿಸನ್ಧಿಕ್ಕು** - ಎಂಬ ಸಂಕಲ್ಪಕ್ಕೆ, ಕಾರಣವಾದ, **ಅರ್ಚಾವತಾರಾದಿ ಸಂಗಮಡಿಯಾಗ** - ಶ್ರೀರಂಗನಾಥ, ಶ್ರೀವರದರಾಜ, ಶ್ರೀನಿವಾಸ, ಶ್ರೀಲಕ್ಷ್ಮೀನಾರಾಯಣಾದಿ ಅರ್ಚಾವತಾರಸ್ವಾಮಿಯಲ್ಲಿರುವ ಪ್ರೀತಿಮೂಲಕವಾಗಿ, **ವನ್ದ** - ಬಂದ, **ಸ್ವಾನುಮತಿಯಾಲೆ ಸ್ಥಾಪಿತಮಾದ** - ತನ್ನ ಇಷ್ಟಾನುಸಾರವಾಗಿ ಸ್ಥಾಪಿಸಲ್ಪಟ್ಟ **ಶರೀರತ್ತಿನ್** - ಶರೀರದ, **ಅವಸಾನತ್ತೈ** - ಕೊನೆಯನ್ನು, **ಎಲ್ಲೆಯಾಗ ಉಡೈತ್ತಾಯ್** ಎಲ್ಲೆಯಾಗಿ ಹೊಂದಿದುದಾಗಿ, **ದೇಶಕಾಲಸ್ವರೂಪಪರಿಚ್ಛೇದವತ್ತಾ**

ಉಡೈತ್ತಾಯ್, ದೇಶಕಾಲ ಸ್ವರೂಪ ಪರಿಚ್ಛೇದವತ್ತಾಯ್ ಕೊಣ್ಡ್ಙ್ಗಣ್ಣಾಮ್ ಕೈಙ್ಕರ್ಯ ಫಲೋದ್ಗಮತ್ತೈಮುದಲಾಕ ವುಡೈತ್ತಾನ ಪರಿಪೂರ್ಣ ಕೈಙ್ಕರ್ಯ ಪರ್ಯನ್ತ ಮೋಕ್ಷಂ, ಫಲಂ.

ಯ್ ಕೊಂಡು - ಎಂದರೆ ಒಂದು ದೇಶದಲ್ಲಿ ಕೈಂಕರ್ಯವುಂಟು, ಒಂದು ದೇಶದಲ್ಲಿಲ್ಲದಿರೋಣವು, ಒಂದು ಕಾಲದಲ್ಲಿ ಉಂಟು, ಇನ್ನೊಂದು ಕಾಲದಲ್ಲಿಲ್ಲ, ಹೀಗೆ ದೇಶಕಾಲಪರಿಮಿತಿಯುಳ್ಳದ್ದು; ಮತ್ತು ಕೈಂಕರ್ಯದ ಸ್ವರೂಪವೇ ಪರಿಮಿತಿಯುಳ್ಳದು; ಹೀಗೆ ದೇಶಕಾಲಸ್ವರೂಪದಲ್ಲಿ ಪರಿಮಿತಿಯನ್ನು ಹೊಂದಿರುವ, **ಇಙ್ಗಣ್ಣಾಮ್ ಕೈಙ್ಕರ್ಯಫಲೋದ್ಗಮತ್ತೈ** - ಇಲ್ಲಿ ಪ್ರಾಪ್ತವಾಗುವ ಕೈಙ್ಕರ್ಯಫಲದ ಆರಂಭವೇ, **ಮುದಲಾಕ** - ಮುಂತಾದವನ್ನು, **ವುಡೈತ್ತಾನ** - ಹೊಂದಿದ, ಪರಿಪೂರ್ಣಕೈಂಕರ್ಯಪರ್ಯನ್ತವಾದ ಮೋಕ್ಷಫಲವು. ಈ **ದೊಡ್ಡ** ವಾಕ್ಯದಿಂದ ಪ್ರಪತ್ತಿಯ ಮಾಹಾತ್ಮ್ಯೆಯನ್ನೂ ಹೊರಪಡಿಸಿರುತ್ತಾರೆ. ಪ್ರಪತ್ತಿ ಎಂಥಾದ್ದೆಂಬುವದಕ್ಕೆ ಎಂಟು ವಿಶೇಷಣಗಳನ್ನು ಕೊಟ್ಟಿರುತ್ತಾರೆ. ಅವುಗಳಿಂದ ಈ ಪ್ರಪದನಮಾರ್ಗಕ್ಕೂ ಉಪಾಸನಾರೂಪವಾದ ಭಕ್ತಿಮಾರ್ಗಕ್ಕೂ ಇರುವ ವ್ಯತ್ಯಾಸವನ್ನು ತೋರ್ಪಡಿಸಿರುತ್ತಾರೆ.

ಪ್ರಪದನವು	ಭಕ್ತಿಮಾರ್ಗವು
೧. ಸರ್ವಾಧಿಕಾರವಾದುದು ಎಂದರೆ ಎಲ್ಲರೂ ಅನುಷ್ಠಿಸಬಹುದಾದುದು.	ತ್ರೈವರ್ಣದವರು ಮಾತ್ರ ಅನುಷ್ಠಿಸಬಹುದು.
೨. ಸಮಸ್ತ ಪಾಪಪುಣ್ಯಗಳನ್ನೂ ನಿವರ್ತ್ತಿಸುವದು. ಸಂಚಿತ ಆಗಾಮಿಗಳನ್ನೂ ಅನಭ್ಯುಪಗತ ಪ್ರಾರಬ್ಧವನ್ನೂ ಹೋಗಲಾಡಿಸಬಲ್ಲದು. ಆರ್ತನಾದರೆ ಅಭ್ಯುಪಗತವೂ ತೊಲಗುತ್ತದೆ.	ಸಂಚಿತ, ಆಗಾಮಿಗಳುತೊಲಗುವವು. ಪ್ರಾರಬ್ಧವನ್ನು ಅನುಭವಿಸಲೇಬೇಕು.
೩. ಅನುಷ್ಠಾನದ ಒಡನೆಯೇ ಕೃತಕೃತ್ಯತೆಯುಂಟಾಗುತ್ತದೆ.	ಬಹುಕಾಲಾನಂತರ ಉಪಾಸನಪೂರ್ಣವಾದ ನಂತರ ಫಲಕಾರಿಯು.
೪. ಅಶಕ್ತನಿಂದಅನುಷ್ಠಿಸಲ್ಪಡತಕ್ಕದ್ದು.	ಶಕ್ತನಿಂದ ಅನುಷ್ಠಿಸಲ್ಪಡತಕ್ಕದ್ದು.
೫. ಸಕೃತ್ಕರ್ತವ್ಯವಾದುದು.	ಅಸಕೃತ್ಕರ್ತವ್ಯವಾದುದು.

ಪ್ರಪದನವು	ಭಕ್ತಿಮಾರ್ಗವು
೧. ಶೀಘ್ರಫಲಪ್ರದವು, ದೇಹಾವಸಾನಾನಂತರವೇ ಉಂಟಾಗುತ್ತದೆ.	ವಿಳಂಬದಿಂದ ಫಲ, ಜನ್ಮಾಂತರವುಂಟಾದರೂ ಉಂಟಾಗಬಹುದು.
೨. ಅನುಷ್ಠಿಸಿದ ನಂತರ ಪ್ರತಿಬಂಧಕವಿಲ್ಲದುದು.	ಅನೇಕ ಪ್ರತಿಬಂಧಕಗಳಿಗೆ ಸಿಲುಕಿದುದು.
೩. ಇದಕ್ಕೆ ಯಾವುದರ ಅಪೇಕ್ಷೆಯೂ ಇಲ್ಲವು.	ಅಙ್ಗವಾದ ಪ್ರಪತ್ತಿಯ ಅಪೇಕ್ಷೆಯು ಉಂಟು.

ಹೀಗೆ ಎರಡಕ್ಕೂ ಇರುವ ವ್ಯತ್ಯಾಸವನ್ನು ವ್ಯಕ್ತಪಡಿಸಿ, ಈ ಪ್ರಪನ್ನನು ಅಪೇಕ್ಷಿಸಿದ ಕಾಲದಲ್ಲಿ ದೇಹಾವಸಾನವೂ ಫಲಪ್ರಾಪ್ತಿಯೂ ಉಂಟಾಗಬಹುದೆಂದು ಹೇಳಿ, ಆರ್ತನಿಗೆ ಪ್ರಪದನ ಉತ್ತರಕ್ಷಣದಲ್ಲೇ ಪ್ರಾಪ್ತವಾಗಬಹುದೆಂದೂ, ದೃಪ್ತನಿಗೆ ದೇಹಾವಸಾನವೂ, ಫಲಪ್ರಾಪ್ತಿಯೂ ಆತನ ಇಷ್ಟಾನುಸಾರ ವಿಳಂಬಿಸಿ, ಆತನು ಮುಂದೆ ಪ್ರಾಪ್ತವಾಗುವ ಕೈಂಕರ್ಯವನ್ನೇ, ಇಲ್ಲಿಯೇ ಕೈಕೊಂಡು ಅರ್ಚಾವತಾರಿಯಾಗಿರುವ ಸರ್ವೇಶ್ವರನಿಗೇನೆ ಸರ್ವವಿಧಕೈಂಕರ್ಯಗಳನ್ನೂ ಮಾಡುತ್ತಾ ಇದ್ದುಕೊಂಡಿರುವನೆಂದೂ, ಹೇಳಿರುತ್ತಾರೆ. ಇಲ್ಲಿ ಅರ್ಚಾವತಾರಿಯಾದ ಸ್ವಾಮಿಯನ್ನು ಅನುಭವಿಸುವ ಆನಂದವು ದೇಶಕಾಲಾದಿ ಪರಿಮಿತಿಯುಳ್ಳದುದಾದರೂ ಅಲ್ಲಿ ಪರಮಪದದಲ್ಲಿ ಅನುಭವಿಸುವ ಆನಂದಕ್ಕೇನು ಕಮ್ಮಿಯಾದುದಲ್ಲವೆಂದು ತಿಳಿಸುವದಕ್ಕಾಗಿ ನಮ್ಮಾಳ್ವಾರ್ರವರ ಮತ್ತು ವಾಲ್ಮೀಕಿ ಮಹರ್ಷಿಯ ಸೂಕ್ತಿಗಳನ್ನು ಉದಾಹರಿಸಿದುದಲ್ಲದೆ, ಆ ಮೋಕ್ಷವೆಂಬ ಫಲವು ಪರಿಪೂರ್ಣಕೈಂಕರ್ಯಪರ್ಯನ್ತವಾದುದೆಂದು ತಿಳಿಸಿರುತ್ತಾರೆ. ಆದರೆ ಇಲ್ಲಿಯೂ ಕೈಂಕರ್ಯಪ್ರಾಪ್ತಿ ಇರುವಾಗ ಪರಮಪದದಲ್ಲಿ ಕೈಂಕರ್ಯಾಭಿಲಾಷೆಯು ಹೇಗೆ? ಎಂದರೆ, ಇಲ್ಲಿನ ಕೈಂಕರ್ಯವಾದರೋ ದೇಶಕಾಲಾದಿ ಪರಿಚ್ಛಿತಿಯುಳ್ಳದ್ದಾಗಿಯೂ ಅನೇಕ ವಿಘ್ನಗಳುಳ್ಳದ್ದಾಗಿಯೂ ಇರುತ್ತದೆ. ಆ ಸ್ಥಾನವಿಶೇಷದಲ್ಲಿ ಪ್ರಾಪ್ತವಾಗುವ ಕೈಂಕರ್ಯವಾದರೋ ಅಪರಿಚ್ಛಿನ್ನವಾದುದಾಗಿ, ನಿರತಿಶಯವಾದುದಾಗಿ, ವಿಘ್ನಗಳೊಂದೂ ಇಲ್ಲದುದಾಗಿ, ಪರಿಪೂರ್ಣಾನುಭವರೂಪಕೈಂಕರ್ಯವಾದುದರಿಂದ ಅದರಲ್ಲಿ ಅಭಿಲಾಷೆಯುಂಟಾಗುವದು ಸ್ವಾಭಾವಿಕವಾದುವೇ ಎಂಬಭಿಪ್ರಾಯವು. ಆದುದರಿಂದ ಪ್ರಪತ್ತಿಯನ್ನನುಷ್ಠಿಸಿದ ಮೊದಲುಗೊಂಡು, ಪ್ರಪನ್ನನಾದ ಮೋಕ್ಷಾರ್ಥಿಯ ಇಚ್ಛಾನುಸಾರ, ಆತನು ಅಪೇಕ್ಷಿಸಿದ ಒಡನೆಯೇ ಯಾಗಲಿ ಅಥವಾ ಸ್ವಲ್ಪ ವಿಳಂಬಿಸಿ, ಅಂತೂ ದೇಹಾವಸಾನವಾದ ಒಡನೆಯೇ, ಈ ಪರಿಪೂರ್ಣಾನುಭವಪೂರ್ವಕ ಕೈಂಕರ್ಯಲಾಭವು ಪ್ರಾಪ್ತವಾಗುವದರಿಂದಲೇ ಆಶುಕಾರಿಯಾಯ್ ಎಂದು ಪ್ರಯೋಗಿಸಿರುತ್ತಾರೆ,

ಭಕ್ತಿ ಪ್ರಪತ್ತ್ಯೋಸ್ಸರ್ವಫಲಸಾಧನತ್ವೇ ಪ್ರಮಾಣಾನಿ

(೧) "ವರಂ ವರಯ ತಸ್ಮಾತ್ತ್ವಂ ಯಥಾಭಿಮತಮಾತ್ಮನಃ ।
ಸರ್ವಂ ಸಮ್ಪತ್ಸ್ಯತೇ ಪುಂಸಾಂ ಮಯಿ ದೃಷ್ಟಿಪಥಂ ಗತೇ" ॥

(೨) "ಕಿಂ ವಾ ಸರ್ವ ಜಗತ್ಸ್ರಷ್ಟುಃ ಪ್ರಸನ್ನೇ ತ್ವಯಿ ದುರ್ಲಭಂ."

ಮುಂದೆ ಈ ಭಕ್ತಿಪ್ರಪತ್ತಿಗಳಿಗೆ ಮೋಕ್ಷವನ್ನು ಸಾಧಿಸಿ ಕೊಡುವುದರೊಂದಿಗೆ ಇತರ ಐಹಿಕಸುಖರೂಪ ಪುರುಷಾರ್ಥಗಳನ್ನೂ ಕೂಡ ಸಾಧಿಸಿಕೊಡುವ ಸಾಮರ್ಥ್ಯವುಂಟೆಂದು ಹೇಳಲು ಪ್ರಾರಂಭಿಸಿ, ಈ ಇತರ ಫಲಗಳನ್ನುಂಟುಮಾಡುವದರಲ್ಲೂ ಯಥಾ ಪ್ರಕಾರ ವಿಳಂಬಾವಿಳಂಬಗಳುಂಟೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಭಕ್ತಿಪ್ರಪತ್ತಿಗಳು ಸರ್ವಫಲಸಾಧಕಗಳು

(೧) ಇದು ಶ್ರೀಮನ್ನಾರಾಯಣನು ಧೃವನನ್ನು ಕುರಿತು ಹೇಳುವ ವಾಕ್ಯವು. **ತಸ್ಮಾತ್**–ಯಾವ ಕಾರಣದಿಂದ ನನ್ನ ದರ್ಶನವು ಎಂದಿಗೂ ವಿಫಲವಾಗುವದಿಲ್ಲವೋ, ಆ ಕಾರಣದಿಂದ, **ತ್ವಂ** - ಇಷ್ಟಾರ್ಥ ಕಾಮಿಯಾದ ನೀನು, **ಆತ್ಮನಃ** – ನಿನ್ನ, **ಯಥಾಭಿಮತಃ** - ಇಷ್ಟಾನುಸಾರವಾಗಿ, **ವರಂ**-ವರವನ್ನು, **ವರಯ** - ಪ್ರಾರ್ಥಿಸು, **ಪುಂಸಾಂ** – ಮನುಷ್ಯರಿಗೆ, **ಮಯಿ** - ನಾನು, **ದೃಷ್ಟಿಪಥಂ ಗತೇ ಸತಿ** - ದೃಷ್ಟಿಮಾರ್ಗಕ್ಕೆ ಬೀಳುತ್ತಿರಲಾಗಿ, ಎಂದರೆ ನನ್ನ ಕಟಾಕ್ಷವೀಕ್ಷಣವು ಒದಗಿರಲಾಗಿ, **ಸರ್ವಂ ಸಮ್ಪತ್ಸ್ಯತೇ** - ಸಮಸ್ತವೂ ಪ್ರಾಪ್ತವಾಗುತ್ತದೆ. ಇದರಿಂದ ಸರ್ವೇಶ್ವರನು ಪ್ರಸನ್ನನಾಗಲು ಚತುರ್ವಿಧಪುರುಷಾರ್ಥಗಳೂ ಲಭಿಸುವವು ಎಂದು ಹೇಳಲ್ಪಟ್ಟಿತು.

(೨) **ಹೇ ಸರ್ವಜಗತ್ಸ್ರಷ್ಟಃ** - ಓ ಸಮಸ್ತ ಜಗತ್ತನ್ನೂ ಸೃಷ್ಟಿಸಿದ ಸರ್ವೇಶ್ವರನೇ, **ತ್ವಯಿಪ್ರಸನ್ನೇ** - ದಯಾಶಾಲಿಯಾದ ನೀನು ಪ್ರಸನ್ನನಾಗಲು **ಕಿಂ ವಾ ದುರ್ಲಭಂ** - ಯಾವುದು ತಾನೇ ದುರ್ಲಭವು? ಎಂದರೆ ಸರ್ವವೂ ಸುಲಭವಾಗಿ ಲಭಿಸುತ್ತವೆಂಬ ಭಾವವು. ಇದು ಧೃವನ ವಾಕ್ಯವು. "**ತ್ವತ್ಪ್ರಸಾದ**

---

(೧) ವಿ. ಪು. ೧. ೧೨. ೭೬. (೨) ವಿ. ಪು. ೧.೧೨.೭೯.

(೩) ತಸ್ಮಿನ್ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ,"
(೪) "ಕಿಂ ಲೋಕೇ ತದಿಹ ಪರತ್ರಚಾಸ್ತಿಪುಂಸಾಂ ಯದ್ವಿಷ್ಣುಪ್ರವಣಧಿಯಾಂ ನ ದಾಲ್ಭ್ಯಸಾಧ್ಯಂ,"

ಫಲಂ ಭುಙ್ಕ್ತೇ ತ್ರೈಲೋಕ್ಯಂ ಮಘವಾನಪಿ" ಎಂಬುವದು ಉತ್ತರಾರ್ಧವು. ಇದರಿಂದ ಭಕ್ತಿಯಿಲ್ಲದವನಿಗೆ ದುರ್ಲಭವಾದುದೂ ಕೂಡ ಭಕ್ತಿಯುಕ್ತನಿಗೆ ಸ್ವಾಮಿಯ ಅನುಗ್ರಹದಿಂದ ದೊರೆಯುತ್ತದೆಂಬ ಭಾವವು.

(೩) ಇದು ಪ್ರಹ್ಲಾದವಾಕ್ಯವು. **ತಸ್ಮಿನ್ ಪ್ರಸನ್ನೇ**-ಆ ಕೃಪಾಸಾಗರನು ಪ್ರಸನ್ನನಾಗಲು, **ಇಹ**-ಇಲ್ಲಿ, **ಅಲಭ್ಯಂ** - ಅಲಭ್ಯವಾದುದು, **ಕಿಮಸ್ತಿ** - ಯಾವುದು ತಾನೇ ಇರುತ್ತದೆ. ಎಂದರೆ ಸರ್ವವೂ ಲಭ್ಯವೇ ಸರಿ ಎಂಬಭಿಪ್ರಾಯವು.

"**ತಸ್ಮಿನ್ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ ।**
ಧರ್ಮಾರ್ಥಕಾಮೈರಲಮಲ್ಪಕಾಸ್ತೇ ॥
ಸಮಾಶ್ರಿತಾದ್ಬ್ರಹ್ಮತರೋರನಂತಾ ।
ನ್ನಿಸ್ಸಂಶಯೋಮುಕ್ತಿಫಲಪ್ರಪಾತಃ ॥

ಎಂಬುವದು ಪೂರಾ ಶ್ಲೋಕವು. ಸರ್ವೇಶ್ವರನ ಅನುಗ್ರಹದಿಂದ ಯಾವುದು ತಾನೇ ದುರ್ಲಭವು, ಚತುರ್ವಿಧಪುರುಷಾರ್ಥಗಳೂ ದೊರೆಯುವುವು. ಆದರೆ ಧರ್ಮ ಅರ್ಥ ಕಾಮಗಳು ಅಲ್ಪಫಲಗಳುಳ್ಳವುಗಳಾದುದರಿಂದ ಅವುಗಳು ಸಾಕು. ಇನ್ನು ಯಾವ ಪುರುಷಾರ್ಥವು ಸರ್ವೋತ್ಕೃಷ್ಟವೆಂದರೆ, ಪರಬ್ರಹ್ಮವೆಂಬುವ ಕಲ್ಪವೃಕ್ಷವನ್ನು ಚನ್ನಾಗಿ ಸಾಧ್ಯೋಪಾಯಗಳ ಮೂಲಕ ಆಶ್ರಯಿಸಿದುದಾದರೆ, ಮುಕ್ತಿ ಎಂಬ ಫಲವು ಕರಗತವಾಗುವದರಲ್ಲಿ ಸಂದೇಹವಿಲ್ಲವೆಂಬುವದು ಈ ಶ್ಲೋಕದ ಅಭಿಪ್ರಾಯವು.

(೪) **ಹೇದಾಲ್ಭ್ಯ** - ಓ ದಾಲ್ಭ್ಯನೇ, **ವಿಷ್ಣುಪ್ರವಣಧಿಯಾಂ**-ವಿಷ್ಣುವಿನಲ್ಲಿ ಭಕ್ತಿಯಿಂದ ಸಕ್ತವಾದ ಮನಸ್ಸುಳ್ಳ, **ಪುಂಸಾಂ** – ಮನುಷ್ಯರಿಗೆ **ಯತ್**-ಯಾವುದು, **ನ ಸಾಧ್ಯಂ** - ಸಾಧ್ಯವಲ್ಲವೋ, **ತತ್** - ಅದು, **ಇಹ** - ಇಲ್ಲಿಯೇ ಆಗಲಿ, **ಪರತ್ರಚ** - ಪರಲೋಕದಲ್ಲಿಯೇ ಆಗಲಿ, **ಕಿಮಸ್ತಿ** - ಯಾವುದು ತಾನೇ ಇದೆ? ಎಂದರೆ ಹಾಗೆ ಸಾಧ್ಯವಲ್ಲದುದು ಯಾವುದೂ ಇಲ್ಲವೆಂಬ ತಾತ್ಪರ್ಯವು.

---

(೩) ವಿ.ಪು. ೧. ೧೭. ೯೧.   (೪) ವಿಷ್ಣುಧರ್ಮ ೪೩.೪೬

(೫) ಫಲಮತ ಉಪಪತ್ತೇಃ'' ಎನ್ರುಮ್, ಶೊಲ್ಲುಗಿರಪಡಿಯೇ, ಸರ್ವೇಶ್ವರರ್ ಸಕಲ ಫಲ ಪ್ರದನಾಕೈಯಾಲೇ, ಅವನ್ ತಿರುವಡಿಗಳಿಲ್ ಪ್ರಪತ್ತಿ ಸಕಲ ಫಲ ಸಾಧನ ಮಾಕೈಯಾಲ್ ಇವ್ವಧಿಕಾರಿಗಳ್ ಇರುವರ್ಕ್ಕು ಮಿದು ಯಥಾಭಿಮತ ಫಲಹೇತು ವಾಯಿತ್ತು.

(೫) **ಅತಃ** - ಸರ್ವೋತ್ಕೃಷ್ಟವಾದ ಮಹಿಮೆಯುಳ್ಳ ಮತ್ತು ಸರ್ವಜ್ಞ ಸರ್ವಶಕ್ತನಾದ ಪರಬ್ರಹ್ಮನಿಂದಲೇ, **ಫಲಂ** - ಯಜ್ಞಯಾಗಾದಿಗಳ ಫಲವಾದ ಐಹಿಕಾದಿ ಭೋಗ ಮತ್ತು ಆತನನ್ನೇ ಉಪಾಸನೆ ಮಾಡಿದ ಕರ್ಮ ಫಲವಾದ ಮೋಕ್ಷಾನಂದ ರೂಪಗಳಾದ ಫಲವು ಸಿದ್ಧಿಸುತ್ತದೆ. ಏಕೆಂದರೆ:—**ಉಪಪತ್ತೇಃ** - ಕ್ಷಣಧ್ವಂಸಿಯಾದ ಕರ್ಮಕ್ಕೆ ಆ ಫಲಕೊಡುವ ಶಕ್ತಿಯಿಲ್ಲವು; ಪರಬ್ರಹ್ಮನೇ ಪರಮ ಕಾರುಣಿಕನಾಗಿಯೂ, ಸರ್ವಶಕ್ತನಾಗಿಯೂ, ಇರುವದರಿಂದ ಇಂತಹ ಫಲದಾಯಿಕ ಶಕ್ತಿಯು, ಆತನಿಗೇನೇ ಸಲ್ಲುತ್ತೆಯಾದುದರಿಂದ, ಎಂಬರ್ಥವು. **ಎನ್ರುಮ್** - ಹೀಗೆಲ್ಲಾ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ, **ಸರ್ವೇಶ್ವರರ್ ಸಕಲ ಫಲಪ್ರದನಾಕೈಯಾಲೇ** - ಸರ್ವೇಶ್ವರನು ನಾಲ್ಕು ವಿಧ ಪುರುಷಾರ್ಥಗಳಿಗೂ ಎಂದರೆ ಇಲ್ಲಿನ ಸುಖಭೋಗಗಳೂ, ಸ್ವರ್ಗಾದಿ ಲೋಕಗಳ ಸುಖಭೋಗಗಳೂ, ವೈಕುಂಠದ ನಿರತಿಶಯಾನಂದಾದಿ ಅನುಭವಾದಿಗಳೂ, ಇವೆಲ್ಲವನ್ನೂ ಕೊಡುವವನಾದುದರಿಂದ, **ಅವನ್ ತಿರುವಡಿಗಳಿಲ್ ಪ್ರಪತ್ತಿ** - ಅವನ ಚರಣದ್ವಂದದಲ್ಲಿ ಮಾಡುವ ಶರಣಾಗತಿಯು, **ಸಕಲ ಫಲಸಾಧನ ಮಾಕೈಯಾಲೇ** - ಮೇಲೆ ಹೇಳಿದ ಸಕಲ ಫಲಗಳಿಗೂ ಸಾಧನವಾದುದರಿಂದ, **ಇವ್ವಧಿಕಾರಿಗಳ್ ಇರುವರ್ಕ್ಕುಂ** - ಈ ಭಕ್ತಿನಿಷ್ಠ ಸ್ವತಂತ್ರಪ್ರಪತ್ತಿನಿಷ್ಠರಾದ ಇಬ್ಬರಿಗೂ, **ಇದು**-ಈ ಅನುಷ್ಠಿಸಿದ ಪ್ರಪತ್ತಿಯು, ಭಕ್ತಿಮಾರ್ಗದಲ್ಲಿ ಅಂಗವಾಗಿಯೂ, ಪ್ರಪತ್ತಿಮಾರ್ಗದಲ್ಲಿ ಸ್ವತಂತ್ರವಾದ ಅಂಗಿಯಾಗಿಯೂ ಅನುಷ್ಠಿಸಿದ ಪ್ರಪತ್ತಿಯು, **ಯಥಾಭಿಮತಫಲಹೇತುವಾಯಿತ್ತು** - ಅವರವರುಗಳ ಇಷ್ಟಾನುಸಾರ ಫಲಗಳಿಗೆ ಕಾರಣವಾಗುತ್ತದೆ. ಹೀಗೆ ಭಕ್ತಿಪ್ರಪತ್ತಿಗಳೆರಡರಲ್ಲೂ ಶರಣಾಗತಿಯು ಇರುವದರಿಂದ, ಸರ್ವೇಶ್ವರನ ಚರಣಾರವಿಂದಗಳಲ್ಲಿ ಹೀಗೆ ಮಾಡುವ ಶರಣಾಗತಿಯು ಸರ್ವಾಭೀಷ್ಟಪ್ರದವಾದುದರಿಂದ, ಈ ಎರಡು ಮಾರ್ಗಗಳಿಂದಲೂ ಸಮಸ್ತಫಲಗಳನ್ನು ಹೊಂದಬಹುದು ಎಂದು ಹೇಳಲ್ಪಟ್ಟಿತು. ಹೀಗೆ ಇವೆರಡು

(೫) ಶಾರೀ. ಸೂತ್ರ. ೩.೨.೩೭.

ಭಕ್ತೇಃ ಪ್ರಪತ್ತ್ಯತಿಶಯೇ ಪ್ರಮಾಣಾನಿ,

(೧) "ಚತುರ್ವಿಧಾ ಭಜನ್ತೇ ಮಾಂ" ಎನ್ಗಿರಪಡಿಯೇ ಉಪಾಸನಮ್ ಯಾದೊರುಪಡಿ ಚತುರ್ವಿಧಫಲತ್ತುಕ್ಕುಮ್ ಸಾಧನಮಾಯಿರಕ್ಕಿರದು, ಅಪ್ಪಡಿಯೇ

ಮಾರ್ಗಗಳೂ ಸಕಲಫಲಪ್ರದಗಳೆಂಬುವದಕ್ಕೆ ಪ್ರಮಾಣಗಳನ್ನು ಹೇಳಿ, ಅನಂತರ ಪ್ರಪತ್ತಿಯು ಈ ಫಲಗಳನ್ನು ವಿಳಂಬವಿಲ್ಲದೆ ಕೊಡಬಹುದಾದ ಪ್ರಯುಕ್ತ ಪ್ರಪತ್ತಿಯ ಮಹಿಮೆಯು ಉಪಾಸನ ಮಾರ್ಗಕ್ಕಿಂತ ಅತಿಶಯವಾದುದೆಂದು ತೋರ್ಪಡಿಸುತ್ತಾರೆ.

ಭಕ್ತ್ಯುಪಾಯಕ್ಕಿಂತಲೂ ಪ್ರಪತ್ತಿಯಲ್ಲಿ ಹೆಚ್ಚು ಮಹಿಮೆಯು

(೧) **ಚತುರ್ವಿಧಾಭಜನ್ತೇಮಾಂ** - ನನ್ನನ್ನು ನಾಲ್ಕು ವಿಧ ಭಕ್ತರು ಪೂಜಿಸುವರು; ಮುಂದಕ್ಕೆ,

"ಜನಾಸ್ಸುಕೃತಿನೋಽರ್ಜುನ !
ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ"

ಎಂದು ಇದೆ. ಸುಕೃತಿಗಳಾದ ಭಕ್ತರು ಆ ಸುಕೃತ ತಾರತಮ್ಯದಿಂದ ನಾಲ್ಕು ಬಗೆಯಾದವರು ; ಅವರು ಯಾರೆಂದರೆ:—**ಆರ್ತಃ**-ಐಶ್ವರ್ಯವನ್ನು ಕಳೆದುಕೊಂಡು ತತ್ಪ್ರಾಪ್ತಿಯನ್ನು ಅಪೇಕ್ಷಿಸುವವನು, **ಜಿಜ್ಞಾಸುಃ** - ಪ್ರಕೃತಿವಿಯುಕ್ತವಾದ ಆತ್ಮಸ್ವರೂಪವನ್ನು ಹೊಂದಬೇಕೆಂಬಪೇಕ್ಷೆಯುಳ್ಳವನು, **ಅರ್ಥಾರ್ಥೀ** - ಹೊಸದಾಗಿಐಶ್ವರ್ಯವನ್ನು ಅಪೇಕ್ಷಿಸುವವನು, **ಜ್ಞಾನೀ** – ಪರಮಾತ್ಮನನ್ನೇ ಹೊಂದಬೇಕೆಂಬಭಿಲಾಷೆಯುಳ್ಳವನು," "**ಎನ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, ಉಪಾಸನವು, **ಯಾದೊರಪಡಿ** - ಯಾವ ರೀತಿಯಲ್ಲಿ, **ಚತುರ್ವಿಧ ಫಲತ್ತುಕ್ಕುಂ** - ಎಂದರೆ ಐಹಿಕ ಅಥವಾ ಸ್ವರ್ಗಲೋಕಭೋಗ, ಕೈವಲ್ಯಪ್ರಾಪ್ತಿ, ಮೋಕ್ಷಾನುಭವಗಳಿಗೆ **ಸಾಧನ ಮಾಯಿರಕ್ಕಿರದು** - ಸಾಧಕವಾಗಿರುತ್ತದೋ, **ಅಪ್ಪಡಿಯೇ** - ಹಾಗೆಯೇ,

---

(೧) ಗೀ. ೭. ೧೬.

(೨) "**ತಾವದಾರ್ತಿ ಸ್ತಥಾವಾಂಛಾ ತಾವನ್ಮೋಹ ಸ್ತಥಾ ಸುಖಂ।**
ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ''
ಎಙ್ಗ್ನರ ಪಡಿಯೇ ಪ್ರಪತ್ತಿಯುಮ್ ಇಚ್ಚತುರ್ವಿಧ ಫಲತ್ತುಕ್ಕುಮ್ ಸಾಧನಮಾಕವಿರೆ ಮಹರ್ಷಿಗಳ್ ಅರುದಿ ಯಿಟ್ಟದು. ಇದಿಲ್ "ಅಶೇ

---

(೨) **ಯಾವತ್** - ಎಲ್ಲಿಯವರಿವಿಗೆ **ಅಶೇಷಾಘನಾಶನಂ** - ಸಮಸ್ತ ಪಾಪಗಳನ್ನೂ ನಾಶಮಾಡುವ, **ತ್ವಾಂ** - ನಿನ್ನನ್ನು, **ಶರಣಂ** - ರಕ್ಷಕನನ್ನಾಗಿ **ನ ಯಾತಿ** - ಹೊಂದುವದಿಲ್ಲವೋ, **ತಾವತ್** - ಅದುವರಿವಿಗೂ, **ಆರ್ತಿ** - ಐಶ್ವರ್ಯವನ್ನು ಕಳೆದುಕೊಂಡು ಅದನ್ನು ಅಪೇಕ್ಷಿಸುವವನ ಆರ್ತಿಯೂ, **ತಥಾ** - ಹಾಗೆಯೇ, **ತಾವತ್** - ಅದುವರಿವಿಗೂ, **ವಾಂಛಾ** - ಹೊಸದಾಗಿ ಐಶ್ವರ್ಯಾಭಿಲಾಷಿಯಾದ ಕೇವಲನಪೇಕ್ಷೆಯೂ, **ತಾವತ್** - ಅದುವರಿವಿಗೂ, **ಮೋಹಃ** - ಪ್ರಕೃತಿವಿಯುಕ್ತ ಆತ್ಮೋಪಾಸಕನ ಫಲಾಭಾವದಿಂದುಂಟಾದ ಮೋಹವು, **ತಥಾ** - ಹಾಗೆಯೇ, **ತಾವತ್** - ಅದುವರಿವಿಗೂ, **ಅಸುಖಂ** - ಪರಬ್ರಹ್ಮ ಪ್ರಾಪ್ತಿ ಇಲ್ಲದುದರಿಂದುಂಟಾದ ಜ್ಞಾನಿಯ ದುಃಖವೂ ಇರುತ್ತದೆ. ಶರಣಾಗತ ರಕ್ಷಕನನ್ನು ಶರಣ ಹೊಂದಿದರೆ, ಒಡನೆಯೇ ಈ ಆರ್ತಿ,ವಾಂಛಾ,ಮೋಹ,ಅಸುಖಗಳೆಲ್ಲಾ ತೊಲಗುತ್ತವೆಂಬ ಭಾವವು. **ಎಙ್ಗ್ನರಪಡಿಯೇ** – ಎಂದು ಮೇಲಿನ ಪ್ರಮಾಣದಲ್ಲಿ ಹೇಳಿರುವ ಹಾಗೆ, **ಪ್ರಪತ್ತಿಯುಂ** – ಈ ಪ್ರಪತ್ತಿಯೂ ಕೂಡ, **ಇಚ್ಚತುರ್ವಿಧಫಲತ್ತುಕ್ಕುಮ್ ಸಾಧನಮಾಕವಿರೆ** - ಈ ಮೇಲೆ ಹೇಳಿದ ನಾಲ್ಕು ವಿಧ ಫಲಗಳಿಗೂ ಸಾಧನವಾಗಿರುವ ಹಾಗೆ, **ಮಹರ್ಷಿಗಳ್ ಅರುದಿ ಯಿಟ್ಟದು** - ಮಹರ್ಷಿಗಳು ಲೋಕದಲ್ಲಿರುವವರಿಗೆಲ್ಲಾ ವಿವಾದವೆಲ್ಲಾ ತೀರುವ ಹಾಗೆ ಸಿದ್ಧಾಂತವಾಗಿ ತಿಳಿಸಿರುವದು. ಯಾವ ಮಹರ್ಷಿಗಳೆಂದರೆ ಶ್ರೀವ್ಯಾಸ, ಶ್ರೀಪರಾಶರರು. ಉಪಾಸನೆಗೆ "ಚತುರ್ವಿಧಾ ಭಜಂತೇ ಮಾಂ" ಎಂದು ಹೇಳಿರುವ ಹಾಗೆ ಚತುರ್ವಿಧ ಅಧಿಕಾರಿಗಳೂ ಅವರವರಿಗೆ ಯೋಗ್ಯವಾದ ಫಲಗಳೂಹೇಗೋ, ಹಾಗೆಯೇ ಪ್ರಪತ್ತಿಯಲ್ಲೂ, ನಾಲ್ಕು ವಿಧ ಅಧಿಕಾರಿಗಳೂ ಅವರವರಿಗೆ ಯೋಗ್ಯವಾದ ಫಲಗಳೂ ಉಂಟೆಂದು "**ತಾವದಾರ್ತಿಸ್ತದಾವಾಂಛಾ**'' ಎಂಬ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಈ ವಿಧವಾಗಿ ಈ "**ತಾವದಾರ್ತಿ**'' ಎಂಬ ಶ್ಲೋಕಕ್ಕೆ ಅರ್ಥಹೇಳಬೇಕೇ ವಿನಾ, ಇತರರು ಈ ಶ್ಲೋಕಕ್ಕೆ ಪರಂಪರಾರೂಪವಾಗಿ ಮೊದಲು **ಆರ್ತಿ**

---

(೨) ವಿ.ಪು.೧. ೯. ೭೩.

ಷಾಘನಾಶನ"ಮೆನ್ಗ್ಯಯಾಲುಮ್ ಆದರನ್ತ್ತೋಃ "**ತಾವತ್ತಾವತ್**" **ಎನ್ರು ಅಧಿಕಾರಮ್ ತೋರುಮಾವರ್ತಿಕ್ಕೈಯಾಲುಮ್ ಇವನಪೇಕ್ಷಿತ್ತ ಫಲಮೆಲ್ಲಾಮ್ ತಾನ್ಕೋಲಿನ ಕಾಲತ್ತಿಲೇ ಯಥಾಮನೋರಥಮ್ ಸಿದ್ಧಿಕ್ಕುಮ್.**

ಯೂ, ಅದರಿಂದ ವಾಂಛೆಯೂ, ವಾಂಛೆಯಿಂದ ಮೋಹವೂ, ಮೋಹದಿಂದ ಅಸುಖವೂ ಎಂದು ಹೇಳುವ ಅರ್ಥದಲ್ಲಿ ಸ್ವಲ್ಪವೂ ಸ್ವಾರಸ್ಯವಿಲ್ಲವೆಂಬಭಿಪ್ರಾಯವು. ಅದೂ ಅಲ್ಲದೆ ಹೀಗೆ **ತಾವತ್, ತಾವತ್** ಎಂದು ಪ್ರತಿಯೊಂದು ಆರ್ತಿ, ವಾಂಛಾ ಮುಂತಾದವುಗಳಿಗೆ ಇಟ್ಟುಕೊಳ್ಳತಕ್ಕದ್ದೆಂದು **ತಾವನ್ತೋಃ** ಎಂಬ ಪ್ರಯೋಗದಿಂದಲೂ, "**ತಥಾ**" ಎಂದು ಹೇಳಿರುವದರಿಂದಲೂ ಊಹಿಸಬಹುದು. ಈ ಶ್ಲೋಕದಲ್ಲಿ ಹೀಗೆ ಸ್ವಾರಸ್ಯವುಂಟೆಂದೂ, ಅದೂ ಅಲ್ಲದೆ ಪ್ರಪತ್ತಿಗೆ ಉಪಾಸನಕ್ಕಿಂತ ಮಹಿಮೆಯು ಹೆಚ್ಚೆಂದೂ, ತೋರಿಬರುತ್ತದೆಂದು ಮುಂದಿನ ವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ. ಹಿಂದಿನ ವಾಕ್ಯದಿಂದ ಎರಡಕ್ಕೂ ಚತುರ್ವಿಧಫಲಪ್ರದತ್ವ ಉಂಟೆಂದು ಪ್ರತಿಪಾದಿಸಿ ಅವುಗಳಿಗಿರುವ ವೈಲಕ್ಷಣ್ಯವನ್ನು ಮುಂದಿನ ವಾಕ್ಯಗಳಿಂದ ತೋರಿಸುತ್ತಾರೆ. **ಇದಿಲ್** - ಈ ಪ್ರಪತ್ತಿಯ ವಿಷಯದಲ್ಲಿ, **ಅಶೇಷಾಘನಾಶನಮ್ ಮೆನ್ಗ್ಯಯಾಲುಮ್** - ಸಮಸ್ತ ಪಾಪಗಳ ನಾಶ ಉಂಟೆಂದು ಹೇಳಿರುವದರಿಂದಲೂ, **ಆದರನ್ತ್ತೋಃ** - ಆದರ ಉಂಟಾಗುವದಕ್ಕಾಗಿ, ತಾವತ್ತಾವತ್ತೆಂದು, **ಅಧಿಕಾರಂ ತೋರುಮ್** - ಪ್ರತಿಯೊಂದು ಅಧಿಕಾರಿಯ ವಿಷಯದಲ್ಲೂ, **ಆವರ್ತಿಕ್ಕೈಯಾಲುಮ್** - ಆವರ್ತಿಸಿ ಪುನಃಪುನಃ ಹೇಳಿರುವದರಿಂದಲೂ, **ಇವನ್**- ಎಂದರೆ ಈ ಪ್ರಪತ್ತಿನಿಷ್ಠನು, **ಅಪೇಕ್ಷಿತ್ತಫಲಮೆಲ್ಲಾಮ್** ಅಪೇಕ್ಷಿಸಿದಫಲವೆಲ್ಲವೂ, **ಇವನ್ಕೋಲಿನಕಾಲತ್ತಿಲೆ** - ಇವನಪೇಕ್ಷಿಸಿದ ಕಾಲದಲ್ಲಿ, **ಯಥಾಮನೋರಥಂ** - ಇವನ ಇಷ್ಟಾನುಸಾರವಾಗಿ, ಒಡನೆ ಅಪೇಕ್ಷಿಸಿದರೆ ಒಡನೆಯೂ, ವಿಳಂಬವಾಗಿ ಬೇಕೆಂದು ಅಪೇಕ್ಷಿಸಿದರೆ ವಿಳಂಬವಾಗಿಯೂ, **ಸಿದ್ಧಿಕ್ಕುಮ್** - ಸಿದ್ಧಿಸುತ್ತದೆ. ಈ ವಾಕ್ಯದಿಂದ ಪ್ರಪತ್ತಿಗೆ ಎರಡುವಿಧ ಮಹಿಮೆಯುಂಟೆಂದು ಹೇಳಿರುತ್ತಾರೆ. ಮೊದಲನೆಯದಾಗಿ ಅಶೇಷಾಘನಾಶನನೆಂದರೆ ಎಲ್ಲಾ ಪಾಪಗಳನ್ನೂ ನಿವರ್ತಿಸುವ ಶಕ್ತಿಯೂ ಎಂದರೆ ಅನಭ್ಯುಪಗತಪ್ರಾರಬ್ಧವನ್ನೂ, ಅಭ್ಯುಪಗತಪ್ರಾರಬ್ಧಾಂಶವನ್ನೂ ಕೂಡ ಹೋಗಲಾಡಿಸುವ ಶಕ್ತಿಯು ಇದಕ್ಕುಂಟು. ಭಕ್ತ್ಯುಪಾಯಕ್ಕೆ ಈ ಶಕ್ತಿಯಿಲ್ಲವೆಂಬಭಿಪ್ರಾಯವು. ಎರಡನೆಯದಾಗಿ ಆ ಅಶೇಷಾಘನಾಶನ ವಿಶೇಷಣದಿಂದಲೇ ಶರಣಾಗತನು ಆರ್ತನಾಗಿ ಒಡನೆಯೇ ಅಪೇಕ್ಷಿಸಿದರೆ ತಕ್ಷಣದಲ್ಲೇ, ದೃಪ್ತನಾಗಿ ಅಪೇಕ್ಷಿಸಿದರೆ ಸ್ವಲ್ಪ ವಿಳಂ

ಇಪ್ಪಡಿಪ್ಪಟ್ಟ ವೇಱತ್ತೈ ನಿನೈತ್ತು, (೧) **"ಸತ್ಕರ್ಮನಿರತಾ ಶ್ಶುದ್ಧಾಸ್ಸಾಂಖ್ಯಯೋಗವಿದಸ್ತಥಾ । ನಾರ್ಹನ್ತಿ ಶರಣಸ್ಥಸ್ಯ ಕಲಾಕೋಟಿತಮೀಮಪಿ "ಎನ್ರು ಶೊಲ್ಲುಕಿರದು**

ಬಿಸಿ, ಹೀಗೆ **"ಇವನ್ನೊಕ್ಕಲಿನಕಾಲತ್ತಿಲೆ"** ಪ್ರಾಪ್ತವಾಗುತ್ತದೆ. ಮೋಕ್ಷದ ಹಾಗೆ ಇತರ ಫಲಗಳೂ ಪ್ರಾಪ್ತವಾಗುತ್ತವೆಂಬ ಭಾವವು. ಇದು ಭಕ್ತ್ಯುಪಾಯಕ್ಕಿಲ್ಲವು. ಭಕ್ತ್ಯುಪಾಯದಲ್ಲಿ ತುಂಬಾ ವಿಳಂಬಿಸಬಹುದು. ಹೀಗೆ ಪ್ರಪತ್ತಿಗೆ ಈ ಎರಡು ಅತಿಶಯಗಳುಂಟೆಂದು ಹೇಳಲ್ಪಟ್ಟಿತು. ಇದರಿಂದ ಭಕ್ತ್ಯುಪಾಯವು ನಿಂದಿಸಲ್ಪಟ್ಟಿತೆಂದು ಭಾವಿಸಕೂಡದು. ಏಕೆಂದರೆ ಕೊನೆಗೆ ಪ್ರಾಪ್ತವಾಗುವ ಫಲದಲ್ಲಿ ಏನೊಂದೂ ವ್ಯತ್ಯಾಸವಿಲ್ಲವು. ಇದನ್ನೇ ಮುಂದೆಯೂ ಸಮರ್ಥನೆಮಾಡಿ ಹೇಳುತ್ತಾರೆ. ಹೀಗೆ ಪ್ರಪತ್ತ್ಯುಪಾಯದಲ್ಲಿ ಅತಿಶಯ ಉಂಟೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ. **ಇಪ್ಪಡಿಪ್ಪಟ್ಟ** - ಈ ಮೇಲೆ ಉಪಪಾದಿಸಲ್ಪಟ್ಟ, **ಏತ್ತತ್ತೈ ನಿನೈತ್ತು**-ಅತಿಶಯವನ್ನು ಮನಸ್ಸಿನಲ್ಲಿಟ್ಟೇ, **ಸತ್ಕರ್ಮನಿರತಾಃಶುದ್ಧಾಃ**- "ಅವಿದ್ಯಯಾ ಮೃತ್ಯುಂ ತೀರ್ತ್ವಾ" ಎಂದು ಹೇಳಿರುವ ಹಾಗೆ ನಿತ್ಯನೈಮಿತ್ತಿಕಾದಿ ಕರ್ಮಯೋಗನಿಷ್ಠರಾಗಿ ಪರಿಶುದ್ಧರಾದವರೂ, **ಸಾಂಖ್ಯಯೋಗವಿಧಸ್ತಥಾ**-ಹಾಗೆಯೇ ಜ್ಞಾನಯೋಗ ಭಕ್ತಿಯೋಗನಿಷ್ಠರೂ **ಶರಣಸ್ಥಸ್ಯ**-ಪ್ರಪತ್ತ್ಯನುಷ್ಠಾನ ಮಾಡಿದವನ, **ಕೋಟಿತಮೀಂ**-ಕೋಟಿಭಾಗದಲ್ಲೊಂದಾದ, **ಕಲಾಮಪಿ**-ಭಾಗವನ್ನು ಕೂಡ, **ನಾರ್ಹನ್ತಿ**-ಹೋಲಲಾರರು; ಎಂದರೆ ಪ್ರಪನ್ನನಿಷ್ಠನ ಉಪಾಯವು ಅಷ್ಟು ಸರ್ವೋತ್ಕೃಷ್ಟವಾದುದೆಂಬಭಿಪ್ರಾಯವು, **ಎನ್ರುವನ್ ಶೊಲ್ಲುಗಿರದು** - ಎಂದು ಹೇಳಲ್ಪಟ್ಟಿರುತ್ತದೆ. ಹೀಗೆ ಅತಿಶಯ ಹೇಳಲು ಕಾರಣಗಳು ಪ್ರಪನ್ನನಿಗೆ ದೇಹಾವಸಾನದಲ್ಲೇ ಮೋಕ್ಷವೂ, ಆತನು ಅಪೇಕ್ಷಿಸಿದ ಕಾಲದಲ್ಲೇ ವಿಳಂಬವಿಲ್ಲದೆ ಚತುರ್ವಿಧ ಫಲಪ್ರಾಪ್ತಿಯೂ ಎಂಬ ಭಾವವು. ಈ ಶ್ಲೋಕದಲ್ಲಿ **"ಸತ್ಕರ್ಮ ನಿರತಾಃ ಶುದ್ಧಾಃ"** - ಎಂದು ಹೇಳಿರುವದರಿಂದ ಈ ನಿತ್ಯನೈಮಿತ್ತಿಕಾನುಷ್ಠಾನಗಳಿಂದ ಸಂಚಿತಪಾಪಗಳು ತೊಲಗುವವು, ಮುಂದಿನ ಪಾಪಗಳು ಲೇಪಿಸುವದಿಲ್ಲವು ಎಂದು ಶ್ರುತಿಯಲ್ಲೂ ಸೂತ್ರದಲ್ಲೂ ಹೇಳಿರುವದರಿಂದ, **ಶುದ್ಧಾಃ** - ಪವಿತ್ರರಾದವರು ಎಂಬ ಭಾವವು. ಈ ಶುದ್ಧಾಃ ಎಂಬ ಪದವು ಮಧ್ಯದಲ್ಲಿರುವದರಿಂದ **ಸಾಂಖ್ಯಯೋಗವಿದಃ** ಎಂಬುವದಕ್ಕೂ ವಿಶೇಷಣವಾಗಿಟ್ಟುಕೊಳ್ಳಬಹುದು ;

---

(೧) ಲಕ್ಷ್ಮೀತಂತ್ರ, ೧೭. ೬೨

ಇವನುಕ್ಕಿಙ್ಗಿರುನ್ದ ಕಾಲತ್ತಿಲ್ ಕೈಙ್ಕರ್ಯತ್ತಿಲ್ ವೈಷಮ್ಯಮ್ ತನ್ನೋಲುದಲಿಲ್ ವೈಷಮ್ಯತ್ತಾಲೆ ವನ್ದದು ; ಅದುತನಕ್ಕಡಿ ಪ್ರಾರಬ್ಧ ಸುಕೃತವಿಶೇಷಮ್.

"**ನಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ**" ಎಂದೂ, "**ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ**" ಎಂದೂ, ಗೀತೆಯಲ್ಲಿ ಹೇಳಿರುವದರಿಂದ, ಜ್ಞಾನಭಕ್ತಿಯೋಗದಲ್ಲಿರುವವರೂ **ಶುದ್ಧಾಃ** ಎಂಬ ತಾತ್ಪರ್ಯವು. ಹೀಗೆ ಕೋಟ್ಯಂಶದಲ್ಲಿ ಒಂದಂಶವನ್ನೂ ಕೂಡ ಈ ಕರ್ಮಯೋಗನಿಷ್ಠರೂ, ಜ್ಞಾನಯೋಗನಿಷ್ಠರೂ ಹೋಲಲಾರರು ಎಂದು ಹೇಳಿದರೆ, ಭಕ್ತ್ಯುಪಾಯವನ್ನು ಲಕ್ಷ್ಮೀತಂತ್ರವಾಕ್ಯರೀತ್ಯಾ ನಿಂದಿಸಿದ ಹಾಗಾಯಿತೆಂದು ಎಲ್ಲಿ ತಿಳಿಯುತ್ತಾರೋ ಎಂಬ ಭಯದಿಂದ ಅಮೋಘವಾದ ಉಪಾಸನಾರೂಪವಾದ ಉಪಾಯವು ನಿರಾಕರಿಸಲ್ಪಡಲಿಲ್ಲವೆಂದು ಮುಂದೆ ಹೇಳುತ್ತಾರೆ. ಇದರಿಂದ ಪ್ರಪತ್ತಿಯಲ್ಲಿ ಫಲಪ್ರಾಪ್ತಿಯಲ್ಲಿ ವಿಳಂಬವಿಲ್ಲವೆಂಬ ಅತಿಶಯಮಾತ್ರ ಹೇಳಲ್ಪಟ್ಟಿತೇ ವಿನಾ ಭಕ್ತಿಮಾರ್ಗವು ನಿಂದಿತವೆಂದು ಹೇಳಲ್ಪಡಲಿಲ್ಲವೆಂಬ ತಾತ್ಪರ್ಯವು.

ಹೀಗೆ ಪ್ರಪತ್ತಿಗೆ ಅತಿಶಯವಿದ್ದು ದಾದರೆ, ಎಲ್ಲರಿಗೂ ಇಲ್ಲಿರುವಾಗ ಕೈಙ್ಕರ್ಯಾಭಿಲಾಷೆಯು ಒಂದು ವಿಧವಾಗಿಲ್ಲದೆ, ಒಬ್ಬ ಪ್ರಪನ್ನರಿಗೆ ವಾಚಕಕೈಙ್ಕರ್ಯದಲ್ಲೂ, ಇನ್ನೊಬ್ಬರಿಗೆ ಕಾಯಕಕೈಙ್ಕರ್ಯದಲ್ಲೂ, ಮತ್ತೊಬ್ಬರಿಗೆ ಗೋಪುರ ಮಂಟಪಾದಿನಿರ್ಮಾಣದಲ್ಲೂ ಹೀಗೆಲ್ಲಾ ವ್ಯತ್ಯಾಸವಿರಲು ಕಾರಣವು ಅವರವರ ಪ್ರಾರಬ್ಧರೂಪವಾದ ಸುಕೃತ ವಿಶೇಷದಲ್ಲಿರುವ ತಾರತಮ್ಯವೆಂದು ಹೇಳುತ್ತಾರೆ. **ಇವನಕ್ಕು** - ಈ ಅದ್ವಾರಕ ಪ್ರಪತ್ತಿನಿಷ್ಠನಿಗೆ, **ಇಙ್ಗಿರುನ್ದಕಾಲತ್ತಿಲ್** - ಈ ಪೃಥಿವಿಯಲ್ಲಿರುವ ಕಾಲದಲ್ಲಿ, **ಕೈಙ್ಕರ್ಯತ್ತಿಲ್ ವೈಷಮ್ಯಮ್** - ಉಂಟಾಗುವ ಭಗವತ್ಕೈಙ್ಕರ್ಯಾದಿಗಳಲ್ಲಿ ತೋರುವ ವ್ಯತ್ಯಾಸವು, **ತನ್ನೋಲುದಲಿಲ್ ವೈಷಮ್ಯತ್ತಾಲೆ**- ತಾನು ಅಪೇಕ್ಷಿಸುವದರಲ್ಲಿರುವ ವ್ಯತ್ಯಾಸದಿಂದ, **ವನ್ದದು** - ಬಂದದ್ದು ಎಂದರೆ ಉಂಟಾದುದು : **ಅದುತನಕ್ಕಡಿ** - ಅಂತಹ ವ್ಯತ್ಯಾಸಕ್ಕೆ ಕಾರಣವು, **ಪ್ರಾರಬ್ಧ ಸುಕೃತವಿಶೇಷಮ್** - ಪ್ರಾರಬ್ಧ ಕರ್ಮವಾದ ಸುಕೃತವಿಶೇಷವು : ಎಂದರೆ ಈಗ ಫಲ ಕೊಡಲು ಪ್ರಾರಂಭಿಸಿರುವ ಸುಕೃತವಿಶೇಷವು ಎಂಬರ್ಥವು.

ಭಕ್ತಿಪ್ರಪತ್ತ್ಯೋಃ ಫಲಪ್ರಾಪ್ತಿಃ ಪಾರತನ್ತ್ರ್ಯಂಚ ಏಕರೂಪಮ್

ಅನ್ತಿಮಶರೀರಾನನ್ತರಂ ಪೆರುಮ್ ಪೇತ್ತಿಲ್ ಒರುವೈಷಮ್ಯಮಿಲ್ಲೈ ; ಪಾರತನ್ತ್ರ್ಯಮುಮ್ ಏಕರೂಪಂ.

(೧) " ಪಾರತನ್ತ್ರ್ಯಂ ಪರೇ ಪುಂಸಿ ಪ್ರಾಪ್ಯ ನಿರ್ಗತಬನ್ಧನಃ
ಸ್ವಾತನ್ತ್ರ್ಯಮತುಲಂ ಪ್ರಾಪ್ಯ ತೇನೈವ ಸಹ ಮೋದತೇ ॥"

ಭಕ್ತಿ ಪ್ರಪತ್ತಿಗಳಿಗೆ ಫಲಪ್ರಾಪ್ತಿಯೂ ಪಾರತನ್ತ್ರ್ಯವೂ ಒಂದೇ ವಿಧವಾದುದು.

ಅನ್ತಿಮ ಶರೀರಾನನ್ತರಂ ಕೊನೇ ಜನ್ಮದ ಶರೀರಾವಸಾನವಾದ ನಂತರ, **ಪೆರುಮ್ ಪೇತ್ತಿಲ್** – ಹೊಂದುವ ಫಲಪ್ರಾಪ್ತಿಯಲ್ಲಿ, **ಒರುವೈಷಮ್ಯಮಿಲ್ಲೈ** - ಈ ಭಕ್ತಿಪ್ರಪತ್ತಿಗಳೆರಡಕ್ಕೂ ಏನೊಂದೂ ವ್ಯತ್ಯಾಸವಿಲ್ಲವು. **ಪಾರತನ್ತ್ರ್ಯಮುಮ್ ಏಕರೂಪಂ** - ಸರ್ವೇಶ್ವರನಿಗೆ ಪರತಂತ್ರನಾಗಿರುವ ಭಾವವು ಇಬ್ಬರಿಗೂ ಒಂದೇ ವಿಧವಾದುದು. ಫಲಪ್ರಾಪ್ತಿಯಲ್ಲೂ, ಎಂದರೆ ಪರಿಪೂರ್ಣ ಭಗವದನುಭವದಿಂದ ಕೂಡಿದ ಕೈಂಕರ್ಯಪ್ರಾಪ್ತಿಯಲ್ಲೂ, ಮತ್ತು ಸರ್ವೇಶ್ವರನಿಗೆ ಸಂಪೂರ್ಣವಾಗಿ ಪರತಂತ್ರನಾಗಿರುವದರಲ್ಲೂ ಇಬ್ಬರೂ ಸಮಾನರು ಎಂಬ ತಾತ್ಪರ್ಯವು. ಆದರೆ ಸದ್ವಾರಕಪ್ರಪತ್ತಿನಿಷ್ಠನಾದವನಿಗೆ ಸ್ವಾತಂತ್ರ್ಯ ಉಂಟೆಂದು, "**ಸಸ್ವರಾಡ್ಭವತಿ**" ಎಂದೇ ಶ್ರುತಿಯಲ್ಲಿ ಹೇಳಿರುವದು ವಿರೋಧವಲ್ಲವೋ, ಆಗ ಭಕ್ತ್ಯುಪಾಯನಿಷ್ಠನು ಪಾರತಂತ್ರ್ಯನು ಹೇಗೆಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ. ಆ ಸ್ವಾತಂತ್ರ್ಯವನ್ನು ಹೇಳುವ ವಚನದ ತಾತ್ಪರ್ಯವೇನೆಂಬುವದನ್ನು ತಿಳಿಸುತ್ತಾರೆ. "**ಪರೇ ಪುಂಸಿ** – ಪರಮ ಪುರುಷನಲ್ಲಿ, **ಪಾರತನ್ತ್ರ್ಯಂ ಪ್ರಾಪ್ಯ** - ಪಾರತಂತ್ರ್ಯವನ್ನು ಹೊಂದಿ, **ನಿರ್ಗತ ಬನ್ಧನಃ** – ಹೋಗಲಾಡಿಸಲ್ಪಟ್ಟ ಸಂಸಾರಬಂಧ ಉಳ್ಳವನಾಗಿ, **ಅತುಲಂ** - ನಿರುಪಮವಾದ, **ಸ್ವಾತನ್ತ್ರ್ಯಂ ಪ್ರಾಪ್ಯ** - ಸ್ವಾತಂತ್ರ್ಯವನ್ನು ಹೊಂದಿ, **ತೇನೈವ ಸಹ** - ಆ ಪರಮಪುರುಷನೊಂದಿಗೆ, **ಮೋದತೇ** - ಆನಂದವನ್ನು ಹೊಂದುತ್ತಾನೆ," **ಎನ್ರು** - ಎಂಬದಾಗಿ, **ಫಲದಶೈಯಿಲ್** ಮೋಕ್ಷಫಲವನ್ನು ಹೊಂದಿರುವ ದೆಸೆಯಲ್ಲಿ, **ಚೊಲ್ಲುಗಿರ** - ಹೇಳಲ್ಪಟ್ಟಿರುವ, ಸ್ವಾತಂತ್ರ್ಯವು, **ಕರ್ಮವಶ್ಯನನ್ರಿಕ್ಕೆ** - ಕರ್ಮ-

(೧) ವಿಷ್ಣುತತ್ತ್ವಂ

ಎನ್ರು ಫಲದಶೆಯಿಲ್ ಪೊಲ್ಲಾಗಿರ ಸ್ವಾತನ್ತ್ರ್ಯಮುಮ್ ಕರ್ಮವಶ್ಯನನ್ರಿಕ್ಕೆ ಸರ್ವವಿಧಕೈಙ್ಕರ್ಯಯೋಗ್ಯನಾಗೈ ಎನ್ರು ಫಲಪಾದತ್ತಿಲೆ ನಿರ್ಣೀತಮ್.

ವಶ್ಯನಲ್ಲದೆ, **ಸರ್ವವಿಧಕೈಙ್ಕರ್ಯಯೋಗ್ಯನಾಗೈ** - ಸರ್ವೇಶ್ವರನಿಗೆ ಸಮಸ್ತವಿಧವಾದ ಕೈಂಕರ್ಯಗಳನ್ನು ಮಾಡಲು ಯೋಗ್ಯತೆಯನ್ನು ಹೊಂದುವನಾಗುವನು, **ಎನ್ರು** - ಎಂದು, **ಫಲಪಾದತ್ತಿಲೇ** - ಶಾರೀರಕ ಮೀಮಾಂಸಸೂತ್ರದ ನಾಲ್ಕನೇ ಅಧ್ಯಾಯದ ನಾಲ್ಕನೇ ಪಾದಕ್ಕೆ ಫಲಪಾದವೆಂದು ಹೆಸರು, ಏಕೆಂದರೆ ಮೋಕ್ಷಫಲಪ್ರಾಪ್ತಿಯನ್ನು ಉಪಪಾದನೆ ಮಾಡುತ್ತಿರುವುದರಿಂದ; ಆ ಪಾದದಲ್ಲಿ, **ನಿರ್ಣೀತಂ** - ವ್ಯಾಸಮಹರ್ಷಿ, ಶ್ರೀ ಭಾಷ್ಯಕಾರರುಗಳಿಂದ ನಿರ್ಣಯಿಸಲ್ಪಟ್ಟಿರುತ್ತದೆ. ಈತನಿಗೆ ಮೋಕ್ಷದೆಸೆಯಲ್ಲಿ ಸ್ವಾತಂತ್ರ್ಯ ಉಂಟಾಗುತ್ತದೆ ಎಂದರೆ ಕರ್ಮಗಳಿಗೆ ಇದುವರೆಗೆ ಅಧೀನನಾಗಿ ಪಾರತಂತ್ರ್ಯವಿತ್ತು, ಈಗ ಕರ್ಮಕ್ಕೆ ವಶ್ಯನಾಗಿರುವದು ತಪ್ಪಿತೆಂಬ ಭಾವನೇ ಹೊರತು, ಸರ್ವೇಶ್ವರನಿಗೂ ವಿಧೇಯನಲ್ಲದೆ ಸ್ವತಂತ್ರನೆಂಬರ್ಥವಲ್ಲವು. ಸರ್ವೇಶ್ವರನಿಗೆ ಈತನೂ ಪರತಂತ್ರನೇ ಎಂಬರ್ಥವು. ಹೀಗೆ ಸರ್ವೇಶ್ವರನಿಗೆ ಪರತಂತ್ರನಾಗಿರುವದು ಸದ್ವಾರಕ ಅದ್ವಾರಕ ಪ್ರಪತ್ತಿನಿಷ್ಠರಿಬ್ಬರಿಗೂ ಸಮಾನವು. ಈ ವಿಷಯವು ಶಾರೀರಕ ಮೀಮಾಂಸೆಯ ನಾಲ್ಕನೇ ಅಧ್ಯಾಯದ ನಾಲ್ಕನೇ ಪಾದದ ಯಾವ ಸೂತ್ರದಲ್ಲಿ ಪ್ರತಿಪಾದಿಸಲ್ಪಟ್ಟಿದೆ ಎಂದರೆ **"ಅತಏವ ಚಾನನ್ಯಾಧಿಪತಿಃ"** ಎಂಬ ಸೂತ್ರದಲ್ಲಿ; **ಅತಏವ** - **"ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಘತ್ಸೋಽಪಿಪಾಸಸ್ಸತ್ಯಕಾಮಸ್ಸತ್ಯಸಂಕಲ್ಪಃ"** ಎಂಬ ಆ ಶ್ರುತಿಮೂಲಕವಾಗಿಯೇ, ಮುಕ್ತನು, **ಅನನ್ಯಾಧಿಪತಿಃ** - ಸರ್ವೇಶ್ವರನಲ್ಲದೆ, ಮಿಕ್ಕ ಯಾವುದಕ್ಕೂ ಎಂದರೆ ಕರ್ಮಗಳಿಗೆ ಪಾರತಂತ್ರ್ಯನಲ್ಲವು. ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಇಲ್ಲಿ ಸ್ವಾತಂತ್ರ್ಯವೆಂದರೆ ಕರ್ಮಬಂಧದಿಂದ ಬಿಡಲ್ಪಟ್ಟ ಸ್ವಾತಂತ್ರ್ಯವು. ಪರಮಪುರುಷನ ವಿಷಯದಲ್ಲೂ ಸ್ವಾತಂತ್ರ್ಯವಲ್ಲವು. ಉಪಾಸನೆಯಲ್ಲಾಗಲಿ ಪ್ರಪತ್ತ್ಯನುಷ್ಠಾನಕಾಲದಲ್ಲಿಯಾಗಲಿ ಈತನು ಸರ್ವೇಶ್ವರನಿಗೆ ವಿಶೇಷ ಪಾರತಂತ್ರ್ಯವನ್ನು ತೋರಿಸಿರುವಾಗ ಫಲಪ್ರಾಪ್ತಿ ಕಾಲದಲ್ಲಿ ತತ್ಕ್ರತುನ್ಯಾಯಪ್ರಕಾರ ಪಾರತಂತ್ರ್ಯವೇ ಉಂಟೇ ಉಂಟೆಂಬುವದು ಸ್ವತಸ್ಸಿದ್ಧವು. ಕರ್ಮವಶ್ಯತೆ ಇಲ್ಲದ ಸ್ವಾತಂತ್ರ್ಯವೇ ಅನನ್ಯಾಧಿಪತಿತ್ವವೆಂದು ಹೇಳಲ್ಪಟ್ಟಿತು. ಈ ಅಭಿಪ್ರಾಯವನ್ನೇ ಶ್ರುತಿಯು **"ಸ ಸ್ವರಾಡ್ಭವತಿ"** (ಛಾಂ. ೮.೨೫.೨) ಎಂಬುವದರಿಂದ ಹೇಳಿತು. ಇದಕ್ಕೆ ರಂಗರಾಮಾನುಜಭಾಷ್ಯದಲ್ಲಿ ಸ್ವರಾಟ್ ಶಬ್ದಕ್ಕೆ **"ಸ್ವಯಮೇವ ರಾಜಾ, ಅಕರ್ಮವಶ್ಯಃ, ವಿಧಿನಿಷೇಧಕಿಙ್ಕರೋ ನ ಭವತೀತಿ ಯಾವತ್"** ಎಂದರೆ,

ವೇಣ್ಡು ಪ್ಪೆರು ಪ್ಪಯರ್ ವೀಡೆನ್ರರಿನ್ದು ವಿದಿವಕ್ಯೆಯಾಲ್ ।
ನೀಣ್ಡು ಕ್ಕುರುಕಿಯುಮ್ ನಿರ್ಕ್ಕನಿಲ್ಯೆಗಳುಕ್ಕೇರ್ಕ್ಕ ಮನ್ಬರ್ ॥
ಮೂಣ್ಡೊನ್ರಿಲ್ ಮೂಲವಿನ್ಯೆ ಮಾತ್ತುದಲಿಲ್ ಮುಕುನ್ದನಡಿ ।
ಪೂಣ್ಡನ್ರಿ, ಮ... ರುಪುಕಲೊನ್ರಿಲ್ಯೆ ಎನ ನಿನ್ರನರೇ॥ ೧೫ ।

"ತಾನೇ ರಾಜನಾಗಿ ...ರ್ಮವಶ್ಯನಲ್ಲದೆ, ಶಾಸ್ತ್ರದ ವಿಧಿನಿಷೇಧವಾಕ್ಯಗಳಿಗೆ ಅಧೀನನಾಗದೆ ಆಗುವನು" ಎಂದು ಅರ್ಥವನ್ನು ಬರೆದಿರುತ್ತಾರೆ. **"ತೇನೈವ ಸಹ ಮೋದತೇ"** ಎಂಬುವದರಿಂದ **ಸೋಽಶ್ನುತೇ ಸರ್ವಾ ಕಾಮಾ ಸಹ ಬ್ರಹ್ಮಣಾ ವಿಪಶ್ಚಿತಾ"** ಎಂಬ ಶ್ರುತ್ಯರ್ಥವು ಉಪಪಾದಿಸಲ್ಪಟ್ಟಿತು.

ಅಶಕ್ತನಾದ ಅಕಿಂಚನನು ಭಕ್ತಿಯೋಗಸ್ಥಾನದಲ್ಲಿ ಪ್ರಪತ್ತಿಯನ್ನನುಷ್ಠಿಸುವನು, ಶಕ್ತನಾದವನು ಭಕ್ತಿಯೋಗಕ್ಕೆ ಅಜ್ಗವಾಗಿ ಪ್ರಪತ್ತಿಯನ್ನನುಷ್ಠಿಸುವನು. ಹೀಗೆ ಈ ಎರಡು ಅದ್ವಾರಕ ಸದ್ವಾರಕ ಪ್ರಪತ್ತಿಮಾರ್ಗಗಳೇ, ಮೋಕ್ಷಕ್ಕೆ ಸಾಧಕನಾದ ಮಾರ್ಗಗಳೆಂದು ಹಿಂದೆ ಹೇಳಿದ ಅಭಿಪ್ರಾಯವನ್ನೇ ಮುಂದಿನ ಪಾಶುರದಿಂದ ಸಂಗ್ರಹಿಸಿ ಹೇಳುತ್ತಾರೆ.

ಅರ್ಥ—ವೇಣ್ಡುಂ-ನಮ್ಮಿಂದ ಅಪೇಕ್ಷಿಸಲ್ಪಟ್ಟ, **ಪೆರುಂಪಯರ್**-ಮಹಾಫಲವು,**ವೀಡೆನ್ರು** - ಮೋಕ್ಷವೆಂದು, **ಅರಿನ್ದು**- ಶಾಸ್ತ್ರಗಳಿಂದಲೂ ಉಪದೇಶದಿಂದಲೂ, ಮೋಕ್ಷವೇ ನಿರತಿಶಯವಾದ ಫಲವೆಂದೂ ಮಿಕ್ಕವೆಲ್ಲಾ ಅಲ್ಪಾಸ್ಥಿರವಾದವೆಂದೂ ತಿಳಿದು,**ವಿದಿವಕ್ಯೆಯಾಲ್**-ಅವರವರುಗಳ ಮಾಡಿದ ಸುಕೃತತಾರತಮ್ಯರೀತ್ಯಾ,**ನೀಣ್ಡುಂ** - ದೀರ್ಘವಾಗಿಯೂ ಎಂದರೆ ಕಾಲವಿಳಂಬದಿಂದ ಫಲಕಾರಿಯಾಗಿಯೂ, **ಕುರಿಕಿಯುಮ್**- ಹ್ರಸ್ವವಾಗಿಯೂ ಎಂದರೆ ಅಲ್ಪಕಾಲದಲ್ಲಿ ಫಲಕಾರಿಯಾಗಿಯೂ, **ನಿರ್ಕ್ಕನಿಲ್ಯೆಗಳಕ್ಕು**-ಇರುವ ಸ್ಥಿತಿಗಳಿಗೆ ಎಂದರೆ ಅನುಷ್ಠಾನಗಳಿಗೆ, **ಏರ್ಕ್ಕುಮ್**–ಯೋಗ್ಯರಾಗಿರುವ, **ಅನ್ಬರ್** - ಭಕ್ತರಾದ ಮುಮುಕ್ಷುಗಳು; ಎಂದರೆ ಸುಕೃತಪರಿಪಾಕದಿಂದ ದೀರ್ಘಕಾಲ ಉಪಾಸನಾನಂದವನ್ನನುಷ್ಠಿಸಿ ಪರಬ್ರಹ್ಮಸಾಕ್ಷಾತ್ಕಾರರೂಪ ಆನಂದವನ್ನನುಭವಿಸುವ ಭಕ್ತಿಯೋಗನಿಷ್ಠರೂ, ಮತ್ತೂ ಬೇರೆ ಸುಕೃತಪರಿಪಾಕದಿಂದ ಶರಣಾಗತಿಯನ್ನನುಷ್ಠಿಸಿ ಇಲ್ಲಿಯೇ ಭಗವದ್ಭಾಗವತ ಕೈಂಕರ್ಯಾನಂದವನ್ನನುಭವಿಸುತ್ತಾ ಅಲ್ಪ ಕಾಲದಲ್ಲೇ ಫಲವನ್ನು ಹೊಂದುವ ಪ್ರಪನ್ನರೂ, ಎಂಬಭಿಪ್ರಾಯವು; **ಒನ್ರಿಲ್** - ಇವೆರಡುಪಾಯಗಳಾದ ಭಕ್ತಿಪ್ರಪತ್ತಿಗಳಲ್ಲಿ ಒಂದರಲ್ಲಿ, **ಮೂಣ್ಡು** - ಪ್ರವರ್ತಿಸಿ, ಎಂದರೆ ಮುಕ್ತಿಸಾಧನವಾಗಿ ಸ್ವೀಕರಿಸಿ, **ಮೂಲವಿನ್ಯೆ** - ಈ ಸಂಸಾರಕ್ಕೆ ಕಾರಣಭೂತವಾದ ಪಾಪಗಳನ್ನು, **ಮಾತ್ತುದಲಿಲ್** - ಹೋಗಲಾಡಿಸುವದರಲ್ಲಿ, **ಮುಕುನ್ದನಡಿಪೂಣ್ಡನ್ರಿ** - ಮೋಕ್ಷದಾಯ

ಕನಾದ ಶ್ರೀಮನ್ನಾರಾಯಣನ ಚರಣವನ್ನು ಶರಣವಾಗಿ ಪರಿಗ್ರಹಿಸುವದರ ವಿನಾ,
ಆತನ ಪಾದದಲ್ಲಿ ಮಾಡುವ ಶರಣಾಗತಿ ವಿನಾ ಎಂಬ ಭಾವವು, **ಮುಗ್ ರು** -
ಮತ್ತೆ ಯಾವ, **ಪುಕಲೊನ್ರು** - ಉಪಾಯ ಯಾವದೊಂದೂ, **ಇಲ್ಲೈ ಎನ** -
ಇಲ್ಲವು ಎಂಬದಾಗಿ, **ನಿನ್ರನರೇ**--ತತ್ವದರ್ಶಿಗಳಾದ ನಮ್ಮ ಆಚಾರ್ಯರು ನಿಂತರಲ್ಲವೇ
ಎಂದರೆ ಸ್ಥಾಪಿಸಿದರಲ್ಲವೇ !

ತಾತ್ಪರ್ಯ—ನಮ್ಮ ನಮ್ಮಾಳ್ವಾರ ಪ್ರಭೃತಿಗಳಾದ ಆಳ್ವಾರುಗಳೂ, ದರ್ಶನ
ಸ್ಥಾಪರುಗಳಾದ ನಾಥಮುನಿ, ಆಳವಂದಾರ್ ಶ್ರೀ ಭಾಷ್ಯಕಾರರುಗಳೂ, ಮತ್ತೂ
ಅವರ ಶಿಷ್ಯಪ್ರಶಿಷ್ಯರುಗಳೆಲ್ಲಾ ಮೋಕ್ಷೋಪಾಯಗಳು ಎರಡೇ ಎಂದೇ ಸ್ಥಾಪಿಸಿ
ದರು ಎಂಬರ್ಥವು. ಶ್ರೀ ಗೀತೆಯಲ್ಲಿ ಉಪಪಾದಿಸಿರುವ ಹಾಗೆ ಶಕ್ತನಿಗೆ ಸದ್ವಾರಕ
ಪ್ರಪತ್ತಿಯಾದ ಭಕ್ತಿಯೋಗವೂ, ಅಶಕ್ತನಿಗೆ ಅದ್ವಾರಕಪ್ರಪತ್ತಿಯಾದ ಭರನ್ಯಾ
ಸವೂ, ಇವೆರಡೇ ಮುಕ್ತಿಸಾಧನವಾದ ಸಾಧ್ಯೋಪಾಯಗಳೆಂದು ಹೇಳುತ್ತಾರೆ.
ಎರಡರಲ್ಲೂ **ಮುಕುನ್ದನ ಅಡಿಯಲ್ಲಿ** ಶರಣಾಗತಿಯು ಆವಶ್ಯಕವೆಂದು ತಿಳಿಸು
ತ್ತಾರೆ. ಭಕ್ತಿಯೋಗದಲ್ಲಿ ಶರಣಾಗತಿಯು ಅಂಗವಾಗಿ ಅನುಷ್ಠಿಸಲ್ಪಡುತ್ತದೆ ;
ಭರನ್ಯಾಸದಲ್ಲಿಯಾದರೋ ಉಪಾಸನೆಯ ಸ್ಥಾನದಲ್ಲೇ ಶರಣಾಗತಿಯು ಅಙ್ಗಿ
ಯಾಗಿ ಅನುಷ್ಠಿಸಲ್ಪಡುತ್ತದೆ. ಹೀಗೆ ಎರಡರಲ್ಲೂ ಆವಶ್ಯಕವಾದುದರಿಂದಲೇ
ಮುಕುಂದನಡಿ ಪೂಣ್ಡನ್ರಿ ಮತ್ತೋರ್ ಪುಕಲೊನ್ರಿಲ್ಲೈ, ಈ ಎರಡು
ಮಾರ್ಗಗಳಲ್ಲೂ ಅನುಷ್ಠಿಸುವ ಸದ್ವಾರಕ ಅದ್ವಾರಕ ಶರಣಾಗತಿಯಲ್ಲದೆ ಬೇರೆ
ಯಾವ ಮಾರ್ಗವೂ ಇಲ್ಲವೆಂದು ಹೇಳಲ್ಪಟ್ಟಿತು. ಮುಕ್ತಿಫಲವೇನೋ ಎರಡ
ಕ್ಕೂ ಸಮವೆಂದು ತೋರಿಸುವದಕ್ಕಾಗಿ, **ವೇಂಡುಂ ಪೆರುವ್ಪಯರ್ ವೀಡೆನ್ರ**
ರಿನ್ದು ಎಂದು ಪ್ರಯೋಗಿಸಿರುತ್ತಾರೆ. ಆದರೆ ಹೀಗೆ ಎರಡಕ್ಕೂ ಒಂದೇ ಫಲ
ವಾದ ಪಕ್ಷದಲ್ಲಿ ಹೀಗೆ ಬೇರೆಬೇರೆ ಉಪಾಯಗಳನುಷ್ಠಾನವೇತಕ್ಕೆ ಎಂಬ ಶಂಕಾ
ನಿವಾರಣಾರ್ಥವಾಗಿ **ವಿಧಿವಕೈಯಾಲ್** ಎಂದು ಪ್ರಯೋಗಿಸಿರುತ್ತಾರೆ. ಅವರ
ವರುಗಳ ಸುಕೃತ ತಾರತಮ್ಯಾನುಸಾರವಾಗಿ ಈ ಸದ್ವಾರಕ ಅದ್ವಾರಕ ಪ್ರಪತ್ತ್ಯನು
ಷ್ಠಾನವನ್ನು ಮಾಡುತ್ತಾರೆ. ಸದ್ವಾರಕನಿಷ್ಠನಿಗೆ ಆತನ ಸುಕೃತಾನುಸಾರವಾಗಿ
ಉಪಾಸನದಲ್ಲಿ ಚಿರಕಾಲವಿದ್ದು ಪರಬ್ರಹ್ಮಸಾಕ್ಷಾತ್ಕಾರಸುಖವನ್ನನುಭವಿಸಿ ಪ್ರಾರ
ಬ್ಧಕರ್ಮಾನುಭವಾನಂತರ ಮೋಕ್ಷಪ್ರಾಪ್ತಿಯೆಂದು ಸ್ವಾಮಿಯು ಸಂಕಲ್ಪಿಸಿರು
ವನು ; ತದನುಸಾರವಾಗಿ **ನೀಂಡುಂ ನಿಕರ್ಂ ನಿಲ್ಲೈಕ್ಕು** ಯೋಗ್ಯನು, ಎಂದರೆ
ಕಾಲವಿಳಂಬದಿಂದ ಫಲಪ್ರಾಪ್ತಿಯಾಗುವ ಭಕ್ತಿಯೋಗಕ್ಕೆ ಯೋಗ್ಯನು. ಅದ್ವಾ
ರಕನಿಷ್ಠನಿಗೆ ಆತನ ಸುಕೃತ ವಿಶೇಷಾನುಸಾರವಾಗಿ ಸಕೃತ್ ಮಾಡುವ ಭರನ್ಯಾಸ
ವನ್ನು ಅನುಷ್ಠಿಸಿದ ನಂತರ ಕ್ಷಿಪ್ರದಲ್ಲೇ ದೇಹಾವಸಾನಾನಂತರವೇ ಮೋಕ್ಷಪ್ರಾಪ್ತಿ

ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುನ್ದೋ ನಿಜಪದಂ
ಪ್ರಪನ್ನಶ್ಚ ದ್ವೇಧಾ ಸುಚರಿತ ಪರಿಪಾಕಭಿದಯಾ ।

ಯೆಂದು ಸ್ವಾಮಿಯು ಸಙ್ಕಲ್ಪಿಸಿರುವನು; ತದನುಸಾರವಾಗಿ **ಕುರುಕಿಯುಂ ನಿರ್ಭರಂ ನಿಲ್ಲೈಕ್ಕು** ಯೋಗ್ಯನು ಎಂದರೆ ಅಲ್ಪಕಾಲದಲ್ಲೇ ಫಲಕಾರಿಯಾಗಿರುವ ಪ್ರಪದನಕ್ಕೆ ಯೋಗ್ಯನು ಎಂದು ಹೇಳಿರುತ್ತಾರೆ. ಎರಡಕ್ಕೂ ಹಿಂದೆ ಉಪಪಾದಿಸಿದ ಹಾಗೆ ಈ ಸ್ವಲ್ಪ ವ್ಯತ್ಯಾಸವೇ ವಿನಾ, ಮಿಕ್ಕ ಎಲ್ಲಾ ಪಾಪಗಳನ್ನೂ ಹೋಗಲಾಡಿಸುವ ಶಕ್ತಿಯುಂಟು. ಶರಣಾಗತಿಗೆ ಅಂತಹ ಮಾಹಾತ್ಮ್ಯೆಯುಂಟೆಂದು **"ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರಂತಿತೇ"** (ಗೀ. ೭. ೧೪) "ನನ್ನ ಚರಣಾರವಿಂದವನ್ನು ಶರಣವಾಗಿ ಯಾರು ಆಶ್ರಯಿಸುತ್ತಾರೋ ಅವರು ಈ ಸಂಸಾರರೂಪವಾದ ಪ್ರಕೃತಿಸಂಬಂಧವನ್ನು ದಾಟುವರು" ಎಂದು ಶ್ರೀ ಕೃಷ್ಣ ಪರಮಾತ್ಮನು ಉಪದೇಶಿಸಿರುತ್ತಾನೆ. ಆದುದರಿಂದ ಅಂತಹ ಶರಣಾಗತಿಯನ್ನು ಒಳಗೊಂಡಿರುವ ಈ ಸದ್ವಾರಕ ಅದ್ವಾರಕ ಪ್ರಪತ್ತಿಗಳೇ ಮೋಕ್ಷೋಪಾಯಗಳು. ಇನ್ನು ಯಾವುವೂ ಅಲ್ಲವೆಂಬ ಭಾವವು.

ಅವತಾರಿಕೆ. ಈ ಮೇಲೆ ಹೇಳಿದಭಿಪ್ರಾಯವನ್ನೇ ಒಂದು ಸಂಸ್ಕೃತ ಶ್ಲೋಕ ಮೂಲಕ ಸಂಗ್ರಹಿಸಿ, ಮೋಕ್ಷಾಧಿಕಾರಿಗಳಿಬ್ಬರು ಎಂದು ಅಧಿಕಾರವಿಭಾಗವನ್ನು ಪಪಾದಿಸುತ್ತಾರೆ. ಅಧಿಕಾರಿಗಳು—(೧) ಸದ್ವಾರಕ ಪ್ರಪತ್ತಿನಿಷ್ಠನು, ಈತನು ಭಕ್ತಿಯೋಗನಿಷ್ಠನೆಂದೂ, ಅಙ್ಗಪ್ರಪತ್ತಿನಿಷ್ಠನೆಂದೂ, ಉಪಾಸನಾನಿಷ್ಠನೆಂದೂ, ಗೂರೂಪಾಯನಿಷ್ಠನೆಂದೂ, ಹೀಗೆಲ್ಲಾ ಹೇಳಲ್ಪಡುವನು. (೨) ಅದ್ವಾರಕ ಪ್ರಪತ್ತಿನಿಷ್ಠನು, ಈತನಿಗೆ ಪ್ರಪತ್ತಿನಿಷ್ಠನೆಂದೂ, ಅಥವಾ ಸ್ವತಂತ್ರ ಪ್ರಪತ್ತಿನಿಷ್ಠನೆಂದೂ, ಭರನ್ಯಾಸ, ಅಥವಾ ಪ್ರಪದನ, ಅಥವಾ ಶರಣಾಗತಿನಿಷ್ಠನೆಂದೂ, ಲಘೂಪಾಯನಿಷ್ಠನೆಂದೂ, ಹೇಳಲ್ಪಡುವನು; ಹೀಗೆ ಮೋಕ್ಷಾಧಿಕಾರಿಗಳು ಎರಡು ವಿಧವೆಂದು ಹೇಳಿ, ಆ ಉಪಾಯಗಳಿಗಿರುವ ವ್ಯತ್ಯಾಸವನ್ನು ವ್ಯಕ್ತಪಡಿಸುತ್ತಾರೆ.

ಅರ್ಥ—ಮುಕುನ್ದಃ - ಮುಕುನ್ದ ಶಬ್ದಕ್ಕೆ ಮುಕ್ತಿದಾಯಕನೆಂಬರ್ಥವು, ಮುಕ್ತಿದಾಯಕನಾದ ಶ್ರೀ ಹರಿಯು, **ಪ್ರಪನ್ನಾದನ್ಯೇಷಾಂ** - ಮೋಕ್ಷಾರ್ಥಿಯಾಗಿ ಅತನನ್ನಾಶ್ರಯಿಸಿ ಪ್ರಪನ್ನರೆಂದು ಹೇಳಿಸಿಕೊಳ್ಳುವರಿಗಲ್ಲದೆ ಇತರರಿಗೆ, **ನಿಜಪದಂ**- "**ತದ್ವಿಷ್ಣೋಃ ಪರಮಂ ಪದಂ**" ಎಂದು ಹೇಳಿರುವಹಾಗೆ ತನ್ನ ಸ್ಥಾನವಾದ ದಿವ್ಯ ವೈಕುಂಠವನ್ನು, **ನದಿಶತಿ** - ತೋರಿಸುವದಿಲ್ಲವು. ಪ್ರಪನ್ನರಿಗೆ ಮಾತ್ರವೇ ಎಂದರೆ ಹಿಂದೆ ಮುಮುಕ್ಷುತ್ವಾಧಿಕಾರದಲ್ಲಿ ಹೇಳಿರುವ ಹಾಗೆ ಮುಮುಕ್ಷುವಾಗಿರಲು ಯೋಗ್ಯನಾಗಿ ಸಾಧ್ಯೋಪಾಯಗಳಲ್ಲಿ ಒಂದರ ಮೂಲಕ ಭಗವಂತ

ವಿಳಂಬೇನ ಪ್ರಾಪ್ತಿರ್ಭಜನ ಸುಖಮೇಕಸ್ಯ ವಿಪುಲಂ
ಪರಸ್ಯಾಽಽಶು ಪ್ರಾಪ್ತಿಃ ಪರಿಮಿತರಸಾ ಜೀವಿತದಶಾ ॥ ॥೨೧॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ
ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಅಧಿಕಾರಿವಿಭಾಗಾಧಿಕಾರೋಽಷ್ಟಮಃ

ಶ್ರೀಮತೇ ನಿಗಮಾಂತಮಹಾದೇಶಿಕಾಯ ನಮಃ

ನನ್ನು ಆಶ್ರಯಿಸಿದವನಿಗೆ ಮಾತ್ರವೇ, ಆ ಮುಕ್ತಿದಾಯಕನು ಮುಕ್ತಿಯನ್ನೀಯುವನೇ ವಿನಾ ಇತರರಿಗೆ ಕೊಡುವದಿಲ್ಲವೆಂಬರ್ಥವು. **ಪ್ರಪನ್ನಶ್ಚ** - ಹಾಗೆ ಪ್ರಪನ್ನನಾದವನಾದರೋ, **ಸುಚರಿತಪರೀಪಾಕಭಿದಯಾ** - ಪ್ರಾರಬ್ಧರೂಪವಾದ ಸುಕೃತಪರಿಪಾಕಗಳ ಭೇದದಿಂದ ಎಂದರೆ ಪ್ರಾರಬ್ಧರೂಪವಾಗಿರುವ ಸುಕೃತಫಲಾನುಭವವ್ಯತ್ಯಾಸದಿಂದ, **ದ್ವೇಧಾ** - ಎರಡು ವಿಧವಾಗಿ ವಿಭಾಗಿಸಲ್ಪಟ್ಟಿರುವನು. **ಏಕಸ್ಯ** - ಅದರಲ್ಲೊಬ್ಬನಾದ ಸದ್ವಾರಕಪ್ರಪತ್ತಿನಿಷ್ಠನಿಗೆ, **ವಿಳಂಬೇನ** - ಸಾವಕಾಶದಿಂದುಂಟಾಗುವದು, **ಪ್ರಾಪ್ತಿಃ** - ಪರಿಪೂರ್ಣ ಭಗವದನುಭವರೂಪ ಪ್ರಾಪ್ತಿಯು; ಆದರೆ, **ಭಜನಸುಖಂ** - ಏಕಾಂತ್ಯದಿಂದ ಉಪಾಸನೆಮಾಡುವವರಿಂದುಂಟಾದ ಆನಂದವು, **ವಿಪುಲಂ** - ಅಧಿಕವಾದುದು; **ಪರಸ್ಯ**-ಇನ್ನೊಬ್ಬನಾದ ಅದ್ವಾರಕಪ್ರಪತ್ತಿನಿಷ್ಠನಿಗೆ, **ಆಶುಪ್ರಾಪ್ತಿಃ** - ಪ್ರಾಪ್ತಿಯು ಶೀಘ್ರವಾಗಿ ಉಂಟಾಗುವದು; ಆದರೆ, **ಜೀವಿತದಶಾ** - ಜೀವಿಸಿಕೊಂಡಿರುವ ದೆಶೆಯು ಅಂದರೆ ಅವಸ್ಥೆಯು, **ಪರಿಮಿತರಸಾ** - ಭಕ್ತಿಯೋಗದಲ್ಲಿರುವ ಹಾಗೆ ಭಗವದನುಭವ ಆನಂದವಿಲ್ಲದುದರಿಂದ ಅಲ್ಪಾನಂದವುಳ್ಳದುದು.

ತಾತ್ಪರ್ಯ--- ಸಿದ್ಧೋಪಾಯನಾದ ಶ್ರಿಯಃಪತಿಯ ಅನುಗ್ರಹವನ್ನು ಹೊಂದಿ, ಸಾಧ್ಯೋಪಾಯಗಳಲ್ಲೊಂದನ್ನು ಅವಲಂಬಿಸದೆ ಮುಕ್ತಿಯು ದೊರೆಯಲಾರದೆಂದು ಹೇಳುತ್ತಾರೆ. ಹಾಗೆ ಸಾಧ್ಯೋಪಾಯವನ್ನವಲಂಬಿಸಿದ ಮುಮುಕ್ಷುವಾದ ಪ್ರಪನ್ನನು ಮಾತ್ರವೇ ಮುಕ್ತಿಯನ್ನು ಹೊಂದುವನು. ಇತರರಿಗೆ ಮೋಕ್ಷ ದೊರೆಯಲಾರದೆಂದು ಹೇಳುತ್ತಾರೆ. ಕೆಲವರು ದಾನಧರ್ಮಾದಿಗಳನ್ನೂ ಅನೇಕ ಧರ್ಮ ಕೆಲಸಗಳನ್ನೂ ಮಾಡುವರು. ಇನ್ನು ಕೆಲವರು ದೇವರ ನಾಮಸಂಕೀರ್ತನೆಯನ್ನು ಮಾಡುವರು, ಸ್ತುತಿಸುವರು, ಆರಾಧಿಸುವರು, ತೀರ್ಥಯಾತ್ರೆಗಳನ್ನು ಮಾಡುವರು. ಇವರುಗಳೆಲ್ಲಾ ಸಾಧ್ಯೋಪಾಯವನ್ನನುಷ್ಠಿಸಲಿಲ್ಲವಾದುದರಿಂದ

ಇವರುಗಳಿಗೆ ಮುಕ್ತಿ ಇಲ್ಲವು. ಇಹದಲ್ಲೇ ಬಳಿ ಫಲಗಳನ್ನನುಭವಿಸಬಹುದು, ಸ್ವರ್ಗಭೋಗವನ್ನು ಹೊಂದಬಹುದು. ಹಾಗಾದರೆ ಇವೆಲ್ಲಾ ನಿರರ್ಥಕವೋ ಎಂದರೆ ಹಾಗೆ ನಿರರ್ಥಕವಲ್ಲವು. ಸಾಧ್ಯೋಪಾಯಗಳಿಗೆ ಸಹಕಾರಿಯಾಗಿ ಇವರುಗಳಿಗೆ ಪರಿಣಮಿಸುತ್ತವೆ ಎಂಬ ತಾತ್ಪರ್ಯವು. ಅವುಗಳೇ ಸಾಕ್ಷಾತ್ತಾಗಿ ಮೋಕ್ಷದಾಯಕವಾಗುವದಿಲ್ಲವು. ಪ್ರಪನ್ನನಾದರೆ ಮೋಕ್ಷವೇ ವಿನಾ, ಇತರರಿಗೆ ಇಲ್ಲವೆಂಬುವದು ಮುಖ್ಯಾಭಿಪ್ರಾಯವು. ಇಲ್ಲಿ ಆತನ ಚರಣಾರವಿಂದವನ್ನು ಭಕ್ತಿಪ್ರಪತ್ತಿಮಾರ್ಗದಿಂದ ಯಾವನು ಅವಲಂಬಿಸುವನೋ ಅವನೇ ಪ್ರಪನ್ನನು. ಯಾಕೆಂದರೆ ಎರಡರಲ್ಲೂ ಪ್ರಪತ್ತಿಯನ್ನು ಅನುಷ್ಠಿಸತಕ್ಕದ್ದಾಗಿರುತ್ತದೆ; ಒಂದರಲ್ಲಿ ಅಙ್ಗವಾಗಿಯೂ ಇನ್ನೊಂದರಲ್ಲಿ ಸ್ವತಂತ್ರವಾಗಿಯೂ ಪ್ರಪತ್ತಿಯನ್ನು ಅನುಷ್ಠಿಸಿ ಅವನ ಚರಣಾರವಿಂದವನ್ನು ಆಶ್ರಯಿಸುವವನು ಪ್ರಪನ್ನನು. ಅಂಥಾವರಿಗೇನೇ ಆತನ ಪದವಾದ ದಿವ್ಯ ವೈಕುಂಠವು ತತ್ಕ್ರತುನ್ಯಾಯಪ್ರಕಾರ ಸಿಕ್ಕುತ್ತದೆ. ಅಂತಹ ಪ್ರಪನ್ನರು ಸದ್ವಾರಕ ಪ್ರಪತ್ತಿನಿಷ್ಠರೆಂದೂ ಅದ್ವಾರಕ ಪ್ರಪತ್ತಿನಿಷ್ಠರೆಂದೂ ಎರಡು ವಿಧವು, ಆದುದರಿಂದ **ಪ್ರಪನ್ನಶ್ಚ ದ್ವೇಧಾ** ಎಂದು ಹೇಳಲ್ಪಟ್ಟಿತು. ಆದರೆ ಅದರಲ್ಲೊಬ್ಬನಾದ ಸದ್ವಾರಕನಿಷ್ಠನಿಗೆ **ವಿಳಂಬೇನ** – ವಿಳಂಬದಿಂದ ಎಂದರೆ ಪ್ರಾರಬ್ಧಕರ್ಮವೆಲ್ಲಾ ಅನುಭವಿಸಿದ ನಂತರ ಮೋಕ್ಷವು, ಅದ್ವಾರಕಪ್ರಪತ್ತಿನಿಷ್ಠನಿಗೆ **ಆಶುಪ್ರಾಪ್ತಿಃ** ಶೀಘ್ರವಲ್ಲೇ ಅವನು ಅಪೇಕ್ಷಿಸಿದಾಗಲೇ, ಪ್ರಾರಬ್ಧಕರ್ಮವೆಲ್ಲಾ ಕ್ಷಯಿಸದಿದ್ದರೂ ಪರಿಪೂರ್ಣ ಭಗವದನುಭವರೂಪಪ್ರಾಪ್ತಿಯು. ಹೀಗೆ ವ್ಯತ್ಯಾಸವೂ ಇರುವದಲ್ಲದೆ, ಮೊದಲನೆಯದು ಗುರೂಪಾಯವು, ಕಷ್ಟತರವಾದುದು, ಎರಡನೆಯದು ಲಘೂಪಾಯವು, ಬಹು ಸುಲಭವಾದುದು. ಮೊದಲನೇ ಗುರೂಪಾಯವನ್ನವಲಂಬಿಸುವವನು ಬಹುಶಃ ದುಷ್ಕರ್ಮಪರಿಪಾಕದಿಂದಲೂ ಎರಡನೆಯ ಲಘೂಪಾಯವನ್ನವಲಂಬಿಸುವವನು ಸುಕೃತವಿಶೇಷದಿಂದಲೂ ಅನುಷ್ಠಿಸುವನು ಎಂದಲ್ಲವು. ಎರಡರಲ್ಲೂ ಗುಣಗಳಿರುವದರಿಂದ ಎರಡನ್ನೂ ಅನುಷ್ಠಿಸುವವರೂ ಸುಕೃತಿಗಳೇ ಎಂದು ಹೇಳುವದಕ್ಕಾಗಿ “ **ಸುಚರಿತ ಪರೀಪಾಕ** ” ಭೇದದಿಂದ ಭಿನ್ನಾಧಿಕಾರಿಗಳಾಗಿರುತ್ತಾರೆ. ಆ ವಿಳಂಬೇನ ಪ್ರಾಪ್ತಿಯೇನು ಅನಿಷ್ಟವಾದುದೋ ಎಂದರೆ, ಹಾಗಲ್ಲವು, ಏಕೆಂದರೆ, **ಭಜನ ಸುಖವು ವಿಪುಲ**ವಾದುದೆಂದು ಹೇಳುತ್ತಾರೆ. ಉಪಾಸನಕಾಲದಲ್ಲಿ, ಪ್ರೀತಿಪೂರ್ವಕವಾದ ಅನುಧ್ಯಾನದಿಂದುಂಟಾಗುವ ಆನಂದವು ನಿರತಿಶಯವಾದುದು. ದಿವ್ಯ ವೈಕುಂಠದಲ್ಲಿ ಉಂಟಾಗುವ ಆನಂದಕ್ಕೇನೂ ಕಮ್ಮಿಯಾದುದಲ್ಲವು. ಅಲ್ಲಿಯಾದರೋ ಆ ಆನಂದವು ನಿತ್ಯವಾಗಿ ಉಂಟು, ಇಲ್ಲಿಯಾದರೋ ಭಜನಕಾಲದಲ್ಲಿ ಮಾತ್ರವೇ ಆ ವಿಪುಲ ಸುಖವು. ಇಷ್ಟು ಮಾತ್ರವೇ ವ್ಯತ್ಯಾಸವೇ ವಿನಾ, ಆ ಭಕ್ತಿಯೋಗನಿಷ್ಠನಿಗುಂಟಾಗುವ ಆನಂದವು ನಿರತಿಶಯವಾದುದರಿಂದ, ಆತನಿಗೂ ಸುಚರಿತ ವಿಶೇಷದಿಂದಲೇ ಉಂಟಾಗುತ್ತದೆ. ಅವನು

" **ನಾರ್ಹನ್ತಿ ಶರಣಸ್ಥಸ್ಯ** " ಎಂದು ಹೇಳಲ್ಪಟ್ಟಿರುವದರಿಂದ, ಲಘೂಪಾಯ ನಿಷ್ಠರುಗಳಿಗಿಂತ ದುಷ್ಕರ್ಮಪರಿಪಾಕದಿಂದ ನಿಕೃಷ್ಟರೆಂಬ ತಾತ್ಪರ್ಯವಿಲ್ಲವು. ಲಘೂ ಪಾಯನಿಷ್ಠರಹಾಗೆ ಶೀಘ್ರಮೋಕ್ಷಪ್ರಾಪ್ತಿಯಿಲ್ಲವೆಂಬ ತಾತ್ಪರ್ಯವೇ ವಿನಾ ಅವರೂ ಸುಕೃತಿಗಳೇ ಎಂದು ತಿಳಿಸುವದಕ್ಕಾಗಿಯೇ " **ಸುಚರಿತಪರೀಪಾಕಭಿಪಯಾ** " ಎಂದು ಪ್ರಯೋಗಿಸಿರುತ್ತಾರೆ. ಲಘೂಪಾಯನಿಷ್ಠನಿಗಾದರೋ ಶೀಘ್ರದಲ್ಲಿ ಮೋಕ್ಷಪ್ರಾಪ್ತಿಯಾದರೂ ಇಹಲೋಕದಲ್ಲಿ ಆತನ ಜೀವಮಾನವಿರುವತನಕ, ಆತನು ಮಾಡುವ ಭಗವದ್ಭಾಗವತ ಕೈಙ್ಕರ್ಯದಿಂದುಂಟಾಗುವ ಆನಂದವು ಅಲ್ಪ ವಾದುದು, ಭಕ್ತಿಯೋಗನಿಷ್ಠನಿಗುಂಟಾಗುವ ಭಗವದನುಭವಜನಿತಾನಂದಕ್ಕೆ ಸಮಾನವಾಗಲಾರದೆಂಬಭಿಪ್ರಾಯವು. ಆದುದರಿಂದ ಇವೆರಡು ಸಾಕ್ಷಾದುಪಾಯ ಗಳೂ ಸಮಾನಫಲಗಳುಳ್ಳವುಗಳೇ, ಅವರವರುಗಳ ಸುಕೃತವಿಶೇಷಾನುಸಾರವಾ ಗಿಯೂ, ಶಕ್ತ್ಯನುಸಾರವಾಗಿಯೂ ಅನುಷ್ಠೇಯಗಳೆಂಬ ಭಾವವು. ಇದರಲ್ಲಿ ಒಂದು ಮುಖ್ಯ, ಒಂದು ಮುಖ್ಯವಲ್ಲವೆಂದೂ, ಒಂದು ವಿಶೇಷ ಫಲಕಾರಿ, ಒಂದು ಹಾಗೆ ಫಲಕಾರಿಯಲ್ಲವು, ಒಂದು ಶ್ಲಾಘ್ಯವಲ್ಲವು, ಇನ್ನೊಂದು ಶ್ಲಾಘ್ಯವು ಎಂಬೀ ಮೊದಲಾದ ವ್ಯತ್ಯಾಸಗಳು ಯಾವುವು ಇಲ್ಲವೆಂಬುವದು ತಾತ್ಪರ್ಯವು, ಎಂಬಲ್ಲಿಗೆ

ಶ್ರೀಮದ್ರಹಸ್ಯತ್ರಯಸಾರದ ಎಂಟನೆಯದಾದ

ಅಧಿಕಾರಿವಿಭಾಗಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮಕೃತ

" **ಆಚಾರ್ಯಹೃದಯಾನ್ವೇಷಿಣೀ** "

ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದುವು.

——: o :——

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತಮಹಾದೇಶಿಕಾಯ ನಮಃ

ಉಪಾಯವಿಭಾಗಾಧಿಕಾರಃ. ೬

ಉಪಾಯಸ್ಸ್ವಪ್ರಾಪ್ತೇರುಪನಿಷದಧೀತ ಸ್ಸಭಗವಾನ್
ಪ್ರಸತ್ತ್ಯೈತಸ್ಯೋಕ್ತೇ ಪ್ರಪದನನಿಧಿಧ್ಯಾಸನಗ(ಸೃ)ತೀ ।

ಅವತಾರಿಕೆ—ಮುಮುಕ್ಷುವಾದ ಅಧಿಕಾರಿಗಳಿಬ್ಬರೂ ಎಂದೂ, ಅವರುಗಳು ಸದ್ವಾರಕ ಅದ್ವಾರಕ ಪ್ರಪತ್ತಿನಿಷ್ಠರೆಂದೂ ಹಿಂದಿನ ಅಧಿಕಾರದಲ್ಲಿ ಯಾವಾಗ ಹೇಳಲ್ಪಟ್ಟಿತೋ ಆಗ ಸದ್ವಾರಕಪ್ರಪತ್ತಿ, ಅದ್ವಾರಕಪ್ರಪತ್ತಿ ಎಂಬದಾಗಿ ಮೋಕ್ಷ ಸಾಧಕಗಳಾದ ಉಪಾಯಗಳು ಎರಡು ವಿಧವೆಂದು ಹೇಳಿದಂತೆ ಆಯಿತು. ಆದುದರಿಂದ ಈ ಅಧಿಕಾರದಲ್ಲಿ ಆ ಉಪಾಯಗಳನ್ನು ವಿಭಾಗಮಾಡಿ ವಿಮರ್ಶಿಸಿ ಹೇಳುವದು ಆವಶ್ಯಕವು. ಈ ಸಂದರ್ಭದಲ್ಲಿ ಉಪಾಯವು ಸಿದ್ಧೋಪಾಯ ಸಾಧ್ಯೋಪಾಯವೆಂಬುದಾಗಿ ಎರಡು ವಿಧವೆಂದೂ, ಸಿದ್ಧೋಪಾಯನು ಶರಣಾಗತವತ್ಸಲನಾದ ಸರ್ವಶಕ್ತನಾದ ಪ್ರಧಾನಭೂತನಾದ ಶ್ರಿಯಃಪತಿಯೆಂದೂ, ಆ ಶರಣಾಗತವತ್ಸಲನನ್ನು ವಶಮಾಡಿಕೊಳ್ಳುವಮಾರ್ಗಗಳಾದ ಸಾಧ್ಯೋಪಾಯಗಳು ಸದ್ವಾರಕಪ್ರಪತ್ತಿಯಾದ ಭಕ್ತಿಮಾರ್ಗವೂ, ಅದ್ವಾರಕಪ್ರಪತ್ತಿಯಾದ ಭರನ್ಯಾಸವೂ ಎಂದೂ, ಇವೆರಡರಲ್ಲಿ ಯಾವುದಾದರೂ ಒಂದರಲ್ಲಿ ಪ್ರವೇಶವು ಸುಕೃತಪರಿಪಾಕದಿಂದ ಒದಗುತ್ತದೆಂದೂ, ಅದಕ್ಕೂ ಮೂಲಕಾರಣನು ಜಗತ್ತಿಗೆಲ್ಲಾ ಆದಿಕಾರಣನಾದ ಸರ್ವೇಶ್ವರನೇ ಎಂದೂ, ಹೇಳುತ್ತಾರೆ.

ತದಾರೋಹಃ ಪುಂಸಸ್ಸುಕೃತಪರಿಪಾಕೇನ ಮಹತಾ
ನಿದಾನಂ ತತ್ರಾಪಿ ಸ್ವಯಮಖಿಲ ನಿರ್ಮಾಣ ನಿಪುಣಃ ॥ ೨೨ ॥

ಅರ್ಥ— **ಸಃ** - ಶರಣಾಗತರಕ್ಷಣದೀಕ್ಷೆಯನ್ನು ವಹಿಸಿ ಸರ್ವಲೋಕಪಿತೃವಾಗಿ ಸಹಜಕಾರುಣ್ಯಾದಿ ಕಲ್ಯಾಣಗುಣಗಳಿಂದ ಪ್ರಸಿದ್ಧನಾದ, **ಭಗವಾನ್** - ಹೇಯ ಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾದ ಶ್ರಿಯಃಪತಿಯು, **ಸ್ವಪ್ರಾಪ್ತೇಃ** - ತನ್ನ ಎಂದರೆ ಶ್ರಿಯಃಪತಿಯ ಪ್ರಾಪ್ತಿಗೆ, **ಉಪಾಯಃ** ಸಿದ್ಧೋಪಾಯನೆಂದು **ಉಪನಿಷದಧೀತಃ** - ಉಪನಿಷತ್ತುಗಳಲ್ಲಿ ಪಠಿಸಲ್ಪಟ್ಟಿರುತ್ತಾನೆ. **ತಸ್ಯ** - ಅಂತಹ ಶರಣಾಗತರಕ್ಷಣೆಯ ದೀಕ್ಷೆಯನ್ನು ವಹಿಸಿರುವ ಮಹಾನುಭಾವನ, **ಪ್ರಸತ್ತ್ಯೈ** - ಅನಾದಿಯಾಗಿ ಆಜ್ಞಾತಿಲಂಘನಮಾಡಿದುದಕ್ಕಾಗಿ ಪ್ರಾಪ್ತನಾದ ಭಗವನ್ನಿಗ್ರಹ ಮೂಲಕ ಬಂದ ಸಂಸಾರನಿವೃತ್ತಿಗಾಗಿ ಭಗವಂತನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳುವದಕ್ಕೋಸ್ಕರ, **ಪ್ರಪದನನಿಧಿಧ್ಯಾಸನಗತೀ** - ಪ್ರಪದನವು, ನಿಧಿಧ್ಯಾಸನವೆಂದರೆ ಭಕ್ತಿಯೋಗವು ಎಂಬೀ ಎರಡು ಮಾರ್ಗಗಳು, **ಉಕ್ತೇ** - ಶಾಸ್ತ್ರಗಳಲ್ಲಿ ಹೇಳಲ್ಪಟ್ಟವು. **ತದಾರೋಹಃ** - ಆ ಭಕ್ತಿಪ್ರಪತ್ತಿಗಳಲ್ಲೊಂದರಲ್ಲಿ **ಆರೋಹಃ** - ಹತ್ತೋಣವು ಎಂದರೆ ಪ್ರವೇಶವು, ಅಥವಾ ಆ ಭಕ್ತಿಪ್ರಪತ್ತಿಗಳಾದ ಉಪಾಯಗಳ ಮೂಲಕ ವೈಕುಂಠಾರೋಹವು, ವಿಶ್ವ ವೈಕುಂಠವನ್ನು ಹತ್ತುವದು ಎಂಬರ್ಥವು. ಇವೆರಡರಲ್ಲಿ ಮೊದಲಿನ ಅರ್ಥವೇ ಯುಕ್ತವಾಗಿ ಕಾಣುತ್ತದೆ. **ಪುಂಸಃ** - ಮನುಷ್ಯರಿಗೆ, **ಮಹತಾ** - ಮಹತ್ತಾದ ಉತ್ಕೃಷ್ಟವಾದ, **ಸುಕೃತಪರಿಪಾಕೇನ**-ಸುಕೃತಪರಿಪಾಕದಿಂದ 'ಉಂಟಾಗುತ್ತದೆ' ಎಂದು ಇಟ್ಟುಕೊಳ್ಳತಕ್ಕದ್ದು. **ತತ್ರಾಪಿ** - ಆ ಸುಕೃತಪರಿಪಾಕಗಳೇ ಹೇತುವಾಗಿ ಉಳ್ಳ ಭಕ್ತಿಪ್ರಪತ್ತಿಮಾರ್ಗಗಳ ಪ್ರವೇಶದಲ್ಲೂ ಕೂಡ, **ಅಖಿಲನಿರ್ಮಾಣನಿಪುಣಃ** ಸಮಸ್ತವನ್ನು ನಿರ್ಮಾಣಮಾಡುವದರಲ್ಲಿ ಸಮರ್ಥನಾದ, ಸರ್ವೇಶ್ವರನೇ, **ಸ್ವಯಂ ನಿದಾನಂ** - ತಾನೇ ಮುಖ್ಯವಾದ ಆದಿಕಾರಣನು. ಜನನಕಾಲದಲ್ಲಿ ಸುಕೃತಪರಿಪಾಕದಿಂದ ಚೇತನನನ್ನು ತನ್ನ ವಿಷ್ಣುದೃಷ್ಟಿಯಿಂದ ನೋಡಿ, ಸಾತ್ವಿಕ ಸಂಭಾಷಣೆ ಮತ್ತು ಸದಾಚಾರ್ಯಪ್ರಾಪ್ತಿ ಇವನ್ನುಂಟುಮಾಡಲು ಸಿದ್ಧೋಪಾಯನು ಆ ಶ್ರಿಯಃಪತಿಯೇ. ಅನಂತರ ಸಾಧ್ಯೋಪಾಯಗಳಲ್ಲೊಂದನ್ನವಲಂಬಿಸುವಂತೆ ಮಾಡಿ ತನ್ನನ್ನು ಸೇರುವ ಹಾಗೆ ಮಾಡಿಕೊಳ್ಳುವವನೂ ಅವನೇ ಎಂಬಭಿಪ್ರಾಯವು. ಆದುದರಿಂದ ಶ್ರಿಯಃಪತಿಯೇ ಮೋಕ್ಷಪ್ರಾಪ್ತಿಗೆ ಪ್ರಧಾನಸಾಧನವು.

ತಾತ್ಪರ್ಯ— ಈ ಶ್ಲೋಕದ ಪ್ರಥಮಪಾದದಿಂದ ಸಿದ್ಧೋಪಾಯನು ಸರ್ವೇಶ್ವರನೆಂದು ತಿಳಿಸುತ್ತಾರೆ. ಆತನು ಸಿದ್ಧೋಪಾಯನೆಂಬುವದು ಸುಪ್ರಸಿದ್ಧ

ನೆಂದು ತಿಳಿಸುವದಕ್ಕಾಗಿ ಸ ಭಗವಾನ್ ಎಂಬ ಪ್ರಯೋಗವು. **ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ** ಎಂದೂ,

* **ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಂ ।**
ನ ಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ

ಎಂದೂ, † **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ** ಎಂದೂ, ‡ **ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ** ಎಂದೂ, § **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ** ಎಂದೂ ಹೀಗೆ ಅನೇಕ ಸಲ ತಾನು ಶರಣಾಗತ ರಕ್ಷಕನೆಂಬ ದೀಕ್ಷೆಯನ್ನು ವಹಿಸಿರುವೆನೆಂದು ಹೇಳಿರುವದರಿಂದ ಸುಸ್ಪಷ್ಟವೆಂಬ ಭಾವವು. ಆ ಶರಣಾಗತವತ್ಸಲನೆಂಬ ಬಿರುದಿಗೆ ಸರಿಯಾದ ಯೋಗ್ಯವಾದ ಕಲ್ಯಾಣಗುಣಗಳಿರುವದರಿಂದ **ಭಗವಾನ್** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಸಿದ್ಧೋಪಾಯ**ನೆಂ**ಬುವದು ಹೇಗೆ ಸುವ್ಯಕ್ತವೆಂದರೆ ಉಪನಿಷತ್ತುಗಳಲ್ಲಿ ಹಾಗೆ ಪಠಿತವಾಗಿದೆ ಎಂದು ತಿಳಿಸಲು, **ಉಪನಿಷದಧೀತನೆಂದು** ಹೇಳುತ್ತಾರೆ. ಹಾಗೆ ಎಲ್ಲಿ **ಉಪನಿಷತ್ತುಗಳಲ್ಲಿ** ಉಪಪಾದಿತವಾಗಿದೆ ಎಂದರೆ;—

(೧) **ಅಮೃತಸ್ಯೈಷಸೇತುಃ** - ಈತನೇ ಮೋಕ್ಷವನ್ನು ಹೋಗಿ ಸೇರಿಸುವ ಸೇತುವು.

(೨) **ಯಮೇವೈಷವೃಣುತೇ ತೇನ ಲಭ್ಯಃ** - ಯಾವನನ್ನು ಆ ಸರ್ವೇಶ್ವರನು ರಕ್ಷಿಸಬೇಕೆಂದು ವರಿಸುವನೋ ಅವನಿಗೇನೆ ಆತನು ಲಭ್ಯನು.

(೩) **ಧಾತುಃ ಪ್ರಸಾದಾತ್ ಮಹಿಮಾನಮೀಶಂ**- ಸರ್ವಸೃಷ್ಟಿಕರ್ತನಾದ ಆ ಪರಮಾತ್ಮನ ಕೃಪೆಯಿಂದಲೇ ಮಹಿಮಾಶಾಲಿಯಾದ ಸರ್ವಶೇಷಿಯಾದ, "**ತಮಕ್ರತುಂ ಪಶ್ಯತಿ ವೀತಶೋಕಃ**"ಎಂದು ಹಿಂದೆ ಇದೆ, ಆ ಸರ್ವಕರ್ಮಬಂಧಶೂನ್ಯನಾದ ಪರಮಾತ್ಮನನ್ನೇ ಯಾವಾಗ ಸಾಕ್ಷಾತ್ಕರಿಸುವನೋ ಆಗ ಶೋಕದಿಂದ ಬಿಡಲ್ಪಟ್ಟವನಾಗುವನು, ಎಂದರೆ ಮೋಕ್ಷಸುಖವನ್ನು ಹೊಂದುವನು.

---

* ಓ ಸೀತೆಯೇ, ಪ್ರಾಣವನ್ನಾದರೂ ತೊರೆಯುವೆನು, ಲಕ್ಷ್ಮಣನೊಂದಿಗೆ ನಿನ್ನನ್ನಾದರೂ ತ್ಯಜಿಸುವೆನು, ಶರಣಾಗತರನ್ನು ರಕ್ಷಿಸುವೆನೆಂದು ಆಡಿದ ಮಾತನ್ನು ಎಂದಿಗೂ ತಪ್ಪೆನು. ಅದರಲ್ಲೂ ಬ್ರಾಹ್ಮಣರಿಗೆ ಮಾಡಿದ ಪ್ರತಿಜ್ಞೆಯು ಎಂದಿಗೂ ತಪ್ಪತಕ್ಕದ್ದಲ್ಲವು.

† ತಾನು ಸರ್ವರಕ್ಷಕನೆಂದು ಬಂದವನನ್ನು ಎಂದಿಗೂ ಬಿಡೆನು.

‡ ಶರಣಾಗತರಾದ ಸಮಸ್ತ ಚೇತನರಿಗೂ ಅಭಯವನ್ನು ಕೊಡುವೆನು; ಇದೀಗ ನನ್ನ ವ್ರತವು.

§ ಸಮಸ್ತಪಾಪಗಳಿಂದಲೂ ಬಿಡಿಸುವೆನು, ಅಳಬೇಡ.

ಇವೇ ಮೊದಲಾದ ಉಪನಿಷದ್ವಾಕ್ಯಗಳು ಸರ್ವೇಶ್ವರನೇ ಸಿದ್ಧೋಪಾಯ ನೆಂದು ಬೋಧಿಸುತ್ತವೆ.

ಆ ಸಿದ್ಧೋಪಾಯನು ಸರ್ವ ಶಕ್ತನಾಗಿಯೂ ಕರುಣಾಸಾಗರನಾಗಿಯೂ ಚೇತನರಕ್ಷಣೆಯಲ್ಲಿ ಬದ್ಧ ಕಂಕಣನಾಗಿದ್ದರೂ, ಆತನು ಏತಕ್ಕೆ ಚೇತನಸಾಮಾನ್ಯ ರನ್ನು ಅನುಗ್ರಹಿಸದೇ ಹೋದನೆಂದರೆ: ಅನೇಕ ಜನ್ಮಗಳನ್ನೆತ್ತಿ, ಇಂದ್ರಿಯಗಳಿಗೆ ವಶನಾಗಿ ಶಾಸ್ತ್ರವಿಧಿನಿಷೇಧವಾಕ್ಯಗಳನ್ನುಲ್ಲಂಘಿಸಿದುದರಿಂದ ಭಗವನ್ನಿಗ್ರಹಕ್ಕೆ ಪಾತ್ರನಾಗಿದ್ದನು. ಆತನ ಕೋಪೋಪಶಮನಮಾಡಿಕೊಂಡು ಆತನನ್ನು ಪ್ರಸನ್ನ ನನ್ನಾಗಿ ಮಾಡಿಕೊಳ್ಳಲಿಲ್ಲವು. ಆದುದರಿಂದಲೇ,

ತಾವದಾರ್ತಿಸ್ತಥಾ ವಾಂಛಾ ತಾವನ್ಮೋಹಸ್ತಥಾ ಸುಖಂ ।
ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥

ಎಂದು ಹೇಳಿರುವ ಹಾಗೆ ಈತನಿಗೆ ಈಶ್ವರಪ್ರಾಪ್ತಿಯಿಲ್ಲವು. ಆ ಕಾರಣದಿಂದ **ತಸ್ಯ ಪ್ರಸತ್ತೌ** - ಆ ಭಗವಂತನ ಪ್ರಸನ್ನತೆಗೋಸ್ಕರವಾಗಿ ಈತನು ಪ್ರಪದನವನ್ನಾಗಲಿ, ನಿಧಿಧ್ಯಾಸನವನ್ನಾಗಲಿ, ಈ ಎರಡು ಸಾಧ್ಯೋಪಾಯಗಳಲ್ಲಿ ಯಾವು ದಾದರೂ ಒಂದನ್ನು ಅನುಷ್ಠಿಸತಕ್ಕದ್ದು ಎಂದು ಹೇಳಲ್ಪಟ್ಟಿರುತ್ತದೆ. **ಸೃತೀ** ಎಂಬ ಪಾಠದಲ್ಲೂ ಗತಿ, ಉಪಾಯವೆಂದೇ ಅರ್ಥವು. ಹಾಗೆ **ಇವೇ** ಮಾರ್ಗ ಗಳೆಂದು ಎಲ್ಲಿ ಹೇಳಲ್ಪಟ್ಟಿರುತ್ತದೆಂದರೆ: -

(೧) **ಓಂ ಇತ್ಯಾತ್ಮಾನಂ ಧ್ಯಾಯಥ** - ಓಂ ಎಂಬದಾಗಿ ಪರಮಾತ್ಮ ನನ್ನು ಉಪಾಸನ ಮಾಡತಕ್ಕದ್ದು.

(೨) **ಓಂ ಇತ್ಯಾತ್ಮಾನಂ ಯುಂಜೀತ** - ಓಂ ಎಂಬದಾಗಿ ಸರ್ವೇಶ್ವ ರನ ಪಾದದಲ್ಲಿ, ತನ್ನ ಆತ್ಮಾವನ್ನು ಹವಿಸ್ಸಿನ ರೂಪದಲ್ಲಿ ಸಮರ್ಪಿಸತಕ್ಕದ್ದು.

(೩) **ತಮೇವ ಚಾದ್ಯಂ ಪುರುಷಂ ಪ್ರಪದ್ಯೇತ್** - ಆ ಆದಿಪುರುಷ ನಾದ ಸರ್ವೇಶ್ವರನನ್ನೇ ಶರಣಹೊಂದತಕ್ಕದ್ದು.

(೪) **ತಮೇವ ಶರಣಂ ವ್ರಜೇತ್** - ಇದೂ ಅದೇ ಅಭಿಪ್ರಾಯವು.

(೫) **ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ**- ಉಪಾಸನೆಯ ಮೂಲಕ ಪರಬ್ರಹ್ಮನು ಸಾಕ್ಷಾತ್ಕರಿಸಲ್ಪಟ್ಟರೆ ಈ ಚೇತನನ ಸರ್ವ ಕರ್ಮಗಳೂ ಕ್ಷಯಿಸುತ್ತವೆ.

(೬) **ತಮೇವಂ ವಿದಿತ್ವಾ ಅತಿಮೃತ್ಯುಮೇತಿ** - ಆತನನ್ನು ಹೀಗೆ ಉಪಾಸನಮೂಲಕ ಸಾಕ್ಷಾತ್ಕರಿಸಿದರೆ ಸಂಸಾರವನ್ನು ದಾಟುವನು.

(೭) **ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ** - ಮೋಕ್ಷಾರ್ಥಿ ಯಾದ ನಾನು ಆತನನ್ನು ಶರಣಹೊಂದುವೆನು.

(೮) **ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ** - ಸರ್ವ ಕರ್ಮಗಳಲ್ಲೂ ನನ್ನಲ್ಲೇ ಮನಸ್ಸಿಟ್ಟು ನನ್ನನ್ನೇ ಧ್ಯಾನಿಸುವವನು ನನ್ನನುಗ್ರಹದಿಂದ ಸಾಂಸಾರಿಕ ಸಮಸ್ತ ಕ್ಲೇಶಗಳನ್ನೂ ದಾಟುವನು.

ಇತ್ಯಾದ್ಯನೇಕ ಪ್ರಮಾಣಗಳಿಂದ ಭಕ್ತಿಪ್ರಪತ್ತಿಗಳನ್ನು ಈ ಚೇತನನು ವ್ಯಾಜಮಾತ್ರಕ್ಕಾಗಿ ಅನುಷ್ಠಿಸತಕ್ಕದ್ದು. ಸಿದ್ಧೋಪಾಯನು ಸರ್ವೇಶ್ವರನೇ ಆಗಿರುವಲ್ಲಿ, ಆತನ ನಿರ್ಹೇತುಕ ಕೃಪೆಯೇ ಸಾಕಾಗಿರುವಾಗ, ಈ ಸಾಧ್ಯೋಪಾಯಗಳ ಆವಶ್ಯಕತೆ ಏಕೆಂದರೆ, ಸರ್ವೇಶ್ವರನಿಗೆ ವೈಷಮ್ಯ ನೈರ್ಘೃಣ್ಯದೋಷವುಂಟಾಗದಿರುವದಕ್ಕಾಗಿ ಈ ವ್ಯಾಜಗಳು ಆವಶ್ಯಕವಾದುವು ಎಂಬಭಿಪ್ರಾಯವು. ಇಲ್ಲಿ ನಿಧಿಧ್ಯಾಸನಶಬ್ದದಿಂದ ಕರ್ಮಯೋಗ ಜ್ಞಾನಯೋಗಗಳಿಂದ ಕೂಡಿದ ಬ್ರಹ್ಮವಿದ್ಯಾರೂಪ ಉಪಾಸನೆಯು ಹೇಳಲ್ಪಟ್ಟಿತು. ಇಲ್ಲಿ **ಗತೀ** ಎಂಬ ಶಬ್ದವು ಜ್ಞಾನವನ್ನು ಬೋಧಿಸುತ್ತದೆಂದು ಸಾರಾಸ್ವಾದಿನೀ ವ್ಯಾಖ್ಯಾತೃವು ಅಪ್ಪಣೆಕೊಡಿಸುತ್ತಾರೆ, ಮುಂದೆ ಈ ಅಧಿಕಾರದಲ್ಲೇ ಸಾಧ್ಯೋಪಾಯವು ಜ್ಞಾನವಿಶೇಷವೆಂದು ಪ್ರತಿಪಾದಿಸುವದರಿಂದ, ಹಾಗೆ ಅರ್ಥಹೇಳುವದರಲ್ಲಿ ಸ್ವಾರಸ್ಯ ಉಂಟೆಂದು ತಿಳಿಸುತ್ತಾರೆ. ಹಾಗೆ ಜ್ಞಾನರೂಪವು ಉಪಾಯವು ಎಂದು ಹೇಳುವದರಿಂದ ಜ್ಞಾನವಲ್ಲದ ಬರೀ ಕರ್ಮಯೋಗವು ಉಪಾಯಾಂಗವಾಗುತ್ತದೇ ವಿನಾ ಸಾಕ್ಷಾತ್ ಉಪಾಯವಾಗುವದಿಲ್ಲವೆಂಬುವದೂ ಇಲ್ಲಿ ತೋರಿಬರುತ್ತದೆ. ಈ ಭಕ್ತಿ ಪ್ರಪತ್ತಿಗಳ ಮುಖ್ಯ ಪ್ರಯೋಜನವೇನೆಂದರೆ ಪ್ರಾಪ್ತಿಪ್ರತಿಬಂಧಕವು ನಿವರ್ತಿಸಿ ಆತನ ಅನುಗ್ರಹ ಉಂಟಾಗೋಣವು; ಆದುದರಿಂದ ಇವು ಆತನ ಪ್ರಸನ್ನತೋಪಾಯಗಳು. ಭಗವತ್ಪ್ರಾಪ್ತಿಗೆ ಪ್ರಧಾನೋಪಾಯವು ಭಗವಂತನೇ ವಿನಾ ಬೇರೆ ಇಲ್ಲವೆಂಬುವದು ಮುಖ್ಯ ಸಿದ್ಧಾಂತವು.

ಹೀಗೆ ಶ್ರಿಯಃಪತಿಯು ಚೇತನರಕ್ಷಣೆಯಲ್ಲಿ ಬದ್ಧದೀಕ್ಷಿತನಾಗಿಯೂ, ಅವನು ತೋರಿಸುವ ಭಕ್ತಿ ಪ್ರಪತ್ತಿ ಮಾರ್ಗಗಳೂ ಕೂಡ ಇರುವಾಗ **ಪುಂಸಃ** – ಎಲ್ಲಾ ಚೇತನರಿಗೂ ತದಾರೋಹವು ಇವುಗಳಲ್ಲಿ ಪ್ರವೇಶವು, ಏಕೆ ಉಂಟಾಗುವದಿಲ್ಲವೆಂಬಾಕ್ಷೇಪಣೆಯು ತೋರಬಹುದು. ಹಾಗೆ ಪ್ರವೇಶವುಂಟಾಗಲು ಮಹತ್ತಾದ ಸುಕೃತಪರಿಪಾಕವಿರಬೇಕೆಂದು ತಿಳಿಸುತ್ತಾರೆ. "**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ**" ಎಂದು ಶ್ರೀರಾಮನ ವಿಷಯವಾಗಿ ಹೇಳಿರುವ ಹಾಗೆ ಯಾವುದಾದರೂ ಒಂದು ಯಾದೃಚ್ಛಿಕ ಸುಕೃತವನ್ನಾದರೂ ಈ ಚೇತನನು ಮಾಡಿದ್ದರೆ, ಅವನು ಯಾವಾಗಲಾದರೂ ಒಂದು ದಿನ ಶ್ರೇಯಸ್ಸನ್ನು ಪಡೆಯುವನು. ಅಂಥಾವನಿಗೆ ಜಾಯಮಾನಕಾಲದಲ್ಲಿ ಕಟಾಕ್ಷವೀಕ್ಷಣೆ, ಸತ್ತ್ವೋದ್ರೇಕ, ಸಾತ್ತ್ವಿಕಸಂಭಾಷಣೆ, ಗುರೂಪಸದನ, ಸಾಧ್ಯೋಪಾಯಾನುಷ್ಠಾನವೆಲ್ಲವೂ ಆ ಸುಕೃತವಿಶೇಷದಿಂದ ದೊರೆಯುತ್ತವೆಂಬ ಭಾವವು

ಉಪಾಯೋಪೇಯಸ್ವರೂಪನಿರೂಪಣಂ

ಇವರ್‌ಗಳಕ್ಕು (ಇಪ್ಪಿರುವರ್‌ಕ್ಕುಂ) ಕರ್ತವ್ಯಮಾನ ಉಪಾಯ ಮಾವದು? ಒರು ಜ್ಞಾನವಿಕಾಸವಿಶೇಷಮ್. ಇತ್ತಾಲೇ ಸಾಧ್ಯ

ಅಂತಹ ಸುಕೃತವಿಶೇಷವನ್ನು ಈತನು ಮಾಡುವದಕ್ಕೂ ಸರ್ವೇಶ್ವರನೇ ಕಾರಣ ವೆಂದು ಸಾಲ್ಕನೇ ಪಾದದಿಂದ ತಿಳಿಸುತ್ತಾರೆ. ಅದು ಹೇಗೆಂದರೆ, ಸೃಷ್ಟಿಗೆ ಮೊದಲು ಚೇತನವರ್ಗವೆಲ್ಲವೂ ಸೂಕ್ಷ್ಮದೆಸೆಯಲ್ಲಿ ಅಚೇತನದೊಡನೆ ಐಕ್ಯವಾಗಿದ್ದುದಕ್ಕೆ ಪರ ಮಕೃಪೆಯಿಂದ ಕರಣಕಳೇಬರಗಳನ್ನೂ ಕೊಟ್ಟು, ತನ್ನ ಆಜ್ಞೆಗಳನ್ನು ಶಾಸ್ತ್ರಗಳ ವಿಧಿನಿಷೇಧವಾಕ್ಯಗಳ ಮೂಲಕ ತಿಳಿಯಪಡಿಸಿ. ಅದನ್ನು ಪದೇಶಿಸಲು ಸರ್ವಕಾಲ ದಲ್ಲೂ ಸದ್ಗುರುಗಳು ಈ ಪೃಥಿವಿಯನ್ನಲಂಕರಿಸುವ ಹಾಗೆ ಮಾಡಿರುತ್ತಾನೆ. ಆದುದರಿಂದ ಸರ್ವೇಶ್ವರನಿಂದುಂಟುಮಾಡಲ್ಪಟ್ಟ ಕರಣಕಳೇಬರಾದಿ ಯೋಗವೇ ಈ ಸಾಧ್ಯೋಪಾಯಾನುಷ್ಠಾನಕ್ಕೆ ಕಾರಣಭೂತವಾದುದರಿಂದ **ತತ್ರಾಪಿ ನಿದಾ ನಂ** – ಆ ಸಾಧ್ಯೋಪಾಯಾವಲಂಬನಕ್ಕೆ ಕಾರಣನು, **ಅಖಿಲನಿರ್ಮಾಣನಿ ಪುಣಃ** – ವಿವಿಧ ವಿಚಿತ್ರವಾದ ಈ ಸರ್ವ ಜಗತ್ತಿನ ಸೃಷ್ಟಿಕರ್ತನಾದುದರಿಂದ ಈ ಕರಣಕಳೇಬರಯೋಗದಿಂದ ಎರಡುವಿಧಕೆಲಸವನ್ನೂ ನಡಿಸುತ್ತಾನೆ ಆತನ ಪೂರ್ವಕರ್ಮಾನುಗುಣವಾಗಿ ಸುಖದುಃಖೋಪಭೋಗಕ್ಕೂ ಅದು ಸಹಕಾರಿಯಾ ಯಿತು; ಮತ್ತು ಪ್ರಾಪ್ಯನಾದ ಸರ್ವೇಶ್ವರನನ್ನೂ ಹೊಂದಲು ಬೇಕಾದ ಅನು ಕೂಲವೂ ಒದಗಿಸಲ್ಪಟ್ಟಿತು. ಹೀಗೆ ಬಹು ನಿಪುಣತೆಯಿಂದ **ಈ ಕರಣಕಳೇಬರ ಯೋಗದಿಂದ** ಈ ಎರಡು ಕೆಲಸವನ್ನು ನಡಿಸುವ ಹಾಗೆ ನಿರ್ಮಾಣಮಾಡಿದುದರಿಂದ, **ಅಖಿಲನಿರ್ಮಾಣನಿಪುಣಃ** ಎಂದು ಪ್ರಯೋಗಿಸಿರುತ್ತಾರೆ.

ಆದುದರಿಂದ ನಾವು ಚೆನ್ನಾಗಿ ವಿಮರ್ಶಿಸಿ ನೋಡಿದುದಾದರೆ ಆ ಲಕ್ಷ್ಮೀ ಕಾಂತನೇ ಮೋಕ್ಷೋಪಾಯಕ್ಕೆ ಪ್ರಧಾನಸಾಧನನೆಂಬುವನು ಏರ್ಪಟ್ಟಿತು.

ಉಪಾಯೋಪೇಯದ ಸ್ವರೂಪನಿರೂಪಣವು

ಇವರ್‌ಗಳುಕ್ಕು – ಈ ಸದ್ವಾರಕ ಅದ್ವಾರಕ ಪ್ರಪನ್ನರುಗಳಿಗೆ, **ಕರ್ತವ್ಯ ಮಾನ ಉಪಾಯಮಾವದು?** – ಮಾಡತಕ್ಕ ಉಪಾಯ ಯಾವುದು? ಇಲ್ಲಿ ಕರ್ತವ್ಯಮಾನ ಎಂದು ಹೇಳಿರುವದರಿಂದ ಸಾಧ್ಯೋಪಾಯಗಳು ಮಾತ್ರ ಗ್ರಹಿಸ ಲ್ಪಟ್ಟವು. **ಒರು ಜ್ಞಾನವಿಕಾಸವಿಶೇಷಂ** ಒಂದು ಜ್ಞಾನವಿಕಾಸದ ವಿಶೇ ಷವು. "**ಜ್ಞಾನಾನ್ಮೋಕ್ಷಃ**" ಎಂಬುವ ಉಕ್ತಿಯು ಸಾಧುವೆಂದು ಇದರಿಂದ

ಮಾಯ್ ಪ್ರಾಪ್ತಿರೂಪಮಾನ ಉಪೇಯಮಾವದು ? ಒರುಜ್ಞಾನ ವಿಕಾಸವಿಶೇಷಮ್.

ಇವತ್ತಿಲ್ ಉಪಾಯಮಾಕಿರಜ್ಞಾನವಿಕಾಸವಿಶೇಷಂ, ಕರಣಸಾಪೇಕ್ಷಮುಮಾಯ್ ಶಾಸ್ತ್ರವಿಹಿತಮುಮಾಯ್ ಸತ್ಯತ್ವಾದಿಗಳಾನ ಸ್ವರೂಪನಿರೂಪಧರ್ಮಙ್ಗಳ್ ಅಞ್ಜಿನ್ಡೋಡೇ ಕೂಡಿನ ಅವ್ವೋ ವಿದ್ಯಾವಿಶೇಷ ಪ್ರತಿನಿಯತ ಗುಣಾದಿಗಳಿನಾಲೇ ನಿಯತ ಬ್ರಹ್ಮವಿಷಯಮುಮು

ತೋರಿಬರುತ್ತದೆ. ಎರಡೂ ಜ್ಞಾನರೂಪವಾದುವೆಂಬುವದು ಇದರಿಂದ ಹೇಳಲ್ಪಟ್ಟಿತು. **ಇತ್ತಾಲೇ ಸಾಧ್ಯಮಾಯ್ ಪ್ರಾಪ್ತಿರೂಪಮಾನ ಉಪೇಯಮಾವದು?** – ಈ ಸಾಧ್ಯೋಪಾಯದಿಂದಲೇ ಸಾಧಿಸಬಹುದಾದ ಪ್ರಾಪ್ತಿರೂಪವಾದ ಉಪೇಯವು ಯಾವುದು? ಅದೂ ಒಂದು ಜ್ಞಾನವಿಕಾಸವೇ. ಹೀಗೆ ಸಾಧ್ಯೋಪಾಯವೂ ಉಪೇಯವೂ ಎರಡೂ ಜ್ಞಾನವಿಕಾಸವಿಶೇಷವೆಂದು ಹೇಳಲ್ಪಟ್ಟಿತ್ತು ಹಾಗಾದರೆ ಎರಡೂ ಒಂದೆಯೋ ಎಂದರೆ ಅವೆರಡಕ್ಕೂ ತುಂಬಾ ವೈಲಕ್ಷಣ್ಯ ಉಂಟೆಂದು ತಿಳಿಸುತ್ತಾರೆ.

ಇವತ್ತಿಲ್ – ಈ ಉಪಾಯೋಪೇಯಗಳಲ್ಲಿ, ಉಪಾಯವಾಗಿರುವ ಜ್ಞಾನವಿಕಾಸವಿಶೇಷವು, **ಕರಣಸಾಪೇಕ್ಷಮುಮಾಯ್** – ಮನಸ್ಸು ಮತ್ತು ಇಂದ್ರಿಯಗಳಪೇಕ್ಷೆಯುಳ್ಳದ್ದಾಗಿ, **ಶಾಸ್ತ್ರವಿಹಿತಮುಮಾಯ್** – ಶಾಸ್ತ್ರಗಳಲ್ಲಿ '**ಭಜಸ್ವ ಮಾಂ**' '**ಶರಣಂ ವ್ರಜ**' ಎಂದು ಹೇಳಲ್ಪಟ್ಟಿದುದಾಗಿ **ಸತ್ಯತ್ವಾದಿಗಳಾನ ಸ್ವರೂಪನಿರೂಪಕಧರ್ಮಂಗಳಞ್ಜಿನ್ಡೋಡೇ**-ತ್ಯತ್ವವೇ ಮೊದಲಾದ ಭಗವತ್ಸ್ವರೂಪವನ್ನು ತಿಳಿಸುವ ಧರ್ಮಗಳೈದರೊಂದಿಗೆ, ಅವು ಯಾವುವೆಂದರೆ:---ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವ ಇವುಗಳಿಂದ ಕೂಡಿದ, **ಅವ್ವೋ ವಿದ್ಯಾವಿಶೇಷ** – ಆಯಾಯಾ ಉಪಾಸನಾವಿದ್ಯಾ ಪ್ರಪತ್ತಿವಿದ್ಯಾ ವಿಶೇಷಗಳಲ್ಲಿ, **ಪ್ರತಿನಿಯತ** – ವ್ಯವಸ್ಥಿತವಾದ, **ಗುಣಾದಿಗಳನಾಲೇ** – ಗುಣಗಳು ಮತ್ತು ಆದಿಪದದಿಂದ ದಿವ್ಯಮಂಗಳವಿಗ್ರಹವು ಸೂಚಿಸಲ್ಪಟ್ಟಿತು; ಇವುಗಳಿಂದ, **ನಿಯತ ಬ್ರಹ್ಮವಿಷಯಮುಮಾಯಿರುಕ್ಕುಮ್**-ಅಂತಂತಹ ಗುಣವಿಶಿಷ್ಟನಾದ ಪರಬ್ರಹ್ಮವಿಷಯವಾಗಿರುತ್ತದೆ. ಈ ಸಾಧ್ಯೋಪಾಯಜ್ಞಾನವಿಶೇಷಕ್ಕೆ, ಇಂದ್ರಿಯಮನೋವ್ಯಾಪಾರಗಳಿಲ್ಲದೆ ಆಗುವದಿಲ್ಲವು, ಅದು ಶಾಸ್ತ್ರಗಳಲ್ಲಿ ವಿಹಿತವಾದುದಾಗಿರಬೇಕು, ಸತ್ಯತ್ವ ಮೊದಲಾದ ಐದು ಸ್ವರೂಪನಿರೂಪಕ ಧರ್ಮಗಳುಳ್ಳ ಭಗವಂತನ ವಿಷಯವಾದ ವಿದ್ಯೆಗಳಲ್ಲಿ ಹೇಳಿರುವಹಾಗೆ ಗುಣಗಳಿಂದಲೂ ದಿವ್ಯಮಂಗಳವಿಗ್ರಹದಿಂದಲೂ **ವಿಶಿಷ್ಟನಾದ ಭಗವಂತನ ವಿಷಯಿಕವಾಗಿರಬೇಕು.** ಇದರಿಂದ **ಸ್ವರೂಪನಿರೂಪಕ**

ಮಾಯಿರುಕ್ಕುಂ. ಉಪೇಯಮಾಗಿರ ಜ್ಞಾನ ವಿಕಾಸವಿಶೇಷಮ್ ಕರಣ ನಿರಪೇಕ್ಷಮುಮಾಯ್, ಸ್ವಭಾವಪ್ರಾಪ್ತಮುಮಾಯ್, ಗುಣವಿಭೂತ್ಯಾದಿಗಳೆಲ್ಲಾತ್ತಾಲುಮ್ ಪರಿಪೂರ್ಣಬ್ರಹ್ಮವಿಷಯಮುಮಾಯಿರುಕ್ಕುಮ್.

ಧರ್ಮಗಳೆಲ್ಲಾ ಎಲ್ಲಾ ವಿದ್ಯೆಗಳಲ್ಲೂ ನಿಯತವಾದವೆಂಬುವದು ಏರ್ಪಟ್ಟಿತು. ಇದರಿಂದ ಸೂತ್ರಕಾರರಭಿಪ್ರಾಯವು ಸಮರ್ಥನೆಮಾಡಿ ಹೇಳಲ್ಪಟ್ಟಿತು. ಉಪೇಯವಾಗಿರುವ ಜ್ಞಾನವಿಕಾಸವಿಶೇಷವು, **ಕರಣನಿರಪೇಕ್ಷಮುಮಾಯ್** – ಮನಸ್ಸು ಇಂದ್ರಿಯಗಳ ಸಹಾಯಬೇಕಿಲ್ಲದುದಾಗಿಯೂ, **ಸ್ವಭಾವಪ್ರಾಪ್ತಮುಮಾಯ್** – ಸ್ವಭಾವದಿಂದಲೇ ಉಂಟಾಗುವದಾಗಿಯೂ, **ಗುಣವಿಭೂತ್ಯಾದಿಗಳೆಲ್ಲಾತ್ತಾಲುಂ**- ಕಲ್ಯಾಣಗುಣಗಳು ಉಭಯವಿಭೂತಿಗಳು ಇವೇ ಮೊದಲಾದವುಗಳೆಲ್ಲವುಗಳಿಂದಲೂ ಕೂಡಿದ, **ಪರಿಪೂರ್ಣಬ್ರಹ್ಮವಿಷಯಮುಮಾಯ್**-ಹೀಗೆ ಇವೆಲ್ಲವುಗಳಿಂದಲೂ ಪರಿಪೂರ್ಣನಾದ ಪರಬ್ರಹ್ಮವಿಷಯವಾಗಿಯೂ, **ಇರುಕ್ಕುಂ** – ಇರುತ್ತದೆ.

ಇಲ್ಲಿ ಉಪಾಯರೂಪವಾದ ಜ್ಞಾನವಿಕಾಸವಿಷಯವು ಮೂರು ವಿಶೇಷಣಯುಕ್ತವಾದುದಾಗಿಯೂ, ಹಾಗೆಯೇ ಉಪೇಯರೂಪ ಜ್ಞಾನವಿಕಾಸ ವಿಷಯವೂ ಮೂರುವಿಶೇಷಣಗಳಿಂದ ಯುಕ್ತವಾದುದಾಗಿಯೂ ಹೇಳಲ್ಪಟ್ಟು, ಅದರಿಂದ ಅವುಗಳಿಗಿರುವ ಪರಸ್ಪರ ವೈಲಕ್ಷಣ್ಯವು ತೋರಿಸಲ್ಪಟ್ಟಿತು. ಉಪಾಯದಶೆಯಲ್ಲಿನ ಜ್ಞಾನವಿಶೇಷಕ್ಕೆ (೧) ಮನಸ್ಸು ಇಂದ್ರಿಯಗಳ ಸಾಪೇಕ್ಷ್ಯವು ಅವಶ್ಯಕವು, ಉಪೇಯದಶೆಯಲ್ಲಿ ಅವುಗಳು ಬೇಕಾಗಿಲ್ಲವು. (೨) ಉಪಾಯದಶೆಯಲ್ಲಿ ಜ್ಞಾನವು ಶಾಸ್ತ್ರವಿಹಿತವಾಗಿರತಕ್ಕದ್ದು ತದನುಸಾರವರ್ತಿಸತಕ್ಕದ್ದಾಗಿರಬೇಕು, ಉಪೇಯದಶೆಯಲ್ಲಿ ಅಂತಹ ಅವಶ್ಯಕತೆಯು ಇಲ್ಲವು. ಏಕೆಂದರೆ:---ಜ್ಞಾನವಿಕಾಸವು "**ಸ್ವೇನ ರೂಪೇಣಾಭಿನಿಷ್ಪದ್ಯತೇ**" ಎಂಬ ಶ್ರುತಿಯಲ್ಲಿಯೂ, ಶಾರೀರಕ ಶಾಸ್ತ್ರದ ಸಂಪದ್ಯಾವಿರ್ಭಾವಾಧಿಕರಣದಲ್ಲಿಯೂ, ಉಪಪಾದಿಸಿರುವ ಹಾಗೆ ಸ್ವತಃ ಆವಿರ್ಭವಿಸುತ್ತದೆ. ಮೊದಲು ವಿಕಾಸವಾಗಿದ್ದುದು ಪ್ರಕೃತಿಸಂಬಂಧದಿಂದಮಾಲಿನ್ಯ ಹೊಂದಿತು. ಪ್ರಕೃತಿಸಂಬಂಧವು ಮುಕ್ತದಶೆಯಲ್ಲಿಲ್ಲದುದರಿಂದ ಸ್ವಯಮೇವ ಪ್ರಕಾಶಿಸುತ್ತದೆ. ಹೇಗೆಂದರೆ, ವಿಷ್ಣುಧರ್ಮದಲ್ಲಿ ಒಂದು ನಿದರ್ಶನದಿಂದ ಉಪಪಾದಿಸಲ್ಪಟ್ಟಿರುತ್ತದೆ.

ಯಥಾ ನ ಕ್ರಿಯತೇ ಜ್ಯೋತ್ಸ್ನಾ ಮಲಪ್ರಕ್ಷಾಳನಾನ್ಮಣೇಃ ।
ದೋಷಪ್ರಹಾಣಾನ್ನ ಜ್ಞಾನಮಾತ್ಮನಃ ಕ್ರಿಯತೇ ತಥಾ॥

ಎಂದರೆ ರತ್ನದ ಮೇಲಿನ ಕೊಳೆಯನ್ನು ತೊಳೆಯುವದರಿಂದ, ಜ್ಯೋತ್ಸ್ನಾ ಎಂದರೆ ಪ್ರಕಾಶವು ಹೇಗೆ ಹೊಸದಾಗಿ ಉಂಟುಮಾಡಲ್ಪಡದೆ, ಸ್ವತಃ ಉಂಟಾಗುತ್ತದೋ,

ಉಪಾಸಿತಗುಣಾದೇರ್ಯಾ ಪ್ರಾಪ್ತಾವಪ್ಯಬಹಿಷ್ಕೃತಾ ।
ಸಾ ತತ್ಕ್ರತುನಯಗ್ರಾಹ್ಯಾ ನಾಕಾರಾನ್ತರವರ್ಜನಂ ॥ ೪ ॥

ಹಾಗೆಯೇ ಜೀವಾತ್ಮನ ಜ್ಞಾನವೂ ಕೂಡ ಕರ್ಮಕೃತ ದೋಷಪರಿಹಾರದಿಂದ, **ನ ಕ್ರಿಯತೇ**-ಹೊಸದಾಗಿ ಉಂಟುಮಾಡಲ್ಪಡಲಿಲ್ಲವು, ಸ್ವತಃ ಇದ್ದುದೇ ಆವಿರ್ಭಾವಿಸುತ್ತದೆ ಎಂಬಭಿಪ್ರಾಯವು. ಆದುದರಿಂದ ಉಪಾಯದಶೆಯ ಜ್ಞಾನಕ್ಕೂ ಉಪೇಯದಶೆಯ ಜ್ಞಾನಕ್ಕೂ ತುಂಬಾ ವ್ಯತ್ಯಾಸ ಉಂಟೆಂಬ ಭಾವವು. (೨) ಉಪಾಯಜ್ಞಾನವು ಸತ್ಯತ್ವಾದಿ ಐದು ಸ್ವರೂಪ ನಿರೂಪಕಧರ್ಮಗಳಿಂದಲೂ ಮತ್ತು ಒಂದೆರಡು ಆಯಾ ವಿದ್ಯೆಗಳಲ್ಲಿ ಹೇಳಿರುವ ಗುಣಾದಿಗಳಿಂದ **ಮಾತ್ರ** ಯುಕ್ತನಾದ ಪರಬ್ರಹ್ಮವಿಷಯವಾದುದು; ಉಪೇಯಜ್ಞಾನವಾದರೋ ಸಮಸ್ತಕಲ್ಯಾಣಗುಣ, ರೂಪವಿಭವೈಶ್ವರ್ಯಾದಿಗಳಿಂದ ಯುಕ್ತನಾದ ಪರಿಪೂರ್ಣಬ್ರಹ್ಮವಿಷಯಿಕವಾದುದು, ಎಂಬಭಿಪ್ರಾಯವು. ಈ ಅಭಿಪ್ರಾಯಗಳನ್ನೇ ಮುಂದೆ ಒಂದು ಕಾರಿಕೆಯಿಂದ ವ್ಯವಸ್ಥೆ ಮಾಡಿ ಅನುಗ್ರಹಿಸುತ್ತಾರೆ. ಎಲ್ಲೆಲ್ಲಿ ಹೀಗೆ ವ್ಯವಸ್ಥೆಮಾಡಿ ಸಿದ್ಧಾಂತಿಸಿ ಹೇಳಬೇಕೋ, ಅಲ್ಲಲ್ಲೆಲ್ಲಾ ಒಂದು ಕಾರಿಕಾರೂಪದಲ್ಲಿ ಅನುಗ್ರಹಿಸುತ್ತಾರೆ.

ಆದರೆ ಹೀಗೆ ಉಪಾಯೋಪೇಯ ಜ್ಞಾನವಿಶೇಷಗಳಿಗೆ ಪರಸ್ಪರ ವೈಲಕ್ಷಣ್ಯವನ್ನು ಹೇಳಿದರೆ "ತತ್ಕ್ರತುನ್ಯಾಯ" ವೆಂಬುವದಕ್ಕೆ ವಿರೋಧ ಉಂಟಾಗುತ್ತದೆ. ಶ್ರುತಿಯು ಹೇಳಿರುವದೇನೆಂದರೆ:---**ಯಥಾಕ್ರತುರಸ್ಮಿನ್ ಲೋಕೇ ಭವತಿ ತಥೇತಃಪ್ರೇತ್ಯಭವತಿ**" ಎಂದರೆ, **ಯಥಾಕ್ರತುಃ**- ಯಾವ ರೀತಿಯಲ್ಲಿ ಉಪಾಸನೆಯನ್ನು ಮಾಡುವ ಪುರುಷನು, **ಅಸ್ಮಿನ್ ಲೋಕೇ ಭವತಿ** – ಈ ಲೋಕದಲ್ಲಿ ಆಗುತ್ತಾನೋ, **ತಥಾ** - ಹಾಗೆಯೇ, **ಇತಃ ಪ್ರೇತ್ಯ** - ಇಲ್ಲಿಂದ ದೇಹಾವಸಾನ ಹೊಂದಿ ಹೊರಟು, **ಭವತಿ** - ಆಗುವನು, ಎಂದು ಇಲ್ಲಿನ ಉಪಾಸನಾಜ್ಞಾನಾನುಸಾರವೇ ಉಪೇಯಜ್ಞಾನವಿರಬೇಕಲ್ಲಾ ಎಂದರೆ, ಅದಕ್ಕೆ ಮುಂದಿನ ಕಾರಿಕೆಯಿಂದ ಸಮಾಧಾನ ಹೇಳುತ್ತಾರೆ,

ಉಪಾಸಿತಗುಣಾದೇಃ, ಉಪಾಸಿತ - ಉಪಾಸಿಸಲ್ಪಟ್ಟ ಎಂದರೆ ಉಪಾಸನಕ್ಕೆ ವಿಷಯವಾದ **ಗುಣಾದೇಃ**- ಪರಮಾತ್ಮನ ಕಲ್ಯಾಣಗುಣ, ಆದಿ ಶಬ್ದದಿಂದ ದಿವ್ಯಮಂಗಳವಿಗ್ರಹವೂ ಪರ್ಯಂಕ ಮೊದಲಾದ ಸ್ಥಾನವೂ ಹೇಳಲ್ಪಟ್ಟವು, ಕಲ್ಯಾಣಗುಣಗಳೇ ಮೊದಲಾದವುಗಳಿಗೆ, **ಪ್ರಾಪ್ತಾವಪಿ** - ಪ್ರಾಪ್ತಿದಶೆಯಲ್ಲಿಯೂ ಕೂಡ **ಯಾ ಅಬಹಿಷ್ಕೃತಾ** - ಯಾವ ಬಿಟ್ಟು ಹೋಗದೇ ಇರುವಿಕೆಯುಂಟೋ **ಸಾ** - ಅದೀಗ, **ತತ್ಕ್ರತುನಯಗ್ರಾಹ್ಯಾ** - ತತ್ಕ್ರತುನ್ಯಾಯವೆಂದು ಗ್ರಹಿಸತಕ್ಕದ್ದು, **ಆಕಾರಾನ್ತರವರ್ಜನಂ** - ಉಪಾಸನೆಮಾಡಿದ ಆಕಾರಕ್ಕಿಂತ ಬೇರೆಯಾದ

ಪ್ರಾಪ್ತಿರೂಪಮಾನ ಇವ್ವನುಭವತ್ತಿನುಡೈಯ ಪರೀವಾಹಮಾಯ್ ಕ್ಕೊಂಡು ಕೈಙ್ಕರ್ಯಮ್ ಉಪೇಯಮ್.

ಆಕಾರಗಳಿಲ್ಲದಿರಬೇಕೆಂಬುವದೇನೂ, ನ - ಅಲ್ಲವು. ತತ್ಕ್ರತುನ್ಯಾಯಾಭಿಪ್ರಾಯವೇನೆಂದರೆ ತಿಳಿಸುತ್ತಾರೆ. ಪ್ರಾಪ್ಯನಾದ ಪರಮಾತ್ಮನು ಯಾವ ಕಲ್ಯಾಣಗುಣಗಳುಳ್ಳವನೆಂದು ಉಪಾಸಕನು ಉಪಾಸಿಸುತ್ತಾನೋ, ಅಂತಹ ಗುಣ ಮೊದಲಾದವುಗಳುಳ್ಳ ಪರಮಾತ್ಮನನ್ನೇ ಪ್ರಾಪ್ತದಶೆಯಲ್ಲೂ ಅನುಭವಿಸುವನು ಎಂಬರ್ಥವೇ ವಿನಾ ಪರಬ್ರಹ್ಮಕ್ಕೆ ಇತರ ಕಲ್ಯಾಣಗುಣಗಳು ಮೊದಲಾದವು ಇರಕೂಡದು ಎಂಬ ತಾತ್ಪರ್ಯವಲ್ಲವು. ಉಪಾಯರೂಪ ಜ್ಞಾನದಲ್ಲಿ ಯಾವ ಗುಣಾದಿಗಳಿಂದ ಉಪಾಸಿಸಲ್ಪಟ್ಟರೋ, ಪ್ರಾಪ್ಯದಶೆಯಲ್ಲಿ ಅವುಗಳ ಅಬಹಿಷ್ಕ್ರಿಯಾ - ಎಂದರೆ ಪರಿತ್ಯಾಗವಿರಕೂಡದು; ಅವುಗಳು ಉಪಾಸ್ಯನಾದ ಪರಮಾತ್ಮನಲ್ಲಿ ಇದ್ದೇ ಇರತಕ್ಕದ್ದು ; ಎಂಬ ತಾತ್ಪರ್ಯವೇ ವಿನಾ ಪರಮಾತ್ಮನಲ್ಲಿ ಇತರ ಸೌಶೀಲ್ಯಸೌಲಭ್ಯಾದಿ ಗುಣಗಳಿರಕೂಡದೆಂಬ ಅಭಿಪ್ರಾಯವಲ್ಲವು ಎಂದು ಹೇಳುತ್ತಾರೆ. ಇವುಗಳೂ ಕೂಡ ಇರಕೂಡದೆಂದು ಏರ್ಪಟ್ಟರೆ ಪರಬ್ರಹ್ಮವು ಮುಕ್ತದಶೆಯಲ್ಲಿ ಒಬ್ಬೊಬ್ಬ ಮುಕ್ತನಿಗೆ ಒಂದೊಂದು ವಿಧವಾಗಿ ತೋರಬೇಕಾಗಿ ಬರುತ್ತದೆ. ಆಗ ಪರಬ್ರಹ್ಮನು ಗುಣಾದಿಪರಿಪೂರ್ಣನಾಗಿದ್ದರೂ ಹಾಗೆ ತೋರದಿರುವದರಿಂದ ಜ್ಞಾನಸಂಕೋಚ ಕೂಡ ಮುಕ್ತದಶೆಯಲ್ಲುಂಟು ಎಂದು ಹೇಳಬೇಕಾಗುತ್ತದೆ. **'ಸ್ವೇನ ರೂಪೇಣಾಭಿಸಂಪದ್ಯತೇ'** ತನ್ನ ಸ್ವಸ್ವರೂಪಾವಿರ್ಭಾವವು ಉಂಟಾಗುತ್ತದೆಂದು ಹೇಳುವ ಶ್ರುತಿಸೂತ್ರಗಳಿಗೂ ವಿರೋಧ ಉಂಟಾಗುತ್ತದೆ. ಅದೂ ಅಲ್ಲದೆ **'ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ ವಿಪಶ್ಚಿತಾ' 'ನಿರಂಜನಃ ಪರಮಂ ಸಾಮ್ಯಮುಪೈತಿ'** ಇತ್ಯಾದಿ ಶ್ರುತಿಗಳಿಗೆ ವಿರೋಧ ಉಂಟಾಗುತ್ತದೆ. ಆದುದರಿಂದ ಯಾವ ಯಾವ ಗುಣಗಳುಂಟೆಂದು ಪರಬ್ರಹ್ಮವನ್ನುಪಾಸಿಸುತ್ತಾನೋ, ಅಂತಹ ಗುಣಗಳುಳ್ಳವನಾಗಿಯೇ ತೋರುವನೆಂಬರ್ಥವು. ಇದರಿಂದ ಪರಮಾತ್ಮನಿಗೆ ಇತರ ಕಲ್ಯಾಣಗುಣಗಳಿಲ್ಲವೆಂಬುವ, ಮತ್ತು ಅಂತಹ ಕಲ್ಯಾಣಗುಣಾಕರನಾದ ಪರಬ್ರಹ್ಮನ ಅನುಭವವೂ ಇಲ್ಲವೆಂಬರ್ಥವಲ್ಲವು.

ಪ್ರಾಪ್ತಿದಶೆಯಲ್ಲಿ ಹೀಗೆ ಪರಿಪೂರ್ಣ ಬ್ರಹ್ಮಾನುಭವರೂಪ ಜ್ಞಾನವಿದ್ದರೂ, ಕೈಂಕರ್ಯಪ್ರಾಪ್ತಿಯೂ ಕೂಡ ಮೋಕ್ಷಫಲವಾಗಿರುವದರಿಂದ, ಆ ಕೈಂಕರ್ಯಪ್ರಾಪ್ತಿಯು ಹೇಗೆ? ಆ ಉಪೇಯರೂಪಜ್ಞಾನವಿಕಾಸವಿಶೇಷದಲ್ಲಿ ಕೈಂಕರ್ಯದ ಅನ್ವಯವು ಹೇಗೆ? ಎಂಬೀ ಶಂಕಾವಿಗೆ ಉತ್ತರವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಪ್ರಾಪ್ತಿರೂಪಮಾನ ಇವ್ವನುಭವತ್ತಿನುಡೈಯ - ಪ್ರಾಪ್ತಿರೂಪವಾದ

ಭಗವತಃ ಉಪಾಯೋಪೇಯತ್ವಂ

ಇವ್ವುಪಾಯರೂಪನಾಯುಮ್, ಪ್ರಾಪ್ತಿರೂಪನಾಯುಮ್, ಇರುಕ್ಕಿರ ಜ್ಞಾನತ್ತುಕ್ಕು ವಿಷಯುಮಾಯ್ ಕ್ಕೊಂಡು ಫಲಪ್ರದತ್ವ ಭೋಗ್ಯತ್ವಾದಿ ವೇಷತ್ತಾಲೇ ಈಶ್ವರನುಕ್ಕು ಉಪಾಯತ್ವಮುಮ್ ಉಪೇಯತ್ವಮುಮ್.

ಈ ಪರಿಪೂರ್ಣಬ್ರಹ್ಮಾನುಭವವ, ಪ್ರವಾಹವಾಗಿ ಪರಿಣಮಿಸಿ, ಎಂದರೆ **ಪರೀವಾಹಮಾಯ್ ಕ್ಕೊಂಡು** - ಆನಂದಾತಿಶಯದ ಆಧಿಕ್ಯವು ಹೆಚ್ಚಾಗಿ ಪ್ರವಹಿಸುವ ಹಾಗೆ ಆಗುವದರಿಂದ, ಕೈಂಕರ್ಯವು ಉಪೇಯವು. ಪ್ರಾಪ್ತಿಯು ಒಂದು ಜ್ಞಾನವಿಕಾಸವಿಶೇಷವಾಗಿ, ನಿರತಿಶಯಭೋಗವಸ್ತುವಿನ ಅನುಭವರೂಪವಾದುದು. ಆ ಅನುಭವದಿಂದುಂಟಾಗುವ ಆನಂದವೇ ತುಂಬಿ ತುಳುಕಿ, ಅದು ಪರಮಪುರುಷನಿಗೆ ಕೈಂಕರ್ಯಮಾಡದೇ ಇರಲು ಸಾಧ್ಯವೇ ಇಲ್ಲವಾದುದರಿಂದ ಆ ಜ್ಞಾನವಿಕಾಸವಿಶೇಷವೇ ಕೈಂಕರ್ಯರೂಪವಾಗಿ ಪರಿಣಮಿಸುತ್ತದೆ. ಆದುದರಿಂದ ಕೈಂಕರ್ಯವೂ ಉಪೇಯವೇ. ಆ ಕಾರಣದಿಂದಲೇ ಶ್ರೀಭಾಷ್ಯಕಾರರವರು ಶ್ರೀಶರಣಾಗತಿಗದ್ಯದಲ್ಲಿ **ನಿತ್ಯಕಿಙ್ಕರೋಭವಾನಿ** ಎಂಬುವದರಿಂದ ಕೈಂಕರ್ಯವೇ ಮುಖ್ಯಫಲವಾಗಿ ಹೇಳಿದರು.

ಭಗವಂತನಿಗೆ ಉಪಾಯೋಪೇಯತ್ವ ಸಮರ್ಥನವು

ಈ ವಾಕ್ಯಕ್ಕೆ ಅನ್ವಯವು ಹೇಗೆಂದರೆ:--"ಇವ್ವುಪಾಯರೂಪಮಾಯಿರುಕ್ಕಿರ ಜ್ಞಾನತ್ತುಕ್ಕು ವಿಷಯುಮಾಯ್ ಕೊಂಡು ಫಲಪ್ರದತ್ವವೇಷತ್ತಾಲೆ ಈಶ್ವರನುಕ್ಕು ಉಪಾಯತ್ವಮುಣ್ಡು; ಇಪ್ಪ್ರಾಪ್ತಿರೂಪಮಾಯಿರುಕ್ಕಿರ ಜ್ಞಾನತ್ತುಕ್ಕು ವಿಷಯುಮಾಯ್ ಕ್ಕೊಂಡು, ಭೋಗ್ಯತ್ವಾದಿ ವೇಷತ್ತಾಲೆ ಈಶ್ವರನುಕ್ಕು ಉಪೇಯತ್ವಮುಮ್ ಉಣ್ಡು." ಈ ವಾಕ್ಯಕೊನೆಯಲ್ಲಿ **ಉಣ್ಡು** ಎಂಬ ಪದವನ್ನು ಇಟ್ಟುಕೊಳ್ಳತಕ್ಕದ್ದು. **ಇವ್ವುಪಾಯ ರೂಪಮಾಯಿರುಕ್ಕಿರ** - ಈ ಉಪಾಯವಾಗಿರುವ, **ಜ್ಞಾನತ್ತುಕ್ಕು ವಿಷಯುಮಾಯ್ ಕೊಂಡು** - ಜ್ಞಾನಕ್ಕೆ ವಿಷಯವಾಗಿ, **ಫಲಪ್ರದತ್ವವೇಷತ್ತಾಲೆ** - ಫಲವನ್ನು ಕೊಡುವ ರೂಪದಲ್ಲಿ, **ಈಶ್ವರನುಕ್ಕುಮುಪಾಯತ್ವಮುಣ್ಡು** - ಈಶ್ವರನಿಗೆ ಉಪಾಯವೂ ಉಂಟು; ಮತ್ತು **ಇಪ್ಪ್ರಾಪ್ತಿರೂಪಮಾಯಿರುಕ್ಕಿರ ಜ್ಞಾನತ್ತುಕ್ಕು** - ಈ ಪ್ರಾಪ್ತಿರೂಪವಾದ ಜ್ಞಾನಕ್ಕೆ, **ವಿಷಯುಮಾಯ್ ಕೊಂಡು** - ವಿಷಯವಾದುದಾಗಿ, **ಭೋಗ್ಯತ್ವಾದಿ ವೇಷತ್ತಾಲೇ** - ಭೋಗ್ಯವಾಗಿರುವಿಕೆಯೇ ಮೊದಲಾದ ರೂಪದಿಂದ, **ಈಶ್ವರನುಕ್ಕು**

ಭಕ್ತಪ್ರಪನ್ನ ವಿಷಯೇ ಭಗವತ ಉಪಾಯತ್ವ ಪ್ರಕಾರಃ

ಇವ್ವೀಶ್ವರನುಡೈಯ ಉಪಾಯತ್ವಮ್ ಅದ್ವಾರಕ ಪ್ರಪತ್ತಿನಿಷ್ಠರ್ ಪಕ್ಕಲ್ ಉಪಾಯಾನ್ತರಸ್ಥಾನನಿವೇಶತ್ತಾಲೆ **ವಿಶಿಷ್ಟಮಾಯಿರುಕ್ಕುಮ್.**

ಪೇಯತ್ವಮೂ ಉಂಡು - ಈಶ್ವರನಿಗೆ ಉಪೇಯಭಾವವೂ ಉಂಟು. ಇಲ್ಲಿ ಆದಿಶಬ್ದದಿಂದ, ಕೈಂಕರ್ಯಸ್ವೀಕಾರವು ಹೇಳಲ್ಪಟ್ಟಿತು. ಇಲ್ಲಿ ಈಶ್ವರನಿಗೆ ಫಲಪ್ರದತ್ವವಿರುವದರಿಂದ ಉಪಾಯತ್ವವಿರುವದೆಂದೂ, ಭೋಗ್ಯತ್ವ, ಕೈಂಕರ್ಯಸ್ವೀಕಾರಗಳು ಇರುವದರಿಂದ ಉಪೇಯತ್ವವೂ ಉಂಟೆಂದು ಹೇಳುತ್ತಾರೆ. ಫಲಪ್ರದತ್ವವು ಕಾರಣವು, ಭೋಗ್ಯತ್ವವು ಕಾರ್ಯವು. ಮುಂದಿನ ವಾಕ್ಯಗಳಿಂದ ಈ ಸರ್ವೇಶ್ವರನ ಉಪಾಯತ್ವವು ಇಬ್ಬರು ಅಧಿಕಾರಿಗಳ ವಿಷಯದಲ್ಲೂ ಎಂದರೆ ಸದ್ವಾರಕ ಅದ್ವಾರಕ ಪ್ರಪತ್ತಿನಿಷ್ಠರ ವಿಷಯಗಳಲ್ಲೂ ಸಮಾನವೇ ಹೇಗೆ ಎಂಬುವದರ ವಿಷಯದಲ್ಲಿ ವಿಶೇಷ ಕೊಡಿಸುತ್ತಾರೆ.

ಭಕ್ತಿನಿಷ್ಠ ಪ್ರಪತ್ತಿನಿಷ್ಠರ ವಿಷಯದಲ್ಲಿ ಸರ್ವೇಶ್ವರನ ಉಪಾಯತ್ವ ಪ್ರಕಾರವು.

ಇವ್ವೀಶ್ವರನುಡೈಯ ಉಪಾಯತ್ವಮ್-ಈ ಸರ್ವೇಶ್ವರನ ಉಪಾಯಭಾವವು, **ಅದ್ವಾರಕಪ್ರಪತ್ತಿನಿಷ್ಠರ್ ಪಕ್ಕಲ್** - ಸ್ವತಂತ್ರ ಪ್ರಪತ್ತಿನಿಷ್ಠನ ವಿಷಯದಲ್ಲಿ ಎಂದರೆ ಭರನ್ಯಾಸವನ್ನನುಷ್ಠಿಸುವವನಲ್ಲಿ, **ಉಪಾಯಾನ್ತರಸ್ಥಾನನಿವೇಶತ್ತಾಲೆ** - ಉಪಾಯಾಂತರವೆಂದರೆ ಬೇರೆ ಉಪಾಯವಾದ ಭಕ್ತಿನಿಷ್ಠೆಯು ಅವರ **ಸ್ಥಾನನಿವೇಶತ್ತಾಲೆ** - ಅವರ ಸ್ಥಾನದಲ್ಲಿ ಸರ್ವೇಶ್ವರನೇ ನಿಲ್ಲುವದರಿಂದ, **ವಿಶಿಷ್ಟಮಾಯಿರುಕ್ಕುಂ** - ವಿಶೇಷವಾದದ್ದಾಗಿರುತ್ತದೆ. ಪ್ರಪತ್ತಿಮಾರ್ಗದಲ್ಲಿ ಸರ್ವೇಶ್ವರನೇ ಮುಖ್ಯೋಪಾಯವು ಎಂದು ವಿಶೇಷಿಸಿ ಹೇಳುತ್ತದೆ. ಅದು ಏಕೆಂದರೆ ಭಕ್ತಿಯೋಗದ ಪ್ರಪತ್ತಿಯ ಹಾಗೆ ಈ ಪ್ರಪತ್ತಿಗೆ ಇತರ ಉಪಾಸನಾದಿಗಳ ಅಪೇಕ್ಷೆಯಿಲ್ಲದೆ, ಆ ಭಕ್ತಿಸ್ಥಾನದಲ್ಲೇ ಸ್ವಾಮಿಯೇ ನಿಂತು ಉಪಾಯವಾಗುತ್ತಾನೆಂಬ ಭಾವವು. ಭಕ್ತಿಯೋಗದಲ್ಲಿ ಪ್ರಪತ್ತಿಯು ಅಂಗವು, ಉಪಾಸನೆಯು ಅಂಗಿಯು ಈ ಅದ್ವಾರಕಪ್ರಪತ್ತಿವಿಷಯದಲ್ಲಾದರೋ, ಉಪಾಸನಾರೂಪವಾದ ಭಕ್ತಿಯೋಗದ ಸ್ಥಾನದಲ್ಲಿ ಅಂಗಿಯಾಗಿ ಸರ್ವೇಶ್ವರನೇ; ಅಂಗವಾದ ಪ್ರಪತ್ತಿಸ್ಥಾನದಲ್ಲಿ, ಸ್ವತಂತ್ರಪ್ರಪತ್ತಿಯು. ಇದನ್ನು ವ್ಯಾಪೀಕರಿಸಿಯೇ ಸರ್ವೇಶ್ವರನೇ ಭಕ್ತಿಯೋಗಸ್ಥಾನದಲ್ಲಿದ್ದುಕೊಂಡು ವಿಳಂಬವಿಲ್ಲದೆ ಮೋಕ್ಷವನ್ನು ಕೊಡುವ

ಮುಮುಕ್ಷು ಅಧಿಕಾರಿಕ್ಕುಮ್ ಕರ್ಮಯೋಗಾರಂಭಮ್ ಮುದಲಾಕ ಉಪಾಸನಪೂರ್ತಿಪರ್ಯನ್ತಮಾಕ ನಡುವುಳ್ಳ ಕರ್ತವ್ಯಙ್ಗಳಿಲ್ ಅತ್ಯನ್ತಾಶಕ್ಯಮಾನ ನೇರ್‌ಗಳಿಲೇ ಇಪ್ಪ್ರಪತ್ತಿವಶೀಕೃತನಾನ ಈಶ್ವರನ್ ಪುಕನ್ದು ನಿನ್ರು ಅನ್ತ ದುಷ್ಕರ ಕರ್ತವ್ಯಙ್ಗಳಾಲೆ ವರುಮ್ ಪಾಪನಿವೃತ್ತಿಯೈಯುಮ್, ಸತ್ತ್ವೋನ್ಮೇಷಾದಿಗಳೈಯುಮ್ ಪಣ್ಣಿಕ್ಕೊಡುತ್ತು ಅವ್ವುಪಾಸನಮಾಗಿರ ಉಪಾಯತ್ತೈ ಫಲಪರ್ಯನ್ತಮಾಕ್ಕಿಕ್ಕೊಡುಕ್ಕುಮ್.

ನೆಂಬ ಭಾವವು. ಮುಂದೆ ಸದ್ವಾರಕಪ್ರಪತ್ತಿನಿಷ್ಠನ ವಿಷಯದಲ್ಲಿ, ಉಪಾಯವು ಭಕ್ತಿಯೋಗವಾಗಿರುವದರಿಂದ ಈಶ್ವರನು ಸಿದ್ಧೋಪಾಯನಾಗಿ ಏನೊಂದೂ ಮಾಡುವದಿಲ್ಲವೋ ಎಂದರೆ ಅಂತಹ ಚೋದ್ಯಕ್ಕೇನೂ ಅವಕಾಶವಿಲ್ಲವು. ಅಲ್ಲಿಯೂ ಕೂಡ ಸಿದ್ಧೋಪಾಯನಾಗಿ ಆತನನುಗ್ರಹವು ಆವಶ್ಯಕವೆಂದು ಹೇಳುತ್ತಾರೆ. **ಮುಮುಕ್ಷು ಅಧಿಕಾರಿಕ್ಕುಮ್**-ಇನ್ನೊಬ್ಬ ಅಧಿಕಾರಿಯಾದ ಸದ್ವಾರಕ ಪ್ರಪತ್ತಿನಿಷ್ಠನಿಗೂ ಕೂಡ, ಕರ್ಮಯೋಗದ ಆರಂಭನೇ ಮೊದಲಾದ, (ಮೊದಲಾದ ಎಂಬುವದರಿಂದ ಜ್ಞಾನಯೋಗ,ಭಕ್ತಿಯೋಗಗಳು ಹೇಳಲ್ಪಟ್ಟವು,) **ಉಪಾಸನಪೂರ್ತಿಪರ್ಯನ್ತಮಾಕ**- ಯೋಗವು ಪೂರ್ತಿಯಾಗುವವರಿವಿಗೂ ಎಂದರ ಪರಮಾತ್ಮಸಾಕ್ಷಾತ್ಕಾರವುಂಟಾಗುವವರಿವಿಗೂ ಎಂಬ ಭಾವವು, **ನಡುವುಳ್ಳ ಕರ್ತವ್ಯಙ್ಗಳಿಲ್**-ಮಧ್ಯೆ ಇರುವ ನಡಿಸಬೇಕಾದ ಅನುಷ್ಠಾನಗಳಲ್ಲಿ, **ಅತ್ಯನ್ತಾಶಕ್ಯಮಾನ** - ತುಂಬಾ ಅಸಾಧ್ಯಗಳಾದ ಅಥವಾ ದುಸ್ತರಗಳಾದ, **ನೇರ್‌ಗಳಿಲೇ** - ಶಾಸ್ತ್ರರೀತ್ಯಾ ಮಾಡಬೇಕಾದ ಅತಿಕಷ್ಟಗಳಾದ ಸ್ಥಳಗಳಲ್ಲಿ, ಈ ಪ್ರಪತ್ತಿಯಿಂದ **ವಶೀಕೃತನಾದ ಈಶ್ವರನು, ಪುಕನ್ದು ನಿನ್ರು** - ಉಪಾಯಸ್ಥಾನದಲ್ಲಿ ತಾನೇ ಪ್ರವೇಶಿಸಿ ನಿಂತು, **ಅನ್ತದುಷ್ಕರಕರ್ತವ್ಯಙ್ಗಳಾಲೆವರುಮ್** - ಅಂತಹ ಕಷ್ಟಸಾಧ್ಯವಾದ ಕರ್ತವ್ಯಗಳಾದ ಕರ್ಮಗಳನ್ನನುಷ್ಠಿಸಿ ಉಂಟಾಗುವ ಪಾಪಗಳ ನಿವೃತ್ತಿಯನ್ನೂ, **ಸತ್ತ್ವೋನ್ಮೇಷಾದಿಗಳೈಯುಮ್ ಪಣ್ಣಿಕ್ಕೊಡುತ್ತು** - ಸತ್ವವು ತಲೆದೋರುವ ಹಾಗೆಯೂ ಮಾಡಿಕೊಟ್ಟು, **ಅವ್ವುಪಾಸನಮಾಕಿರ ಉಪಾಯತ್ತೈ** - ಆ ಭಕ್ತಿಮಾರ್ಗವೆಂಬ ಸಾಧ್ಯೋಪಾಯವನ್ನು, **ಫಲಪರ್ಯನ್ತಮಾಕ್ಕಿಕೊಡುಕ್ಕುಮ್** - ಮೋಕ್ಷಫಲಪರ್ಯಂತವಾಗಿ ಸಾಧಿಸಿಕೊಡುವ ಹಾಗೆ, ಮಾಡುವನು ಆದುದರಿಂದ ಇಲ್ಲಿಯೂ ಕೂಡ ಸರ್ವೇಶ್ವರನು ಸಿದ್ಧೋಪಾಯನು ಎಂಬ ಭಾವವು. ಹೀಗೆ ಎರಡು ಕಡೆಯಲ್ಲಿಯೂ ಆತನು ಸಿದ್ಧೋಪಾಯನು ಎಂಬ ಭಾವವು. ಅದ್ವಾರಕಪ್ರಪತ್ತಿಯಲ್ಲಿ, ಭಕ್ತಿಯೋಗದ ಸ್ಥಳದಲ್ಲಿ ತಾನೇ ನಿಂತು ಕ್ಷಿಪ್ರದಲ್ಲಿ ಮೋಕ್ಷಪ್ರಾಪ್ತಿಯುಂಟಾಗುವ ಹಾಗೆ ಮಾಡುವನು. ಸದ್ವಾರಕಪ್ರಪತ್ತಿಯಲ್ಲಿಯೂ, ಬಹು

ಕರ್ಮಯೋಗಮ್

ಅಙ್ಗ ಕರ್ಮಯೋಗಮಾವದು ?—ಶಾಸ್ತ್ರತ್ತಾಲೆ ಜೀವ ಪರಮಾತ್ಮಯಾಥಾತ್ಮ್ಯ ಜ್ಞಾನಂ ಪಿರನ್ದಾಲ್, ತನಕ್ಕು ಶಕ್ಯಙ್ಗಳಾಯ್ ಫಲಸಙ್ಗಾದಿ ರಹಿತಙ್ಗಳಾನ ಕಾಮ್ಯಕರ್ಮಙ್ಗಳೋಡುಮ್ ನಿತ್ಯನೈಮಿತ್ತಿಕಙ್ಗಳೋಡುಮ್ ಕೂಡ ಸನಿಯಮಮಾಕ ಪರಿಗೃಹೀತಮಾಯಿರುಕ್ಕುಮ್

ಕಷ್ಟವಾದ ಕರ್ತವ್ಯಾಂಶಗಳನ್ನು ಮಾಡುವದು ದುಸ್ತರವು. ಹಾಗೆ ಅತಿ ದುಸ್ತರವಾದುದೆಂದು, ಉಪಾಸನವನ್ನು ಪೂರ್ತಿಮಾಡಿಕೊಡುವ ಭಾರವು ನಿನ್ನದು ಎಂದು ಯಾವಾಗ ನಂಬಿದನೋ, ಆಗ ಸರ್ವೇಶ್ವರನು ಉಪಾಯಭೂತನಾಗಿ, ಅಂತಹ ದುಸ್ತರವಾದ ಕರ್ತವ್ಯಾಂಶಗಳಿಂದ ಹೊಂದಬಹುದಾದ ಪಾಪ ನಿವೃತ್ತಿಯನ್ನು, ಮಾಡಿ, ಈತನಲ್ಲಿ ಸತ್ವೋದ್ರೇಕ ಉಂಟಾಗುವ ಹಾಗೆ ಮಾಡಿ, ಉಪಾಸನವನ್ನು ಪೂರ್ತಿಮಾಡಿಸಿ, ಮೋಕ್ಷಫಲವನ್ನು ಕೊಡುವನು ; ಹೀಗೆ ಸಿದ್ಧೋಪಾಯನಾಗುವನು ಎಂಬರ್ಥವು. ಸತ್ವೋನ್ಮೇಷಾದಿ ಎಂಬಲ್ಲಿರುವ ಆದಿಪದದಿಂದ ಉತ್ತರೋತ್ತರ ಉಂಟಾಗುವ ಜ್ಞಾನವಿಕಾಸವು ಹೇಳಲ್ಪಟ್ಟಿತು. ಮುಂದೆ ಈ ಎರಡು ಸಾಧ್ಯೋಪಾಯಗಳನ್ನು ಕುರಿತು ಹೇಳುವರಾಗಿ, ಪ್ರಥಮತಃ ಸದ್ವಾರಕ ಪ್ರಪತ್ತಿಯನ್ನು ಕುರಿತು ಹೇಳಲು ಹೊರಟು, ಮುಂದಿನ ಮೂರು ವಾಕ್ಯಗಳಿಂದ ಉಪಾಸನೆಗೆ ಅಙ್ಗವಾದ ಕರ್ಮಯೋಗವನ್ನು ಕುರಿತು ಹೇಳುತ್ತಾರೆ.

ಕರ್ಮಯೋಗವು.

ಅಙ್ಗ–ಆ **ಉಪಾಸನ** ರೂಪವಾದ ಭಕ್ತಿಮಾರ್ಗದ ಕರ್ತವ್ಯಗಳಲ್ಲಿ, **ಕರ್ಮಯೋಗಮ್** ಯಾವುದು ? **ಶಾಸ್ತ್ರತ್ತಾಲೆ ಜೀವ ಪರಮಾತ್ಮಯಾಥಾತ್ಮ್ಯ ಜ್ಞಾನಂ** – ಶಾಸ್ತ್ರಮೂಲಕವಾಗಿ, ಜೀವಾತ್ಮಪರಮಾತ್ಮರುಗಳ ವಿಷಯವಾದ ಯಥಾರ್ಥಜ್ಞಾನವು, **ಪಿರನ್ದಾಲ್** - ಹುಟ್ಟಿದರೆ, **ತನಕ್ಕು ಶಕ್ಯಙ್ಗಳಾಯ್** - ತನಗೆ ಅನುಷ್ಠಿಸಲು ಸಾಧ್ಯವಾಗಿ, **ಫಲಸಙ್ಗಾದಿರಹಿತಙ್ಗಳಾನ** - ಅದರ ಫಲಸಙ್ಗವೇ ಮೊದಲಾದವುಗಳಿಲ್ಲದ, ಇಲ್ಲಿ ಆದಿ ಪದದಿಂದ, ಕರ್ತೃತ್ವರೂಪಸ್ವಾತಂತ್ರ್ಯಮಮತಾದಿಗಳು ಹೇಳಲ್ಪಟ್ಟವು ; **ಕಾಮ್ಯಕರ್ಮಙ್ಗಳೋಡುಂ ನಿತ್ಯನೈಮಿತ್ತಿಕಙ್ಗಳೋಡುಂ ಕೂಡ**-ಕಾಮ್ಯ, ನಿತ್ಯ, ನೈಮಿತ್ತಿಕಕರ್ಮಗಳೊಂದಿಗೆ, **ಸನಿಯಮಮಾಕ** - ಶಾಸ್ತ್ರದಲ್ಲಿ ವಿಧಿಸಿರುವ ಪ್ರಕಾರ, ಎಂದರೆ ಫಲಸಿದ್ಧಿಯುಂಟಾಗುವ ತನಕ ತಪ್ಪದೇ ಮಾಡುತ್ತೇನೆಂಬ ಸ್ಥಿರಸಂಙ್ಕಲ್ಪಾದಿಗಳೊಂದಿಗೆ, - **ಪರಿಗೃಹೀ**

[illegible]

ತದ್ಯಾ[illegible] [illegible] [illegible] ಕರ್ಮ
ವಿಶೇಷವು [illegible] ಶಬ್ದಗಳು [illegible]—(೧) ಕಾಮ್ಯ (೨) ನಿತ್ಯ (೩) [illegible]. [illegible] ಕಾಮ್ಯಕರ್ಮಗಳಿಂದೇನೂ ಪ್ರಯೋಜನ[illegible]. ಆದಕ್ಕಾಗಿಯೇ ತಪಸಾ [illegible], ಫಲಸಂಗಾದಿ ರಹಿತ[illegible] – ಎಂಬಿವು ವಿಶೇಷಣಗಳು ಕೊಡಲ್ಪಟ್ಟಿವೆ. [illegible] ಅವಶ್ಯಕವಲ್ಲವೆಂದು ಹೇಳುವದಕ್ಕಾಗಿ ತಪಸಾ [illegible] ಎಂಬ ಪ್ರಯೋಗವು. ಈ ಕರ್ಮಯೋಗಕ್ಕೆ ಜೀವಪರಮಾತ್ಮ[illegible]ವು ಅವಶ್ಯಕವೆಂದು ಹೇಳಲ್ಪಟ್ಟಿರುತ್ತದೆ. ಆದರೆ ಕರ್ಮ[illegible]ಗಳಿಂದ ಜ್ಞಾನಯೋಗಪ್ರಾಪ್ತಿ ಎಂದು ಹೇಳಿರುವಾಗ ಕರ್ಮಯೋಗಕ್ಕೂ [illegible] ಆವಶ್ಯಕವೆಂದು ಹೇಳುವುದೇ? "[illegible] ಕರ್ಮಭಿಃ [illegible] ತತೋ ಜ್ಞಾನಂ ಪ್ರವರ್ತತೇ" ಎಂಬರೆ ಕರ್ಮಗಳಿಂದ [illegible]ವಾಗುವದರಿಂದ ಜ್ಞಾನ ಉಂಟಾಗುತ್ತದೆಂದು ಹೇಳಿಲ್ಲವೇ? ಎಂದರೆ, [illegible]ವು ಆಗಮೋತ್ಥಜ್ಞಾನವೆಂದೂ, ವಿವೇಕೋತ್ಥಜ್ಞಾನವೆಂದೂ ಎರಡು [illegible]. ಅದರಲ್ಲಿ ಮೊದಲನೇದಾದ ಆಗಮೋತ್ಥಜ್ಞಾನವು ಕರ್ಮಯೋಗದ ಮೊದಲೇ ಉಂಟಾಗಬಹುದಾದುದರಿಂದ, ಜೀವಪರಮಾತ್ಮ[illegible]ವು ಆವಶ್ಯಕವೆಂದು ಹೇಳಲ್ಪಟ್ಟಿತು. ಎರಡನೇದಾದ ವಿವೇಕೋತ್ಥಜ್ಞಾನವು ಕರ್ಮಯೋಗಾನುಷ್ಠಾನದಿಂದ ಪ್ರಾಪ್ತವಾಗುವಂಥಾದ್ದು. ಕಾಮ್ಯಕರ್ಮಗಳು ಸ್ವರ್ಗಾದಿ ಭೋಗಗಳಿಗೂ ಐಹಿಕಭೋಗಗಳಿಗೂ ಉಪಯುಕ್ತವಾದವುಗಳು. ಆದರೆ ಅವುಗಳನ್ನು ಫಲಾಭಿಸಂಧಿರಹಿತವಾಗಿ ನಡಿಸಿದರೆ ಪ್ರತ್ಯವಾಯವಿಲ್ಲವು. ಒಂದು ವೇಳೆ ಅನುಷ್ಠಿಸದಿದ್ದರೂ ಪ್ರತ್ಯವಾಯವಿಲ್ಲವು. ಮುಮುಕ್ಷುವಿಗೆ ಇವುಗಳಿಂದ ಪ್ರಯೋಜನವಿಲ್ಲವಾದುದರಿಂದ ಗ್ರಾಹ್ಯವಲ್ಲವು. ನಿತ್ಯಕರ್ಮಗಳು ಪ್ರತಿದಿನವೂ ಅನುಷ್ಠಿಸತಕ್ಕವುಗಳಾಗಿ ಹಾಗೆ ಅನುಷ್ಠಿಸದಿದ್ದರೆ ಪ್ರತ್ಯವಾಯ ಉಂಟಾಗುವ ಕರ್ಮಗಳು. ನೈಮಿತ್ತಿಕಗಳು [illegible] ಸಮಯಗಳಲ್ಲಿ ಅನುಷ್ಠಿಸತಕ್ಕವು. ಈ ನಿತ್ಯನೈಮಿತ್ತಿಕಗಳು ಮಾನಸ ಸಂದರ್ಭದಲ್ಲೂ ತ್ಯಾಜ್ಯಗಳಲ್ಲವೆಂದು [illegible] ನಿತ್ಯನೈಮಿತ್ತಿಕ[illegible] ಕೂಡದೆಂದು [illegible] ಹೇಳುತ್ತಾರೆ, ಇವುಗಳಿಗೆ, ತಪಸ್ಸು

(೧) [illegible]

ವಾಪರೇ ಯಜ್ಞಂ” ಎನ್ರು ತುಡಙ್ಗ ಶೊಲ್ಲಪ್ಪಟ್ಟ ದೇವಾರ್ಚನ ತಪಸ್ತೀರ್ಥದಾನ ಯಜ್ಞಾದಿಗಳ್. ಅಧಿಕಾರಿ ಭೇದತ್ತಾಲೆ ಪ್ರಪತ್ತಿ ತಾನೇ,

---

ಶಕ್ಯಳಾಜ್ಞಯ್ ಎಂಬುವದು ವಿಶೇಷವಲ್ಲವುಪಿಕೆಂದರೆ. ಈ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡಿಯೇತೀರಬೇಕು. ಅವುಗಳನ್ನನುಷ್ಠಿಸಿದನಂತರವೂ ತ್ಯಾಗವನ್ನು ಹೇಳಿ ಅವುಗಳ ಫಲಗಳಲ್ಲಿಯೂ ಕೂಡ ಮುಮುಕ್ಷುವು ಆಶೆಮಾಡಬಾರದು. **ನಿತ್ಯನೈಮಿತ್ತಿಕಗಳೋಡುಮ್** ಎಂಬ ತೃತೀಯೆಯು ಇಲ್ಲಿ ಸಹಯೋಗತೃತೀಯೆಯು. ಮುಖ್ಯವಾಗಿ ಅವುಗಳನ್ನನುಷ್ಠಿಸತಕ್ಕದ್ದೆಂಬಭಿಪ್ರಾಯದಿಂದ ಪ್ರಯೋಗಿಸಲ್ಪಟ್ಟಿರುತ್ತದೆ.

ಅದಿಲ್ - ಆ ಕರ್ಮವಿಶೇಷಗಳಲ್ಲಿ, **ಅವಾನ್ತರಭೇದಙ್ಗಳ್** - ವಿಶೇಷಗಳಾದ ಭೇದಗಳು, **“ದೈವಮೇವಾ ಪರೇಯಜ್ಞಮ್” ಎನ್ರು ತುಡಙ್ಗ** ಎಂದು ಪ್ರಾರಂಭಿಸಿ, **ಶೊಲ್ಲಪ್ಪಟ್ಟ**- ಹೇಳಲ್ಪಟ್ಟ, **ದೇವಾರ್ಚನ** - ದೇವರಪೂಜೆ, **ತಪ** - ಕೃಚ್ಛ್ರಚಾಂದ್ರಾಯಣಾದಿ ವ್ರತಗಳು, **ತೀರ್ಥ** - ತೀರ್ಥಯಾತ್ರೆಗಳು, **ದಾನ** - ದಾನಮಾಡುವದು, **ಯಜ್ಞಾದಿಗಳ್** - ಯಜ್ಞಯಾಗಾದಿಗಳು.

ದೈವಮೇವಾಪರೇಯಜ್ಞಂ ಯೋಗಿನಃ ಪರ್ಯುಪಾಸತೇ।
ಬ್ರಹ್ಮಾಗ್ನಾವಪರೇಯಜ್ಞಂ ಯಜ್ಞೇನೈವೋಪಜುಹ್ವತಿ॥

ಎಂಬುವದು ಪೂರಾ ಶ್ಲೋಕವು, **ಅಪರೇ ಯೋಗಿನಃ** - ಇತರರಾದ ಕೆಲವು ಕರ್ಮಯೋಗಿಗಳು, **ದೈವಂಯಜ್ಞಂ** - ದೇವತಾರ್ಚನೆರೂಪವಾದ ಯಜ್ಞವನ್ನು, **ಪರ್ಯುಪಾಸತೇ** - ಅನುಷ್ಠಿಸುತ್ತಾರೆ. **ಅಪರೇ** - ಇನ್ನು ಕೆಲವರು, **ಬ್ರಹ್ಮಾಗ್ನಾ** - ಪರಬ್ರಹ್ಮಸ್ವರೂಪವಾದ ಅಗ್ನಿಯಲ್ಲಿ, **ಯಜ್ಞೇನೈವ** - ಯಜ್ಞಸಾಧನಗಳಾದ ಹವಿಸ್ಸು, ಸ್ರುಕ್ ಮೊದಲಾದವುಗಳಿಂದ, **ಯಜ್ಞಂ ಉಪಜುಹ್ವತಿ** - ಯಾಗಹೋಮಗಳಲ್ಲಿ ನಿಷ್ಠೆಯನ್ನು ಮಾಡುವರು. ಹೀಗೆ ಗೀತೆಯ ನಾಲ್ಕನೇ ಅಧ್ಯಾಯದ ೨೫ನೇ ಶ್ಲೋಕದಲ್ಲಿ ಪ್ರಾರಂಭಿಸಿ, ಮುಂದಿನ ಶ್ಲೋಕಗಳಿಂದ ಕೆಲವರು ಇಂದ್ರಿಯಗಳನ್ನು ವಿಷಯಪ್ರವರ್ತನಾಹಿತ್ಯವೆಂಬ ಅಗ್ನಿಯಲ್ಲಿ ಹೋಮಮಾಡುವರೆಂದೂ, ಮತ್ತೆ ಕೆಲವರು ವಿಷಯಗಳನ್ನೇ ಇಂದ್ರಿಯಗಳೆಂಬ ಅಗ್ನಿಯಲ್ಲಿ ಹೋಮಮಾಡುವರು ಎಂದರೆ ವಿಷಯಗಳು ಇಂದ್ರಿಯಗಳನ್ನು ಬಾಧಿಸದ ಹಾಗೆ ಮಾಡುವರು ಎಂದೂ, ಹೀಗೆಲ್ಲಾ ಹೇಳುತ್ತಾ, ಕೊನೆಗೆ ೩೨ನೇ ಶ್ಲೋಕದಲ್ಲಿ“ಏವಂ ಬಹುವಿಧಾ ಯಜ್ಞಾಃ”ಎಂದು ಕರ್ಮಯೋಗವನ್ನು ಕುರಿತುಹೇಳಲ್ಪಟ್ಟಿರುತ್ತದೆ. **“ಕರ್ಮಯೋಗಸ್ತಪ ಸ್ತೀರ್ಥ ದಾನ ಯಜ್ಞಾದಿ ಸೇವನಂ”** ಎಂಬ ಗೀತಾರ್ಥಸಂಗ್ರಹ ಶ್ಲೋಕಾರ್ಥವೂ ಕೂಡ ಇಲ್ಲಿ ಸಂಗ್ರಹಿಸಲ್ಪಟ್ಟಿತು.

ಭಕ್ತಿಯೈ ಯಿಡೈಯಿಟ್ಟು ಮಿಡೈಯಿಡಾದೇಯುಮ್, ಮೋಕ್ಷಹೇತುವಾನಾರ್ಪೋಲೆ, ಇಕ್ಕರ್ಮಯೋಗಮ್, ಜ್ಞಾನಯೋಗತ್ತೈಯಿಡೈಯಿಟ್ಟು ಮಿಡೈಯಿಡಾದೇಯುಮ್ ಸಪರಿಕರಮಾನ ಯೋಗತ್ತೈಕ್ಕೊಣ್ಡು ಆತ್ಮಾವಲೋಕನ ಸಾಧನಮಾಮ್.

ಮುಂದೆ ಸ್ವಸ್ವರೂಪಸಾಕ್ಷಾತ್ಕಾರಕ್ಕೆ ಕರ್ಮಯೋಗವು ಅತ್ಯಾವಶ್ಯಕವೆಂದು ಒಂದು ದೃಷ್ಟಾಂತ ಮೂಲಕ ತಿಳಿಯಪಡಿಸುತ್ತಾರೆ.

ಅಧಿಕಾರಿಭೇದತ್ತಾಲೆ - ಬೇರೆಬೇರೆ ಅಧಿಕಾರಿಗಳಲ್ಲಿ, **ಪ್ರಪತ್ತಿತಾನೇ**- ಪ್ರಪದನವು ಸ್ವತಃ, **ಭಕ್ತಿಯೈ ಯಿಡೈಯಿಟ್ಟು**-ಭಕ್ತಿಮಾರ್ಗದ ದ್ವಾರಾ,**ಯಿಡೈಯಿಡಾದೇಯುಮ್**- ಭಕ್ತಿಮಾರ್ಗದದ್ವಾರವಲ್ಲದೆ ಸಾಕ್ಷಾತ್ತಾಗಿಯೇ,**ಮೋಕ್ಷಹೇತುವಾನಾರ್ಪೋಲೆ** - ಮೋಕ್ಷಕ್ಕೆ ಕಾರಣವಾದ ಹಾಗೆ, ಈ ಕರ್ಮಯೋಗವೂ, **ಜ್ಞಾನಯೋಗತ್ತೈಯಿಡೈಯಿಟ್ಟು** – ಜ್ಞಾನಯೋಗದ ದ್ವಾರವಾಗಿಯೂ, **ಯಿಡೈಯಿಡಾದೇಯುಮ್** - ಜ್ಞಾನಯೋಗದ ದ್ವಾರಾ ಅಲ್ಲದೆ ಸ್ವತಃ, **ಸಪರಿಕರಮಾನಯೋಗತ್ತೈಕ್ಕೊಂಡು** – ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಗಳಿಂದ ಕೂಡಿದ ಯೋಗಮೂಲಕವಾಗಿ, **ಆತ್ಮಾವಲೋಕನ ಸಾಧನಮಾಮ್** -ತನ್ನ ಆತ್ಮಸಾಕ್ಷಾತ್ಕಾರಕ್ಕೆ ಸಾಧನವಾಗಬಹುದು. ಈ ಕರ್ಮಯೋಗವು ಜ್ಞಾನಯೋಗಕ್ಕೆ ಅಙ್ಗವಾಗಿಯೂ ಜೀವಾತ್ಮಸಾಕ್ಷಾತ್ಕಾರಕ್ಕೆ ಸಾಧನವಾಗಬಹುದು. ಹಾಗೆ ಅಙ್ಗವಾಗದೇ ಸಾಕ್ಷಾತ್ತಾಗಿಯೂ ಸಾಧನವಾಗಬಹುದು. ಅದು ಹೇಗೆ ಎಂದರೆ ಅದನ್ನು ಒಂದು ಒಳ್ಳೇ ನಿದರ್ಶನದಿಂದ ವ್ಯಕ್ತಪಡಿಸುತ್ತಾರೆ. ಪ್ರಪತ್ತಿಮಾರ್ಗವು ಭಕ್ತಿಮಾರ್ಗಕ್ಕೆ ಅಙ್ಗವಾಗಿ ಮೋಕ್ಷಸಾಧಕವಾಗಬಹುದು; ಅಥವಾ ಆ ಪ್ರಪತ್ತಿಯೇ ಸ್ವತಃ ಸಾಕ್ಷಾತ್ತಾಗಿಯೂ ಮೋಕ್ಷಸಾಧಕವಾಗಬಹುದು. ಅದರ ಹಾಗೆಯೇ ಕರ್ಮಯೋಗವೂ ಕೂಡ ಜ್ಞಾನಯೋಗದ್ವಾರವಾಗಿಯೂ ದ್ವಾರವಾಗದೆಯೂ ಸ್ವಸ್ವರೂಪ ಸಾಕ್ಷಾತ್ಕಾರಕ್ಕೆ ಸಾಧಕವಾಗಬಹುದು ಎಂದುಪದೇಶಿಸಿದರು. ಆದರೆ ಒಬ್ಬ ಅಧಿಕಾರಿಗೇನೇ ಜ್ಞಾನಯೋಗದ್ವಾರಾ, ಅಥವಾ ಸ್ವತಃ, ಈ ಕರ್ಮಯೋಗವು ಇಂತಹ ಸಾಕ್ಷಾತ್ಕಾರಕ್ಕೆಸಾಧಕವು ಎಂಬ ಆಕ್ಷೇಪ ಬಂದೀತೆಂದು ಭಾವಿಸಿಯೇ, **ಅಧಿಕಾರ ಭೇದತ್ತಾಲೇ** ಎಂದು ವಾಕ್ಯವನ್ನು ಆರಂಭಿಸಿರುತ್ತಾರೆ. ಬೇರೆಬೇರೆ ಅಧಿಕಾರಿಗಳ ವಿಷಯದಲ್ಲಿ ಹೇಳಿದುದೇ ವಿನಾ ಏಕಾಧಿಕಾರಿಗೆ ಹೇಳಿದ ವಿಷಯವಲ್ಲವೆಂಬ ತಾತ್ಪರ್ಯವು. ಈ ಅಭಿಪ್ರಾಯಗಳೇ ಭಗವದ್ಗೀತೆಯ ಪಂಚಮಾಧ್ಯಾಯದಲ್ಲಿ ಉಪಪಾದಿತಗಳಾಗಿವೆ;--

ಸನ್ನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸನ್ನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ ॥

ಜ್ಞಾನಯೋಗ ಕರ್ಮಯೋಗಗಳೆರಡೂ ಮೋಕ್ಷಸಾಧನಗಳಾದರೂ, ಕರ್ಮಯೋಗವು, ಸುಕರವಾಗಿಯೂ ಶೀಘ್ರದಲ್ಲಿ ಆತ್ಮಸಾಕ್ಷಾತ್ಕಾರಸಾಧಕವಾಗಿಯೂ ಇರುವುದರಿಂದ, ಶ್ರೇಷ್ಠವು ಎಂದು ಹೇಳಿ, ಮುಂದೆ

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದನ್ತಿ ನ ಪಣ್ಡಿತಾಃ ।
ಏಕಮಪ್ಯಾಸ್ಥಿತಸ್ಸಮ್ಯಗುಭಯೋರ್ವಿನ್ದತೇ ಫಲಮ್ ।
ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥

ಜ್ಞಾನಯೋಗ ಕರ್ಮಯೋಗಗಳು ಬೇರೆಬೇರೆ ಸಾಧನಗಳಾದುದರಿಂದ ಅವುಗಳು ಬೇರೆಬೇರೆ ಎಂದೂ, ಯಾರು ಹೇಳುವರೋ, ಅವರು ಪಂಡಿತರಲ್ಲ, ಬಾಲಿಶರು. ಯಾವ ಆತ್ಮಸಾಕ್ಷಾತ್ಕಾರವನ್ನು ಜ್ಞಾನಯೋಗಿಗಳು ಸಾಧಿಸುತ್ತಾರೋ ಅದನ್ನೇ ಕರ್ಮಯೋಗಿಗಳೂ ಸಾಧಿಸುವರು ಎಂದು ಯಾರು ತಿಳಿಯುವರೋ ಅವರೇ ಪಂಡಿತರು, ಜ್ಞಾನಿಗಳು" ಎಂದು ಎರಡಕ್ಕೂ ಫಲ ಒಂದೇ ಎಂದು ಹೇಳಿ, ಮುಂದೆ

ಸನ್ನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥

ಎಂಬ ಶ್ಲೋಕದಿಂದ ಜ್ಞಾನಯೋಗವು ಕರ್ಮಯೋಗದ ಸಹಾಯವು ಮುಖ್ಯವಾಗಿ ಸಿದ್ಧಿಸುವದೆಂದೂ, ಹಾಗೆ ಸಂಬಂಧವಿಲ್ಲದಿದ್ದರೆ ಜ್ಞಾನಯೋಗದ ಸಿದ್ಧಿಯು ತುಂಬಾ ಕಷ್ಟಸಾಧ್ಯವೆಂದೂ, ತುಂಬಾ ಕಾಲದಿಂದಲೂ ಸಾಧ್ಯವೆಂದೂ, ಆದರೆ ಕರ್ಮಯೋಗವಾದರೋ ಅಲ್ಪಕಾಲದಲ್ಲಿ ಸುಲಭವಾಗಿ ಫಲದಾಯಕವೆಂದೂ ಹೇಳಲ್ಪಟ್ಟಿರುತ್ತದೆ. ಕರ್ಮಯೋಗಕ್ಕೆ ಸಾಕ್ಷಾತ್ತಾಗಿಯೂ ಫಲದಾಯಕವೆಂಬುವದು,

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ । (ಗೀ ೧೮.೪೬)

ಎಂಬ ಶ್ಲೋಕದಿಂದ, ತನ್ನ ತನ್ನ ವರ್ಣಾಶ್ರಮೋಚಿತ ಧರ್ಮಗಳಿಂದ ಸರ್ವೇಶ್ವರನನ್ನು ಪೂಜಿಸಿ ಫಲಸಾಧನವನ್ನು ಮಾಡಬಹುದೆಂದು ಹೇಳಲ್ಪಟ್ಟಿದೆ. ಇಲ್ಲಿ ಸಿದ್ಧಿಯಾವುದೆಂದರೆ ಪರಬ್ರಹ್ಮಾನುಭವಕ್ಕೆ ಸಹಕಾರಿಯಾದ ಸ್ವಸ್ವರೂಪ ಸಾಕ್ಷಾತ್ಕಾರವೆಂದು ಹಿಂದೆಯೇ ಗೀತೆಯಲ್ಲಿ ಹೇಳಲ್ಪಟ್ಟಿರುತ್ತದೆಂಬ ಭಾವವು.

ಸಪರಿಕರವಾದ ಯೋಗಕ್ಕೆ - ಯೋಗವನ್ನು ಹೇಗೆ ಅನುಷ್ಠಿಸತಕ್ಕ

ದ್ದೆಂಬ ವಿಷಯವು ಗೀತೆಯ ೬ನೇ ಅಧ್ಯಾಯದಲ್ಲಿ ವಿಧಿಸಲ್ಪಟ್ಟಿರುತ್ತದೆ. ಆತ್ಮಾವಲೋಕನಸಾಧನವೂ - ಹೀಗೆ ತನ್ನ ಆತ್ಮದರ್ಶನಕ್ಕೆ ಕಾರಣವ್ಯಾವುದೆಂದರೆ

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ।

(ಗೀ. ೬ ೨೯) ತನ್ನಲ್ಲಿಯೂ ಇತರಭೂತಗಳಲ್ಲಿಯೂ ಇರುವ ಆತ್ಮರುಗಳೆಲ್ಲಾ ಪ್ರಕೃತಿವಿಯುಕ್ತವಾದಾಗ ಜ್ಞಾನೈಕಾಕಾರವಾಗಿ ಸಮರೆಂದು ನೋಡುವವನೀಗ ಸ್ವಾತ್ಮದರ್ಶನವುಳ್ಳವನೆಂದು ಹೇಳುವದರಿಂದ, ಸರ್ವಾತ್ಮರೂ ಸಮಾನಾಕಾರವುಳ್ಳವರೆಂಬ ಭಾವನೆ ಆತ್ಮಾವಲೋಕನಕ್ಕೆ ಸಾಧಕವಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. ಆತ್ಮಾವಲೋಕನವೆಂದರೆ, ಸ್ವಸ್ವರೂಪ ಸಾಕ್ಷಾತ್ಕಾರವು.

ಇಂತಹ ಆತ್ಮಾವಲೋಕನಕ್ಕೆ, ಜ್ಞಾನಯೋಗದ್ವಾರವಾಗಿಯೂ ಕರ್ಮಯೋಗ ಪ್ರಕಾಶಕವೆಂಬುವದಕ್ಕೆ ಪ್ರಮಾಣಗಳು ಯಾವುವೆಂದರೆ:---

ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ ।

ಸತ್ವವು ರಜಸ್ತಮೋಗುಣಗಳಿಂದ ಸೇರುವದರಿಂದುಂಟಾಗುವ ಪಾಪಗಳೆಲ್ಲವೂ ನಿತ್ಯಕರ್ಮಾನುಷ್ಠಾನಾದಿಗಳಿಂದ ನಾಶವಾಗಲಾಗಿ, ಅನಂತರ ಜ್ಞಾನವುಂಟಾಗುತ್ತದೆ.

ಕಷಾಯಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾಗತಿಃ ।

ಎಂದರೆ, ನಿತ್ಯಕರ್ಮಾನುಷ್ಠಾನಗಳು, ಸತ್ವವು ರಜಸ್ತಮೋಗುಣಗಳಿಂದ ಬಿಕ್ಕಟ್ಟಾಗಿರುವದನ್ನು ಎಂದರೆ ಪಾಪಗಳನ್ನು ಹೋಗಲಾಡಿಸುತ್ತವೆ, ಅನಂತರ ಜ್ಞಾನವಾದರೋ ಶ್ರೇಷ್ಠವಾದ ಗತಿಯಾಗುತ್ತದೆ.

ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ

(ಗೀ. ೪. ೩೩.) ಓ ಅರ್ಜುನನೇ, ಸಮಸ್ತಕರ್ಮವೂ, ಅದಕ್ಕೆ ಸಾಧಕವಾದ ದ್ರವ್ಯವೇ ಮೊದಲಾದುವೂ ಕೂಡ, ಜ್ಞಾನದಲ್ಲೇ ಅದಕ್ಕೆ ಅಂಗವಾಗಿ ಪರಿಸಮಾಪ್ತಿ ಹೊಂದಿರುತ್ತದೆ.

" ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತ ಮಶ್ನುತೇ - ಅವಿದ್ಯಯಾ-ಜ್ಞಾನವಲ್ಲದುದು ಕರ್ಮವು, ನಿತ್ಯಕರ್ಮಾನುಷ್ಠಾನಗಳಿಂದ, ಮೃತ್ಯುಂ-ಸಂಸಾರಕ್ಕೆ ಕಾರಣಭೂತವಾದ ಪಾಪವೇ ಮೊದಲಾದ ಕರ್ಮಗಳನ್ನು, ತೀರ್ತ್ವಾ-ದಾಟಿ ಎಂದರೆ ಪಾಪನಾಶನಾಗುವದರಿಂದ ಪರಿಶುದ್ಧಾಂತಃಕರಣನಾಗಿ, ವಿದ್ಯಯಾ-ಜ್ಞಾನಯೋಗಮೂಲಕ, ಅಮೃತಮಶ್ನುತೇ" ಮೋಕ್ಷವನ್ನು ಹೊಂದುತ್ತಾನೆ." ಇತ್ಯಾದಿ ಪ್ರಮಾಣಗಳಿವೆ.

ಭಕ್ತಿಯೋಗ, ಉಪಾಸನಾದಿಗಳೇ ಇರುವಾಗ, ಜ್ಞಾನಯೋಗವೆಂಬುವ

ಜ್ಞಾನಯೋಗಮ್.

ಜ್ಞಾನಯೋಗವಾವದು ? — ಕರ್ಮಯೋಗತ್ತಾಲ್ ಅನ್ತಃಕರಣ ಜಯುಮ್ಪಿರನ್ತವನುಕ್ಕು, ಪ್ರಕೃತ್ಯಾದಿ ವಿಲಕ್ಷಣಮಾಯ್, ಈಶ್ವರನೈಪ್ಪತ್ತ ಅಧೇಯತ್ವ ವಿಧೇಯತ್ವ ಶೇಷತ್ವಜ್ಙಳಾಲೇ ಶರೀರತಯಾ ಪ್ರಕಾರಮಾನ ತನ್ ಸ್ವರೂಪತ್ತೈ ನಿರನ್ತರ ಚಿನ್ತನಮ್ ಪಣ್ಣುಗೈ.

ದೊಂದುಂಟೋ ಎಂದರೆ, ಉಂಟೆಂದು ಹೇಳಿ ಜ್ಞಾನಯೋಗವೆಂದರೇನೆಂಬುವದನ್ನೂ, ಅದು ಭಕ್ತಿಯೋಗಕ್ಕೆ ಹೇಗೆ ಸಾಧಕವೆಂಬುವದನ್ನೂ, ಮುಂದೆ ತಿಳಿಸುತ್ತಾರೆ.

ಜ್ಞಾನಯೋಗವು.

ಜ್ಞಾನಯೋಗವಾವದು? -ಜ್ಞಾನಯೋಗವೆಂದರೇನು? **ಕರ್ಮಯೋಗತ್ತಾಲ್** - ಕರ್ಮಯೋಗದಿಂದ, **ಅನ್ತಃಕರಣಜಯಂ** - ಮನಸ್ಸಿನ ಜಯವು ಎಂದರೆ ಸರ್ವೇಂದ್ರಿಯಗಳ ನಿಗ್ರಹವು, ಯಾವಾಗ ಮನಸ್ಸಿನ ಜಯ ಉಂಟಾಯಿತೋ ಆಗ ಸರ್ವೇಂದ್ರಿಯಗಳ ಜಯವುಂಟಾಯಿತೆಂಬ ಭಾವವು. **ಪಿರನ್ದವನುಕ್ಕು** - ಹುಟ್ಟಿದವನಿಗೆ, **ಪ್ರಕೃತ್ಯಾದಿ ವಿಲಕ್ಷಣಮಾಯ್** - ಪ್ರಕೃತಿರೂಪವಾದ ದೇಹೇಂದ್ರಿಯಗಳಿಗಿಂತ ವಿಲಕ್ಷಣವಾದ, ಇದು **"ತನ್ ಸ್ವರೂಪತ್ತೈ"** ಎಂಬುವದಕ್ಕೆ ವಿಶೇಷಣವು, **ಈಶ್ವರನೈಪತ್ತ** - ಸರ್ವೇಶ್ವರನನ್ನು ಕುರಿತು, **ಅಧೇಯತ್ವ, ವಿಧೇಯತ್ವ, ಶೇಷತ್ವಜ್ಙಳಾಲೆ** - ತಾನು ಆಧೇಯವಾಗಿಯೂ, ವಿಧೇಯವಾಗಿಯೂ, ಶೇಷನಾಗಿಯೂ, ಇರುವ ಭಾವಗಳಿಂದ, **ಶರೀರತಯಾ**- ಪರಮಾತ್ಮನಿಗೆ ಶರೀರವಾಗಿರುವದರಿಂದ, **ಪ್ರಕಾರಮಾನ** - ಆತನಿಗೆ ವಿಶೇಷಣವಾಗಿರುವ, **ತನ್ ಸ್ವರೂಪತ್ತೈ**-ತನ್ನ ಸ್ವರೂಪವನ್ನು, **ನಿರಂತರಚಿನ್ತನಮ್ ಪಣ್ಣುಗೈ** - ಸದಾ ಚಿಂತಿಸೋಣವು. ಈ ವಾಕ್ಯದಲ್ಲಿ ಕರ್ಮಯೋಗದಿಂದುಂಟಾಗುವ ಪ್ರಯೋಜನವು ಅನ್ತಃಕರಣಜಯವೆಂದು ಹೇಳಲ್ಪಟ್ಟಿತು. ಹಾಗೆ ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಿದವನಿಗೇನೇ ಜ್ಞಾನಯೋಗಸಿದ್ಧಿಯೆಂದು

"ವಶೇಹಿಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾಪ್ರತಿಷ್ಠಿತಾ"

(ಗೀ.೨ ೬೧) ಎಂಬ ಶ್ಲೋಕದಿಂದ ವ್ಯಕ್ತಪಡುತ್ತವೆ. ಇದರಿಂದ ಜ್ಞಾನಯೋಗಕ್ಕೆ ಕರ್ಮಯೋಗವೂ ಆವಶ್ಯಕವೆಂದೇರ್ಪಟ್ಟಿತು. ಆದರೆ ಕರ್ಮಯೋಗಕ್ಕೆ

ಇಕ್ಕರ್ಮಯೋಗ ಜ್ಞಾನಯೋಗಜ್ಗಳಾಲೇ ಯೋಗಮುಖತ್ತಾಲೆ

ಜ್ಞಾನಯೋಗಾಪೇಕ್ಷೆ ಇಲ್ಲದೇನೆ ಭಕ್ತಿಯೋಗದಲ್ಲಿ ಪ್ರವೃತ್ತಿಯುಂಟು. ಈ ಜ್ಞಾನಯೋಗದಲ್ಲಿ ಮಾಡತಕ್ಕದ್ದೇನೆಂಬುವದನ್ನು ತಿಳಿಸುತ್ತಾರೆ. ತನ್ನ ಸ್ವರೂಪವನ್ನು ನಿರಂತರ ಚಿಂತಿಸೋಣವು. ಯಾವಾಗ ತನ್ನ ಸ್ವರೂಪವನ್ನೇ ಚಿಂತನೆಮಾಡುವದೆಂದು ಹೇಳಲ್ಪಟ್ಟಿತೋ, ಆಗ ಜ್ಞಾನಯೋಗವು ಈಶ್ವರಸ್ವರೂಪವನ್ನು ಧ್ಯಾನಿಸುವ ಭಕ್ತಿಯೋಗಕ್ಕಿಂತಲೂ ಭಿನ್ನವಾದುದೆಂಬುವದು ವ್ಯಕ್ತವು. ಜ್ಞಾನಯೋಗದಲ್ಲಿ ಆ ತನ್ನ ಸ್ವರೂಪವೆಂಥಾದ್ದೆಂದು ಚಿಂತನೆಮಾಡತಕ್ಕದ್ದೆಂದರೆ:--- (೧) **ಪ್ರಕೃತ್ಯಾದಿ ವಿಲಕ್ಷಣವಾದುದು** ಎಂದುಚಿಂತಿಸತಕ್ಕದ್ದು. ಇದರಿಂದ ದೇಹಾತ್ಮಭ್ರಮ, ಸ್ವತಂತ್ರಾತ್ಮಭ್ರಮಗಳಿಲ್ಲದ ಹಾಗೆ, ಪ್ರಕೃತಿರೂಪವಾದ ದೇಹೇಂದ್ರಿಯಗಳಿಗಿಂತಲೂ ಬೇರೆಯಾಗಿ ಮಹಾಪರಿಶುದ್ಧನಾಗಿ ಜ್ಞಾನತ್ವ, ಆನಂದತ್ವ, ಅಮಲತ್ವಾದಿಗಳಿಂದ ಯುಕ್ತನೆಂದು ಚಿಂತಿಸತಕ್ಕದ್ದು. (೨) ಇದೂ ಅಲ್ಲದೆಸರ್ವೇಶ್ವರನಿಗೆ ತಾನು ಶರೀರವಾಗಿ, ಪ್ರಕಾರಿ ಎಂದರೆ ವಿಶೇಷ್ಯನಾದ ಸರ್ವೇಶ್ವರನಿಗೆ ತಾನು ಪ್ರಕಾರ,ವಿಶೇಷಣವೆಂದು ಚಿಂತಿಸತಕ್ಕದ್ದು. ತಾನು ಹೇಗೆ ಸರ್ವೇಶ್ವರನಿಗೆ ಶರೀರನೆಂಬುವದು ಹಿಂದೆ ಪ್ರಧಾನಪ್ರತಿತಂತ್ರಾಧಿಕಾರದಲ್ಲಿ ಬಹು ಚನ್ನಾಗಿ ಉಪಪಾದಿಸಲ್ಪಟ್ಟಿರುತ್ತದೆ. ಮೂರು ಕಾರಣಗಳಿಂದ ತಾನು ಶರೀರವು. ಪ್ರಧಾನಪ್ರತಿತಂತ್ರಾಧಿಕಾರದ ೫ನೇ ಪುಟ (೨೫೧) ವನ್ನೂ ೨೬೦ನೇ ಪುಟವನ್ನೂ ಸಹ ನೋಡಿ. ತಾನು ಯಾವಾಗಲೂ ಸರ್ವೇಶ್ವರನಿಂದಲೇ ಧರಿಸಲ್ಪಟ್ಟವನಾಗಿಯೂ,ನಿಯಮಿಸಲ್ಪಡುವನಾಗಿಯೂ. ಆತನ ಪ್ರಯೋಜನಕ್ಕಾಗಿ ಆತನಿಗೆ ಶೇಷಭೂತನಾಗಿಯೂ ಇರುವದರಿಂದ, ತಾನು ಶರೀರವೆಂದು ಚಿಂತಿಸತಕ್ಕದ್ದು; ಇದನ್ನೇ **ಆಧೇಯತ್ವ,ವಿಧೇಯತ್ವ ಶೇಷತ್ವೈಜ್ಗಳಾಲೇ ಶರೀರತಯಾ** ಎಂಬ ಪ್ರಯೋಗದಿಂದ ವ್ಯಕ್ತಪಡಿಸುತ್ತಾರೆ. ಶ್ರೀ ಯಾಮುನೇಯರ ಗೀತಾರ್ಥಸಂಗ್ರಹದಲ್ಲಿ **ಜ್ಞಾನಯೋಗೋಜಿತಸ್ವಾಂತೈಃ ಪರಿಶುದ್ಧಾತ್ಮನಿಸ್ಥಿತಿಃ**-ಮನಸ್ಸನ್ನು ಜಯಿಸಿದಂತಾವರುಗಳಿಂದ ಪರಿಶುದ್ಧನಾದ ತನ್ನ ಸ್ವಂತ ಆತ್ಮಾವಿನಲ್ಲಿ ಮನಸ್ಸನ್ನು ನಿಲ್ಲಿಸುವದೇ ಜ್ಞಾನಯೋಗವು'' ಎಂದು ಹೇಳಲ್ಪಟ್ಟ ಅಭಿಪ್ರಾಯವೇ ಇಲ್ಲಿ ಉಪಪಾದಿತವಾಗಿರುತ್ತದೆ, ಹಿಂದೆ ಕರ್ಮಯೋಗವು ಅಂತಃಕರಣಜಯವುಂಟಾಗುವದರಿಂದ ರಜಸ್ತಮೋಗುಣಗಳಿಂದುಂಟಾಗುವ ದೋಷವು ತೊಲಗಿ, ಸತ್ತ್ವೋದ್ರೇಕವುಂಟಾಗಿಜ್ಞಾನಯೋಗಕ್ಕೆ ಸಹಕಾರಿಯೆಂದುಹೇಳಲ್ಪಟ್ಟಿತು. ಈಗ ಜ್ಞಾನಯೋಗವು ಹೇಗೆ ಭಕ್ತಿಯೋಗಕ್ಕೆ ಉಪಯುಕ್ತವಾದುದೆಂಬುದನ್ನು ತಿಳಿಸುತ್ತಾರೆ.

ಇಕ್ಕರ್ಮಯೋಗ ಜ್ಞಾನಯೋಗಜ್ಗಳಾಲೇ - ಈ ಕರ್ಮಯೋಗಜ್ಞಾನ

ಆತ್ಮಾವಲೋಕನಂ ಪಿರನ್ದಾಲ್, ವೈಷಯಿಕ ಸುಖವೈತೃಷ್ಣ್ಯಾಪಾದನಮಾನ ಆತ್ಮಾನುಭವ ಸುಖಮಾಗಿರ ಆಕರ್ಷಕತ್ತಿಲ್ ಅಗಪ್ಪಟ್ಟಿಲನಾಕಿಲ್ ಪರಮ ಪುರುಷಾರ್ಥಮಾನ ಭಗವದನುಭವತ್ತುಕ್ಕು ಉಪಾಯಮಾನ ಭಕ್ತಿಯೋಗತ್ತಿಲೇ ಇಳಿಯುಮ್ ಪೋದು, ಉಳ್ಳಿರುಕ್ಕಿರ ರತ್ನಂ ಕಾಣ್ಗೈಕ್ಕು ಕೈಕಿಳಿಚ್ಚೀರೈಕ್ಕಣ್ಡಾರ್ ಪೋಲೆ, ಅನ್ತರ್ಯಾಮಿಯೈ ಪಾರ್ಕ್ಕುಮ್ ಪೋದೈಕ್ಕು ಅವನುಡೈಯ ಶರೀರಭೂತನಾನ ಜೀವಾತ್ಮಾವಿನುಡೈಯ ದರ್ಶನಮ್ ಉಪಯುಕ್ತಮಾಯ್ ಕೊಣ್ಡು ಭಕ್ತಿಯೋಗತ್ತುಕ್ಕು ಅಧಿಕಾರಕೋಟಿಯಿಲೆ ಏರಿಟ್ಟುಕ್ಕೊಡಕ್ಕುಮ್.

ಯೋಗಗಳಿಂದ, **ಯೋಗಮುಖತ್ತಾಲೆ** - ಉಪಾಸನಾಮೂಲಕವಾಗಿ, **ಆತ್ಮಾವಲೋಕನಂ ಪಿರನ್ದಾಲ್** - ಜೀವಾತ್ಮನ ಪರಿಶುದ್ಧವಾದ ಜ್ಞಾನತ್ವ, ಆನಂದತ್ವ, ಅನುಕೂಲತ್ವ ಪರಮಾತ್ಮಶರೀರತ್ವ ಶೇಷತ್ವಾದಿ ಜ್ಞಾನವು ಹುಟ್ಟಿದರೆ **ವೈಷಯಿಕಸುಖ** - ಶಬ್ದಾದಿ ವಿಷಯಸುಖಗಳಲ್ಲಿ, **ವೈತೃಷ್ಣ್ಯಾಪಾದನ** - ವೈರಾಗ್ಯವನ್ನು ಹೊಂದಿರುವ, ಆತ್ಮಾನುಭವಸುಖಮಾಗಿರ ಜೀವಾತ್ಮ ಸಾಕ್ಷಾತ್ಕಾರರೂಪವನ್ನು ಅನುಭವಿಸುವ ಸುಖವಾಗಿರುವ, **ಆಕರ್ಷಕತ್ತಿಲ್** - ಬಲೆಯಲ್ಲಿ **ಅಗಪಟ್ಟಿಲನಾಕಿಲ್** - ಸಿಕ್ಕದೇ ಇದ್ದುದೇಯಾದರೆ, **ಪರಮ ಪುರುಷಾರ್ಥಮಾನ** - ಈ ಮೇಲೆ ಹೇಳಿದ ಐಹಿಕಸುಖ, ಕೈವಲ್ಯ ಮೊದಲಾದವುಗಳಿಗಿಂತ ಸರ್ವಶ್ರೇಷ್ಠವಾದ ಪುರುಷಾರ್ಥವಾದ, **ಭಗವದನುಭವತ್ತುಕ್ಕು** - ದಿವ್ಯ ವೈಕುಂಠದಲ್ಲಿ ಲಕ್ಷ್ಮೀಪತಿಯನ್ನನುಭವಿಸುವದಕ್ಕೆ, **ಉಪಾಯಮಾನಭಕ್ತಿಯೋಗತ್ತಿಲೆ** - ಉಪಾಯವಾದ ಭಕ್ತಿಯೋಗದಲ್ಲಿ, **ಇಳಿಯುಮ್ ಪೋದು** - ಪ್ರವೇಶಿಸುವ ಸಮಯದಲ್ಲಿ, **ಉಳ್ಳಿರುಕ್ಕಿರ ರತ್ನಂಕಾಣ್ಗೈಕ್ಕು** - ಒಳಗಿರುವ ಅಮೋಘವಾದ ರತ್ನವನ್ನು ಕಾಣಲು, **ಕಿಳಿಚ್ಚೀರೈ** - ಆ ರತ್ನವನ್ನು ಕಟ್ಟಿರುವ ವಸ್ತ್ರವನ್ನು ಕಂಡ ಹಾಗೆ, **ಅನ್ತರ್ಯಾಮಿಯೈ ಪಾರ್ಕ್ಕುಮ್** - ತನಗೆ ಅಂತರ್ಯಾಮಿಯಾಗಿ ಒಳಗಿರುವ ಹಾರ್ದಾವತಾರಿಯಾಗಿರುವ ಶ್ರಿಯಃಪತಿಯನ್ನು ಸಾಕ್ಷಾತ್ಕರಿಸುವ, **ಪೋದೈಕ್ಕು** - ಸಮಯದಲ್ಲಿ, **ಅವನುಡೈಯ ಶರೀರಭೂತನಾನ** - ಅವನಿಗೆ ಶರೀರವಾದ, **ಜೀವಾತ್ಮಾವಿನುಡೈಯದರ್ಶನಮ್** - ಜೀವಾತ್ಮನ ದರ್ಶನವು, **ಉಪಯುಕ್ತಮಾಯ್ ಕೊಣ್ಡು** - ಉಪಯೋಗವುಳ್ಳದ್ದಾಗಿ, **ಭಕ್ತಿಯೋಗತ್ತುಕ್ಕು ಅಧಿಕಾರಕೋಟಿಯಿಲೆ** - ಭಕ್ತಿಯೋಗಕ್ಕೆ ಅಧಿಕಾರಿವರ್ಗದಲ್ಲಿ, **ಏರಿಟ್ಟುಕ್ಕೊಡಕ್ಕುಮ್** - ಪ್ರವೇಶಮಾಡಿಸಿ ನಿಲ್ಲುವದಾಗುತ್ತದೆ. ಈ ಕರ್ಮಯೋಗ ಜ್ಞಾನಯೋಗಗಳಿಂದ ತನ್ನ ಆತ್ಮಸ್ವರೂಪವೆಂಥಾದ್ದೆಂಬುವದು ತಿಳಿಯುತ್ತದೆ. ಇವನ್ನೇ ಆತ್ಮಾವಲೋ

ಭಕ್ತಿಯೋಗವು

ಭಕ್ತಿಯೋಗವಾವದು? ಅನನ್ಯನಿಷ್ಠನಾಯ್, ಅನನ್ಯಾಧೀನ

ಕನವೆಂದು ಹೇಳುವರು. ಆಗ ಐಹಿಕ ವಿಷಯಸುಖಗಳಲ್ಲಿ ಜಿಹಾಸೆಹುಟ್ಟಿ ವೈರಾಗ್ಯವು ತಲೆದೋರುತ್ತದೆ. ಹೀಗೆ ಆತ್ಮಾವಲೋಕನ ಉಂಟಾದಾಗ ಅದರ ಬಲೆಗೆ ಮಾತ್ರವೇ ಸಿಕ್ಕಿಕೊಂದರೆ ಕೈವಲ್ಯಪ್ರಾಪ್ತಿಯೇ ವಿನಾ ಮೋಕ್ಷಸುಖವಿಲ್ಲವು. ಹಾಗೆ ಅದರ ಬಲೆಗೆ ಸಿಕ್ಕದೇ ಹೋದಪಕ್ಷದಲ್ಲಿ, ಈ ಆತ್ಮಾವಲೋಕನವು ನಮಗೆ ಅಂತರ್ಯಾಮಿಯಾಗಿ ನಮ್ಮನ್ನೇ ಶರೀರವಾಗಿವುಳ್ಳ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಉಪಯೋಗವಾಗಬಹುದಾದ ಪ್ರಯುಕ್ತ ಅಂಥಾವನನ್ನು ಈ ಆತ್ಮಾವಲೋಕನವು ಭಕ್ತಿಯೋಗಕ್ಕೆ ಅರ್ಹನಾಗುವ ಹಾಗೆ ಮಾಡಿ, ಆತನನ್ನು ಭಕ್ತಿಯೋಗಾಧಿಕಾರ ಕೋಟಿಯಲ್ಲಿ ಸೇರಿಸುತ್ತದೆ ಎಂಬ ಭಾವವು. ಅದು ಹೇಗೆ ಆತ್ಮಾವಲೋಕನವು ಪರಮಾತ್ಮಸಾಕ್ಷಾತ್ಕಾರಕ್ಕೆ ಸಾಧಕವೆಂದರೆ, ಅದನ್ನು ಒಂದು ನಿದರ್ಶನ ಮೂಲಕ ವ್ಯಕ್ತಪಡಿಸುತ್ತಾರೆ. ಮಹಾಪ್ರಕಾಶವಾದ ಒಂದು ರತ್ನವಿರುವ ವಸ್ತ್ರದ ಗಂಟಿನ ದರ್ಶನವು, ರತ್ನವಲ್ಲದ ಇತರ ಸರ್ವವಸ್ತುಗಳಲ್ಲೂ ಆಶೆಯಿಲ್ಲದ ಹಾಗೆ ಮಾಡಿ, ರತ್ನ ಒಂದರಲ್ಲೇ ವಿಶೇಷ ಆತುರವನ್ನುಂಟುಮಾಡಿ, ಅದನ್ನು ಪಡೆಯುವ ಸಾಧನೆಯಲ್ಲಿ ಪ್ರವರ್ತಿಸುವ ಹಾಗೆ ಹೇಗೆ ಮಾಡುತ್ತದೋ, ಹಾಗೆಯೇ ಆತ್ಮಾವಲೋಕನವೂಕೂಡ, ಪರಮಾತ್ಮ ಸಾಕ್ಷಾತ್ಕಾರಕ್ಕೆ ವ್ಯತಿರಿಕ್ತವಾದವುಗಳಲ್ಲಿ ವೈರಾಗ್ಯವನ್ನು ಹುಟ್ಟಿಸಿ, ಭಗವದನುಭವವಿಷಯದಲ್ಲಿ ವಿಶೇಷ ಆದರವನ್ನುಂಟುಮಾಡಿ, ಅದಕ್ಕಾಗಿ ಭಕ್ತಿಯೋಗವಲ್ಲಿ ನಿಲ್ಲಿಸುತ್ತದೆಂಬ ಭಾವವು. ಹೀಗೆ ಭಕ್ತಿಯೋಗವು ಕರ್ಮಯೋಗಜ್ಞಾನಯೋಗಗಳಿಂದ ಸಾಧಿಸಲ್ಪಟ್ಟ ಆತ್ಮಾವಲೋಕನದಿಂದ ಸಾಧ್ಯವೆಂದು ಹೇಳಿದುದು ಸರಿಯೋ? ಏಕೆಂದರೆ, ಗೀತಾರ್ಥಸಂಗ್ರಹದಲ್ಲಿ **"ಆತ್ಮದೃಷ್ಟೇಸ್ತ್ರಯೋಪ್ಯೇತೇ ಯೋಗದ್ವಾರೇಣ ಸಾಧಕಾಃ"** ತನ್ನ ಸ್ವಾತ್ಮಾವಲೋಕನಕ್ಕೆ ಈ ಮೂರೂ ಎಂದರೆ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳು ಯೋಗ ಮೂಲಕನಾಗಿ ಎಂದರೆ ಸಮಾಧಿರೂಪವಾದ ಚಿತ್ತೈಕಾಗ್ರತೆಯ ಮೂಲಕವಾಗಿ ಸಾಧಕಗಳು ಎಂದು ಹೇಳಲ್ಪಟ್ಟಿರುತ್ತದೆಯಲ್ಲ ಎಂದರೆ ಇಲ್ಲಿ ಹೇಳಿರುವ ಭಕ್ತಿಯೋಗವು ಮುಂದೆ ಹೇಳಿರುವ ಭಕ್ತಿಯೋಗಕ್ಕಿಂತ ಬೇರೆಯಾದುದಾಗಿ ಅತ್ಯರ್ಥಪ್ರಿಯವಾದ ಸ್ತುತಿನಮಸ್ಕಾರಕೀರ್ತನಾದಿಗಳಲ್ಲಿ ನಿಷ್ಠೆಯನ್ನು ಮಾತ್ರ ಬೋಧಿಸುತ್ತದೆ ಎಂದು ಭಾವಿಸತಕ್ಕದ್ದು.

ಭಕ್ತಿಯೋಗವು.

ಭಕ್ತಿಯೋಗವಾವದು? – ಭಕ್ತಿಯೋಗವೆಂದರೇನು? ಅನನ್ಯನಿಷ್ಠ

ನಾಯ್, ಅನನ್ಯಶೇಷಭೂತನಾನ ಭಗವಾನುಡೈಯ ಸ್ವರೂಪಾದಿಗಳೈ ವಿಷಯಮಾಕ ವುಡೈತ್ತಾಯ್, ನಿರತಿಶಯ ಪ್ರೀತಿರೂಪಮಾನ ಧ್ಯಾನ

ನಾಯ್ - ಬೇರೆ ಯಾವ ವಸ್ತುವನ್ನು ಆಧಾರವಾಗಿಲ್ಲದವನಾಗಿಯೂ, ಅನನ್ಯಾಧೀನನಾಯ್ - ಇನ್ನು ಯಾರಿಗೂ ಅಧೀನನಾಗದವನಾಗಿಯೂ, ಅನನ್ಯಶೇಷಭೂತನಾಯ್ - ಯಾರಿಗೂ ಶೇಷಭೂತನಲ್ಲದೆಯೂ, ಇರುವ, ಭಗವಾನುಡೈಯ - ಹೇಯಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾದ ಸರ್ವೇಶ್ವರನ, ಸ್ವರೂಪಾದಿಗಳೈ ವಿಷಯಮಾಕವುಡೈತ್ತಾಯ್ - ಸ್ವರೂಪವೇ ಮೊದಲಾದವುಗಳ ವಿಷಯವಾದ, ಇಲ್ಲಿ ಆದಿಪದದಿಂದ ಕಲ್ಯಾಣಗುಣಗಳೂ ದಿವ್ಯಮಂಗಳವಿಗ್ರಹವೇ ಮೊದಲಾದವುಗಳು ಹೇಳಲ್ಪಟ್ಟವು. ನಿರತಿಶಯ - ಮಹತ್ತಾದ, ಅದಕ್ಕಿಂತ ಅತಿಶಯವಾದುದಿಲ್ಲವೆಂಬ ಭಾವವು. ಪ್ರೀತಿರೂಪಮಾನ - ಪ್ರೀತಿಪುರಸ್ಸರವಾದ, ಧ್ಯಾನವಿಶೇಷವು. ಇಲ್ಲಿ ಭಕ್ತಿಯೋಗವು ಒಂದು ಧ್ಯಾನವಿಶೇಷವೆಂದು ಹೇಳಲ್ಪಟ್ಟಿತು. ಅದು ನಿರತಿಶಯವಾದ ಪ್ರೀತಿರೂಪವಾದ ಧ್ಯಾನವಿಶೇಷವು; ನಿರತಿಶಯವೆಂದು ಹೇಳಿರುವದರಿಂದ ಜ್ಞಾನಯೋಗದಲ್ಲಿ ಹೇಳಲ್ಪಟ್ಟ ಆತ್ಮಾವಲೋಕನಕ್ಕಿಂತಲೂ ಅತಿಶಯವಾದುದೆಂದು ಏರ್ಪಟ್ಟಿತು. ಆ ಧ್ಯಾನವಿಶೇಷವು ಸರ್ವೇಶ್ವರನ ಸ್ವರೂಪರೂಪಗುಣವಿಭವೈಶ್ವರ್ಯಾದಿಗಳ ವಿಷಯವಾದುದು. ಇದರಿಂದ ಭಕ್ತಿಯೋಗವು ಜ್ಞಾನಯೋಗಕ್ಕಿಂತ ವ್ಯತ್ಯಸ್ತವಾದುದೆಂದು ವ್ಯಕ್ತಪಡುತ್ತದೆ. ಧ್ಯಾನವಿಶೇಷವೆಂದು ಹೇಳಿದುದರಿಂದ ಸ್ಮೃತಿನಮಸ್ಕಾರಾದಿಗಳಿಗಿಂತಲೂ ಭಕ್ತಿಯೋಗವು ವ್ಯತ್ಯಸ್ತವಾದುದೆಂದು ತೋರಬರುತ್ತದೆ. ಭಕ್ತಿಯೋಗವು ಧ್ಯಾನವಿಶೇಷವೆಂಬುವದರ ಅಭಿಪ್ರಾಯವೇನೆಂಬುವದನ್ನು ಮುಂದೆ ತಿಳಿಸುತ್ತಾರೆ. ಶ್ರೀ ಯಾಮುನೇಯರವರೂ ಸಹ "ಭಕ್ತಿಯೋಗಃ ಪರೈಕಾನ್ತ್ಯ ಪ್ರೀತ್ಯಾ ಧ್ಯಾನಾದಿಷುಸ್ಥಿತಿಃ" ಎಂದರೆ ಭಗವಂತನಲ್ಲಿ ತುಂಬಾ ಪ್ರೇಮದಿಂದ, ಇತರ ವಿಷಯಗಳಲ್ಲಿ ಪ್ರವರ್ತಿಸದ ಹಾಗೆ ಐಕಾನ್ತ್ಯಮನಸ್ಸಿನಿಂದ ಆತನನ್ನು ಧ್ಯಾನಿಸುವದೇ ಮೊದಲಾದವುಗಳಲ್ಲಿರುವಿಕೆಯು ಭಕ್ತಿಯೋಗವೆಂದು ಅಪ್ಪಣೆಕೊಡಿಸಿರುತ್ತಾರೆ.

"ಪ್ರೀತಿಪೂರ್ವಮನುಧ್ಯಾನಂ ಭಕ್ತಿರಿತ್ಯಭಿಧೀಯತೇ" ಎಂಬ ಪ್ರಮಾಣವಾಕ್ಯವು ಆ ಅಭಿಪ್ರಾಯವನ್ನೇ ಸಮರ್ಥಿಸುತ್ತದೆ. ಭಕ್ತಿಯೋಗದಲ್ಲಿ ಧ್ಯಾನಿಸತಕ್ಕ ಭಗವಂತನೆಂತವನೆಂದರೆ, ಆತನಿಗೆ ಮೂರು ವಿಶೇಷಣಗಳನ್ನು ಕೊಟ್ಟಿರುತ್ತಾರೆ. ಆತನು ಅನನ್ಯನಿಷ್ಠನು, ಅನನ್ಯಾಧೀನನು, ಅನನ್ಯಶೇಷನು. ಆತನಿಗೆ ಯಾವದೂ ಆಧಾರವಲ್ಲವು, ಆತನು ಯಾರಿಗೂ ಅಧೀನನಲ್ಲವು, ಯಾರಿಗೂ ಶೇಷನಲ್ಲವು. ಈ ಮೂರು ಅಭಿಪ್ರಾಯಗಳು ಮೂಲಮಂತ್ರದ ಮೂರು ಪದಗಳಿಂದ

ವಿಶೇಷನ್ನ್, ಅದುತಾನ್ ತೈಲಧಾರೈಯೈಪ್ಪೋಲೆ ನಿರನ್ತರಸ್ಮೃತಿರೂಪಮಾಯ್, ಸಾಕ್ಷಾತ್ಕಾರತುಲ್ಯಮಾನ ವೈಶದ್ಯತ್ತೈಯುಡೈತ್ತಾಯ್, ಪರಮಪದತ್ತುಕ್ಕು ಪ್ರಯಾಣಮ್ ಪಣ್ಣುಮ್ ದಿವಸ ಮರುತಿಯಾಕನಾಳ್ ತೋರುಮ್ ಅನುಷ್ಠಿಕ್ಕ ವಳರ್ನ್ದು ವರುವದಾಯ್ ಅನ್ತಿಮಪ್ರತ್ಯಯಾವಧಿಯಾನ ಜ್ಞಾನಸನ್ತತಿ ವಿಶೇಷಂ.

ವ್ಯಕ್ತವಾಗುತ್ತದೆ. ನಾರಾಯಣಶಬ್ದದಿಂದ ಸರ್ವಕ್ಕೂ ಈತನೇ ಆಧಾರನೆಂಬರ್ಥವು ತೋರಿಬರುವದರಿಂದ ಆತನಿಗೆ ಯಾವ ಆಧಾರವೂ ಬೇಕಾಗಿಲ್ಲವೆಂಬ ಭಾವವುಂಟಾಗುತ್ತದೆ. ನಮಶ್ಶಬ್ದದಿಂದ ಎಲ್ಲಕ್ಕೂ ಈತನೇ ಗತಿಯೆಂದು ಏರ್ಪಡುವದರಿಂದ, ಈತನಿಗೆ ಯಾವದೂ ಗತಿಯಲ್ಲವು. ಆದುದರಿಂದ ಈತನು ಅನನ್ಯಾಧೀನನು. ಪ್ರಥಮಪದವಾದ ಪ್ರಣವದಿಂದ ಸರ್ವಭೂತಗಳು ಈತನಿಗೆ ಶೇಷಭೂತವಾದುದರಿಂದ, ಈತನು ಯಾರಿಗೂ ಶೇಷನಲ್ಲವು. ಆದುದರಿಂದ ಈ ಮೂರು ವಿಶೇಷಣಗಳು ಭಗವಂತನಿಗೆ ಕೊಟ್ಟಿರುತ್ತಾರೆ. ಈ ಮೂರು ವಿಶೇಷಣಗಳನ್ನುಪಯೋಗಿಸಿರುವದರಿಂದ ಮೂಲಮಂತ್ರದ ಸಂಬಂಧವು ಭಕ್ತಿಯೋಗನಿಷ್ಠನಿಗೂ ಕೂಡ ಪ್ರಪತ್ತಿನಿಷ್ಠನ ಹಾಗೆ ತಪ್ಪಿದ್ದಲ್ಲವು. ಏಕೆಂದರೆ ಸಂಧ್ಯಾವಂದನೆಗೆ ಅಂಗವಾಗಿ ಮೂಲಮಂತ್ರಾದಿಗಳ ಜಪವು ಮಾಡತಕ್ಕದ್ದಾದುದರಿಂದ, ನಿತ್ಯಕರ್ಮಾನುಷ್ಠಾನವು ಭಕ್ತಿಯೋಗನಿಷ್ಠನಿಗೂ ಅತ್ಯಾವಶ್ಯಕವೆಂಬಭಿಪ್ರಾಯವು. ಈ ಅಭಿಪ್ರಾಯವು ಶಾರೀರಕಸೂತ್ರದಿಂದ ಸುವ್ಯಕ್ತವು.

ಅದು ತಾನ್ - ಆ ಧ್ಯಾನವಿಶೇಷವೇ, **ಓಂ ಇತ್ಯಾತ್ಮಾನಂ ಧ್ಯಾಯೀತ** ಇತ್ಯಾದಿ ಪ್ರಮಾಣಗಳಲ್ಲಿ ವಿಧಿಸಲ್ಪಟ್ಟ ಧ್ಯಾನವಿಶೇಷವೇ ಎಂಬ ಭಾವವು. **ತೈಲಧಾರೈಯೈಪ್ಪೋಲೆ** - ಎಣ್ಣೆಯ ಧಾರೆಯ ಹಾಗೆ ಎಂದರೆ ಅವಿಚ್ಛಿನ್ನವಾಗಿ, ವಾರಿಧಾರೆಯಾದರೆ ವಿಚ್ಛಿತ್ತಿಯುಂಟು. ಹಾಗೆ ವಿಚ್ಛಿತ್ತಿಯಿಲ್ಲವೆಂಬ ಭಾವವು. **ನಿರನ್ತರಸ್ಮೃತಿರೂಪಮಾಯ್** - ಯಾವಾಗಲೂ ಸ್ಮೃತಿಗೆ ಬರುವಂಥಾದ್ದಾಗಿ, ಎಂದರೆ ಮನಸ್ಸಿನಲ್ಲಿ ಇನ್ನು ಯಾವುದರ ಸ್ಮೃತಿಯೂ ಬರತಕ್ಕದ್ದಲ್ಲವೆಂಬ ಭಾವವು. **ಸಾಕ್ಷಾತ್ಕಾರ** - ಕಣ್ಣೆದುರಿಗೆ ನಿಂತಿರುವದಕ್ಕೆ, **ತುಲ್ಯಮಾನ**- ಸಮಾನವಾದ, **ವೈಶದ್ಯತ್ತೈಯುಡೈತ್ತಾಯ್** - ವಿಶದವಾಗಿರುವ ಭಾವವನ್ನು ಹೊಂದಿದುದಾಗಿ **ಪರಮಪದತ್ತುಕ್ಕು** - ದಿವ್ಯ ವೈಕುಂಠಕ್ಕೆ, **ಪ್ರಯಾಣಮ್ ಪಣ್ಣುಂ** – ಪ್ರಯಾಣಮಾಡುವ, **ದಿವಸ ಮರುತಿಯಾಕ**- ದಿನದ ಪರ್ಯಂತವಾಗಿ, **ನಾಳ್ ತೋರುಂ**– ಪ್ರತಿದಿನವೂ, **ಅನುಷ್ಠಿಕ್ಕ** - ಅನುಷ್ಠಿಸಲ್ಪಡಲಾಗಿ, **ವಳರ್ನ್ದು ವರುವದಾಯ್** - ವೃದ್ಧಿಯನ್ನು ಹೊಂದಿಬರುವದಾಗಿ, **ಅನ್ತಿಮಪ್ರತ್ಯಯಾವಧಿಯಾನ** -

ದೇಹಾವಸಾನದ ಕೊನೇ ಜ್ಞಾನವೇ ಅವಧಿಯಾಗಿವುಳ್ಳ **ಜ್ಞಾನಸನ್ತತಿವಿಶೇಷಂ** ಧ್ರುವಾಸ್ಮೃತಿ ಇತ್ಯಾದಿಗಳಲ್ಲಿ ಹೇಳಿರುವ ಸಂತತ ಉಂಟಾಗುವ ಜ್ಞಾನವಿಶೇಷವು. ಭಕ್ತಿಯೋಗದಲ್ಲಿ ಸ್ವಾಮಿಯ ಧ್ಯಾನವೆಂಥಾದ್ದೆಂದರೆ ಈ ಮೇಲಿನ ವಾಕ್ಯದಿಂದ ಹೇಳುತ್ತಾರೆ. ಅದು ತೈಲಧಾರೆಯ ಹಾಗೆ ಅವಿಚ್ಛಿನ್ನವಾದ ನಿರನ್ತರ ಸ್ಮೃತಿರೂಪವಾದುದು. ಆದರಿಂದ ಸರ್ವೇಶ್ವರನು ಕಣ್ಣಿನೆದುರಿಗೆ ನಿಂತರೆ ಹೇಗೋ, ಹಾಗೆ ಆತನ ಸ್ವರೂಪ ದಿವ್ಯಮಂಗಳವಿಗ್ರಹ, ಗುಣ ಲಾವಣ್ಯಾದಿಗಳು ಆ ಸಾಕ್ಷಾತ್ಕರಿಸಲ್ಪಡುತ್ತವೆ. ಆ ಧ್ಯಾನಯೋಗವು ಪ್ರತಿದಿನವೂ ಅನುಷ್ಠಿಸತಕ್ಕದ್ದಾಗಿ, ಅಂತಹ ಅಭ್ಯಾಸದಿಂದ ಅತಿಶಯವನ್ನು ಹೊಂದುವದಾಗಿಯೂ ಹೇಳಲ್ಪಟ್ಟಿತು. ಅತಿಶಯ ಹೇಗೆಂದರೆ **"ಧರ್ಮೇಣ ಪಾಪಮಪನುದತಿ"** ಎಂದು ಹೇಳಿರುವ ಹಾಗೆ ಪಾಪರಾಶಿಗಳು ತೊಲಗುವದರಿಂದ ಅತಿಶಯವೆಂದು ಹೇಳಬಹುದು; ಅಥವಾ ಧ್ಯಾನಮಾಡುತ್ತಾ ಮಾಡುತ್ತಾ ಭಜನಸುಖವು ವಿಪುಲವಾಗಬಹುದು. ಹೀಗೆ ಅತಿಶಯವನ್ನು ಹೊಂದುತ್ತದೆಂಬ ಭಾವವು. ನಿರಂತರ ನಾಳ್ತೋರುಮ್ ಅಹರಹರನುಷ್ಠೇಯವಾದುದೆಂಬುವದಕ್ಕೆ ಪ್ರಮಾಣವು. **"ಸಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ"** ಎಂಬ ಛಾಂದೋಗ್ಯ ಶ್ರುತಿಯಾಗಿರುತ್ತದೆ. **ಯಾವದಾಯುಷಂ** ಎಂದಿರುವದರಿಂದ **ಅನ್ತಿಮಪ್ರತ್ಯಯಾವಧಿ** ನಡಿಸತಕ್ಕದ್ದು. ಹಾಗೆ ಪ್ರತಿದಿನವೂ ಎಲ್ಲಿಯವರಿವಿಗೆ ಅನುಷ್ಠಿಸಿತಕ್ಕದ್ದೆಂದರೆ, ಅನ್ತಿಮಪ್ರತ್ಯಯದವರಿವಿಗೂ ಅನುಷ್ಠಿಸತಕ್ಕದೆಂದು ಹೇಳಲ್ಪಟ್ಟಿತು. ಅನ್ತಿಮಪ್ರತ್ಯಯವೆಂದರೆ ಮಾತು ನಿಂತು ಹೋಗಿ ಜ್ಞಾನ ಮಾತ್ರವಿರುವ ಅವಸ್ಥೆಯು. ಇಲ್ಲಿ **ಜ್ಞಾನಸನ್ತತಿ ವಿಶೇಷಮ್** ಎಂಬಲ್ಲಿ ವಿಶೇಷಶಬ್ದವನ್ನುಪಯೋಗಿಸಿರುವದರಿಂದ ಅದು ಪ್ರೀತಿಪೂರ್ವಕವಾದ ಜ್ಞಾನಸಂತತಿಯಾದುದರಿಂದ ಹಾಗೆ ಪ್ರಯೋಗವೆಂದು ಭಾವಿಸತಕ್ಕದ್ದು. ಇದು ಅನ್ತಿಮಪ್ರತ್ಯಯದವರಿವಿಗೂ ಹೇಗೆ ಅವಶ್ಯಕವೆಂದರೆ:--

"ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯನ್ತೇ ಕಳೇಬರಂ
ತಂ ತಮೇವೇತಿ ಕೌನ್ತೇಯ ಸದಾ ತದ್ಭಾವ ಭಾವಿತಃ ॥
ಅನ್ತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಳೇಬರಂ ।
ಯಃ ಪ್ರಯಾತಿ ಸಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥

(ಗೀ. ೮--೫, ೬) ಎಂಬೀ ಗೀತಾಶ್ಲೋಕಗಳಲ್ಲಿ ಯಾರು ನನ್ನನ್ನು ಸ್ಮರಿಸುತ್ತಾ ದೇಹವನ್ನು ಬಿಡುತ್ತಾರೋ ಅವರು ನನ್ನ ಭಾವವನ್ನೇ ಹೊಂದುವರು, ಅದರಲ್ಲಿ ಸಂಶಯವಿಲ್ಲವೆಂದು ಹೇಳಿರುವದರಿಂದ ಅನ್ತಿಮಪ್ರತ್ಯಯಾವಧಿವರಿವಿಗೂ **ಧ್ಯಾನವಿಶೇಷವು** ಆವಶ್ಯಕವೆಂದು ಹೇಳಲ್ಪಟ್ಟಿತು.

ಭಕ್ತಿಯೋಗೇ ವರ್ಣಾಶ್ರಮಧರ್ಮಾಣಾಂ ಉಪಕಾರಪ್ರಕಾರಃ

ಇದುಕ್ಕು ವರ್ಣಾಶ್ರಮಧರ್ಮಙ್ಗಳ್ ಜ್ಞಾನವಿಕಾಸಹೇತುವಾನ ಸತ್ತ್ವವಿವೃದ್ಧಿಕ್ಕು ಕ್ಕಳೈಯಾನ, ರಜಸ್ತಮಸ್ಸುಕ್ಕಳುಕ್ಕು ಮೂಲಮಾನ, ಪಾಪಙ್ಗಳೈಕ್ಕಳಿತ್ತುಕ್ಕೊಣ್ಡು, ಇತಿಕರ್ತವ್ಯತೈಯಾ ಯಿರುಕ್ಕುಮ್.

ಭಕ್ತಿಯೋಗದಲ್ಲೂ ವರ್ಣಾಶ್ರಮಧರ್ಮಗಳ ಪ್ರಯೋಜನವು.

ಆದರೆ ಶ್ರುತಿಯಲ್ಲಿ ಈ ಭಕ್ತಿಯೋಗದಿಂದಲೇ ಮೋಕ್ಷವೆಂದು, **ನಾನ್ಯಃ ಪನ್ಥಾ ವಿದ್ಯತೇ ಅಯನಾಯ**, ಭಕ್ತಿಯೋಗಕ್ಕೆ ಅಂಗವಾದ ಪ್ರಪತ್ತಿಯಿಂದಲ್ಲದೆ ಬೇರೇ ಮಾರ್ಗದಿಂದ ಮೋಕ್ಷವಿಲ್ಲವು ಎಂದು ಹೇಳಿರುವಾಗ ವರ್ಣಾಶ್ರಮಧರ್ಮಗಳಾದ ನಿತ್ಯನೈಮಿತ್ತಿಕಕರ್ಮಾನುಷ್ಠಾನವೇನು ಆವಶ್ಯಕವೇ, ಇಲ್ಲವೇ ಬಿಡತಕ್ಕದ್ದೇ, ಎಂಬ ಚರ್ಚೆಯಲ್ಲಿ, ಶಾರೀರಕಸೂತ್ರಗಳಾದ, **ವಿಹಿತತ್ವಾಚ್ಚಾಶ್ರಮಕರ್ಮಾಪಿ, ಸಹಕಾರಿತ್ವೇನಚ, ಅನಭಿಭವಂ ಚ ದರ್ಶಯತಿ**, ಎಂಬವುಗಳಲ್ಲಿ ವರ್ಣಾಶ್ರಮಧರ್ಮಗಳೂ **ಕೂಡ** ಅಂಗತ್ವೇನ ಬ್ರಹ್ಮವಿದ್ಯೆಗೆ ಆವಶ್ಯಕವೆಂದೂ ಭಕ್ತಿಯೋಗಿಯು ಇವುಗಳನ್ನು ತ್ಯಜಿಸತಕ್ಕದ್ದಲ್ಲವೆಂದೂ, "**ಧರ್ಮೇಣ ಪಾಪಮಪನುದತಿ**" ಎಂಬ ಶ್ರುತ್ಯನುಸಾರ, ಪಾಪಗಳು ತೊಲಗುವದರಿಂದ ಸತ್ವವೃದ್ಧಿಗೆ ಸಹಕಾರಿಯೆಂದೂ ಹೇಳಲ್ಪಟ್ಟಿತು. ಈ ಅಭಿಪ್ರಾಯಗಳನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಇದುಕ್ಕು - ಈ ಭಕ್ತಿಯೋಗಕ್ಕೆ, **ವರ್ಣಾಶ್ರಮಧರ್ಮಗಳು**, ನಿತ್ಯನೈಮಿತ್ತಿಕಕರ್ಮಗಳರೂಪಗಳಲ್ಲಿ **ಜ್ಞಾನವಿಕಾಸಹೇತುವಾನ** - ಅನುಷ್ಠಿಸುವವನ ಜ್ಞಾನವಿಕಾಸಕ್ಕೆ ಕಾರಣಭೂತವಾಗಿ, **ಸತ್ತ್ವವಿವೃದ್ಧಿಕ್ಕು** - ಸತ್ವವೆಂಬ ಬೆಳೆಯ ಅಭಿವೃದ್ಧಿಗೆ, **ಕಳೈಯಾನ** - ವಿಘ್ನಕಾರಿಗಳಾದ ಕಾಡುಗಿಡಗಳಾದ, **ರಜಸ್ತಮಸ್ಸುಕ್ಕಳುಕ್ಕು ಮೂಲಮಾನ** -ರಜಸ್ತಮೋಗುಣಗಳಿಗೆ ಕಾರಣಭೂತಗಳಾದ, **ಪಾಪಙ್ಗಳೈಕ್ಕಳಿತ್ತುಕೊಂಡು** - ಪಾಪಗಳನ್ನು ಕಳೆದುಕೊಳ್ಳುವ ಹಾಗೆ ಮಾಡಿ, **ಇತಿ ಕರ್ತವ್ಯತೈಯಾ ಯಿರುಕ್ಕುಮ್** - ಅವಶ್ಯ ಅನುಷ್ಠಿಸತಕ್ಕವುಗಳಾಗಿವೆ. ಬರೀ ಉಪಕಾರಕವಾಗಿದ್ದರೆ ಅನುಷ್ಠಿಸಿದರೆಅನುಷ್ಠಿಸಬಹುದು, ಬಿಟ್ಟರೆ ಪ್ರತ್ಯವಾಯವಿಲ್ಲವೆಂದಾಗುತ್ತದೆ. ಹಾಗಲ್ಲವು, ವರ್ಣಾಶ್ರಮಧರ್ಮಗಳೂ ಯೋಗಕ್ಕೆ ಅಂಗವಾದವುಗಳಾದುದರಿಂದ ಅನುಷ್ಠಿಸಲೇ ಬೇಕೆಂಬ ತಾತ್ಪರ್ಯವು. ಹೀಗೆ ನಿತ್ಯನೈಮಿತ್ತಿಕಕರ್ಮಾನುಷ್ಠಾನವು ಅವಶ್ಯಕರ್ತವ್ಯವೆಂಬ ಗೀತಾಭಿಪ್ರಾಯವನ್ನೇ ಶ್ರೀ

ಈ ಭಕ್ತಿಯೋಗಸ್ತಾನೇ *"ಪ್ರತ್ಯಯಾರ್ಥಂಚ ಮೋಕ್ಷಸ್ಯ ಸಿದ್ಧಯಸ್ಸಂಪ್ರಕೀರ್ತಿತಾಃ" ಎನ್ಗಿರಪಡಿಯೇ ಇಳನೆಞ್ಜರ್ಕ್ಕೈತ್ತೇತ್ತುಕೈಕ್ಕಿಟ್ಟ ವಿರಗಾಪ ವಳಿಯಿಲ್ ಕಾಮನಾ ಭೇದತ್ತಾಲೇ ಐಶ್ವರ್ಯಾದಿಗಳುಕ್ಕುಂ ಸಾಧನ

ಯಾಮುನೇಯರವರ ಗೀತಾರ್ಥಸಂಗ್ರಹದಲ್ಲಿ,

ಭಕ್ತಿಯೋಗಃ ಪರೈಕಾನ್ತ್ಯ ಪ್ರೀತ್ಯಾಧ್ಯಾನಾದಿಷು ಸ್ಥಿತಿಃ ।
ತ್ರಯಾಣಾಮಪಿಯೋಗಾನಾಂ ತ್ರಿಭಿರನ್ಯೋನ್ಯ ಸಂಗಮಃ ।
ನಿತ್ಯನೈಮಿತ್ತಿಕಾನಾಂ ಚ ಪರಾರಾಧನರೂಪಿಣಾಂ ।

ಭಕ್ತಿಯೋಗವೆಂದರೆ:—ಪ್ರೀತಿಪುರಸ್ಸರವಾಗಿ ಐಕಾಂತ್ಯಚಿತ್ತದಿಂದ ಸರ್ವೇಶ್ವರನನ್ನು ಧ್ಯಾನಿಸುವದೆಂದೂ, ಈ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳು ಪರಸ್ಪರ ಸಂಬಂಧವುಳ್ಳವುಗಳೆಂದೂ, ಇಂತಹ ಧ್ಯಾನವಿಶೇಷಕ್ಕೆ ಅಂಗರೂಪದಲ್ಲಿ, ಸರ್ವೇಶ್ವರನ ಆರಾಧನರೂಪವಾದ ನಿತ್ಯನೈಮಿತ್ತಿಕಕರ್ಮಗಳ ಸಂಬಂಧವುಂಟೆಂದು ಹೇಳಲ್ಪಟ್ಟಿರುತ್ತದೆ. ಈ ನಿತ್ಯನೈಮಿತ್ತಿಕಕರ್ಮಾನುಷ್ಠಾನದಿಂದಾಗುವ ಪ್ರಯೋಜನವೇನೆಂದರೆ, ಈತನಿಗೆ, ಜ್ಞಾನಾನ್ಮೋಕ್ಷಃ ಎಂದು ಹೇಳಿರುವ ಹಾಗೆ, ಜ್ಞಾನವಿಕಾಸವುಂಟಾಗಬೇಕು. ಅದಕ್ಕಾಗಿ ಸತ್ವವೃದ್ಧಿಯಾಗಬೇಕು; ಪಾಪಗಳಿಗೆ ಕಾರಣಭೂತವಾದ ರಜಸ್ತಮೋಗುಣಗಳ ಸಂಬಂಧವು ಆ ಸತ್ವಗುಣಕ್ಕೆ ತೊಲಗಬೇಕು. ಭತ್ತದ ಪೈರುವೃದ್ಧಿಯನ್ನು ಹೊಂದಬೇಕಾದರೆ ಕಳೆಗಳನ್ನು ಕೀಳುವದು ಹೇಗೆ ಆವಶ್ಯಕವೋ, ಹಾಗೆಯೇ ಸತ್ವವೃದ್ಧಿಗೆ ರಜಸ್ತಮೋಗುಣಗಳ ನಾಶವು ಆವಶ್ಯಕವೆಂಬ ಭಾವವು.

ಮುಂದಿನ ವಾಕ್ಯದಿಂದ ಈ ಭಕ್ತಿಯೋಗವೇ ಕಾಮನಾಭೇದದಿಂದ ಐಶ್ವರ್ಯ ಕೈವಲ್ಯಗಳಿಗೂ ಸಾಧನವಾಗುತ್ತದೆಂದು ಗೀತೆಯಲ್ಲಿ ಹೇಳಿರುವ ಅಭಿಪ್ರಾಯವನ್ನುಪದೇಶಿಸುತ್ತಾರೆ.

ಈ ಭಕ್ತಿಯೋಗಂ ತಾನೇ - ಈ ಭಕ್ತಿಯೋಗವೇ ಸ್ವತಃ, "ಮೋಕ್ಷಸ್ಯ - ಮೋಕ್ಷದ ಎಂದರೆ ಮೋಕ್ಷವಿಷಯಿಕವಾದ, ಪ್ರತ್ಯಯಾರ್ಥಂಚ- ನಂಬಿಕೆಗೋಸ್ಕರವಾಗಿ, ಎಂದರೆ ವೇದದಲ್ಲಿ ಹೇಳಿರುವ ಮೋಕ್ಷಿಗ ಉಪಾಸನಾನುಷ್ಠಾನದಿಂದ ಮೋಕ್ಷವು ಸಿದ್ಧಿಸುತ್ತದೆಂಬ ನಂಬಿಕೆಯುಂಟಾಗುವದಕ್ಕಾಗಿ, ಸಿದ್ಧಯಃ - ಅಣಿಮಾದ್ಯಷ್ಟೈಶ್ವರ್ಯಗಳ ಪ್ರಾಪ್ತಿಯೂ ಕೂಡ, ಸಂಪ್ರಕೀರ್ತಿತಾಃ - ಹೊಗಳಲ್ಪಟ್ಟವು." ಎಞ್ಗಿರಪಡಿಯೇ - ಎಂದು ಹೇಳಿರುವ ಹಾಗೆ, ಇಳ ನೆಞ್ಜ - ಮನವಿಶ್ವಾಸವುಳ್ಳವರ, ಅರ್ಕೈ - ಮದವನ್ನು, ಕಾಲುಷ್ಯವನ್ನು, ತೇತ್ತಿಗೈಕ್ಕ್

---

* ಶ್ರೀಸಾತ್ವತಮ್

ಮಾಮನುಸ್ಮರನ್ನಿತ್ಯರ್ಥಃ * "ಚತುರ್ವಿಧಾ ಭಜನ್ತೇ ಮಾಂ" ಎನ್ನು ಕೊಲ್ಲಪಟ್ಟದು.

ಹೋಗಲಾಡಿಸುವದಕ್ಕಾಗಿ, ಎಂದರೆ ಅವರುಗಳಿಗೆ ವಿಶ್ವಾಸವನ್ನುಂಟುಮಾಡುವದಕ್ಕಾಗಿ ಇಟ್ಟವಿರಗಾನವಳಿಯಿಲ್-ಏರ್ಪಟ್ಟ ಉಪಾಯಗಳ ಮಾರ್ಗಗಳಲ್ಲಿ,ಎಂದರೆ ಮಾರ್ಗಗಳ ಮೂಲಕ, **ಕಾಮನಾಭೇದತ್ತಾಲೆ** - ಅಪೇಕ್ಷೆಗಳಲ್ಲಿರುವ ವ್ಯತ್ಯಾಸದಿಂದ, **ಐಶ್ವರ್ಯಾದಿಗಳುಕ್ಕುಮ್** - ಮೋಕ್ಷೇತರ ಐಶ್ವರ್ಯಗಳಿಗೂ ಕೂಡ, **ಸಾಧನಮಾ ಮೆನ್ರುಮ್** - ಸಾಧನವಾಗುತ್ತದೆಂಬುವ, **ಇವ್ವರ್ಥಂ** - ಈ ಅಭಿಪ್ರಾಯವು, **"ಚತುರ್ವಿಧಾಭಜನ್ತೇಮಾಂ"** ಎಂದು (ಗೀ. ೭. ೧೧) ಗೀತಾಶ್ಲೋಕದಲ್ಲಿ, **ಕೊಲ್ಲಪಟ್ಟದು** - ಹೇಳಲ್ಪಟ್ಟಿತು.

ಐಹಿಕೈಶ್ವರ್ಯಗಳಿಗೂ, ಸ್ವರ್ಗಾದಿ ಭೋಗಗಳಿಗೂ ಕೈವಲ್ಯಾದಿ ಸುಖಗಳಿಗೂ ಕಾರಣಭೂತವಾದುದೂ ಕೂಡ ಈ ಭಕ್ತಿಯೋಗವೇ ಎಂದು ತಿಳಿಸುವದಕ್ಕಾಗಿ, **ಈ ಭಕ್ತಿಯೋಗಂ ತಾನೇ** ಎಂದು ಪ್ರಯೋಗಿಸಿರುತ್ತಾರೆ. ಐಹಿಕೈಶ್ವರ್ಯಾದಿಗಳು ಇಹಲೋಕದಲ್ಲೇ ಈ ಭಕ್ತಿಯೋಗದ್ವಾರಾ ಪ್ರಾಪ್ತವಾದರೆ, ಹಾಗೆಯೇ ಶಾಸ್ತ್ರಚೋದಿತಗಳಾದ ಉಪಾಯಾನುಷ್ಠಾನಗಳಿಂದ ಮೋಕ್ಷವೂ ಸಿದ್ಧಿಸುತ್ತದೆಂಬ ನಂಬಿಕೆಯುಂಟಾಗುತ್ತದೆಂದು ಹೇಳುವದಕ್ಕಾಗಿ **"ಪ್ರತ್ಯಯಾರ್ಥಂ ಚ ಮೋಕ್ಷಸ್ಯ"** ಎಂಬ ಸಾತ್ವತವಚನ ಪ್ರಮಾಣವನ್ನು ಉದಾಹರಿಸಿರುತ್ತಾರೆ ಹಾಗೆ ಅಣಿಮಾದಿ ಅಷ್ಟೈಶ್ವರ್ಯಗಳ ಪ್ರಾಪ್ತಿಯು ಭಕ್ತಿಯೋಗಾಧಿಕಾರಿಯ ಕಾಮನಾಭೇದದಿಂದ ಉಂಟಾಗುತ್ತದೆಂಬ, ಈ ಅಭಿಪ್ರಾಯವೇ ಗೀತಾಶ್ಲೋಕವಾದ "ಚತುರ್ವಿಧಾ ಭಜಂತೇ ಮಾಂ" ಎಂದು ಆರಂಭಿಸಿ ಉಪಪಾದಿತವಾಗಿದೆ. ಆ ಶ್ಲೋಕಗಳು ಯಾವುವೆಂದರೆ:--

ಚತುರ್ವಿಧಾ ಭಜನ್ತೇ ಮಾಂ ಜನಾಸ್ಸುಕೃತಿನೋಽರ್ಜುನ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ।
ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ "

ಸುಕೃತಮಾಡಿದ ನಾಲ್ಕು ವಿಧ ಭಕ್ತರು ನನ್ನನ್ನು ಶರಣುಹೊಂದಿ ನನ್ನನ್ನೇ ಭಜಿಸುವರು. ಅವರು ಯಾರೆಂದರೆ, **ಆರ್ತಃ** - ಹೋಗಲಾಡಿಸಿಕೊಂಡ ಐಶ್ವರ್ಯದ ಪ್ರಾಪ್ತಿಯನ್ನಪೇಕ್ಷಿಸುವವನು, **ಜಿಜ್ಞಾಸುಃ** - ಪ್ರಕೃತಿವಿಮುಕ್ತವಾದ ಆತ್ಮಾನುಭವವನಪೇಕ್ಷಿಸುವವನು. **ಅರ್ಥಾರ್ಥೀ** - ಹೊಸದಾಗಿ ಐಶ್ವರ್ಯವನ್ನಪೇಕ್ಷಿಸುವವನು **ಜ್ಞಾನೀ** - ಭಗವಂತನು ಶೇಷಿಯು, ತಾನು ಶೇಷನು ಎಂಬ ಜ್ಞಾನವನ್ನುಹೊಂದಿ,

* ಗೀ. ೭.೧೬.

ಜ್ಞಾನೀ ಸರ್ವಶ್ರೇಷ್ಠಃ

ಅನ್ವಿಡತ್ತಿಲ್, "ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ" ಎನ್ರು ಕೊಡಜ಼್ಗಚ್ಚೊನ್ನಜ್ಞಾನಿಯಿನುಡ್ಯೆಯು ವೇತ್ತತ್ತೈ (೧) **ಚತು**

ಭಗವತ್ಪ್ರಾಪ್ತಿಯನ್ನೇ ಅಪೇಕ್ಷಿಸುವಂತವನು. ಈ ನಾಲ್ಕು ಜನಗಳ ಮಧ್ಯದಲ್ಲಿ, ಜ್ಞಾನಿಯಾದವನು, ನಿತ್ಯಯುಕ್ತನಾಗಿ ಎಂದರೆ ಪ್ರಾಪಕ ಪ್ರಾಪ್ಯದೆಸೆಯಲ್ಲಿಯೂ ಕೂಡ ನನ್ನ ಸಂಬಂಧಯುಕ್ತನಾಗಿಯೂ, **ಏಕಭಕ್ತಿಃ** - ಇತರ ಮೂರು ಜನರ ಹಾಗೆ ಸಾಧನದೆಸೆಯಲ್ಲಿ ಮಾತ್ರ ನನ್ನ ಸಂಬಂಧವಂ ಬಯಸಿ, ಫಲಸಂಬಂಧವಲ್ಲಿ ಸಂಬಂಧವನ್ನು ಬಯಸದ ಹಾಗೆ ಅಲ್ಲದೆ, ಸಾಧನದೆಶೆಯಲ್ಲಿಯೂ ಫಲದೆಶೆಯಲ್ಲಿಯೂ ಕೂಡ ನನ್ನೊಬ್ಬನಲ್ಲಿಯೇ ಐಕಾಂತ್ಯಭಕ್ತಿಯುಳ್ಳವನಾಗಿಯೂ ಇರುವದರಿಂದ, **ವಿಶಿಷ್ಯತೇ** - ಹೆಚ್ಚುಮಹಿಮೆಯುಳ್ಳವನಾಗಿದ್ದಾನೆ. ಇತರರಿಗಾದರೋ ತಮ್ಮ ತಮ್ಮ ಮನೋರಥಗಳಲ್ಲಿ ಮಾತ್ರವೇ ವಿಶ್ವಾಸವು; ಬ್ರಹ್ಮವಿತ್ತಾದ ಜ್ಞಾನಿಗಾದರೋ, ನನ್ನಲ್ಲೇ ಯಾವಾಗಲೂ ವಿಶ್ವಾಸವು. ಆದುದರಿಂದ ಜ್ಞಾನಿಯಲ್ಲಿ ಹೆಚ್ಚಾದ ಮಹತ್ವವು ಎಂಬಭಿಪ್ರಾಯವು.

ಹೀಗೆ ಕಾಮನಾಭೇದದಿಂದ ಮೋಕ್ಷೇತರ ಫಲಸಾಧನತ್ವವು ಭಕ್ತಿಯೋಗಕ್ಕೆ ಉಂಟೆಂದು ಹೇಳಿ, ಈ ಮೇಲೆ ಹೇಳಿದ ನಾಲ್ಕುವಿಧ ಅಧಿಕಾರಿಗಳಲ್ಲಿ ಜ್ಞಾನಿಯಾದ ಮೋಕ್ಷಾರ್ಥಿಯು ಸರ್ವಶ್ರೇಷ್ಠನೆಂಬ ಗೀತಾವಾಕ್ಯವನ್ನು ಸಮರ್ಥಿಸಿ, ಅನ್ಯ ಗೀತೆಯ ಪ್ರಮಾಣವಾಕ್ಯವನ್ನು ಮುಂದೆ ಉದಾಹರಿಸುತ್ತಾರೆ.

ಜ್ಞಾನಿಯು ಸರ್ವಭಕ್ತರಲ್ಲಿಯೂ ಶ್ರೇಷ್ಠನು

ಅನ್ವಿಡತ್ತಿಲ್ - ಆ ಸಂದರ್ಭದಲ್ಲಿ, ಎಂದರೆ ಗೀತೆಯು ನಾಲ್ಕು ವಿಧ ಭಕ್ತರನ್ನು ಕುರಿತು ಹೇಳುವ ಸಂದರ್ಭದಲ್ಲಿ, "**ತೇಷಾಂ** - ಆ ನಾಲ್ಕು ಜನರಾದ ಆರ್ತನು, ಜಿಜ್ಞಾಸು, ಅರ್ಥಾರ್ಥೀ, ಜ್ಞಾನೀ ಎಂಬ ನಾಲ್ಕು ಜನ ಭಕ್ತರ ಮಧ್ಯದಲ್ಲಿ, **ಜ್ಞಾನೀ** - ಪರಬ್ರಹ್ಮಪ್ರಾಪ್ತಿಯನ್ನು ಬಯಸುವ ಮೋಕ್ಷಾರ್ಥಿಯು, **ನಿತ್ಯಯುಕ್ತಃ**-ಯಾವಾಗಲೂ ನನ್ನೊಡನೆಯೇ ಇರಬೇಕೆಂಬಪೇಕ್ಷೆಯುಳ್ಳವನಾಗಿಯೂ, **ಏಕಭಕ್ತಿಃ**-ನನ್ನೊಬ್ಬನಲ್ಲಿಯೇ ಸದಾ ಭಕ್ತಿಯುಳ್ಳವನಾಗಿಯೂ ಇರುವದರಿಂದಲೇ, **ವಿಶಿಷ್ಯತೇ** - ಹೆಚ್ಚುಮಹಿಮೆಯುಳ್ಳವನಾಗಿದ್ದಾನೆ," **ಎನ್ರುಕೊಡಜ಼್ಗಚ್ಚೊ**

---

(೧) ಭಾರ. ಶಾಂತಿ. ೩೫೦—೩೪,೫

ರ್ವಿಧಾ ಮಮ ಜನಾ ಭಕ್ತಾ ಏವಹಿ ತೇ ಸ್ಮೃತಾಃ । ತೇಷಾಂ ಏಕಾನ್ತಿನ ಶ್ರೇಷ್ಠಾ ಸ್ತೇಚೈವಾ ನನ್ಯದೇವತಾಃ । ಅಹಮೇವ ಗತಿಸ್ತೇಷಾಂ ನಿರಾಶೀಃ ಕರ್ಮಕಾರಿಣಾಂ । ಯೇತು ಶಿಷ್ಟಾ ಸ್ತ್ರಯೋ ಭಕ್ತಾಃ ಫಲಕಾಮಾಹಿ ತೇಮತಾಃ । ಸರ್ವೇ ಚ್ಯವನ ಧರ್ಮಾಣಃ ಪ್ರತಿಬುದ್ಧಸ್ತು ಮೋಕ್ಷಭಾಕ್" ಎನ್ರು ತಾನೇ ವೆಳಿಯಿಟ್ಟಾರ್.

ನ್ನಪೇತ್ತೈ - ಎಂದು ಪ್ರಾರಂಭಿಸಿ ಹೇಳಿದ ಶ್ರೇಷ್ಠತೆಯನ್ನು, "ಚತುರ್ವಿಧಾಃ- ಈ ಮೇಲೆ ಹೇಳಿದ ನಾಲ್ಕು ಮಂದಿಯಾದ, ತೇ - ಅವರೆಲ್ಲರೂ, ಮಮಜನಾಃ - ನನಗೆ ತುಂಬಾ ಪ್ರಿಯರಾದ ಸ್ವಜನರೆಂದೂ, ಭಕ್ತಾಃ ಏವಹಿ - ಎಲ್ಲರೂ ಭಕ್ತರು ಎಂಬುದಾಗಿಯೇ, ಸ್ಮೃತಾಃ-ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವರು ಇದರಿಂದ ಅವರು ಗಳೂ ಕೂಡ ಭಕ್ತರೇ ಎಂಬುದು ಏರ್ಪಟ್ಟಿತು. ತೇಷಾಂ - ಆ ನಾಲ್ಕು ಜನ ಗಳ ಮಧ್ಯದಲ್ಲಿ, ಏಕಾನ್ತಿನಃ - ಏಕಾಗ್ರಚಿತ್ತದಿಂದ ನನ್ನನ್ನೇ ಭಜಿಸುವ ಜ್ಞಾನಿಗಳು, ಶ್ರೇಷ್ಠಾಃ - ಶ್ರೇಷ್ಠರು; ಏಕೆಂದರೆ, ತೇಚೈವ - ಅವರು ತಾನೇ, ಅನನ್ಯದೇವತಾಃ - ನನ್ನಲ್ಲದೆ ಇತರ ಆರಾಧ್ಯದೇವತೆಗಳನ್ನು ಹೊಂದಿರುವ ದಿಲ್ಲ, ನಾನೇ ಸರ್ವೋತ್ಕೃಷ್ಟ ಆಶ್ರಯವೆಂದು ದೃಢವಾಗಿ ನಂಬಿರುವವರು. ನಿರಾಶೀಃ ಕರ್ಮಕಾರಿಣಾಂ ಫಲಾಪೇಕ್ಷೆಯಿಲ್ಲದೆಯೂ, ಇನ್ನು ಯಾವ ಪ್ರಯೋಜನವನ್ನ ಪೇಕ್ಷಿಸದೆಯೂ,ನನ್ನ ಆರಾಧನೆ ರೂಪವಾಗಿ ಕರ್ಮಗಳನ್ನು ಮಾಡುವ ಆ ಮೋಕ್ಷಾರ್ಥಿಗಳಾದ ಜ್ಞಾನಿಗಳಿಗೆ, ಅಹಮೇವಗತಿಃ-ನಾನೊಬ್ಬನೇ ಗತಿಯು ; ಯೇತು ಶಿಷ್ಟಾಸ್ತ್ರಯೋ ಭಕ್ತಾಃ - ಇನ್ನು ಮೂರು ಮಂದಿಯಾದ ಮೂರು ಜನ ಭಕ್ತರಾದವರು ಯಾರೋ, ಎಂದರೆ ಆರ್ತನು, ಜಿಜ್ಞಾಸು, ಅರ್ಥಾರ್ಥೀ, ಈ ಮೂರು ಮಂದಿ ಭಕ್ತರಾದವರು ಯಾರೋ, ತೇ - ಅವರು, ಫಲಕಾಮಾಹಿ - ಫಲದಲ್ಲಿ ಆಶೆಯುಳ್ಳವರಾಗಲ್ಲವೇ, ಜ್ಞಾನಿಯು ಹಾಗೆ ಫಲಾಪೇಕ್ಷೆಯಿಲ್ಲದವರಾಗಿ ಮತಾಃ - ನನಗೆ ಇಷ್ಟರು ; ಸರ್ವೇ - ಸಮಸ್ತರಾದ ಈ ಮೂರುವಿಧ ಭಕ್ತರು, ಚ್ಯವನ ಧರ್ಮಾಣಃ-ಜಾರಿಬೀಳುವ ಸ್ವಭಾವವುಳ್ಳವರು, ಎಂದರೆ ಮೋಕ್ಷೇತರ ಫಲವನ್ನು ಬಾರಿಬಾರಿಗೂ ಅನುಭವಿಸುವ ಧರ್ಮವುಳ್ಳವರು. ಪ್ರತಿಬುದ್ಧಸ್ತು-ಇವರುಗಳಲ್ಲೆಲ್ಲಾ ಜ್ಞಾನಿಯಾಗಿ ಬುದ್ಧಿಯುಳ್ಳವನು ಯಾರೆಂದರೆ, ಮೋಕ್ಷಭಾಕ್ - ಮೋಕ್ಷವನ್ನು ಹೊಂದುವನು." ಎನ್ರು ತಾನೇ ವೆಳಿಯಿಟ್ಟಾರ್ - ಎಂದು ಭಗವಂತನು ತಾನೇ ಗೀತಾಚಾರ್ಯನಾಗಿಯೇ ಅನುಗೀತೆಯಲ್ಲಿ ಪ್ರಕಾಶಪಡಿಸಿದನು. ಇದೂ ಕೂಡ ಶ್ರೀ ಕೃಷ್ಣನು ಅರ್ಜುನನಿಗೆ ಹೇಳುವ ವಾಕ್ಯವು. ನಾಲ್ಕುಜನ ಭಕ್ತರೆಂದೂ, ಅವರುಗಳು ಆರ್ತನು, ಜಿಜ್ಞಾಸುವು, ಅರ್ಥಾರ್ಥೀ, ಜ್ಞಾನಿ ಎಂದೂ ಹೇಳಿ, ಈ ನಾಲ್ಕು ಮಂದಿಯಲ್ಲಿ ಜ್ಞಾನಿಯು ಸರ್ವಶ್ರೇಷ್ಠನೆಂದು

ಗೀತೆಯಲ್ಲಿ ಹೇಳಿದ ಅಭಿಪ್ರಾಯವೇ ಭಾರತ ಶಾಂತಿಪರ್ವದ ಅನುಗೀತೆಯಲ್ಲಿ ಉಪಪಾದಿಸಲ್ಪಟ್ಟಿರುತ್ತದೆಂದು ಉಪದೇಶಿಸುತ್ತಾರೆ. ಗೀತೆಯಲ್ಲಿ ಜ್ಞಾನಿಯು ನಿತ್ಯಯುಕ್ತನಾಗಿ ಏಕಭಕ್ತಿಯುಳ್ಳವನಾಗಿರುವುದರಿಂದ ಶ್ರೇಷ್ಠನೆಂದು ಹೇಳಲ್ಪಟ್ಟಿತು. ಅನುಗೀತೆಯಲ್ಲಿಯೂ ಆ ಅಭಿಪ್ರಾಯಗಳೇ ಸಮರ್ಥನೆ ಮಾಡಲ್ಪಟ್ಟಿವೆ. ಅವರ, ಏಕಾಂತಿನಃ ಎಂದು ಹೇಳಿರುವುದರಿಂದ ಅಲ್ಲಿ ಏಕಭಕ್ತಿಃ ಎಂಬಲ್ಲಿ ಹೇಳಿದ ಅಭಿಪ್ರಾಯವೇ ಇಲ್ಲಿಯೂ ಉಪಪಾದಿತವಾಗಿರುತ್ತದೆ. ಆ ಏಕಭಕ್ತಿಃ ಎಂಬಲ್ಲಿರುವ ಅಭಿಪ್ರಾಯದಿಂದಲೇ ಫಲಾಕಾಂಕ್ಷೆಯಿಲ್ಲದ [illegible] ಆರಾಧನರೂಪ ಕರ್ಮವ ಮಾಡುವವರೆಂದು ತೋರಿಬರುತ್ತದೆ. ನಿತ್ಯಯುಕ್ತ [illegible]ರೆಂಬುದೇ ಅವರ, ಅನನ್ಯದೇವತಾಃ ಎಂಬಭಿಪ್ರಾಯವೇ ಇಲ್ಲಿಯೂ [illegible]ವಾಗಿದೆ. ವಿಶಿಷ್ಯತೇ ಎಂಬಭಿಪ್ರಾಯವೇ, ಇಲ್ಲಿ ಜ್ಞಾನಿಯಲ್ಲದ [illegible] ಮೂರುಮಂದಿ ಭಕ್ತರು ಚ್ಯವನಧರ್ಮವುಳ್ಳವರೆಂದೂ ಜ್ಞಾನಿಯು ಪ್ರತಿ[illegible]ದೆಂದು ಹೇಳಲ್ಪಟ್ಟಿತು. ಆರ್ತನೂ, ಅರ್ಥಾರ್ಥಿ ಇವರು ಐಶ್ವರ್ಯಕಾಮಿಗಳಾದ [illegible] ಪುನಃ ಸಂಸಾರವನ್ನೇ ಅನುಭವಿಸುವವರಾದುದರಿಂದ ಚ್ಯವನಧರ್ಮವುಳ್ಳವರೇನೋ ಹೌದು. ಆದರೆ ಪುನರಾವೃತ್ತಿ ಇಲ್ಲದ ಕೈವಲ್ಯಾನುಭವ ಉಂಟಾಗುವ ಜಿಜ್ಞಾಸುವು ಹೇಗೆ ಚ್ಯವನಧರ್ಮವುಳ್ಳವನೆಂಬ ಶಂಕಾ ಉಂಟಾಗಬಹುದು. [illegible]ದಿಂದ ಪುನಸ್ಸಂಸಾರಪ್ರಾಪ್ತಿ ಈ ಪಕ್ಷದಲ್ಲಿಲ್ಲದಿದ್ದರೂ, ನಿರತಿಶಯಾನಂದರೂಪವಾದ ಪರಿಪೂರ್ಣಬ್ರಹ್ಮಾನುಭವವು ತಪ್ಪಿದುದರಿಂದ ಆತನೂ ಕೂಡ [illegible] ಚ್ಯವನಧರ್ಮವುಳ್ಳವನೇ ಎಂಬ ಭಾವವು. ಚ್ಯವನಧರ್ಮಾಣಃ - ಎಂಬುವದಕ್ಕೆ ಫಲಾತ್ ಎಂದು ಇಟ್ಟುಕೊಂಡು ಫಲದೃಷ್ಟಿಯಿಂದ ಜಾರಿದವರೆಂದರೆ ಅರ್ಥವಾಗುತ್ತದೆ.

ತೇಷಾಂ ಜ್ಞಾನೀ ವಿಶಿಷ್ಯತೇ - ಎಂದು ಹೇಳಿದುದರಿಂದ ಜ್ಞಾನಿಯೊ[illegible]ಬ್ಬ ಭಕ್ತಿಯೋಗಾಧಿಕಾರಿಯು, ಇತರರೆಲ್ಲರೂ [illegible] ಸರಿಯಲ್ಲವೆಂದೂ ಈ ನಾಲ್ಕು ಮಂದಿಯೂ ಭಕ್ತಿಯೋಗಾಧಿಕಾರಿಗಳೇ ಎಂದೂ ಹೇಳಿದಂತಾಯಿತು. ಅವರಲ್ಲಿ ಜ್ಞಾನಿಮಾತ್ರವೇ ಸರ್ವಶ್ರೇಷ್ಠನಾದುದರಿಂದ, ಆತನ ಭಕ್ತಿಯೂ ಕೂಡ ಶ್ರೇಷ್ಠವಾದುದರಿಂದ, ಪರಭಕ್ತಿ ಎನ್ನಿಸುವದೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ. ಹಾಗೆ ಹೇಳುವ ಸಂದರ್ಭದಲ್ಲಿ ಶ್ರೀ ಭಾಷ್ಯಕಾರರವರು ಶರಣಾಗತಿ ಗದ್ಯದಲ್ಲಿ, **ಪರಭಕ್ತಿ ಪರಜ್ಞಾನ ಪರಮಭಕ್ತ್ಯೇಕ ಸ್ವಭಾವಂ ಮಾಂ ಕುರುಷ್ವ** ಎಂದು ಪ್ರಾರ್ಥಿಸುತ್ತಾರೆ. ಈ ಪರಭಕ್ತಿಯೂ ಅಂತಿಮಪ್ರತ್ಯಯಾವಧಿ ಇರಬೇಕೆಂದು ಹೇಳಿರುವಾಗ ಶ್ರೀ ಭಾಷ್ಯಕಾರರು ಪರಜ್ಞಾನ ಪರಮಭಕ್ತಿಗಳುಳ್ಳ ಸ್ವಭಾವವನ್ನು ಪ್ರಾರ್ಥಿಸಲು ಕಾರಣವೇನು? ಅದೇನು ಬೇರೆಯೇ, ಇಲ್ಲವೇ ಈ ಪರಭಕ್ತಿಯಿಂದಲೇ ಉಂಟಾಗುತ್ತವೆಯೋ ಎಂಬ ಶಂಕೆಗಳ ನಿವೃತ್ತಿಗಾಗಿ ಪರಭಕ್ತಿ ಪರಜ್ಞಾನ ಪರಮಭಕ್ತಿ ಎಂದರೇನೆಂಬುವದನ್ನು ಮುಂದಿನ ಐದು ವಾಕ್ಯಗಳಿಂದ ತಿಳಿಸುತ್ತಾರೆ.

ಪರಭಕ್ತಿ ಪರಜ್ಞಾನ ಪರಮಭಕ್ತಿಗಳ್

ಇಪ್ಪದಿ ಮೋಕ್ಷೋಪಾಯಮಾಗ ವಿಧಿಕ್ಕಪ್ಪಟ್ಟ ಭಕ್ತಿಯೋಗಮ್ ಪರಭಕ್ತಿ ಎನ್ಱು ಪೇಶಪ್ಪಟ್ಟದು. ಇದಿನುಡೈಯ ಹೇತುವಾಯ್, ಸಾತ್ತ್ವಿಕಪರಿಶೀಲನಾದಿಗಳಾಲೇ ವನ್ದ ಭಗವದ್ವಿಷಯತ್ತಿಲ್ ಪ್ರೀತಿವಿಶೇಷಮ್ ಸರ್ವೇಶ್ವರನ್ನೈತ್ತೆಳಿಯ ಪರಿಯುಮದಿಲ್ ಪಣ್ಣುಂ ಅಭಿನಿವೇಶತ್ತುಕ್ಕು ಕಾರಣಮಾಯ್ ಭಕ್ತಿ ಎನ್ಱು ಪೇರ್ ಪೆತ್ತಿರುಕ್ಕಿಱದು.

ಪರಭಕ್ತಿ ಪರಜ್ಞಾನ ಪರಮಭಕ್ತಿಶಬ್ದಗಳ ತಾತ್ಪರ್ಯವು

ಇಪ್ಪದಿ - ಹೀಗೆ ಎಂದರೆ, ಕಾರ್ಯನಾಮ ಭೇದಮಾತ್ರವೇ ವಿನಾ ಇನ್ನು ಯಾವ ವ್ಯತ್ಯಾಸವೂ ಈ ಮೂರು ವಿಧ ಭಕ್ತಿಗಳಲ್ಲಿಲ್ಲವಾದುದರಿಂದ, ಮೋಕ್ಷೋಪಾಯವಾಗಿ ವಿಧಿಸಲ್ಪಟ್ಟ ಭಕ್ತಿಯೋಗವು ಪರಭಕ್ತಿ ಎಂದು ಪೇಶಪ್ಪಟ್ಟದು - ಹೇಳಲ್ಪಟ್ಟಿತು; ಆದುದರಿಂದ ವಿರೋಧವೇನೂ ಇಲ್ಲವು ಜ್ಞಾನಿಯಾದ ಮುಮುಕ್ಷುವಿನ ಭಕ್ತಿಯೋಗಕ್ಕೇನೇ ಪರಭಕ್ತಿ ಎಂದು ಹೆಸರು ಎಂಬಭಿಪ್ರಾಯವು. ಪರಜ್ಞಾನ ಪರಮಭಕ್ತಿಗಳೆರಡೂ ಪರಭಕ್ತಿಯೋಗದಿಂದುಂಟಾಗುವ ಫಲಗಳಾದುದರಿಂದ ಪರಭಕ್ತಿಯೇ ಸಾಧನವೆಂಬ ಧಾನದಲ್ಲೇನೂ ವಿರೋಧವಿಲ್ಲವು. ಇಲ್ಲಿ ಮೋಕ್ಷೋಪಾಯಮಾಗ ಎಂದು ಹೇಳಿದುದರಿಂದ ಸಾಧಾರಣ ಭಕ್ತಿಗಿಂತಲೂ ವಿಲಕ್ಷಣವಾದುದೆಂದು ಹೇಳಿದಂತಾಯಿತು. ವಿಧಿಕ್ಕ ಎಂಬ ಪ್ರಯೋಗದಿಂದ, ಸಾಕ್ಷಾತ್ಕಾರದಿಂದ ತಾನಾಗಿ ಪ್ರಾಪ್ತವಾಗುವ ಪರಮಭಕ್ತಿಗಿಂತಲೂ ವ್ಯತ್ಯಸ್ತವಾದುದೆಂದು ಹೇಳಲ್ಪಟ್ಟಿತು. ಇದಕ್ಕೆ ಪರಭಕ್ತಿ ಎಂದು ಹೆಸರಾದರೆ ಭಕ್ತಿ ಎಂದರೇನೆಂಬ ಪ್ರಶ್ನೆಯುಂಟಾಗುವುದಾಗಿ, ಭಕ್ತಿ ಶಬ್ದದ ಅರ್ಥವನ್ನು ಮುಂದಿನ ವಾಕ್ಯದಿಂದ ವಿವರಿಸುತ್ತಾರೆ. ಇದಿನುಡೈಯ - ಈ ಪರಭಕ್ತಿಗೆ, ಹೇತುವಾಯ್ - ಕಾರಣವಾಗಿ, ಸಾತ್ತ್ವಿಕ ಪರಿಶೀಲನಾದಿಗಳಾಲೆ - ಸಾತ್ತ್ವಿಕಶಾಸ್ತ್ರಪರಿಶೀಲನ ಮೊದಲಾದವುಗಳಿಂದ, ವನ್ದ - ಬಂದಿರುವ, ಭಗವದ್ವಿಷಯತ್ತಿಲ್ ಪ್ರೀತಿವಿಶೇಷಮ್ - ಸರ್ವೇಶ್ವರನ ವಿಷಯದಲ್ಲಿರುವ ಪ್ರೀತಿವಿಶೇಷವು, ಸರ್ವೇಶ್ವರನ್ನೈತ್ತೆಳಿಯ ಪರಿಯುಮದಿಲ್ ಪಣ್ಣುಂ - ಸರ್ವೇಶ್ವರನನ್ನು ಸಾಕ್ಷಾತ್ಕಾರವಾಗಿ ಸಿದ್ಧಪಡಿಸಿ ತಿಳಿಯಬೇಕೆಂಬ, ಅಭಿನಿವೇಶತ್ತುಕ್ಕು ಕಾರಣಮಾಯ್ - ಅಭಿನಿವೇಶಕ್ಕೆ ಕಾರಣವಾಗಿ, ಭಕ್ತಿ ಎನ್ಱು - ಭಕ್ತಿ ಎಂಬುದಾಗಿ, ಪೇರ್ ಪೆತ್ತಿರುಕ್ಕಿಱದು - ಹೆಸರನ್ನು ಹೊಂದಿರುತ್ತದೆ. ಸ್ನೇಹಪೂರ್ವಮನುಧ್ಯಾನಂ ಭಕ್ತಿರಿತ್ಯಭಿಧೀಯತೇ - ಎಂದು ಹೇಳಿದ ಪರ

ಪರಜ್ಞಾನಂ

ಇತ್ಯಾಲಿ (೧) "ಶುದ್ಧಭಾವಂ ಗತೋಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾ

ಭಕ್ತಿಯೂ ಭಗವದ್ವಿಷಯದಲ್ಲಿರುವ ಪ್ರೀತಿ ಎಂದು ಹೇಳಲ್ಪಟ್ಟಿರುತ್ತದೆ. ಈ ಮೇಲಿನ ವಾಕ್ಯದಲ್ಲಿ ಹೇಳಲ್ಪಟ್ಟ ಸಾಧಾರಣ ಭಕ್ತಿಯೂ ಕೂಡ **ಭಗವದ್ವಿಷಯತ್ತಿಲ್ ಪ್ರೀತಿವಿಶೇಷ** ವೆಂದೂ ಹೇಳಲ್ಪಟ್ಟಿರುತ್ತದೆ. ಹೀಗಿರುವಲ್ಲಿ ಎರಡೂ ಒಂದೆಯೇ ಅಥವಾ ವ್ಯತ್ಯಸ್ತವಾದುವೇ ಎಂದರೆ ಎರಡೂ ವ್ಯತ್ಯಸ್ತವಾದವೆಂದು ಹೇಳುವದಕ್ಕಾಗಿ, ಈ ಭಗವದ್ವಿಷಯದಲ್ಲಿರುವ ಪ್ರೀತಿವಿಶೇಷಕ್ಕೆ ಎರಡು ವಿಶೇಷಣಗಳು ಕೊಡಲ್ಪಟ್ಟಿರುತ್ತವೆ:—(೧) **ಇದಿಸಾಧ್ಯೋಯಹೇತುವಾಯ್** - ಎಂದು ಹೇಳಿರುವದರಿಂದ, ಸಾಧಾರಣಭಕ್ತಿಯು, ಪರಭಕ್ತಿಯಾದ ಧ್ಯಾನಯೋಗಕ್ಕೆ ಕಾರಣವು. (೨) **ಸತ್ವಪರಿಶೀಲನಾದಿಗಳಾಲೆ ಪನ್ದ** ಎಂದು ಹೇಳಿರುವದರಿಂದ, ಸಾತ್ವಿಕ ಸಹವಾಸದಿಂದುಂಟಾಗತಕ್ಕದ್ದು ಸಾಧಾರಣಭಕ್ತಿಯು; ಪರಭಕ್ತಿಯಾದರೋ ಇದರಿಂದುಂಟಾದುದಾಗಿ, ಧ್ಯಾನರೂಪವಾದುದು; ಆದುದರಿಂದ "**ಪ್ರೀತಿರೂಪಮನುಧ್ಯಾನಂ**" ಎಂಬ ಲಕ್ಷಣವು ಅದಕ್ಕೆ ಕೊಡಲ್ಪಟ್ಟಿರುತ್ತದೆ. ಮಹನೀಯರ ವಿಷಯದಲ್ಲಿ ತೋರಿಸುವ ವಿಶ್ವಾಸವೂ ಕೂಡ ಸಾಧಾರಣಭಕ್ತಿ ಎಂದೇ ಹೇಳಿಸಿಕೊಳ್ಳುತ್ತದೆ. ಆದುದರಿಂದ ಸತ್ಸಂಗದಿಂದುಂಟಾಗತಕ್ಕ ಈ ಭಕ್ತಿಯು ಶಾಸ್ತ್ರಜ್ಞಾನದಲ್ಲಿ ಅಭಿರುಚಿಯನ್ನೂ, ಸರ್ವೇಶ್ವರನಲ್ಲಿ ಪ್ರೀತಿಯನ್ನೂ ಉಂಟುಮಾಡಿ ಕರ್ಮಯೋಗ ಜ್ಞಾನಯೋಗಗಳ ಮೂಲಕ ಪರಭಕ್ತಿರೂಪವಾದ ಧ್ಯಾನಯೋಗವನ್ನವಲಂಬಿಸುವ ಹಾಗೆಮಾಡಿ, ಪರಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಾಗುತ್ತದೆಂಬ ಭಾವವು. ಇಲ್ಲಿ **ಅಭಿನಿವೇಶ**ವೆಂದರೆ ಫಲಸಿದ್ಧಿಯುಂಟಾಗದೆ ಆಗದು ಎಂಬ ತೀವ್ರವಾದ ಅಪೇಕ್ಷೆಯು.

'ಇತ್ತಾಲೆ' ಎಂದು ಪ್ರಾರಂಭಿಸುವ ಮುಂದಿನ ವಾಕ್ಯದಿಂದ ಪರಜ್ಞಾನವೆಂದರೇನೆಂಬುವದನ್ನು ತಿಳಿಸಿ ಪರಭಕ್ತಿಯು ಪರಜ್ಞಾನಕ್ಕೆಹೇಗೆ ಕಾರಣವಾಗುತ್ತದೆಂಬುವದನ್ನುಪದೇಶಿಸುತ್ತಾರೆ.

ಪರಜ್ಞಾನವು

ಭಕ್ತ್ಯಾ ಶಾಸ್ತ್ರಾತ್ - ಎಂಬೆರಡು ಪದಗಳನ್ನು ಈ ಪ್ರಮಾಣದಲ್ಲಿ ಕಾಣಾ

೧. ಭಾರತ ಉದ್ಯೋ. ೬೮.೫. ಇದು ಧೃತರಾಷ್ಟ್ರನಿಗೆ ಸಂಜಯನು

ರ್ದನಂ" ಎಜ್ಞ್ಗರಪಡಿಯೇ ಶಾಸ್ತ್ರಜನ್ಯ ತತ್ವಜ್ಞಾನ ಕರ್ಮಯೋಗಾದಿ ಪರ ಮ್ಪರೈಯಾಲೆ ಪಿರನ್ದ ಪರಭಕ್ತಿಯಾನದು, ಸಾಕ್ಷಾತ್ಕರಿಕ್ಕವೇಣುಮೆನ್ನು ಮಭಿನಿವೇಶತ್ತೈಯುಣ್ಡಾಕ್ಕಿ, (೨) "ಯೋಗೇಶ್ವರತತೋಮೇತ್ವಂ ದರ್ಶ

ಕ್ಷಿ ನ್ಯಾಯದಿಂದ, ಎರಡು ಕಡೆಗೂ ಅನ್ವಯಿಸಬಹುದು. **ಶಾಸ್ತ್ರಾತ್** - ಶಾಸ್ತ್ರ ಮೂಲಕ ಉಂಟಾದ ತತ್ವಜ್ಞಾನ ದ್ವಾರಾ, **ಭಕ್ತ್ಯಾ** - ಈ ಅಪರ ಅಥವಾ ಸಾಧಾರಣ ಭಕ್ತಿಯಿಂದ, **ಶುದ್ಧಭಾವಂಗತಃ** - ಕರ್ಮಯೋಗ ಜ್ಞಾನಯೋಗ ಗಳ ಮೂಲಕ, "**ನಹಿಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ**" ಎಂದ ಹೇಳಿರುವ ಹಾಗೆ ಪರಿಶುದ್ಧ ಮನಸ್ಸನ್ನು ಹೊಂದಿದವನಾಗಿ, **ಭಕ್ತ್ಯಾ** - ಭಕ್ತಿ ಯೋಗ ಮೂಲಕ, **ಶಾಸ್ತ್ರಾತ್** - ಧ್ಯಾನಯೋಗವನ್ನು ಬೋಧಿಸುವ ಶಾಸ್ತ್ರ ದ್ವಾರಾ ಜನಾರ್ದನನಾದ ಶ್ರಿಯಃಪತಿಯನ್ನು, **ವೇದ್ಮಿ** - ಉಪಾಸನ ಮೂಲಕ ಸಾಕ್ಷಾತ್ಕರಿಸುವೆನು" ಎಜ್ಞ್ಗರಪಡಿಯೇ - ಎಂದು ಹೇಳಿರುವ ಹಾಗೆ, **ಶಾಸ್ತ್ರ ಜನ್ಯ** - ಶಾಸ್ತ್ರದಿಂದುಂಟಾದ ತತ್ವಜ್ಞಾನ ಕರ್ಮಯೋಗ ಮುಂತಾದ, ಮುಂತಾದ ಎಂಬುವದರಿಂದ ಜ್ಞಾನಯೋಗವೂ ಹೇಳಲ್ಪಟ್ಟಿತು, **ಪರಂಪರೆಯಾಲೇ** - ಕ್ರಮವಾಗಿ ಅನುಷ್ಠಿಸುವದರಿಂದ, **ಪಿರನ್ದ ಪರಭಕ್ತಿಯಾನದು**-ಹುಟ್ಟಿದ ಭಕ್ತಿ ಯೋಗವನ್ನೆಂಬುವದು, **ಸಾಕ್ಷಾತ್ಕರಿಕ್ಕವೇಣುಮೆನ್ನು ಅಭಿನಿವೇಶತ್ತೈ ಯುಣ್ಡಾಕ್ಕಿ** - ಸಾಕ್ಷಾತ್ಕರಿಸಬೇಕೆಂಬಭಿಲಾಷೆಯನ್ನುಂಟುಮಾಡಿ, "**ಹೇ ಯೋಗೇಶ್ವರ** - ಓ ಯೋಗಿಗಳಿಗೆಲ್ಲಾ ಪ್ರಭುವಾದ ಶ್ರೀ ಕೃಷ್ಣನೇ, **ತತಃ** - ಆ

ಹೇಳುವ ಸಂದರ್ಭವು. ಧೃತರಾಷ್ಟ್ರನ ಪ್ರಶ್ನೆ ಏನೆಂದರೆ :—ನೀನು ಸರ್ವಲೋಕ ಮಹೇಶ್ವರನಾದ ಮಾಧವನನ್ನು ತಿಳಿದ ಬಗೆ ಹೇಗೆ ? ನನಗೇಕೆ ಆತನನ್ನು ತಿಳಿ ಯುವದು ಸಾಧ್ಯವಿಲ್ಲದುದಾಗಿದೆ ? ಕಾರಣವನ್ನು ಹೇಳಬಲ್ಲೆಯಾ" ಎಂದು ಕೇಳಲು ; ಅದಕ್ಕಾ ಸಂಜಯರು "**ಮಾಯಾಂ ನ ಸೇವೇ ಭದ್ರಂತೇ ನ ವೃಥಾ ಧರ್ಮಮಾಚರೇ । ಶುದ್ಧಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾ ರ್ದನಂ,**" ಎಂದರೆ ತಾವು ಪ್ರಕೃತಿಯು ಭೋಗ್ಯವಾದುದೆಂದು ಐಹಿಕಭೋಗದಲ್ಲಿ ಮನಸ್ಸಿಡದೆಯೂ ವ್ಯರ್ಥವಾಗಿ ಧರ್ಮವನ್ನಾಚರಿಸದೆಯೂ, ಪರಮಪುರುಷಾ ರಾಧನರೂಪವೆಂದು ಭಾವಿಸಿಯೂ, ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ಧ್ಯಾನಯೋಗಗಳಿಂದ ಆತನನ್ನು ಸಾಕ್ಷಾತ್ಕರಿಸುತ್ತೇನೆಂದು ಉತ್ತರ ಹೇಳಿದರು.

೨. ಗೀತೆ ೧೧.೪. "**ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟು**

ಯಾತ್ಮಾನಮವ್ಯಯಂ'' (೩) ''ಕಾಣುಮಾರರುಳಾಯ್''

ಕಾರಣದಿಂದ, ಯಾವ ಕಾರಣದಿಂದೇದರೆ ನಿನ್ನ ದಿವ್ಯಮಂಗಳ ವಿಗ್ರಹವನ್ನು ನಾನು ಸಾಕ್ಷಾತ್ಕರಿಸಲು ಸಾಧ್ಯವಾದುದಾದರೆ, ತ್ವಂ – ನೀನು, ಅವ್ಯಯಂ – ಅಪ್ರಾಕೃತವಾಗಿರುವುದರಿಂದ ನಾಶರಹಿತವಾದ, ಆತ್ಮಾನಂ ನಿನ್ನ ರೂಪವನ್ನು, ಮೇ ದರ್ಶಯ – ನನಗಾಗಿ ತೋರಿಸು," ಎಂದೂ, "ನನ್ನ ಎದುರಿಗೆ ನಿಂತು ನಿನ್ನನ್ನನುಭವಿಸುವ ಹಾಗೆ ಕೃಪೆ ಮಾಡು" ಎಂದೂ,

---

ಮಿತಿ ಪ್ರಭೋ" ಎಂಬುವದು ಈ ಶ್ಲೋಕದ ಪೂರ್ವಾರ್ಧವು. ಹೇ ಪ್ರಭೋ – ಓ ಜಗತ್ತುಗಳಿಗೆಲ್ಲ ಸ್ವಾಮಿಯೇ, ತತ್ – ಆ ನಿನ್ನ ದಿವ್ಯಮಂಗಳ ವಿಗ್ರಹವು, ಮಯಾ – ನನ್ನಿಂದ, ದ್ರಷ್ಟುಂ – ಸಾಕ್ಷಾತ್ಕರಿಸಲು, ಶಕ್ಯಮಿತಿ ಸಾಧ್ಯವೆಂದು, ಮನ್ಯಸೇಯದಿ – ತಿಳಿದಿದ್ದೀ ಆದರೆ, ಅಂತಹ ರೂಪವನ್ನು ತೋರಿಸು ಎಂದು ಮುಂದಕ್ಕೆ ಇದೆ.

೩. ತಿರುವಾಯ್ಮೊಳಿ ೮.೧.೧

ತೇವಿಮಾರಾವಾರ್ ತಿರುಮಕಳ್ ಪೂಮಿಯೇವಮಱ್ಱು ಅಮರರಾಟ್ಚಿಯ್ಯಾರ್ । ಮೇವಿಯ ವುಲಕಮ್ ಮೂನ್ರುಡೈಯಾಟ್ಚಿ ವೇಣ್ಡುರುವ ನಿನ್ನುರುವಮ್ ॥ ಪಾವಿಯೇನ್ನನ್ನೈ ಯುಡುಕಿನ್ರ ಕಮಲಕ್ಕಣ್ಣತೋರ್ ಪವಳವಾಯ್ ಮಣಿಯೇ । ಆವಿಯೇ ಯಮುತೇ ಯಲೈಕಡಲ್ ಕಡೈನ್ದವಪ್ಪನೇ ಕಾಣುಮಾರರುಳಾಯ್ ॥ ಎಂಬುವದು ಪೂರಾ ಪಾಶುರವು. ಇದರರ್ಥವೇನೆಂದರೆ – ದೇವಿಮಾರಾವಾರ್ – ನಿನಗೆ ಪಟ್ಟಮಹಿಷಿಗಳು, ತಿರುಮಕಳ್ – ಶ್ರೀದೇವಿ, ಪೂಮಿ – ಭೂದೇವಿಯು, ಏವಮಱ್ಱು – ಮತ್ತು ನೀಳಾದೇವಿಯು, ಅಮರರಾಟ್ಚಿಯ್ಯಾರ್ ಅವರ್ – ನೀನು ನಿಯಮಿಸುವ ಕೈಂಕರ್ಯವನ್ನು ಮಾಡುವ ನಿತ್ಯಸೂರಿಗಳು, ಮೇವಿಯವುಲಕಮ್ ಮೂನ್ರುಡೈ ಅಟ್ಚಿ – ನಿನ್ನ ಅಪೃಥಕ್ಸಿದ್ಧ ವಿಶೇಷಣವಾದ ಪ್ರಕೃತಿ ಪುರುಷಕಾಲಾತ್ಮಕವಾದ ಮೂರು ಲೋಕವೂ ನಿನ್ನ ಸಂಕಲ್ಪಾನುಸಾರ ನಿನ್ನ ಆಜ್ಞಾನುವರ್ತಿಯು. ವೇಣ್ಡುವೇಣ್ಡು ಉರುವಮ್ ನಿನ್ ಉರುವಮ್ – ಅವರ ರಕ್ಷಣಾರ್ಥವಾಗಿ ಸ್ವೀಕರಿಸಬೇಕಾದ ಮತ್ತು ನಿನ್ನ ಅಭಿಮತಕ್ಕನುಗುಣವಾದ ರೂಪಗಳು ನಿನ್ನ ಅಸಾಧಾರಣವಾದ ದಿವ್ಯಮಂಗಳ ವಿಗ್ರಹಗಳು. ಪಾವಿಯೇನ್ನನ್ನೈ ಅಡುಕಿನ್ರ ಕಮಲಂ ಕಣ್ಣದು – ಈ ನಿನ್ನ ವಿಭೂತಿಗಳನ್ನನುಭವಿಸಲು ಸಾಧ್ಯವಿಲ್ಲದೆ

(೪) "ಒರುನಾಳ್ ಕಾಣವಾರಾಯೇ" ಎನ್ನ ವಿಲಪಿಕ್ಕುಮ್ಪಡಿ ಪಣ್ಣಿ ಅನ್ಯಪೇಕ್ಷಾಮಾತ್ರ ಮುದಿತರಾಗ ವನ್ನ ಭಗವತ್ಪ್ರಸಾದ ವಿಶೇಷತ್ತಾಲೆ

ಒರುನಾಳ್ ಕಾಣವಾರಾಯೇ - "ಒಂದು ದಿನವಾಗಲಿ ನನಗೆ ದರ್ಶನ ಕೊಡಬಾರದೇ" ಎಂದು, ವಿಲಪಿಕ್ಕುಮ್ಪಡಿ - ಕೂಗುವ ಹಾಗೆ ಮಾಡಿ, ಅನ್ಯಪೇಕ್ಷಾಮಾತ್ರ ಮುದಿತರಾಕ - ಈ ಅಪೇಕ್ಷೆ ಮಾತ್ರ ಮೂಲಕವಾಗಿ, ವನ್ನ - ಉಂಟಾದ, ಭಗವತ್ಪ್ರಸಾದ ವಿಶೇಷತ್ತಾಲೆ - ಭಗವತ್ಪ್ರಸಾದ ವಿಶೇಷದಿಂದ ತ್ರಿಕಾಲ ನಿಯತವಾದ - ಇನ್ನು ಉಪಾಯನಿಷ್ಪತ್ತಿಯೂ ......

ಪಾಪಗಳನ್ನು ಹೊಂದಿದ ನನ್ನನ್ನು ಬಾಧಿಸುವ ಕರ್ಮಲೋಪತ್ರವೂ, ಓರ್ ಪವಳಂ ಪೋಂಡ್ರ್ - ಅನ್ತಿಮವಾದ ಹವಳದ ಹಾಗೆ ಅಧರಶೋಭೆಯನ್ನು ಹೊಂದಿದ, ಮಣಿಯೇ ನೀಲರತ್ನದ ಹಾಗಿರುವವನೇ, ಆವಿಯೇ - ಪ್ರಾಣಭೂತನೇ ಎಂದರೆ ಸತ್ತಾಧಾಯಕನೇ, ಅಮುದೇ - ಅಮೃತದ ಹಾಗೆ ಭೋಗ್ಯಭೂತನೇ, ಅಲೈ ಕಡಲ್ ಕಡನ್ದ ಅಪ್ಪನೇ - ಕ್ಷೀರಾಬ್ಧಿಯನ್ನು ಕಡೆದ ತಂದೆಯೇ, ಕಾಣ ನಾನು ಅರುಳಾಯ್ - ಇಂಥಾವನನ್ನು ಸಾಕ್ಷಾತ್ಕರಿಸಿ ನಿನ್ನ ಎದುರಿಗೆ ನಿಂತು ಅನುಭವಿಸುವ ಹಾಗೆ ಕೃಪೆ ಮಾಡಬೇಕು ಎಂಬ ಪ್ರಾರ್ಥನೆ.

೪. ತಳರ್ನ್ದುಂ ಮುರಿನ್ದುಂ ಶಕಡವಶುರರುಡಲ್ ವೇರಾ । ಪಿಳನ್ದವೆನ್ದಾಯ್ ತಿರುಕ್ಕಾಲಾಣ್ಡ ಪೆರುಮಾನೇ । ಕಿಳರ್ನ್ದು ಪಿರಮನ್ ಶಿವನಿನ್ದಿರನ್ ವಿಣ್ಣವರ್ ಶೂಳ । ವಿಳಙ್ಗ ವೊರುನಾಳ್ ಕಾಣವಾರಾಯ್ ಪಿಣ್ಣೀದೆ ॥ ಎಂಬುವುದು ಪ್ರಮಾಣ ಪಾಶುರವು. ತಿರು. ೬.೯.೪.

ಇದರರ್ಥವು :—ಶಕಡವಶುರರ್ ಉಡಲ್ ತಳರ್ನ್ದುಂ - ಶಕಟಾಸುರನ ದೇಹವು ಶಿಥಿಲವಾಗಿ, ಮುರಿನ್ದುಂ ವೇರಾ ಪಿಳನ್ದ ನೀಯು - ಮುರಿದು ಬೇರೆಬೇರೆಯಾಗಿ ಬಿದ್ದು ಸೀಳುವ ಹಾಗೆ, ತಿರುಕ್ಕಾಲ್ ಅಣ್ಡ - ಶ್ರೀಪಾದವನ್ನು ದಯಪಾಲಿಸಿದ, ಪೆರುಮಾನೇ - ಸ್ವಾಮಿಯೇ, ಕಿಳರ್ನ್ದು ಪಿರಮನ್ ಶಿವನ್ ಇನ್ದಿರನ್ ವಿಣ್ಣವರ್ - ನಿನ್ನನ್ನು ಸೇವಿಸಬೇಕೆಂಬ ಉದ್ಯೋಗದಲ್ಲಿರುವ ಬ್ರಹ್ಮ ಶಿವ, ಇಂದ್ರ, ದೇವತೆಗಳು, ಶೂಳ ವಿಳಙ್ಗ - ಸ್ತುತಿಸಲು ಒಟ್ಟಿಗೆ ಸೇರಿ ಆಕಾಶವನ್ನು ಪ್ರಕಾಶಿಸುವ ಹಾಗೆ ಮಾಡಿ, ನಿನ್ನ ಪಿರಾದು - ಗಜೇಂದ್ರನಿಗೆ ಒಂದುದಿನ ಬಂದು ಸೇವೆ ಇತ್ತ ಹಾಗೆ, ಆಕಾಶದಲ್ಲಿ, ಒರುನಾಳ್ ಕಾಣವಾರಾಯ್- ಒಂದು ದಿನ ಸೇವೆಯನ್ನು ಕೊಟ್ಟು ಕಣ್ಣಿಗೆ ಕಾಣಿಸಿಕೊಳ್ಳಕೂಡದೇ ?

ತತ್ಕಾಲನಿಯತಮಾನ ಪರಿಪೂರ್ಣ ಸಾಕ್ಷಾತ್ಕಾರತ್ತೈ ಯುಣ್ಡಾಕ್ಕುಮ್. ಇಸ್ಸಾಕ್ಷಾತ್ಕಾರಮ್ ಪರಜ್ಞಾನಮೆನ್ರು (ಶೊಲ್ಲ) ಪೇಶಪ್ಪಟ್ಟದು.

ಮುಕ್ತಿಯೂ ಇಲ್ಲದಿರುವ ಕಾಲಕ್ಕೆ ಯೋಗ್ಯವಾದ, ಪರಿಪೂರ್ಣ ಸಾಕ್ಷಾತ್ಕಾರತ್ತೈ ಯುಣ್ಡಾಕ್ಕುಂ - ಸರ್ವೇಶ್ವರನ ಪರಿಪೂರ್ಣ ಬ್ರಹ್ಮಾನುಭವಕ್ಕೆ ಸಮನಾದ ಸಾಕ್ಷಾತ್ಕಾರವನ್ನುಂಟುಮಾಡುತ್ತದೆ ಇಸ್ಸಾಕ್ಷಾತ್ಕಾರಮ್ - ಇಂತಹ ಸಾಕ್ಷಾತ್ಕಾರವು, ಪರಜ್ಞಾನ ಮೆಂದು, ಪೇಶಪ್ಪಟ್ಟದು - ಹೇಳಲ್ಪಟ್ಟಿತು.

ಮೇಲಿನ ವಾಕ್ಯದಲ್ಲಿ ಪರಬ್ರಹ್ಮನನ್ನು ಸಾಕ್ಷಾತ್ಕರಿಸಬೇಕೆಂಬ ಅಭಿನಿವೇಶವೆಂದರೆ ತೀವ್ರಾಪೇಕ್ಷೆಯನ್ನುಂಟುಮಾಡುತ್ತದೆಂದು ಹೇಳಲ್ಪಟ್ಟಿತು. ಅದಕ್ಕೆ ನಿದರ್ಶನಗಳಾಗಿ ಅರ್ಜುನನು **ಮೇದರ್ಶಯ** ಎಂದೂ, ಹಾಗೆಯೇ ನಮ್ಮಾಳ್ವಾರರೂ ಸಹ "**ಕಾಣುಮಾರರುಳಾಯ್**" ಇತ್ಯಾದಿ ವಾಕ್ಯಗಳ ಮೂಲಕ ಕೂಗಿ ಪ್ರಾರ್ಥಿಸಿದ್ದಾರೆಂದು ಪ್ರಮಾಣಗಳನ್ನು ಉದಾಹರಿಸಿರುತ್ತಾರೆ. ಸಾಧಾರಣವಾದ ಭಕ್ತಿಶಬ್ದಕ್ಕೂ ಭಕ್ತಿಯೋಗದಲ್ಲಿರುವ ಭಕ್ತಿಶಬ್ದಕ್ಕೂ ವ್ಯತ್ಯಾಸ ಉಂಟೆಂದು ಈ ವಾಕ್ಯದಿಂದ ಉಪದೇಶಿಸಿರುತ್ತಾರೆ. ಸಾಧಾರಣ ಭಕ್ತಿಯು ಕರ್ಮಯೋಗಾದಿಗಳಲ್ಲಿ ಪ್ರವರ್ತಿಸಲು ಕಾರಣಭೂತವಾಗುತ್ತದೆ. ಭಕ್ತಿಯೋಗವೆಂಬುದೇ ಪರಭಕ್ತಿಯು; ಇದೇ ನಿರತಿಶಯ ಪ್ರೀತಿರೂಪವಾದ ಧ್ಯಾನವಿಶೇಷವು ಹೀಗೆ ಭಕ್ತಿ ಪರಭಕ್ತಿಗಳೆಂದರೇನೆಂಬುವದನ್ನು ತಿಳಿಸಿ, ಪರಮಾ ಭಕ್ತಿ ಏನೆಂಬುವದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಈ ಭಕ್ತಿ ಪರಭಕ್ತಿಗಳಿಗಿರುವ ವ್ಯತ್ಯಾಸವನ್ನು ತೋರಿಸುವದಕ್ಕಾಗಿ ಪ್ರಮಾಣತ್ವೇನ "**ಶುದ್ಧಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಂ**" ಎಂಬ ಸಂಜಯ ವಾಕ್ಯವನ್ನು ಉದಾಹರಿಸಿರುತ್ತಾರೆ. ಶುದ್ಧಭಾವವು ಕರ್ಮಜ್ಞಾನಯೋಗಗಳ ಮೂಲಕವಾಗಿ ಉಂಟಾಗುತ್ತದೆ. ಆ ಕರ್ಮಜ್ಞಾನಯೋಗಗಳಲ್ಲಿ ಪ್ರೀತಿಯು ಭಗವತ್ಪ್ರಸಾದದಿಂದುಂಟಾಗುತ್ತದೆ. ಅದು ಸಾಧಾರಣ ಭಕ್ತಿಯೆಂದುಂಟಾಗುತ್ತದೆ. ಆದುದರಿಂದ "**ಶುದ್ಧಭಾವಂ ಗತೋಭಕ್ತ್ಯಾ**" ಎಂದು ಅನ್ವಯಿಸಿ, "ಭಕ್ತ್ಯಾ ವೇದ್ಮಿ ಜನಾರ್ದನಂ" ಎಂದು ಅರ್ಥವನ್ನು ಹೇಳತಕ್ಕದ್ದು. ಈ ಎರಡನೇ ಯೋಜನೆಯಲ್ಲಿ ಭಕ್ತಿಶಬ್ದಕ್ಕೆ ಭಕ್ತಿಯೋಗದ ಮೂಲಕ ಜನಾರ್ದನನನ್ನು ಸಾಕ್ಷಾತ್ಕರಿಸುವೆನು ಎಂಬರ್ಥವು. ವೇದನ ಶಬ್ದಕ್ಕೆ ಪರಬ್ರಹ್ಮ ಸಾಕ್ಷಾತ್ಕಾರವೆಂಬುವದೇ ಅರ್ಥವೆಂದು **ಶ್ರೀ ಭಾಷ್ಯಕಾರ್ಯರು ಶ್ರೀ ಭಾಷ್ಯದಲ್ಲಿ ವ್ಯವಸ್ಥೆ ಮಾಡಿರುತ್ತಾರೆ. "ಭಕ್ತ್ಯಾ ವೇದ್ಮಿ"** ಎಂದೇ ಅನ್ವಯಿಸತಕ್ಕದ್ದೆಂದು ಶ್ರೀ ಸಾರಪ್ರಕಾಶಿಕಾ ಮತ್ತು ಶ್ರೀ ಸಾರವಿವರಣೆ ವ್ಯಾಖ್ಯಾನಗಳಲ್ಲಿ ಹೇಳಲ್ಪಟ್ಟಿವೆ. **ಕರ್ಮಯೋಗಾದಿ ಪರಂಪರೈಯಾಲೆ**

ಪರಮಭಕ್ತಿಯಿನುಡೈಯ ಸ್ವರೂಪಂ

ಇಪ್ಪಡಿ ನಿರತಿಶಯಭೋಗ್ಯಮಾನ ಭಗವತ್ಸ್ವರೂಪತ್ತೈ ಸಾಕ್ಷಾತ್ಕರಿತ್ತವಾರೇ ಪೆರುವಿಡಾಯ್ ಪ್ಪಟ್ಟವನ್ ತಟಾಕತ್ತೈ ಕಣ್ಡಾರ್ ಪೋಲೆ

ವಿರನ್ಪ ಭಕ್ತಿ ಎಂಬಲ್ಲಿ ಭಕ್ತಿಶಬ್ದವು ಪರಭಕ್ತಿ ಎಂದರೆ ಭಕ್ತಿಯೋಗವನ್ನು ಬೋಧಿಸುತ್ತದೆ. ಈ ಭಕ್ತಿಯೋಗವು ಸರ್ವೇಶ್ವರನನ್ನು ಕಾಣಬೇಕೆಂಬ ತೀವ್ರಾಪೇಕ್ಷೆಯನ್ನುಂಟುಮಾಡಿ, ಆ ಅಪೇಕ್ಷೆಯು ಸಿದ್ಧಿಸುವವರಿಗೂ ವಿಲಾಪವನ್ನುಂಟು ಮಾಡಿ, ಅಂತಹ ವಿಲಾಪದಿಂದ ಭಗವತ್ಕೃಪಾ ಉಂಟಾಗುತ್ತದೆಂದು ತಿಳಿಸುವದಕ್ಕಾಗಿ ಪಿಱಕ್ಕುಂಪಡಿ ಪಣ್ಣ ಎಂಬ ಪ್ರಯೋಗವು. ಈ ಭಗವತ್ಪ್ರಸಾದವು ಈ ತೀವ್ರಾಪೇಕ್ಷೆ ಮಾತ್ರದಿಂದುಂಟಾಗುತ್ತದೆಂದು ಮಾತ್ರ ಶಬ್ದವನ್ನುಪಯೋಗಿಸಿರುವದು, ಉಪಾಯ ಮೂಲಕ ಉಂಟಾಗುವ ಭಗವತ್ಕೃಪೆಗೂ, ಈ ತೀವ್ರಾಪೇಕ್ಷೆಯಿಂದುಂಟಾಗುವ ಕೃಪೆಗೂ ಇರುವ ವೈಲಕ್ಷಣ್ಯವನ್ನು ತೋರಿಸುತ್ತದೆ. ಈ ಎರಡರಿಂದುಂಟಾಗುವ ಸಾಕ್ಷಾತ್ಕಾರಕ್ಕೂ ವ್ಯತ್ಯಾಸ ಉಂಟು. “ಅಪೇಕ್ಷಾಮಾತ್ರ” ದಿಂದುಂಟಾಗುವ ಸಾಕ್ಷಾತ್ಕಾರವು ತತ್ಕಾಲನಿಯತವಾದುದು ಎಂದರೆ ಅಪೇಕ್ಷೆಯನ್ನನುಸರಿಸಿದ ಕಾಲದಲ್ಲಿ ಮಾತ್ರವೇ ಉಂಟಾಗತಕ್ಕದ್ದು. ಉಪಾಯಪೂರ್ವಕವಾಗಿ ಮೋಕ್ಷದೆಸೆಯಲ್ಲಿ ಉಂಟಾಗುವ ಹಾಗೆ ಯಾವಾಗಲೂ ಇರತಕ್ಕ ಸಾಕ್ಷಾತ್ಕಾರವಲ್ಲವು. ಅದೂ ಅಲ್ಲದೆ ಈ ಸಾಕ್ಷಾತ್ಕಾರವು ಪರಿಪೂರ್ಣ ಬ್ರಹ್ಮಾನುಭವದಲ್ಲಿ ಉಂಟಾಗುವ ನಿರತಿಶಯ ಸಾಕ್ಷಾತ್ಕಾರವೇ ಅಲ್ಲವು. ಆದರೆ ಈ ಸಾಕ್ಷಾತ್ಕಾರವೂ “ಭಜನಸುಖಸಮೀಕಸ್ಯ ವಿಪುಲಂ” ಎಂದು ಹೇಳಿರುವ ಹಾಗೆ ವಿಪುಲಸುಖದಾಯಕವಾದುದರಿಂದ, ಪರಿಪೂರ್ಣ ಸಾಕ್ಷಾತ್ಕಾರತ್ತೈ ಎಂದು ಹೇಳಲ್ಪಟ್ಟಿರುತ್ತದೆ; ಪರಿಪೂರ್ಣ ಸಾಕ್ಷಾತ್ಕಾರವೆಂಬುವದರಿಂದ ಪರಿಪೂರ್ಣಕ್ಕೆ ಸಮನಾದ ಸಾಕ್ಷಾತ್ಕಾರವೆಂಬಭಿಪ್ರಾಯದಲ್ಲೇ ತಾತ್ಪರ್ಯವು. ಏಕೆಂದರೆ ಅಂತಹ ಪರಿಪೂರ್ಣಾನುಭವವು ದಿವ್ಯವೈಕುಂಠದಲ್ಲಿ ಮಾತ್ರವೇ ವಿನಾ ಇಲ್ಲಿ ಉಂಟಾಗಲಾರದೆಂಬ ತಾತ್ಪರ್ಯವು.

ಪರಮಭಕ್ತಿಯ ಸ್ವರೂಪವು.

ನಿರತಿಶಯಭೋಗ್ಯಮಾನ - ಪರಮ ಭೋಗ್ಯವಾದ, ಭಗವತ್ಸ್ವರೂಪತ್ತೈ - ಭಗವತ್ಸ್ವರೂಪವನ್ನು, ಇಪ್ಪಡಿಸಾಕ್ಷಾತ್ಕರಿತ್ತವಾರೇ - ಈ ಮೇಲೆ ಹೇಳಿದ ರೀತಿಯಲ್ಲಿ ಪರಿಪೂರ್ಣವಾಗಿ ಸಾಕ್ಷಾತ್ಕರಿಸಿದವರಾಗಲಾಗಿ ಪೆರುವಿಡಾ

ಪಿರನ್ದ ಪ್ರೀತ್ಯತಿಶಯಮ್ ಪರಮಭಕ್ತಿ. ಇದು(೧) "ಮುನಿಯೇನಾನ್ಮುಕನಿ"ರ್ಪಡಿಯೇ ಸಙ್ಕೋಚಮರ ಅನುಭವಿತ್ತಲ್ಲದು ಧರಿಕ್ಕವೊಣ್ಣಾದ ಅಭಿನಿವೇಶತ್ತೈಯುಣ್ಡಾಕ್ಕಿ, ಮರುಕ್ಕವೊಣ್ಣಾದ ತಿರುವಾಣೈಯಿಟ್ಟು, ವಳೈತ್ತು ಕೂಪ್ಪಿಡುಗೈಯಾಲೇ, ಇವನುಕ್ಕು ಕಡುಗ ಪ್ರಾಪ್ತಿಯೈಕ್ಕೊಡುಕ್ಕು

ಯ್ ಪಟ್ಟವರ್ಗ - ತುಂಬಾ ಶ್ರಮಪಟ್ಟವನು, ತುಂಬಾ ದಣಿದಿರುವದರಿಂದ ದಾಹದಿಂದ ಪೀಡಿತನಾದವನು ಎಂಬಭಿಪ್ರಾಯವು. **ತಟಾಕತ್ತೈ ಕಣ್ಡಾರ್ಪೋಲೆ**- ಒಂದು ತಟಾಕವನ್ನು ಅಕಸ್ಮಾತ್ ಕಂಡಹಾಗೆ, **ಪಿರನ್ದಪ್ರೀತ್ಯತಿಶಯಂ**-ಹುಟ್ಟಿದ ಅತಿಶಯವಾದ ಪ್ರೀತಿಯು, ಪರಮಭಕ್ತಿ ಎಂದೆನಿಸುತ್ತದೆ. ಇಲ್ಲಿ ಪರಮಭಕ್ತಿಯು **ಪ್ರೀತ್ಯತಿಶಯ** ವೆಂದು ಹೇಳಲ್ಪಟ್ಟಿರುತ್ತದೆ; ಪರಭಕ್ತಿ, ಭಕ್ತಿಗಳು ಪ್ರೀತಿವಿಶೇಷವೆಂದು ಮಾತ್ರ ಹೇಳಿರುತ್ತದೆ. ಆ ಪರಮಭಕ್ತಿಯು ಎಂಥಾದ್ದೆಂಬುವದನ್ನು ಮುಂದಿನ ವಾಕ್ಯದಿಂದ ವ್ಯಕ್ತಪಡಿಸುತ್ತಾರೆ.

ಇದು - ಈ ಪರಮಭಕ್ತಿಯು, **"ಮುನಿಯೇನಾನ್ಮುಕನಿ"ರ್ಪಡಿಯೇ** - "ಮುನಿಯೇನಾನ್ಮುಕನೇ" ಎಂಬ ನಮ್ಮಾಳ್ವಾರ್ ಪಾಶುರದಲ್ಲಿ ಹೇಳಿರುವ ಹಾಗೆ, **ಸಂಕೋಚಮರ** - ಕಾಲಸಂಕೋಚವಿಲ್ಲದಹಾಗೆ, ಹಿಂದೆ ಪರಜ್ಞಾನದಲ್ಲಿ ಉಂಟಾಗುವ ಸಾಕ್ಷಾತ್ಕಾರವು ತತ್ಕಾಲನಿಯತ ವೆಂದು ಎಂದರೆ ಆ ಕಾಲದಲ್ಲಿ ಮಾತ್ರವೇ ಎಂದು ಕಾಲಸಂಕೋಚವು ಹೇಳಲ್ಪಟ್ಟಿತು, ಹಾಗೆ ಅಲ್ಲದೆ ಯಾವಾಗಲೂ ಉಂಟಾಗಬೇಕೆಂಬಭಿಲಾಷೆಯುಳ್ಳದು ಈ ಪರಮಭಕ್ತಿಯಾದುದರಿಂದ **ಸಙ್ಕೋಚಮರ** ವೆಂದು ಹೇಳಲ್ಪಟ್ಟಿತು; **ಅನುಭವಿತ್ತಲ್ಲದು ಧರಿಕ್ಕವೊಣ್ಣಾದ** - ಸರ್ವೇಶ್ವರನನ್ನು ಅನುಭವಿಸಿದುವಲ್ಲವೆ, ಎಂದರೆ ಕೈಙ್ಕರ್ಯಪರ್ಯಂತವಾದ ಭೋಗರೂಪ ಸಾಕ್ಷಾತ್ಕಾರವು ಸದಾ ಉಂಟಾಗಬೆ, **ಧರಿಕ್ಕವೊಣ್ಣಾದ** - ಇರಲು ಸಾಧ್ಯವಿಲ್ಲದ, **ಅಭಿನಿವೇಶತ್ತೈ ಉಣ್ಡಾಕ್ಕಿ** - ತೀವ್ರಾಪೇಕ್ಷೆಯನ್ನುಂಟುಮಾಡಿ, **ಮರುಕ್ಕವೊಣ್ಣಾದ**-ಅತಿಕ್ರಮಿಸಲಸಾಧ್ಯವಾದ, **ತಿರುವಾಣೈಯಿಟ್ಟು** - ಲಕ್ಷ್ಮೀವಿಷಯವಾದ ಶಪಥವನ್ನು ಮಾಡಿ, **ವಳೈತ್ತು** - ಬೇರೆ ವಿಧವಾಗಿ ಹೋಗುವದಕ್ಕೆ ಮಾರ್ಗವಿಲ್ಲದ ಹಾಗೆ ನಿರ್ಬಂಧಪಡಿಸಿ, **ಕೂಪ್ಪಿಡುಗೈಯಾಲೇ** - ಆರ್ತಧ್ವನಿಯಿಂದ ಕೂಗಿಕೊಳ್ಳುವದರಿಂದ, **ಇವನುಕ್ಕು** - ಈ ಭಕ್ತಿಯೋಗನಿಷ್ಠನಿಗೆ, **ಕಡುಗ** - ಶೀಘ್ರವಾಗಿ, **ಪ್ರಾಪ್ತಿಯೈ ಕೊಡುಕ್ಕುಂಪಡಿ** - ಪರಬ್ರಹ್ಮಪ್ರಾಪ್ತಿಯನ್ನು ಕೊಡುವ ಹಾಗೆ, **ಸರ್ವೇಶ್ವರನುಕ್ಕು ತ್ವರಾತಿಶಯತ್ತೈಯುಣ್ಡಾಕ್ಕಿ**- ಸರ್ವೇಶ್ವರನಿಗೆ ಹೆಚ್ಚಾದ ತ್ವರೆಯನ್ನುಂಟುಮಾಡಿ, **ಇವನೈ**-ಈ ಭಕ್ತಿಯೋಗನಿಷ್ಠನನ್ನು, **ಅವಾವತ್ತು**-ಅತನಿಗೆ ಹೆಚ್ಚಾದ ದಾಹವಿದ್ದುದನ್ನು ಶಮನಮಾಡಿ, ದಾಹ

ವರ್ಷದಿ ಸರ್ವೇಶ್ವರನುಕ್ಕು ತ್ವರಾತಿಶಯತ್ತೈಯುಣ್ಡಾಕ್ಕಿ, ಇವನೈ ಅವಾನತ್ತುವೀಡು ಪೆರಪ್ಪಣ್ಣುವರ್.

ಬೂಾಪ್ರೆಂದರೆ ಪರಿಪೂರ್ಣ ಬ್ರಹ್ಮಾನುಭವಾಪೇಕ್ಷೆಯು, **ವೀಡುಪೆರಪ್ಪಣ್ಣುವರ್**-ಮೋಕ್ಷವನ್ನು ಹೊಂದುವಹಾಗೆ ಮಾಡುತ್ತದೆ, ಪರಬ್ರಹ್ಮವನ್ನು ಸದಾ ಸಾಕ್ಷಾತ್ಕರಿಸುತ್ತಾ ನಿತ್ಯಕೈಙ್ಕರ್ಯವನ್ನೆಸಗುವ ಭೋಗವನ್ನು ಹೊಂದುವಹಾಗೆ ಮಾಡುತ್ತದೆಂಬ ಭಾವವು. (೧) "**ಮುನಿಯೇನಾನ್ಮುಕನೇ**" ಎಂಬುವದು ನಮ್ಮಾಳ್ವಾರ್ರವರ ಕೊನೇ ತಿರುವಾಯ್ಮೊಳಿಯು. ಈ ಹತ್ತು ಪಾಶುರಗಳಲ್ಲಿ ಆಳ್ವಾರ್ರವರು ಮುಕ್ತನಿರುವ ಸ್ಥಿತಿಯನ್ನು ಪರಜ್ಞಾನ ಮೂಲಕ ಸಾಕ್ಷಾತ್ಕರಿಸಿ, ಅದು ತಪ್ಪಿಹೋದ ಒಡನೆಯೇ ತೋರಿಬಂದ ಸಂಸಾರಬಂಧವನ್ನೂ ಕಂಡು, ಆ ಮುಕ್ತನ ಸ್ಥಿತಿಯನ್ನು ಹೊಂದಿಯೇ ತೀರಬೇಕೆಂಬ ಪರಮಭಕ್ತಿರೂಪವಾದ ಅಭಿನಿವೇಶವು ಪ್ರಾಪ್ತವಾಗಿರಲಾಗಿ, ಆಗ ಇದಕ್ಕೆಲ್ಲಾ ಕಾರಣಭೂತನಾದ ಸರ್ವೇಶ್ವರನೇ ವಿಹಗೇಶ್ವರಾರೂಢನಾಗಿ ಬಂದು ತನ್ನ ಶ್ರೀಪಾದಕಮಲಗಳನ್ನು ತಮ್ಮ ತಲೆಯಲ್ಲಿಟ್ಟು ಅನುಗ್ರಹಿಸಲು ಅತಿ ತ್ವರೆಯುಳ್ಳವನಾಗಿರುವ ಹಾಗೆ ಅನುಸಂಧಾನ ಮಾಡಿ, ಅದರಿಂದ ತನ್ನ ಪರಿಪೂರ್ಣ ಸಾಕ್ಷಾತ್ಕಾರವನ್ನು ತೋರಿದ ಭಗವಂತನ, ಬಹುಭೋಗ್ಯವಾದ ದಿವ್ಯಮಙ್ಗಳವಿಗ್ರಹ, ಪತ್ನಿಯಾಗಿ ಅನುಗ್ರಹಮಯಳಾದ ಲಕ್ಷ್ಮಿಯ ಮಹಿಮೆ, ಆಶ್ರಿತರಕ್ಷಕತ್ವ, ಪರಿಪೂರ್ಣ ಭೋಗಪ್ರದತ್ವ ಮುಂತಾದವುಗಳನ್ನು ಕೊಂಡಾಡಿ, ಅನುಭವಿಸಿ, ಅಂತಹ ಸರ್ವೇಶ್ವರನ ಸನ್ನಿಧಿಯಲ್ಲಿ ತಮ್ಮ ಆರ್ತಿಯನ್ನೂ ತಮ್ಮ ಅಭಿನಿವೇಶವನ್ನೂ ಅರಿಕೆಮಾಡಿ, ಲಕ್ಷ್ಮಿಯಮೇಲೂ, ಅವರಮೇಲೂ ಆಣೆಯನ್ನಿಟ್ಟು, ಅವರಿಗೆ ಇನ್ನೇನೂ ಮಾರ್ಗವೇ ಇಲ್ಲದಹಾಗೆ ನಿರ್ಬಂಧಿಸಿ, ಸರ್ವಪ್ರಕಾರ ರಕ್ಷಕನಾದ ನೀನು ನನಗೆ ಪೂರ್ಣಾನುಭವವನ್ನನುಗ್ರಹಿಸಬೇಕೆಂದು, ದೀನಸ್ವರದಿಂದ ಕೂಗಿಕೊಳ್ಳಲು, ಆಗ ಪರಿಪೂರ್ಣ ಬ್ರಹ್ಮಾನುಭವವನ್ನು ಸರ್ವೇಶ್ವರನು ದಯಪಾಲಿಸಿದುದರಿಂದ, ತಾವು ಅವಾಪ್ತಫಲರಾದರೆಂದು ಹೇಳಿ ಆ ಮಹಾ ಪ್ರಬಂಧವನ್ನು ಮುಗಿಸಿರುತ್ತಾರೆ.

ಮುನಿಯೇ ನಾನ್ಮುಕನೇ ಮುಕ್ಕಣ್ಣಪ್ಪಾ, ಎನ್ಪೊಲ್ಲಾ ।
ಕ್ಕನಿವಾಯ್ ತಾಮರೈಕ್ಕಣ್ಕರುಮಾಣಿಕ್ಕಮೇ ಯೆನ್ಕಳ್ವಾ ।
ತನಿಯೇ ನಾರುಯಿರೇ ಯೆನ್ರಲೈ ಮಿಶೈಯಾಯ್ ವನ್ದಿಟ್ಟು ।
ಇನಿನಾನ್ ಪೋಕಲೊಟ್ಟೇನೊನ್ರುಮ್ ಮಾಯಞ್ಜೆಯ್ಯೇ
ಲೆನ್ನೈಯೇ ॥ ೧೦.೧೦.೧

ಎಂಬುವದು ಪೂರಾ ಪಾಶುರವು. "ಸತ್ಯಸಙ್ಕಲ್ಪನೇ, ಚತುರ್ಮುಖ ರುದ್ರಾ

ದಿಗಳಿಗೆ ಅಂತರ್ಯಾಮಿಯಾಗಿ ಅವರುಗಳನ್ನು ಶರೀರವಾಗಿ ಹೊಂದಿರುವವನೇ, ಬಿಂಬಫಲದಹಾಗೆ ಅಧರವನ್ನೂ, ಕಮಲದಹಾಗೆ ನೇತ್ರವನ್ನೂ, ನೀಲಮಾಣಿಕ್ಯದ ಹಾಗೆ ದೇಹಕಾಂತಿಯನ್ನೂ ಹೊಂದಿರುವವನೇ, ಅನಾದಿಕಾಲದಿಂದಲೂ ಅತ್ಯಾಪ ಹಾರಿಯಾದ ನನ್ನನ್ನು ವಶಮಾಡಿಕೊಂಡವನೇ, ನನಗೆ ಸಂಪೂರ್ಣಸತ್ತಾದಾಯ ಕನೇ, ನಿನ್ನ ತಿರುವಡಿಗಳನ್ನು ನನ್ನ ತಲೆಯಮೇಲಿಟ್ಟು ಅನುಗ್ರಹಿಸಿ, ನಿನ್ನ ಸಾಕ್ಷಾತ್ಕಾರದಲ್ಲಿ ಅಭಿನಿವೇಶವನ್ನುಂಟುಮಾಡಿದ ನಂತರ, ಇನ್ನು ಮೇಲೆ ನೀನು ವಂಚಿಸಿಬಿಟ್ಟು ಹೋಗಲು ಬಿಡೆನು; ಇನ್ನುಮುಂದೆ ನೀನು ಯಾವ ವಿಧ ದಲ್ಲೂ ವಂಚಿಸಕೂಡದು" ಎಂಬುವದು ಈ ಪಾಶುರತಾತ್ಪರ್ಯವು ಆದುದರಿಂದ ಈ ಪಾಶುರದಲ್ಲಿ "ಅನುಭವಿತ್ತಲ್ಲದು ಧರಿಕ್ಕವೊಣ್ಣಾದ ಅಭಿನಿವೇಶತ್ತೈ ಯುಣ್ಡಾಕ್ಕಿ" ಎಂಬುವದು ಉಪಪಾದಿತವಾಗಿರುತ್ತದೆ. ಮುಡಿಕ್ಕವೊಣ್ಣಾದ ತಿರುವಾಣೈಯಿಟ್ಟು ಎಂಬುವದು ಮುಂದಿನ ಪಾಶುರದಲ್ಲಿ ಉಪಪಾದಿತವಾಗಿರು ತ್ತದೆ:—

> ಮಾಯಂ ಶೆಯ್ಯೇಲೆನ್ನೈ ಉನ್ದಿರುಮಾರ್ವತ್ತು ಮಾಲೈನಙ್ಗೈ ।
> ವಾಶಞ್ಜೆಯ್ ಪೂಙ್ಗುಳಲಾಳ್ ತಿರುವಾಣೈ ನಿನ್ನಾಣೈ ಕಣ್ಡಾಯ್ ।

ಓ ಶ್ರಿಯಃಪತಿಯೇ, ಇದುವರಿವಿಗೆ ನೀನು ಸಮಾಧಾನ ಮಾಡಿ ನನ್ನನ್ನಗಲಿ ಹೋದಹಾಗೆ ಇನ್ನುಮುಂದೆ ಸಂಸಾರದಲ್ಲೇ ನನ್ನನ್ನು ತಳ್ಳಿಬಿಟ್ಟು ವಂಚಿಸಲಾಗದು. ಹಾಗೆ ವಂಚಿಸಿದಾದರೆ ನಿನಗೆ ಅತ್ಯಂತ ಪ್ರಿಯವಲ್ಲಭಳಾಗಿ, ನಿನ್ನ ವಕ್ಷಸ್ಥಲದಲ್ಲಿ "ಅಗಲಗಿಲ್ಲೇನ್" ಎಂದು ಹೇಳಿ ನಿರಂತರ ವಾಸಮಾಡುವ, ಮತ್ತು "ಅಪ್ರ ಮೇಯಂ ಹಿ ತತ್ತೇಜಃ ಯಸ್ಯ ಸಾ ಜನಕಾತ್ಮಜಾ" ಎಂದು ಹೇಳಿರುವಹಾಗೆ ನಿನಗೆ ಸಂಪದ್ರೂಪಳಾದ, ಮಾಲೆಯಹಾಗೆ ನಿನಗೆ ಅಲಂಕಾರರೂಪಳಾದ ಸಕಲ ಕಲ್ಯಾಣಗುಣಪರಿಪೂರ್ಣಳಾದ, ನಿನ್ನ ದಿವ್ಯಮಂಗಳವಿಗ್ರಹಕ್ಕೆ ಪರಿಮಳರೂಪ ಳಾದ ಲಕ್ಷ್ಮೀದೇವಿಯಮೇಲೆ ಆಣೆಯು, ಮತ್ತು ನಿನ್ನ ಮೇಲೆಯೂ ಆಣೆಯು" ಎಂಬಭಿಪ್ರಾಯವು; ಉತ್ತರಾರ್ಧದಲ್ಲಿ ಆತನೇ ಬಂದು ತನ್ನನ್ನು ಕರೆದುಕೊಂಡು ಹೋಗಬೇಕೆಂದು ಪ್ರಾರ್ಥಿಸಿರುತ್ತಾರೆ "ವಳ್ಳೈತ್ತು ಕೂಪ್ಪಿಡುಗೆಯರಾಲೇ" ಎಂದು ಹೇಳಿರುವದರಿಂದ, ಪರಮಭಕ್ತಿಯಲ್ಲಿ ಪರಮಾತ್ಮನಿಂದ ವಿಶ್ಲೇಷವು ಸಹಿಸ ಲಸಾಧ್ಯವಾಗಿ, ಸಂಶ್ಲೇಷದಲ್ಲಿ ತುಂಬಾ ಅಭಿನಿವೇಶಮೂಲಕವಾಗಿ, ಆರ್ತಸ್ವರದಿಂದ ಕೂಗಿಕೊಳ್ಳುತ್ತಾನೆಂಬ ಭಾವವು. ಈ ಅಭಿಪ್ರಾಯವೆಲ್ಲಾ ನಮ್ಮಾಳ್ವಾರ್ರವರ "ಶೂಳ್‌ನ್ದ" ಎಂಬ ಕೊನೇ ಪಾಶುರವ ಆರಾಯಿರಪ್ಪಡಿ ವ್ಯಾಖ್ಯಾನದಲ್ಲಿ ಬಹು ಚನ್ನಾಗಿ ಉಪಪಾದಿತವಾಗಿರುತ್ತದೆ; ಹೇಗೆಂದರೆ:—ಇಪ್ಪಡಿ ಎನ್ನೈರುಮಾ ನುಕ್ಕುಮ್ ಮುರುತ್ತರುಳವೊಣ್ಣಾದ ತೋರುಪಡಿ ಪಿರಾಟ್ಟಿತಿರುವಾಣೈ

ಯ್ಯೆಯುಮ್ ತ್ತ ತಿರುವಾಣೈಯ್ಯೆಯುಮ್ ಇಟ್ಟು ನಿರ್ಬನ್ಧಿತ್ತುಕೊಣ್ಡು ಆರ್ತ್ತಸ್ವರತ್ತಾಲೇ ಕೂಪ್ಪಿಡುಮಳವಿಲ್, ತಾಮ್ ಮನೋರಥಿತ್ತಪಡಿಯೇ ಎಮ್ಬೆರುಮಾನುಮೊಳನ್ಸ ಉಳ, ಅವನ್ನೈಕಣ್ಡು, ಎನ್ನುಡೈಯವಿಡಾಯೆಲ್ಲಾ ತೀರಪ್ಪಡಿ, ಎನ್ನುಡೈಯ ಮನೋರಥವು ಪೊರುಪಡಿಯೇ ಮುಡಿನ್ದದು" ಎಂದು ಹೇಳಲ್ಪಟ್ಟಿರುತ್ತದೆ.

ಈ ಪರಮಭಕ್ತಿಯು ಸರ್ವೇಶ್ವರನಿಗೆ ತ್ವರಾತಿಶಯವನ್ನುಂಟುಮಾಡುತ್ತದೆಂದು ಹೇಳಲ್ಪಟ್ಟಿರುತ್ತದೆ. ಏಕೆಂದರೆ ಪರಮಭಕ್ತನ ವಿಷಯದಲ್ಲಿ ಸರ್ವೇಶ್ವರನು ಅವನ ಪ್ರತೀಕ್ಷೆಯನ್ನು ಮಾಡುತ್ತಾ ಆತನ ರಕ್ಷಣೆಗಾಗಿ ಕಂಕಣಬದ್ಧನಾಗಿ ನಿಂತಿರುತ್ತಾನೆ ಅಂತವನನ್ನು ಸರ್ವೇಶ್ವರನೇ ಕ್ಷಿಪ್ರದಲ್ಲಿ ರಕ್ಷಿಸತಕ್ಕದ್ದು ಮುಖ್ಯಕರ್ತ್ತವ್ಯವು. ಹೀಗಿದ್ದರೂ ಪ್ರಸನ್ನನೇ, ಅನುಗ್ರಹಮಾಡಬೇಕಾದ ರೀತಿಯುಮೇಲೂ, ಸರ್ವೇಶ್ವರನಾದ ತನ್ನ ಮೇಲೆ ಆಣೆಗಳನ್ನಿಟ್ಟು, ನಿರ್ಬಂಧಿಸಿದನಂತರ ಇನ್ನು ಹೇಳತಕ್ಕದ್ದೇನು? ಅತಿತ್ವರೆಯಿಂದ ಆತನ ಮನೋರಥವನ್ನು ಪೂರ್ಣಮಾಡುವವರಲ್ಲಿ ನಿಸ್ಸಂದೇಹವು.

ಪರಭಕ್ತಿ, ಪರಜ್ಞಾನ, ಪರಮಭಕ್ತಿ ಸ್ವರೂಪಗಳು ಸಙ್ಗ್ರಹವಾಗಿ "**ಪರಭಕ್ತಿಃ ಪುರಾದೃಷ್ಟ ಪ್ರತ್ಯಕ್ಷಾಭಿನಿವೇಶನಂ । ಪರಜ್ಞಾನನ್ತು ತಸ್ಯೈವ** ಸಾಕ್ಷಾತ್ಕಾರಪರಿಸ್ಫುಟಃ । **ಪುನರ್ವಿಶ್ಲೇಷ ಭೀರುತ್ವಂ ಪರಮಾಭಕ್ತಿರುಚ್ಯತೇ**' ಎಂಬ ಶ್ಲೋಕಗಳಲ್ಲಿ ಸಙ್ಗ್ರಹಿಸಲ್ಪಟ್ಟಿವೆ. "ಪರಭಕ್ತಿ ಎಂಬುವದು ಹಿಂದೆ ಎಂದಿಗೂ ಕಾಣದೇ ಇದ್ದ ಪರಬ್ರಹ್ಮಸಾಕ್ಷಾತ್ಕಾರವಾಗಬೇಕೆಂಬ ತೀವ್ರಾಪೇಕ್ಷೆಯು; ಅಂತಹ ಸಾಕ್ಷಾತ್ಕಾರವನ್ನು ಹೊಂದುವದು ಪರಜ್ಞಾನವು; ಅಂತಹ ಸಾಕ್ಷಾತ್ಕಾರವು ಎಂದಿಗೂ ತಪ್ಪಕೂಡದೆಂಬ ಅಪೇಕ್ಷೆಯು ಪರಮಾಭಕ್ತಿಯು" ಎಂದು ಹೇಳಲ್ಪಟ್ಟಿರುತ್ತದೆ. ಯಾವಾಗ ಪರಮಭಕ್ತಿಯುಂಟಾಗುತ್ತದೆಯೋ ಆಗ ಆತನು ಆರ್ತನಾಗುವದರಿಂದ ಸರ್ವೇಶ್ವರನು ಅತಿತ್ವರೆಯಿಂದ ಆತನ ಮನೋರಥವನ್ನು ಪರಿಪೂರ್ಣಮಾಡಿ ಪರಿಪೂರ್ಣಬ್ರಹ್ಮಾನುಭವ ಕೈಂಕರ್ಯಾದಿಗಳನ್ನೀಯುವನೆಂಬ ಭಾವವು.

ಈಗ ಇಷ್ಟುದೂರ ಹೇಳಿದುದರಭಿಪ್ರಾಯವು ಸಂಕ್ಷೇಪವಾಗಿ ಏನೆಂದರೆ :— "ಚೇತನನು ಮಾಡುವ ಕಿಂಚಿತ್ಸುಕೃತದಿಂದ ಸರ್ವೇಶ್ವರನು ಈತನನ್ನು ಜನನಕಾಲದಲ್ಲಿ ತನ್ನ ದಿವ್ಯಕಟಾಕ್ಷದಿಂದ ನೋಡುವನು. ಅದರಿಂದ ಇವನಿಗೆ ಸಾತ್ವಿಕ ಸಹವಾಸಾದಿಗಳು ದೊರೆತು ಇವನಿಗೆ ಸರ್ವೇಶ್ವರನಲ್ಲಿ ಸಾಧಾರಣಭಕ್ತಿಯುಂಟಾಗುತ್ತದೆ ಈ ಭಕ್ತಿಯು ಜ್ಞಾನ ಸಂಪಾದಿಸಬೇಕೆಂಬಿಚ್ಛೆಯನ್ನುಂಟುಮಾಡುತ್ತದೆ. ತನ್ಮೂಲಕ ತತ್ವತ್ರಯಜ್ಞಾನವು ಲಭಿಸುತ್ತದೆ. ಅನಂತರ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗರೂಪವಾದ ಉಪಾಯಾನುಷ್ಠಾನದಲ್ಲಿ ಅಭಿರುಚಿಯುಂಟಾಗುತ್ತದೆ.

ಭಕ್ತಿಯೋಗಾನರ್ಹಾಣಾಂ ಅಶಕ್ತಾನಾಂ ಚ ಪ್ರಪತ್ತಿರೇವೋಪಾಯಃ

ಇಬ್ಭಕ್ತಿಯೋಗಪ್, ತ್ರೈವರ್ಣಿಕರ್ಯೊಳಿನ್ದಾರ್ಕ್ಕುಮ್, ತ್ರೈವರ್ಣಿಕರ್ ತಙ್ಗಳಿಲ್ ಜ್ಞಾನತ್ತಿಲೆಯಾದಲ್ ಶಕ್ತಿಯಿಲೆಯಾದಲ್ ಇರಣ್ಡಿಲುಮಾದಲ್ ಕುರೈಯುಡೈಯಾರ್ಕ್ಕುಮ್, ಫಲವಿಳಮ್ಬಮ್ ಪೊರುಕ್ಕ

ತದನಂತರ ಪರಭಕ್ತಿರೂಪವಾದ ಸಾಕ್ಷಾತ್ಕಾರೇಚ್ಛಾ. ತನ್ಮೂಲಕವಾಗಿ ಸಾಕ್ಷಾತ್ಕಾರವು ಜನಿಸುತ್ತದೆ. ತದನಂತರ ಹಾಗೆ ಲಭಿಸಿದ ಸಾಕ್ಷಾತ್ಕಾರವು ತಪ್ಪದೆ, ನಿರಂತರಾನುಭವವಿರಬೇಕೆಂಬ ಶ್ರೀಪ್ರಾಪೇಕ್ಷಾರೂಪವಾದ ಪರಮಭಕ್ತಿಯುಂಟಾಗುತ್ತದೆ. ಇದರಿಂದ ಭಗವದನುಗ್ರಹ ಉಂಟಾಗಿ ನಿರಂತರ ಪರಿಪೂರ್ಣ ಬ್ರಹ್ಮಾನುಭವ ಕೈಙ್ಕರ್ಯಾದಿಗಳು ಲಭಿಸುತ್ತವೆ" ಎಂದು ಉಪಪಾದಿಸಲ್ಪಟ್ಟಿತು.

ಮುಂದೆ ಈ ಭಕ್ತಿಯೋಗಕ್ಕೆ ಅಧಿಕಾರಿಗಳು ತ್ರೈವರ್ಣಿಕರು ಎಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಎಂದು ತಿಳಿಸಿ, ಹಾಗೆ ಅಧಿಕಾರವಿಲ್ಲದಿರುವವರಿಗೂ ಅಂತಹ ಕಷ್ಟಸಾಧ್ಯವಾದ ಯೋಗಗಳಲ್ಲಿ ಶಕ್ತಿಯಿಲ್ಲದವರಿಗೂ, ಮೋಕ್ಷವನ್ನು ಹೊಂದಲು ಉಪಾಯವೇ ಇಲ್ಲವೇ ಎಂದರೆ, ಇನ್ನೊಂದು ಸುಲಭೋಪಾಯ ಉಂಟೆಂದೂ, ಅದು ಪ್ರಪತ್ತಿ ಎಂದು ಹೇಳಿಸಿಕೊಳ್ಳುತ್ತದೆಂದೂ ಉಪದೇಶಿಸುತ್ತಾರೆ.

ಭಕ್ತಿಯೋಗಕ್ಕೆ ಅನಧಿಕಾರಿಗಳಿಗೂ, ಅಶಕ್ತರಿಗೂ ಪ್ರಪತ್ತಿಯೇ ಉಪಾಯವು.

ಸದ್ವಾರಕಪ್ರಪತ್ತಿಯಾದ ಭಕ್ತಿಯೋಗಕ್ಕೂ, ಅದ್ವಾರಕಪ್ರಪತ್ತಿ ಎಂದರೆ ಸ್ವತಂತ್ರಪ್ರಪತ್ತಿಯಾದ ಪ್ರಪದನಕ್ಕೂ ಇರುವ ವೈಲಕ್ಷಣ್ಯವನ್ನು ಈ ಮುಂದಿನ ವಾಕ್ಯದಿಂದ ವ್ಯಕ್ತಪಡಿಸುತ್ತಾರೆ. ಇಬ್ಭಕ್ತಿಯೋಗಪ್ - ಈ ಕರ್ಮಯೋಗಾದಿ ಪರಂಪರೆಗಳಿಂದುಂಟಾಗುವ ಭಕ್ತಿಯೋಗ ರೂಪ ಉಪಾಯವು, (೧) **ತ್ರೈವರ್ಣಿಕರ್ಯೊಳಿನ್ದಾರ್ಕ್ಕುಮ್** - ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತ್ರೈವರ್ಣಿಕರು ; ಅವರುಗಳಲ್ಲದವರಿಗೂ ಎಂದರೆ ಶೂದ್ರಪಂಚಮರಿಗೂ, (೨) **ತ್ರೈವರ್ಣಿಕರ್ ತಙ್ಗಳಿಲ್** - ತ್ರೈವರ್ಣಿಕರಲ್ಲೇ, **ಜ್ಞಾನತ್ತಿಲೇಯಾದಲ್** - ಜ್ಞಾನದಲ್ಲೇಯಾಗಲಿ, **ಶಕ್ತಿಯಿಲೆಯಾದಲ್** - ಶಕ್ತಿಯಲ್ಲೇಯಾಗಲಿ, **ಇರಣ್ಡಿಲುಮಾದಲ್** - ಈ ಎರಡರಲ್ಲೇಯಾಗಲಿ, **ಕುರೈಯುಡೈಯಾರ್ಕ್ಕುಮ್** - ಕಮ್ಮಿಯಾಗಿರುವವರಿಗೂ, (೩) **ಫಲವಿಳಮ್ಬಮ್** - ಮೋಕ್ಷಪ್ರಾಪ್ತಿರೂಪಫಲದಲ್ಲಿ

ವಿಳೈಯಾದ ತೀವ್ರ ಸಂವೇಗಮುಡೈಯಾರ್ಕ್ಕುಮ್, ಯೋಗ್ಯಮಲ್ಲಾಮೈ ಯಾಲೆ, ತಜ್ಞಳಳವುಗಳೈತ್ತೆಳಿನ್ದು ಅದ್ವಾರಕಮಾಕ ಪ್ರಪತ್ತಿಯೈ ಮೋಕ್ಷೋಪಾಯಮಾಕಪ್ಪತ್ತುಮವರ್ಗಳುಕ್ಕು ಸರ್ವಫಲಸಾಧನಮಾನ ಪ್ರಪತ್ತಿ ತಾನೇ ಪರಭಕ್ತಿಸ್ಥಾನತ್ತಿಲೆ ಚೋದಿತೈಯಾಕೈಯಾಲೇ ಉಪಾಸಕನುಕ್ಕು ಪರಭಕ್ತಿಕ್ಕು ಮೇಲ್ವರುಮ್ ಅವಸ್ಥೈಗಳ್ಪೋಲೆ, ಇಸ್ಸ್ವತನ್ತ್ರಪ್ರಪತ್ತಿನಿಷ್ಠನುಡೈಯ ಕೋಲುತಲುಕ್ಕೀಡಾಗ ಇಪ್ಪ್ರಪತ್ತಿಕ್ಕು ಮೇಲ್ವರುಮ್ ಅನುಕೂಲಾವಸ್ಥೈಗಳ್ ಇದಿನ್ ಫಲಮಾಯಿರುಕ್ಕುಮ್.

ವಿಳಂಬವನ್ನು, **ಪೊಱುಕ್ಕವಿಳೈಯಾದ** - ಸಹಿಸಲು ಮನಸ್ಸಿಲ್ಲದ, **ತೀವ್ರಸಂವೇಗಮುಡೈಯಾರ್ಕ್ಕುಮ್** - ಫಲಾನುಭವದಲ್ಲಿ ಅತಿ ತ್ವರೆಯುಳ್ಳವವರಿಗೂ ಕೂಡ, **ಯೋಗ್ಯಮಲ್ಲಾಮೈಯಾಲೆ** - ಯೋಗ್ಯವಾದುದಲ್ಲದುದರಿಂದ, (ಯಾವದು ಯೋಗ್ಯವಲ್ಲವೆಂದರೆ ಭಕ್ತಿಯೋಗವೆಂಬ ಕರ್ತೃಪದವು ಈ ವಾಕ್ಯಾರಂಭದಲ್ಲಿರುತ್ತದೆ.) **ತಜ್ಞಳಳವುಗಳೈ ತೆಳಿನ್ದು** - ತಮ್ಮತಮ್ಮ ಸ್ಥಿತಿಯಲ್ಲಿ ತೋರಿಬರುವ ಯೋಗ್ಯತೆಗಳನ್ನು ತಿಳಿದುಕೊಂಡು, **ಅದ್ವಾರಕಮಾಕ ಪ್ರಪತ್ತಿಯೈ**-ಪ್ರಪದನರೂಪ ಉಪಾಯವನ್ನು, **ಮೋಕ್ಷೋಪಾಯಮಾಕ** - ಮೋಕ್ಷಸಾಧನವಾಗಿ, **ಪತ್ತುಮವರ್ಗಳುಕ್ಕು** - ಅವಲಂಬಿಸುವವರಿಗೆ, ಅನುಷ್ಠಿಸುವವರಿಗೆ, **ಸರ್ವಫಲಸಾಧನಮಾನ** - ಸಮಸ್ತಫಲವನ್ನೂ ಸಾಧಿಸಿಕೊಡುವ, **ಪ್ರಪತ್ತಿತಾನೇ** - ಪ್ರಪತ್ತಿಯೇ, **ಪರಭಕ್ತಿಯ ಸ್ಥಾನತ್ತಿಲೆ**-ಪರಭಕ್ತಿಯ ಸ್ಥಾನದಲ್ಲಿ ಎಂದರೆ ಪರಭಕ್ತಿಗೆ ಬದಲಾಗಿ, **ಚೋದಿತೆಯಾಕೈಯಾಲೆ** - ಶಾಸ್ತ್ರದಲ್ಲಿ ವಿಧಿಸಿರುವದರಿಂದ, ಉಪಾಸಕನಿಗೆ, **ಪರಭಕ್ತಿಮೇಲ್ವರುಮ್** - ಭಕ್ತಿಯೋಗದಲ್ಲಿದ್ದ ಮೇಲುಂಟಾಗುವ, **ಅವಸ್ಥೈಗಳ್ಪೋಲೆ** - ಅವಸ್ಥೆಗಳ ಹಾಗೆ, ಆ ಅವಸ್ಥೆಗಳು ಪರಜ್ಞಾನ, ಪರಭಕ್ತಿಗಳೆಂದು ತಿಳಿಯತಕ್ಕದ್ದು, **ಇಸ್ಸ್ವತಂತ್ರಪ್ರಪತ್ತಿನಿಷ್ಠನುಡೈಯ** - ಈ ಸ್ವತಂತ್ರಪ್ರಪತ್ತಿನಿಷ್ಠನ, **ಕೋಲುತಲಕ್ಕೀಡಾಗ** - ಸಙ್ಕಲ್ಪಕ್ಕನುಗುಣವಾಗಿ, **ಇಪ್ರಪತ್ತಿಕ್ಕು ಮೇಲ್ವರುಮ್** - ಈ ಪ್ರಪದನದಿಂದುಂಟಾಗುವ, **ಅನುಕೂಲಾವಸ್ಥೈಗಳ್** - ಭಕ್ತಿಕೈಙ್ಕರ್ಯಾದಿ ಅವಸ್ಥೆಗಳು, **ಅದಿನ್ ಫಲಮಾಯಿರುಕ್ಕುಮ್** - ಆ ಪ್ರಪತ್ತಿಯ ಫಲವಾಗಿರುತ್ತವೆ.

ಭಕ್ತಿಯೋಗವಾದರೋ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ಅನುಷ್ಠಿಸತಕ್ಕದ್ದೆಂಬ ಮತ್ತು ಪ್ರಪದನಾನುಷ್ಠಾನವನ್ನು ಮಾತ್ರ ಪಂಚಮರು ಮೊದಲುಗೊಂಡು ಸರ್ವರೂ ಅನುಷ್ಠಿಸಬಹುದೆಂಬ ಭಾವವು, "**ಭಕ್ತಿಯೋಗಮ್ ತ್ರೈವರ್ಣಿಕರ್ಯೊಳಿನ್ದಾರ್ಕ್ಕು ಯೋಗ್ಯಮಲ್ಲಾಮೈಯಾಲೆ**" ಎಂಬುವದರಿಂದ ತೋರಿಬರು

ತ್ರದೆ. ಭಕ್ತಿಯೋಗವು ಯಾರಿಗೆ ಉಚಿತವಲ್ಲವೆಂದರೆ :—

(೧) ಸ್ತ್ರೀಯರು
(೨) ಜ್ಞಾನಶೂನ್ಯರಾದ ತ್ರೈವರ್ಣಿಕರು
(೩) ಅಶಕ್ತರಾದ ತ್ರೈವರ್ಣಿಕರು
(೪) ಜ್ಞಾನಶಕ್ತಿಗಳೆರಡೂ ಇಲ್ಲದ ತ್ರೈವರ್ಣಿಕರು
(೫) ಮೋಕ್ಷಪ್ರಾಪ್ತಿಯಲ್ಲಿ ವಿಳಂಬ ಸಹಿಸದ ಸಮಸ್ತರಾದ ಆರ್ತರು
(೬) ಶೂದ್ರಾದಿ ಪಂಚಮರು

ಇವರಿಗೆಲ್ಲಾ ಉಪಾಯವು ಯಾವುದೆಂದರೆ, ಪ್ರಪದನವು (ಅದ್ವಾರಕ ಪ್ರಪತ್ತಿಯು). ಈ ಭಕ್ತಿಯೋಗಸ್ಥಾನದಲ್ಲೇ ಈ ಪ್ರಪದನವು ಉಪಾಯವೆಂದು ಶಾಸ್ತ್ರಗಳಲ್ಲಿ ವಿಕಲ್ಪಿಸಿ ವಿಧಿಸಿರುವದರಿಂದ, ಅದೂ ಉಪಾಯವಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಶಾಸ್ತ್ರದಲ್ಲಿ ಎಲ್ಲಿ ವಿಧಿಸಿದೆ ಎಂದರೆ ಮುಂದಿನ ವಾಕ್ಯದಿಂದ ಶಾರೀರಕ ಸೂತ್ರದಲ್ಲಿ ಹೇಳಿರುತ್ತದೆಂದು ಉಪದೇಶಿಸುತ್ತಾರೆ. ಇದಲ್ಲದೆ ಅಹಿರ್ಬುಧ್ನ್ಯ ಸಂಹಿತೆಯಲ್ಲಿ, (೩೭-೨೫)

"ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾನ್ತರೈಃ ।
ಮುಮುಕ್ಷುಣಾ ಯತ್ ಸಾಂಖ್ಯೇನ ಯೋಗೇನ ನ ಚ ಭಕ್ತಿತಃ ।
ಪ್ರಾಪ್ಯತೇ ಪರಮಂ ಧಾಮ ಯತೋ ನಾವರ್ತತೇ ಯತಿಃ ।
ತೇನತೇನಾಪ್ಯತೇ ತತ್ತನ್ನ್ಯಾಸೇ ನೈವ ಮಹಾಮುನೇ ॥"

ಈ ಉಪಾಯವು ಅತ್ಯಂತ ಶ್ಲಾಘ್ಯವಾದುದಾಯವೆಂದು ಹೊಗಳಲ್ಪಟ್ಟಿರುತ್ತದೆ. ಕಾಮ್ಯಫಲಾಪೇಕ್ಷೆಯುಳ್ಳ ಯಾವನಿಂದ ಯಾವಯಾವ ಬೇರೆ ಸಾಧನಗಳಿಂದಲೂ ಕೂಡ ಹೊಂದಲಸಾಧ್ಯವಾದುದೆಲ್ಲವೂ, ಮತ್ತು ಯೋಗನಿಷ್ಠನಾದ ಯತಿಯು ಯಾವ ಮೋಕ್ಷದೆಶೆಯಿಂದ ಹಿಂತಿರುಗುವದಿಲ್ಲವೋ ಅಂತಹ ಪರಮಪದವೂ, ಭಕ್ತಿಮೂಲಕವಾಗಿ ಯಾವುದು ಹೊಂದಲ್ಪಡುವುದಿಲ್ಲವೋ ಅದೂ, ಮೋಕ್ಷಾರ್ಥಿಯಿಂದ ಯಾವ ಫಲವು ಕರ್ಮಯೋಗ ಜ್ಞಾನಯೋಗಾದಿಗಳಿಂದ ಹೊಂದುವದಕ್ಕಾಗುವದಿಲ್ಲವೋ ಅದೂ, ಇವೆಲ್ಲವೂ, ಆಯಾ ಮನುಷ್ಯರಿಂದ ಆಯಾ ಫಲಗಳು ಓ ಮಹರ್ಷಿಯೇ ನ್ಯಾಸವೆಂದರೆ ಪ್ರಪತ್ತಿಯ ಮೂಲಕ ಹೊಂದಲ್ಪಡುವದು ಎಂಬ ಭಾವವು. ಹಾಗೆಯೇ ಇನ್ನೊಂದು ಪ್ರಮಾಣವೂ ಉಂಟು:—

ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾವಾ ಮಹಾಮತೇ ।
ಪ್ರಾಪ್ಯೋಽಹಂ ನಾನ್ಯಥಾ ಪ್ರಾಪ್ಯೋ ಮಮ ಕೈಙ್ಕರ್ಯಲಿಪ್ಸುಭಿಃ ॥

"ಭಕ್ತಿಯೋಗಫಲವಾದ ಪರಮಭಕ್ತಿಯಿಂದಲಾಗಲಿ ಅಥವಾ ಪ್ರಪತ್ತಿಮೂಲಕವಾಗಲಿ, ಮಹಾವಿವೇಕವುಳ್ಳ ಜ್ಞಾನಿಯೇ, ನಾನು ಪ್ರಾಪ್ಯನೆಂದು ಸರ್ವೇ

ಶ್ವರನೇ ವಿಕಲ್ಪಿಸಿ ಹೇಳಿರುತ್ತಾನೆ. "ನನ್ನಲ್ಲಿ ಪ್ರಪತ್ತಿ ಇಲ್ಲದವರಿಗೆ ಈ ಎರಡು ಮಾರ್ಗಗಳು ಬಿನಾ ಬೇರೆ ಮಾರ್ಗ ಇಲ್ಲ" ಎಂದು ಹೇಳಲ್ಪಟ್ಟಿರುತ್ತದೆ. ಇದೂ ಅಲ್ಲದೆ ಶ್ರೀಮದ್ರಾಮಾಯಣದಲ್ಲಿ ಉಪಾಯಾಂತರ ನಿಗ್ರಹವೂ, ನಮ್ಮಾಳ್ವಾರರ ತಿರುವಾಯ್‍ಮೊಳಿಯಲ್ಲಿ "ಅಗಲಗಿಲ್ಲೇನ್" ಇತ್ಯಾದಿ ಪಾಶುರಗಳಲ್ಲೆಲ್ಲಾ ತೋರಿಬರುವದೂ, ಮೂರು ರಹಸ್ಯಗಳಿಂದಲೂ ವ್ಯಕ್ತಪಡುವದೂ, ಶರಣಾಗತಿರೂಪ ಉಪಾಯವೇ.

ಅದರೆ ಸ್ತ್ರೀಯರಿಗೆ ಉಪಾಸನೆಯಲ್ಲಿ ಅಧಿಕಾರ ಉಂಟೋ ಇಲ್ಲವೋ ಎಂಬ ವಿಷಯವು ಸ್ವಲ್ಪ ವಿವಾದಾಸ್ಪದವಾಗಿರುತ್ತದೆ. ಶ್ರುತಿಯಲ್ಲಿ ಗಾರ್ಗಿ ಮುಂತಾದವರು ಭಕ್ತಿಯೋಗನಿಷ್ಠರಾಗಿರುವ ಹಾಗೆ ತೋರಿಬರುತ್ತದೆ. ಕಪಿಲರು ತಮ್ಮ ತಾಯಿಯಾದ ದೇವಹೂತಿಗೆ ಭಕ್ತಿಯೋಗವನ್ನು ಉಪದೇಶಿಸುತ್ತಾರೆ. ಆದರೆ ಸ್ತ್ರೀಗೆ ಈ ಉಪಾಸನೆಯು ಅನಾವಶ್ಯಕವಾದುದೆಂಬುವದೂ ಶಾಸ್ತ್ರಸಿದ್ಧವಾದುದೇ. ಆದುದರಿಂದಲೇ "ಸ್ತ್ರೀಸಾಧುಃ" ಎಂಬ ವ್ಯಾಸೋಕ್ತಿಯ ಪ್ರಕಾರ ಪುರುಷನಿಗಿಂತಲೂ ಸ್ತ್ರೀಯು ಸುಲಭೋಪಾಯವುಳ್ಳವಳು. ಆಕೆಯು ಗೃಹಿಣಿಯಾಗಿ, ಗರ್ಭ, ಪ್ರಸವ, ಮಕ್ಕಳ ಪೋಷಣೆ, ಗೃಹಕೃತ್ಯವೇ ಮೊದಲಾದ ಕ್ಲೇಶಗಳನ್ನುಳ್ಳವಳಾಗಿರುವದರಿಂದ ಸಂಧ್ಯಾವಂದನಾದಿ ನಿತ್ಯಕರ್ಮಾನುಷ್ಠಾನಗಳಿಗೂ, ಉಪಾಸನೆ ಮೊದಲಾದವುಗಳಿಗೂ ಅವಕಾಶವಿಲ್ಲದುದರಿಂದ, ಭರ್ತೃಶುಶ್ರೂಷೆ ಮತ್ತು ಪ್ರಪದನಾನುಷ್ಠಾನಗಳಿಂದಲೇ ಮೋಕ್ಷವೆಂಬುವದು ಶಾಸ್ತ್ರಕಾರರ ಅಭಿಪ್ರಾಯವು.

ಶ್ರೀ ವಾಲ್ಮೀಕಿ ಮಹರ್ಷಿಯೂ ಹಾಗೆಯೇ ಉಪದೇಶಿಸಿರುತ್ತಾರೆ:—

ಭರ್ತೃಶುಶ್ರೂಷಯಾ ನಾರೀ ಲಭತೇ ಸ್ವರ್ಗಮುತ್ತಮಂ ।
ಅಪಿ ಯಾ ನಿರ್ನಮಸ್ಕಾರಾ ನಿವೃತ್ತಾ ದೇವಪೂಜನಾತ್ ॥

ದೇವತಾರ್ಚನೆ, ಭಗವನ್ನಮಸ್ಕಾರ, ಸ್ತೋತ್ರ ಮೊದಲಾದವುಗಳಿಲ್ಲದಿದ್ದರೂ ಚಿಂತೆಯಿಲ್ಲವು, ಪತಿಶುಶ್ರೂಷೆ ಮಾತ್ರವಿದ್ದರೆ ಸಾಕೆಂದು ಹೇಳಲ್ಪಟ್ಟಿದೆ. ಇಲ್ಲಿ ಉತ್ತಮ ಸ್ವರ್ಗವೆಂದು ಹೇಳಿರುವದು ಮೋಕ್ಷವು. ಹೀಗೆ ಅನ್ವಯರೀತಿಯಲ್ಲಿ ಹೇಳಿ, ವ್ಯತಿರೇಕದಿಂದಲೂ ಸಮರ್ಥನೆ ಮಾಡುತ್ತಾರೆ:—

ವ್ರತೋಪವಾಸನಿರತಾ ಯಾ ನಾರೀ ಪರಮೋತ್ತಮಾ ।
ಭರ್ತಾರಂ ನಾನುವರ್ತೇತ ಸಾ ತು ಪಾಪಗತಿರ್ಭವೇತ್ ॥

ವ್ರತ, ಉಪವಾಸ ಮುಂತಾದವುಗಳಲ್ಲಿ ಸ್ತ್ರೀಯು ನಿರತಳಾಗಿ ಹೊರಗೆ ನೋಡುವವರಿಗೆ ಪರಮೋತ್ತಮಳಾಗಿ ಕಂಡರೂ, ಗಂಡನನ್ನು ಅನುವರ್ತಿಸಿ ನಡೆಯದಿದ್ದರೆ, ಆಕೆಗೆ ಪಾಪಗತಿಯೇ ವಿನಾ ಸದ್ಗತಿಯಿಲ್ಲವೆಂದು ಹೇಳುತ್ತಾರೆ. ಆದುದರಿಂದ ಉಪಾಸನಾದಿಗಳು ಸ್ತ್ರೀಗೆ ಬೇಕಿಲ್ಲವು. ಗಂಡನೊಂದಿಗೆ ಅನುಷ್ಠಿಸುವ ಉಪಾಯದಿಂದಲೇ ಮೋಕ್ಷವು.

ಹಾಗೆಯೇ ಶೂದ್ರಾದಿಗಳಿಗೂ ಉಪಾಸನವು ಸೇಯಲ್ಲವು. ಮಹಾಭಾಗವತೋತ್ತಮನನ್ನು ಗುರುವಾಗಿ ಆಶ್ರಯಿಸಿ ಆತನಿಗೆಸಗುವ ಶುಶ್ರೂಷೆಯಿಂದ ಪ್ರೀತನಾದ ಗುರುವು ಪರಮಕೃಪೆಯಿಂದ ಈತನಿಗೆ ಚಿಂತನವನ್ನು ಮಾಡಿ ಈತನಿಗಾಗಿ ಮಾಡಿದ ಪ್ರಪದನಮೂಲಕವಾಗಿ ಈತನಿಗೆ ಮೋಕ್ಷವು. ಇದು ಬಹು ಸುಲಭೋಪಾಯವೆಂಬಭಿಪ್ರಾಯದಿಂದ ಶ್ರೀ ವ್ಯಾಸಮಹರ್ಷಿಯು ಶೂದ್ರಸ್ಸಾಧುಃ ಎಂದು ಅಪ್ಪಣೆ ಕೊಡಿಸಿದರು.

ಪೆರಭಕ್ತಿಕ್ಕು ನೇರ್ವರುಮ್ ಅವಸ್ಥೈಗಳ್ ಪೋಲೆ - ಪರಭಕ್ತಿಯಿಂದುಂಟಾಗುವ ಪರಜ್ಞಾನ ಪರಮಭಕ್ತಿಗಳಹಾಗೆ, ಈ ಪ್ರಪತ್ತಿಯಿಂದಲೂ ಉಂಟಾಗುವ ಅವಸ್ಥೆಗಳು ಈಶ್ವರನಲ್ಲಿ ಭಕ್ತಿಯೂ ಕೈಂಕರ್ಯವೂ, ಹಾಗೆಯೇ ತದೀಯರಲ್ಲೂ ಭಕ್ತಿಕೈಂಕರ್ಯಗಳೂ ಎಂದು ತಿಳಿಯತಕ್ಕದ್ದು. ಫಲವಿಳಮ್ಬಂ ಪೊರಕ್ಕು ಶಕ್ತಿಯಿಲ್ಲಾದವರ್ ಎಂದು ಹೇಳಿರುವದರಭಿಪ್ರಾಯವೇನೆಂದರೆ ಭಕ್ತಿಯೋಗದಲ್ಲಿ ಪ್ರಾರಬ್ಧಕರ್ಮಾವಸಾನದಲ್ಲಿ ಮೋಕ್ಷವಾದ್ದರಿಂದ ವಿಳಂಬದಿಂದ ಮೋಕ್ಷಪ್ರಾಪ್ತಿಯುಂಟಾಗಬಹುದು. ಪ್ರಪತ್ತಿಯಲ್ಲಾದರೋ ದೃಪ್ತನಿಗೆ ದೇಹಾವಸಾನದಲ್ಲೇ ಮೋಕ್ಷಪ್ರಾಪ್ತಿಯುಂಟಾಗುತ್ತದೆ. ಒಂದು ಕ್ಷಣಕಾಲ ವಿಳಂಬನನ್ನು ಸಹಿಸದೇ ಇರುವ ಆರ್ತನಿಗೆ ಒಡನೆ ಮೋಕ್ಷ ಉಂಟಾಗುವದೆಂಬ ತಾತ್ಪರ್ಯವು.

ಶಕ್ತಿಕಳವುಗಳ್ಕ್ಕೆ ತೆಳಿನ್ದು ಎಂದು ಹೇಳಿರುವವರಭಿಪ್ರಾಯವು, ಮುಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಹೇಳಿರುವ ಹಾಗೆ ಶಕ್ತನಿಗೆ ಉಪಾಸನವೂ, ಅಶಕ್ತನಿಗೆ ಶರಣಾಗತಿಯೂ ಉಪಾಯವಾದುದರಿಂದ ತಾನು ಭಕ್ತಿಯೋಗಕ್ಕೆ ಶಕ್ತನೋ ಅಶಕ್ತನೋ ಎಂಬುವದನ್ನು ತಾನೇ ತಿಳಿದು, ಅದಕ್ಕನುಗುಣವಾಗಿ ವರ್ತಿಸತಕ್ಕದ್ದೆಂಬ ಭಾವವು.

ಹೀಗೆ ಸರ್ವೇಶ್ವರನನ್ನು ಹೊಂದುವ ಉಪಾಯಗಳು ಎರಡೆಂದೂ, ಅದರಲ್ಲಿ ಭಕ್ತಿಯೋಗವು ಸ್ವಲ್ಪ ಗುರುತರವಾದ ಉಪಾಯವೆಂದೂ ಅದು ಸ್ವಲ್ಪಕಾಲ ವಿಳಂಬದಿಂದ ಫಲಪ್ರಾಪ್ತಿಯಾಗುವದೆಂದೂ ಹೇಳಲ್ಪಟ್ಟಿತು; ಪ್ರಪತ್ತಿಯು ಸುಲಭೋಪಾಯವೆಂದೂ, ಕ್ಷಿಪ್ರಫಲದಾಯಕವೆಂದೂ ಉಪದೇಶಿಸಲ್ಪಟ್ಟಿತು. ಇವೆರಡಕ್ಕೂ ಫಲದಲ್ಲೇನೂ ವ್ಯತ್ಯಾಸವಿಲ್ಲವೆಂದು ಮುಂದೆ ತಿಳಿಸುತ್ತಾರೆ.

ಭಕ್ತಿಪ್ರಪತ್ತಿಗಳಿಗೆ ಸಮಾನ ಫಲಗಳು

ಇನ್ನು ಭಕ್ತಿಪ್ರಪತ್ತಿ ಶಬ್ದಗಳೇನು ಪರ್ಯಾಯಪದಗಳೇ ಅಥವಾ ಭಿನ್ನಪದವೇ, ಹಾಗೆ ಭಿನ್ನಪದವುಗಳಾದರೆ ಮತ್ತು ಈ ಉಪಾಯಗಳು ಸಮಾನಫಲಗಳುಳ್ಳವುಗಳಾದಪಕ್ಷದಲ್ಲಿ, ಇವುಗಳಲ್ಲಿ ಯಾವುದಾದರೂ ಒಂದು ಮೋಕ್ಷೋಪಾಯ

ಭಕ್ತಿಪ್ರಪತ್ತ್ಯೋಸ್ತುಲ್ಯಫಲತ್ವಂ

ಇಪ್ಪಡಿ ಪ್ರಪತ್ತಿಕ್ಕುಂ, ಭಕ್ತಿಕ್ಕುಂ ಅಧಿಕಾರಿವಿಶೇಷತ್ತೈಪ್ಪತ್ತಿ ತುಲ್ಯಫಲತ್ವಸಾಮಾನ್ಯತ್ತಾಲೇ ವಿಕಲ್ಪಮಾಗಕ್ಕಡವದು. ಇವತ್ತುಕ್ಕು "ನಾನಾಶಬ್ದಾದಿಭೇದಾತ್" ಎನ್ಗಿರ ಅಧಿಕರಣತ್ತಿಲೆ ಭೇದಮುಂ ಸಿದ್ಧಮ್.

ಮಾಗಬಹುದೆಂದು ವಿಕಲ್ಪಿಸಿ ಶಾಸ್ತ್ರದಲ್ಲಿ ಎಲ್ಲಿಯಾದರೂ ನಿರ್ಣಯಿಸಲ್ಪಟ್ಟಿದೆಯೇ ಎಂದರೆ, ಸೂತ್ರಕಾರರು "ನಾನಾಶಬ್ದಾದಿಭೇದಾತ್" ಎಂಬ ಸೂತ್ರದಲ್ಲಿ ಇವುಗಳಿಗೆ ಭೇದ ಉಂಟೆಂದೂ, "ವಿಕಲ್ಪೋಽವಿಶಿಷ್ಟಫಲತ್ವಾತ್" ಎಂಬ ಮುಂದಿನ ಸೂತ್ರದಲ್ಲಿ ವಿಕಲ್ಪವೂ ಹೇಳಲ್ಪಟ್ಟಿದೆ ಎಂದೂ ತಿಳಿಸುತ್ತಾರೆ :—

ಇಪ್ಪಡಿ - ಈ ಮೇಲೆ ಹೇಳಿದ ರೀತಿಯಲ್ಲಿ ಭಕ್ತಿಸ್ಥಾನದಲ್ಲಿ ಹೇಳಲ್ಪಟ್ಟಿರುವ ಪ್ರಪತ್ತಿಗೂ ಮತ್ತು, ಭಕ್ತಿಕ್ಕುಂ - ಭಕ್ತಿಯೋಗಕ್ಕೂ, ಅಧಿಕಾರಿ ವಿಶೇಷತ್ತೈಪ್ಪತ್ತಿ - ಅಶಕ್ತನಿಗೆ ಪ್ರಪತ್ತಿ ಎಂದೂ, ಶಕ್ತನಿಗೆ ಭಕ್ತಿಯೋಗವೆಂದೂ ವಿಶೇಷಿಸಿ ಹೇಳಿರುವವನ್ನು ಕುರಿತು, ತುಲ್ಯಫಲತ್ವಸಾಮಾನ್ಯತ್ತಾಲೆ - ಸಮಾನಫಲವಾದ ಮೋಕ್ಷಪ್ರಾಪ್ತಿಯುಂಟಾಗುವುದರಿಂದ, ವಿಕಲ್ಪಮಾಗಕ್ಕಡವದು - ವಿಕಲ್ಪವಾಗಿ ಪರಿಣಮಿಸುತ್ತದೆ ಎಂದರೆ ಅಶಕ್ತನಾದವನು ಪ್ರಪತ್ತಿಯನ್ನೂ ಶಕ್ತನಾದವನು ಭಕ್ತಿಯೋಗವನ್ನೂ ಹೀಗೆ ಯಾವುದಾದರೂ ಒಂದನ್ನು ಅವಲಂಬಿಸಬಹುದು; ಎರಡಕ್ಕೂ ಫಲವೇನೋ ಒಂದೇ ಎಂಬ ಭಾವವು. ಇವತ್ತುಕ್ಕು = ಈ ಪ್ರಪತ್ತಿಭಕ್ತಿಯೋಗಗಳಿಗೆ, "ನಾನಾಶಬ್ದಾದಿಭೇದಾತ್" (ಶಾ. ಸೂ. ೩.೩.೫೬) ಎನ್ಗಿರ ಅಧಿಕರಣತ್ತಿಲೇ - ಎನ್ನುವ ಅಧಿಕರಣದಲ್ಲಿ, ಭೇದಮುಂ ಸಿದ್ಧಂ - ಭಿನ್ನವಾದ ಬ್ರಹ್ಮವಿದ್ಯೆಗಳೆಂಬುವದು ಸ್ಥಾಪಿಸಲ್ಪಟ್ಟಿರುತ್ತದೆ. ಈ ಸೂತ್ರಾಭಿಪ್ರಾಯವೇನೆಂದರೆ :—ಸದ್ವಿದ್ಯಾ ದಹರವಿದ್ಯಾ ಭೂಮವಿದ್ಯಾ ನ್ಯಾಸವಿದ್ಯಾ ಮೊದಲಾದ ಬ್ರಹ್ಮವಿದ್ಯೆಗಳೆಲ್ಲಾ ಒಂದೇಯಲ್ಲವು, ನಾನಾ - ಬೇರೆಬೇರೆಯಾದವು, ಏಕೆಂದರೆ ಶಬ್ದಾದಿಭೇದಾತ್ - ಯಜೇತ, ಜುಹುಯಾತ್, ದದ್ಯಾತ್ ಇವೇ ಮೊದಲಾದ ಶಬ್ದಭೇದಗಳಿಂದ ಯಾಗ, ಹೋಮ, ದಾನಾದಿಗಳು ಹೇಗೆ ಬೇರೆಬೇರೆಯಾದವೋ, ಹಾಗೆಯೇ ಇಲ್ಲಿಯೂ ಕುರ್ವೀತ, ಉಪಾಸೀತ, ಶರಣಂ ವ್ರಜ, ವಿಜಿಜ್ಞಾಸಿತವ್ಯಃ, ಅನ್ವೇಷ್ಟವ್ಯಃ ಇತ್ಯಾದಿ ಶಬ್ದಗಳ ಮೂಲಕ ಬೇರೆ ಬೇರೆಯಾದವು ಎಂಬಭಿಪ್ರಾಯವು ಈ ಅಭಿಪ್ರಾಯವನ್ನು ಚೆನ್ನಾಗಿ ಶ್ರೀ ನಿಗಮಾಂತದೇಶಿಕರವರೇ ನ್ಯಾಸವಿಂಶತಿಯಲ್ಲಿ "ನಾನಾಶಬ್ದಾದಿಭೇದಾತ್ ಶ್ರುತಿಷು ಕ

"ವಿಕಲ್ಪೋ(ಽ)ವಿಶಿಷ್ಟಫಲತ್ವಾತ್" ಎಂಬ ಸೂತ್ರದ ಅಧಿಕರಣದಲ್ಲಿ ವಿಕಲ್ಪ ಮುವಶ್ ಸಿದ್ಧವಶ್.

[illegible]

"ಯತಾ ಸೂತ್ರಕಾರೇಣ ಸನ್ನ್ಯಾಸ್ಯ ಸೋಽಪಾಸೇ ವಿಭಕ್ತೆ" ಎಂಬ ಶ್ಲೋಕದಲ್ಲಿ ಉಪಾಸನಾರೂಪವಿದ್ಯೆಗಳೂ ನ್ಯಾಸವಿದ್ಯೆಯೂ ಸಹ ಬೇರೆಬೇರೆ ವಿದ್ಯೆಗಳೆಂದು ಬಹು ಚನ್ನಾಗಿ ಉಪಪಾದಿಸಿರುತ್ತಾರೆ. ಎರಡೂ ಬೇರೆ ಎಂಬುವದಕ್ಕೆ ನಾಲ್ಕು ಕಾರಣಗಳು ಹೇಳಲ್ಪಟ್ಟಿವೆ :—

(೧) ಅಙ್ಗಭೇದವಿರುವದರಿಂದ. ಒಂದಕ್ಕೆ ಉಪಾಸಿತ್ರಾದಿ ಮೊದಲಾದ [illegible] ಆಙ್ಗ; ಇನ್ನೊಂದಕ್ಕೆ ಶರಣಂವ್ರಜ ಎಂಬ ಆಜ್ಞೆ.

(೨) ಅಕಿಂಚನ ಧರ್ಮವನ್ನು ಸ್ವೀಕರಿಸುವನೆಂಬುವದೂ ವೇದ್ಯಾಕಾರವು ನ್ಯಾಸವಿದ್ಯೆಗೆ ; ಉಪಾಸನೆಗೆ ಅಪಹತಪಾಪ್ಮತ್ವಾದಿಗಳು ವೇದ್ಯಾಕಾರಗಳು.

(೩) ಪ್ರಾರಬ್ಧಕರ್ಮದ ಸಮಾಪ್ತಿಪೂರ್ವಕವಾದ ಪರಬ್ರಹ್ಮಪ್ರಾಪ್ತಿಯು ನ್ಯಾಸವಿದ್ಯೆಗೆ ಫಲವು. ಪ್ರಾರಬ್ಧಕರ್ಮ ಕಳೆದನಂತರ ಪರಬ್ರಹ್ಮಪ್ರಾಪ್ತಿಯು ಉಪಾಸನೆಗೆ ಫಲವು.

(೪) ಅಧಿಕಾರಿಗಳು ಭಿನ್ನರು. ಇದು ಹಿಂದೆಯೇ ವಿಶದವಾಗಿ ಸೂಚಿಸಲ್ಪಟ್ಟಿರುತ್ತದೆ.

ಆದುದರಿಂದ ೩೨ ಉಪಾಸನಾರೂಪ ಬ್ರಹ್ಮವಿದ್ಯೆಗಳೂ ಬೇರೆಬೇರೆಯಾದವೇ. ಅದರಹಾಗೆಯೇ ನ್ಯಾಸವಿದ್ಯೆಯೂ ಭಿನ್ನವಾದುದು. ಆ ಮೂವತ್ತೆರಡು ವಿದ್ಯೆಗಳೆಲ್ಲಾ ಭಕ್ತಿಯೋಗವೆಂದೂ ನ್ಯಾಸವಿದ್ಯೆ ಎಂದರೆ ಪ್ರಪತ್ತಿಯೆಂದೂ ಹೇಳಲ್ಪಡುವದು. ಆ ಕಾರಣದಿಂದ ಇವೆರಡೂ ಸಮಾನಫಲವನ್ನು ಕೊಡುವವುಗಳಾಗಿದ್ದರೂ ಭಿನ್ನವಾದ ಉಪಾಯಗಳು.

ಹಾಗಾದರೆ ಈ ಭಿನ್ನವಾದ ಉಪಾಯಗಳಲ್ಲಿ ಯಾವುದಾದರೂ ಆಗಬಹುದೆಂಬ ವಿಕಲ್ಪವು ಎಲ್ಲಿಯಾದರೂ ಶಾಸ್ತ್ರದಲ್ಲಿ ಹೇಳಿದೆಯೇ ಎಂದರೆ ಸೂತ್ರಕಾರರು ವಿಕಲ್ಪಾಧಿಕರಣದಲ್ಲಿ ಹೇಳಿದ್ದಾರೆಂದು ಪ್ರಮಾಣವನ್ನು ತೋರಿಸುತ್ತಾರೆ.

ಈಗ ಮೇಲೆಹೇಳಿದ ಸದ್ವಿದ್ಯಾದಿ ೩೨ ವಿಧ ಉಪಾಸನೆಗಳೆಲ್ಲವನ್ನೂ ಅವಲಂಬಿಸತಕ್ಕದ್ದೇ ಅಥವಾ ಯಾವುದಾದರೂ ಒಂದೇ ಸಾಕೆ ಎಂಬ ಸಂದೇಹದಲ್ಲಿ ಸೂತ್ರಕಾರರು ಅವುಗಳಲ್ಲೊಂದರಿಂದಲೇ ಮೋಕ್ಷಪ್ರಾಪ್ತಿಯುಂಟೆಂದು ಹೇಳುತ್ತಾರೆ. ಎಲ್ಲಾ ವಿದ್ಯೆಗಳೂ ಬೇಕಾಗಿಲ್ಲವು. "ವಿಕಲ್ಪಃ – ಯಾವುದಾ

ಉಪಾಸನವಿದ್ಯಾ ಪ್ರಕಾರಾ ಇವ ನ್ಯಾಸ ವಿದ್ಯಾ ಪ್ರಕಾರಾಃ

ಉಪಾಸನತ್ತಿಲ್ ವಿಶೇಷಣಙ್ಗಳ್ ಪೋಲೆ, ಶಾಖಾಭೇದಙ್ಗಳಿಲುಂ ಭಗವಚ್ಛಾಸ್ತ್ರಸಂಹಿತಾಭೇದಙ್ಗಳಿಲುಮ್ ಶೊಲ್ಲು(ಮ್) ಗಿರ ನ್ಯಾಸವಿದ್ಯೈ

ಯುಮ್ ಒಂದೇ ಮೋಕ್ಷಸಾಧನವಾಗುತ್ತದೆ. ಏಕೆಂದರೆ, **ಅವಿಶಿಷ್ಟ ಫಲತ್ವಾತ್** - ಹಾಗೆ ಒಂದನ್ನೇ ಅನುಷ್ಠಿಸುವುದರಿಂದ ಫಲದಲ್ಲೇನೂ ವಿಶೇಷವಾಗಲಿ ಎಂದರೆ ವ್ಯತ್ಯಾಸವಾಗಲಿ ತೋರಿಬಾರದಿರುವುದರಿಂದ ಎಲ್ಲಾ ವಿದ್ಯೆಗಳನ್ನೂ ಅವಲಂಬಿಸಬೇಕೆಂಬ ಆವಶ್ಯಕತೆಯಿಲ್ಲವು ಎಂಬರ್ಥವು" ಎಂಬೀ ಅಧಿಕರಣದಲ್ಲಿ ಮುಮುಕ್ಷುವಿಗೆ, **ವಿಕಲ್ಪಮುಮ್ ಸಿದ್ಧಂ** - ವಿಕಲ್ಪವೂ ಸಿದ್ಧವು ಎಂದರೆ ಉಪಾಸನೆಯನ್ನಾಗಲಿ, ಪ್ರಪದನವನ್ನಾಗಲಿ ಅವಲಂಬಿಸಬಹುದು.

ಉಪಾಸನ ವಿದ್ಯಾ ಪ್ರಭೇದಗಳ ಹಾಗೆ ನ್ಯಾಸವಿದ್ಯಾ ಪ್ರಭೇದಗಳು

ಪ್ರಸತ್ತಿಯು ಉಪನಿಷತ್ತುಗಳಲ್ಲಿ ಪರಿಪೂರ್ಣವಾದ ಎಲ್ಲಾ ಅಂಗಗಳಿಂದಲೂ ಉಪದೇಶಿಸಲ್ಪಡದೇ ಇರುವುದರಿಂದ ಅದೂ, ಉಪಾಸನಾ ವಿದ್ಯೆಗಳ ಹಾಗೆ ಒಂದು ಉಪಾಯರೂಪವಾದ ಬ್ರಹ್ಮವಿದ್ಯೆ ಎಂದು ಹೇಗೆ ಹೇಳಲಾಗುತ್ತದೆ ಎಂಬಾಕ್ಷೇಪವು ಬಂದೀತಾಗಿ ಭಾವಿಸಿ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಅದೂ ಅಲ್ಲದೆ ಕೆಲವು ಶ್ರುತಿಶಾಖೆಗಳಾದ ತೈತ್ತಿರೀಯ ಶ್ವೇತಾಶ್ವರಾದಿಗಳಲ್ಲೂ, ಪಾಂಚರಾತ್ರ ಶಾಸ್ತ್ರದಲ್ಲೂ, ಅಹಿರ್ಬುಧ್ನ್ಯಾದಿ ಸಂಹಿತೆಗಳಲ್ಲೂ ಉಪಪಾದಿತವಾಗಿರುವ ನ್ಯಾಸವಿದ್ಯೆಗಳಲ್ಲಿ ಗುಣವಿಗ್ರಹ ಮುಂತಾದವುಗಳಲ್ಲೂ, ಮತ್ತು ಮಂತ್ರಗಳಲ್ಲೂ, ವ್ಯತ್ಯಾಸವಿರುವುದರಿಂದ ಆ ವಿದ್ಯೆಗಳೆಲ್ಲಾ ಬೇರೆಬೇರೆಯೇ, ನ್ಯಾಸವಿದ್ಯೆಯೆಂಬುದೊಂದೆಯೇ ಎಂಬ ಶಂಕಾ ನಿವಾರಣಾರ್ಥವಾಗಿ ನ್ಯಾಸವಿದ್ಯೆಯೆಲ್ಲಾ ಒಂದೇ ಎಂಬೂ "**ಉಪಾಸನತ್ತಿಲ್**" ಎಂದು ಪ್ರಾರಂಭಿಸುವ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಉಪಾಸನತ್ತಿಲ್ ವಿಶೇಷಣಙ್ಗಳ್ ಪೋಲೆ** - ಶ್ರೀ ಭಾಷ್ಯದ ಸರ್ವವೇದಾಂತ ಪ್ರತ್ಯಯಾಧಿಕರಣದಲ್ಲಿ (೩.೩.೧) ಉಪಪಾದಿಸಲ್ಪಟ್ಟಿರುವ ರೀತ್ಯಾ ಒಂದೇ ವಿಧ ಉಪಾಸನವೇ ಅನೇಕ ಶಾಖೆಗಳಲ್ಲಾಗಲಿ ಪ್ರಕರಣಗಳಲ್ಲಾಗಲಿ ಹೇಳಲ್ಪಟ್ಟಿದ್ದರೆ ಒಂದು ಕಡೆಯಲ್ಲಿ ಹೇಳಿದ ವಿಶೇಷಣಗಳು ಹೇಗೆ ಇತರ ಶಾಖೆ ಪ್ರಕರಣಗಳಲ್ಲಿ ಹೇಳಲ್ಪಟ್ಟ ಉಪಾಸನಾವಿಷಯದಲ್ಲಿ ಕೂಡ ಅನ್ವಯಿಸತಕ್ಕವುಗಳೋ, ಹಾಗೆಯೇ **ಶಾಖಾಭೇದಙ್ಗಳಿಲುಮ್** - ತೈತ್ತಿರೀಯ ಶ್ವೇತಾಶ್ವತರ ಮೊದಲಾದ ಶ್ರುತಿಶಾಖೆಗಳಲ್ಲೂ, **ಭಗವಚ್ಛಾಸ್ತ್ರಸಂಹಿತಾಭೇದಙ್ಗಳಿಲುಮ್**-ಪಾಂಚರಾತ್ರಶಾಸ್ತ್ರ

ಯಿಲ್ ಮುನ್ತ್ರಾದಿ ವಿಶೇಷಙ್ಗಳ್ ಕಣ್ಡುಕೊಳ್ವದು. ನಮಸ್ಕಾರಮ್ ವಾಚಿಕಂ, ಕಾಯಿಕಂ, ಮಾನಸಂ, ಎನ್ರು ಪಿರನ್ದಾಪ್ಪೋಲೆ, ಪ್ರಪತ್ತಿ ಯಿಲುಮೋರೊನ್ರೈ ಮುನ್ನಿಟ್ಟು ಇವ್ವಿಭಾಗಙ್ಗಳ್ ಶೊಲ್ಲಪ್ಪಟ್ಟದು. ಇವೈ

ಅಹಿರ್ಬುಧ್ನ ಸಂಹಿತೆ ಮೊದಲಾದವುಗಳಲ್ಲೂ, ಶೊಲ್ಲುಗಿರ ನ್ಯಾಸವಿದ್ಯೆಯಿಲ್ - ಹೇಳಿರುವ ನ್ಯಾಸವಿದ್ಯೆಯಲ್ಲಿ, ಇಲ್ಲಿ ನ್ಯಾಸವಿದ್ಯೆ ಎಂದು ಏಕ ವಚನವನ್ನು ಉಪಯೋಗಿಸಿರುವದರಿಂದ ಅವುಗಳಲ್ಲೆಲ್ಲಾ ಉಪಪಾದಿತವಾಗಿರುವದು ಒಂದೇ ವಿದ್ಯೆಯೆಂದು ಸ್ಪಷ್ಟಪಡುತ್ತದೆ, ಮುನ್ತ್ರಾದಿ ವಿಶೇಷಙ್ಗಳ್ - ಬೇರೆ ಬೇರೆ ಮನ್ತ್ರ ವಿಶೇಷಗಳನ್ನು ಎಂದರೆ ಒಂದರಲ್ಲಿ "ವಸುರಣ್ಯೋ ವಿಭೂರಸಿ" ಎಂಬ ಮನ್ತ್ರವೂ, ಇನ್ನೊಂದು ಸ್ಥಳದಲ್ಲಿ ದ್ವಯಮನ್ತ್ರವೂ ಹೀಗೆ ಮನ್ತ್ರಭೇದಗಳನ್ನು ಕಣ್ಡುಕೊಳ್ವದು - ತಿಳಿಯತಕ್ಕದ್ದು ; ಎಂದರೆ ಮನ್ತ್ರಭೇದಗಳಿದ್ದರೂ ನ್ಯಾಸ ವಿದ್ಯೆಯಲ್ಲಿ ಪಂಚಾಂಗಸಂಯುತಃ ಎಂದು ಹೇಳಿರುವ ಹಾಗೆ ಐದು ಅಙ್ಗಗಳಿಂದ ಕೂಡಿದ ಆತ್ಮಸಮರ್ಪಣೆ ಮಾಡುದರಿಂದ ಎಲ್ಲಾ ಕಡೆಯಲ್ಲೂ ಉಪಪಾದಿತವಾಗಿರುವದು ಒಂದೇ ವಿದ್ಯೆಯಾದ ನ್ಯಾಸವಿದ್ಯೆಯೇ ; ಭಕ್ತಿಯೋಗ ಹೇಗೋ ಹಾಗೆ ನ್ಯಾಸ ವಿದ್ಯೆಯೂ ಉಪಾಯವೇ. ಎರಡೂ ತುಲ್ಯಫಲ ಉಳ್ಳವುಗಳು ಎಂಬ ಭಾವವು. ಇಲ್ಲಿ ಮುನ್ತ್ರಾದಿವಿಶೇಷಙ್ಗಳ್ ಎಂಬಲ್ಲಿರುವ ಆದಿ ಪದದಿಂದ ಅವುಗಳ ಅಂಗಗಳು ಮೊದಲಾದವುಗಳು ಹೇಳಲ್ಪಟ್ಟವು.

ಪ್ರಪತ್ತಿಯು ಜ್ಞಾನವಿಕಾಸ ವಿಶೇಷರೂಪವಾದುದು. ಹಾಗಿರುವದರಿಂದ ಪ್ರಪತ್ತಿಯು ಮಾನಸರೂಪದಲ್ಲಿರುವದೇನೋ ನ್ಯಾಯವು. ಆದರೆ ವಾಚಿಕ ಕಾಯಿಕರೂಪದಲ್ಲೂ ಕೂಡ ಪ್ರಪತ್ತ್ಯನುಷ್ಠಾನವು ಸರಿಯೇ ಎಂಬ ಈಗಲೂ ಕೂಡ ವಿವಾದಾಸ್ಪದವಾಗಿರುವ ವಿಷಯದಲ್ಲಿ, ತಮ್ಮ ಅಭಿಪ್ರಾಯವೇನೆಂಬುವದನ್ನು ನಮಸ್ಕಾರಂ ಎಂದು ಪ್ರಾರಂಭಿಸಿ ಹೇಳುತ್ತಾರೆ

ನಮಸ್ಕಾರಂ - ನಮಸ್ಕಾರವು, ವಾಚಿಕಂ - ನಮಃ ಎಂದು ಬಾಯಲ್ಲಿ ಮಾತ್ರ ಹೇಳಲ್ಪಟ್ಟದ್ದಾಗಿಯೂ, ಕಾಯಿಕಂ - ದಂಡವತ್ಪ್ರಮಾಣಪೂರ್ವಕವಾದುದ್ದಾಗಿಯೂ, ಮಾನಸಂ - ಮನಸ್ಸಿನಿಂದ ನಮಸ್ಕರಿಸುವಂಥದ್ದಾಗಿಯೂ, ಎಂದು, ಪಿರನ್ದಾಪ್ಪೋಲೆ - ವಿಭಾಗಗಳುಂಟಾದಹಾಗೆ, ಪ್ರಪತ್ತಿಯಿಲುಮ್ - ಪ್ರಪತ್ತಿಯಲ್ಲಿಯೂ, ಓರೊನ್ರೈ - ಒಂದೊಂದನ್ನೇ ಎಂದರೆ, ವಾಚಿಕಪ್ರಪತ್ತಿ, ಕಾಯಿಕಪ್ರಪತ್ತಿ, ಮಾನಸಪ್ರಪತ್ತಿ, ಈ ಮೂರರಲ್ಲಿ ಒಂದೊಂದನ್ನೇ, ಮುನ್ನಿಟ್ಟು - ಪುರಸ್ಕರಿಸಿ, ಪ್ರಧಾನವಾಗಿ ಭಾವಿಸಿ, ಇವ್ವಿಭಾಗಙ್ಗಳ್ - ಪ್ರಪ

ತ್ತಿಯು ವಾಚಿಕ, ಕಾಯಿಕ, ಮಾನಸಿಕವೆಂದು ಮೂರುವಿಧವೆಂಬ ವಿಭಾಗಗಳು, ಕೊಲ್ಲಪಟ್ಟದು - ಹೇಳಲ್ಪಟ್ಟವು. ನಮಸ್ಕಾರದ ಅಭಿಪ್ರಾಯವು, ಇನ್ನೊಬ್ಬರ ವಿಷಯದಲ್ಲಿ ತಾನು ನಿಕೃಷ್ಟನು ಎಂಬ ಜ್ಞಾನರೂಪವಾದುದು. ಇದು ಮಾನಸಿಕ ವಾಗಿಯೇ ಇರತಕ್ಕದ್ದು; ಆದರೂ ಅದು ವಾಚಿಕವಾಗಿ "ನಮೋನಮಃ" ಎಂದು ಹೇಳುವಿಕೆಯೂ ಉಂಟು; ಮತ್ತು ಕಾಯಿಕವಾಗಿ ಪ್ರಣಾಮರೂಪದಲ್ಲಿ ಪರಿಣಮಿಸಬಹುದು. ಇಲ್ಲಿ ಜ್ಞಾನರೂಪವಾದ ಮಾನಸಿಕ ನಮಸ್ಕಾರವು ಕ್ರಿಯಾ ರೂಪಗಳಾದ ವಾಚಿಕಕಾಯಿಕಗಳಾಗಿ ಹೇಗೆ ಅನುಷ್ಠಿಸಲ್ಪಡಬಹುದು? ಆದರೆ ಇವುಗಳು ಸರಿಯಾದ ನಮಸ್ಕಾರ ಹೇಗಾದೀತೆಂಬ ಆಕ್ಷೇಪಣೆಗೆ, ವಾಚಿಕ ಕಾಯಿಕ ನಮಸ್ಕಾರಗಳಿಗೂ ಮಾನಸ ಸಂಬಂಧ ಉಂಟಾಗುವದರಿಂದ ಸರಿಯಾದ ನಮಸ್ಕಾರ ವಾಗಿಯೇ ಪರಿಣಮಿಸುವದರಲ್ಲಿ ಸಂದೇಹವಿಲ್ಲವು. ಹಾಗೆಯೇ ಪ್ರಪತ್ತಿಯಲ್ಲಿಯೂ ಎಂದು ಭಾವಿಸತಕ್ಕದ್ದು. ಪ್ರಪತ್ತಿಯು, ಸರ್ವೇಶ್ವರನಲ್ಲಿ ಆತನ ಸ್ವತ್ತಾದ ತನ್ನಾತ್ಮವನ್ನು ಸಮರ್ಪಣೆಮಾಡುವ ಜ್ಞಾನರೂಪವಾದುದು. ಆದುದರಿಂದ ಪ್ರಪತ್ತಿಯು ಮಾನಸರೂಪವಾಗಿಯೇ ಇರತಕ್ಕದ್ದು ನ್ಯಾಯವಾಗಿರುವಲ್ಲಿ ಉಕ್ತಿನಿಷ್ಠೆ, ಆಚಾರ್ಯ ನಿಷ್ಠೆ ಎಂದರೆ ಭಾಗವತ ಸಂಶ್ರಯಣರೂಪವಾದ ವಾಚಿಕ ಕಾಯಿಕರೂಪ ಪ್ರಪತ್ತಿಯು ಕ್ರಿಯಾರೂಪವಾಗಿರುವಲ್ಲಿ, ಅವುಗಳೂ ಕೂಡ ಫಲಪ್ರದಗಳಾಗಿ ಉಪಾದೇಯಗಳೆಂದು ಹೇಗೆ ಹೇಳಲಾಗುತ್ತದೆ ಎಂಬಾಕ್ಷೇಪವು ಉಂಟಾಗಬಹುದು; ಉಕ್ತಿನಿಷ್ಠೆ ಭಾಗವತಸಂಶ್ರಯಣಗಳಲ್ಲೂ ಜ್ಞಾನರೂಪದ ಸಂಬಂಧವಿದ್ದೇ ಇರುವದರಿಂದ ಪ್ರಪತ್ತಿಯು ಮಾನಸಿಕ, ವಾಚಿಕ, ಕಾಯಿಕವಾಗಿಯೂ ಅನುಷ್ಠಿಸಲ್ಪಡಬಹುದು; ಫಲದಲ್ಲೇನೂ ಅವುಗಳಿಗೆ ವ್ಯತ್ಯಾಸವಿಲ್ಲವೆಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಮೇಲೆ ಹೇಳಿದ ಆಕ್ಷೇಪದ ಸಮಾಧಾನಕ್ಕಾಗಿಯೇ ನಮಸ್ಕಾರದ ನಿದರ್ಶನವನ್ನು ಬೋಧಿಸಿರುತ್ತಾರೆ.

ಹಾಗಾದರೆ ಕೆಲವು ಪೂರ್ವಾಚಾರ್ಯರುಗಳು ತಮ್ಮ ಸೂಕ್ತಿಗಳಲ್ಲಿ, ಈ ಮಾನಸ ವಾಚಿಕ, ಕಾಯಿಕ ಪ್ರಪತ್ತಿಗಳು ಮೂರೂ ಸೇರಿದರೇನೇ ಪೂರ್ಣಪ್ರಪತ್ತಿಯಾಗುತ್ತದೆಂದು ಹೇಳಿರುವರಲ್ಲಾ, ಆ ಅಭಿಪ್ರಾಯಕ್ಕೆ ಸಮಾಧಾನ ಹೇಗೆ ಎಂಬಾಕ್ಷೇಪಕ್ಕೆ ಸರಿಯಾದ ಸಮಾಧಾನವನ್ನು 'ಇನ್ನೈ ಮೂನ್ರುಮ್' ಎಂಬುವದರಿಂದ ಬೋಧಿಸುತ್ತಾರೆ. ಜ್ಞಾನರೂಪವಾಗಿ ಮಾನಸರೂಪವಾದ ನಮಸ್ಕಾರವು, 'ಅದರ ಪ್ರವಾಹರೂಪವಾಗಿ ಬಾಯಿಂದಲೂ ನಮಃ ಎಂದು ಹೇಳಿ, ಕಾಯಿಕವಾಗಿಯೂ ದಂಡವತ್ಪ್ರಣಾಮಮಾಡಿದರೆ, ಹೇಗೆ ನಮಸ್ಕಾರವು ಪರಿಪೂರ್ಣತೆಯನ್ನು ಹೊಂದುತ್ತದೆಯೋ ಹಾಗೆಯೇ, ಜ್ಞಾನರೂಪವಾದ ಪ್ರಪತ್ತಿಯು ಮಾನಸವಾದರೂ ಅದು ವಾಚಿಕರೂಪದಲ್ಲಿ ದ್ವಯ ಮುಂತಾದ ಮಂತ್ರೋಚ್ಚಾರಣಮಾಡಿ, ತದನುಗುಣ

ಮೂನ್ರುಮ್ ಪೊರುನ್ದಿನಪೋದು ಪೂರ್ಣನಮಸ್ಕಾರಮಾನಾಪ್ಪೋಲೆ, ಪೂರ್ಣಪ್ರಪತ್ತಿಯಾಕಕ್ಕಡವದೆನ್ರುವರ್ಗಳ್ ಪಾಶುರಙ್ಗಳುಕ್ಕುಮ್, ವಾಚಿಕ ಕಾಯಿಕಙ್ಗಳಾನ ವ್ಯಾಪಾರವಿಶೇಷಙ್ಗಳ್ ಪರೀವಾಹಮಾಮ್ಪಡಿಯಾನ ಮಾನಸಪ್ರಪತ್ತಿನುಡೈಯ ಪೂರ್ತ್ತಿಯಿಲೆ ತಾತ್ಪರ್ಯಮಾಕಕ್ಕಡ

ವಾದ ಕಾಯಿಕವ್ಯಾಪಾರಗಳಾದ ಕೈಮುಗಿಯುವಿಗಳೊಂದಿಗೆ ಸೇರಿದರೆ ಪರಿಪೂರ್ಣತೆಯನ್ನು ಹೊಂದುತ್ತದೆಂಬುವದೀಗ ಆ ಪೂರ್ವಾಚಾರ್ಯರುಗಳ ಅಭಿಪ್ರಾಯವೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ. ಇವರಿಂದ ಒಂದೊಂದೇ ಪ್ರಪತ್ತಿಯಾಗುವದಿಲ್ಲವೆಂಬುವದು ಅವರಭಿಪ್ರಾಯವಲ್ಲವು ಮೂರೂ ಸೇರಿದರೆ ಅದಕ್ಕೆ ಸರ್ವೋತ್ಕೃಷ್ಟತೆಯುಂಟಾಗುತ್ತದೆಂದು ಬೋಧಿಸಿದರೇ ವಿನಾ ಒಂದೊಂದೇ ಪ್ರಪತ್ತಿಯಾಗುವದಿಲ್ಲವೆಂದು ಹೇಳಲಿಲ್ಲವು. ಈಗ ನಮ್ಮ ಹಿರಿಯರ ಸನ್ನಿಧಿಯಲ್ಲಿ ನಮಃ ಎಂದು ಇಷ್ಟುಮಾತ್ರವೇ ಹೇಳಿದರೂ, ಅಥವಾ ಪ್ರಣಾಮಮಾಡಿದರೂ ಹೇಗೆ ನಮಸ್ಕಾರ ಫಲಪ್ರಾಪ್ತಿಯೋ, ಹಾಗೆಯೇ ಉಕ್ತಿನಿಷ್ಠೆ ಭಾಗವತನಿಷ್ಠೆಯಲ್ಲೂ ಸಹ ಪ್ರಪತ್ತಿಯು ಸಫಲವಾಗಲು ಸಂದೇಹವಿಲ್ಲವೆಂದು ಮುಂದೆ ತಿಳಿಸುತ್ತಾರೆ.

ಇನ್ನೈ ಮೂನ್ರುಮ್ - ಈ ಮೇಲೆ ಹೇಳಿದ ಮಾನಸ, ವಾಚಿಕ, ಕಾಯಿಕ ನಮಸ್ಕಾರಗಳು, **ಪೊರುನ್ದಿನಪೋದು** - ಎಲ್ಲಾ ಒಟ್ಟಿಗೆ ಸೇರಿದಾಗ, **ಪೂರ್ಣನಮಸ್ಕಾರಮಾನಾಪ್ಪೋಲೆ**-ಪರಿಪೂರ್ಣವಾದ ನಮಸ್ಕಾರ ಹೇಗೆ ಆಗುತ್ತದೋ ಹಾಗೆಯೇ, **ಪೂರ್ಣಪ್ರಪತ್ತಿಯಾಕಕ್ಕಡವದು** - ಮಾನಸ, ವಾಚಿಕ, ಕಾಯಿಕ ಪ್ರಪತ್ತಿಗಳು ಮೂರೂ ಒಟ್ಟಿಗೆ ಸೇರಿದರೆ ಪೂರ್ಣಪ್ರಪತ್ತಿಯಾಗುತ್ತದೆ, **ಎನ್ರುವರ್ಗಳ್ ಪಾಶುರಙ್ಗಳ್** - ಎಂದು ಹೇಳುವ ಆಚಾರ್ಯರುಗಳ ಸೂಕ್ತಿಗಳು, **ವಾಚಿಕ ಕಾಯಿಕಙ್ಗಳಾನ ವ್ಯಾಪಾರವಿಶೇಷಙ್ಗಳ್** - ವಾಚಿಕ ಕಾಯಿಕ ಪ್ರಪತ್ತಿಗಳ ವ್ಯಾಪಾರವಿಶೇಷಗಳು **ಪರೀವಾಹಮಾಮ್ಪಡಿಯಾನ** - ಪರೀವಾಹರೂಪವನ್ನು ಹೊಂದಿದ, **ಮಾನಸ ಪ್ರಪತ್ತಿಯಿನುಡೈಯ** - ಮಾನಸಪ್ರಪತ್ತಿಯನುಸಂಧಾನದ, **ಪೂರ್ತ್ತಿಯಿಲೆ** - ಪೂರ್ಣತೆಯಲ್ಲಿ, **ತಾತ್ಪರ್ಯಮಾಕಕ್ಕಡವದು** - ಅಭಿಪ್ರಾಯವುಳ್ಳವು ಎಂಬ ಭಾವವು. ನಮಸ್ಕಾರವು ಜ್ಞಾನರೂಪವಾಗಿ ಮಾನಸವಾಗಿರತಕ್ಕದ್ದು. ಅದು ವಾಚಾ ನಮಃ ಎಂಬುವದರಿಂದಲೂ, ಕಾಯಿಕ ಪ್ರಣಾಮದಿಂದಲೂ ಪೂರ್ಣತೆಯನ್ನು ಹೊಂದುವದರಿಂದ, ಯಾವುದಾದರೂ ಒಂದು ವಿಧವಾಗಿ ನಡಿಸಿದರೂ ನಮಸ್ಕಾರದ ಫಲವೇ ಹೇಗೆ ಉಂಟಾಗುತ್ತದೋ, ಹಾಗೆಯೇ ಪ್ರಪತ್ತಿಯೂ ಜ್ಞಾನರೂಪವಾಗಿ ಮಾನಸವಾಗಿದ್ದರೂ, ವಾಚಿಕವಾಗಿಯೂ ಕಾಯಿಕವಾಗಿಯೂ ಅನುಷ್ಠಿಸುವದರಿಂದ ಮಾನಸಪ್ರಪತ್ತಿಯ ಅನುಸಂಧಾನವು ಪೂರ್ಣತೆ

ವದು. ಯಥಾಧಿಕಾರಮ್ ಇವೈ ಎಲ್ಲಾಮ್ ಫಲಪ್ರದಗಳೆನ್ನುಮಿಡಂ ಮುನ್ಬೇ ಶೊನ್ನೋಮ್.

ಯನ್ನು ಹೊಂದುತ್ತವೆ. ಪೂರ್ವಾಚಾರ್ಯರುಗಳು ಈ ಮೂರುವಿಧ ಪ್ರಪತ್ತಿಗಳೂ ಸೇರಿದರೆ ಪ್ರಪತ್ತಿಯು ಪೂರ್ಣತೆಯನ್ನು ಹೊಂದುತ್ತದೆ ಎಂದು ಹೇಳಿದುದರ ಅಭಿಪ್ರಾಯವು ಕೂಡ ಈ ರೀತಿಯ ತಾತ್ಪರ್ಯವೇ ವಿನಾ, ಈ ಮೂರೂ ಸೇರಿದರೇನೇ ಪ್ರಪತ್ತಿಯು ಪೂರ್ಣಫಲ ಕೊಡುತ್ತದೆ ಒಂದೊಂದೇಯಾದರೆ ಫಲವಿಲ್ಲವೆಂಬಭಿಪ್ರಾಯವಲ್ಲ. ಮಾನಸಪ್ರಪತ್ತಿಗೆ ವಾಚಿಕ ಕಾಯಿಕ ವ್ಯಾಪಾರಸಂಬಂಧವಿದ್ದುದಾದರೆ, ಅದಕ್ಕೆ ಒಪ್ಪ ಅಥವಾ ಮೆರುಗು ಹೆಚ್ಚು ಎಂಬ ತಾತ್ಪರ್ಯವು. ಆದುದರಿಂದ ಉಕ್ತಿನಿಷ್ಠೆ ಆಚಾರ್ಯನಿಷ್ಠೆಯೂ ಕೂಡ, ಪೂರ್ಣ ಫಲವನ್ನು ಕೊಡುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಉಕ್ತಿನಿಷ್ಠೆ ಆಚಾರ್ಯನಿಷ್ಠೆ ಎಂದರೇನೆಂಬುವದು ಹಿಂದೆ ಅಧಿಕಾರವಿಭಾಗಾಧಿಕಾರದಲ್ಲಿ ವ್ಯಕ್ತಪಡಿಸಿರುತ್ತದೆ.

ಇವು ಮೂರುವಿಧ ಪ್ರಪತ್ತಿಗಳಲ್ಲಿ ಪ್ರತಿಯೊಂದೂ, ಮತ್ತು ಈ ಮೂರು ಸೇರಿರುವ ಪ್ರಪತ್ತಿಯೂ ಸಹ ಪೂರ್ಣ ಫಲದಾಯಿಕಗಳೇ ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಯಥಾಧಿಕಾರಂ - ಅಧಿಕಾರಾನುಗುಣವಾಗಿ, ಇವೈ ಎಲ್ಲಾಂ – ಮಾನಸ ಪ್ರಪತ್ತಿ, ವಾಚಿಕ ಪ್ರಪತ್ತಿ, ಕಾಯಿಕ ಪ್ರಪತ್ತಿ, ಈ ಕರಣತ್ರಯವೂ ಸೇರಿದ ಪ್ರಪತ್ತಿ, ಇವೆಲ್ಲವೂ. ಫಲಪ್ರದಗಳೆನ್ನುಮಿಡಂ - ಸಂಪೂರ್ಣ ಫಲವನ್ನು ಕೊಡುವವು ಎಂಬುವದಕ್ಕೆ ಪ್ರಮಾಣೋಪಪತ್ತಿಯನ್ನು, ಮುನ್ಬೆ ಶೊನ್ನೋಮ್ - ಹಿಂದೆ ಅಧಿಕಾರ ವಿಭಾಗಾಧಿಕಾರದ ಆದಿಭಾಗದಲ್ಲಿ (೮೦೩, ೮ ಪುಟನೋಡಿ) ಹೇಳಿರುವೆವು. ಆ ಪ್ರಮಾಣೋಪಪತ್ತಿ ಯಾವುವೆಂದರೆ, ಉಕ್ತಿನಿಷ್ಠೆಗೆ "ಭವತಿ ಭಿಕ್ಷಾಂ ದೇಹಿ" ಎಂಬ ನಿದರ್ಶನವೆಂದೂ "ಪಾಪೀಯಸೋಽಪಿ ಶರಣಾಗತಶಬ್ದಭಾಜಾಂ" ಎಂದೂ, ಆಚಾರ್ಯ ನಿಷ್ಠೆಗೆ "ಪುತ್ರಃ ಪ್ರೇಷ್ಯಸ್ತಥಾ ಶಿಷ್ಯ ಇತ್ಯೇವಂಚ ನಿವೇದಯೇತ್" ಎಂದೂ ಪ್ರಮಾಣಗಳು ಉದಾಹರಿಸಲ್ಪಟ್ಟಿವೆ ಎಂಬ ತಾತ್ಪರ್ಯವು. ಮಾನಸ ಪ್ರಪತ್ತಿಯು ವಾಚಿಕಕಾಯಿಕ ವ್ಯಾಪಾರಗಳಿಲ್ಲದಿದ್ದರೆ ಪ್ರಪತ್ತಿಯು ಪೂರ್ಣವಾಗುವದಿಲ್ಲವೆಂಬ ಮತ್ತು ಫಲಪ್ರಾಪ್ತಿಯೂ ಇಲ್ಲವೆಂಬಭಿಪ್ರಾಯದಿಂದ ಪೂರ್ವಾಚಾರ್ಯರುಗಳು ಹಾಗೆ ಹೇಳಲಿಲ್ಲವು. ಅವರುಗಳಿಗೆ ಮಾನಸ ಪ್ರಪತ್ತಿಯಿಂದುಂಟಾಗುವ ತನ್ನ ಪಾರತಂತ್ರ್ಯನೈಚ್ಯಾನುಸಂಧಾನ ಮುಂತಾದವುಗಳಿಗೆ ವಾಚಿಕ ಕಾಯಿಕರೂಪ ವ್ಯಾಪಾರಗಳೊಂದಿಗೆ ಸೇರಿದುದಾದರೆ ಮಾನಸ ಪ್ರಪತ್ತಿಯು

ನಿನ್ರ ನಿಲೈಕ್ಕುರ ನಿರ್ಕುಮ್ ಕರುಮಮುಮ್ ನೇರ್ಮತಿಯಾಲ್
ನನ್ರನ ನಾಡಿಯ ಞಾನಮುಮ್ ನಲ್ಕುಮುಳ್ ಕಣ್ಣುಡೈಯಾರ್।

ಶ್ಲಾಘ್ಯತೆಯನ್ನು ತೋರುತ್ತದೆ ಎಂಬುದೇ ಅಭಿಪ್ರಾಯವು ಆದುದರಿಂದ ಈ ಮೇಲೆ ಹೇಳಿದ ಸಾಲ್ಯ ಸಂಪತ್ತಿನಲ್ಲೂ ಫಲವು ಉಂಟು. ಇವೆಲ್ಲಾ ವಿಧವಾದ ಉಪಾಯಾನುಷ್ಠಾನದಲ್ಲೂ ಶೋಭನತ್ವವುಂಟೆಂದು ಉಪದೇಶಿಸಲ್ಪಟ್ಟಿತು. ಆದುದರಿಂದ ಉತ್ತರನಿಷ್ಠೆಯೂ ಆಚಾರ್ಯನಿಷ್ಠೆಯೂ ಸಹ ಪೂರ್ಣ ಫಲಪ್ರದಗಳಾಗಿ ಪರಿಣಮಿಸಲು ಸಂದೇಹವಿಲ್ಲವೆಂಬುವದು ಇಲ್ಲಿ ಮುಖ್ಯ ತಾತ್ಪರ್ಯವು.

ಹೀಗೆ ಶ್ರಿಯಃಪತಿಯನ್ನು ಹೊಂದುವ ಮಾರ್ಗಗಳು ಯಾವುವು, ಅವುಗಳ ಪ್ರಭೇದಗಳೇನು, ಈ ಮಾರ್ಗಗಳಲ್ಲಿ ಚಾತುರ್ವರ್ಣ್ಯದಲ್ಲೂ, ಚಾತುರಾಶ್ರಮದಲ್ಲೂ ಯಾರುಯಾರಿಗೆ ಅಧಿಕಾರವು ಎಂಬ ವಿಷಯಗಳನ್ನೆಲ್ಲಾ ಚನ್ನಾಗಿ ತಿಳಿದವನೇಗ ಬ್ರಹ್ಮವಿತ್ತೆನಿಸುವ ಬ್ರಾಹ್ಮಣೋತ್ತಮನೆಂದು ಹೇಳಿ ಈ ಅಧಿಕಾರದ ಅರ್ಥವನ್ನು ಒಂದು ಪಾಶುರದ ಮೂಲಕ ಸಂಗ್ರಹಿಸುತ್ತಾರೆ:—

ಅರ್ಥ—ನಿನ್ರನಿಲೈಕ್ಕು - ಚೇತನನು ನಿಂತಿರುವ ಸ್ಥಿತಿಗೆ ಎಂದರೆ ಚೇತನನಿರುವ ವರ್ಣಾಶ್ರಮಧರ್ಮಗಳಿಗೆ, **ಉರ** - ಆವಶ್ಯಕವಾದುದಾಗಿ, **ನಿರ್ಕುಮ್** - ಇರುವ ಎಂದರೆ ಶಾಸ್ತ್ರಗಳಲ್ಲಿ ಕರ್ತವ್ಯವೆಂದು ವಿಧಿಸಿರುವ, **ಕರುಮಮುಮ್**-ಕರ್ಮಯೋಗವನ್ನೂ, ತಮ್ಮತಮ್ಮ ವರ್ಣಾಶ್ರಮಗಳಿಗನುಗುಣವಾದ ನಿತ್ಯ ನೈಮಿತ್ತಿಕ ಕರ್ಮಗಳೂ ತಪಸ್ತೀರ್ಥ ದಾನ ಯಜ್ಞಾದಿ ಸೇವನೆಯೂ, ಇವುಗಳನ್ನು, **ನೇರ್ಮತಿಯಾಲ್**-ಸೂಕ್ಷ್ಮಬುದ್ಧಿಯಿಂದ ಎಂದರೆ ಕಷ್ಟಸಾಧ್ಯವಾದ ಜ್ಞಾನಯೋಗವನ್ನು ನಿರ್ವಹಿಸಲು ಯೋಗ್ಯವಾದ ಬುದ್ಧಿಯಿಂದ ಅಥವಾ ವಿಷಯಗಳಲ್ಲಿ ಪ್ರವರ್ತಿಸದ ಹಾಗೆ ಇಂದ್ರಿಯಗಳನ್ನು ಜಯಿಸಿದ ಮತ್ತು ಆತ್ಮನಲ್ಲೇ ನಿಲ್ಲುವ ಹಾಗೆ ಮಾಡಿದ ಸೂಕ್ಷ್ಮಬುದ್ಧಿಯಿಂದ, ಅಥವಾ ಸ್ವಾಮಿಕೃಪೆಯಿಂದುಂಟಾದ ಸೂಕ್ಷ್ಮಬುದ್ಧಿಯೋಗದಿಂದ **ನನ್ರನ**-ಸಮೀಚಿನವಾದುದೆಂದು ಹೇಗೆ ಹೇಳಿಸಿಕೊಳ್ಳಬೇಕೋ ಹಾಗೆ, **ನಾಡಿಯ** - ಹುಡುಕಿ ತೆಗೆದ ಎಂದರೆ ಕಷ್ಟಪಟ್ಟು ಸಂಪಾದಿಸಿದ, **ಞಾನಮುಮ್** - ಜ್ಞಾನಯೋಗವನ್ನೂ, ಇದರಿಂದ

"ಕರ್ಮಯೋಗಸ್ತಪಸ್ತೀರ್ಥದಾನ ಯಜ್ಞಾದಿ ಸೇವನಂ।
ಜ್ಞಾನಯೋಗೋಜಿತಸ್ವಾಂತೈಃ ಪರಿಶುದ್ಧಾತ್ಮನಿಸ್ಥಿತಿಃ"

ಎಂಬಲ್ಲಿ ಹೇಳಿರುವ ಅಭಿಪ್ರಾಯವು ಇಲ್ಲಿ ವ್ಯಕ್ತಪಡಿಸಲ್ಪಟ್ಟಿತು. ಕರ್ಮಯೋಗ ಜ್ಞಾನಯೋಗಗಳನ್ನು ಕುರಿತು ಹೇಳಿ ಮುಂದೆ ಭಕ್ತಿಯೋಗವನ್ನು ಕುರಿತು

ಒನ್ರಿಯ ಪತ್ತಿಯುಂ ನೋನ್ಪುಮಿಲಾ ವಿರೈವಾರ್ಕ್ಕರುಳಾಲ್
ಅನ್ರು ಪಯುನ್ತರುಂ ನಾಮಂ ಮರಿನ್ದವರನ್ದಣರೇ ॥ ೬ ॥

ಹೇಳುತ್ತಾರೆ. ನಲ್‌ಕುಮ್ - ಪ್ರೀತಿ ಅಥವಾ ಸ್ನೇಹದಿಂದೊಡಗೂಡಿದ, ಉಳ್‌ಕಣ್ ಉಡೈಯಾರ್ - ಅಂತರ್ದೃಷ್ಟಿಯನ್ನು ಹೊಂದಿದವರು, ಎಂದರೆ ಸ್ವಸ್ವರೂಪಾನುರೂಪವಾದ ಉಪಾಯವನ್ನು ಆಚಾರ್ಯರಿಂದ ಪರಿಗ್ರಹಿಸಲ್ಪಟ್ಟ, ಒನ್ರಿಯ - ಪರನೈಕಾನ್ತ್ಯದಿಂದ ಒಂದಾಗಿ ಸೇರಿದ, ಪತ್ತಿಯುಮ್ - ಭಕ್ತಿಯೋಗವನ್ನೂ ಭಕ್ತಿಯೋಗದಲ್ಲಿ ಅವರಿಗೆ ನಿರತಿಶಯ ಪ್ರೇಮವಿರುವದರಿಂದ ಅದರೊಂದಿಗೇನೇ ಏಕೀಭವಿಸಿರುತ್ತಾರೆಂಬಭಿಪ್ರಾಯವು; "ಪ್ರೀತಿರೂಪಮನುಧ್ಯಾನಂ ಭಕ್ತಿರಿತ್ಯಭಿಧೀಯತೇ "ಎಂಬುವದರಭಿಪ್ರಾಯವು ಇಲ್ಲಿ ಉಪಪಾದಿಸಲ್ಪಟ್ಟಿತು; ಇದು ಮೋಕ್ಷಸಾಧನವೆಂದು ಶಾಸ್ತ್ರಗಳಲ್ಲಿ ಹೇಳಿರುವದರಿಂದ ಬರೀ ಸ್ತುತಿ ನಮಸ್ಕಾರಾದಿ ರೂಪಭಕ್ತಿಯು ಸಾಕ್ಷಾತ್ತಾಗಿ ಉಪಾಯವಾಗಲಾರದು; ಆದರೆ ಅದು ಸಹಕಾರಿಯಾಗಿ ಪರಿಣಮಿಸಬಹುದೆಂಬಭಿಪ್ರಾಯವು ತೋರಿಬರುತ್ತದೆ. ಒನ್ರುಮಿಲಾ ವಿರೈವಾರ್ಕ್ಕು - ಈ ಕರ್ಮಯೋಗಾದಿಗಳೊಂದೂ ಇಲ್ಲದೆ ತುಂಬಾ ತ್ವರೆಯುಳ್ಳವರಿಗಂದರೋ, ವಿರೈವಾರ್ಕ್ಕು - ಎಂದರೆ ವಿಳಂಬವನ್ನು ಸಹಿಸದೆ ತ್ವರೆಯಲ್ಲಿ ಮೋಕ್ಷ ಪ್ರಾಪ್ತಿಯನ್ನು ಬಯಸುವವರಿಗೆ, ಎಂದರೆ ಕರ್ಮಯೋಗವೇ ಮೊದಲಾದವುಗಳಿಂದ ಸೇರಿದ ಭಕ್ತಿಮಾರ್ಗದಲ್ಲಿ ಅಸಮರ್ಥರಾಗಿಯೂ, ವಿಳಂಬವನ್ನು ಸಹಿಸದವರಾಗಿಯೂ ಯಿರುವವರಿಗೆ, ಅನ್ರು-ಆಗ ಎಂದರೆ ಇವರುಗಳು ಅಪೇಕ್ಷಿಸಿದ ಕಾಲದಲ್ಲೇ; ದೃಪ್ತನಾಗಿದ್ದ ಪಕ್ಷದಲ್ಲಿ ದೇಹಾವಸಾನಕಾಲದಲ್ಲೇ ಎಂಬ ಭಾವವು, ಅರುಳಾಲ್ - ಸರ್ವೇಶ್ವರನ ಕೃಪೆಯಿಂದ, ಪಯನ್‌ತರುಮ್ - ಫಲವನ್ನು ಕೊಡುವ, ಆರುಮ್ - ಉಪಾಯವನ್ನೂ ಕೂಡ, ಎಂದರೆ ಪ್ರಪತ್ತಿಯನ್ನೂ ಕೂಡ, ಕರ್ಮಯೋಗ ಜ್ಞಾನಯೋಗ ಭಕ್ತಿಯೋಗದಿಂದ ಗುರೂಪಾಯ (ಕಷ್ಟತರವಾದ ಉಪಾಯ) ವಾದ ಭಕ್ತಿಮಾರ್ಗವೂ ಅದಕ್ಕೆ ಅಶಕ್ತರಾಗಿಯೂ ವಿಳಂಬವನ್ನು ಸಹಿಸದೇ ಇರುವವರಿಗೆ ಲಘೂಪಾಯವಾದ ಪ್ರಪತ್ತಿಮಾರ್ಗವೂ ಹೇಳಲ್ಪಟ್ಟವು. ಅರಿನ್ದವರ್ - ಹೀಗೆ ಇವೆರಡೂ ಉಪಾಯಗಳೆಂದು ತಿಳಿದವರು ಅನ್ದಣರೇ - ಬ್ರಾಹ್ಮಣರೇ ಸರಿ. " ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ಸ್ಮೃತಾಃ " ಎಂದು ಹೇಳಿರುವ ಹಾಗೆ ಬ್ರಾಹ್ಮಣರೆಂಬುವದು ಸತ್ಯವು ಎಂಬಭಿಪ್ರಾಯವು ಮುಖ್ಯವಾಗಿ ಸರ್ವೇಶ್ವರನ ಮತ್ತು ತನ್ನ ಸ್ವರೂಪವನ್ನರಿತು ಆತನನ್ನು ಹೊಂದಲು ಉಪಾಯಗಳು ಯಾವುವು ಎಂದು ವಿಮರ್ಶಿಸಿ ತಿಳಿದು ತನ್ನ ಶಕ್ತ್ಯನುಸಾರ ಆ ಉಪಾಯಗಳಲ್ಲೊಂದನ್ನವಲಂಬಿಸಿದವನು ಮಹಾ ವೇದತತ್ವ

ವನ್ನು ಶ್ರೀದೇವನಾದವರಿಂದ ಬ್ರಾಹ್ಮಣನಿಂದು ಹೇಳಿಸಿಕೊಳ್ಳಲು ಸಂಶಯವಿಲ್ಲ ವೆಂಬ ತಾತ್ಪರ್ಯವು. ಯೋಗದಿಂದ ಯಾವ ಮೋಕ್ಷವನ್ನು ಸಂಪಾದಿಸಬಹುದೋ ಅವನ್ನೇ “ ನ್ಯಾಸೇನೈವ ಮಹಾಮುನೇ। ಪ್ರಾಪ್ನುವಂತಿ ಪರಮಂಧಾಮ ಯತೋನಾವರ್ತತೇಪುನಃ ” ಎಂದು ಹೇಳಿರುವ ಹಾಗೆ ಪ್ರಪತ್ತಿಯಿಂದಲೇ ಅಂತಹ ದಿವ್ಯವೈಕುಂಠವನ್ನು ಸಾಧಿಸಬಹುದೆಂಬ ಅಹಿರ್ಬುಧ್ನ್ಯ ಸಂಹಿತಾ ವಾಕ್ಯ ಮೊದಲಾದ ಪ್ರಮಾಣೋಕ್ತಿಯು ಇಲ್ಲಿ ಸಮರ್ಥಿಸಲ್ಪಟ್ಟಿತು. ಇಲ್ಲಿ ಅರುಳಾಲ್ ಎಂದು ಹೇಳಿರುವದರಿಂದ ಭಕ್ತಿಸಾಧನದಲ್ಲಿ ತಾನೇ ನಿಂತು ಈ ಅದ್ವಾರಕ ಪ್ರಪತ್ತಿ ಮೂಲಕ ಮೋಕ್ಷ ಕೊಡುವವನೆಂಬಭಿಪ್ರಾಯವೂ ಸೂಚಿತವಾಯಿತು; ಅಥವಾ ಭಕ್ತಿಯೋಗಕ್ಕೆ ಅಸಮರ್ಥನಾಗಿರುವವನಿಂದ, ತನ್ನ ಸ್ವರೂಪಕ್ಕನಲ್ಲಿ ಆಕಿಂಚ ನ್ಯವು ತೋರಿಬರುವವನಿಂದ ಅಂಥಾವನನ್ನು ರಕ್ಷಿಸುವದು ತನ್ನ ವ್ರತವೆಂದು ಭಾವಿಸಿ “ಕೃಪಯಾ ಪರ್ಯಪಾಲಯತ್” ಎಂಬಲ್ಲಿಯೂ, “ಸ್ವತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂಕಥಂಚನ” ಎಂಬಲ್ಲಿಯೂ, ತೋರುವ ಕೃಪಾಪ್ರ ಭಾವವು ಪ್ರಕಟಿಸಲ್ಪಟ್ಟಿತು.

ಆದರೆ ಶಾಸ್ತ್ರಗಳಲ್ಲಿ ಅನೇಕ ಕಡೆ ಬಹುದೂರ ಕರ್ಮಯೋಗಾದಿಗಳಿಂದ ಕೂಡಿ ದ ಉಪಾಸನವು ಉತ್ಕೃಷ್ಟವಾದ ಉಪಾಯವೆಂದು ಉದ್ಘೋಷಿಸಿ ಹೇಳಿರುವಾಗ, ಅದ್ವಾರಕಪ್ರಪತ್ತಿಯೂ ಒಂದು ಉಪಾಯವೆಂದೂ, ಆದು ಇವೆರಡುಪಾಯಗಳಲ್ಲಿ ಸುಲಭೋಪಾಯನೆಂದೂ, ಅದರಲ್ಲಿ ವಿಳಂಬವಿಲ್ಲದೆ ಮೋಕ್ಷಲಾಭವು ಎಂದೂ ಹೇಳ ಲ್ಪಟ್ಟಿತಲ್ಲಾ, ಇದಕ್ಕೆ ಇನ್ನೇನಾದರೂ ಹೆಚ್ಚು ಪ್ರಾಶಸ್ತ್ಯವನ್ನು ಹೇಳುವ ಪ್ರಮಾ ಣವಿದೆಯೇ ? ಮತ್ತು ನಮ್ಮ ಪೂರ್ವಾಚಾರ್ಯರುಗಳಲ್ಲಿ ಅನೇಕರು ಉಪಾಸನಮಾರ್ಗ ವನ್ನವಲಂಬಿಸದೆ, ಪ್ರಪತ್ತಿಯೇ ತಂಬಾ ಪ್ರಾಶಸ್ತ್ಯ ಉಳ್ಳದು ಎಂದು ಏಕೆ ಅವಲಂಬಿಸಿದರು ? ಎಂಬೀಪ್ರಶ್ನೆಗಳಿಗೆ ಸಮಾಧಾನ ಹೇಳುವದಾಗಿ, ಭಕ್ತಿ ಯೋಗಕ್ಕಿಂತ ಪ್ರಪತ್ತಿಗೆ ಹೆಚ್ಚು ಪ್ರಾಶಸ್ತ್ಯ ಉಂಟು. ಆದ್ದರಿಂದಲೇ ನಮ್ಮ ಪೂರ್ವಾಚಾರ್ಯರು ಅದನ್ನು ಅವಲಂಬಿಸಿದರು, ಅಂತಹ ಪ್ರಾಶಸ್ತ್ಯವು ಗೀತಾಚಾರ್ಯ ನಾದ ಶ್ರೀಕೃಷ್ಣನ ಚರಮಶ್ಲೋಕದಲ್ಲಿ ತೋರಿಬರುತ್ತದೆಂದು ಹೇಳುತ್ತಾರೆ. ಕರ್ಮ ಯೋಗ ಜ್ಞಾನಯೋಗಗಳು ಉಪಾಯಕ್ಕೆ ಮಾತ್ರವೇ ಸಾಧನಭೂತಗಳೇ ವಿನಾ ಫಲಸಾಧನಗಳಲ್ಲವು. ಭಕ್ತಿಯೋಗವಾದರೋ ಫಲಕ್ಕೆ ಮಾತ್ರ ಸಾಧನವೇ ವಿನಾ ಉಪಾಯಕ್ಕೆ ಸಾಧನವಲ್ಲವು. ಪ್ರಪತ್ತಿಯಾದರೋ ಉಪಾಯಕ್ಕೂ ಸಾಧನವು, ಫಲಕ್ಕೂ ಸಾಧನವು; ಫಲಸಾಧನವಾಗಿರುವಾಗ ವಿಳಂಬವಿಲ್ಲದೆಯೂ ಸಾಧನವು. ಹೀಗೆ ಎರಡು ಆಕಾರಗಳೂ ಇರುವದರಿಂದ ಕರ್ಮಯೋಗ ಜ್ಞಾನಯೋಗದಿಂದ ಕೂಡಿದ ಭಕ್ತಿಯೋಗಕ್ಕಿಂತಲೂ ಮೇಲಾದುದು. ಹೆಚ್ಚು ಮಹಿಮೆಯುಳ್ಳದು.

**ಕರ್ಮ ಜ್ಞಾನಮುಪಾಸನಂಚ ಶರಣಂ ವ್ರಜ್ಯೇತಿ ಚಾವಸ್ಥಿತಾನ್
ಸನ್ಮಾರ್ಗಾನಪವರ್ಗ ಸಾಧನವಿಧೌ ಸದ್ವಾರಕಾದ್ವಾರಕಾನ್ ॥
ಏಕದ್ವ್ಯಾಕೃತಿ ಯೋಗಸಂಭೃತ ಪೃಥಗ್ಭಾವಾನುಭಾವಾನಿಮಾನ್ ।
ಸಮ್ಯಕ್ಪ್ರೇಕ್ಷ್ಯ ಶರಣ್ಯ ಸಾರಥಿ ಗಿರಾಮನ್ತ್ಯೇ ರಮನ್ತ್ಯೇ ಬುಧಾಃ ॥**

ಹೀಗೆ ಹೆಚ್ಚು ಮಹಿಮೆಯುಳ್ಳದಾದುದರಿಂದಲೇ ಮಹಾಪಂಡಿತರಾಗಿಯೂ ಜ್ಞಾನಿಗಳಾಗಿಯೂ ಇರುವ ಪೂರ್ವಾಚಾರ್ಯರು ಪ್ರಪತ್ತಿಯನ್ನೇ ಅಜ್ಞೀಕರಿಸಿದರು ಎಂದು "ಕರ್ಮ ಜ್ಞಾನಂ" ಎಂಬ ಶ್ಲೋಕದಿಂದ ಉಪದೇಶಿಸುತ್ತಾರೆ.

ಅರ್ಥ—ಅಪವರ್ಗ ಸಾಧನವಿಧೌ - ಮೋಕ್ಷಕ್ಕೆ ಸಾಧನಗಳನ್ನು ವಿಧಿಸುವ ಶಾಸ್ತ್ರದಲ್ಲಿ, **ಸದ್ವಾರಕಾದ್ವಾರಕಾನ್** - ಸದ್ವಾರಕಗಳಾಗಿಯೂ ಅದ್ವಾರಕಗಳಾಗಿಯೂ, **ಅವಸ್ಥಿತಾನ್** – ಇರುವ ಎಂದರೆ ಹೇಳಲ್ಪಟ್ಟಿರುವ, **ಕರ್ಮ** - ಕರ್ಮಯೋಗವು, **ಜ್ಞಾನಂ** - ಜ್ಞಾನಯೋಗವು, **ಉಪಾಸನಂಚ** - ಭಕ್ತಿಯೋಗರೂಪ ಉಪಾಸನವೂ ಕೂಡ, ಮತ್ತು **ಶರಣಂ ವಜ್ಯಚ** - ಶರಣಾಗತಿಯೂ ಕೂಡ, **ಇತಿ** - ಎಂಬದಾಗಿ, **ಅವಸ್ಥಿತಾನ್** - ಇರುವ, **ಸನ್ಮಾರ್ಗಾನ್** - ಸಮೀಚೀನವಾದ ಮೋಕ್ಷಸಾಧನ ಮಾರ್ಗಗಳನ್ನು (ಇವುಗಳಲ್ಲಿ ಕರ್ಮಯೋಗ ಜ್ಞಾನಯೋಗಗಳೆರಡೂ ಸದ್ವಾರಕಗಳಾಗಿ ಉಪಾಯಗಳು, ಭಕ್ತಿಯೋಗವಾದ ಉಪಾಸನವು ಅದ್ವಾರಕವಾಗಿ ಉಪಾಯವು ಎಂಬ ಭಾವವು.) **ಏಕದ್ವ್ಯಾಕೃತಿಯೋಗ ಸಂಭೃತ ಪೃಥಗ್ಭಾವಾನುಭಾವಾನ್, ಏಕಾಕೃತಿ** - ಒಂದಾದ ಆಕಾರವೇನು, **ದ್ವ್ಯಾಕೃತಿ** – ಎರಡು ಆಕಾರವೇನು, ಆಕಾರವೆಂದರೆ ಇಲ್ಲಿ ವ್ಯಾಪಾರವೆಂಬ ಭಾವವು, ಸ್ವಾತಂತ್ರ್ಯ ಪಾರತಂತ್ರ್ಯರೂಪವಾಗಿರುವ ಭಾವವು. ಕೆಲವುಗಳಿಗೆ ಪಾರತಂತ್ರ್ಯ ರೂಪವೇ, ಇನ್ನೊಂದಕ್ಕೆ ಸ್ವಾತಂತ್ರ್ಯ ರೂಪವೇ ಹೀಗೆ ಒಂದೇ ಆಕಾರವೇ ಕೆಲವುಗಳಿಗೆ ಎಂಬ ಭಾವವು ಇನ್ನೊಂದಕ್ಕೆ ಸ್ವಾತಂತ್ರ್ಯಪಾರತಂತ್ರ್ಯವೆರಡೂ ಉಂಟು ಎಂಬ ಭಾವವು. ಇವುಗಳು ಯಾವುವು ಎಂದರೆ ಕರ್ಮಜ್ಞಾನಯೋಗಗಳಿಗೆ ಕೇವಲ ಪಾರತಂತ್ರ್ಯರೂಪವು ಮಾತ್ರವೇ. ಉಪಾಸನಕ್ಕೆ ಸ್ವಾತಂತ್ರ್ಯ ರೂಪವು ಮಾತ್ರವೇ; ಶರಣಾಗತಿಗೆ ಎರಡು ರೂಪವೂ ಉಂಟು; ಹೇಗೆಂದರೆ, ಭಕ್ತಿಯೋಗದಲ್ಲಿ ಅಂಗವಾಗಿ ಪಾರತಂತ್ರ್ಯರೂಪವೂ, ಪ್ರಪತ್ತಿಯಲ್ಲಿ; ಅಜ್ಞಿಯಾಗಿ ಸ್ವಾತಂತ್ರ್ಯ ರೂಪವೂ ತೋರಿಬರುತ್ತವೆ. ಇಂತಹ **ಏಕದ್ವ್ಯಾಕೃತಿ**-ಒಂದಾದ ಮತ್ತು ಎರಡಾದ ಆಕಾರಗಳ, **ಯೋಗ**-ಸಂಬಂಧದಿಂದ, **ಸಂಭೃತ** - ಸಂಪಾದಿಸಲ್ಪಟ್ಟ ಎಂದರೆ ಉಂಟಾದ, **ಪೃಥಗ್ಭಾವ**-ಅಂಗಿಯಾಗಿ ಸ್ವತಂತ್ರವಾಗಿರುವ ಭಾವ, **ಅನುಭವಾನ್** - ಅಂಗ

ಇತಿ ಶ್ರೀ ಕವಿತಾರ್ಕಿಕಸಿಂಹಸ್ಯ ಸರ್ವತನ್ತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಉಪಾಯವಿಭಾಗಾಧಿಕಾರೋ ನವಮಃ

ಶ್ರೀಮತೇ ನಿಗಮಾನ್ತ ಮಹಾ ದೇಶಿಕಾಯ ನಮಃ

ವಾಗಿ ಪರತಂತ್ರವಾಗಿರುವ ಭಾವ, ಇವುಗಳಾದ, ಇವರ್ಗ - ಈ ವೈಲಕ್ಷಣ್ಯಗಳನ್ನೂ ಸಮ್ಯಕ್ಸ್ವೀಕ್ಷ್ಯ - ಚೆನ್ನಾಗಿ ವಿಮರ್ಶಿಸಿ ನೋಡಿ, ಶರಣ್ಯಸಾರಥಿಗಿರಾಂ - ಶರಣಹೊಂದಲು ಯೋಗ್ಯನಾಗಿ ಅರ್ಜುನ ಲೀಲಾಸಾರಥಿಯಾದ ಶ್ರೀ ಕೃಷ್ಣನ ವಾಕ್ಯವಾದ ಶ್ರೀ ಭಗವದ್ಗೀತೆಯ, ಅನ್ತೇ - ಕೊನೆಯಲ್ಲಿರುವ ಚರಮ ಶ್ಲೋಕದಲ್ಲಿ, ಬುಧಾಃ - ನಮ್ಮ ಪೂರ್ವಾಚಾರ್ಯರಂತಹ ಮಹಾಪ್ರಾಜ್ಞರು, ರಮನ್ತೇ-ವಿಹರಿಸುತ್ತಾರೆ, ಎಂದರೆ ಆದರದಿಂದ ಪರಿಗ್ರಹಿಸುತ್ತಾರೆ.

ತಾತ್ಪರ್ಯ—ಇಲ್ಲಿ ಮೋಕ್ಷಸಾಧನವಾದ ಉಪಾಯಗಳು ಕರ್ಮಯೋಗ, ಜ್ಞಾನಯೋಗಗಳಿಂದ ಕೂಡಿದ ಭಕ್ತಿಯೋಗವೂ ಮತ್ತು ಶರಣಾಗತಿಯೂ, ಹೀಗೆ ಇವೆರಡು ಸಾಧ್ಯೋಪಾಯಗಳು ಎಂದು ಹೇಳುವದಕ್ಕಾಗಿ ವಿಕಲ್ಪವನ್ನು ಪ್ರಕಟಿಸುವ "ಚ" ಕಾರವು ಎರಡುಸಲ ಉಪಯೋಗಿಸಲ್ಪಟ್ಟಿರುತ್ತದೆ:—**ಕರ್ಮ ಜ್ಞಾನಮುಪಾಸನಂಚ** - ಒಂದು ಮಾರ್ಗವು, **ಶರಣಂ ವ್ರಜ್ಯೇತಿಚ** - ಪ್ರಪತ್ತಿಯು ಇನ್ನೊಂದು ಮಾರ್ಗವು. ಇವುಗಳಿಗಿರುವ ವೈಲಕ್ಷಣ್ಯವನ್ನು ತೋರಿಸುತ್ತಾರೆ.

(೧) **ಕರ್ಮಯೋಗವು** - ಸದ್ವಾರಕವಾಗಿ ಮಾತ್ರವೇ ಉಪಾಯವು ಭಕ್ತಿಯೋಗಕ್ಕೆ ಅಙ್ಗವಾಗಿ ಸಾಧಕವು. ಜ್ಞಾನಯೋಗವೂ - ಸದ್ವಾರಕವಾಗಿ ಮಾತ್ರವೇ, ಭಕ್ತಿಯೋಗಕ್ಕೆ ಅಂಗವಾಗಿ ಸಾಧಕವು. **ಭಕ್ತಿಯೋಗವೂ** - ಅದ್ವಾರಕವಾಗಿ ಮಾತ್ರವೇ ಉಪಾಯವು.

(೨) **ಶರಣಾಗತಿಯಾದರೋ** - ಸದ್ವಾರಕವಾಗಿಯೂ ಅದ್ವಾರಕವಾಯೂ ಉಪಾಯವು. ಭಕ್ತಿಯೋಗಕ್ಕೆ ಅಂಗವಾಗಿ ಸದ್ವಾರಕವಾಗಿ ಉಪಾಯವು; ಸ್ವತಂತ್ರವಾಗಿಯೇ, ಅದ್ವಾರಕವಾಗಿ ಉಪಾಯವು.

ಹೀಗಿರುವದರಿಂದಲೇ

(೧) ಕರ್ಮಯೋಗವು - ಸದ್ವಾರಕತ್ವರೂಪೈಕಾಕೃತಿಯೋಗಸಂಭೃತಾನುಭಾವವುಳ್ಳದ್ದು ಎಂದರೆ ಹೀಗೆ ಸದ್ವಾರಕವಾಗಿರುವದರಿಂದಲೇ, ಒಂದಾದ ಆಕಾರದ ಸಂಬಂಧ ಉಳ್ಳದು ; ಅದು ಯಾವುದೆಂದರೆ, ಭಕ್ತಿಯೋಗಕ್ಕೆ ಅಂಗವಾಗಿರುವ ಭಾವವುಳ್ಳದ್ದು. ಹಾಗೆಯೇ, ಜ್ಞಾನಯೋಗವೂ - ಸದ್ವಾರಕತ್ವರೂಪೈಕಾಕೃತಿಯೋಗಸಂಭೃತಾನುಭಾವವುಳ್ಳದ್ದು. ಭಕ್ತಿಯೋಗವಾದರೋ - ಅದ್ವಾರಕತ್ವರೂಪೈಕಾಕೃತಿಯೋಗ ಸಂಭೃತ ಪೃಥಗ್ಭಾವವುಳ್ಳದ್ದು. ಅದೇ ಅಂಗಿಯಾದುದರಿಂದ ಸ್ವತಂತ್ರವಾಗಿ ಮಾತ್ರವೇ ಫಲಪ್ರದರೂಪವಾದ ಉಪಾಯವು. ಇದು ಸದ್ವಾರಕವಾಗಿ ಅನುಭಾವರೂಪ ಉಳ್ಳದಾಗುವದಿಲ್ಲವು.

(೨) ಶರಣಾಗತಿಯಾದರೋ - ಸದ್ವಾರಕತ್ವವೇನು, ಅದ್ವಾರಕತ್ವವೇನು, ಈ ಉಭಯಾಕೃತಿಯೋಗಸಂಭೃತ ಪೃಥಗ್ಭಾವವನ್ನೂ ಅನುಭಾವವನ್ನೂ ಉಳ್ಳದು. ಭಕ್ತಿಯೋಗಕ್ಕೆ ಸದ್ವಾರಕವಾಗಿ, ಅಂಗವಾಗಿರುವದರಿಂದ ಅನುಭಾವವನ್ನು ಉಳ್ಳದು ; ಅದ್ವಾರಕ ವಾಗಿ ಸ್ವತಂತ್ರವಾಗಿ ಫಲದಾಯಿಕವಾಗಿರುವದರಿಂದ ಪೃಥಗ್ಭಾವ ಉಳ್ಳದು ಎಂಬ ಭಾವವು.

ಹೀಗೆ ಪ್ರಪತ್ತಿಯು ಎರಡು ವಿಧವಾಗಿ ಪರಿಣಮಿಸುವದರಿಂದ ಭಕ್ತಿಮಾರ್ಗಕ್ಕಿಂತ ಹೆಚ್ಚು ವೈಲಕ್ಷಣ್ಯ ಉಳ್ಳದೆಂದು ಚೆನ್ನಾಗಿ ವಿಮರ್ಶಿಸಿ ತಿಳಿದು, ಮಹಾಪ್ರಾಜ್ಞರಾದವರು ಇದನ್ನೇ ಅವಲಂಬಿಸುತ್ತಾರೆ. ಹೀಗೆ ನಮ್ಮ ಪೂರ್ವಾಚಾರ್ಯರುಗಳು ಈ ಪ್ರಪತ್ತಿಯ ಮಾಹಾತ್ಮ್ಯವನ್ನರಿತು ಅನುಷ್ಠಿಸುವದಕ್ಕೆ ಕಾರಣವೇನೆಂದರೆ :- ಅರ್ಜುನಸಾರಥಿಯಾದ ಶ್ರೀಕೃಷ್ಣಪರಮಾತ್ಮನ ವಾಕ್ಯವಾದ ಚರಮಶ್ಲೋಕದ ಅರ್ಥಸ್ವಾರಸ್ಯವನ್ನು ವಿಮರ್ಶಿಸಿ ತಿಳಿದವರಾದ ಪ್ರಯುಕ್ತ ಶರಣಾಗತಿ ಮಾರ್ಗವನ್ನೇ ಅವರು ಅವಲಂಬಿಸಿದರೆಂದು ಹೇಳುತ್ತಾರೆ. ಸಾಧಾರಣ ಸಾರಥಿಯ ವಾಕ್ಯಾಗಿದ್ದರೆ ಅವರು ಅವಲಂಬಿಸುತ್ತಿರಲಿಲ್ಲವು ; ಸರ್ವರಕ್ಷಕನಾಗಿ ಲೀಲಾಸಾರಥಿಯಾದುದರಿಂದಲೇ ನಮ್ಮ ಆಚಾರ್ಯರುಗಳು ಹಾಗೆ ಅನುಷ್ಠಿಸಿದರು ಎಂಬ ಭಾವವು. ಹಾಗೆ ಶರಣ್ಯಸಾರಥಿಯ ವಾಕ್ಯವಾದುದರಿಂದಲೇ ಆ ವಾಕ್ಯದಲ್ಲಿ ಪ್ರಿಯತಮತ್ವವು ತೋರಿಬರುವದರಿಂದ "ಯದ್ಧಿತಂ ಮಮದೇವೇಶ ತದಾಜ್ಞಾಪಯ ಮಾಧವ" ಎಂದು ಹೇಳಿರುವ ಹಾಗೆ ವಿಶೇಷ ಹಿತವಾದುದನ್ನೇ ಆತನು ಹೇಳುವನಾದುದರಿಂದ, ಅಂತಹ ವಾಕ್ಯ ಪರಮಗ್ರಾಹ್ಯವೆಂಬ ಭಾವವು ತೋರಿಬರುತ್ತದೆ. ಹೀಗೆ ಪ್ರಪತ್ತಿಗೆ ಉಭಯಾಕಾರ ಉಂಟೆಂಬುವದನ್ನು ಪ್ರಭಾವವ್ಯವಸ್ಥಾಧಿಕಾರ

ದಲ್ಲಿ "ಸದುಷ್ಕರೇಣ ಶೋಚೇದ್ಯಃ" ಎಂಬ ಕಾರಿಕೆಯಿಂದ ವ್ಯಕ್ತಪಡಿಸುತ್ತಾರೆ.

ಇಂತು ಶ್ರೀಮದ್ರಹಸ್ಯತ್ರಯಸಾರದ, ಉಪಾಯವಿಭಾಗಾಧಿಕಾರವೆಂಬ
೯ ನೇ ಅಧಿಕಾರಕ್ಕೆ ತಿರುನಾರಾಯಣಪುರಂ ವಿಜಯರಾಘವ ಶರ್ಮನ
ಆಚಾರ್ಯಹೃದಯಾನ್ವೇಷಿಣೀ ಎಂಬ ಕನ್ನಡ ಅರ್ಥತಾತ್ಪರ್ಯಗಳು
ಸಮಾಪ್ತವಾದುವು.

ಶ್ರೀಮತೆ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತಮಹಾದೇಶಿಕಾಯ ನಮಃ

ಪ್ರಪತ್ತಿಯೋಗ್ಯಾಧಿಕಾರಃ. ೧೦.

ಅರ್ಥಿತ್ವೇನ ಸಮರ್ಥಿತಾ ತ್ರಿಕಕನುಸ್ಸಂಪಿಂಡಿತಾಧಿಕ್ರಿಯಾ
ಸಾಚಾಷ್ಟಾಙ್ಗ ಷಡಙ್ಗಯೋಗ ನಿಯತಾವಸ್ಥಾ ವ್ಯವಸ್ಥಾಪಿತಾ ।

ಹಿಂದಿನ ಅಧಿಕಾರದಲ್ಲಿ ಸಾಧ್ಯೋಪಾಯಗಳು ಸದ್ವಾರಕ ಅದ್ವಾರಕಪ್ರಪತ್ತಿಗಳೆಂದೂ, ಸದ್ವಾರಕಪ್ರಪತ್ತಿಯು ಕರ್ಮಯೋಗ ಜ್ಞಾನಯೋಗಗಳಿಂದ ಯುಕ್ತವಾದ ಭಕ್ತಿಯೋಗವೆಂದೂ, ಅವುಗಳ ಸ್ವರೂಪವೇಂಥಾದ್ದೆಂದೂ, ಅವುಗಳಿಂದ ಪರಜ್ಞಾನ ಪರಮಭಕ್ತಿ ಉಂಟಾಗಿ ಮೋಕ್ಷಪ್ರಾಪ್ತಿಯು ಲಭಿಸುತ್ತದೆಂದೂ ಹೇಳಿ, ಹಾಗೆಯೇ ಅದ್ವಾರಕಪ್ರಪತ್ತಿಯೂ ಕೂಡ ತುಲ್ಯಫಲವುಳ್ಳದ್ದೆಂದು, ಉಪಪಾದಿಸಿ ಅದಕ್ಕೆ ಶಾಸ್ತ್ರಪ್ರಮಾಣಗಳನ್ನು ತೋರಿ, ಉಕ್ತನಿಷ್ಠೆ ಆಚಾರ್ಯನಿಷ್ಠೆಗಳೂ ಕೂಡ ಪ್ರಪತ್ತಿಪ್ರಭೇದಗಳಾಗಿ ತುಲ್ಯಫಲದಾಯಕಗಳೆಂದೂ ಹೇಳಿ, ಭಕ್ತಿಮಾರ್ಗಕ್ಕಿಂತಲೂ ಪ್ರಪತ್ತಿಯು ಅತಿಶಯ ಮಹಿಮೆಯುಳ್ಳದ್ದೆಂದು ಉಪದೇಶಿಸಲ್ಪಟ್ಟಿತು.

ಈ ಅಧಿಕಾರದಲ್ಲಿ ಪ್ರಪತ್ತಿಗೆ ಯೋಗ್ಯರು ಯಾರು ಎಂಬುವದು ಚರ್ಚಿಸಲ್ಪಡುತ್ತದೆ. ಶಾರೀರಕ ಮೀಮಾಂಸಾ ಅಪಶೂದ್ರಾಧಿಕರಣರೀತ್ಯಾ, ಭಕ್ತಿಮಾರ್ಗರೂಪ ಉಪಾಸನೆಯಲ್ಲಿ ತ್ರೈವರ್ಣಿಕರಿಗೆ ಮಾತ್ರವೇ ಅಧಿಕಾರವು. ಹಾಗೆಯೇ ಪ್ರಪತ್ತಿಗೂ ಕೂಡ ತ್ರೈವರ್ಣಿಕರಿಗೆ ಮಾತ್ರವೇ ಅಧಿಕಾರವೇ, ಸ್ತ್ರೀಗಳು, ಶೂದ್ರಾದಿಗಳು ಮುಂತಾಗಿ ಎಲ್ಲರಿಗೂ ಅಧಿಕಾರ ಉಂಟೋ? ಎಂಬೀ ವಿಷಯಗಳು ಚನ್ನಾಗಿ ಚರ್ಚಿಸಲ್ಪಟ್ಟು, ಉಪಾಯಾನುಷ್ಠಾನಕ್ಕೆ ಬೇಕಾದ ಅರ್ಥಿತ್ವಸಾಮರ್ಥ್ಯವು,

ಶ್ರೌತೀ ಸರ್ವಶರಣ್ಯತಾ ಭಗವತಸ್ಸ್ಮೃತ್ಯಾಪಿ ಸತ್ಯಾಪಿತಾ
ಸತ್ಯಾದಿಷ್ವಿವ ನೈಗಮೇಷ್ವಧಿಕೃತಿಸ್ಸರ್ವಾಸ್ಪದೇ ಸತ್ಪಥೇ ॥ ೨೪ ॥

ಎಲ್ಲರಲ್ಲೂ ಇರುವದರಿಂದ, ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರ ಉಂಟೆಂದು ಸಾಧಿಸುತ್ತಾರೆ. ಹಾಗೆ ಅಧಿಕಾರ ಉಂಟಾಗಲು ಅಧಿಕಾರಿಯಲ್ಲಿ ಆಕಿಂಚನ್ಯವೂ, ಅನನ್ಯಗತಿತ್ವವೂ ಇರಬೇಕೆಂಬುವದನ್ನೂ ತಿಳಿಸುತ್ತಾರೆ.

ಅವತಾರಿಕೆ:—ಈ ಮೇಲಿನ ಅಭಿಪ್ರಾಯವಾದ ಪ್ರಪತ್ತಿಗೆ ಸರ್ವಾಧಿಕಾರತ್ವ ಉಂಟೆಂಬುವದನ್ನು ಈ ಸಙ್ಗ್ರಹಶ್ಲೋಕದಿಂದ ಸಮರ್ಥನೆಮಾಡಿ ಹೇಳುತ್ತಾರೆ:-

ಅರ್ಥ :— ಅರ್ಥಿತ್ವೇನ - ಫಲಾಪೇಕ್ಷೆಯಿಂದ, ಸಂಪಿಂಡಿತಾ - ಕೂಡಿದ, ತ್ರಿಕತನುಃ - ಮೂರು ಅಂಶಗಳುಳ್ಳ, ಸಮರ್ಥತಾ - ಸಾಮರ್ಥ್ಯವು, ಮೂರು ಅಂಶಗಳಲ್ಲಿ ಸಾಮರ್ಥ್ಯವು ಯಾವುವೆಂದರೆ :—(೧) ಶಾಸ್ತ್ರದಲ್ಲಿ ಹೇಳಿರುವ ಕರ್ಮದ ಯಥಾವತ್ತಾದ ಜ್ಞಾನವು ಇದೊಂದು ಸಾಮರ್ಥ್ಯವು; (೨) ಅದನ್ನನುಷ್ಠಿಸುವ ಶಕ್ತಿಯು, ಇದು ಎರಡನೇ ಸಾಮರ್ಥ್ಯವು; (೩) ಶಾಸ್ತ್ರದಲ್ಲಿ ಹೇಳಿರುವ ಜಾತಿ ಗುಣ ಮೊದಲಾದ ಯೋಗ್ಯತೆಯು. ಇದು ಮೂರನೇ ಸಾಮರ್ಥ್ಯವು. ಸಾಮರ್ಥ್ಯವು ಈ ಮೂರನ್ನೂ ಒಳಗೊಂಡಿರಬೇಕು. ಒಂದೆರಡು ಅಂಶಗಳು ಮಾತ್ರವೇ ಇದ್ದರೆ ಸಾಮರ್ಥ್ಯ ಪೂರ್ಣವಲ್ಲವೆಂಬ ಭಾವವು. ಹೀಗೆ ಫಲಾಪೇಕ್ಷೆಯಿಂದ ಕೂಡಿ ಈ ಮೂರನ್ನೂ ಹೊಂದಿರುವ ಸಾಮರ್ಥ್ಯವೇ, ಅಧಿಕ್ರಿಯಾ - ಈ ಭಕ್ತಿಪ್ರಪತ್ತಿಗಳೆರಡಕ್ಕೂ, ಅಧಿಕಾರವು. ಸಾಚ - ಆ ಸಾಮಾನ್ಯಾಧಿಕಾರವಾದರೋ, ಅಷ್ಟಾಂಗ ಷಡಂಗಯೋಗ ನಿಯತಾವಸ್ಥಾ - ಭಕ್ತಿಮಾರ್ಗದಲ್ಲಿ, ಯಮನಿಯಮ ಪ್ರಾಣಾಯಾಮ ಪ್ರತ್ಯಾಹಾರ ಧಾರಣ ಧ್ಯಾನ ಸಮಾಧಿಗಳೆಂಬ ಎಂಟು ಅಂಗಗಳಿಂದ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಅವಸ್ಥೆಯುಳ್ಳದ್ದು; ಪ್ರಪತ್ತಿಮಾರ್ಗದಲ್ಲಿ, ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ಮಹಾವಿಶ್ವಾಸ, ಗೋಪ್ತೃತ್ವವರ್ಣನ, ಕಾರ್ಪಣ್ಯ, ಆತ್ಮನಿಕ್ಷೇಪಗಳೆಂಬ ಆರು ಅಂಶಗಳುಳ್ಳದೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟ ಅವಸ್ಥೆಯುಳ್ಳದ್ದು, ಎಂಬದಾಗಿ, ವ್ಯವಸ್ಥಾಪಿತಾ - ಶಾಸ್ತ್ರಜ್ಞರಿಂದ ನಿರ್ಣಯಿಸಲ್ಪಟ್ಟದುದಾಗಿರುತ್ತದೆ. ಹಾಗಾದರೆ ಶ್ರುತಿಸ್ಮೃತಿ ಪ್ರತಿಪಾದ್ಯವೋ ಎಂದರೆ ಹೌದು ಎಂದು ಹೇಳುತ್ತಾರೆ, ಭಗವತಃ - ಭಗವಂತನ, ಸರ್ವಶರಣ್ಯತಾ - ಸರ್ವರಿಗೂ ಶರಣ್ಯನು ಎಂದರೆ ರಕ್ಷಕನಾಗಿರುವ ಭಾವವು, ಶ್ರೌತೀ - ಶ್ರುತಿಪ್ರತಿಪಾದ್ಯವಾದುದು ಮತ್ತು, ಸ್ಮೃತ್ಯಾಪಿ - ಸ್ಮೃತಿಯಿಂದಲೂ ಕೂಡ, ಸತ್ಯಾಪಿತಾ - ಸಮರ್ಥನೆ ಮಾಡಲ್ಪಟ್ಟಿರುವಂಥಾದ್ದು. ನೈಗಮೇಷು - ಶ್ರುತಿಗಳಲ್ಲಿ ಹೇಳಿರುವ,

ಸತ್ಯಾದಿಷ್ವಿವ - ಸತ್ಯಂವದ ಧರ್ಮಂಚರ ಮೊದಲಾದ ವಾಕ್ಯಗಳಲ್ಲಿ ಹೇಳಿರುವ ಸತ್ಯ ಧರ್ಮಾದಿಗಳು ಹೇಗೋ ಹಾಗೆ, **ಸರ್ವಾಶ್ರಯದೇಃ** - ಸರ್ವರಿಂದಲೂ ಆಶ್ರಯಿಸಲು ಯೋಗ್ಯವಾದ, **ಸತ್ಪಥೇ** - ಈ ಉತ್ಕೃಷ್ಟ ಮಾರ್ಗವಾದ ಪ್ರಪತ್ತಿಯಲ್ಲೂ ಕೂಡ **ಅಧಿಕೃತಿಃ** - ಸರ್ವರಿಗೂ ಅಧಿಕಾರವು ಉಂಟು.

ತಾತ್ಪರ್ಯವು :—ಭಕ್ತಿಯಲ್ಲಾಗಲಿ ಪ್ರಪತ್ತಿಯಲ್ಲಾಗಲಿ ಅಧಿಕಾರ ಉಂಟಾಗಬೇಕಾದರೆ ಅಧಿಕಾರಿಗಳಲ್ಲಿರಬೇಕಾದ ಸಾಮಾನ್ಯಧರ್ಮಗಳ್ಯಾವುವೆಂದರೆ :—(೧) ಅರ್ಥಿತ್ವವು, (೨) ಸಾಮರ್ಥ್ಯವು. ಅರ್ಥಿತ್ವವೆಂದರೆ ಮೋಕ್ಷಾಪೇಕ್ಷೆಯು. ಸಾಮರ್ಥ್ಯವು **ತ್ರಿಕತನಃ** - ಮೂರು ವಿಧವಲ್ಲೂ ಇರಬೇಕು. ಈ ಭಕ್ತಿಪ್ರಪತ್ತಿಗಳ ಯಥಾವತ್ತಾದ ಶಾಸ್ತ್ರಜ್ಞಾನವು, ಅವುಗಳನ್ನನುಷ್ಠಿಸುವ ಶಕ್ತಿ, ಮತ್ತು ಯೋಗ್ಯತೆಯು. ಭಕ್ತಿಮಾರ್ಗದಲ್ಲಿ ಉಪಾಸಕನು ಜ್ಞಾನವೂ ಅದನ್ನನುಷ್ಠಿಸುವ ಶಕ್ತಿಯೂ, ತ್ರೈವರ್ಣಿಕರಲ್ಲಿ ಒಬ್ಬನಾಗಿ ಬ್ರಾಹ್ಮಣ ಕ್ಷತ್ರಿಯ ಅಥವಾ ವೈಶ್ಯಜಾತಿಯವನಾಗಿರಬೇಕು. ಫಲವು ಪ್ರಾರಬ್ಧಕರ್ಮಾನುಭವಾನಂತರವೆಂದೂ ತಿಳಿದಿರಬೇಕು. ಪ್ರಪತ್ತಿಯಲ್ಲಿ, ಅದರ ವಿಷಯವಾದ ಜ್ಞಾನ, ಅದನ್ನನುಷ್ಠಿಸಲು ಶಕ್ತಿ, ಆಕಿಂಚನ್ಯ ಅನನ್ಯಗತಿರೂಪವಾದ ಯೋಗ್ಯತೆಯೂ ಇದ್ದರೆ ಅಧಿಕಾರ ಉಂಟಾಗುತ್ತದೆ. ಫಲವು ಶೀಘ್ರದಲ್ಲೇ ದೇಹಾವಸಾನಾನಂತರದಲ್ಲೇ ಎಂದೂ ತಿಳಿದಿರಬೇಕು. ಹೀಗೆ ಎರಡಕ್ಕೂ ಸಾಮಾನ್ಯಾಧಿಕಾರಕ್ಕೆ ಅರ್ಥಿತ್ವ ಸಾಮರ್ಥ್ಯಗಳು ಅಂಗಗಳು. ಅಧಿಕಾರಕ್ಕೆ ವಿಶೇಷಭಾವಗಳ್ಯಾವುವು ಎಂದರೆ :— ಭಕ್ತಿಯೋಗಕ್ಕೆ ಅಷ್ಟಾಂಗವೂ, ಪ್ರಪತ್ತಿಗೆ ಷಡಂಗವು ಎಂಬದಾಗಿ ಶಾಸ್ತ್ರಜ್ಞರಿಂದ ನಿರ್ಣಯಿಸಲ್ಪಟ್ಟಿವೆ. ಭಕ್ತಿಮಾರ್ಗಕ್ಕೆ ಯಮನಿಯಮಾದಿ ಅಂಗಗಳೆಂದೂ ಪ್ರಪತ್ತಿಗೆ ಆನುಕೂಲ್ಯಸಂಕಲ್ಪಾದಿಗಳು ಅಂಗಗಳೆಂದೂ ಶ್ರುತಿಸ್ಮೃತಿಪುರಾಣಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಭಕ್ತಿಮಾರ್ಗದಲ್ಲಿ ಮಾತ್ರ ಸರ್ವರಿಗೂ ಅಧಿಕಾರವಿಲ್ಲವು, ಅದು ಬ್ರಹ್ಮವಿದ್ಯೆಯಾದುದರಿಂದ ತ್ರೈವರ್ಣಿಕರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರವೇ ಅಧಿಕಾರವೇ ವಿನಾ, ಶೂದ್ರಾದಿಗಳಿಗಿಲ್ಲವು. ಈ ಅಭಿಪ್ರಾಯವು ಮೀಮಾಂಸೆಯ ಅಪಶೂದ್ರಾಧಿಕರಣದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. "**ಶುಗಸ್ಯ ತದನಾದರ ಶ್ರವಣಾತ್**" (ಬ್ರ. ಸೂ. ೧-೩-೩೩) ಎಂಬ ಸೂತ್ರಭಾಷ್ಯದಲ್ಲಿ ಶ್ರೀ ಭಾಷ್ಯಕಾರರು "ಅರ್ಥಿತ್ವಸಾಮರ್ಥ್ಯ ಪ್ರಯುಕ್ತತ್ವಾದಧಿಕಾರಸ್ಯ" ಎಂದು ಹೇಳಿ ಅಧಿಕಾರಕ್ಕೆ ಅರ್ಥಿತ್ವಸಾಮರ್ಥ್ಯವೆರಡೂ ಇರಬೇಕೆಂದುಪದೇಶಿಸಿ, ಅನಂತರ ಶೂದ್ರಾದಿಗಳಿಗೆ ಬ್ರಹ್ಮವಿದ್ಯೆಯಾದ ಭಕ್ತಿಯೋಗದಲ್ಲಿ ಅಧಿಕಾರವಿಲ್ಲವೆಂದು ಹೇಳಲು ಹೊರಟ, ಶೂದ್ರಾದಿಗಳಿಗೆ ವೇದಾಧ್ಯಯನವಿಲ್ಲದುದರಿಂದ ಸಾಮರ್ಥ್ಯವಿಲ್ಲವು. ಆದದರಿಂದ "**ಶೂದ್ರಸ್ಯ ಬ್ರಹ್ಮೋಪಾಸನಸಾಮರ್ಥ್ಯಾಸಂಭವಃ**" ಶೂದ್ರನಿಗೆ ಪರಬ್ರಹ್ಮನನ್ನುಪಾಸನೆ ಮಾಡುವ ಸಾಮರ್ಥ್ಯವಿಲ್ಲವೆಂದು

ಹೇಳಿರುತ್ತಾರೆ. ಆದರೆ ಶ್ರುತಿಯಲ್ಲಿ ಜಾನಶ್ರುತಿ ಎಂಬ ರಾಜನನ್ನು ಮಹಾ ಬ್ರಹ್ಮವಿತ್ತಾದ ರೈಕ್ವರು ಹೇಶೂದ್ರ ಎಂದು ಸಂಬೋಧಿಸಿ ಬ್ರಹ್ಮವಿದ್ಯೆಯನ್ನುಪದೇಶಿಸಲಿಲ್ಲವೇ ಎಂದರೆ, ಜಾನಶ್ರುತಿಯು ಕ್ಷತ್ರಿಯನೆಂದು ಹೇಳಲ್ಪಟ್ಟಿರುವದರಿಂದ ಬ್ರಹ್ಮವಿದ್ಯೆಯಿಲ್ಲವೇ ಎಂಬ ಶುಕ್ ಶೋಕವು ಜಾನಶ್ರುತಿಯನ್ನು ಬಾಧಿಸಿತಾದುದರಿಂದ ಶೂದ್ರನೆಂಬ ಸಂಬೋಧನೆಯೇ ವಿನಾ, ಜಾತಿಮೂಲಕವಾಗಿ ಅಲ್ಲವೆಂದು ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಉಪನಯನ ವೇದಾಧ್ಯಯನಗಳು ಶೂದ್ರಾದಿಗಳಿಗಿಲ್ಲವಾದುದರಿಂದ ಉಪಾಸನಾರೂಪ ಬ್ರಹ್ಮವಿದ್ಯೆಯೂ ಅವರಿಗೆ ನಿಷೇಧಿಸಲ್ಪಟ್ಟಿರುತ್ತದೆ. ಇದರಿಂದ ಅವರಿಗೇನೊಂದೂ ಕೊರತೆಯಿಲ್ಲವು. ಅದರಿಂದುಂಟಾಗುವ ಫಲವನ್ನೇ ಸುಲಭವಾಗಿಯೂ ಕ್ಷಿಪ್ರವಾಗಿಯೂ ಪ್ರಪತ್ತಿಯು ಕೊಡುವದರಿಂದ ಈ ಸುಲಭೋಪಾಯವನ್ನು ಅವರುಗಳು ಅವಲಂಬಿಸಬಹುದು. ಹಾಗೆಯೇ ಸ್ತ್ರೀಗಳಿಗೂ ಮತ್ತು ಉಪಾಸನೆಗೆ ಅಶಕ್ತರಾದ ತ್ರೈವರ್ಣಿಕರಿಗೂ, ಹಾಗೆಯೇ ಸರ್ವರಿಗೂ ಕೂಡ ಯೋಗ್ಯವಾದ ಮಾರ್ಗವಾಗಿರುತ್ತದೆ. ಈ ಅಭಿಪ್ರಾಯವನ್ನೇ ಉತ್ತರಾರ್ಧದಿಂದ ಸಮರ್ಥನೆಮಾಡಿ ಹೇಳುತ್ತಾರೆ.

ಪ್ರಪತ್ತಿಗೆ ಸರ್ವಾಧಿಕಾರ ಉಂಟು. ಎಲ್ಲರೂ ಅದನ್ನು ಅನುಷ್ಠಿಸಬಹುದು. ಹಾಗೆ ಹೇಳಲು ಪ್ರಮಾಣ ಉಂಟೋ ಎಂದರೆ, ಅದಕ್ಕೆ ಸಮಾಧಾನ ಹೇಳುತ್ತಾರೆ. ಇಲ್ಲಿ "ಭಗವತಃ ಸರ್ವಶರಣ್ಯತಾ" ಎಂಬುವದು ಕಾಕಾಕ್ಷಿ ನ್ಯಾಯಪ್ರಕಾರ ಮಧ್ಯದಲ್ಲಿರುವದರಿಂದ ಶ್ರುತಿಃ - ಎಂಬುವದಕ್ಕೂ ಸ್ಮೃತ್ಯಾಪಿಸತ್ಯಾಪಿತಾ ಎಂಬುವದಕ್ಕೂ ಅನ್ವಯಿಸಿಕೊಳ್ಳತಕ್ಕದ್ದು. ಹೇಯಪ್ರತ್ಯನೀಕನಾಗಿ ಕಲ್ಯಾಣ ಗುಣಾಕರನಾಗಿರುವ ಶ್ರಿಯಃಪತಿಯು ಸರ್ವಶರಣ್ಯತೆಯು ಸರ್ವರಿಗೂ ರಕ್ಷಕನಾಗಿರುವ ಭಾವವು ಶ್ರುತಿಃ – ಶ್ರುತಿಪ್ರತಿಪಾದ್ಯವಾದುದು. "ಸರ್ವಸ್ಯ ಶರಣಂ ಸುಹೃತ್" ಸಮಸ್ತರಿಗೂ ಗತಿಯು ಮತ್ತು ಸ್ನೇಹಿತನು ಎಂದು ಶ್ವೇತಾಶ್ವತರದಲ್ಲಿ ಹೇಳಿರುತ್ತದೆ. ಅಂತಹ ಸರ್ವಶರಣ್ಯತೆಯೇ ಸ್ಮೃತ್ಯಾಪಿ ಸತ್ಯಾಪಿತಾ, ಸ್ಮೃತಿಯಿಂದಲೂ ಸ್ಥಾಪಿಸಲ್ಪಟ್ಟಿರುತ್ತದೆ. ವಾಲ್ಮೀಕಿಮಹರ್ಷಿಯು "ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ" ಎಂಬ ವಿಭೀಷಣೋಕ್ತಿಯಿಂದ ವ್ಯಕ್ತಪಡಿಸಿರುತ್ತಾರೆ; ಮತ್ತು ಸರ್ವೇಶ್ವರನಾದ ಶ್ರೀರಾಮನ ಶಪಥರೂಪವಾಕ್ಯವಾದ "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ಎಂಬಲ್ಲಿ, ಸರ್ವಭೂತೇಭ್ಯಃ- ಎಂಬುವದರಿಂದ "ಸರ್ವಸ್ಯ ಶರಣಂ ಸುಹೃತ್" ಎಂಬ ಶ್ರುತಿಯು ಉಪಬ್ರಹ್ಮಣ ಮಾಡಲ್ಪಟ್ಟಿತು. ಹಾಗೆಯೇ ಅಹಿರ್ಬುಧ್ನ್ಯ ಸಂಹಿತೆಯಲ್ಲೂ

"ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾನ್ತರೈಃ ।
ಮುಮುಕ್ಷುಣಾ ಯತ್ಸಾಂಖ್ಯೇನ ನ ಯೋಗೇನ ನ ಭಕ್ತಿತಃ ।

ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ।
ಪರಮಾತ್ಮಾ ಚ ತೇನೈವ ಪ್ರಾಪ್ಯತೇ ಪುರುಷೋತ್ತಮಃ''

ಅಹಿ ೩೭-೨೫.

''ಕಾಮ್ಯಫಲಗಳಲ್ಲಿ ಆಶೆಯುಳ್ಳ ಯಾವ ಮನುಷ್ಯನಿಂದ, ಇತರೋಪಾಯಗಳಿಂದ ಸಾಧಿಸಲು ಶಕ್ಯವಿಲ್ಲದವು ಯಾವುವು ಇವೆಯೋ, ಮೋಕ್ಷಾರ್ಥಿಯಾದ ಯಾವ ಮನುಷ್ಯನಿಂದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳಿಂದಲೂ ಹೊಂದಲು ಸಾಧ್ಯವಲ್ಲವೋ ಅವೆಲ್ಲವೂ, ಆಯಾಯಾ ಮನುಷ್ಯನಿಂದ ಪ್ರಪತ್ತಿಯಿಂದಲೇ ಹೊಂದಲ್ಪಡುತ್ತವೆ. ಆ ನ್ಯಾಸನಿಷ್ಠೆಯಿಂದಲೇ ಪುರುಷೋತ್ತಮನಾದ ಪರಮಾತ್ಮನೂ ಕೂಡ ಹೊಂದಲ್ಪಡುವನು'' ಎಂದು ಹೇಳಿರುತ್ತದೆ. ಇಲ್ಲಿ ಕಾಮಕಾಮೇನ ಮುಮುಕ್ಷುಣಾ ಎಂದು ಹೇಳಿರುವವರಿಂದ ನ್ಯಾಸವಿದ್ಯೆಯಲ್ಲಿ ಸರ್ವಾಧಿಕಾರತ್ವವು ತೋರಿಬರುತ್ತದೆ. ಆದುದರಿಂದ ಈ ಲೋಕನಾಯಕನ ಸರ್ವಶರಣ್ಯತೆಯು ಶ್ರುತಿ ಸ್ಮೃತ್ಯಾದಿಗಳಲ್ಲಿ ಪ್ರತಿಪಾದಿತವಾದವಾಗಿರುತ್ತದೆ. ಹೀಗೆ ಪ್ರಪತ್ತಿಯು ಶ್ರುತಿ ಪ್ರತಿಪಾದ್ಯವಾದುದಾದರೆ, ಶ್ರುತಿಯಲ್ಲಧಿಕಾರವು ತ್ರೈವರ್ಣಿಕರಿಗೆ ಮಾತ್ರವೇ ಇರುವದರಿಂದ, ಪ್ರಪತ್ತಿಮಾರ್ಗದಲ್ಲಿ ಸರ್ವರಿಗೂ ಅಧಿಕಾರ ಹೇಗೆ ಎಂಬಾಕ್ಷೇಪವು ಉಂಟಾಗಬಹುದು. ಹಾಗೆ ಶ್ರುತಿಪ್ರತಿಪಾದ್ಯವಾದರೂ ಪ್ರಪತ್ತಿಗೆ ಸರ್ವಾಧಿಕಾರತ್ವ ಉಂಟೆಂಬ ಸಮಾಧಾನವನ್ನು ಒಂದು ದೃಷ್ಟಾಂತಮುಖೇನ ಹೇಳುತ್ತಾರೆ. ಸತ್ಯಾದಿಷ್ವನ್ಯೈಗತೋಽಪಿ-ನಿಗಮವೆಂದರೆ ವೇದವು; ''ಸತ್ಯಂವದ'' ಮುಂತಾದ ವಾಕ್ಯವು ವೇದದಲ್ಲಿ ಹೇಳಿದ್ದರೂ ಶೂದ್ರರು ಮೊದಲಾದ ಎಲ್ಲರಿಗೂ ಹೇಗೆ ಅನ್ವಯಿಸುತ್ತದೋ, ಹಾಗೆಯೇ ''ಸರ್ವಸ್ಯಶರಣಂಸುಹೃತ್'' ಎಂಬುವದೂ ಕೂಡ ಎಲ್ಲರಿಗೂ ಅನ್ವಯಿಸುತ್ತದೆ. ಸತ್ಯವನ್ನು ಹೇಳುವದು ಮೂರು ವರ್ಣದವರೇ ಹೇಳತಕ್ಕದ್ದು, ಶೂದ್ರನು ಅನೃತಹೇಳಬಹುದೆಂಬುವದು ಹೇಗೆ ಸರಿಯಲ್ಲವೋ, ಹಾಗೆಯೇ ಸರ್ವೇಶ್ವರನು ಸರ್ವರಿಗೂ ಸುಹೃತ್ತೂ ಮತ್ತು ರಕ್ಷಕನಾಗಿರುವಾಗ, ತ್ರೈವರ್ಣಿಕರಿಗೆ ಮಾತ್ರವೇ ಸುಹೃತ್ತೂ ರಕ್ಷಕನೂ, ಶೂದ್ರಾದಿಗಳಿಗೆ ಮಾತ್ರ ಅಲ್ಲವೆಂಬ ಯೋಜನೆಯು ಯುಕ್ತವಲ್ಲವೆಂಬಭಿಪ್ರಾಯವು. ಆದುದರಿಂದ ಸರ್ವರೂ ಗುರುಮುಖೇನ ಸರ್ವರಕ್ಷಕನಲ್ಲಿ ಶಾಸ್ತ್ರರೀತ್ಯಾ ಶರಣಾಗತಿಯನ್ನನುಷ್ಠಿಸಬಹುದೆಂಬ ತಾತ್ಪರ್ಯವು. ಆ ಕಾರಣದಿಂದಲೇ ಈ ಸತ್ಪಥವು ಸರ್ವಾಸ್ಪದವಾದುದೆಂದು ದೃಢೀಕರಿಸಿ ಹೇಳಿರುತ್ತಾರೆ.

ಆದರೆ ನಮ್ಮಲ್ಲೇ ಕೆಲವರು ಪ್ರಪತ್ತಿಯಲ್ಲಿ ತ್ರೈವರ್ಣಿಕರಿಗೆ ಮಾತ್ರವೇ ವಿನಾ ಇತರರಿಗೆ ಅಧಿಕಾರವಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಇದು ಶಾಸ್ತ್ರಸಮ್ಮತವಾದ ಅಭಿಪ್ರಾಯವಲ್ಲವೆಂದು ಮುಂದೆ ವ್ಯಕ್ತಪಡಿಸುತ್ತಾರೆ.

ಪ್ರಪತ್ತ್ಯಧಿಕಾರಿಣಾ ಜ್ಞಾತವ್ಯಾಂಶ ಕಥನಂ

ಇಪ್ಪಡಿ ಅಭಿಮತ ಫಲತ್ತುಕ್ಕು ಉಪಾಯಾನ್ತರ ನಿಸ್ಪೃಹನಾಯ್ ನ್ಯಾಸವಿದ್ಯೈಯಿಲೇ ಇಳಿಯುಮವನುಕ್ಕು ಇವಿದ್ಯೈಕ್ಕು ಅಧಿಕಾರ ವಿಶೇಷಮ್ ಮುದಲಾನವೈ ಇರುಕ್ಕುಮ್ ಪಡಿ ಯರಿಯವೇಣುಮ್.

ಪ್ರಪತ್ತಿಮಾರ್ಗದಲ್ಲಿ ಪ್ರವರ್ತಿಸುವವನು ಏನೇನು ವಿಷಯಗಳನ್ನು ತಿಳಿಯತಕ್ಕದ್ದೆಂಬುದನ್ನು ಸೂಚಿಸುತ್ತಾರೆ. **ಇಪ್ಪಡಿ** - ಹೀಗೆ; ಹೇಗೆಂದರೆ ಮುಂದೆ ಅವರೇ ವಿಶದೀಕರಿಸುತ್ತಾರೆ:— **ಅಭಿಮತಫಲತ್ತುಕ್ಕು** - ತನಗೆ ಇಷ್ಟವಾದ ಫಲಕ್ಕೆ, **ಉಪಾಯಾನ್ತರನಿಸ್ಪೃಹನಾಯ್** - ಭಕ್ತಿಮಾರ್ಗವೇ ಮೊದಲಾದ ಇತರ ಉಪಾಯಗಳಲ್ಲಿ ಸ್ವಲ್ಪವೂ ಆಶೆಯಿಲ್ಲದವನಾಗಿ, ಇದರಿಂದ ಅಧಿಕಾರಿಯ ಅಶಕ್ತತೆಯು ಸೂಚಿಸಲ್ಪಟ್ಟಿತು; ಹೀಗೆ ಭಕ್ತಿಮಾರ್ಗವೇ ಮೊದಲಾದ ಬೇರೆ ಉಪಾಯಗಳನ್ನವಲಂಬಿಸಲು ಶಕ್ತಿಯಿಲ್ಲದವನಾಗಿ, **ನ್ಯಾಸವಿದ್ಯೈಯಿಲೆ** - ಪ್ರಪತ್ತಿವಿದ್ಯೆಯಲ್ಲಿ, ಪ್ರಪತ್ತಿಯಲ್ಲಿ ನನ್ನ ಆತ್ಮವನ್ನೂ ಶ್ರೀಯಃಪತಿಯ ಚರಣಾರವಿಂದದಲ್ಲಿ ಇಡುವದರಿಂದ ಅದಕ್ಕೆ ನ್ಯಾಸವಿದ್ಯೆಯೆಂದಾಗಲಿ, ಅಥವಾ ಆತನು ರಕ್ಷಿಸಿಯೇ ರಕ್ಷಿಸುವನೆಂಬ ಪೂರ್ಣಭರವನ್ನು ಆತನಲ್ಲಿಡುವದರಿಂದಲಾಗಲಿ, ಇದಕ್ಕೆ ನ್ಯಾಸವಿದ್ಯೆಯೆಂದು ಹೆಸರು. ಈ ಎರಡನೇ ಅರ್ಥವೇ ಸರಿಯಾಗಿ ತೋರುತ್ತದೆ; ಏಕೆಂದರೆ ಈ ನ್ಯಾಸ ಅಥವಾ ಪ್ರಪತ್ತಿಗೆ, ಭರನ್ಯಾಸವೆಂಬ ಹೆಸರೂ ಕೂಡ ಸಾಮಾನ್ಯವಾಗಿ ಉಂಟು. ಈ ಪ್ರಪತ್ತಿಯನ್ನು ನ್ಯಾಸವಿದ್ಯೆ ಎಂದು ಹೇಳಿರುವದರಿಂದ, ಪ್ರಪತ್ತಿಯೂ ಕೂಡ ಉಪಾಸನದಹಾಗೆ ಜ್ಞಾನರೂಪವಾದುದು ಎಂದುಮವೇ ತಿಳಿಸಿದಹಾಗಾಯಿತು. ಹೀಗೆ ನ್ಯಾಸವಿದ್ಯೆಯಲ್ಲಿ **ಇಳಿಯುಮವನುಕ್ಕು** - ಪ್ರವರ್ತಿಸುವವನಿಗೂ, ಈ ವಿದ್ಯೆಗೆ, ಅಧಿಕಾರ ವಿಶೇಷವೇನು, **ಇನ್ನೈಮುದಲಾನವೈ** - ಇವೇ ಮೊದಲಾದವುಗಳನ್ನು, ಮೊದಲಾದವುಗಳು ಎಂದು ಹೇಳಿರುವದರಿಂದ ಮುಂದಿನ ಎರಡು ಅಧಿಕಾರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪರಿಕರಗಳು, ಯಾವ ಯಾವ ಪರಿಕರಗಳಿದ್ದರೆ ಸಾಂಗಪ್ರಪದನವಾಗುತ್ತದೆ, ಇವೇ ಮೊದಲಾದವುಗಳು **ಇರುಕ್ಕುಮ್‌ಪಡಿ** - ಅವುಗಳ ಯಥಾರ್ಥಸ್ಥಿತಿಯು, **ಅರಿಯವೇಣುಮ್** - ತಿಳಿಯತಕ್ಕದ್ದು. ಇಲ್ಲಿ ಇವೈ ಮೊದಲಾನವೈ ಅರಿಯವೇಣುಂ ಎಂದು ಇಷ್ಟು ಮಾತ್ರ ಹೇಳದೆ, ಅವುಗಳ **ಇರುಕ್ಕುಮ್ ಪಡಿ** ಎಂದು ಪ್ರಯೋಗಿಸಿರುವದರಿಂದ ಇವುಗಳ ವಿಷಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳುಂಟಾಗಿವೆ ಎಂದೂ ಆದಕ್ಕಾಗಿ ಅವುಗಳ ಯಥಾವಸ್ಥಿತ ಅಭಿಪ್ರಾಯಗಳನ್ನು ಸಮೀಚೀನವಾದ ನ್ಯಾಯದಿಂದ

ಸಾಮಾನ್ಯತಃ ಅಧಿಕಾರಸ್ವರೂಪಂ

ಅಧಿಕಾರಮಾವದು ? ಅನ್ವೋ ಫಲೋಪಾಯುಙ್ಗಳಿಲೇ ಪ್ರವೃತ್ತಿ

ಕೂಡಿದ ಪ್ರಮಾಣಗಳಿಂದಲೂ, ಸತ್ಸಂಪ್ರದಾಯಗಳಿಂದಲೂ ಅದರ ಯಥಾರ್ಥವಾದ ಆಕಾರಗಳನ್ನು ತಿಳಿಯಬೇಕೆಂಬ ಭಾವವು. ಹಾಗೆ ತಿಳಿಯಬೇಕೆಂಬ ಆವಶ್ಯಕವೇನು ಎಂದರೆ, "**ಪ್ರಯೋಜನಮನುದ್ದಿಶ್ಯ ಮನ್ದೋಽಪಿ ಪ್ರವರ್ತತೇ**" "ಒಂದು ಪ್ರಯೋಜನದ ಉದ್ದೇಶ್ಯವಿಲ್ಲದೆ ಯಾವ ಮಂದಬುದ್ಧಿಯುಳ್ಳವನೂ ಕೂಡ ಪ್ರವರ್ತಿಸುವದಿಲ್ಲವು" ಎಂಬ ನ್ಯಾಯಪ್ರಕಾರ, ಪ್ರಯೋಜನ ತಿಳಿಯದೆ ಯಾರೂ ಯಾವ ಉಪಾಯದಲ್ಲೂ ಪ್ರವರ್ತಿಸಲಾರರು. ಹಾಗೆ ಪ್ರಯೋಜನ ತಿಳಿದ ನಂತರವೂ, ಆ ಉಪಾಯವೇಂಥಾದ್ದೆಂದು ತಿಳಿಯಬೇಕು. ಉಪಾಯವೆಂಥಾದ್ದೆಂದು ತಿಳಿದರೂ ತನಗೆ ಆ ಉಪಾಯಾನುಷ್ಠಾನದಲ್ಲಿ ಸಾಮರ್ಥ್ಯವುಂಟೇ ಇಲ್ಲವೆ ಎಂದು ತಿಳಿಯಬೇಕು. ಆದುದರಿಂದ ನ್ಯಾಸವಿದ್ಯೆಯೂ ಕೂಡ ಜ್ಞಾನರೂಪವಾದುದು. ಇಲ್ಲಿ ಜ್ಞಾತವ್ಯಾಂಶಗಳು ಯಾವುವೆಂದರೆ:—ಪ್ರಪತ್ತಿಗೆ ಯೋಗ್ಯನಾಗಿ ಅಧಿಕಾರಿಯಾಗಲು ಯಾವ ವಿಶೇಷ ಧರ್ಮಗಳಬೇಕು, ಇದು ಈ ಅಧಿಕಾರದಲ್ಲಿ ಚರ್ಚಿಸಲ್ಪಡುವದು. (೨) ಈ ಪ್ರಪತ್ತಿಗೆ ಅಙ್ಗಗಳು, ಪರಿಕರಗಳು ಯಾವುವು, ಇವು ಮುಂದಿನ ಅಧಿಕಾರದಲ್ಲಿ ಹೇಳಲ್ಪಡುವುವು. (೩) ಪ್ರಪದನದ ಸಾಂಗಾನುಷ್ಠಾನ ಪ್ರಕಾರ ಹೇಗೆ, ಇದು ಅದರ ಮುಂದಿನ ಅಧಿಕಾರದಲ್ಲಿ ಉಪಪಾದಿಸಲ್ಪಡುವದು. ಹೀಗೆ ಇವೆಲ್ಲಾ ತಿಳಿಯತಕ್ಕವುಗಳೆಂದು ಪ್ರಥಮದಲ್ಲಿ ಸಙ್ಗ್ರಹವಾಗಿ ಸೂಚಿಸಿರುತ್ತಾರೆ ಇಂತಹ ಜ್ಞಾನವೆಲ್ಲಾ ಹೇಗೆ ಆವಶ್ಯಕವೆಂದರೆ, ಅಂತಹ ಜ್ಞಾನವಿಲ್ಲದಿದ್ದರೆ ಅಧಿಕಾರಕ್ಕೆ ಯೋಗ್ಯವಾದ ಉಪಾಯದಲ್ಲಿ ಪ್ರವೃತ್ತಿಯೇ ಉಂಟಾಗಲಾರದು. ಆದುದರಿಂದ ಈ ಜ್ಞಾನವೆಲ್ಲಾ ಆವಶ್ಯಕವಾಗಿ ಬೇಕು ಎಂಬ ಭಾವವು

ಅಧಿಕಾರದ ಸಾಮಾನ್ಯ ಧರ್ಮಗಳು.

ಮೊದಲು ಸಾಮಾನ್ಯವಾಗಿ ಅಧಿಕಾರಕ್ಕೆ ಬೇಕಾದ ಧರ್ಮಗಳಾವುವೆಂದು ಸೂಚಿಸಿ, ತದನಂತರ ಅವುಗಳು ಪ್ರಪತ್ತಿಯಲ್ಲಿ ಯಾವ ವಿಶೇಷಭಾವಗಳನ್ನು ಹೊಂದುತ್ತವೆ ಎಂಬುವದನ್ನು ಸೂಚಿಸುತ್ತಾರೆ. **ಅಧಿಕಾರಮಾವದು** - ಅಧಿಕಾರವೆಂಥಾದ್ದು ? **ಅನ್ವೋ ಫಲೋಪಾಯುಙ್ಗಳಿಲೇ** - ಆಯಾಯಾ ಫಲಗಳೇನು, ಅವುಗಳಿಗೆ ಸಾಧಕಗಳಾದ ಉಪಾಯಗಳೇನು, ಇವುಗಳಲ್ಲಿ **ಪ್ರವೃತ್ತಿ**

ನಾವ್ ಪುರುಷನುಕ್ಕು ಫಲತ್ತಿಲ್ ಅರ್ಥಿತ್ವಮುಮ್, ಉಪಾಯತ್ತಿಲ್ ಸಾಮರ್ಥ್ಯಮುಮ್.

ಇವತ್ತಿಲ್ ಸಾಮರ್ಥ್ಯಮಾವದು ? ಶಾಸ್ತ್ರಾರ್ಥತ್ತೈಯರಿಕೈಯುಮ್, ಅರಿನ್ದಪಡಿ ಯನುಷ್ಠಿಕ್ಕವಲ್ಲನಾಕೈಯುಮ್, ಶಾಸ್ತ್ರಾನುಮತ ಜಾತಿಗುಣಾದಿ ಯೋಗ್ಯತೈಯುಮ್

ನಾವ್ ಪುರುಷನುಕ್ಕು - ಪ್ರವರ್ತಿಸುವ ಪುರುಷನಿಗೆ, **ಫಲತ್ತಿಲ್ ಅರ್ಥಿತ್ವಮುಮ್** - ಫಲದಲ್ಲಿ ಅಪೇಕ್ಷೆಯೂ, **ಉಪಾಯತ್ತಿಲ್ ಸಾಮರ್ಥ್ಯಮುಮ್** - ಉಪಾಯಾನುಷ್ಠಾನದಲ್ಲಿ ಸಾಮರ್ಥ್ಯವೂ ; ಅಧಿಕಾರವೆಂಥಾದ್ದೆಂದರೆ, ಫಲದಲ್ಲಿ ಆಶೆಯನ್ನೂ, ಉಪಾಯಾನುಷ್ಠಾನಕ್ಕೆ ಸಾಮರ್ಥ್ಯವನ್ನು ಹೊಂದಿರುವದೇ ಅಧಿಕಾರವೆಂದು ಸಾಮಾನ್ಯತಃ ಹೇಳಿದರು. ಈ ಎರಡೂ ಆವಶ್ಯಕವು, ಒಂದೇಯಾದರೆ ಅಧಿಕಾರ ಉಂಟಾಗುವದಿಲ್ಲವೆಂಬ ಭಾವವು. ಹೇಗೆಂದರೆ ಒಂದು ಮನೆಯನ್ನು ಕಟ್ಟಬೇಕೆಂಬ ಅಧಿಕಾರಕ್ಕೆ, ಮನೆಯನ್ನು ಕಟ್ಟಿ ಅದರಲ್ಲಿ ವಾಸಮಾಡಬೇಕೆಂಬ ಅಪೇಕ್ಷೆಯೂ, ದ್ರವ್ಯಾದಿರೂಪ ಸಾಮರ್ಥ್ಯವೂ ಇರಬೇಕು. ದ್ರವ್ಯಾದಿಗಳಿದ್ದು ಆಶೆಯಿಲ್ಲದಿದ್ದರೂ, ಆಶೆಯಿದ್ದು ದ್ರವ್ಯಾದಿಗಳಿಲ್ಲದಿದ್ದರೂ, ಅಧಿಕಾರವು ಉಂಟಾಗುವದಿಲ್ಲವು. ಹಾಗೆಯೇ ಇಲ್ಲಿಯೂ ಎಂದು ತಿಳಿಯುವದು. ಮುಂದೆ ಸಾಮರ್ಥ್ಯವು ಎಂಥಾದ್ದೆಂಬುವದನ್ನೂ, ಹಿಂದೆ ತ್ರಿಕತನುಃ - ಎಂದು ಹೇಳಿರುವಹಾಗೆ ಮೂರು ವಿಧವಾದುದೆಂಬುವದನ್ನೂ ವ್ಯಕ್ತಪಡಿಸುತ್ತಾರೆ.

ಇವತ್ತಿಲ್-ಇವೆರಡಾದ ಅರ್ಥಿತ್ವಸಾಮರ್ಥ್ಯದಲ್ಲಿ, **ಸಾಮರ್ಥ್ಯಮಾವದು ?** ಸಾಮರ್ಥ್ಯವೆಂದರೇನು ? ಅದಕ್ಕೆ ಉತ್ತರವನ್ನು ಹೇಳುತ್ತಾರೆ. **ಶಾಸ್ತ್ರಾರ್ಥತ್ತೈಯರಿಕೈಯುಮ್** - ಶಾಸ್ತ್ರಾರ್ಥವನ್ನು ತಿಳಿಯುವದು, ಆ ಉಪಾಯಕ್ಕೆ ಅಂಗಿಯಾವುದು, ಅಙ್ಗಗಳು ಯಾವುವು ಎಂದು ತಿಳಿಯುವದು (೨) **ಅರಿನ್ದಪಡಿಯನುಷ್ಠಿಕ್ಕವಲ್ಲನಾಕೈಯುಮ್** - ಹಾಗೆ ತಿಳಿದುದಕ್ಕನುಗುಣವಾಗಿ ನಡಿಸುವ ಅರ್ಹತೆಯನ್ನು ಹೊಂದಿರುವಿಕೆಯೂ, ಮತ್ತು (೩) **ಶಾಸ್ತ್ರಾನುಮತ ಜಾತಿಗುಣಾದಿ ಯೋಗ್ಯತೈಯುಮ್** - ಶಾಸ್ತ್ರದಲ್ಲಿ ಅಂಗೀಕರಿಸಲ್ಪಟ್ಟ ಜಾತಿ, ಗುಣವೇ ಮೊದಲಾದ ಯೋಗ್ಯತೆಯನ್ನು ಹೊಂದಿರುವದೂ ; ಇಲ್ಲಿ ಆದಿ ಶಬ್ದದಿಂದ ಸದಾಚಾರ ಮೊದಲಾದವು ಹೇಳಲ್ಪಟ್ಟವು. ಸಾಮರ್ಥ್ಯವು ಈ ಮೇಲೆ ಹೇಳಿದ ಮೂರನ್ನೂ ಒಳಗೊಂಡಿರಬೇಕೆಂದೂ ಒಂದೊಂದೇ ಇದ್ದರೂ ಸಾಲದೆಂಬಭಿಪ್ರಾಯವು ಇಂತಹ ಸಾಮರ್ಥ್ಯವು ಭಕ್ತಿಪ್ರಪತ್ತಿಗಳೆರಡಕ್ಕೂ ಸಮಾನವಾದುದು.

ಪ್ರಪತ್ತ್ಯಧಿಕಾರಸ್ಯ ಪ್ರಾಕ್ಸಿದ್ಧತ್ವಂ

ಇವ್ವಧಿಕಾರಮ್ ಮುನ್ನೇ ಸಿದ್ಧಮಾಯಿರುಕ್ಕೈಯಾಲ್.

ಫಲಸ್ಯಾನುವಾದ್ಯತ್ವಂ ಉಪಾಯಸ್ಯ ವಿಧೇಯತ್ವಂ

ಇದುಡೈಯವನುಕ್ಕು ಪ್ರಯೋಜನಮಾಯ್ ಕೊಣ್ಡು ಸಾಧ್ಯಮಾಕ ಅನುವದಿಕ್ಕಪ್ಪಡುಮದು ಫಲಮ್; ತದರ್ಥಮಾಕ ಸಾಧ್ಯಮಾಕ ವಿಧಿಕ್ಕಪ್ಪಡುಮದು ಉಪಾಯಮ್.

ಪ್ರಪತ್ತ್ಯಧಿಕಾರವು ಮೊದಲೇ ಸಿದ್ಧವಾದುದು.

ಆದರೆ ಪ್ರಪತ್ತಿಯು ಭಕ್ತಿಮಾರ್ಗಕ್ಕೆ ಅಂಗವು. ಅನುಷ್ಠಾನ ಸಙ್ಕಲ್ಪಾನಂತರ ಭಕ್ತ್ಯುಪಾಯದಲ್ಲಿ ಪ್ರವೇಶವೂ, ಉಪಾಸನವು ಸಿದ್ಧಿಸಿದರೆ ಪ್ರಪತ್ತಿಯಲ್ಲಿ ಅಧಿಕಾರವೂ ಉಂಟಾಗುತ್ತದೆ. ಈ ಸ್ವತಂತ್ರ ಪ್ರಪತ್ತಿಯಲ್ಲಿ ತುಲ್ಯ ಫಲಪ್ರಾಪ್ತಿಯು ಪ್ರಯೋಜನವಿರುವದರಿಂದ, ಈ ಅಧಿಕಾರವು ಬೇರೆರೂಪವಾದುದು. ಇದರಲ್ಲಿ ವೈಲಕ್ಷಣ್ಯ ಉಂಟೆಂದು "ಇವ್ವಧಿಕಾರಮ್" ಎಂಬ ವಾಕ್ಯದಿಂದ ತೋರ್ಪಡಿಸುತ್ತಾರೆ. **ಇವ್ವಧಿಕಾರಮ್** - ಈ ಸ್ವತಂತ್ರ ಪ್ರಪತ್ತಿಯಲ್ಲಿ ಅಧಿಕಾರವು, **ಮುನ್ನೇ** - ಭಕ್ತಿಮಾರ್ಗದಲ್ಲಿ ಅನುಷ್ಠಾನ ಸಙ್ಕಲ್ಪಾನಂತರ ಪ್ರಾಪ್ತವಾಗುವ ಹಾಗೆಯಲ್ಲದೆ, ಮುನ್ನೇ ಅನುಷ್ಠಾನ ಸಙ್ಕಲ್ಪಕ್ಕೆ ಪೂರ್ವಭಾವಿಯಾಗಿಯೇ, **ಸಿದ್ಧಮಾಯಿರುಕ್ಕೈಯಾಲ್** - ಸಿದ್ಧವಾದುದಾಗಿರುತ್ತದೆ. ಭಕ್ತ್ಯುಪಾಯದಲ್ಲಿ ವಿಧಿವ್ಯಾಪಾರಗಳಿಗೆ ವಿಧೇಯವಾಗಿರುವದರಿಂದ, ಅಲ್ಲಿ ಪ್ರಪತ್ತ್ಯನುಷ್ಠಾನಕ್ಕೆ ಅಧಿಕಾರವು ಉತ್ಪನ್ನವಾಗುತ್ತದೆ. ಇಲ್ಲಿ ಯಾದರೋ ಸ್ವತಃ ಸಿದ್ಧವಾಗಿರುವದರಿಂದ, ಸಿದ್ಧಮಾಯಿರುಕ್ಕೈಯಾಲ್ ಎಂಬ ಪ್ರಯೋಗವು. ಇದೀಗ ಈ ಪ್ರಪತ್ತ್ಯಧಿಕಾರಕ್ಕೆ ವೈಲಕ್ಷಣ್ಯವು ಎಂಬ ಭಾವವು.

ಫಲವು ವಿಧಿವಾಕ್ಯಕ್ಕೆ ಸೇರಿದುದಲ್ಲವು. ಉಪಾಯವು ವಿಧಿಗೆ ಒಳಪಟ್ಟುದು.

ಇದುಡೈಯವನುಕ್ಕು - ಈ ಅಧಿಕಾರ ಹೊಂದಿದವನಿಗೆ, **ಪ್ರಯೋಜನಮಾಯ್ ಕೊಣ್ಡು** - ಪ್ರಯೋಜನರೂಪವಾಗಿ, ಎಂದರೆ ವಿಧಿವ್ಯಾಪಾರದಿಂದುಂಟಾಗದೆ ಸ್ವತಃ ಉಂಟಾಗುವ ಅಭಿಲಾಷೆಯಿಂದಲೇ ಪ್ರಾಪ್ತವಾಗುವದರಿಂದ, ಸಾಧ್ಯ

ಪ್ರಪತ್ತೇಃ ಅಧಿಕಾರ ವಿಶೇಷವರ್ಣನಂ

ಇಙ್ಗ ಮುಮುಕ್ಷುಕ್ಕಳ್ ಮುಣ್ಣಾಯ್ ಸ್ವತಂತ್ರ ಪ್ರಪತ್ತಿರೂಪ ಮೋಕ್ಷೋಪಾಯ ವಿಶೇಷನಿಷ್ಠರುಕ್ಕು ಶಾಸ್ತ್ರಜನ್ಯ ಸಮ್ಯಗ್ಜ್ಞಾನಾದಿಗಳ್ ಉಪಾಸಕರೋಡು ಸಾಧಾರಣಮಾಯಿರುಕ್ಕ, ವಿಶೇಷಿತ್ತ ಅಧಿಕಾ

ಮಾಕ - ಸಾಧಿಸಲು ಯೋಗ್ಯವಾಗಿ **ಫಲಂ** - ಫಲವು ಅಪೇಕ್ಷಿಸಲ್ಪಡುವುದು - ಸ್ವತಃ ಪ್ರಾಪ್ಯವಾಗುವದು, ತದರ್ಥಮಾಕ ಆ ಫಲಪ್ರಾಪ್ತಿಯ ಪ್ರಯೋಜನಕ್ಕಾಗಿ, ಉಪಾಯಮ್-ಉಪಾಯವು, ಸಾಧ್ಯಮಾಗ ಸಾಧ್ಯವಾದುದಾಗಿ, ವಿಧಿಕ್ಕಪಡುವದು-ಶಾಸ್ತ್ರದಲ್ಲಿ ವಿಧಿಸಲ್ಪಟ್ಟದ್ದಾಗಿರುತ್ತದೆ. ಈ ಮೇಲಿನ ವಾಕ್ಯದಿಂದ ಉಪಾಯ ಫಲಗಳಿರಡಕ್ಕು ಇರುವ ವ್ಯತ್ಯಾಸವನ್ನು ತಿಳಿಸಿರುತ್ತಾರೆ. ಫಲವು ಸಾಧ್ಯವಾದುದಾಗಿ ಅಪೇಕ್ಷ್ಯವು, ಉಪಾಯವು ಸಾಧ್ಯವಾದುದಾಗಿ ವಿಧೇಯವು. ಎರಡೂ ಸಾಧ್ಯವಾದುದಾದರೂ ಅವುಗಳಿಗೆ ವೈಲಕ್ಷಣ್ಯ ಉಂಟೆಂದು ತೋರ್ಪಡಿಸಿದರು. ಉಪಾಯವು ಫಲದೋಪಾದಿಯಲ್ಲಿ ಸ್ವತಃ ಮನೋಹರವಾದುದಲ್ಲವು: ಆದುದರಿಂದ ಅದರ ಸಾಧ್ಯತ್ವವು ಫಲಕ್ಕಾಗ ಮಾತ್ರವೇ, ಅದಕ್ಕಾಗಿಯೇ ಶಾಸ್ತ್ರದಲ್ಲಿ ವಿಧೇಯವಾದುದು ಎಂಬ ತಾತ್ಪರ್ಯವು.

ಹೀಗೆ ಅಧಿಕಾರ ಸಾಮಾನ್ಯ ಭಾವಗಳನ್ನು ಹೇಳಿ, ವಿಶೇಷ ಧರ್ಮಗಳು ಯಾವುವೆಂದುಪದೇಶಿಸುತ್ತಾರೆ:—

ಪ್ರಪತ್ತಿಯ ಅಧಿಕಾರ ವಿಶೇಷವು.

ಇಙ್ಗ - ಈ ಸಂದರ್ಭದಲ್ಲಿ, ಎಂದರೆ ಅಧಿಕಾರ ಸಾಮಾನ್ಯವು ನಿರೂಪಿಸಲ್ಪಟ್ಟದ್ದಾಗಿ. ಅಧಿಕಾರ ವಿಶೇಷವು ಯಾವುದು ಎಂಬ ಚರ್ಚೆಯ ಸಂದರ್ಭದಲ್ಲಿ, ಮುಮುಕ್ಷುತ್ವಮುಣ್ಣಾಯ್-ಮೋಕ್ಷಾಪೇಕ್ಷೆಯುಂಟಾಗಿ, ಸ್ವತಂತ್ರಪ್ರಪತ್ತಿರೂಪ ಮೋಕ್ಷೋಪಾಯ ನಿಷ್ಠರುಕ್ಕು - ಅವ್ಯಾರಕ ಪ್ರಪತ್ತಿ ರೂಪವಾದ ಮೋಕ್ಷೋಪಾಯವನ್ನವಲಂಬಿಸಿದವನಿಗೆ, ಶಾಸ್ತ್ರಜನ್ಯಸಮ್ಯಗ್ಜ್ಞಾನಾದಿಗಳ್ - ಶಾಸ್ತ್ರಾರ್ಥವನ್ನು ತಿಳಿದ ಜ್ಞಾನವೇ ಮೊದಲಾದುವುಗಳು ಆದಿಪದದಿಂದ ಸಾಮರ್ಥ್ಯವು ತ್ರೈವರ್ಣಿಕತ್ವ ಎಂದು ಹೇಳಿ, ಅವುಗಳು ಯಾವುವೆಂದು ವಿವರಿಸಿ ಹೇಳಿದ ಶಾಸ್ತ್ರಾರ್ಥವನ್ನು ತಿಳಿಯುವದು, ಆ ಜ್ಞಾನದ ಪ್ರಕಾರ ಅನುಷ್ಠಾನ, ಶಾಸ್ತ್ರದಲ್ಲಿ ಹೇಳಿರುವ ಹಾಗೆ ಯೋಗ್ಯತೆ, ಇವುಗಳು ಹೇಳಲ್ಪಟ್ಟವು. ಉಪಾಸಕರೋಡು ಸಾಧಾರಣಮಾಯಿರುಕ್ಕ - ಭಕ್ತಿಮಾರ್ಗವಾದ ಉಪಾಯವನ್ನವಲಂಬಿಸಿದವ

ರವರ್ ತನ್ನಲ್ಲಿರುವ ಆಕಿಂಚನ್ಯವನ್ನೂ, ಅನನ್ಯಗತಿತ್ವವನ್ನೂ. ಆಕಿಂಚನ್ಯವೆಂದರೇನು? ಉಪಾಯಾಂತರ ಸಾಮರ್ಥ್ಯಾಭಾವ. ಅನನ್ಯಗತಿತ್ವವೆಂದರೇನು? ಪ್ರಯೋಜನಾಂತರ ವೈರಾಗ್ಯ. ಶರಣ್ಯಾಂತರ ವೈಮುಖ್ಯಪೂರ್ವಕವಾದವು.

ನೆಂಬುದಕ್ಕೆ ಸಾಧಾರಣವಾಗಿ, ಹಿಂದೆ ಹೇಳಿದ ಸಾಮಾನ್ಯಾಧಿಕಾರವೇ ಪುನಃ ಪ್ರಪತ್ತಿನಿಷ್ಠನಿಗೆ ವಿಶೇಷಿತ್ವಾಧಿಕಾರವನ್ನು - ಅಧಿಕಾರ ವಿಶೇಷವು ಎಂದರೆ ಪ್ರಪನ್ನನಿಗೆ ಮಾತ್ರವೇ ಉಳ್ಳ ಅಧಿಕಾರವು ಯಾವುವೆಂದರೆ:— (೧) ಆಕಿಂಚನ್ಯವನ್ನು (೨) ಅನನ್ಯಗತಿತ್ವವನ್ನು. ಇವುಗಳ ಅಭಿಪ್ರಾಯವೇನೆಂಬುದನ್ನು ಮುಂದೆ ತಿಳಿಸುತ್ತಾರೆ. ಭಕ್ತಿಮಾರ್ಗವನ್ನವಲಂಬಿಸಿದವನಿಗೂ ಪ್ರಪತ್ತಿ ಮಾರ್ಗವನ್ನವಲಂಬಿಸಿದವನಿಗೂ ಮುಮುಕ್ಷುತ್ವರೂಪ ಅರ್ಥಿತ್ವವೂ ಸಾಧಾರಣವಾದುದು: ಶಾಸ್ತ್ರಜನ್ಯಜ್ಞಾನ, ಅದರ ಪ್ರಕಾರ ಅನುಷ್ಠಾನ, ಶಾಸ್ತ್ರದಲ್ಲಿ ಹೇಳಿರುವ ಜಾತ್ಯಾದಿ ನಿಯಮಗಳೊಂದಿಗೆ ಸೇರಿದ ಸಾಮರ್ಥ್ಯವೂ ಸಾಧಾರಣವಾದುದು. ಆದರೆ ವಿಶೇಷಾಧಿಕಾರವು ಯಾವುವೆಂದರೆ— (೧) ಆಕಿಂಚನ್ಯವು, ತನಗೆ ಇತರ ಉಪಾಯಗಳ ಅನುಷ್ಠಾನಕ್ಕೆ ಶಕ್ತಿಯಿಲ್ಲವೆಂಬುವದು, (೨) ಅನನ್ಯಗತಿತ್ವವು, ತನಗೆ ಬೇರೆ ಫಲದಲ್ಲಿ ಅಪೇಕ್ಷೆ ಪ್ರಯೋಜನವೂ ಬೇಕಿಲ್ಲವೆಂಬುವದು ಎಂಬದಾಗಿ ಹೇಳುತ್ತಾರೆ. ಈ ವಾಕ್ಯದಲ್ಲಿ ಶಾಸ್ತ್ರಜನ್ಯಜ್ಞಾನ ಸಂಬಂಧಾದಿಗಳ್ - ಎಂಬುವದಕ್ಕೆ ಸಾರಾಸ್ವಾದಿನೀ ವ್ಯಾಖ್ಯಾನದಲ್ಲಿ, ಶಾಸ್ತ್ರದಿಂದುಂಟಾಗುವ ಶೇಷತ್ವ ಪಾರತಂತ್ರ್ಯಾದಿಗಳೆಂದು ಅರ್ಥಮಾಡಿರುತ್ತಾರೆ. ಈ ಅಭಿಪ್ರಾಯವನ್ನೇ ಶ್ರೀಮಾನ್ ಶ್ರೀನಿವಾಸ ನರಸಿಂಹಾಚಾರ್ಯರವರು ಅನುಮೋದಿಸಿರುತ್ತಾರೆ. ಇದೂ ಸಾಭಿಪ್ರಾಯವಾಗಿರುತ್ತದೆ. ಈ ಅಭಿಪ್ರಾಯಗಳಾದ ಶೇಷತ್ವ, ಪಾರತಂತ್ರ್ಯಗಳು ಭಕ್ತಿಪ್ರಪತ್ತಿ ಎರಡು ಮಾರ್ಗಗಳಿಗೂ ಸಾಧಾರಣವಾದುವು. ಆದರೆ ಇದ ವಿತಕ್ಕೆ ಹೇಳಲ್ಪಟ್ಟಿತೆಂದರೆ- ಈ ಶೇಷತ್ವ ಪಾರತಂತ್ರ್ಯಗಳೇ ವಿಶೇಷಾಧಿಕಾರವನ್ನು ಬೋಧಿಸುತ್ತವೆಂದು ಹೇಳುವ ಅಭಿಪ್ರಾಯವು ಇದರಿಂದ, ಅವುಗಳು ವಿಶೇಷ ಧರ್ಮಗಳಲ್ಲವು, ಎಲ್ಲರಿಗೂ ಸಾಧಾರಣ ಧರ್ಮಗಳೆಂದು ಹೇಳುವದಕ್ಕಾಗಿಯೂ ವಿಶೇಷಾಧಿಕಾರವನ್ನು ಹೇಳುವದಕ್ಕಾಗಿಯೂ, ಶಾಸ್ತ್ರಜನ್ಯಜ್ಞಾನ ಸಂಬಂಧಾದಿಗಳ್ ಉಭಯಕ್ಕೂ ಇರುವ ಸಾಧಾರಣವಾಗಿರುತ್ತೆ ಎಂದು ಪ್ರಯೋಗಿಸಿರುತ್ತಾರೆಂಬ ಸಾಂಗತ್ಯವು ಇದರಿಂದ ಏರ್ಪಡುತ್ತದೆ.

ಆಕಿಂಚನ್ಯವಾವುದು ?- ಆಕಿಂಚನ್ಯವೆಂದರೇನು ? ಉಪಾಯಾಂತರ ಸಾಮರ್ಥ್ಯಾಭಾವಮ್ - ಬೇರೆ ಉಪಾಯವಾದ ಭಕ್ತಿಮಾರ್ಗದಲ್ಲಿ ಸಾಮರ್ಥ್ಯವಿಲ್ಲದಿರೋಣವು; ಅನನ್ಯಗತಿತ್ವವಾವುದು ? - ಅನನ್ಯಗತಿ ಭಾವವೆಂದರೇನು ?

ಪ್ರಯೋಜನಾನ್ತರವೈಮುಖ್ಯಂ - ಮೋಕ್ಷವಲ್ಲದ ಇತರ ಪ್ರಯೋಜನಗಳಲ್ಲಿ
ಆಶೆಯಿಲ್ಲದಿರೋಣವು. ಇಲ್ಲಿ ಗತಿಶಬ್ದವು, ಗಮ್ಯತೇ ಹೊಂದಲ್ಪಡುತ್ತದೆ ಎಂಬ
ರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ; "ಗತಿಶ್ಚಾಸಿ ಜಗತಾಂ" ಎಂಬಲ್ಲಿ ಉಪಯೋಗಿ
ಸಿರುವ ಹಾಗೆ ಗತಿ ಎಂದರೆ ಪ್ರಯೋಜನವು. ಆದುದರಿಂದ ಅನನ್ಯ ಗತಿತ್ವವೆಂದರೆ
ಮೋಕ್ಷವಲ್ಲದ ಬೇರೆ ಪ್ರಯೋಜನದಲ್ಲಿ ಆಶೆ ಇಲ್ಲದಿರುವ ಭಾವವು. ಗತಿ ಶಬ್ದಕ್ಕೆ
ಇನ್ನೊಂದು ವಿಧವಾದ ಯೋಜನೆಯಿಂದ ಇನ್ನೊಂದು ವಿಧವಾಗಿಯೂ ಅರ್ಥ ಹೇಳ
ಬಹುದೆಂದು ತಿಳಿಸುತ್ತಾರೆ. ಗಮ್ಯತೇಽನಯಾ ಎಂಬ ವ್ಯುತ್ಪತ್ತಿಯಿಂದ ಗತಿ
ಶಬ್ದವು ಪ್ರಾಪಕವೆಂಬರ್ಥವನ್ನು ಬೋಧಿಸಬಹುದು. ಇಲ್ಲಿ ಪ್ರಾಪಕನು, ಗುಪಂ
ನಾರಾಯಣನಾದುದರಿಂದ, ಅನನ್ಯ ಗತಿತ್ವವು ಅನನ್ಯ ಶರಣತ್ವವೆಂಬರ್ಥವನ್ನು
ಸೂಚಿಸುತ್ತದೆಂದು ಹೇಳುತ್ತಾರೆ. ಶರಣ್ಯಾನ್ತರ ವೈಮುಖ್ಯವೂ ಕವುದಾ
ವರ್ - ಶ್ರಿಯಃಪತಿಯೇ ನಮಗೆ ಶರಣ್ಯನು, ರಕ್ಷಕನೇ ವಿನಾ ಅನ್ಯದೇವತೆಗಳಲ್ಲ
ವಾದುದರಿಂದ ಅನ್ಯದೇವತೆಗಳಲ್ಲಿ ವೈಮುಖ್ಯವು ಎಂಬರ್ಥವೂ ಆಗಬಹುದು.
ವೈಮುಖ್ಯವೆಂದರೆ ವಿಮುಖನಾಗಿರುವ ಭಾವವು; ಪುರಸ್ಕರಿಸದೆ ಇರೋಣವು.
ನೀನೇ ಗತಿಯು ನನಗಿನ್ಯಾರೂ ಗತಿಯಿಲ್ಲವೆಂಬುವದು ಯಾವಾಗ ಆಯಿತೋ
ಆವಾಗ ಅನ್ಯದೇವತೆಗಳಾದ ಚತುರ್ಮುಖರುದ್ರೇಂದ್ರಾದಿಗಳನ್ನು ಆಶ್ರಯಿಸ
ಕೂಡದು. ಏಕೆಂದರೆ ಇವರಿಗೆ ಮೋಕ್ಷಕೊಡುವ ಶಕ್ತಿಯಿಲ್ಲವೆಂದು ಹಿಂದೆಯೇ ಪರ
ದೇವತಾಪಾರಮಾರ್ಥ್ಯಾಧಿಕಾರದಲ್ಲಿ ಹೇಳಲ್ಪಟ್ಟಿರುತ್ತದೆಯಷ್ಟೆ. ಹೀಗೆ ಗತಿಶಬ್ದವು
ಕರ್ಮವ್ಯುತ್ಪತ್ತಿಯಿಂದ ಫಲವನ್ನು, ಕರಣವ್ಯುತ್ಪತ್ತಿಯಿಂದ ಪ್ರಾಪಕನಾದ ಶ್ರೀಮ
ನ್ನಾರಾಯಣನನ್ನು ಬೋಧಿಸುತ್ತದೆ ಎಂಬ ತಾತ್ಪರ್ಯವು. ಗತಿಶಬ್ದಕ್ಕೆ ಸಾಧ್ಯೋ
ಪಾಯವೆಂಬರ್ಥವನ್ನು ಹೇಳಕೂಡದು. ಹಾಗೆ ಹೇಳುವದಾದರೆ ಆಕಿಂಚನ್ಯವೂ
ಅನನ್ಯಗತಿತ್ವವೂ ಎರಡೂ ಒಂದೇ ಅಭಿಪ್ರಾಯವುಳ್ಳವಾಗುತ್ತವೆ. ಆದುದರಿಂದ
ಗತಿಶಬ್ದಕ್ಕೆ ಸಿದ್ಧೋಪಾಯವೆಂಬರ್ಥವನ್ನು ಹೇಳಬಹುದು. ಹೀಗೆ ವಿಶೇಷಾಧಿ
ಕಾರಕ್ಕೆ ಇವೆರಡೂ ಆವಶ್ಯಕವು, ಒಂದೇ ಅಲ್ಲವು ಎಂದು ಸೂಚಿಸುವದಕ್ಕಾಗಿ
ಆಕಿಂಚನ್ಯಮುಮ್, ಅನನ್ಯಗತಿತ್ವಮುಮ್ ಎಂದ ಹೇಳಿದ್ದಾರೆ. ಆಕಿಂಚನ್ಯಂ
ಅನನ್ಯಗತಿತ್ವಂ ಎಂದು ಹೇಳಲಿಲ್ಲವು.

ಆದರೆ ಭಕ್ತಿಯೋಗದಲ್ಲಿ ಅಂಗರೂಪವಾದ ಪ್ರಪತ್ತ್ಯಧಿಕಾರಕ್ಕೆ ಆಕಿಂಚ
ನ್ಯವೂ ಅನನ್ಯ ಗತಿತ್ವವೂ ಇಲ್ಲವೋ ಎಂದರೆ, ಭಕ್ತ್ಯುಪಾಯದಿಂದಲೇ ಈ ಪ್ರಸಕ್ತಿ
ಯುಂಟಾಗುವದರಿಂದ ಆಕಿಂಚನ್ಯಭಾವವಿಲ್ಲವು. ವಿಳಂಬದಿಂದ ಮೋಕ್ಷಪ್ರಾಪ್ತಿ
ಯುಂಟಾಗುವದರಿಂದಲೂ, ಇತರ ಫಲಗಳಿಗಾಗಿಯೂ ಉಪಾಸನೆಯಲ್ಲಿ ಪ್ರವೃತ್ತಿ
ಯುಂಟಾಗುವದರಿಂದಲೂ, ಅಥವಾ ಇತರ ಫಲದಲ್ಲಿ ಆಸಕ್ತಿಯಿಲ್ಲದಿದ್ದರೂ ಪ್ರಾರ
ಬ್ಧವನ್ನು ಅನುಭವಿಸಲೇಬೇಕಾಗಿರುವದರಿಂದ ಪ್ರಾರಬ್ಧಸುಕೃತ ಫಲಭೂತವಾದ

ಇದು ಪ್ರಯೋಜನಾನ್ತರ ವೈಮುಖ್ಯತ್ತಾಲುಮ್ ಅರ್ಥಸಿದ್ಧಮ್. ಇವ್ವರ್ತ್ಥಂ (೧) "ಬ್ರಹ್ಮಾಣಂ ಶಿತಿಕಣ್ಠಂಚ ಯಾಶ್ಚಾನ್ಯಾ ದೇವತಾ

ಐಶ್ವರ್ಯಾದಿಗಳಲ್ಲಿ ಸಾಕಾಂಕ್ಷತ್ವವಿರುವದರಿಂದಲೂ, ಅನನ್ಯಗತಿತ್ವವಿಲ್ಲವೆಂದರಿಯಬೇಕು. ಸ್ವತಂತ್ರ ಪ್ರಪನ್ನನಲ್ಲಾದರೋ ತೀವ್ರವಾದ ಮೋಕ್ಷಾಪೇಕ್ಷೆಯಿರುವದರಿಂದ, ಇತರಾಪೇಕ್ಷೆಗಳೊಂದೂ ಇರುವದಿಲ್ಲವು. ಆದುದರಿಂದ ಅನನ್ಯಗತಿತ್ವವು ಸಿದ್ಧವು. ಇನ್ನು ಯಾವ ಉಪಾಯಾನುಷ್ಠಾನಕ್ಕೂ ಸಾಮರ್ಥ್ಯವಿಲ್ಲದುದರಿಂದ ಆಕಿಂಚನ್ಯವೂ ಸಹ ಸಿದ್ಧವು ಎಂಬ ತಾತ್ಪರ್ಯವು.

ಆದರೆ ಅನನ್ಯಗತಿತ್ವಕ್ಕೆ ಪ್ರಯೋಜನಾನ್ತರ ವೈಮುಖ್ಯವೆಂಬರ್ಥವನ್ನಾಗಲಿ, ಶರಣ್ಯಾನ್ತರ ವೈಮುಖ್ಯವೆಂಬರ್ಥವನ್ನಾಗಲಿ, ವಿಕಲ್ಪಿಸಿ ಹೇಳಬಹುದೆಂದಪ್ಪಣೆಕೊಡಿಸಿದರು. ಈ ಎರಡು ಭಾವಗಳಲ್ಲಿ ಯಾವುದಾದರೂ ಒಂದಭಿಪ್ರಾಯವು ಉಂಟಾದರೆ ಅನನ್ಯಗತಿತ್ವವೇ ಅಥವಾ ಎರಡು ಭಾವಗಳೂ ಅವಶ್ಯಕವೇ ಎಂಬ ಸಂದೇಹದಲ್ಲಿ, ಎರಡು ಭಾವವೂ ಅವಶ್ಯಕವೆಂದೂ ಮೊದಲಿನ ಭಾವದಿಂದ ಎರಡನೇ ಭಾವವು ಅರ್ಥಾತ್ ಸಿದ್ಧವೆಂದೂ "ಇದು ಪ್ರಯೋಜನಾನ್ತರ" ವೆಂಬ ವಾಕ್ಯದಿಂದ ಉಪಪಾದಿಸುತ್ತಾರೆ. ಇದು - ಈ ಶರಣ್ಯಾನ್ತರ ವೈಮುಖ್ಯವೆಂಬ ಭಾವವು, ಪ್ರಯೋಜನಾನ್ತರ ವೈಮುಖ್ಯತ್ತಾಲುಮ್ - ಮೋಕ್ಷವಲ್ಲದೆ ಬೇರೆ ಪ್ರಯೋಜನದಲ್ಲಿ ಅಪೇಕ್ಷೆಯಿಲ್ಲದುದರಿಂದಲೂ, ಅರ್ಥಸಿದ್ಧಮ್ - ಅರ್ಥಾತ್ ಸಿದ್ಧವು. ಯಾವಾಗ ಮೋಕ್ಷವಲ್ಲದ ಇತರ ತುಚ್ಛ ಪ್ರಯೋಜನಗಳಲ್ಲಿ ಈ ಸ್ವತಂತ್ರ ಪ್ರಪತ್ತಿನಿಷ್ಠನಿಗೆ ಈಷದಪಿ ಪ್ರೀತಿಯಿಲ್ಲವೋ, ಆ ಮೋಕ್ಷವನ್ನು ಕೊಡುವ ಶಕ್ತಿಯು ಶ್ರೀಮನ್ನಾರಾಯಣನಿಗೆ ಮಾತ್ರವೇ ಅಲ್ಲದೆ ಇತರರಿಗೆ ಯಾವಾಗ ಇಲ್ಲವೋ, ಆಗ ಶ್ರೀಮನ್ನಾರಾಯಣನನ್ನು ಬಿಟ್ಟು ಇತರ ದೇವತೆಗಳನ್ನು ಎಂದಿಗೂ ಆಶ್ರಯಿಸಲಾರನು. ಯಾರಿಗೆ ಶಕ್ತಿಯುಂಟೋ ಅವರನ್ನು ತಾನೇ ವಿವೇಕಿಯು ಆಶ್ರಯಿಸುವನು. ಆದುದರಿಂದ ಶರಣ್ಯಾನ್ತರ ವೈಮುಖ್ಯವು, ಅನ್ಯದೇವತಾಶ್ರಯಣದಲ್ಲಿ ವೈಮುಖ್ಯವು ಅರ್ಥಾತ್ ಸಿದ್ಧವೆಂಬ ಭಾವವು. ಆದುದರಿಂದ ಅನನ್ಯ ಪ್ರಯೋಜನನಾದ ಈ ಪ್ರಪನ್ನನಿಗೆ ದೇವತಾನ್ತರಾಶ್ರಯಣವು ಎಂದಿಗೂ ಇಲ್ಲವೆಂದು ಹೇಳಿದಂತಾಯಿತು. ಹಾಗೆ ದೇವತಾನ್ತರಾಶ್ರಯಣವನ್ನು ನಿಷೇಧಿಸಿರುವದಕ್ಕೆ ಮುಂದೆ ಪ್ರಮಾಣವನ್ನು ಭಾರತ ಶಾಂತಿಪರ್ವ ಶ್ಲೋಕದಿಂದ ಉದಾಹರಿಸುತ್ತಾರೆ. ಇವ್ವರ್ತ್ಥಂ - ಈ ಅಭಿಪ್ರಾಯವನ್ನು ಅನನ್ಯಗತಿತ್ವಕ್ಕೆ ದೇವತಾಂತರಾಶ್ರಯಣ ನಿಷೇಧವೆಂಬಭಿಪ್ರಾಯವನ್ನು "ಬ್ರಹ್ಮಾಣಂ" ಎಂಬ ಭಾರತ ಶ್ಲೋಕವೇ

---

(೧) ಭಾರ. ಶಾಂ. ೩೫೦-೩೬.

ಸ್ಮೃತಾಃ । ಪ್ರತಿಬುದ್ಧಾ ನ ಸೇವನ್ತೇ ಯಸ್ಮಾತ್ಪರಿಮಿತಂ ಫಲಂ" ಇತ್ಯಾದಿಗಳಿಲೇ ಕಣ್ಣುಕೊಳ್ಳುವದು.

ಮುಂತಾದವುಗಳಲ್ಲಿ ಕಣ್ಣುಕೊಳ್ಳುದು - ತಿಳಿದುಕೊಳ್ಳುವದು. ಆ ಶ್ಲೋಕಾರ್ಥವೇನೆಂದರೆ:—ಬ್ರಹ್ಮಾಣಂ-ಚತುರ್ಮುಖಬ್ರಹ್ಮನನ್ನೇಯಾಗಲಿ, ಶಿತಿಕಂಠಂಚ-ವಿಷಪಾನದಿಂದ ಕಪ್ಪಾದ ಕಂಠವುಳ್ಳ ರುದ್ರನನ್ನೇಯಾಗಲಿ, - ಯಾಶ್ಚಾನ್ಯಾಃ - ಇನ್ನು ಯಾವ ಬೇರೆ ದೇವತಾಃ - ದೇವತೆಗಳು ಸ್ಮೃತಾಃ - ಹೇಳಲ್ಪಟ್ಟಿರುವರೋ ಅವರುಗಳನ್ನು ಸಹ, ಪ್ರತಿಬುದ್ಧಾಃ - ಆಗಮೋತ್ಪನ್ನಜ್ಞಾನ, ವಿವೇಕೋತ್ಪನ್ನಜ್ಞಾನಗಳನ್ನು ಹೊಂದಿ, ಜ್ಞಾನಿಗಳಾದವರು, ನಸೇವನ್ತೇ - ಸೇವಿಸುವದಿಲ್ಲವು, ಆಶ್ರಯಿಸುವದಿಲ್ಲವು, ಏಕೆಂದರೆ :—ಯಸ್ಮಾತ್ - ಯಾವ ಕಾರಣದಿಂದ ಪರಿಮಿತಂಫಲಂ-ಅವರುಗಳಿಂದ ಪ್ರಾಪ್ತವಾಗುವದು ಪರಿಮಿತಿಯುಳ್ಳ ಫಲವೋ ಆ ಕಾರಣದಿಂದ ಅವರುಗಳು ಆಶ್ರಯಣೀಯರಲ್ಲವೆಂಬಭಿಪ್ರಾಯವು. ಇಲ್ಲಿ ಆದಿ - ಶಬ್ದದಿಂದ, "ನಹಿ ಪಾಲನಸಾಮರ್ಥ್ಯಮೃತೇ ಸರ್ವೇಶ್ವರಂ ಹರಿಂ" "ಸರ್ವೇಶ್ವರನಾದ ಹರಿಯನ್ನು ಬಿಟ್ಟರೆ, ಇನ್ನ್ಯಾರಿಗೂ ರಕ್ಷಿಸುವ ಶಕ್ತಿಯಿಲ್ಲವು"

"ನವಿಷ್ಣೋಃ ಪರಮೋ ದೇವೋ ವಿದ್ಯತೇ ನೃಪಸತ್ತಮ"
"ಏಕೋ ಹವೈ ನಾರಾಯಣ ಆಸೀತ್ ನ ಬ್ರಹ್ಮಾ ನೇಶಾನಃ"
(ಮ. ೪೮)

"ನಾರಾಯಣ ಪರಂಬ್ರಹ್ಮ ತತ್ತ್ವಂ ನಾರಾಯಣಃ ಪರಃ ।
ನಾರಾಯಣಪರೋಜ್ಯೋತಿರಾತ್ಮಾ ನಾರಾಯಣಃಪರಃ ।
ಯಚ್ಚ ಕಿಞ್ಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ" (ತೈ.ನಾ)
"ವಿಷ್ಣೋಸ್ಸಕಾಶಾದುದ್ಭೂತಂ ಜಗತ್ತತ್ರೈವ ಚಸ್ಥಿತಂ ।
ಸ್ಥಿತಿಸಂಯಮ ಕರ್ತಾಸೌ ಜಗತೋಽಸ್ಯ ಜಗಚ್ಚಸಃ"
(ವಿ. ಪು ೧-೧-೩೨)

"ಯಸ್ಯಪ್ರಸಾದಾದಹಮಚ್ಯುತಸ್ಯ ಭೂತಃ ಪ್ರಜಾಸೃಷ್ಟಿ
ಕರೋಽನ್ತಕಾರೀ । ಕ್ರೋಧಾಚ್ಚ ರುದ್ರಃ" (ವಿ ಪು. ೪ ೧.೩೯)
"ಪರಮಾತ್ಮಾ ಚ ಸರ್ವೇಷಾಂ ಆಧಾರಃ ಪರಮೇಶ್ವರಃ ।
ವಿಷ್ಣುನಾಮಾ ಸ ವೇದೇಷು ವೇದಾನ್ತೇಷು ಚ ಗೀಯತೇ"
(ವಿ.ಪು. ೬ ೪-೩೯)

" ಚಿನ್ತಯನ್ತೋ ಹಿ ಯಂ ವಿಷ್ಣುಂ ಬ್ರಹ್ಮೇಶಾನಾದಯಃ ಪ್ರಭುವಮ್
ನಿಶ್ಚಯಂ ನಾಧಿಗಚ್ಛನ್ತಿ, ತಮುಸ್ಮಿ ಶರಣಂಗತಃ " ॥ (ಭಾರತ)
" ಏಕಸ್ತಿಷ್ಠತಿ ಸರ್ವಾತ್ಮಾ ಸ ತು ನಾರಾಯಣ ಪ್ರಭುಃ "
" ನಾರಾಯಣಾತ್ ಪರೋದೇವೋ ನ ಭೂತೋ ನ ಭವಿಷ್ಯತಿ "
(ಹರಿ.ವಂ. ೮-೩೨)

" ಸರ್ವೇದೇವಾಸ್ಸಪಿತರೋ ಬ್ರಹ್ಮಾದ್ಯಾಶ್ಚಾಣ್ಡಮಧ್ಯಗಾಃ ।
ವಿಷ್ಣೋಸ್ಸಕಾಶಾದುತ್ಪನ್ನಾ ಇತೀಯಂ ವೈದಿಕೀ ಶ್ರುತಿಃ "
" ಅದ್ಯೋ ನಾರಾಯಣೋ ದೇವಃ ತಸ್ಮಾದ್ಬ್ರಹ್ಮಾ ತತೋಭವಃ।"
" ತನ ವಿಷ್ಣೋ ಪ್ರಸಾದೇನ ಮಯಾತತ್ತ್ರಿಪುರಂ ಹತಂ " (ಭಾರ),
" ಪರೋ ನಾರಾಯಣೋ ದೇವಸ್ತಸ್ಮಾಜ್ಜಾತಶ್ಚತುರ್ಮುಖಃ ।
ತಸ್ಮಾದ್ರುದ್ರೋ ಭವೇದ್ದೇವಿ ಸಚ ಸರ್ವಜ್ಞತಾಂಗತಃ ।
ಯದೇತತ್ಪರಮಂ ಬ್ರಹ್ಮ ವೇದವೇದೇಷು ಗೀಯತೇ ।
ಸದೇವಃ ಪುಂಡರೀಕಾಕ್ಷ ಸ್ಸ್ವಯಂನಾರಾಯಣಃಪರಂ " (ವ.ಪು)
" ನವಿಷ್ಣೋಃ ಪರಮೋದೇವೋ ವಿದ್ಯತೇ ನೃಪಸತ್ತಮ ।
ವಿಷ್ಣುರೇವ ಸದಾರಾಧ್ಯಸ್ಸರ್ವದೇವೈ ರಪಿಪ್ರಭೋ । ",
" ಕಇತಿಬ್ರಹ್ಮಣೋನಾಮ ಈಶೋಹಂ ಸರ್ವದೇಹಿನಾಮ್ ।
ಆವಾಂ ತವಾಂಗೇ ಸಂಭೂತೌ ತಸ್ಮಾತ್ಕೇಶವ ನಾಮವಾನ್ । "
(ಹರಿವಂಶ)

" ಯಸ್ಮಾದ್ವಿಷ್ಟಂಭಿತಂಸರ್ವಂ ತಸ್ಯಶಕ್ತ್ಯಾ ಮಹಾತ್ಮನಃ ।
ತಸ್ಮಾತ್ಸಪ್ರೋಚ್ಯತೇ ವಿಷ್ಣುರ್ವಿಶೇರ್ಧಾತೋಃ ಪ್ರವೇಶನಾತ್ "
(ವಿ.ಧ)
" ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ " (ಭಾರ)

ಎಂಬ ಅನೇಕ ಪ್ರಮಾಣಗಳು ಸೂಚಿಸಲ್ಪಟ್ಟವು. ಹೀಗೆ ಅನೇಕ ಶ್ರುತಿ, ಸ್ಮೃತಿ, ಇತಿಹಾಸಪುರಾಣವಾಕ್ಯಗಳೆಲ್ಲಾ ಶ್ರೀಮನ್ನಾರಾಯಣನೇ ಬ್ರಹ್ಮರುದ್ರಾದಿ ಸಕಲರಿಗೂ ಆತ್ಮವಾಗಿ, ಶೇಷಿಯಾಗಿ, ಸರ್ವಜಗದಾಧಾರನಾಗಿ, ಸರ್ವಜಗತ್ಕಾರಣ ನಾಗಿ, ಸರ್ವರಿಗೂ ವ್ಯಾಪ್ಯವ್ಯಾಪಕನಾಗಿ ಸರ್ವಸುಹೃತ್ತಾಗಿ ಸರ್ವರಿಗೂ ಗತಿಯಾ ಗಿರುವವನು ಎಂದು ಉದ್ಘೋಷಿಸುತ್ತವೆ.

ಸ್ವತಂತ್ರ ಪ್ರಪತ್ತಿನಿಷ್ಠರು, ದೃಪ್ತರೆಂದೂ ಆರ್ತರೆಂದೂ ಎರಡು ವಿಧವು. ಆರ್ತರು, ಈ ಪ್ರಕೃತಿ ಸಂಬಂಧವೊಂದಿಗೆ ಇರುವ ಸಂಸಾರಬಂಧವನ್ನು ಬೆಂಕಿಯ ಮಧ್ಯದಲ್ಲಿರುವಹಾಗೆ ಭಾವಿಸಿ, ಒಂದು ಕ್ಷಣವೂ ಕೂಡ ಭಗವದನುಭವವಿಲ್ಲದಿರುವ

ದೃಪ್ತಸ್ಯ ಪ್ರಪತ್ತಾವನಧಿಕಾರ ಶಙ್ಕಾನಿರಾಸಃ

ತೀವ್ರತಮಮಾನ ಮುಮುಕ್ಷುತ್ವಮಿನ್ರಿಕ್ಕೇ ದೇಹಾನುವೃತ್ತ್ಯಾದಿ ಪ್ರಯೋಜನಾನ್ತರ ಸಕ್ತನಾನವರ್ ಮೋಕ್ಷಾರ್ಥಿಯಾಯ್ ಪ್ರಪತ್ತಿಯೈ

ದನ್ನು ಸಹಿಸದಿರುವವರು ಅಂಥಾವರಿಗೆ ಒಡನೇ ದೇಹನಿವೃತ್ತಿಯೂ, ದಿವ್ಯ ವೈಕುಂಠಪ್ರಾಪ್ತಿಯೂ ಉಂಟಾಗುತ್ತದೆ. ದೃಪ್ತರು ಭಗವಂತನನ್ನು ಹೊಂದಲು ಅಷ್ಟು ಆತುರವಿಲ್ಲದೆ ದೇಹಾವಸಾನಾನಂತರ ಭಗವದನುಭವ, ವೈಕುಂಠಪ್ರಾಪ್ತಿ ಯನ್ನು ಬೇಡುವವರು. ಇಂತಹ ದೃಪ್ತರಿಗೆ ಈ ಪ್ರಾರಬ್ಧ ದೇಹಗಳಿಂದ ಅನುಭಾವ್ಯವಾದ ಸುಖಾದಿಗಳ ಸಂಗವಿರುವದರಿಂದ, ಇವರಿಗೆ ಅನನ್ಯ ಪ್ರಯೋಜನತ್ವವಿರುವದರಿಂದ ಪ್ರಪತ್ತಿಯಲ್ಲಿ ಅಧಿಕಾರ ಹೇಗೆ ಉಂಟಾಗುತ್ತದೆ ಎಂಬಾಕ್ಷೇಪಕ್ಕೆ ಮುಂದಿನ ವಾಕ್ಯದಿಂದ ಸಮಾಧಾನ ಹೇಳುತ್ತಾರೆ. ಈ ಅನನ್ಯ ಗತಿತ್ವವು ಅವನಿಗೂ ಉಂಟು ಎಂದು ತಿಳಿಸುತ್ತಾರೆ.

ದೃಪ್ತನಿಗೆ ಪ್ರಪತ್ತಿಯಲ್ಲಧಿಕಾರವಿಲ್ಲನೆಂಬ ಶಂಕಾನಿರಾಸವು

ತೀವ್ರತಮಮಾನ ಮುಮುಕ್ಷುತ್ವಮಿನ್ರಿಕ್ಕೆ - ವಿಳಂಬವನ್ನು ಈಷದಪಿ
ಕೂಡ ಸಹಿಸದೇ ಇರುವ ಮೋಕ್ಷಾರ್ಥಿಯಾಗಿರುವ ಭಾವವಲ್ಲದೆ ಎಂಬರ್ಥವು;
ಇದರಿಂದ ಆರ್ತ ಪ್ರಪನ್ನನ ಭಾವವು ಹೇಳಲ್ಪಟ್ಟಿತು; ತೀವ್ರತಮಮಾನವೆಂದರೆ
ಕಠಿಣತಮವಾದ, ಈ ಸಂಸಾರಸ್ಥಿತಿಯಲ್ಲಿರುವದು ಪರಮದುಃಖಕರವೆಂದು ಭಾವಿಸು
ವಿಕೆ, ಹಾಗೆ ಅಲ್ಲದೆ, ದೇಹಾನುವೃತ್ತ್ಯಾದಿ ಪ್ರಯೋಜನಾನ್ತರ ಸಕ್ತನಾನ
ವರ್ - ದೇಹವನ್ನು ಅನುಸರಿಸಿ ಬರುವ ಸುಖವೇ ಮೊದಲಾದ ಬೇರೆ ಪ್ರಯೋಜನ
ದಲ್ಲಿ ಆಶೆಯುಳ್ಳವನು ಎಂದರೆ ದೃಪ್ತಪ್ರಪನ್ನನು, ಪ್ರಪತ್ತಿಯೇ ಪತ್ತಿನಾಲ್-
ಪ್ರಪತ್ತಿಯನ್ನವಲಂಬಿಸಿದರೆ ಅಥವಾ ಅನುಷ್ಠಿಸಿದರೆ, ಅನ್ವೋ ಪ್ರಯೋಜನಾ
ನ್ತರಙ್ಗಳಿಲ್ - ಅಯಾ ಬೇರೆ ಪ್ರಯೋಜನಗಳ, ಆಳವುಕ್ಕೇಡಾಗ-ಯೋಗ್ಯತೆ
ಗನುಸಾರವಾಗಿ, ಮೋಕ್ಷಮ್ ವಿಳಂಬಿಕ್ಕುಮ್ - ಮೋಕ್ಷವು ವಿಳಂಬಿಸುತ್ತದೆ.
ಆರ್ತಾಧಿಕಾರಿಗಳು ಈಗಿನ ಹೇಯವಾದ ದೇಹದಲ್ಲಿರುವದನ್ನು ಅಗ್ನಿಯಲ್ಲಿರುವಹಾಗೆ
ಭಾವಿಸಿ, ಅಂತಹ ದೇಹವನ್ನು ತ್ಯಾಗಮಾಡಲು ತುಂಬಾ ಆತುರವುಳ್ಳವರಾಗಿರು
ತ್ತಾರೆಂದು ತೀವ್ರತಮಮಾನ ಮುಮುಕ್ಷುತ್ವಮಿನ್ರಿಕ್ಕೆ - ಎಂದು ಪ್ರಯೋಗಿ
ಸಿರುತ್ತಾರೆ. ಈ ಆರ್ತರೇನೋ ಪ್ರಪತ್ತಿಗೆ ಅಧಿಕಾರಿಯೆಂದು ಹೇಳಬಹುದು.
ಏಕೆಂದರೆ ಇವರಿಗೆ ಆಕಿಂಚನತ್ವವೂ ಅನನ್ಯಗತಿತ್ವವೂ ಉಂಟು. ಆದರೆ

ಪ್ರಪತ್ತಿನಾಲ್ ಅವ್ವೋಪ್ರಯೋಜನಾನ್ತರಙ್ಗಳಿಲ್ ಅಳಪ್ಪುಕ್ಕೀಡಾಗ ಮೋಕ್ಷಮ್ ವಿಳಂಬಿಕ್ಕುಮ್.

ದೇಹಾನುವೃತ್ತ್ಯಾದಿ ಪ್ರಯೋಜನಾನ್ತರ ಸಕ್ತನಾದ ದೃಪ್ತನಿಗೆ ಅನನ್ಯಗತಿತ್ವವು ಹೇಗೆ ? ಅತನಿಗೆ ದೇಹಾನುವೃತ್ತ್ಯಾದಿ ಪ್ರಯೋಜನಾನ್ತರವೇ ಉಂಟಲ್ಲಾ ? ದೃಪ್ತಾಧಿಕಾರಿಗಳಲ್ಲಿ ಕೆಲವರು, ಭಗವದನುಭವರೂಪ ಭೋಗವು ನಿರತಿಶಯವಾದುದೆಂದು ಚನ್ನಾಗಿ ನಂಬಿದ್ದರೂ ಈಗಿರುವ ದೇಹವನ್ನು ಬಿಡಲು ಆತುರವಿಲ್ಲದವರು. ದೇಹವನ್ನು ಅನುಸರಿಸಿ ಬರುವ ಭೋಗಾದಿಗಳಲ್ಲಿ ತುಂಬಾ ಮಮತೆಯಿಲ್ಲದಿದ್ದರೂ ಪ್ರಾರಬ್ಧಕರ್ಮಾನುಗುಣವಾಗಿ ಸರ್ವೇಶ್ವರನಿಂದ ಕೊಡಲ್ಪಟ್ಟಿರುವದನ್ನು ತ್ಯಜಿಸಿಬಿಡಬೇಕೆಂಬಭಿಪ್ರಾಯವು ಇವರಿಗಿಲ್ಲವು. ಇಂತಹ ಐಹಿಕಗಳನ್ನು ಮಾತ್ರ ಅನುಭವಿಸುವವರಾಗಿ, ಸ್ವರ್ಗಾದಿ ಭೋಗಗಳನ್ನಪೇಕ್ಷಿಸದೇ ಇರುವವರು. ಇವರಿಗೆ ಸ್ವದೇಹಸಂಬಂಧ ದೃಪ್ತರೆಂದು ಹೆಸರು. ಇನ್ನು ಕೆಲವರು ತನಗೂ ಪರಮಾತ್ಮನಿಗೂ ಇರುವ ಸಂಬಂಧವನ್ನು ಸ್ಮರಿಸುತ್ತಾ, ಪೂರ್ಣ ಪಾರತಂತ್ರ್ಯವನ್ನು ವಹಿಸಿದವರಾಗಿ ತಾವು ಪ್ರಪನ್ನರಾಗಿ ಕೃತಕೃತ್ಯರಾದುದರಿಂದ ಸರ್ವೇಶ್ವರನ ಕೃಪೆಯಿಂದ ದೇಹಾವಸಾನ ಪ್ರಾಪ್ತಿಯಾಗುವವರಿಗೂ, ಭಗವದ್ಭಾಗವತ ಕೈಙ್ಕರ್ಯನಿರತರಾಗಿರುವವರು. ಇವರು ಸ್ವದೇಹಿಸಂಬಂಧ ದೃಪ್ತರು. ಸ್ವದೇಹಿಯು ಪರಮಾತ್ಮನು, ತತ್ಸಂಬಂಧವಾಗಿ ದೃಪ್ತರು. ದೇಹಾನುವೃತ್ತ್ಯಾದಿ ಪ್ರಯೋಜನಾನ್ತರಸಕ್ತರು ಎಂದು ಹೇಳಿದುದರಿಂದ ಈ ಮೇಲೆ ಹೇಳಿದ ಎರಡುವಿಧ ದೃಪ್ತರೂ ಹೇಳಲ್ಪಟ್ಟರು. ದೇಹಾನುವೃತ್ತಿ ಪ್ರಯೋಜನಸಕ್ತರು ಎಂಬುವದರಿಂದ ಸ್ವದೇಹಸಂಬಂಧ ದೃಪ್ತರು ಹೇಳಲ್ಪಟ್ಟರು. ಇಲ್ಲಿ ಆದಿಶಬ್ದದಿಂದ, ಭಗವದ್ಭಾಗವತ ಕೈಙ್ಕರ್ಯದಲ್ಲಿ ಅಭಿರುಚಿಯು ಸಙ್ಗ್ರಹಿಸಲ್ಪಟ್ಟಿತು. ಆದುದರಿಂದ ಇಂತಹ ಪ್ರಯೋಜನ ಸಕ್ತರು ಸ್ವದೇಹಿಸಂಬಂಧ ದೃಪ್ತರಾದುದರಿಂದ ಇವರೂ ಇಲ್ಲಿ ಹೇಳಲ್ಪಟ್ಟರು. ಹೀಗೆ ಈ ಎರಡು ವಿಧವಾದ ದೃಪ್ತರಿಗೂ ಅವರವರಪೇಕ್ಷಾನುಸಾರ ಮೋಕ್ಷವು ವಿಳಂಬಿಸುತ್ತದೆ ಎಂದು ಹೇಳುತ್ತಾರೆ. ಈ ಭೋಗಗಳಿಗನುಸಾರವಾಗಿ ಇವರಿಗೆ ಸರ್ವೇಶ್ವರನು ಆಯುಸ್ಸನ್ನು ಕೊಟ್ಟು ಉಪಭೋಗಾನನ್ತರ ದೇಹಾವಸಾನ ಉಂಟಾಗಿ ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ಉಪದೇಶಿಸಿದ ಹಾಗಾಯಿತು. ಇಲ್ಲಿ ಪ್ರಯೋಜನಾನ್ತರ ಸಕ್ತನು ಎಂದು ಹೇಳಿದರೇ ವಿನಾ ಅದರಲ್ಲಿ ಆಸಕ್ತಿಯುಳ್ಳವನೆಂದು ಹೇಳಲಿಲ್ಲವು. ಆಸಕ್ತಿಯುಳ್ಳವನಾದರೆ ಅದರಲ್ಲಿ ಸಂಗವುಂಟಾಗುವದರಿಂದ ಅಂತವನಿಗೆ ಸಂಸಾರವು ತಪ್ಪದು, ಇಲ್ಲಿ ಸುಮ್ಮನೆ ಸಕ್ತನು ಎಂದು ಹೇಳಿದುದರಿಂದ ಪ್ರಾರಬ್ಧ ಕರ್ಮವನ್ನನುಸರಿಸಿ ಸರ್ವೇಶ್ವರನು ಅನುಗ್ರಹಿಸಿದುದರಿಂದ ಅದರ ಸಂಬಂಧ

ಆಕಿಂಚನ್ಯಾನನ್ಯಗತಿಯೋರ್ನಿಬಂಧನಂ

ಇವ್ವಾಕಿಂಚನ್ಯತ್ತುಕ್ಕುಮ್, ಅನನ್ಯಗತಿತ್ವತ್ತುಕ್ಕುಮ್ ನಿಬಂಧನಂ ಉಪಾಯಾನ್ತರಙ್ಗಳಿಲ್ ಇವ್ವಧಿಕಾರಿಯುಡೈಯ ಅಜ್ಞಾನಾ ಶಕ್ತಿಗಳುಮ್, ಫಲವಿಳಂಬಾಸಹತ್ವಮುಮ್.

ಉಂಟಾಗಿರುತ್ತದೆಂಬ ಭಾವವು. ಹೀಗೆ ಸ್ವಾಮಿದತ್ತವಾದ ಉಪಭೋಗಗಳ ಸಂಬಂಧ ಉಂಟಾದ ಮಾತ್ರದಿಂದಲೇ ಆಕಿಂಚನ್ಯ, ಅನನ್ಯಗತಿತ್ವಗಳಿಗೆ ಯಾವದೊಂದು ಲೋಪವೂ ಇಲ್ಲವೆಂದೂ, ಆದುದರಿಂದ ದೃಪ್ತಾಧಿಕಾರಿಯೂ ಕೂಡ ಪ್ರಪತ್ತ್ಯಧಿಕಾರಿ ಎಂಬುವದರಲ್ಲಿ ನಿಸ್ಸಂದೇಹವೆಂಬುವದು ಈ ವಾಕ್ಯದ ಮುಖ್ಯ ತಾತ್ಪರ್ಯವು. ಇಲ್ಲಿ ಮೋಕ್ಷಂ ವಿಳಂಬಿಕ್ಕುಮ್ ಎಂಬುವದರಿಂದ ಆಯುಸ್ಸು ಪೆಚ್ಚಾದುದರಿಂದ ವಿಳಂಬವೇ ವಿನಾ ಪುನರ್ಜನ್ಮರೂಪ ವಿಳಂಬವೆಂಬಭಿಪ್ರಾಯವಲ್ಲವು. ಏಕೆಂದರೆ ಪ್ರಪನ್ನನಿಗೆ ಪುನರ್ಜನ್ಮವಿಲ್ಲವೆಂಬುವದು ಸಿದ್ಧಾನ್ತವು.

ಹಾಗಾದರೆ ಈ ಆಕಿಂಚನ್ಯಕ್ಕೂ ಅನನ್ಯಗತಿತ್ವಕ್ಕೂ ನಿಬಂಧನಗಳು ಎಂದರೆ ಮೂಲಕಾರಣಗಳು ಯಾವವು ಎಂದು ಕೇಳಿದರೆ, ಅದಕ್ಕೆ ಉತ್ತರಗಳನ್ನು ಕ್ರಮವಾಗಿ ತಿಳಿಸುತ್ತಾರೆ.

ಆಕಿಂಚನ್ಯ ಅನನ್ಯಗತಿತ್ವಗಳಿಗೆ ಮೂಲಕಾರಣಗಳು.

ಇವ್ವಾಕಿಂಚನ್ಯತ್ತುಕ್ಕುಂ-ಈ ಸ್ವತಂತ್ರಪ್ರಪತ್ತಿಗೆ ವಿಶೇಷರೂಪ ಅಧಿಕಾರವನ್ನುಂಟುಮಾಡುವ ಈ ಆಕಿಂಚನ್ಯಕ್ಕೂ ಅನನ್ಯಗತಿತ್ವಕ್ಕೂ. ನಿಬಂಧನಂ-ಮೂಲಕಾರಣವು, ಯಾವುವೆಂದರೆ:—ಉಪಾಯಾನ್ತರಙ್ಗಳಿಲ್ - ಬೇರೆ ಭಕ್ತಿಮಾರ್ಗಾದಿಗಳಲ್ಲಿ, ಇವ್ವಧಿಕಾರಿಯುಡೈಯ - ಈ ಸ್ವತಂತ್ರ ಪ್ರಪತ್ತ್ಯಧಿಕಾರಿಯ, ಕ್ರಮವಾಗಿ, ಅಜ್ಞಾನಾಶಕ್ತಿಗಳುಮ್ - ಉಪಾಸನ ಮಾರ್ಗದ ಜ್ಞಾನಶೂನ್ಯತೆ ಉಪಾಸನಾನುಷ್ಠಾನದಲ್ಲಿ ಅಶಕ್ತಿಯೂ ಫಲ ವಿಳಂಬಾಸಹತ್ವಮುಮ್ - ಪ್ರಾರಬ್ಧ ಕರ್ಮವು ಪೂರೈಸುವ ತನಕ ಬೇಕಾಗಿರುವ ವಿಳಂಬವನ್ನು ಸಹಿಸದಿರೋಣವೂ; ಪ್ರಾರಬ್ಧಕರ್ಮ ಪೂರ್ತಿಯು ಇನ್ನೊಂದು ಜನ್ಮವನ್ನೆತ್ತಿಯಾದರೂ ಆಗಬಹುದು; ಆದರೆ ಪ್ರಪತ್ತ್ಯಧಿಕಾರಿಯು ಅಂತಹ ಮೋಕ್ಷಪ್ರಾಪ್ತಿವಿಳಂಬವನ್ನು ಸಹಿಸಲಾರನೆಂಬಭಿಪ್ರಾಯವು ಈ ಮೇಲಿನ ವಾಕ್ಯದಲ್ಲಿ ಕ್ರಮವಾಗಿ ಆಕಿಂಚನ್ಯಕ್ಕೆ ಮೂಲಕಾರಣವು ಉಪಾಯಾನ್ತರದಲ್ಲಿರುವ ಅಜ್ಞಾನ

ಇದಿಲ್ ಶರಣ್ಯಾನ್ತರ ವೈಮುಖ್ಯತ್ತುಕ್ಕು ನಿಬಂಧನಂ "ಯಥಾವಾ ಯೋಸ್ತೃಣಾಗ್ರಾಣಿ ವಶಂಯಾಂತಿ ಬಲೀಯಸಃ । ಧಾತುರೇವಂ ವಶಂ

ಅಶಕ್ತಿಗಳಿಂದೂ, ಅನನ್ಯಗತಿತ್ವಕ್ಕೆ ಮೂಲಕಾರಣವು ವಿಳಂಬಾಸಹತ್ವವೆಂದೂ ತಿಳಿಯತಕ್ಕದ್ದು. ವಿಳಂಬವನ್ನು ಸಹಿಸುವವನು ಪ್ರಯೋಜನಾನ್ತರವನ್ನು ಬಿಟ್ಟಿರುವವನಲ್ಲವು. ಆದುದರಿಂದ ಪ್ರಯೋಜನಾನ್ತರ ವೈಮುಖ್ಯವಿಲ್ಲವು. ಆ ಕಾರಣದಿಂದ ಅನನ್ಯಗತಿತ್ವವಿಲ್ಲವು. ಅನನ್ಯಗತಿತ್ವಕ್ಕೆ ಪ್ರಯೋಜನಾನ್ತರ ವೈಮುಖ್ಯವೆಂದೂ ಶರಣ್ಯಾನ್ತರ ವೈಮುಖ್ಯವೆಂದೂ, ಎರಡು ಅಭಿಪ್ರಾಯಗಳನ್ನು ಹಿಂದೆ ಹೇಳಿರುವದರಿಂದಲೂ ಮುಂದೆ ಶರಣ್ಯಾನ್ತರ ವೈಮುಖ್ಯಕ್ಕೆ ಮೂಲಕಾರಣಗಳನ್ನು ಬೇರೆ ಹೇಳುವದರಿಂದಲೂ, ವಿಳಂಬಾಸಹತ್ವವು ಪ್ರಯೋಜನಾನ್ತರವೈಮುಖ್ಯಕ್ಕೆ ಹೇತುವೆಂದು ಭಾವಿಸತಕ್ಕದ್ದು. ಆದರೆ ಶ್ರೀವೇದಾಂತಾಚಾರ್ಯರವರೇ ಚರಮ ಶ್ಲೋಕಾಧಿಕಾರದಲ್ಲಿ "ಇವ್ವಿಳಂಬಾಕ್ಷಮನುಮವ್ ತಾನ್ ನಿನೈತ್ತ ಕಾಲತ್ತಿಲೇ ಫಲಂ ಪೆರುಗೈಕ್ಕು ಉಪಾಯಾನ್ತರ ರಹಿತನ್" ಎಂದು ಹೇಳಿರುವದರಿಂದ, ವಿಳಂಬಾಕ್ಷಮತ್ವವೂ ಕೂಡ ಆಕಿಂಚನ್ಯಕ್ಕೂ ಕಾರಣವೆಂದೇರ್ಪಡುತ್ತದೆಂದು ಶ್ರೀಮಾನ್ ಶೆಟ್ಟಲೂರು ನರಸಿಂಹಾಚಾರ್ಯರವರು ವ್ಯಾಖ್ಯಾನ ಬರೆದಿರುತ್ತಾರೆ. ಆದುದರಿಂದ ಮೇಲಿನ ವಿಳಂಬಾಕ್ಷಮತ್ವವು ಆಕಿಂಚನ್ಯತ್ವಕ್ಕೂ ಮತ್ತು ಅನನ್ಯಗತಿತ್ವಕ್ಕೂ ಕಾರಣವೆಂದು ಹೇಳಿದಂತಾಯಿತು. ಹಾಗೆಯೇ ಅಜ್ಞಾನ ಅಶಕ್ತಿಗಳೂ ಕೂಡ ಅನನ್ಯಗತಿತ್ವಕ್ಕೂ ಕಾರಣವಾಗಬಹುದು. ಆದುದರಿಂದ ಮೇಲಿನ "ಇವ್ವಾಕಿಂಚನ್ಯತ್ತುಕ್ಕುಮ್" ಎಂಬ ವಾಕ್ಯದಲ್ಲಿ ಕ್ರಮಾಲಂಕಾರ ಪ್ರಕಾರ ಒಂದಕ್ಕೆ ಒಂದು ಕಾರಣವು ಕ್ರಮವಾಗಿ ಎಂದು ಅನ್ವಯಿಸಲೂ ಬಹುದು; ಅಥವಾ ಎರಡೂ ಎರಡಕ್ಕೂ ಕಾರಣವೆಂದು ಅನ್ವಯಿಸಿದರೂ ಅನ್ವಯಿಸಬಹುದು.

ಇದಿಲ್ - ಈ ಪ್ರಪತ್ತಿ ವಿಶೇಷಾಧಿಕಾರದಲ್ಲಿ, ಅಥವಾ ಈ ಪ್ರಪತ್ತಿ ವಿಶೇಷಾಧಿಕಾರವಾದ ಅನನ್ಯಗತಿತ್ವದಲ್ಲಿ, ತೋರಬರುವ **ಶರಣ್ಯಾನ್ತರ ವೈಮುಖ್ಯತ್ತುಕ್ಕು ನಿಬಂಧನಂ** - ಅನ್ಯದೇವತೆಗಳನ್ನು ನನಗೆ ರಕ್ಷಕರೆಂದು ಪುರಸ್ಕರಿಸದೇ ಇರುವದಕ್ಕೆ ಕಾರಣವೇನೆಂದರೆ :— **ಬಲೀಯಸಃ** - ಬಲಿಷ್ಠವಾದ, **ವಾಯೋಃ** - ಗಾಳಿಗೆ, **ತೃಣಾಗ್ರಾಣಿ** - ಹುಲ್ಲಿನ ಅಗ್ರಭಾಗಗಳು ಅಂದರೆ ಕೊನೇ ಭಾಗಗಳು, **ಯಥಾ** - ಹೇಗೆ, **ವಶಂಯಾಂತಿ** - ವಶವನ್ನು ಹೊಂದುತ್ತವೆಯೋ, **ಹೇ ಭಾರತ** - ಓ ಭರತ ಕುಲೋತ್ಪನ್ನನಾದ ಅರ್ಜುನನೇ. **ಏವಂ** - ಹಾಗೆಯೇ, **ಸರ್ವಭೂತಾನಿ** - ಎಲ್ಲಾ ಜೀವರೂ, **ಧಾತುಃ** - ಸೃಷ್ಟಿಕರ್ತನಿಗೆ, **ವಶಂಯಾಂತಿ**-ವಶವನ್ನು ಹೊಂದುತ್ತವೆ. "ಎಙ್ಗರಪಡಿಯೇ - ಎಂದು ಹೇಳಿರುವ

ವಶಾಂತಿ ಸರ್ವಭೂತಾನಿ ಭಾರತ ॥" ಎನ್ಗಿರಪಡಿಯೇ ತನಕ್ಕುಮ್ ಪಿರರುಕ್ಕುಮ್ ಒತ್ತಿರುಕ್ಕಿರ ಭಗವದೇಕ ಪಾರತಂತ್ರ್ಯಾಧ್ಯವಸಾಯಮುಮ್ ಪ್ರಯೋಜನಾನ್ತರವೈಮುಖ್ಯಮುಮ್.

ಹಾಗೆ, ತನಕ್ಕುಮ್ ಪಿರರಕ್ಕುಮ್ - ತನಗೂ ಇತರರಿಗೂ ಸಹ, ಇಲ್ಲಿ ಇತರರಿಗೂ ಎಂದು ಹೇಳಿರುವುದು ಬ್ರಹ್ಮರುದ್ರೇಂದ್ರಾದಿಗಳಾದ ಅನ್ಯದೇವತೆಗಳನ್ನು ಕುರಿತು ಹೇಳಿದುದೆಂದು ಭಾವಿಸತಕ್ಕದ್ದು, ಒತ್ತಿರುಕ್ಕಿರ - ಸಾಧಾರಣವಾಗಿರುವ, ಭಗವದೇಕ ಪಾರತನ್ತ್ರ್ಯಾಧ್ಯವಸಾಯಮುಮ್ - ತಾನು ಸರ್ವೇಶ್ವರನೊಬ್ಬನಿಗೆ ಮಾತ್ರವೇ ಪರತಂತ್ರನೆಂಬ ನಿಶ್ಚಯಜ್ಞಾನವೂ, ಪ್ರಯೋಜನಾನ್ತರ ವೈಮುಖ್ಯಮುಮ್ - ಇನ್ನಾವ ಪ್ರಯೋಜನವನ್ನೂ ಪುರಸ್ಕರಿಸದೇ ಇರೋಣವೂ; ಇವೆರಡೂ ಶರಣ್ಯಾನ್ತರ ವೈಮುಖ್ಯಕ್ಕೆ ಮೂಲ ಕಾರಣಗಳು ಎಂಬ ಭಾವವು. ಅನ್ಯದೇವತೆಗಳಾದ ಬ್ರಹ್ಮರುದ್ರೇಂದ್ರಾದಿಗಳು ತನಗೆ ರಕ್ಷಕರೆಂದು ಆಶ್ರಯಿಸದೇ ಇರಲು ಎರಡು ಕಾರಣಗಳೆಂದು ಉಪದೇಶಿಸುತ್ತಾರೆ:—(೧) ಒಂದನೆಯದು, ತಾನು ಶ್ರಿಯಃಪತಿಗೆ ಮಾತ್ರವೇ ಪರತಂತ್ರನು, ಬ್ರಹ್ಮರುದ್ರಾದಿಗಳಲ್ಲವು ಎಂಬ ನಿಶ್ಚಯಜ್ಞಾನವು, ಏಕೆಂದರೆ ಸ್ಥಿತಿಯಲ್ಲಿ ಬ್ರಹ್ಮರುದ್ರೇಂದ್ರಾದಿಗಳಿಗೂ ನಮಗೂ ಏನೊಂದೂ ವ್ಯತ್ಯಾಸವಿಲ್ಲವು; ನಾವು ಹೇಗೆ ಜೀವಕೋಟಿಗೆ ಸೇರಿ, ಇನ್ನೂ ಮುಕ್ತಿ ಇಲ್ಲದೇ ಇರುತ್ತೇವೋ, ಹಾಗೆಯೇ ಅವರೂ ಕೂಡ, ಲೋಕವ್ಯಾಪಾರಗಳಲ್ಲಿ ಹೆಚ್ಚು ಅಧಿಪತ್ಯವನ್ನು ಹೊಂದಿದ್ದರೂ, ಇನ್ನೂ ಮುಕ್ತಿಯಿಲ್ಲದೇ ಇರುವವರು; ನಾವು ಹೇಗೆ ಪರತಂತ್ರರೋ ಹಾಗೆಯೇ ಅವರೂ ಪರತಂತ್ರರು; ಅಂಥಾವರಿಂದ ನಮಗೆ ಬೇಕಾದ ನಿರತಿಶಯ ಸುಖರೂಪ ಮೋಕ್ಷಪ್ರಾಪ್ತಿಯು ದೊರಕೀತೆ? ಆದುದರಿಂದ ಇಂತಹ ಪಾರತಂತ್ರ್ಯಜ್ಞಾನದಿಂದ ಶರಣ್ಯಾಂತರ ವೈಮುಖ್ಯ ಉಂಟಾಗುತ್ತದೆಂಬ ಭಾವವು. ಹೀಗೆ ಎಲ್ಲರೂ ಪರತಂತ್ರರೆಂಬುವದಕ್ಕೆ ಭಾರತ ಉದ್ಯೋಗಪರ್ವದ (೧೩೦—೩೪) ವಿದುರವಾಕ್ಯವನ್ನು ಉದಾಹರಿಸಿರುತ್ತಾರೆ. ದುರ್ಯೋಧನನು ಧೃತರಾಷ್ಟ್ರ ಗಾಂಧಾರಿಗಳ ಬುದ್ಧಿವಾದಗಳನ್ನು ನಿರಾಕರಿಸಿ, ಕರ್ಣ ಮುಂತಾದವರೆಲ್ಲಾ ಲೋಚಿಸಿ, ಸಂಧಿಗಾಗಿ ಬಂದಿರುವ ಕಪಟನಾಟಕ ಸೂತ್ರಧಾರಿಯಾದ ಮುರಾರಿಯನ್ನು ಬಂಧಿಸಬೇಕೆಂಬ ದುರಾಲೋಚನೆಯನ್ನು ಸಾತ್ಯಕಿಯ ಮೂಲಕ ವಿದುರನು ಕೇಳಿ ಪರಿತಾಪದಿಂದ ಆ ದುರಾಲೋಚನೆಯನ್ನು ಧೃತರಾಷ್ಟ್ರನಲ್ಲಿ ತಿಳಿಸುವ ಸಂದರ್ಭವು. ಕೆಲವು ಕೋಶಗಳಲ್ಲಿ ಈ ಶ್ಲೋಕದ ಉತ್ತರಾರ್ಧವು:—"ಕಥಾ ಚಕ್ರಭೃತಸ್ಸರ್ವೇ ವಶಮೇಷ್ಯನ್ತಿ ಕೌರವಾಃ" ಬಲವತ್ತರನಾದ ವಾಯುವಿಗೆ ಎಲ್ಲಾ ತೃಣಾಗ್ರಗಳೂ ಹೇಗೆ ವಶವೋ, ಹಾಗೆಯೇ

ಪ್ರಪತ್ತ್ಯಧಿಕಾರವಿಶೇಷೇ ಪ್ರಮಾಣಾನಿ

ಇಷ್ಟು ಪ್ರಪತ್ತ್ಯಧಿಕಾರ ವಿಶೇಷವನ್ (೧) "ಸ ಪಿತ್ರಾಚ ಪರಿತ್ಯಕ್ತ್ಸ್ಸು ರೈಶ್ಚ ಸಮಹರ್ಷಿಭಿಃ ತ್ರೀನ್ಲೋಕಾನ್ ಸಂಪರಿಕ್ರಮ್ಯ ತಮೇವ ಶರಣಂ

ವರ್ಣನಧಾರಿಯಾಗಿ ಪಾರಿಜಾತಹರನಾಗಿರುವ ಚಕ್ರಧರನಾದ ಕೇಶವನಿಗೆ ಇಂದ್ರಾದಿ ಸಕಲ ದೇವತೆಗಳೂ ವಶರು; ಹಾಗೆಯೇ ಕೌರವರೂ ಕೂಡ ವಶರೆಂದು ಹೇಳತಕ್ಕದ್ದೇನಿದೆ ಎಂಬಭಿಪ್ರಾಯವು. ಈ ಉತ್ತರಾರ್ಧಕ್ಕೆ ಬದಲಾಗಿ ಇಲ್ಲಿ "ಧಾತು ರೇವಂ ವಶಂಯಾನ್ತಿ ಸರ್ವಭೂತಾನಿ ಭಾರತ" ಎಂದು ಇದೆ. ಇವುಗಳಲ್ಲಿ ಇದೇ ಸಾರತರವಾಗಿದೆ. (೨) ಎರಡನೇದು, ತನಗೆ ನಿರತಿಶಯವಾದ ಮೋಕ್ಷವಲ್ಲದೆ ಇನ್ನ್ಯಾವದರಲ್ಲೂ ಆಶೆಯಿಲ್ಲದಿರೋಣವು ಇನ್ನೊಂದು ಕಾರಣವು. ಶ್ರೀಯಃಪತಿಗೆ ಮಾತ್ರವೇ ಮೋಕ್ಷಪ್ರದತ್ವವಿರುವದರಿಂದ, ಅನ್ಯದೇವತೆಗಳ ಆಶ್ರಯಣವು ನಿರರ್ಥಕವಾಗುವದರಿಂದ ಶರಣ್ಯಾನ್ತರ ವೈಮುಖ್ಯವು ಉಂಟಾಗುತ್ತದೆಂಬ ತಾತ್ಪರ್ಯವು.

ಪ್ರಪತ್ತ್ಯಧಿಕಾರಕ್ಕೆ ವಿಶೇಷಗಳು ಆಕಿಂಚನ್ಯವೂ ಅನನ್ಯಗತಿತ್ವವೂ ಎಂಬುವದಕ್ಕೆ ಅನೇಕ ಪ್ರಮಾಣಗಳನ್ನೂ ಸಂಪ್ರದಾಯಗಳನ್ನೂ ಉದಾಹರಿಸುತ್ತಾರೆ.

ಪ್ರಪತ್ತ್ಯಧಿಕಾರ ವಿಶೇಷಗಳು ಆಕಿಂಚನ್ಯವೂ ಅನನ್ಯಗತಿತ್ವ ವೆಂಬುವದಕ್ಕೆ ಪ್ರಮಾಣಗಳು.

೧. ಇದು ರಾಮಾ. ಸುಂ. ೩೮-೩೩ ಶ್ಲೋಕವು. ಸೀತೆಯು ಆಂಜನೇಯನಿಗೆ ಕಾಕಾಸುರನ ದುರ್ವೃತ್ತವನ್ನು ತಿಳಿಸುವ ಸಂದರ್ಭವು; **ಸಃ** - ಆ ಕಾಕಾಸುರನ್, **ಪಿತ್ರಾಚ** - ತಂದೆಯಾದ ಇಂದ್ರನಿಂದಲೂ, ಇಲ್ಲಿ ಚಕಾರವಿರುವದರಿಂದ ಇತರರು ಈ ಕಾಕನಂ ರಕ್ಷಿಸದೇ ಇರುವದು ಹಾಗಿರಲಿ, ತಂದೆಯೂ ಕೂಡ ರಕ್ಷಿಸದೇ ಹೋದನೆಂಬಭಿಪ್ರಾಯವು. ಮಹರ್ಷಿಗಳಿಂದಲೂ, ದೇವತೆಗಳಿಂದಲೂ, **ಪರಿತ್ಯಕ್ತಃ** - ರಕ್ಷಿಸಲು ಸಾಧ್ಯವಿಲ್ಲೆಂದು ತ್ಯಜಿಸಲ್ಪಟ್ಟವನಾಗಿ, **ತ್ರೀನ್ ಲೋಕಾನ್ ಸಂಪರಿಕ್ರಮ್ಯ** - ಮೂರು ಲೋಕವನ್ನೂ ಅಲೆದವನಾಗಿ ಎಂದರೆ ಆ ಮೂರು ಲೋಕದಲ್ಲೂ ಶ್ರೀರಾಮನ ಬ್ರಹ್ಮಾಸ್ತ್ರವು ಅಟ್ಟಿಸಿಕೊಂಡು ಬರುವದನ್ನು ತಪ್ಪಿಸಲು ಯಾರೂ ಅಶಕ್ತರಾದುದರಿಂದ ಅಲೆದವನಾಗಿ, **ತಮೇವ**- ಆ ಶ್ರೀರಾಮನನ್ನೇ, **ಶರಣಂಗತಃ** - ಶರಣಹೊಂದಿದನು. ಇಲ್ಲಿ **ಸ ಪಿತ್ರಾಚ ಪರಿತ್ಯಕ್ತಃ** - ಎಂಬುವದರಿಂದ ಶರಣ್ಯಾನ್ತರವಿಲ್ಲವೆಂಬುವದರಲ್ಲಿ ಪ್ರಮಾಣವು.

ಗತಃ ”, (೨) “ಅಹಮಸ್ಮ್ಯಪರಾಧಾನಾಮಾಲಯೋಽಕಿಂಚನೋಽಗತಿಃ” (೩) “ಅಕಿಂಚನೋಽನನ್ಯಗತಿಶ್ಶರಣ್ಯ” (೪) “ಅನಾಗತಾನನ್ತಕಾಲ ಸಮೀಕ್ಷಯಾಪ್ಯದೃಷ್ಟಸನ್ತಾರೋಪಾಯಃ” (೫) “ತತ್ಪ್ರಾಪ್ತ್ಯೇಚ

ಪೂರ್ವಾರ್ಧದಭಿಪ್ರಾಯದಿಂದ ಆಕಿಂಚನ್ಯವು ತೋರಿಬರುತ್ತದೆ. **ತಮೇವ** ಶರಣಂ **ಗತಃ** – ಎಂಬುವದರಿಂದ ಅನನ್ಯಗತಿತ್ವವು ಸೂಚಿತವಾಯಿತು.

(೨) ಇದು ಅಹಿರ್ಬುಧ್ನ್ಯ ಸಂಹಿತಾವಾಕ್ಯವು (೩೭-೩೦) **ಅಹಂ** - ನಾನು. **ಅಪರಾಧಾನಾಂ** - ಅಪರಾಧಗಳಿಗೆ, **ಆಲಯಃ** - ತೌರ್ಮನೆಯು, **ಅಕಿಂಚನಃ** - ಬೇರೇ ಉಪಾಯವಿಲ್ಲದವನು, **ಅಗತಿಃ** - ಬೇರೆ ಪ್ರಯೋಜನವಿಲ್ಲದವನು. ಇಲ್ಲಿಯೂ ಆಕಿಂಚನ್ಯ ಅನನ್ಯಗತಿತ್ವಗಳು ಹೇಳಲ್ಪಟ್ಟವು.

(೩) ಆಳವಂದಾರ್ ಸ್ತೋತ್ರವು. ೨೨. ಹೇ **ಶರಣ್ಯ** - “ಮಾಮೇಕಂ ಶರಣಂ ವ್ರಜ” ಎಂದು ಹೇಳಿದ ಓ ಸರ್ವರಕ್ಷಕನೇ, **ಅಕಿಂಚನಃ** - ನಾನು ನಿನ್ನಲ್ಲಿ ಶರಣಾಗತಿಯನ್ನು ಮಾಡುವದಲ್ಲದೆ ಸಾಧನಾಂತರವಿಲ್ಲದವನು, **ಅನನ್ಯಗತಿಃ** - ನಾನು ಶರಣ್ಯಾನ್ತರ ಪ್ರಯೋಜನಾಂತರ ಶೂನ್ಯನು.

ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ ನ ಭಕ್ತಿಮಾಂಸ್ತ್ವಚ್ಚರಣಾರವಿಂದೇ।
ಅಕಿಂಚನೋಽನನ್ಯಗತಿಶ್ಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ ॥

ಎಂಬುವದು ಪೂರಾ ಶ್ಲೋಕವು. ಪೂರ್ವಾರ್ಧದಿಂದ ಅಜ್ಞಾನ ಅಶಕ್ತಿಗಳನ್ನು ಹೇಳಿ ಉತ್ತರಾರ್ಧದಿಂದ ಆಕಿಂಚನ್ಯ ಅನನ್ಯಗತಿತ್ವಗಳ ಮೂಲಕ ಪ್ರಪತ್ತ್ಯಧಿಕಾರ ವಿಶೇಷವನ್ನು ಪ್ರಕಟಿಸಿ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ.

ಇದು ಸಂಪ್ರದಾಯಕ್ಕೆ ಪ್ರಮಾಣವು.

(೪) ಇದು ಶ್ರೀ ಭಾಷ್ಯಕಾರರಿಂದ ವಿರಚಿತವಾದ ಮಿತಗದ್ಯವಾದ ಶ್ರೀರಂಗ ಗದ್ಯದ ವಾಕ್ಯವು. **ಅನಾಗತ** - ಇನ್ನೂ ಬಾರದೇ ಇರುವ, ಎಂದರೆ ಭವಿಷ್ಯತ್ತಾದ, **ಅನನ್ತಕಾಲ** – ಕೊನೆಯೇ ಇಲ್ಲದ ಕಾಲವೆಲ್ಲಾ, **ಸಮೀಕ್ಷಯಾಪಿ** - ಚನ್ನಾಗಿ ವಿವೇಕಿಸಿ ನೋಡಿದರೂ ಕೂಡ **ಅದೃಷ್ಟಸನ್ತಾರೋಪಾಯಃ** – ಬೇರೆ ಇನ್ನಾವದೂ ಕಣ್ಣಿಗೆ ಕಾಣಿಸದೇ ಇರುವ ಸಂಸಾರ ಸಾಗರವನ್ನು ದಾಟುವ ಉಪಾಯವುಳ್ಳವನು. ಇದರಿಂದ **ಆಕಿಂಚನ್ಯವು** ಉದಾಹರಿಸಲ್ಪಟ್ಟಿತು. “**ನಿಖಿಲಜಂತುಜಾತಶರಣ್ಯ ಶ್ರೀಮನ್ನಾರಾಯಣ ತವಚರಣಾರವಿಂದಯುಗಳಂ ಶರಣಮಹಂಪ್ರಪದ್ಯೇ**” ಎಂದು ಮುಂದೆ ಇರುತ್ತದೆ. ಅದಕ್ಕೆ ಮುಂದೆ “**ನಚಾನ್ಯೇಗತಿ ಮನ್ಯಥಾ**” ಎಂದಿರುವದರಿಂದ ಶ್ರೀ ಭಾಷ್ಯಕಾರರವರು

ತತ್ಪಾದಾಂಬುಜ ದ್ವಯಪ್ರಪತ್ತೇಃ ರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನ ಮಸ್ತೀತಿ ಮನ್ವಾನಃ" (೬) "ಪುಕಲೊನ್ರಿಲ್ಲಾವಡಿಯೇನ್" ಎನ್ರು ಇನ್ನೈ ಮೊದಲಾನ ಪ್ರಮಾಣ ಸಂಪ್ರದಾಯಙ್ಗಳಾಲೇ ಸಿದ್ಧಮ್.

ಆಕಿಂಚನ್ಯ ಅನನ್ಯಗತಿತ್ವವನ್ನೂ ಪ್ರದರ್ಶಿಸಿ, ಶರಣಾಗತಿಯನ್ನನುಷ್ಠಿಸಿರುವದರಿಂದ ಸಂಪ್ರದಾಯಕ್ಕೆ ಪ್ರಮಾಣವು.

(೫) ಇದು ಶ್ರೀ ಭಾಷ್ಯಕಾರರವರ ವೈಕುಂಠಗದ್ಯದಲ್ಲಿನ ವಾಕ್ಯವು. ತತ್ಪ್ರಾಪ್ತಯೇಚ - ಅದನ್ನು ಹೊಂದುವದಕ್ಕಾದರೋ, ಹಿಂದೆ "ಪಾದಾಂಬುಜ ದ್ವಂದ್ವ ಪರಿಚರ್ಯೈಕ ಮನೋರಥಃ-ಎಂದು ಇರುವದರಿಂದ, ತತ್ಪ್ರಾಪ್ತಯೇ-ಶ್ರೀಯಃಪತಿಯ ಪಾದಕಮಲಗಳ ಪರಿಚರ್ಯೆಯನ್ನು ಹೊಂದುವದಕ್ಕಾದರೋ, ತತ್ಪಾದಾಂಬುಜದ್ವಯಪ್ರಪತ್ತೇಃ - ಆ ಶ್ರೀಯಃಪತಿಯಪಾದ ಕಮಲದ್ವಂದದಲ್ಲಿ ಮಾಡುವ ಶರಣಾಗತಿಗಿಂತಲೂ, ಅನ್ಯತ್-ಬೇರೆಯಾದ, ಸಾಧನಂ - ಸಾಧನವು, ಉಪಾಯವು, ಮೇ - ನನಗೆ, ಕಲ್ಪಕೋಟಿಸಹಸ್ರೇಣಾಪಿ - ಸಹಸ್ರಕೋಟಿ ಕಲ್ಪಗಳು ಕಳೆದರೂ ಕೂಡ, ನಾಸ್ತಿ - ಇಲ್ಲವು, ಇತಿ - ಎಂಬದಾಗಿ, ಮನ್ವಾನಃ-ತಿಳಿದವನಾಗಿ, "ಶರಣಮನುವ್ರಜೇತ್" ಶರಣವನ್ನು ಹೊಂದತಕ್ಕದ್ದು ಎಂದು ಮುಂದೆ ಇದೆ. ಇದರಿಂದ ಆಕಿಂಚನ್ಯವು ಉದಾಹರಿಸಲ್ಪಟ್ಟಿತು.

(೬) ತಿರುವಾಯ್‌ಮೊಳಿ ೬-೧೦-೧೦. ಈ ಅಮೋಘ ಪಾಶುರವು ಹಿಂದೆಯೂ ಉಪಪಾದಿಸಲ್ಪಟ್ಟಿರುತ್ತದೆ. ೧೧೦. ೩೪೭ನೇ ಪುಟಗಳನ್ನು ಪರಾಂಬರಿಸಿ, ಪುಕಲೊನ್ರು - ಬೇರೆ ಯಾವ ಉಪಾಯವು, ಇಲ್ಲಾ - ಇಲ್ಲದೇ ಇರುವ, ಅಡಿಯೇನ - ದಾಸನಾದ ನಾನು. ಇದರಿಂದ ಆಕಿಂಚನ್ಯವೂ, ಅಡಿಯೇನ ಎಂಬುವದರಿಂದ ಅನನ್ಯಗತಿತ್ವಗಳಾದ ಪ್ರಪತ್ತ್ಯಧಿಕಾರ ಸ್ವರೂಪವು ಹೇಳಲ್ಪಟ್ಟಿತು.

ಎನ್ರು - ಎಂಬ, ಇನ್ನೈ ಮೊದಲಾನ - ಇವೇ ಮೊದಲಾದ, ಪ್ರಮಾಣ ಸಂಪ್ರದಾಯಙ್ಗಳಾಲೇ - ಪ್ರಮಾಣವೇನು, ಶಿಷ್ಟಾಚಾರವೇನು ಇವುಗಳ ಮೂಲಕವಾಗಿ, ಅಥವಾ ಪ್ರಮಾಣಗಳನ್ನನುಸರಿಸಿರುವ ಶಿಷ್ಟಾಚಾರಗಳ ಮೂಲಕವಾಗಿ ಎಂದೂ ಅರ್ಥ ಮಾಡಬಹುದು; ನಮ್ಮ ಶಿಷ್ಟಾಚಾರಗಳು ಯಾವುವೂ ಪ್ರಮಾಣಗಳನ್ನು ದೂರೀಕರಿಸಲಿಲ್ಲವೆಂಬ ಭಾವವು; ಇವುಗಳಿಂದ, ಪ್ರಪತ್ತ್ಯಧಿಕಾರ ವಿಶೇಷವು - ಪ್ರಪತ್ತ್ಯಧಿಕಾರವಿಶೇಷವಾದ ಆಕಿಂಚನ್ಯ ಅನನಗತಿತ್ವಗಳು, ಸಿದ್ಧಂ-ಸ್ಥಾಪಿತವಾದವು.

ಪ್ರಪತ್ತಿ ಸರ್ವಾಧಿಕಾರತ್ವಂ

ಇವ್ವಳವಧಿಕಾರಮ್ ಪೆಱ್ಱಾಲ್ ಪ್ರಪತ್ತಿಕ್ಕು ಜಾತ್ಯಾದಿ ನಿಯಮ ಮಿಲ್ಲಾಮೈಯಾಲೇ ಸರ್ವಾಧಿಕಾರತ್ವಂ ಸಿದ್ಧಮ್.

ಅನ್ದಣರನ್ತಿಯರೆಲ್ಲೈಯಿಲ್ ನಿನ್ರ ವನೈತ್ತುಲಕುಮ್ ।
ನೊನ್ದವರೇ ಮುದಲಾಕ ನುಡಙ್ಗಿಯ ನನ್ನಿಯರಾಯ್ ।

ಪ್ರಪತ್ತಿಯಲ್ಲಿ ಸರ್ವವರ್ಣಾಶ್ರಮಿಗಳಿಗೂ ಅಧಿಕಾರವು.

ಇವ್ವಳವಧಿಕಾರಂ ಪೆಱ್ಱಾಲ್– ಈ ವಿಶೇಷಾಧಿಕಾರವಾದ ಆಕಿಂಚನ್ಯ ವನ್ನೂ ಅನನ್ಯಗತಿತ್ವವನ್ನೂ ಹೊಂದಿದುದಾದರೆ, **ಪ್ರಪತ್ತಿಕ್ಕು ಜಾತ್ಯಾದಿ ನಿಯಮಮಿಲ್ಲಾಮೈಯಾಲೇ** - ಪ್ರಪತ್ತಿಮಾರ್ಗಕ್ಕೆ ಜಾತಿ ಮೊದಲಾದ ವರ್ಣಾಶ್ರಮ ನಿಯಮಗಳೊಂದೂ, ಭಕ್ತಿಮಾರ್ಗಕ್ಕಿರುವಹಾಗೆ ಇಲ್ಲದುದರಿಂದ, **ಸರ್ವಾಧಿಕಾರತ್ವಂ** - ಪಂಚಮ ಮೊದಲುಗೊಂಡು ಸರ್ವರಿಗೂ ಅಧಿಕಾರ ಉಂಟೆಂಬುವದು, **ಸಿದ್ಧಂ** - ಶಾಸ್ತ್ರಸಿದ್ಧವಾದುದು. ಇಲ್ಲಿ ಸರ್ವ ಶಬ್ದವು ಆಕಿಂಚನ್ಯ ಅನನ್ಯಗತಿತ್ವ ವಿರುವ ಸರ್ವರಿಗೂ ಎಂದು ಇಟ್ಟುಕೊಳ್ಳತಕ್ಕದ್ದು. ಆದರೆ ಈ ವಿಶೇಷಾಧಿಕಾರ ಮಾತ್ರವಿಲ್ಲದಿದ್ದರೆ, ಉಪಾಯತ್ವವು ಸಂಭವಿಸುವದಿಲ್ಲವೆಂಬಭಿಪ್ರಾಯವು ಇದರಿಂದ ಏರ್ಪಡುತ್ತದೆ.

ಆದರೆ ಬ್ರಾಹ್ಮಣರು ನಿತ್ಯನೈಮಿತ್ತಿಕಾನುಷ್ಠಾನಾದಿಗಳಿಂದ ಉತ್ಕೃಷ್ಟ ರೆಂದೂ, ಶೂದ್ರಾದಿಗಳಿಗೆ ಇವು ಯಾವುವೂ ಇಲ್ಲದುದರಿಂದ ನಿಕೃಷ್ಟರೆಂದೂ ಶಾಸ್ತ್ರ ಗಳಲ್ಲಿ ಹೇಳಿರುವಾಗ, ಇಬ್ಬರಿಗೂ ಸಮವಾದ ಅಧಿಕಾರ ಉಂಟೆಂದು ಹೇಳಿದುದು ನ್ಯಾಯವೋ ಎಂಬ ಸಂಶಯವನ್ನು ಹೋಗಲಾಡಿಸುವರಾಗಿ, ಅಧಿಕಾರಾರ್ಥವನ್ನು ಸಙ್ಗ್ರಹಿಸಿ ಮುಂದಿನ ಪಾಶುರದಿಂದ ಪ್ರಪತ್ತಿಯ ಸರ್ವಾಧಿಕಾರತ್ವವನ್ನು ಸ್ಥಿರಪಡಿ ಸುತ್ತಾರೆ.

ಚಂಡಾಲ

ಅರ್ಥ:—**ಅನ್ದಣರ್** - ಬ್ರಾಹ್ಮಣರು, **ಅನ್ತಿಯರ್** - ಪಂಚಮರು, **ಎಲ್ಲೈಯಿಲ್** - ಈ ಇಬ್ಬರ ಅವಧಿ ಮಧ್ಯದಲ್ಲಿರುವ ಎಂದರೆ ಬ್ರಾಹ್ಮಣರ ಮೊದಲುಗೊಂಡು ಪಂಚಮರವರಿವಿಗೂ, **ನಿನ್ರ** - ಇರುವ, **ಅನೈತ್ತುಲಕುಮ್** - ಸಮಸ್ತ ಲೋಕವೂ ಎಂದರೆ ಸಮಸ್ತ ಜನರೂ, **ನೊನ್ದವರೇ ಮುದಲಾಕ** - ಸಂಸಾರತಾಪದಿಂದ ದುಃಖಪಟ್ಟು ಆರ್ತರಾಗಿರುವವರೇ ಮೊದಲಾದ, **ನುಡಙ್ಗಿ** - ಕೃಶರಾಗಿ ಎಂದರೆ ಆಕಿಂಚನರಾಗಿ, **ಅನನ್ನಿಯರಾಯ್** - ಅನನ್ಯಗತಿಕರಾಗಿ

ವನ್ಗಡೈಯುಮ್ ವಗೈ ವನ್ ತಕವೇನ್ನಿ ವರುನ್ನಿಯ ನಮ್ ।
ಅನ್ತಮಿಲಾದಿಯೈ ಯನ್ಬರ ರಿನ್ದರಿವಿತ್ತನರೇ ॥ ೧೭ ॥

ಎಂದರೆ ಅನನ್ಯಪ್ರಯೋಜನರಾಗಿಯೂ ಅನನ್ಯಶರಣರಾಗಿಯೂ, **ವನ್ದು**-ಬಂದು, **ವನ್**-ದೃಢವಾದ, ಬಲವಾದ, **ತಕವು**-ಕೃಪೆಯನ್ನು, **ಎನ್ನಿ**-ಯಾದೃಚ್ಛಿಕ ಸುಕೃತಾದಿ ವ್ಯಾಜಮೂಲಕ ಧರಿಸಿ, **ವರುನ್ನಿಯ**-ಚೇತನರನ್ನುದ್ಧರಿಸಬೇಕೆಂಬ ಯತ್ನದಲ್ಲಿ ಬಹು ಪ್ರಯಾಸಪಡುತ್ತಿರುವ, **ನಮ್**-ನಮ್ಮ, **ಅನ್ತಮಿಲ್**-ದೇಶಕಾಲವಸ್ತು ಪರಿಚ್ಛೇದರಹಿತನಾದ, **ಆದಿಯೈ**-ಜಗತ್ಕಾರಣನಾದ ಸರ್ವೇಶ್ವರನನ್ನು, **ಅನ್ಬರ್**-ಪ್ರೀತಿಯುಳ್ಳ, ಎಂದರೆ ಭಗವದ್ಭಾಗವತರಲ್ಲಿ ಭಕ್ತಿಯುಳ್ಳ, ನಮ್ಮ ಆಚಾರ್ಯರುಗಳು, **ಅಡೈಯುಮ್ ವಗೈ**-ಶರಣವನ್ನು ಹೊಂದುವ ರೀತಿಯನ್ನು, **ಅರಿನ್ದು**-ತಾವು ಮೊದಲು ತಿಳಿದವರಾಗಿ, **ಅರಿವಿತ್ತನರೇ**-ಉಪದೇಶಿಸಿದರಲ್ಲವೇ.

ತಾತ್ಪರ್ಯ:—ಭಕ್ತಿಮಾರ್ಗದ ಅಧಿಕಾರದ ಹಾಗೆ ವರ್ಣಾಶ್ರಮಾದಿಗಳ ಸಂಬಂಧವೇನೂ ಇಲ್ಲದೆ, ಈ ಪ್ರಪತ್ತ್ಯಧಿಕಾರದಲ್ಲಿ ಬ್ರಾಹ್ಮಣರ ಮೊದಲುಗೊಂಡು ಪಂಚಮರವರೆವಿಗೂ ಇರುವ ಸಮಸ್ತಜನರಿಗೂ ಈ ಪ್ರಪತ್ತಿಯಲ್ಲಿ ಅಧಿಕಾರ ಉಂಟೆಂದು ಮೊದಲನೇ ಪಾದದಿಂದ ಹೇಳಿದರು. ಇದಕ್ಕೆ ವಿಶೇಷ ಅಧಿಕಾರವೇನಾದರೂ ಉಂಟೇ ಎಂಬ ವಿಚಾರದಲ್ಲಿ ಉಂಟೆಂಬದಾಗಿ ಎರಡನೇ ಪಾದದಿಂದ ಆಕಿಂಚನ್ಯವೂ ಅನನ್ಯಗತಿತ್ವವೂ **ಸುಡರ್ಜ್ಞಯ ನನ್ನಿಯುರಾಯ್**' ಎಂಬುವದರ ಮೂಲಕ ತಿಳಿಯಪಡಿಸಿರುತ್ತಾರೆ. ಯಾವಾಗ ಈ ಆಕಿಂಚನ್ಯವೂ ಅನನ್ಯಗತಿತ್ವವೂ ಉಂಟಾಯಿತೋ, ಆಗ ಶರಣಾಗತವತ್ಸಲನೆಂಬ ಬಿರುದನ್ನು ಹೊಂದಿರುವ ಶ್ರೀಯಃಪತಿಯು ಸಿದ್ಧೋಪಾಯನಾಗಿ, ತನ್ನನ್ನು ಬಂದು ಸೇರುವ ಮಾರ್ಗವನ್ನು ತಾನೇ ತೋರಿಸಿಕೊಟ್ಟು ಕಾಪಾಡುವನು. ಸ್ವತಂತ್ರಪ್ರಪತ್ತಿರೂಪವಾದ ಉಪಾಯಾನುಷ್ಠಾನಕ್ಕೆ ಅನಂತನಾಗಿ ಎಂದರೆ ದೇಶಕಾಲವಸ್ತು ಪರಿಚ್ಛೇದರಹಿತನಾಗಿ ಆದಿಕಾರಣನಾಗಿರುವ ಸರ್ವೇಶ್ವರನೇ ಕಾರಣಭೂತನಾಗಿ ಕಾಪಾಡುವನು. ಅದು ಏತಕ್ಕೆಂದರೆ, ಆ ಕೃಪಾಸುಧೋದಧಿಯು ಪ್ರಪನ್ನ ಪರಿತ್ರಾಣಕ್ಕಾಗಿಯೇ ಅವಸರ ಪ್ರತೀಕ್ಷೆಯಲ್ಲಿರುವನು. ನಾವುಗಳಾದರೋ ಈ ಪ್ರಕೃತಿ ಸಂಬಂಧಮೂಲಕ ಇಂದ್ರಿಯಗಳಿಗೆ ವಶಪಟ್ಟು ಬಹಳ ಕಷ್ಟದೆಶೆಯಲ್ಲಿದ್ದುಕೊಂಡು (೧) "**ದೀನಾಂ ದಶಾಮವಾಪ್ತ**" ಎಂದು ಹೇಳುವ ಹಾಗೆ "**ಸೊನ್ನವರ್**" ಆಗುತ್ತೇವೆ.

(೧) ಸಂಕಲ್ಪಸೂರ್ಯೋದಯ.

(೨) "ಗರ್ಭಜನ್ಮಜರಾಜ್ಞಾನ ಮೃತ್ಯುನಾರಕಜಂ ತಥಾ ।
ದುಃಖಂ ಸಹಸ್ರಶೋಭೇದೈರ್ಭಿದ್ಯತೇ ಮುನಿಸತ್ತಮ" ಎಂದೂ,
(೩) ಯಾವಜ್ಜೀವತಿ ತಾವಚ್ಚ ದುಃಖೈರ್ನಾನಾವಿಧೈಃ ಪ್ಲುತಃ
ತಂತುಕಾರಣಪಕ್ಷ್ಮೌಘೈರಾಸ್ತೇ ಕಾರ್ಪಾಸ ಬೀಜವತ್ ॥ ಎಂದೂ

"ರೋಗಾಶ್ಚ ಶತ್ರವ ಇವ ಪ್ರಹರಂತಿದೇಹಂ" ಎಂದೂ, ಹೇಳಿರುವಹಾಗೆ, ಈ ಜೀವನನು ಈ ಸಂಸಾರಾವಸ್ಥೆಯಲ್ಲಿ ಬಹು ವಿಧ ಕ್ಲೇಶಗಳನ್ನನುಭವಿಸಿ ನೊಂದಿರುತ್ತಾನೆ. ಹೀಗೆ ದುಃಖಾಕುಲನಾಗಿರುವಾಗ,

"ಏವಂ ಸಂಸೃತಿ ಚಕ್ರಸ್ಥೇ ಭ್ರಾಮ್ಯಮಾಣೇ ಸ್ವಕರ್ಮಭಿಃ ।
ಜೀವೇ ದುಃಖಾಕುಲೇ ವಿಷ್ಣೋಃ ಕೃಪಾಕಾಪ್ಯುಪಜಾಯತೇ"

ಎಂದು ಹೇಳಿರುವ ಹಾಗೆ ಏನೋ ಒಂದು ಸುಕೃತ ವಿಶೇಷ ವ್ಯಾಜದಿಂದ ವಿಷ್ಣು ಕೃಪೆಯು ಈ ಜೀವನಿಗೆ ಉಂಟಾಗುತ್ತದೆ. ಆತನನ್ನು ಆಶ್ರಯಿಸದೇನೇ ಆತನ ನಿರ್ಹೇತುಕ ಕೃಪೆಯು ನಮಗೆ ಅನೇಕ ಒಳ್ಳೇದನ್ನುಂಟುಮಾಡಿರುತ್ತದೆ. ಪ್ರಥಮತಃ ನಮಗೆ ಆ ಕೃಪೆಯು ಕರಣಕಳೇಬರಗಳನ್ನಿತ್ತಿತು; ಸಚ್ಛಾಸ್ತ್ರಗಳನ್ನು ಕೊಟ್ಟಿತು; ಮಾನುಷಜನ್ಮವನ್ನಿತ್ತಿ ಸುಜ್ಞಾನ ವಿವೇಕಾದಿಗಳನ್ನು ಹೊಂದುವ ಹಾಗೆ ಮಾಡಿತು; ಸಾಧುಜನಗಳು ಹುಟ್ಟಿ ಈ ಲೋಕವನ್ನು ಪವಿತ್ರೀಕರಿಸುವ ಹಾಗೆ ಮಾಡಿ ಅಜ್ಞಾನಿಗಳ ಅಜ್ಞಾನಾಂಧಕಾರವು ತೊಲಗುವ ಹಾಗೆ ಮಾಡಿತು; ಅಂತಹ ಸಾಧು ಜನಗಳಾಶ್ರಯವನ್ನುಂಟುಮಾಡಿತು. ಇಷ್ಟೆಲ್ಲಾ ನಿರ್ಹೇತುಕವಾಗಿಯೇ ಆ ಕೃಪೆಯು ಮಾಡಿರುವಾಗ, ಆತನನ್ನು ಆಶ್ರಯಿಸುವರ ವಿಷಯದಲ್ಲಿ ಆ ಕೃಪಾಮಾಹಾತ್ಮ್ಯವನ್ನು ಹೇಳಬೇಕೇ? ಆದುದರಿಂದ ಶ್ರಿಯಃಪತಿಯ ಕೃಪೆಯು **ವರ್ತಕವು** ಎಂದು ಹೇಳಲ್ಪಟ್ಟಿತು. ದೃಢಸಂಕಲ್ಪನ ಕೃಪೆಯೂ ದೃಢವಾದುದೇ. ಪ್ರಪನ್ನನಲ್ಲಿ ಏನಾದರೂ ದೋಷವಿದ್ದರೆ ಅದಕ್ಕೇನಾದರೂ ಸ್ಖಾಲಿತ್ಯ ಉಂಟೋ ಎಂದರೆ ಅಂಥಾ ಭಯವೇನೂ ಇಲ್ಲವೆಂದು **ವಂತಕವು** ಎಂದು ಪ್ರಯೋಗಿಸಿರುತ್ತಾರೆ.

(೪) "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ
ದೋಷೋ ಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಂ"

'ನನ್ನನ್ನು ನಂಬಿ ಬಂದವನನ್ನಾಗಲಿ, ಅಥವಾ ಸರ್ವರಕ್ಷಕನೆಂದು ತಿಳಿದು ಬಂದವನನ್ನಾಗಲಿ ಎಂದಿಗೂ ತ್ಯಜಿಸೆನು, ಆತನಲ್ಲಿ ದೋಷತಾನೇ ಏಕಿರಕೂಡದು, ಅಂತಹ [illegible] ಹಿತ ರಕ್ಷಿಸುವದು ಮಹನೀಯರಿಗೇನೂ ನಿಂದ್ಯವಲ್ಲವ

(೨) ವಿ. ಪು. ೬.೫.೯. (೩) ವಿ.ಪು. ೬.೫.೫೩. (೪) ರಾ. ಯುದ್ಧ. ೧೮.

ಎಂದು ಹೇಳಿ ಅಂತಹ ತನ್ನ ಕೃಪಾ ಮಾಹಾತ್ಮ್ಯೆಯನ್ನು ಸರ್ವೇಶ್ವರನೇ ವ್ಯಕ್ತಪಡಿಸಿರುತ್ತಾನೆ. ಹಾಗೆಯೇ ಸಂಕಲ್ಪಸೂರ್ಯೋದಯದಲ್ಲೂ,

“ದೀನೋದೃಪ್ಯತು ವಾ ಪತಾಧ್ಯತು ಪರಂ ವ್ಯಾವರ್ತತಾಂ ವಾತತಃ
ತ್ರಾತಾ ತನ್ನ ಶರಣಾಗತಶ್ಚ ಕನತಸ್ಸದ್ಭಿಸ್ತಥಾ ಸ್ಥಾಪ್ಯತೇ

ಶರಣಾಗತನಾದ ಚೇತನನು ವಿಭೀಷಣನ ಹಾಗೆ ದೀನನಾಗಿಯೇ ಇರಲಿ, ಅಥವಾ ಸಮುದ್ರರಾಜನ ಹಾಗೆ ಅಹಂಕಾರಯುಕ್ತನಾಗಿಯೇ ಇರಲಿ, ಕಾಕಾಸುರನ ಹಾಗೆ ಮಹಾಪರಾಧಿಯಾಗಿಯೇ ಇರಲಿ, ಅಥವಾ ಸುಗ್ರೀವನೋಪಾದಿಯಲ್ಲಿ ಉದಾಸೀನನಾಗಿಯೇ ಇರಲಿ, ಯಾವಾಗ ಶರಣಾಗತನಾದನೋ, ಆಗ ರಕ್ಷಿಸಲ್ಪಟ್ಟೇ ಪಡುವನು ಎಂಬ **ವನ್ ತಕವು**, ದೃಢತರವಾದ ಕೃಪಾಪ್ರಭಾವವನ್ನು ಉಳ್ಳವನು. ಹಾಗೆ ಕೃಪಾಪ್ರಭಾವ ಉಳ್ಳವನಾದುದರಿಂದಲೇ ಶರಣಾಗತ ಚೇತನರ ರಕ್ಷಣೆಯಲ್ಲಿ **ವರುನ್ಬಿಯ ನಮ್ ಅನ್ಬಿಲ್ ಆದಿ** ಎಂದು ಸರ್ವೇಶ್ವರನು ಹೇಳಿಕೊಂಡಿರುತ್ತಾನೆ. ಹಾಗೆ ಪ್ರಯಾಸಪಟ್ಟದ್ದು ಗಜೇಂದ್ರಮೋಕ್ಷ ಕಾಲದಲ್ಲೂ ಪ್ರಹ್ಲಾದರಕ್ಷಣೆಯಲ್ಲೂ ವ್ಯಕ್ತವು. ದ್ರೌಪದಿಯ ಮಾನಸಂರಕ್ಷಣ ಕಾಲದಲ್ಲಿ ತಾನು ಪಟ್ಟ ಪ್ರಯಾಸವನ್ನು ತಾನೇ ಹೇಳಿಕೊಂಡಿರುತ್ತಾನೆ :—

ಗೋವಿಂದೇತಿ ಯದಾಕ್ರಂದತ್ ಕೃಷ್ಣಾ ಮಾಂ ದೂರವಾಸಿನಂ ।
ಋಣಂ ಪ್ರವೃದ್ಧಮಿವ ಮಾಂ ಹೃದಯಾನ್ನಾಪಸರ್ಪತಿ ॥

ಹಾಗೆಯೇ ಪಾಂಡವರ ಸಂರಕ್ಷಣಾರ್ಥವಾಗಿ ಶ್ರೀಕೃಷ್ಣನು ಪಟ್ಟ ಪ್ರಯಾಸವನ್ನು ವಿಸ್ತರಿಸಲು ಸಾಧ್ಯವಲ್ಲವು. ಆದುದರಿಂದ ವರುನ್ಬಿಯ ಎಂಬ ಪ್ರಯೋಗವು. ಸರ್ವೇಶ್ವರನು ಹೀಗೆ ನಮ್ಮ ವಿಷಯದಲ್ಲಿ ಕೃಪಾಪ್ರಭಾವಯುಕ್ತನಾಗಿ, ನಮಗೆ ಶೇಷಿಯಾಗಿ, ಆತ್ಮನಾಗಿ, ಪ್ರೇರಕನಾಗಿ, ಸಾಧುಮಾರ್ಗಪ್ರವರ್ತಕನಾಗಿ, ಮಾರ್ಗದರ್ಶಿಯಾಗಿ, ಪ್ರಾಪ್ಯನಾಗಿ, ಸರ್ವವಿಧ ಬಂಧುವಾಗಿ, ರಕ್ಷಿಸುವದಕ್ಕಾಗಿ ತುಂಬಾ ಪ್ರಯಾಸವನ್ನು ವಹಿಸುವನಾಗಿ, ಇರುವದರಿಂದಲೇ ನಮ್ ಅನ್ಬಿಲಾದಿ ಎಂಬಲ್ಲಿ **ನಮ್** ಎಂಬ ಪ್ರಯೋಗವು, **ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ** ಎಂದು ಹೇಳಿರುವಹಾಗೆ ಶರಣಾಗತಿಯ ಅಮೋಘ ಮಾಹಾತ್ಮ್ಯೆಯನ್ನರಿತವರು, ನಮ್ಮ ಆಚಾರ್ಯರೇ ವಿನಾ ಇತರರಲ್ಲವು ಆ ಆಚಾರ್ಯರೆಂತವರೆಂದರೆ:- **ಅನ್ಬರ್**-ಭಗವಂತನಲ್ಲೂ ತದೀಯರಲ್ಲೂ ನಿರತಿಶಯಭಕ್ತಿವಿಶ್ವಾಸವುಳ್ಳವರು. ಮೇಲೆ ವಿವರಿಸಿದ ರೀತಿಯಲ್ಲಿ, ನಾನಾವಿಧವಾಗಿ ಆತನ ದೃಢತರ ಕೃಪಾಪ್ರಭಾವದಿಂದ ಪರಮೋಪಕಾರವನ್ನು ಹೊಂದಿದ ಬೇಕ ಅಂತಹ ಕೃಪಾಸಾಗರನಲ್ಲೂ ಆತನ ಪರಮಭಕ್ತರಲ್ಲೂ, ಭಕ್ತಿವಿಶ್ವಾಸಗಳಿರುವದೇನೂ ಹೆಚ್ಚಲ್ಲವು. ಈ ಶರಣಾಗತಿಮಾಹಾತ್ಮ್ಯೆಯನ್ನು ತಾವು ಗ್ರಹಿಸಿದುದೂ ಅಲ್ಲದೆ, ಸರ್ವೇಶ್ವರನ ಹಾಗೆ ಅವರೂ

ಭಕ್ತ್ಯಾದೌ ಶಕ್ತ್ಯಭಾವ ಪ್ರಮಿತಿ ರಹಿತತಾ ಶಾಸ್ತ್ರತಃ ಪರ್ಯುದಾಸಃ
ಕಾಲಕ್ಷೇಪಾಕ್ಷಮತ್ವಂ ತ್ವಿತಿ ನಿಯತಿ ವಶಾದಾಪತದ್ಭಿಶ್ಚತುರ್ಭಿಃ ।

ಪರಮೋಪಕಾರಭಾವವುಳ್ಳವರಾದುದರಿಂದ, ತಾವು ಕೃತಾರ್ಥರಾದಂತೆ ಸರ್ವರೂ ಉಜ್ಜೀವಿಸಲಿ, ತಮ್ಮ ಈಗಿರುವ ದೀನದೆಸೆಯನ್ನು ನೀಗಿಕೊಳ್ಳಲಿ ಎಂದು, ಇತರರಿಗೂ ಕೂಡ ಅದರ ಮಾಹಾತ್ಮ್ಯವನ್ನು ಉಪದೇಶಿಸಿರುತ್ತಾರೆ. ಆದುದರಿಂದ ಇಂತಹ ಹಿತೋಪದೇಶವನ್ನು ಮಾಡಿದ ಮಹರ್ಷಿಯರ ಉಪದೇಶಗಳಿಗೆ ಪೂರ್ಣಗಮನ ಕೊಟ್ಟು, ಈ ಪ್ರಪತ್ತಿಯನ್ನನುಷ್ಠಿಸಿ ಸರ್ವರೂ ಕೃತಾರ್ಥರಾಗತಕ್ಕದ್ದೆಂಬುದು ಮುಖ್ಯ ತಾತ್ಪರ್ಯವು.

ಅವತಾರಿಕೆ. ಹಿಂದಿನ ಪಾಶುರದಲ್ಲಿ ಆಕಿಂಚನ್ಯ ಅನನ್ಯಗತಿತ್ವಗಳು ಪ್ರಪತ್ತಿಯ ವಿಶೇಷಾಧಿಕಾರಗಳೆಂದು ಸ್ಥಾಪಿಸಲ್ಪಟ್ಟವು. ಹಿಂದಿನ ಉಪಪಾದನದಲ್ಲಿ ಸಾಂಗವಾಗಿ ಅನುಷ್ಠಿಸಲು ಶಕ್ತಿಯೂ, ಸಾಂಗಯೋಗದ ಸ್ವರೂಪವನ್ನು ನಿರ್ಧರಿಸುವ ಜ್ಞಾನವೂ, ತ್ರೈವರ್ಣಿಕರಲ್ಲಿ ಜನ್ಮರಾಗಿರುವಿಕೆಯೂ, ವಿಳಂಬಫಲಪ್ರಾಪ್ತಿಯಲ್ಲಿ ಮನಸ್ಸೂ, ಇದ್ದರೆ ಭಕ್ತಿಮಾರ್ಗಾವಲಂಬಿಗೆ ಅಧಿಕಾರವೆಂದು ಹೇಳಲ್ಪಟ್ಟಿತು. ಈಗ ಈ ಶ್ಲೋಕದ ಮೂಲಕ ಈ ಮೇಲೆ ಹೇಳಿದ ನಾಲ್ಕೂ ಇಲ್ಲದಿದ್ದರೆ ಒಂದೊಂದಾಗಿಯೂ, ಎರಡೆರಡಾಗಿಯೂ, ಮೂರುಮೂರಾಗಿಯೂ, ನಾಲ್ಕಾಗಿಯೂ ಸೇರಿಸಿ ಉಂಟಾಗುವ ಹದಿನೈದು ವಿಧ ಅಧಿಕಾರಿಗಳಿಗೆಲ್ಲಾ ಪ್ರಪದನವೇ ಉಪಾಯವೆಂದುಪದೇಶಿಸುತ್ತಾರೆ.

ಅರ್ಥ:— ಭಕ್ತ್ಯಾದೌ ಭಕ್ತಿಯೋಗ ಮೊದಲಾದವುಗಳಲ್ಲಿ, ಇಲ್ಲಿ ಆದಿಶಬ್ದದಿಂದ ಕರ್ಮಜ್ಞಾನಯೋಗಗಳು ಹೇಳಲ್ಪಟ್ಟವು. (೧) ಇಲ್ಲಿ **ಭಕ್ತ್ಯಾದೌ** ಎಂಬುವದನ್ನು ಮುಂದೆ ಹೇಳಲ್ಪಡುವ ನಾಲ್ಕು ಧರ್ಮಗಳಿಗೂ ಅನ್ವಯಿಸಿಕೊಳ್ಳತಕ್ಕದ್ದು, ಭಕ್ತ್ಯಾದೌ ಪ್ರಮಿತಿರಹಿತತಾ, ಭಕ್ತ್ಯಾದೌ ಶಾಸ್ತ್ರತಃ ಪರ್ಯುದಾಸಃ ಎಂದು ಇಟ್ಟುಕೊಳ್ಳತಕ್ಕದ್ದು. **ಶಕ್ತ್ಯಭಾವಃ**-ಸಾಂಗವಾಗಿ ಅನುಷ್ಠಿಸಲು ಶಕ್ತಿಯಿಲ್ಲದಿರೋಣವು. (೨) **ಪ್ರಮಿತಿರಹಿತತಾ**-ಪ್ರಮಿತಿ ಎಂದರೆ ಜ್ಞಾನವು. ಆ ಯೋಗಸ್ವರೂಪವನ್ನು ತಿಳಿಯಲು ಬೇಕಾದ ಜ್ಞಾನದ ಶೂನ್ಯತೆಯು. (೩) **ಶಾಸ್ತ್ರತಃ** - ಶಾಸ್ತ್ರದ ಮೂಲಕ ಉಂಟಾದ, **ಪರ್ಯುದಾಸಃ** - ನಿಷೇಧವು, ತ್ರೈವರ್ಣಿಕರಲ್ಲದಿರುವವರಿಗೆ ಭಕ್ತಿಮಾರ್ಗವು ಕೂಡದೆಂಬ ನಿಷೇಧವು. (೪) **ಕಾಲಕ್ಷೇಪಾಕ್ಷಮತ್ವಂ ತು** - ವಿಳಂಬವನ್ನು ಸಹಿಸದಿರೋಣವೂ ಕೂಡ, ಇತಿ-ಎಂಬುದಾಗಿ, **ನಿಯತಿವಶಾತ್** - ಭಾಗ್ಯವಶದಿಂದ, **ಆಪತದ್ಭಿಃ** - ಉಂಟಾದ, **ಚತುರ್ಭಿಃ** - ಈ ಮೇಲೆ ಹೇಳಿದ ನಾಲ್ಕರಿಂದಲೂ, **ಏಕದ್ವಿತ್ರ್ಯಾದಿಯೋಗವ್ಯತಿಭಿದುರ ನಿಜಾಧಿಕ್ರಿಯಾಃ,**

ಏಕದ್ವಿತ್ರ್ಯಾದಿಯೋಗವ್ಯತಿಭಿದುರನಿಜಾಧಿಕ್ರಿಯಾಃ ಸಂಶ್ರಯನ್ತೇ ।
ಸನ್ತಃ ಶ್ರೀಶಂ ಸ್ವತನ್ತ್ರಪ್ರಪದನವಿಧಿನಾ ಮುಕ್ತಯೇ ನಿರ್ವಿಶಙ್ಕಾಃ ॥೨೫॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತನ್ತ್ರಸ್ವತಂತ್ರಸ್ಯ
ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ
ಪ್ರಪತ್ತಿಯೋಗ್ಯಾಧಿಕಾರೋ ದಶಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಏಕ - ಒಂದೊಂದಾಗಿಯೂ, **ದ್ವಿ** - ಎರಡೆರಡಾಗಿಯೂ, **ತ್ರಿ** - ಮೂರು ಮೂರಾಗಿಯೂ, **ಆದಿ** - ಮೊದಲಾದ ಎಂಬುವದರಿಂದ ನಾಲ್ಕಾಗಿಯೂ ಎರಿಬರ್ವ್ವ, ಇವುಗಳ **ಯೋಗ** - ಸಮ್ಮೇಳನದಿಂದ, **ವ್ಯತಿಭಿದುರ** - ಪರಸ್ಪರಭಿನ್ನರಾದ, **ನಿಜಾಧಿಕ್ರಿಯಾಃ** - ಸ್ವಕೀಯಾಧಿಕಾರಗಳುಳ್ಳ, **ಸಂತಃ** - ಪರಬ್ರಹ್ಮನಿಷ್ಠರು, ಪ್ರಪನ್ನರು, **ಮುಕ್ತಯೇ** - ಮುಕ್ತಿಗೋಸ್ಕರವಾಗಿ, **ಶ್ರೀಶಂ** - ಶ್ರಿಯಃಪತಿಯನ್ನು, **ಸ್ವತನ್ತ್ರಪ್ರಪದನ ವಿಧಿನಾ** - ಸ್ವತನ್ತ್ರಪ್ರಪತ್ತ್ಯನುಷ್ಠಾನಮೂಲಕ, **ನಿರ್ವಿಶಂಕಾಃ** - ಶಂಕಾರಹಿತರಾಗಿ ಎಂದರೆ ಪೂರ್ಣನಂಬಿಕೆಯುಳ್ಳವರಾಗಿ, **ಸಂಶ್ರಯನ್ತೇ** - ಆಶ್ರಯಿಸುತ್ತಾರೆ.

ತಾತ್ಪರ್ಯ—ಆಕಿಂಚನ್ಯವೂ ಅನನ್ಯಗತಿತ್ವವೂ ಸಹ ಪ್ರಪತ್ತ್ಯಧಿಕಾರಿಯಲ್ಲಿ ಮುಖ್ಯವಾದತಕ್ಕದ್ದೆಂದೇ ಹೇಳಲ್ಪಟ್ಟಿತು. ಆದರೆ ಭಕ್ತಿಯೋಗಕ್ಕೆ ಅರ್ಹರಲ್ಲದವರು ಈ ಪ್ರಪತ್ತಿಗೆ ಅರ್ಹರೆಂದು ಈ ಶ್ಲೋಕದ ಮೂಲಕ ತಿಳಿಸುತ್ತಾರೆ. ಭಕ್ತಿಯೋಗಕ್ಕೆ ಅರ್ಹರಾಗಬೇಕಾದರೆ ನಾಲ್ಕು ಧರ್ಮಗಳಿರಬೇಕು :—

(೧) ಭಕ್ತಿಯೋಗಾನುಷ್ಠಾನದ ಉಪಾಸನಾದಿಗಳಿಗೆ ಶಕ್ತಿಯೂ,
(೨) ಭಕ್ತಿಯೋಗ ಸ್ವರೂಪಜ್ಞಾನವೂ,
(೩) ಬ್ರಾಹ್ಮಣ ಕ್ಷತ್ರಿಯ ವೈಶ್ಯರಲ್ಲಿ ಒಬ್ಬನಾಗಿರುವಿಕೆಯೂ,
(೪) ವಿಳಂಬವೋಕ್ಷಪ್ರಾಪ್ತ್ಯನುಮೋದನವೂ,

ಹೀಗೆ ಇವು ನಾಲ್ಕೂ ಇರಬೇಕು. ಒಂದೊಂದೇ ಇದ್ದರೆ ಸಾಲದು.

ಹಾಗೆಯೇ ಇವುಗಳಲ್ಲಿ ಯಾವುದೊಂದು ಧರ್ಮವಾಗಲಿ, ಎರಡು ಧರ್ಮವಾಗಲಿ, ಮೂರಾಗಲಿ, ನಾಲ್ಕಾಗಲಿ ಇಲ್ಲದಿದ್ದವರು ಪ್ರಪತ್ತಿಗೆ ಅರ್ಹನಾಗುತ್ತಾನೆಂದು ತಿಳಿಸುತ್ತಾರೆ.

ಆದುದರಿಂದ ಪ್ರಪತ್ತಿಗೆ ಅಧಿಕಾರಿಯು ಹೊಂದಿರುವ ಧರ್ಮಗಳು ಯಾವುವೆಂದರೆ :—

(೧) ಭಕ್ತಿಯೋಗಾನುಷ್ಠಾನಕ್ಕೆ ಅಶಕ್ತತೆ,

(೨) ಭಕ್ತಿಯೋಗಸ್ವರೂಪವನ್ನು ತಿಳಿಯಲು ಸಾಧ್ಯವಿಲ್ಲದ ಜ್ಞಾನಶೂನ್ಯತೆ,

(೩) ಶಾಸ್ತ್ರಾನುಜ್ಞೆಯು ತ್ರೈವರ್ಣಿಕರಲ್ಲಿ ಒಬ್ಬನಲ್ಲದಿರೋಣವು,

(೪) ಮೋಕ್ಷಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸದಿರೋಣವು.

ಪ್ರಪದನಕ್ಕೆ ಈ ನಾಲ್ಕು ಧರ್ಮಗಳೂ ಇರಬೇಕೇ, ಹೇಗೆ ಎಂಬ ವಿಚಾರದಲ್ಲಿ ಈ ನಾಲ್ಕರಲ್ಲಿ ಒಂದೊಂದು ಧರ್ಮವಿದ್ದರೂ, ಎರಡೆರಡು ಇದ್ದರೂ, ಮೂರು ಮೂರು ಇದ್ದರೂ, ನಾಲ್ಕೂ ಒಟ್ಟಿಗಿದ್ದರೂ ಪ್ರಪತ್ತಿಗೆ ಅಧಿಕಾರವೆಂದು ಉತ್ತರಾರ್ಧದಿಂದ ಹೇಳುತ್ತಾರೆ. ಈ ಅಭಿಪ್ರಾಯವನ್ನು ಏಕದ್ವಿತ್ರ್ಯಾದಿಯೋಗವ್ಯತಿಭಿದುರ ನಿಜಾಧಿಕ್ರಿಯಾಃ ಎಂಬುವದರಿಂದುಪದೇಶಿಸುತ್ತಾರೆ. ಪ್ರಪತ್ತಿಗೆ ಅರ್ಹತೆಯನ್ನುಂಟುಮಾಡುವ ಈ ನಾಲ್ಕು ಧರ್ಮಗಳನ್ನು ೧, ೨, ೩, ೪ ಎಂದು ಇಟ್ಟುಕೊಂಡರೆ,

ಈ ಒಂದೊಂದರ ಯೋಗವುಳ್ಳತಕ್ಕವರು ೧, ೨, ೩, ೪ ಮಾತ್ರವೇ ಉಳ್ಳವರು ನಾಲ್ಕು ವಿಧ ಅಧಿಕಾರಿಗಳು. ಎರಡೆರಡರ ಯೋಗವುಳ್ಳತಕ್ಕವರು ೧+೨, ೧+೩, ೧+೪, ೨+೩, ೨+೪, ೩+೪, ಹೀಗೆ ಆರು ವಿಧ ಅಧಿಕಾರಿಗಳು. ಮೂರುಮೂರಿರತಕ್ಕವರು ೧+೨+೩, ೧+೨+೪, ೧+೩+೪ ಹೀಗೆ ನಾಲ್ಕಧಿಕಾರಿಗಳು. ನಾಲ್ಕಿರತಕ್ಕವರು. ೧+೨+೩+೪ ಒಂದು ವಿಧ ಅಧಿಕಾರಿಯು. ಹೀಗೆ ಒಟ್ಟು ೧೫ ಅಧಿಕಾರಿಗಳಿಗೆಲ್ಲಾ ಸ್ವತಂತ್ರಪ್ರಪದನ ವಿಧಿನಾ, ಎಂಬುವದರಿಂದ ಪ್ರಪತ್ತ್ಯನುಷ್ಠಾನವೇ ಉಪಾಯವೆಂದು ಹೇಳುತ್ತಾರೆ. ಆ ಪ್ರಪತ್ತಿಯನ್ನು ಯಾರಲ್ಲಿ ಮಾಡತಕ್ಕದ್ದು ವಿಷಯವೇನೆಂದರೆ ಲಕ್ಷ್ಮೀನಾರಾಯಣರಲ್ಲಿ ಮಾಡತಕ್ಕದ್ದೆಂದು ತಿಳಿಸುವದಕ್ಕಾಗಿ ಶ್ರೀಶಂ ಎಂಬ ಪ್ರಯೋಗವು; ಪರತತ್ತ್ವವೇ ಲಕ್ಷ್ಮೀನಾರಾಯಣರಾದುದರಿಂದ ಪ್ರಪದನವನ್ನು ಇಬ್ಬರಲ್ಲೂ ಮಾಡತಕ್ಕದ್ದೆಂಬ ದ್ವಯಮಂತ್ರಾರ್ಥವನ್ನು ಇದರಿಂದ ವ್ಯಕ್ತಪಡಿಸಿರುತ್ತಾರೆ. ಶ್ರೀಭಾಷ್ಯಕಾರರು ಶ್ರೀಪ್ರಪದನವನ್ನು ಮಾಡಿ ಒಡನೆ ನಾರಾಯಣನಲ್ಲಿ ಪ್ರಪದನವನ್ನು ಮಾಡಿರುತ್ತಾರೆ, ಇಂತಹ ೧೫ ಮಂದಿ ಅಧಿಕಾರಿಗಳೂ ಕೂಡ ಮುಕ್ತಿಗೋಸ್ಕರ ಪ್ರಪದನ ಮೂಲಕ ಶ್ರೀಯಃಪತಿಯನ್ನು ಆಶ್ರಯಿಸುತ್ತಾರೆಂದು ತಿಳಿಸುತ್ತಾರೆ. ಭಕ್ತ್ಯಧಿಕಾರಿಗೆ, ಅವಶ್ಯಕವಾದ ನಾಲ್ಕು ಧರ್ಮಗಳ ಸಮುದಾಯವೂ ಇರಬೇಕೆಂದು ನಿರೂಪಿಸಲ್ಪಟ್ಟಿತು. ಆದರೆ ಪ್ರಪತ್ತಿಗೆ ಮಾತ್ರ ಅದಕ್ಕೆ ಬೇಕಾದ ಧರ್ಮಗಳಲ್ಲಿ ಒಂದು ಇದ್ದರೂ ಮತ್ತೆ ಯಾವುದೂ ಇಲ್ಲ

ದಿದ್ದರೂ ಅಧಿಕಾರ ಉಂಟೆಂದು ಹೇಳಲು ಬಾಧಕವೇನು ಎಂದಾಕ್ಷೇಪಿಸಿದರೆ, ಭಕ್ತ್ಯಧಿಕಾರಿಗೆ ಯಾವಾಗ ನಾಲ್ಕೂ ಇದ್ದರೆ ಅಧಿಕಾರವೆಂದೂ ಈ ನಾಲ್ಕರಲ್ಲಿ ಯಾವುದೊಂದು ಇಲ್ಲದಿದ್ದರೂ ಭಕ್ತಿಮಾರ್ಗಕ್ಕೆ ಅನಧಿಕಾರಿಯಾಗುವದರಿಂದಲೂ ಅಂಥಾವರಿಗೆಲ್ಲಾ ಈ ಪ್ರಪತ್ತಿಯೇ ಉಪಾಯವಾಗುವದರಿಂದಲೂ, ಪ್ರಪತ್ತ್ಯಧಿಕಾರಿಧರ್ಮಗಳಲ್ಲಿ ಯಾವುದೊಂದು ಇದ್ದರೂ, ಅಥವಾ ಎರಡೂ, ಮೂರೂ, ನಾಲ್ಕೂ ಇದ್ದರೂ ಅಧಿಕಾರವುಂಟಾಗುತ್ತದೆ. ಆದುದರಿಂದಲೇ ನಮ್ಮ ಅನೇಕ ಪೂರ್ವಾಚಾರ್ಯರುಗಳೂ ಜ್ಞಾನಶಕ್ತಿಗಳನ್ನೂ ಶಾಸ್ತ್ರವಿಹಿತ ವರ್ಣಾಶ್ರಮವನ್ನೂ ಹೀಗೆ ಭಕ್ತ್ಯಧಿಕಾರಿಗಳಾಗುವದಕ್ಕೆ ಮೂರು ಧರ್ಮಗಳನ್ನು ಹೊಂದಿದ್ದರೂ, ನಾಲ್ಕನೇ ಧರ್ಮವಾದ ವಿಳಂಬವನ್ನು ಸಹಿಸದೇ ಹೋದುದರಿಂದ ಪ್ರಪತ್ತಿಯನ್ನೇ ಅನುಷ್ಠಿಸಿದರು. ಹೀಗೆ ಆಶ್ರಯಿಸುವಾಗ ಅವರು **ನಿರ್ಭರೋನಿರ್ಭಯೋಸ್ಮಿ** ಎಂದು ಹೇಳಿರುವ ಹಾಗೆ ಈಷದಪಿ ಶಂಕಾ ಇಲ್ಲದೆ, **ರಕ್ಷಿಷ್ಯತೀತಿ ವಿಶ್ವಾಸಃ** ಎಂಬಂತೆ ಮಹಾವಿಶ್ವಾಸದಿಂದ ಆಶ್ರಯಿಸುತ್ತಾರೆಂದು ಹೇಳುತ್ತಾರೆ. ಪ್ರಪದನಕ್ಕೆ ಐದು ಅಂಗಗಳು, ಒಂದು ಅಂಗಿಯು. ಈ ಅಂಗಗಳಲ್ಲಿ ಮಹಾವಿಶ್ವಾಸವು ಒಂದು ಅಂಗವು, ಪರಿಕರವು, ಇದನ್ನು **ನಿರ್ವಿಶಂಕಾಃ** ಎಂಬ ಪ್ರಯೋಗದಿಂದ ಸೂಚಿಸಿರುವದರಿಂದ, ಮುಂದಿನ ಅಧಿಕಾರವಾದ **ಪರಿಕರವಿಭಾಗಾಧಿಕಾರವನ್ನು** ಸೂಚಿಸಿದಂತಾಯಿತು. ಆದರೆ ಈ ಪ್ರಪತ್ತ್ಯಧಿಕಾರಕ್ಕೆ, ಭಕ್ತಿಯೋಗಕ್ಕೆ ಅಶಕ್ತಿ, ಅದರ ಸ್ವರೂಪದ ಅಜ್ಞಾನಾದಿಗಳು ಎಂದು ಹೇಳಿದುದರಿಂದ ಈ ಅಧಿಕಾರಿಯು ಅದೃಷ್ಟವು ತುಂಬಾ ಹೀನವಾದುದು ಎಂದು ಭಾವಿಸತಕ್ಕದ್ದಲ್ಲವು. ಇಂತಹ ಅಶಕ್ತ್ಯಜ್ಞಾನಗಳೇ ಒಂದು ಭಾಗ್ಯೋದಯವಾಗಿ ಪರಿಣಮಿಸಿ ಲಘೂಪಾಯ ಪ್ರಪನ್ನನಿಗೆ ಶೀಘ್ರ ಮೋಕ್ಷಪ್ರಾಪ್ತಿಯುಂಟಾಗುವದರಿಂದ **ನಿಯತಿವಶಾತ್** ಎಂಬ ಪ್ರಯೋಗವು. ಸ್ತ್ರೀ ಶೂದ್ರಾದಿಗಳಿಗೆ ತ್ರೈವರ್ಣಿಕರ ಮಹತ್ತ್ವದ ಶಕ್ತ್ಯಧಿಕಾರ್ಯಾನುಷ್ಠಾನಗಳು ಇಲ್ಲದಿದ್ದರೂ, ಇವರುಗಳೇನೂ ಭಾಗ್ಯಹೀನರಲ್ಲವೆಂದೂ ಇವರುಗಳೂ ಬಹು ಸುಲಭವಾಗಿ ಮುಕ್ತಿಯನ್ನು ಹೊಂದುವ ಭಾಗ್ಯೋದಯವುಳ್ಳವರೆಂದೂ ಶ್ರೀವ್ಯಾಸಮಹರ್ಷಿಗಳು **ಯೋಷಿತ್ಸಾಧುಃ, ಶೂದ್ರಸ್ಸಾಧುಃ** ಎಂದು ಹೇಗೆ ಹಾಡಿಹೊಗಳಿ ಹೇಳಿರುವರೋ, ಹಾಗೆಯೇ ಇಲ್ಲಿಯೂ ಇಂತಹ ಶಕ್ತಿಜ್ಞಾನಗಳ ಅಭಾವವೂ, ತ್ರೈವರ್ಣಿಕರಲ್ಲವೆಂಬುದೂ, ಏನೂ ಭಾಗ್ಯಹೀನತೆಯನ್ನು ಸೂಚಿಸುವದಿಲ್ಲವೆಂದೂ, ಸರಿಯಾಗಿ ಪರಿಶೀಲಿಸಿ ನೋಡಿದ್ದಾದರೆ ಇವರೇ ಲಘೂಪಾಯಾನುಷ್ಠಾನವುಳ್ಳವರಾದುದರಿಂದ ತುಂಬಾ ಭಾಗ್ಯಶಾಲಿಗಳೆಂದು "ನಿಯತಿವಶಾತ್" ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಪ್ರಪದನಾನುಷ್ಠಾನ ಮಾಡುವವರು ಯಾರೆಂದರೆ :—ಸಂತಃ ಸತ್ಪುರುಷರು, ಸದಾಚಾರನಿಷ್ಠರು,

ಯಾವುದು ಸರಿಯಾದ ಆಚರಣೆ ಎಂದು ವಿಮರ್ಶಿಸಿ ತಿಳಿದವರು. ಇಂಥಾವರ ವಿಷಯದಲ್ಲಿ ಶ್ರಿಯಃಪತಿಯು, ಇವರುಗಳು ಯಾವುದೋ ಒಂದು ಕಾಲದಲ್ಲಿ ಮಾಡಿದ ಯಾದೃಚ್ಛಿಕಸುಕೃತವನ್ನು ವ್ಯಾಜೀಕರಿಸಿ, ತನಗೆ ವೈಷಮ್ಯ ನೈರ್ಘೃಣ್ಯಾದಿಗಳಿಲ್ಲವೆಂದು ತೋರ್ಪಡಿಸಲು, ಅವರು ಭರನ್ಯಾಸವನ್ನು ಅನುಷ್ಠಿಸುವಹಾಗೆ ಮಾಡಿ, ಅವರಿಗೆ ಮುಕ್ತಿಯನ್ನೀವನು ಎಂಬುವದು ಮುಖ್ಯ ತಾತ್ಪರ್ಯವು.

ಇಂತು ಶ್ರೀಮದ್ರಹಸ್ಯತ್ರಯಸಾರದ
ಉಪಾಯವಿಭಂಗಾಧಿಕಾರವೆಂಬ ೧೦ ನೇ ಅಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವಾಚಾರ್ಯನ
ಆಚಾರ್ಯಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೭೯೪	೧೬	ವಿದ್ಕೆ	ವಿದ್ಯೆ
೭೯೫	೧೨	ಮೂವತ್ತೆರಡೂ	ಮೂವತ್ತೆರಡು
೮೦೪	೬	ಯಾವದನ್ನು	ಯಾವುದನ್ನು
೮೧೧	೨೫	ನುಕಿಮನ್ತ್ರಾರ್ಥಂ	ನುಕ್ಕಿಮನ್ತ್ರಾರ್ಥಂ
೮೧೪	೨೮	ಆದುವರಿಂದ	ಆದುದರಿಂದ
೮೧೬	೧೨	ಸಂಶಯುವಿಲ್ಲಿ	ಸಂಶಯುವಿಲ್ಲ
೮೧೭	೭	ಅವರ	ಅವರು
,,	೧೪	ಆಚಾರ್ಯನ	ಆಚಾರ್ಯನು
೮೧೮	೧೫	ಅನುಗ್ರಹಿಸಿ	ಅನುಗ್ರಹಿಸಿ
೮೧೯	೭	ಹೇಳರುವ	ಹೇಳಿರುವ
೮೨೫	೨೨	ಪ್ರಾಪ್ತವ್ಯಾಗುವ	ಪ್ರಾಪ್ತವಾಗುವ
೮೨೮	ಕೊನೆ: ಪಙ್ಕ್ತಿ	ಮಾಡಿಸಿ	ಮಾಡಿಸಿ ಶ್ರೀಶನು
೮೩೩	೪	ಯಾಹ,	ಯಾಹ
,,	೨೯	ಅವಸಾನತ್ತೆಯ್ಯೆ	ಅವಸಾನತ್ತೈಯ್ಯೆ
೮೪೨	೧೪	ವಿಧ	ವಿದ
೮೪೬	೩	ವಿನ್ಯೆ	ವಿನ್ಯೆ
೮೫೧	೨	ವಿಲ್ಲವು	ವಲ್ಲವು
೮೫೮	೧೧	ಹೇಳಲ್ಪಟ್ಟಿತ್ತು	ಹೇಳಲ್ಪಟ್ಟಿತು.
,,	೧೨	ವೈಲಕ್ಷಣ	ವೈಲಕ್ಷಣ್ಯ
,,	೧೮	ತ್ಯತ್ವವೇ	ಸತ್ಯತ್ವವೇ
೮೬೧	೧೦	ಅವುಗಳು	ಅವುಗಳು
೮೬೪	೧೫	ಮಧೆ	ಮಧ್ಯೆ
೮೭೭	೨೧	ಅನಿಮ	ಅಸ್ತಿಮ
೮೭೮	೨೫	ಅಂಗ	ಅಂಗ
೮೮೩	೨೬	ಹೊಂದುವನು	ಹೊಂದುವವನು
೮೯೦	೪	ವಿರನ್ದ	ಪಿರನ್ದ
೯೦೦	೧೨	ವಜ್ಯಚ	ಪ್ರಜ್ಯಚ
,,	೨೬	ರೂಪವೂ	ರೂಪವೂ,
೯೧೬	೨೪	ಶಗಸ್ಯ	ಶುಗಸ್ಯ
೯೨೪	೮	ಅಭಿಪಾಯ	ಅಭಿಪ್ರಾಯ
೯೩೪	೪	ವರ್ಧನ	ಗೋವರ್ಧನ

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ

ಶ್ರೀ ನಿಗಮಾನ್ತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀ ರಂಗನಾಥ ಸ್ತೋತ್ರವು ೦ ೧೨

೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀ ಸ್ತೋತ್ರವು ೦ ೧೨

೩. ಶ್ರೀಮದ್ರಹಸ್ಯತ್ರಯಸಾರವು :—
ಗುರುಪರಂಪರಾಸಾರವು ೦ ೧೨

೪. ಶ್ರೀಮದ್ರಹಸ್ಯತ್ರಯಸಾರವು :—
ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು ೦ ೯

೫. ಶ್ರೀಮದ್ರಹಸ್ಯತ್ರಯಸಾರವು :—
ಪ್ರಧಾನಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು ೦ ೧೨

೬ ಶ್ರೀಮದ್ರಹಸ್ಯತ್ರಯಸಾರವು :—
ತತ್ತ್ವತ್ರಯಾಧಿಕಾರವು ೦ ೧೨

೭ ಶ್ರೀಮದ್ರಹಸ್ಯತ್ರಯಸಾರವು :—
ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು ೦ ೧೦

೮. ಶ್ರೀಮದ್ರಹಸ್ಯತ್ರಯಸಾರವು :—
ಅಧಿಕಾರಿವಿಭಾಗಾಧಿಕಾರವು, ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು ೦ ೯

೯. ಶ್ರೀಮದ್ರಹಸ್ಯತ್ರಯಸಾರವು :—
ಪರಿಕರವಿಭಾಗಾಧಿಕಾರವು ಪ್ರಿಂಟಾಗುತ್ತಲಿದೆ

೧೦. ಶ್ರೀ ಯಾಮುನೇಯರವರ ಚತುಶ್ಶ್ಲೋಕೀ ೦ ೮

ಮೂರು ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸುವವರಿಗೆ ಮುಂದೆ ಅಚ್ಚಾಗುವ ಪುಸ್ತಕಗಳು ಪೋಸ್ಟು ಚಾರ್ಜು ಇಲ್ಲದೆ ಕಳುಹಿಸಲ್ಪಡುವುವು.

ಸಿ. ಎಂ. ವಿಜಯರಾಘವಾಚಾರ್,
ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್‌ಪೆಕ್ಟರ್
ಬಸವನಗುಡಿ, ಬೆಂಗಳೂರು ಸಿಟಿ.

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ
ದ್ವಿತೀಯರತ್ನವು—ಏಳನೆಯ ಸಂಚಿಕೆಯು.

ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಪರಿಕರವಿಭಾಗಾಧಿಕಾರ ಏಕಾದಶಃ

ಸಾಙ್ಗಪ್ರಪದನಾಧಿಕಾರೋ ದ್ವಾದಶಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್‌ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ
ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ
ಗಿರಿಜಾ ವಿಲಾಸ ಪ್ರೆಸ್, ಅವಿನ್ಯೂರೋಡ್
೧೯೩೭.

ಕ್ರಯ ೧೧ ಆಣೆಗಳು.

ಶ್ರಿಯೈ ನಮಃ

ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಪರಿಕರವಿಭಾಗಾಧಿಕಾರಃ ೧೧

2.3.2002

ಇಯಾನಿತ್ಥಂ ಭೂತಸ್ಸಕೃದಯ ಮವಶ್ಯಂ ಭವನವಾ
ದಯಾ ದಿವ್ಯಾಂಭೋಧೌ ಜಗದಖಿಲಮನ್ತ್ರ್ಯಮಯತಿ ।

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಹಿಂದಿನ ಅಧಿಕಾರದಲ್ಲಿ ಪ್ರಪತ್ತಿಯ ಅಧಿಕಾರ ವಿಶೇಷಗಳು ಆಕಿಂಚನ್ಯವೂ ಅನನ್ಯಗತಿತ್ವವೂ ಎಂದು ಹೇಳಲು ಹೊರಟಾಗ, **"ನ್ಯಾಸವಿದ್ಯೆಯಿಲೆ ಇಳಿಯುಮವನಕ್ಕು ಅಧಿಕಾರವಿಶೇಷಮ್ ಮುದಲಾನನ್ನೈ ಇರುಕ್ಕುಮ್‌ಪಡಿ ಯರಿಯವೇಣುಮ್"** ಎಂದು ಹೇಳಿರುತ್ತಾರೆ. ಇಲ್ಲಿ **ಮುದಲಾನನ್ನೈ** ಎಂದು ಹೇಳಿರುವವರಿಂದ, ಪರಿಕರ ಮೊದಲಾದವು ಗ್ರಹಿಸಲ್ಪಟ್ಟದುದರಿಂದ ಅವುಗಳನ್ನು ಕುರಿತು ಈಗ ಹೇಳುತ್ತಾರೆ. ಚರಮಶ್ಲೋಕವನ್ನು ವಿಮರ್ಶಿಸಿ ನೋಡಿದುದಾದರೆ **"ಮಾಮೇಕಂ ಶರಣಂವ್ರಜ"** ಎಂದು ಹೇಳಿರುವವರಿಂದ ಶರಣಾಗತಿಗೆ ಯಾವುದರಪೇಕ್ಷೆಯು ಇರುವಹಾಗೆ ತೋರುವದಿಲ್ಲವು. ಇದೂ ಅಲ್ಲದೆ **"ನಹಿತತ್ಕರಣಂಲೋಕೇ ವೇದೇವಾ ಕಿಂಚಿದೀರಿತಂ । ಇತಿಕರ್ತ್ರವ್ಯತಾಸಾಧ್ಯೇ ಯಸ್ಯ ವಾನುಗೃಹ್ಯೇತೀರ್ಥತೇ"** ಹೀಗೆ ಈ ಪ್ರಪದನಕ್ಕೆ ಸಾಧನೋಪಾಯವಿಲ್ಲವೆಂದು **ಕಂಠೋಕ್ತ**ವಾಗಿ ಹೇಳಿರುವದರಿಂದಲೂ, ಪ್ರಪದನಕ್ಕೆ ಯಾವುದರ

ಭವಧ್ವಂಸೋದ್ಯುಕ್ತೇ ಭಗವತಿ ಭರನ್ಯಾಸವಪುಷಃ ।
ಪ್ರಪತ್ತೇರಾದಿಷ್ಟಃ ಪರಿಕರ ವಿಶೇಷಶ್ಶ್ರುತಿಮುಖೈಃ ॥

ಪೇಕ್ಷೆಯೂ ಇಲ್ಲವು ಎಂದು ತೋರಿಬರುತ್ತದೆ. ಈ ಆಕ್ಷೇಪವನ್ನು ಖಂಡಿಸುವವರಾಗಿ, ಪ್ರಪತ್ತಿಯೂ ಒಂದು ವಿದ್ಯೆಯಾಗಿ ಅದಕ್ಕೂ ಪರಿಕರಗಳುಂಟೆಂದೂ, ಸಕೃದನುಷ್ಠೇಯವಾದುದಾದರೂ ಈ ಅಂಗಗಳು ಆವಶ್ಯಕವಾದುವೆಂದೂ, ಹಾಗೆ ಇಲ್ಲದಿದ್ದರೆ ಪ್ರಪನ್ನನಿಗೂ ಇತರರಿಗೂ ವಿಶೇಷವೊಂದೂ ವ್ಯತ್ಯಾಸವಿಲ್ಲದೆ ಹೋಗಿ, ಪರಮಾತ್ಮನಿಗೆ ವೈಷಮ್ಯನೈರ್ಘೃಣ್ಯಾದಿ ದೋಷಗಳು ಪ್ರಾಪ್ತ**ವಾದೀ**ತೆಂದೂ, ಆ ಪರಿಕರಗಳು ಯಾವುವೆಂದೂ, ಈ ಅಧಿಕಾರದಲ್ಲಿ ಉಪಪಾದಿಸುತ್ತಾರೆ. ಮೊದಲು ಈ ಅಧಿಕಾರಾರ್ಥಗಳನ್ನೆಲ್ಲಾ ಒಂದು ಶ್ಲೋಕದ **ಮೂಲಕ** ಸಂಗ್ರಹಿಸಿ, ಶ್ರುತಿ ಭಗವಚ್ಛಾಸ್ತ್ರ ಪ್ರಮಾಣರೀತ್ಯಾ ಸಾಂಗಪ್ರಪದನವೇ **ಕರ್ತವ್ಯವೆಂದು** ಹೇಳುತ್ತಾರೆ.

ಅರ್ಥ — **ದಯಾದಿವ್ಯಾಂಭೋಧೌ** - ದಯೆಗೆ ಒಂದು ದಿವ್ಯ ಸಮುದ್ರಪ್ರಾಯನಾಗಿರುವ, ಆದುದರಿಂದಲೇ **ಜಗದಖಿಲಮನ್ತರ್ಯಮಯತಿ** - ಸಮಸ್ತ ಜಗತ್ತನ್ನೂ ವ್ಯಾಪಿಸಿ, ಅವುಗಳಿಗೆ ಆತ್ಮನಾಗಿರುವುದರಿಂದ ಸರ್ವನಿಯಾಮಕನಾಗಿರುವ, **ಭಗವತಿ** - ಜ್ಞಾನಶಕ್ತ್ಯಾದಿಷಾಡ್ಗುಣ್ಯಪರಿಪೂರ್ಣನಾಗಿಯೂ ಹೇಯಪ್ರತ್ಯನೀಕನಾಗಿಯೂ ಇರುವ ಶ್ರಿಯಃಪತಿಯು, **ಭವಧ್ವಂಸೋದ್ಯುಕ್ತೇಸತಿ** - ಚೇತನರ ಸಂಸಾರ ಸಂಬಂಧವನ್ನು ನಾಶಮಾಡಬೇಕೆಂಬ ಉದ್ದೇಶವುಳ್ಳವನಾಗಲಾಗಿ, **ಭರನ್ಯಾಸವಪುಷಃ** - ಭರನ್ಯಾಸವನ್ನೇ ಶರೀರವಾಗಿ ಉಳ್ಳ, **ಪ್ರಪತ್ತೇಃ** - ಪ್ರಪದನದ, **ಪರಿಕರವಿಶೇಷಃ** - ಅಂಗವಿಶೇಷವಾದ (ಜಾತ್ಯೇಕವಚನ), **ಅಯಂ** - ಈ ಆನುಕೂಲ್ಯಸಂಕಲ್ಪಾದಿ ಅಂಗಸಮುದಾಯವು, **ಇಯಾನ್** - ಇಷ್ಟುಮಾತ್ರವೇ, **ಇತ್ಥಂಭೂತಃ** - ಇಂತಹ ಸ್ವರೂಪ ಉಳ್ಳವುಗಳು ಅಥವಾ ಹೀಗೆ ಉಪಕಾರಕಗಳು, **ಸಕೃತ್** - ಒಂದಾವರ್ತಿ ಮಾತ್ರವೇ ಕರ್ತವ್ಯವಾದುದು, ಮತ್ತು **ಅವಶ್ಯಂ ಭವನವಾನ್** - ಆವಶ್ಯಕವಾಗಿ ಶರಣಾಗತಿಯನುಷ್ಠಾನಕಾಲವಲ್ಲಿ ಇರತಕ್ಕವುಗಳು, ಎಂದು **ಶ್ರುತಿಮುಖೈಃ** - ಶ್ರುತಿ ಮೊದಲಾದ ವಚನಗಳಿಂದ ಎಂದರೆ ಶ್ವೇತಾಶ್ವತರ ಭಗವಚ್ಛಾಸ್ತ್ರಾದಿ ವಚನಗಳಿಂದ, **ಆದಿಷ್ಟಃ** - ಉಪದೇಶಿಸಲ್ಪಟ್ಟಿತು.

ತಾತ್ಪರ್ಯ — ಶರಣಾಗತಿಯು ಜ್ಞಾನರೂಪವಾದುದಾಗಿ ಒಂದು ವಿದ್ಯೆಯು. ಆದುದರಿಂದ ಆ ವಿದ್ಯೆಗೆ ಪರಿಕರಗಳುಂಟು. ಇದನ್ನೇ **ಪ್ರಪತ್ತೇಃ ಪರಿಕರ ವಿಶೇಷಃ ಆದಿಷ್ಟಃ** - ಎಂದು ಹೇಳಿರುತ್ತಾರೆ. **ಆದಿಷ್ಟಃ** - ಉಪದೇಶಿಸಲ್ಪಟ್ಟಿತು ಎಂದು ಹೇಳಿರುವುದರಭಿಪ್ರಾಯವು, ಇದು ತಮ್ಮ ಕಲ್ಪನೆಯಲ್ಲವು, **ಶಾಸ್ತ್ರ**

ಪ್ರಮಾಣಗಳಿಂದ ಉಪದೇಶಿಸಲ್ಪಟ್ಟಿದುವು ಎಂದು ಪ್ರಕಟಿಸುವದಕ್ಕಾಗಿ ಹಾಗೆ
ಅಪ್ಪಣೆ ಕೊಡಿಸಿರುತ್ತಾರೆ. ಅದುದರಿಂದಲೇ ಶ್ರುತಿಮುಖ್ಯೈಃ - ಎಂಬ ಪ್ರಯೋ
ಗವು. ಶ್ವೇತಾಶ್ವತರದಲ್ಲಿ "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎಂಬ
ವಾಕ್ಯದಿಂದ ಉಪಪಾದಿಸಿರುವದರಿಂದ ವ್ಯಕ್ತವು. ಇಲ್ಲಿ **ಪರಿಕರವಿಶೇಷ**
ವೆಂದು ಹೇಳಿದುದರಿಂದ ಇಲ್ಲಿನ ಪರಿಕರಗಳು ಭಕ್ತಿಮಾರ್ಗದ ಪರಿಕರಗಳ ಹಾಗ
ಲ್ಲದೆ ವಿಲಕ್ಷಣವಾದುವೆಂದು ತಿಳಿಸಿದಂತಾಯಿತು. ಶ್ರುತಿ ಭಗವಚ್ಛಾಸ್ತ್ರಗಳು ಈ
ಪರಿಕರ ವಿಶೇಷಗಳ ವಿಷಯದಲ್ಲಿ ಏನೇನನ್ನು ಉಪದೇಶಿಸಿದವು ಎಂದರೆ;
ಇಯತ್ತಾ - ಈಪರಿಕರ ವಿಶೇಷಗಳು ಇಷ್ಟೇ ಎಂದೂ, **ಇತ್ಥಂಭೂತಃ** - ಇಂತಹ
ಸ್ವರೂಪವುಳ್ಳವೂ ಎಂದೂ, ಉಪದೇಶಿಸಿದವು; ಸಂಖ್ಯೆಯು ಇಷ್ಟು ಎಂದು
ಹೇಳದೆ ಸುಮ್ಮನೆ ಇಯತ್ತಾ ಎಂದು ಏತಕ್ಕೆ ಹೇಳಲ್ಪಟ್ಟಿತು, ಎಂದರೆ, ಕೆಲವರು
ನ್ಯಾಸಃಪಂಚಾಂಗಸಂಯುತಃ ಎಂಬ ಪ್ರಮಾಣರೀತ್ಯಾ ಐದು ಅಂಗಗಳೆಂದೂ
ಇನ್ನು ಕೆಲವರು **ಷಡ್ವಿಧಾಶರಣಾಗತಿಃ**, ಎಂಬ ಪ್ರಮಾಣಾನುಸಾರ ಆರು
ಅಂಶಗಳುಳ್ಳದೆಂದೂ ಹೇಳಿರುವದರಿಂದ, ಇವೆರಡು ಅಭಿಪ್ರಾಯಗಳಿಗೂ
ಏನೊಂದೂ ವ್ಯತ್ಯಾಸವಿಲ್ಲವೆಂದು ಮುಂದೆ ವ್ಯಕ್ತಪಡಿಸುವದರಿಂದ ಹಾಗೆ ಪ್ರಯೋ
ಗವು. ಈ ಆರರಲ್ಲಿ, **ನ್ಯಾಸ** ಅಥವಾ ಆತ್ಮನಿಕ್ಷೇಪವು ಅಂಗಿಯು, ಮಿಕ್ಕ ಐದು
ಅಂಗವು. ಆದುದರಿಂದಲೇ **ನ್ಯಾಸಃಪಂಚಾಂಗಸಂಯುತಃ** ಎಂಬಲ್ಲಿ ಆತ್ಮನಿ
ಕ್ಷೇಪಕ್ಕೆ ಐದು ಅಂಗಗಳೆಂದು ಹೇಳಿದುದೂ ಕೂಡ ಸಾಧುವಾದುದೇ, ವಿರೋಧ
ವಾಕ್ಯವಲ್ಲವು. ಆ ಕಾರಣದಿಂದ ಐದೆಂದೂ ಆರೆಂದೂ ಸಹ ಹೇಳಲಪೇಕ್ಷೆಯಿಲ್ಲದೆ,
ಇಯತ್ತಾ ಎಂದು ಪ್ರಯೋಗಿಸಿರುತ್ತಾರೆ. ನ್ಯಾಸವು ಅಂಗಿಯೆಂದು ತಿಳಿಸುವದ
ಕ್ಕಾಗಿ ಪ್ರಪತ್ತಿಯು **ಭರನ್ಯಾಸವಪುಷಃ** ಎಂದು ಹೇಳಿರುತ್ತಾರೆ; ಮುಖ್ಯವಾದ
ಶರೀರವೇ ಆತ್ಮನಿಕ್ಷೇಪವು, ಆದುದರಿಂದ "**ನಿಕ್ಷೇಪಾಪರ ಪರ್ಯಾಯೋನ್ಯಾಸಃ
ಪಂಚಾಂಗಸಂಯುತಃ**" ಎಂಬ ಲಕ್ಷ್ಮೀತಂತ್ರ ವಾಕ್ಯವು ನ್ಯಾಸಶಬ್ದದ ಅಭಿ
ಪ್ರಾಯವನ್ನು ತಿಳಿಸಿ, ನ್ಯಾಸವೆಂಬ ಅಂಗಿಗೆ ಐದು ಅಂಗಗಳೆಂದುಪದೇಶಿಸು
ತ್ತದೆ. ಆದುದರಿಂದ **ಭರನ್ಯಾಸವಪುಷಃ** ಎಂಬದಾಗಿ ಪ್ರಯೋಗಿಸಿರುತ್ತಾರೆ.
ಭರನ್ಯಾಸ ಶಬ್ದಕ್ಕೆ ರಕ್ಷಿಸುವ ಭರವನ್ನು ಸ್ವಾಮಿಯ ತಿರುವಡಿಯಲ್ಲಿಡುವದು
ಎಂಬರ್ಥವು. ರಕ್ಷಾಭರವನ್ನು ಯಾವಾಗ ಇಟ್ಟಿತೋ ಆಗ ರಕ್ಷ್ಯವಸ್ತುವನ್ನೂ ಆತನ
ತಿರುವಡಿಯಲ್ಲೇ ಇಡಬೇಕಾದುದು ಆವಶ್ಯಕವು. ಆತ್ಮನಿಕ್ಷೇಪವು ಅಂಗಿಯೆಂದು
ತೋರಿಸುವದಕ್ಕಾಗಿಯೇ **ಭರನ್ಯಾಸವಪುಷಃ** ಎಂಬ ಪ್ರಯೋಗವು. ಇದೂ
ಅಲ್ಲದೆ ಈ ಭಗವಚ್ಛಾಸ್ತ್ರ ಲಕ್ಷ್ಮೀತಂತ್ರಾದಿ ಪ್ರಮಾಣಗಳು, **ಇತ್ಥಂಭೂತಾಃ** ಈ
ಪರಿಕರಗಳು ಈ ಪ್ರಕಾರವಾದವು, ಅವುಗಳ ಸ್ವರೂಪವೆಂಥಾದ್ದು, ಅವು ಹೇಗೆ
ಪ್ರಯೋಜನವಾದವುಗಳೆಂಬುದನ್ನೂ ಉಪದೇಶಿಸುತ್ತವೆ ಎಂದು ತಿಳಿಸುತ್ತಾರೆ.

ಅದರೆ ಶರಣಾಗತಿಯನ್ನುಪದೇಶಿಸುವ ಚರಮಶ್ಲೋಕವು **"ಮಾಮೇಕಂ ಶರಣಂವ್ರಜ"** ಎಂದು ಇಷ್ಟುಮಾತ್ರ ಹೇಳಿರುವಾಗ ಪರಿಕರಸಾಪೇಕ್ಷೆಯು ಈ ಪ್ರಪತ್ತಿಗೆ ಏಕೆ ಎಂಬಾಕ್ಷೇಪಕ್ಕೆ ಸಮಾಧಾನವಾಗಿ, ಅದು ಆವಶ್ಯಕವೇ ಎಂದು ತಿಳಿಸುವದಕ್ಕಾಗಿ **'ಅವಶ್ಯಂಭವನವಾ:'** ಎಂದು ಪ್ರಯೋಗಿಸಿರುತ್ತಾರೆ. ಪ್ರಪದನಾನುಷ್ಠಾನಕಾಲದಲ್ಲಿ ಅವುಗಳು ಮುಖ್ಯವಾಗಿರತಕ್ಕದ್ದು ; ಮತ್ತು ಆ ಪ್ರಪತ್ತಿಯ ಇಂತಹ ಅನುಷ್ಠಾನವು **ಸಕೃತ್**, ಒಂದಾವರ್ತಿಯೇ ಕರ್ತವ್ಯವೆಂದು ಉಪದೇಶಿಸುತ್ತಾರೆ. ಅದು ಏಕೆ ಆವಶ್ಯಕವೆಂದರೆ, ಎಲ್ಲಾ ಲೋಕದ ಚೇತನರೂ ೧ **"ನಿರ್ದೋಷಃ ಕ ಇಹ ಜಗತಿ"** ಎಂದು ಹೇಳಿರುವಹಾಗೆ, ದೋಷಿಗಳೇ. ಹೀಗಿರುವಾಗ ಅನುಗ್ರಹಕ್ಕೆ ಒಂದು ವ್ಯಾಜವಿರಬೇಕು. ಅದುದರಿಂದ ಸಪರಿಕರವಾದ ಪ್ರಪತ್ತ್ಯನುಷ್ಠಾನವನ್ನೇ ಒಂದು ವ್ಯಾಜವನ್ನಾಗಿ ಭಾವಿಸಿ ರಕ್ಷಿಸುವನು. ಹೀಗೆ ರಕ್ಷಿಸುವದರಿಂದ ಶ್ರೀಶನಿಗೆ ಪಕ್ಷಪಾತ ಮಾಡಿದನೆಂಬ ಅಪವಾದಕ್ಕೆ ಕಾರಣವಿಲ್ಲವಾಗುತ್ತದೆ.

ಆದರೆ ಅನಾದಿಯಾಗಿ ಬಂದ ಮಹಾಪಾಪರಾಶಿಗಳಿಂದ ಭಗವನ್ನಿಗ್ರಹಕ್ಕೆ ಈ ಚೇತನನು ಗುರಿಯಾಗಿರುವನು. ಈ ನಮ್ಮ ಆತ್ಮವು ಸರ್ವೇಶ್ವರನ ಸ್ವತ್ತು. ಅದು ತನ್ನದು ಎಂದು ಹೇಳಿಕೊಂಡು ಆತ್ಮಾಪಹಾರಿಯಾದ ಚೋರನಾಗಿರುತ್ತಾನೆ. ಇಂಥಾವನು ಹೋಗಿ ಶರಣಾಗತಿಯನ್ನು ಸಕೃದನುಷ್ಠಿಸಿಬಿಟ್ಟು ನನಗೆ ಅನುಗ್ರಹಮಾಡು ಎಂದು ಬೇಡಿದ ಮಾತ್ರದಿಂದಲೇ ಬಿಡುಗಡೆಯನ್ನು ಹೊಂದುವನೇ ? ಒಬ್ಬ ಕಳ್ಳನು ಅರಮನೆಯನ್ನು ಹೊಕ್ಕು ರಾಜನ ಮುಖ್ಯ ಸ್ವತ್ತುಗಳನ್ನು ಕದ್ದುಕೊಂಡು ಬಂದು, ಅನಂತರ ಆತನನ್ನು ದಂಡನೆಗೆ ಗುರಿಮಾಡಿದಾಗ ಕಾಲಲ್ಲಿ ಬಿದ್ದು, ನಾನು ನಿನಗೆ ದಾಸ್ಯವೃತ್ತಿಯನ್ನು ಮಾಡುವೆನು ಬಿಟ್ಟುಬಿಡು ಎಂದು ಕೇಳಿದುದು ಹೇಗೆ ಅಪಹಾಸ್ಯರೂಪವಾದುದೋ ಹಾಗೆಯೇ ಈ ಪ್ರಪತ್ತಿಯೂ ಅಲ್ಲವೇ ? ಎಂದರೆ, ಹಾಗಲ್ಲವೆಂದೂ ಐಹಿಕರಾಜರಹಾಗೆ ಈ ರಾಜಾಧಿರಾಜನಲ್ಲವು ಎಂದು ತೋರಿಸುವದಕ್ಕಾಗಿ, ಸರ್ವೇಶ್ವರನಿಗೆ ಮೂರು ವಿಶೇಷಣಗಳನ್ನು ಕೊಟ್ಟಿರುತ್ತಾರೆ ಈತನು **ದಯಾದಿವ್ಯಾಂ ಭೋಧಿಯು**, ದಯೆಗೆ ಒಂದು ದಿವ್ಯವಾದ ಸಾಗರರೂಪನು. ಸಾಧಾರಣ ಸಮುದ್ರವು ತುಂಬಾ ಬಿಸಲು ತಾಪದಿಂದ ಶೋಷಿಸಬಹುದು. ಈ ಕೃಪಾಸಮುದ್ರವಾದರೋ, ಚೇತನನ ಪಾಪಗಳ ತಾಪವು ಎಷ್ಟೇಯಾಗಿರಲಿ, ಶರಣಾಗತನಾದನಂತರ, ಆ ತಾಪದಿಂದ ಕೃಪೆಯು ಶೋಷಿಸಿ ಹೋಗುವದಿಲ್ಲವು. ಆದುದರಿಂದಲೇ ದಿವ್ಯವಾದ ಅಂಭೋಧಿಯು. ಅಥವಾ ಸಾಧಾರಣ ಸಮುದ್ರವು ಚಂಚಲವು, ಹಾಗೆ ಈ ಕೃಪಾಸಮು

(೧) ಶ್ರೀಗುಣ

ದ್ರವು ಚೇತನನ ಅಪರಾಧಸಹಸ್ರಗಳಿಂದಲೂ ಎಂದಿಗೂ ಚಂಚಲತ್ವವನ್ನು ಹೊಂದುವದಿಲ್ಲವು. **"ದೋಷೋ ಯದ್ಯಪಿ ತಸ್ಯಸ್ಯಾತ್"** ದೋಷವಿದ್ದರೆ ಪ್ರತ್ಯವಾಯವೇನು ಎಂದು ಹೇಳುವ ಪರಮಕೃಪಾಸಾಗರನು. ಐಹಿಕರಾಜನ್ನು ಹಾಗಲ್ಲವು.

ಈ ರಾಜಾಧಿರಾಜನಲ್ಲಿ ಇನ್ನೊಂದು ವೈಲಕ್ಷಣ್ಯ ಉಂಟು. **"ಜಗದಖಿಲ ಮನ್ತರ್ಯಾಮಿ"** ಯು. ನಮ್ಮಗಳಿಗೆ ಆತ್ಮವಾಗಿ, ನಮ್ಮ ಹೃದಯಾಯತನದಲ್ಲಿದ್ದು ಕೊಂಡು, ನಮಗೆ ಪ್ರೇರಕನಾಗಿರುವನು. **"ಕಥಂಚಿದುಪಕಾರೇಣ ಕೃತೇ ನೈಕೇನತುಷ್ಯತಿ"** ಎಂದು ಹೇಳಿರುವಹಾಗೆ ಯಾವುದೋ ಒಂದು ಯಾದೃಚ್ಛಿಕ ಸುಕೃತವನ್ನು ಮುಂದುಮಾಡಿಕೊಂಡು, ತನ್ನ ಕೃಪಾಕಟಾಕ್ಷವೀಕ್ಷಣೆಯ ಮೂಲಕ ಸಾತ್ವಿಕಸಂಭಾಷಣೆ, ಜ್ಞಾನಪ್ರದಾನ, ಗುರೂಪಸದನ, ಉಪಾಯಾನುಷ್ಠಾನ ಮುಂತಾದವುಗಳನ್ನು ಮಾಡಿಸತಕ್ಕಂಥಾವನು. ಇವನ್ನೆಲ್ಲಾ ಲೌಕಿಕರಾಜನು ಮಾಡಲಾರನು.

ರಾಜಾಧಿರಾಜನಲ್ಲಿ ಮತ್ತೊಂದು ವೈಲಕ್ಷಣ್ಯವೇನೆಂದರೆ :—ಈತನು ಜಗದಖಿಲಮನ್ತರ್ಯಾಮಿಯಾಗಿರುವದರಿಂದ, **ಭವಧ್ವಂಸೋದ್ಯುಕ್ತನು.** ಈ ಚೇತನನಿಗೆ ಆತನ ಅನಾದಿ ಕರ್ಮಪ್ರವಾಹಮೂಲಕವಾಗಿ ಬಂದ ಪ್ರಕೃತಿಸಂಬಂಧರೂಪವಾದ ಸಂಸಾರವನ್ನು ಧ್ವಂಸಮಾಡಿ ಆತನನ್ನು ಈ ಕಾರಾಗೃಹದಿಂದ ಬಿಡಿಸಬೇಕೆಂಬ ಪ್ರಯತ್ನದಲ್ಲೇ ಇರುವಂಥಾವನು. ಮೇಲೆ ಹೇಳಿದ ರೀತಿಯಲ್ಲಿ ಯತ್ಕಿಂಚಿತ್ಸುಕೃತಮಾಡಿದರೆ ಸಾಕು, ಆತನು ಯಾವಾಗ ಮಾಡಿಯಾನೋ ಎಂದು ನಿರೀಕ್ಷಿಸುತ್ತಿರುವವನು. ಅದಕ್ಕಾಗಿ ಚೇತನನಿಗೆ ಕರಣಕಳೇಬರಾದಿಗಳನ್ನು ಕೊಟ್ಟು, ಸಚ್ಛಾಸ್ತ್ರಗಳನ್ನು ದಯಮಾಲಿಸಿ, ಗುರುಗಳುಪದೇಶಗಳನ್ನು ಒದಗಿಸಿ, ತನ್ನನ್ನು ಯಾವಾಗ ಆಶ್ರಯಿಸುವನೋ ಎಂದು ಎದುರುನೋಡುತ್ತಾ, ಆಶ್ರಯಿಸಿದ ಒಡನೆಯೇ ಈ ಕಾರಾಗೃಹದಿಂದ ಬಿಡುಗಡೆಯನ್ನು ಮಾಡಿಸಬೇಕೆಂದು ಕಾದಿರುವವನು. ಐಹಿಕರಾಜನಾದರೋ ಕಳ್ಳನು ಸಿಕ್ಕರೆ ಸಾಕು ಕಾರಾಗೃಹದಲ್ಲಿ ತಳ್ಳಿ ಬಿಡೋಣವೆಂದಿರುತ್ತಾನೆ.

ಈ ಕಾರಣಗಳಿಂದ ಆಶ್ರಯಿಸುವ ಚೇತನನು ಎಷ್ಟು ಪಾಪಿಯಾಗಿದ್ದರೂ ಸರ್ವೇಶ್ವರನುರಕ್ಷಿಸುವನೋ ಇಲ್ಲವೋ ಎಂಬ ಈಷದಪಿ ಸಂದೇಹವಿಲ್ಲವು. ದಯಾದಿಪ್ಯಾಂಭೋಧಿಯಾಗಿ ಅಖಿಲಜಗದಂತರ್ಯಾಮಿಯಾಗಿ ಭವಧ್ವಂಸೋದ್ಯುಕ್ತನಾಗಿರುವದು ಮಾತ್ರವೇ ಅಲ್ಲವು. ಆತನು ಭಗವಾನ್ ಎಂದು ಹೇಳಿಸಿಕೊಂಡಿರುತ್ತಾನೆ ಶ್ರೀ ಪರಾಶರ ಮಹರ್ಷಿಯು ಭಗವಚ್ಛಬ್ದಕ್ಕೆ

ಪ್ರಪತ್ತೇಃ ಪರಿಕರ ನಿರೂಪಣಂ

ಈ ವಿದ್ಯೆಗೆ ಪರಿಕರವಾವುದು ? ಆನುಕೂಲ್ಯಸಙ್ಕಲ್ಪಮುಖ್ಯ,

ಜ್ಞಾನಶಕ್ತಿ ಬಲೈಶ್ವರ್ಯ ವೀರ್ಯತೇಜಾಂ ಸ್ಯಶೇಷತಃ ।
ಭಗವಚ್ಛಬ್ದ ವಾಚ್ಯಾನಿ ವಿನಾಹೇಯೈರ್ಗುಣಾದಿಭಿಃ

ಎಂದು ನಿರುಕ್ತಿಯನ್ನು ಅನುಗ್ರಹಿಸಿರುವದರಿಂದ, ಇಂತಹ ಗುಣಗಳುಳ್ಳವನು ಸಕೃದನುಷ್ಠಿಸುವ ಭರನ್ಯಾಸದಿಂದಲೇ ಪ್ರೀತನಾಗಿ ನಮ್ಮ ಬಂಧವನ್ನು ಬಿಡಿಸಿ ಆನಂದವನ್ನೀಯುವನೆಂಬುವದರಲ್ಲಿ ಈಷದಪಿ ಸಂದೇಹವಿಲ್ಲವೆಂದು ಭಾವಿಸತಕ್ಕದ್ದು. ಆದುದರಿಂದ ಆತನು ರಕ್ಷಿಸಿಯೇ ರಕ್ಷಿಸುವನೆಂಬ ಪೂರ್ಣ ನಂಬಿಕೆ, ಮಹಾ ವಿಶ್ವಾಸವಿರತಕ್ಕದೆಂದು ಮುಂದೆ ಭರನ್ಯಾಸವಪುಷಃ, ಎಂಬಲ್ಲಿ ಭರ ಶಬ್ದವನ್ನು ಪ್ರಯೋಗಿಸಿದ್ದಾರೆ. ಅದರ ಜಗದಖಿಲಮನ್ತರ್ಯಾಮೀ ಎಂದು ಹೇಳಿರುವದರಿಂದ ಸರ್ವಶರೀರಿಯಾಗಿಯೂ ಸರ್ವಶೇಷಿಯಾಗಿರುವ ಭಾವವು ತೋರಿಬರುತ್ತದೆ. ಇದರಿಂದ ಜೀವನೂ ಸರ್ವೇಶ್ವರನಿಗೆ ಶರೀರವಾಯಿತು ಅಂತಹ ಶರೀರಕ್ಕೆ ಮಲಾದಿದೋಷಗಳಿದ್ದರೆ, ಜೀವನು ಅತ್ಯಂತ ಪರತಂತ್ರನಾಗಿರುವದರಿಂದ ಅವುಗಳನ್ನು ಕಳೆದುಕೊಳ್ಳುವದಕ್ಕೋಸ್ಕರ ಪ್ರಯತ್ನವು ಶರೀರಿಯೇ ಮಾಡತಕ್ಕದ್ದಾಗಿರುವಾಗ, ಜೇತನನು ಏತಕ್ಕೆ ಭರನ್ಯಾಸಮಾಡತಕ್ಕದ್ದು ? ಹೀಗಿರುವಾಗ ಇನ್ನು ಪರಿಕರಗಳ ಚಿಂತನೆ ಏತಕ್ಕೆ ಎಂದಾಕ್ಷೇಪಿಸಬಹುದು. ಆದರೆ ಚೇತನನಿಗೂ ಕರ್ತೃತ್ವಾದಿಗಳನ್ನು ಕೊಟ್ಟಿರುವದರಿಂದ ಶಾಸ್ತ್ರಪ್ರಕಾರ ಆತನು ಭರನ್ಯಾಸವನ್ನು ಅನುಷ್ಠಿಸಿ, ಮಲಗಳನ್ನು ಕಳೆದುಕೊಂಡು ಪರಿಶುದ್ಧನಾಗಿ ದಿವ್ಯಪದವಿಯನ್ನು ಹೊಂದತಕ್ಕದ್ದು.

ಆದುದರಿಂದ ಮಹಾವಿಶ್ವಾಸಾದಿ ಐದು ಅಂಗಗಳಿಂದ ಕೂಡಿದ ಆತ್ಮನಿಕ್ಷೇಪವನ್ನು ಸಕೃತ್ ಅನುಷ್ಠಿಸತಕ್ಕದ್ದೆಂದೂ, ಅವರಿಂದ ನಿರತಿಶಯ ಸುಖವನ್ನು ಹೊಂದುವನೆಂದೂ, ಶ್ರುತಿ ಭಗವಚ್ಛಾಸ್ತ್ರಾದಿಗಳು ಉಪದೇಶಿಸುತ್ತವೆ ಎಂಬ ತಾತ್ಪರ್ಯವು.

ಪ್ರಪತ್ತಿಯ ಪರಿಕರಗಳ ನಿರೂಪಣವು

"ಪ್ರಪತ್ತೇಃ ಕ್ವಚಿದಪ್ಯೇವಂ ಪರಾಪೇಕ್ಷಾ ನ ವಿದ್ಯತೇ" ಎಂದು ಹೇಳಿರುವಹಾಗೆ ಪ್ರಪತ್ತಿಗೆ ಯಾವುದರಪೇಕ್ಷೆಯೂ ಇಲ್ಲವೆಂದು ಹೇಳುವದರರ್ಥ ಪ್ರಾಯವು ಸಂಕಲ್ಪಗಳೂ ಇಲ್ಲವೆಂಬರ್ಥವಲ್ಲವೆಂದು ತಿಳಿಸುವದಕ್ಕಾಗಿ ಎಂದು ಶಾಸ್ತ್ರ ಪ್ರಮಾಣಗಳ ಮೂಲಕ ಪರಿಕರಗಳಾವುವು ಎಂದು ತಿಳಿಸುತ್ತಾರೆ. **ಪರಾಪೇಕ್ಷಾ**

ಪ್ರಾತಿಕೂಲ್ಯವರ್ಜನಮುಮ್' ಕಾರ್ಪಣ್ಯಮುಮ್, ಮಹಾವಿಶ್ವಾಸಮುಮ್ ಗೋಪ್ತೃತ್ವವರಣಮುಮ್ ?

"ಷಡ್ವಿಧಾಶರಣಾಗತಿ" ಇತಿ ಪ್ರಮಾಣಸ್ಯ ತಾತ್ಪರ್ಯಂ

ಇವ್ವಿಡತ್ತಿಲ್ "ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ

ನ ವಿದ್ಯತೇ ಎಂದರೆ ಈ ಉಪಾಯಕ್ಕೆ ಬೇರೊಂದೂ ಸಾಧನ ಬೇಕಿಲ್ಲ ವೆಂಬ **ತಾತ್ಪರ್ಯವು.**

ಈ ವಿದ್ಯೈಕ್ಕು-ಈ ನ್ಯಾಸವಿದ್ಯೆಗೆ, ಭಕ್ತಿಯೋಗಗಳಲ್ಲಿ ಸೇರುವ ಮೂವತ್ತೆರಡು ವಿಧ ಉಪಾಸನೆಗಳೂ ಹೇಗೆ ಬ್ರಹ್ಮವಿದ್ಯೆ ಎನಿಸುವವೋ, ಹಾಗೆಯೇ ಈ ಪ್ರಪತ್ತಿಯೂ ಒಂದು ಬ್ರಹ್ಮವಿದ್ಯೆಯು, ನ್ಯಾಸವಿದ್ಯೆಯೆಂದು ಹೇಳುತ್ತಾರೆ, ಹೀಗೆ ವಿದ್ಯೆಯೆಂದು ಹೇಳಿರುವದರಿಂದ, ಭಕ್ತಿಯೋಗವ ಬ್ರಹ್ಮವಿದ್ಯೆಗಳಿಗೆ ಹೇಗೆ ಪರಿಕರಗಳುಂಟೋ, ಹಾಗೆಯೇ ಈ ನ್ಯಾಸವಿದ್ಯೆಗೂ ಪರಿಕರಗಳುಂಟು. ಮತ್ತು ಇದು ವಿದ್ಯೆ ಎಂದು ಹೇಳಿರುವದರಿಂದ, ಅದರ ಹಾಗೆಯೇ ಇದೂ ಜ್ಞಾನ ರೂಪವಾದುದೇ ಎಂದೂ ತಿಳಿಸಿದಂತಾಯಿತು. **ಪರಿಕರಙ್ಗಳಾವತು** - ಪರಿಕರಗಳಾವುವು? **ಆನುಕೂಲ್ಯಸಙ್ಕಲ್ಪಮುಮ್** - ಇವುಗಳಿಗೆಲ್ಲಾ ಅರ್ಥವನ್ನು ಶ್ರೀಮದಾಚಾರ್ಯರೇ ವಿಶದವಾಗಿ ಅನುಗ್ರಹಿಸುತ್ತಾರೆ. ತಾನು ಸರ್ವೇಶ್ವರನಿಗೆ ದಾಸನಾಗಿ ಪರತನ್ತ್ರನಾದುದರಿಂದ ಆತನ ಆಜ್ಞಾರೂಪಗಳಾದ ಪ್ರವೃತ್ತಿಗಳಿಗೆ ಅನುಕೂಲನಾಗಿ ವರ್ತಿಸುವೆನೆಂಬ ಸಙ್ಕಲ್ಪವು. **ಪ್ರಾತಿಕೂಲ್ಯವರ್ಜನಮ್** - ಆಜ್ಞಾರೂಪಗಳಾಗಿ ನಿಷೇಧಿಸಿರುವುವುಗಳನ್ನು ತ್ಯಜಿಸುವಿಕೆ, **ಕಾರ್ಪಣ್ಯಮ್** - ಕಾರ್ಪಣ್ಯವೂ, ತನಗಿನ್ನಾವ ಉಪಾಯವೂ ಇಲ್ಲವಾದುದರಿಂದ ದೀನನಾಗಿರುವದು, **ಮಹಾವಿಶ್ವಾಸಮ್** - ಆ ಶರಣಾಗತ್ಯನುಷ್ಠಾನಮಾಡಿದರೆ ಸರ್ವೇಶ್ವರನು ರಕ್ಷಿಸದೇ ಬಿಡುವನೆಂಬ **ಪೂರ್ಣ**ನಂಬಿಕೆಯು, **ಗೋಪ್ತೃತ್ವವರಣಮ್** - ತನ್ನ ಅಭೀಷ್ಟವೇನೆಂಬುದನ್ನು ಅರಿಕೆಮಾಡಿಕೊಳ್ಳುವದು. ಹೀಗೆ ಐದು ಪರಿಕರಗಳು ಎಂದರೆ ಅಂಗಗಳು

ಷಡ್ವಿಧಾ ಶರಣಾಗತಿಃ ಎಂಬ ಪ್ರಮಾಣದ ತಾತ್ಪರ್ಯವು

ಮೇಲೆ ಅಙ್ಗಗಳು ಐದು ಎಂದು ಹೇಳಲ್ಪಟ್ಟವು. **"ಷಡ್ವಿಧಾ ಶರಣಾಗತಿಃ"** ಎಂಬ ಪ್ರಮಾಣದಲ್ಲಿ, ಶರಣಾಗತಿಯು **ಷಡ್ವಿಧಾ** – ಆರು ಪರಿಕರಗಳುಳ್ಳದೆಂದು **ತೋರಿಬರುತ್ತದಲ್ಲಾ** ಎಂದರೆ, ಅದರ **ತಾತ್ಪರ್ಯ**ವನ್ನುಪದೇಶಿಸುತ್ತಾರೆ.

ವರ್ಜನಂ। ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ। ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ" (೧) ಇತ್ಯಾದಿಗಳಿಲ್ ಶೊಲ್ಲುಗಿರ ಷಾಡ್ವಿಧ್ಯಂ, ಅಷ್ಟಾಙ್ಗಯೋಗಮೆನ್ನುಮಾಪ್ಪೋಲೆ ಅಂಗಾಂಗಿ ಸಮುಚ್ಚಯತ್ತಾಲೆ ಯಾಕಕ್ಕಡುವದೆನ್ನುಮಿಡಮುಮ್, ಇವತ್ತಿಲ್ ಇನ್ನ

ಇನ್ನಿಡತ್ತಿಲ್ - ಈ ನ್ಯಾಸವಿದ್ಯಾ ಪರಿಕರಗಳನ್ನು ಕುರಿತು ಹೇಳುವ ಸಂದರ್ಭದಲ್ಲಿ "**ಆನುಕೂಲ್ಯಸ್ಯ ಸಙ್ಕಲ್ಪಃ ಪ್ರಾತಿಕೂಲ್ಯಸ್ಯವರ್ಜನಂ** " - ಸರ್ವೇಶ್ವರನ ಆಜ್ಞಾಗಳಾದ ವಿಧಿ ವಾಕ್ಯಗಳ ವಿಷಯದಲ್ಲಿ ಅನುಕೂಲವಾಗಿರುವ ಸಂಕಲ್ಪವೂ, ನಿಷೇಧವಾಕ್ಯಗಳಿಗನುಸಾರವಾಗಿ ಪ್ರತಿಕೂಲವಾದವನ್ನು ತ್ಯಜಿಸೋಣವೂ, **ರಕ್ಷಿಷ್ಯತೀತಿವಿಶ್ವಾಸಃ** - ಶ್ರಿಯಃಪತಿಯು ಸರ್ವಥಾ ರಕ್ಷಿಸುವನು ಎಂಬ ಪೂರ್ಣ ನಂಬಿಕೆಯೂ, **ಗೋಪ್ತೃತ್ವವರಣಂ ತಥಾ** - ಹಾಗೆಯೇ ಕಾಪಾಡು ಎಂಬ ಪ್ರಾರ್ಥನೆಯೂ, **ಆತ್ಮನಿಕ್ಷೇಪ ಕಾರ್ಪಣ್ಯೇ** - ಆತ್ಮನಿಕ್ಷೇಪ ವೆಂದರೆ ಶ್ರಿಯಃಪತಿಯ ಪಾದಾರವಿಂದದಲ್ಲಿ ನಮ್ಮ ಆತ್ಮನನ್ನು ಇಡುವದು ಎಂದರೆ ಸಮರ್ಪಿಸುವದು, ಕಾರ್ಪಣ್ಯವೆಂದರೆ ನನಗೆ ಇನ್ನ್ಯಾರೂ ಗತಿಯಿಲ್ಲವು, ನೀನೇ ಗತಿ ಎಂದು ಭಾವಿಸುವದು, ಹೀಗೆ **ಶರಣಾಗತಿಃ** – ಪ್ರಪತ್ತಿಯು, **ಷಡ್ವಿಧಾ** - ಆರು ಅಂಶಗಳುಳ್ಳದು, "**ಇತ್ಯಾದಿಗಳಿಲ್** - ಇವೇ ಮೊದಲಾದ ಪ್ರಮಾಣಗಳಲ್ಲಿ, **ಶೊಲ್ಲಗಿರ ಷಾಡ್ವಿಧ್ಯಂ** – ಹೇಳುವ ಆರು ವಿಧಗಳುಳ್ಳ ಭಾವವು, **ಅಷ್ಟಾಂಗಯೋಗಮ್** - ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳುಳ್ಳ ಯೋಗವು, **ಎನ್ನುಮಾಪ್ಪೋಲೆ** -- ಎಂದು ಹೇಳುವಹಾಗೆ, ಎಂದರೆ ಇದರಲ್ಲಿ ಸಮಾಧಿ ಅಂಗಿಯು, ಇನ್ನು ಏಳೂ ಅಂಗಗಳೂ, ಅಂಗಿ ಅಂಗಗಳು ಸೇರಿ ಹೇಗೆ ಎಂಟಾದವೋ, ಹಾಗೆಯೇ ಈ ಪರಿಕರಗಳಲ್ಲೂ ಆತ್ಮ ನಿಕ್ಷೇಪವು ಅಂಗಿ. ಮಿಕ್ಕ ಐದು ಅಂಗಗಳು, ಇವೆರಡೂ ಸೇರಿ ಆರು ಅಂಗಗಳೆಂದು ಹೇಳಿಸಿಕೊಳ್ಳುತ್ತವೆಂದು ಮುಂದೆ ಹೇಳುತ್ತಾರೆ. **ಅಂಗಾಂಗಿಸಮುಚ್ಚಯತ್ತಿಲೆ** - ಅಂಗಗಳೂ ಅಂಗಿಯೂ ಸೇರಿ, **ಆಗಕ್ಕಡವದು** – ಆಗುತ್ತದೆಂಬುವದು, ಎಂದರೆ ಆರಾಗುತ್ತವೆಂಬುವದು **ಎನ್ನುಮಿಡಂ** - ಎಂಬ ವಿಷಯವೂ, ಮತ್ತು **ಇವತ್ತಿಲ್** - ಈ ಆರರಲ್ಲಿ, **ಇನ್ನುವೊನ್ರುಮೇ ಅಂಗಿ** – ಇದೊಂದೇ ಅಂಗಿಯು, **ಇತರಂಗಳ್ ಅಙ್ಗಙ್ಗಳೆನ್ನುಮಿಡಮುಮ್**- ಇನ್ನು ಮಿಕ್ಕವೆಲ್ಲಾ ಅಂಗಗಳು ಎಂಬ ವಿಷಯವೂ ಸಹ, **ನಿಕ್ಷೇಪಾಪರಪರ್ಯಾಯಃ** - ಆತ್ಮನಿಕ್ಷೇಪವೆಂದರೆ ಸರ್ವೇಶ್ವರನ ಪಾದದಲ್ಲಿ ಈ ನಮ್ಮ ಆತ್ಮ

(೧) ಅಹಿ. ೩೭—೨, ೨೭, ೨೮.

ದೊನ್ರುಮೇ ಅಙ್ಗ್ಙಂ, ಇತರಙ್ಗಳ್ ಅಙ್ಗಙ್ಗಳೆನ್ನುಮಿಡಮುಮ್, "ನಿಕ್ಷೇಪಾಪರಪರ್ಯಾಯೋನ್ಯಾಸಃ ಪಂಚಾಂಗಸಂಯುತಃ । ಸನ್ಯಾಸಸ್ತ್ಯಾಗ ಇತ್ಯುಕ್ತ ಶ್ಶರಣಾಗತಿರಿತ್ಯಪಿ" । ಎಙ್ಗಿರ ಶ್ಲೋಕತ್ತಾಲೆ ನ್ಯಾಯನಿರಪೇಕ್ಷಮಾಕ ಸಿದ್ಧಮ್.

ವನ್ನು ಸಮರ್ಪಿಸುವಿಕೆ, ಇದರ, **ಅಪರಪರ್ಯಾಯಃ**-ಬೇರೇ ಹೆಸರಾದ, **ನ್ಯಾಸಃ**-ಪ್ರಪತ್ತಿಯು, **ಪಂಚಾಙ್ಗಸಂಯುತಃ** – ಐದು ಅಂಗಗಳುಳ್ಳದ್ದು, ಅದಕ್ಕೆ ಸನ್ಯಾಸವೆಂದೂ, ತ್ಯಾಗವೆಂದೂ, **ಶರಣಾಗತಿರಿತ್ಯಪಿ** - ಶರಣಾಗತಿ ಎಂದೂ ಸಹ, **ಉಕ್ತಃ**-ಹೇಳಲ್ಪಟ್ಟಿದೆ", **ಎಙ್ಗಿರಶ್ಲೋಕತ್ತಾಲೆ** - ಎಂಬುವ ಶ್ಲೋಕಮೂಲಕವಾಗಿ, **ನ್ಯಾಯನಿರಪೇಕ್ಷಮಾಕ** - ಯುಕ್ತಿವಾದದ ಅವಶ್ಯಕವಿಲ್ಲದೇನೇ, **ಸಿದ್ಧಂ** - ಸಿದ್ಧವಾದುದು, ಎಂದರೆ ಪ್ರಮಾಣಮೂಲಕವಾಗಿಯೇ ಸಿದ್ಧವು ಎಂಬ ಭಾವವು. ಈ ಮೇಲಿನ ವಾಕ್ಯದ ಮೂಲಕ ಅಹಿರ್ಬುಧ್ನ್ಯ ಸಂಹಿತೆಯ ವಾಕ್ಯವಾದ "**ಷಡ್ವಿಧಾಶರಣಾಗತಿಃ**" ಎಂಬ ವಾಕ್ಯಕ್ಕೂ ಲಕ್ಷ್ಮೀತಂತ್ರವಾಕ್ಯವಾದ "**ನ್ಯಾಸಃಪಂಚಾಂಗಸಂಯುತಃ**" ಎಂಬ ವಾಕ್ಯಕ್ಕೂ ಏನೂ ಪರಸ್ಪರ ವಿರೋಧವಿಲ್ಲವೆಂದು ತಿಳಿಸಿರುತ್ತಾರೆ. "**ಸ್ನಾನಂಸಪ್ತವಿಧಂ**" ಎಂದು ಹೇಳಿರುವ ವಾಕ್ಯದಲ್ಲಿ ಸ್ನಾನವು ಸ್ವರೂಪಭೇದದಿಂದ ಏಳು ವಿಧವಾದುದು ಎಂದು ಹೇಳಿದಹಾಗೆ, "**ಷಡ್ವಿಧಾಶರಣಾಗತಿಃ**" ಎಂಬಲ್ಲಿ ಷಡ್ವಿಧಾ ಎಂದರೆ ಶರಣಾಗತಿಯು ಆರುವಿಧವಾದುದು ಎಂಬರ್ಥವಲ್ಲವು ಆರು ವಿಧವಾದವುಗಳನ್ನುಳ್ಳದ್ದು ಎಂಬ ಬಹುವ್ರೀಹಿ ಅರ್ಥವು. ಆ ಆರರಲ್ಲಿ ಐದು ಅಂಗಗಳು ಒಂದು ಅಂಗಿಯು, ಎರಡನ್ನೂ ಸೇರಿಸಿ ಆರೆಂದು ಸಂಹಿತಾವಾಕ್ಯವು ಹೇಳಿತು ಲಕ್ಷ್ಮೀತಂತ್ರವು ಆತ್ಮನಿಕ್ಷೇಪವಾದ ಅಂಗಿಯನ್ನು ಬೇರೆ ಹೇಳಿ ಶರಣಾಗತಿಗೆ ಐದು ಅಂಗಗಳೆಂದು ಹೇಳಿತು. ಆದುದರಿಂದ ಹೀಗೆ ಸಂಹಿತೆಯು, **ಅಂಗಾಂಗಿ ಸಮುಚ್ಚಯತ್ತಾಲೆ**-ಅಂಗಾಂಗಿಗಳನ್ನು ಸೇರಿಸಿ ಹೇಳಿದುದರಿಂದ ಏನೊಂದೂ ವಿರೋಧವಿಲ್ಲವೆಂದು ಹೇಳಿದರು. ಆದರೆ ಅಂಗಿ, ಅಂಗಗಳನ್ನು ಸೇರಿಸಿ ಸಮುಚ್ಚಯ ಮೂಲಕ ಹೇಳುವದುಂಟೋ ಎಂದರೆ, ಹೇಳುವದುಂಟು ಎಂಬುವದಕ್ಕೆ ಒಂದು ನಿದರ್ಶನವನ್ನು ಕೊಡುತ್ತಾರೆ. ಯೋಗವು ಅಷ್ಟಾಂಗವುಳ್ಳದ್ದೆಂದು ಹೇಳುವ ವಾಡಿಕೆಯುಂಟು. ಅದರಲ್ಲಿ ಸಮಾಧಿಯೇ ಅಂಗಿಯು, ಇನ್ನು ಮಿಕ್ಕ ಯಮ ನಿಯಮಾದಿಗಳು ಏಳೂ ಅಂಗಗಳು. ಅಂಗಿ ಅಂಗಗಳು ಸೇರಿ ಹೇಗೆ ಅಷ್ಟಾಂಗ ಉಳ್ಳದ್ದೆಂದು ಹೇಳಿಸಿಕೊಳ್ಳುತ್ತದೆಯೋ, ಹಾಗೆಯೇ ಇಲ್ಲಿಯೂ ಕೂಡ ಅಂಗಾಂಗಿಗಳು ಸೇರಿ ಷಡ್ವಿಧಾ ಎಂದು ಹೇಳಿಸಿಕೊಂಡಿರುತ್ತದೆಂಬ ಭಾವವು, ಈ "ನಿಕ್ಷೇಪಾಪರಪರ್ಯಾಯಃ"

ಇವ್ವಿಡತ್ತಿಲ್ "ಶಾಶ್ವತೀಮಮ ಸಂಸಿದ್ಧಿರಿಯಂ ಪ್ರಹ್ವೀಭವಾ

ಎಂಬ ಲಕ್ಷ್ಮೀತಂತ್ರಪ್ರಮಾಣವು ಎರಡು ವಿಷಯಗಳನ್ನು ಸ್ಥಾಪಿಸುತ್ತದೆಂದು ತಿಳಿಸುತ್ತಾರೆ. ೧. ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಹೇಳಿರುವ ನಿಕ್ಷೇಪವನ್ನು ಪ್ರತ್ಯೇಕಿಸಿ ಹೇಳಿಬಿಟ್ಟು ಅನಂತರ ಶರಣಾಗತಿಯು ಐದು ಅಂಗಗಳುಳ್ಳದೆಂದು ಹೇಳಿದುದರಿಂದ ಆತ್ಮನಿಕ್ಷೇಪವೇ ಅಂಗಿ ಎಂದು ಹೇಳಿದಂತಾಯಿತು. ೨. ಇನ್ನು ಮಿಕ್ಕ ಆನುಕೂಲ್ಯ ಸಙ್ಕಲ್ಪಾದಿ ಐದೂ ಅಂಗಗಳೂ ಎಂದೂ ಹೇಳಿದಂತಾಯಿತು. ಆದುದರಿಂದ ಯುಕ್ತಿವಾದಗಳಾವಶ್ಯಕತೆಯಿಲ್ಲದೇನೆ ಈ ಪ್ರಮಾಣಗಳ ಮೂಲಕವಾಗಿಯೇ ಇವೆರಡು ವಿಷಯಗಳೂ ಸಿದ್ಧವು. ಒಂದು ವೇಳೆ ಈ ಲಕ್ಷ್ಮೀತಂತ್ರ ಪ್ರಮಾಣವಿಲ್ಲದೆ ಇದ್ದರೆ ಯುಕ್ತಿಮೂಲಕವಾಗಿಯೇ ಯಾವುವು ಅಂಗಗಳು, ಯಾವುದು ಅಂಗಿಯು ಎಂಬುವದನ್ನು ನಿರ್ಧರಿಸಬೇಕಾಗಿತ್ತು; ಆನುಕೂಲ್ಯ ಸಂಕಲ್ಪವೂ, ಪ್ರಾತಿಕೂಲ್ಯವರ್ಜನೆಯೂ, ಮಹಾವಿಶ್ವಾಸವೂ, ರಕ್ಷಾಪೇಕ್ಷೆಯೂ ಕಾರ್ಪಣ್ಯವೂ ಸಹ ಅಂಗಿಯಾಗಲಾರದಾದ ಪ್ರಯುಕ್ತ, ಅಂಗಿಯು ಆತ್ಮನಿಕ್ಷೇಪವೇ ಸರಿ ಎಂಬದಾಗಿ ವಾದಮಾಡಬೇಕಾಗಿತ್ತು. ತಾವು ಪ್ರಮಾಣಶರಣರಾದ ಪ್ರಯುಕ್ತ, ತಮಗೆ ವಾದ ನಿರಪೇಕ್ಷವೆಂದೂ ಪ್ರಮಾಣವೇ ಮುಖ್ಯವೆಂದೂ ಹೇಳಿದಂತಾಯಿತು. **ನಿಕ್ಷೇಪಾಪರಪರ್ಯಾಯಃ ನ್ಯಾಸಃ** ಎಂದು ಹೇಳಿರುವದರಿಂದ ಅಂಗಿಯನ್ನು ತಾನೇ ನ್ಯಾಸ, ಶರಣಾಗತಿ ಶಬ್ದಗಳಿಗೆ ಪರ್ಯಾಯ ಪದವಾಗಿ ಹೇಳಬಹುದು. ಅಂಗಗಳಿಗೆ ಹಾಗೆ ಹೇಳಲಾಗುವದಿಲ್ಲವು, ಆನುಕೂಲ್ಯ ಸಂಕಲ್ಪವನ್ನೇ ಶರಣಾಗತಿ ಎಂದು ಹೇಳಲಾಗುವದಿಲ್ಲವೆಂಬ ಭಾವವು ಕೂಡ ಆ ಪ್ರಮಾಣವಾಕ್ಯದಿಂದ ತೋರಿಬರುತ್ತದೆ.

ಆದರೆ ಅಹಿರ್ಬುಧ್ನ್ಯ ಸಂಹಿತೆಯಲ್ಲೇ ಇದೇ ಸಂದರ್ಭದಲ್ಲೇ ಆತ್ಮನಿಕ್ಷೇಪಕ್ಕೆ ಇನ್ನೊಂದು ಅಂಗ ಉಂಟೆಂದೂ, ಅದು ಯಾವುವೆಂದರೆ ಫಲತ್ಯಾಗರೂಪವಾದುದೆಂದೂ "**ಇತ್ಯಂಗಮುದಿತಂ ಶ್ರೇಷ್ಠಂ ಫಲೇಪ್ಸಾ ತದ್ವಿರೋಧಿನೀ**" ಎಂದು ಹೇಳಿರುವದರಿಂದ ಆತ್ಮನಿಕ್ಷೇಪವನ್ನು ಅಂಗಿಯಾಗಿಟ್ಟುಕೊಂಡರೂ ಬೇರೆ ಆರು ಅಂಗಗಳಾಯಿತಲ್ಲಾ, "**ನ್ಯಾಸಃ ಪಂಚಾಂಗಸಂಯುತಃ**" ಎಂಬ ವಾಕ್ಯಪ್ರಮಾಣಕ್ಕೆ ಗತಿ ಏನು ಎಂದರೆ ಸಮಾಧಾನ ಹೇಳುತ್ತಾರೆ:—ಈ ಫಲತ್ಯಾಗ ರೂಪ ಅಂಗವೂ ಕೂಡ ಆ ಆತ್ಮನಿಕ್ಷೇಪವೆಂಬ ಅಂಗಿಯಲ್ಲೇ ಸೇರಿ ಅಂಗಿಯೆನಿಸಿಕೊಳ್ಳುವುದರಿಂದ, ಫಲತ್ಯಾಗಯುಕ್ತ ಆತ್ಮನಿಕ್ಷೇಪವೇ ಅಂಗಿಯು, ಮಿಕ್ಕ ಐದೂ ಅಂಗಗಳು ಎಂದು ಭಾವಿಸತಕ್ಕದ್ದೆಂದು ಮುಂದಿನ ವಾಕ್ಯವನ್ನು "**ಇವ್ವಿಡತ್ತಿಲ್**" ಎಂದು ಪ್ರಾರಂಭಿಸಿ ಅಪ್ಪಣೆ ಕೊಡಿಸುತ್ತಾರೆ.

ಇವ್ವಿಡತ್ತಿಲ್ - ಈ ಪ್ರಪತ್ತಿಗೆ ಒಂದು ಅಂಗಿಯೂ, ಐದು ಅಂಗಗಳೆಂದು

ಮಿಯತ್ । ಪುರುಷಂಪರಮುದ್ದಿಶ್ಯ ನಮೇಸಿದ್ಧಿರಿತೋನ್ಯಥಾ । ಇತ್ಯಂಗ ಮುದಿತಂ ಶ್ರೇಷ್ಠಂ ಫಲೇಪ್ಸಾತದ್ವಿರೋಧಿನೀ" (೧) ಎನ್ರು ಅಹಿರ್ಬು ಧ್ನ್ಯೋಕ್ತಮಾನ ಫಲತ್ಯಾಗರೂಪಾಂಗಾಂತರವ್ ಮೋಕ್ಷಾರ್ಥಮಾನ ಆತ್ಮನಿಕ್ಷೇಪತ್ತಿಲೇ ನಿಯತಂ.

ಸ್ಥಾಪಿಸುವ ಸಂದರ್ಭದಲ್ಲಿ, **"ಪರಂಪುರುಷಂ"** ಪುರುಷೋತ್ತಮನಾದ ಶ್ರಿಯಃಪತಿ ಯನ್ನು, **ಉದ್ದಿಶ್ಯ** - ಕುರಿತು, **ಪ್ರಪತ್ತೀಭವಾಮಿಯತ್** - ಶರಣಾಗತನಾಗು ತ್ತೇನೆಂಬುವದು ಯಾವುದೋ, **ಇಯಂ** - ಇದೇ, **ಮನುಶಾಶ್ವತೀಸಂಸಿದ್ಧಿಃ** - ನನಗೆ ಚ್ಯುತಿಯಿಲ್ಲದಿರುವ ಶಾಶ್ವತವಾದ ಪುರುಷಾರ್ಥವು, **ಇತಃ** - ಇದಕ್ಕಿಂತಲೂ **ಅನ್ಯಥಾ** - ಬೇರೆಯಾದುದು ಎಂದರೆ ಇಲ್ಲಿನ ಐಶ್ವರ್ಯ ಸ್ವರ್ಗ ಕೈವಲ್ಯಮೋಕ್ಷ ಪ್ರಾಪ್ತಿಗಳು, **ನಮೇಸಿದ್ಧಿಃ** - ನನಗೆ ಪುರುಷಾರ್ಥವಿಲ್ಲವು, **ಇತಿ** - ಎಂಬ, ಅಂಗವು, **ಶ್ರೇಷ್ಠಂ** - ತುಂಬಾ ಶ್ರೇಷ್ಠವಾದುದಾಗಿ, **ಉದಿತಂ** - ಹೇಳಲ್ಪಟ್ಟಿತು, **ಫಲೇಪ್ಸಾ** – ಅಂತಹ ಸ್ವರ್ಗಮೋಕ್ಷಾದಿಫಲಾಪೇಕ್ಷೆಯಾದರೋ, **ತದ್ವಿರೋಧಿನೀ** – ಆ ಶಾಶ್ವತಪರಮಪುರುಷಾರ್ಥಕ್ಕೆ ವಿರೋಧವಾದುದು, **ಎನ್ರು** - ಎಂಬ ದಾಗಿ, **ಅಹಿರ್ಬುಧ್ನ್ಯೋಕ್ತಮಾನ** - ಅಹಿರ್ಬುಧ್ನ್ಯಸಂಹಿತೆಯಲ್ಲಿ ಹೇಳಲ್ಪಟ್ಟ, **ಫಲತ್ಯಾಗರೂಪಾಂಗಾಂತರವ್** - ಫಲತ್ಯಾಗವೆಂಬ ಬೇರೊಂದು ಅಂಗವು, **ಮೋಕ್ಷಾರ್ಥಮಾನ** – ಮೋಕ್ಷವೇ ಪ್ರಯೋಜನವಾಗಿ ಉಳ್ಳ, **ಆತ್ಮನಿಕ್ಷೇಪತ್ತಿಲೆ** - ಆತ್ಮನಿಕ್ಷೇಪವೆಂಬುವ ಅಂಗಿಯಲ್ಲಿಯೇ, **ನಿಯತಂ** - ನ್ಯಾಯವಾಗಿರ ತಕ್ಕದ್ದು ಅಥವಾ ಅವಶ್ಯಕವಾಗಿರತಕ್ಕದ್ದು. ಶ್ರಿಯಃಪತಿಯಲ್ಲಿ ಶರಣಾಗತಿಯನ್ನ ನುಷ್ಠಿಸುವಾಗ, ಮೋಕ್ಷಮೋಕ್ಷೇತರವಾದ ಫಲಂಗಳಲ್ಲಿ ಮಮತೆ ಇರಕೂ ಡದು. ಐಹಿಕಭೋಗಗಳಲ್ಲಿಯಾಗಲಿ ಸ್ವರ್ಗಕೈವಲ್ಯಾದಿ ಫಲಗಳಲ್ಲಾಗಲಿ ಮೋಕ್ಷ ದಲ್ಲೇಯಾಗಲಿ ಆಶೆಯನ್ನು ತೊರೆಯಬೇಕು. ಈ ಅಭಿಪ್ರಾಯವನ್ನೇ ಮಹರ್ಷಿ ಯೂ ಉಪಪಾದಿಸಿರುತ್ತಾರೆ:-(೨) **"ಭವಂತಂ ಸರ್ವಭೂತಾನಾಂ ಶರಣ್ಯಂ ಶರಣಾಗತಃ। ಪರಿತ್ಯಕ್ತಾಮಯಾಲಂಕಾ ಮಿತ್ರಾಣಿ ಚ ಧನಾನಿ ಚ''** ಎಂದೂ (೩) **"ತ್ಯಕ್ತ್ವಾಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂಗತಃ ।** ಎಂದೂ ಹೇಳಿರುವುದರಿಂದ ಶರಣಾಗತಿಯನ್ನನುಷ್ಠಿಸುವವನು ಸರ್ವವಿಧಮಮತೆಗಳನ್ನೂ ತೊರೆದಿರಬೇಕೆಂದುಪದೇಶಿಸಿರುತ್ತಾರೆ. ಆದುದರಿಂದಲೇ ಮಹಾಪ್ರಾಜ್ಞನಾದ ವಿಭೀಷಣನು ಫಲೇಪ್ಸಾವನ್ನು ಪ್ರದರ್ಶಿಸಲಿಲ್ಲವು. ಹಾಗೆ ಫಲಾಪೇಕ್ಷೆಯು ಇದ್ದು

---

(೧) ಅಹಿರ್ಬುಧ್ನ್ಯ. ೫೨.೧೪. (೨) ರಾಮಾ. ಯುದ್ಧ. ೧೯.೫. (೩) ರಾಮಾ. ಯುದ್ಧ. ೧೭.೧೪.

ಫಲಸಙ್ಗಕರ್ತೃತ್ವಾದಿ ತ್ಯಾಗವುಮ್ ಕರ್ಮಯೋಗವುಮ್ ಮುದಲಾಕ

ದಾದರೆ ಮೋಕ್ಷವು ದೊರೆಯುದೆಂದೂ ಸ್ವರ್ಗಾದಿಫಲಪ್ರಾಪ್ತಿಯೆಂದು **"ಫಲೇಪ್ಸಾ ತದ್ವಿರೋಧಿನೀ"** ಎಂಬ ವಾಕ್ಯದಿಂದ ಸಂಹಿತೆಯು ಉಪದೇಶಿಸುತ್ತದೆ. ಐಹಿಕ ಭೋಗಗಳೇ ಆಗಲಿ ಸ್ವರ್ಗಾದಿಫಲಗಳೇ ಆಗಲಿ ನಶ್ವರಗಳಾಗಿ ಶಾಶ್ವತಸಂಸಿದ್ಧಿಗೆ ಎಂದಿಗೂ ಸಮನಾಗಲಾರವು. ಆದುದರಿಂದ ಅವುಗಳನ್ನು ಬಯಸುವದು ತನ್ನ ಶೇಷವೃತ್ತಿಯನ್ನು ಚೆನ್ನಾಗಿ ಅರಿತ ಚೇತನನಿಗೆ ಸ್ವರೂಪವಲ್ಲವು. ಮತ್ತು ಮೋಕ್ಷಪ್ರಾಪ್ತಿಯು ಸರ್ವಶ್ರೇಷ್ಠ ಪ್ರಯೋಜನಕ್ಕೆಂದು ತಿಳಿದವನಾದರೆ ಯಾವ ಫಲಗಳನ್ನೂ ಎಂದಿಗೂ ಬಯಸನು, ಅಂಥಾವುಗಳಲ್ಲಿ ಮಮತೆಯೂ ಎಂದಿಗೂ ಹುಟ್ಟದು. ಅಹಿರ್ಬುಧ್ನ್ಯ ಸಂಹಿತೆಯು, ಏಕಾದಶರುದ್ರರಲ್ಲಿ ಒಬ್ಬನಾದ ಅಹಿರ್ಬುಧ್ನ್ಯರುದ್ರನು ನಾರದರಿಗೆ ಶರಣಾಗತ್ಯನುಷ್ಠಾನವನ್ನೂ ಮೂಲಮಂತ್ರಾರ್ಥಗಳನ್ನೂ ವಿಶದವಾಗಿ ಉಪದೇಶಿಸುವಂಥಾದ್ದು. ಆ ಸಂಹಿತೆಯಲ್ಲಿ **ಷಡ್ವಿಧಾ ಶರಣಾಗತಿಃ** ಎಂದು ಹೇಳಿ, ಶರಣಾಗತಿಗೆ ಅಂಗಿ ಅಂಗಗಳ ಸಮುಚ್ಚಯದಿಂದ ಆರೇ ಎಂದು ಸಂಕ್ಷೇಪವಾಗಿ ಹೇಳಿ, ಅವುಗಳು ಯಾವುವು ಎಂದು ವಿಶದವಾಗಿ ವಿವರಿಸಿ ಕೊನೆಗೆ ಶರಣಾಗತ್ಯನುಷ್ಠಾನಕಾಲದಲ್ಲಿ **ಇತ್ಯಂಗಮುದಿತಂಶ್ರೇಷ್ಠಂ** ಎಂದು ಅಂಗಶಬ್ದವನ್ನು ಪ್ರಯೋಗಿಸಿದರೆ, ಇದು ಶರಣಾಗತಿಗೆ ಇನ್ನೊಂದು ಅಂಗವೆಂದು ಅರ್ಥ ಹೇಳಲು ಆದೀತೆ? ಆಗ ಅಂಗಾಂಗಗಳ ಸಮುಚ್ಚಯ ಏಳಾಗುತ್ತದೆ. ಷಡ್ವಿಧಾ ಎಂದು ಹೇಳಿದುದಕ್ಕೆ ವಿರೋಧಿಸುತ್ತದೆ. ಆದುದರಿಂದ ಇಲ್ಲಿ ಶ್ರೇಷ್ಠವಾದ ಅಂಗವೆಂದರೆ ಮುಖ್ಯ ವಿಷಯ ಅಥವಾ ಅಂಶವೆಂಬರ್ಥವೆಂದು ಭಾವಿಸತಕ್ಕದ್ದು. ಈ ಅಂಗವು ಫಲತ್ಯಾಗರೂಪವಾದುದರಿಂದಲೇ, ಮೋಕ್ಷವೇ ಪ್ರಯೋಜನವಾಗಿವುಳ್ಳ ಆತ್ಮನಿಕ್ಷೇಪದಲ್ಲೇ ಸೇರಿದುದೇ ವಿನಾ ಬೇರೆ ಅಂಗವಲ್ಲವು. ಮುಂದೆ ಈ ಫಲತ್ಯಾಗವು ಈ ಆತ್ಮನಿಕ್ಷೇಪಕ್ಕೆ ಮಾತ್ರವೇ ವಿಲಕ್ಷಣವಾದುದಲ್ಲವೆಂದೂ, ಸರ್ವವಿಧ ಕರ್ಮಾನುಷ್ಠಾನಗಳಲ್ಲೂ ಇದನ್ನು ಮುಮುಕ್ಷುವು ಅಂಗೀಕರಿಸತಕ್ಕದ್ದೆಂದೂ, ಆದುದರಿಂದಲೇ ಮೋಕ್ಷಾರ್ಥಿಯು ಆತನ ಸರ್ವವಿಧ ನಿತ್ಯ ನೈಮಿತ್ತಿಕಾನುಷ್ಠಾನ, ಯಜ್ಞ ಯಾಗದಾನಾದಿ ಕರ್ಮಗಳಲ್ಲೂ ಸಾತ್ವಿಕ ತ್ಯಾಗವನ್ನು ಹೇಳುವದು ಅವಶ್ಯಕವೆಂದು ತಿಳಿಸಲ್ಪಟ್ಟಿತು. ಆ ಕಾರಣದಿಂದ ಪ್ರಪತ್ಯನುಷ್ಠಾನಕಾಲದಲ್ಲೂ, ಫಲಾಭಿಸಂಧಿರಹಿತವಾಗಿಯೇ ಅದನ್ನನುಷ್ಠಿಸತಕ್ಕದ್ದೆಂಬ ಭಾವವು.

ಫಲಸಙ್ಗಕರ್ತೃತ್ವಾದಿತ್ಯಾಗವುಮ್ - ಫಲವೇನು, ಸಂಗವೆಂದರೆ ಕರ್ಮದಲ್ಲಿ ಮಮತೆಯೇನು, ಕರ್ತೃತ್ವವೇನು ಇವೇ ಮೊದಲಾದವುಗಳ ತ್ಯಾಗವು. **ಕರ್ಮಯೋಗವುಮ್ ಮುದಲಾಕ ನಿವೃತ್ತಿಧರ್ಮಙ್ಗಳೆಲ್ಲಾತ್ತಿಲುವುಮ್** - ಕರ್

ನಿವೃತ್ತಿಧರ್ಮಙ್ಗಳೆಲ್ಲಾತ್ತಿಲುಮ್ ವರುಗೈಯಾಲೆ, ಇವ್ವನುಸನ್ಧಾನಮ್ ಮುಮುಕ್ಷುವುಕ್ಕು ಸಾಙ್ಗಸಮರ್ಪಣ ದಶೈಯಿಲೇ ಕರ್ತವ್ಯಂ.

ಯೋಗವೇ ಮೊದಲಾದ ಸಮಸ್ತ ನಿವೃತ್ತಿರೂಪವಾದ ಕರ್ಮಗಳೆಲ್ಲಾದರಲ್ಲೂ, **ವರುಗೈಯಾಲೆ** - ಬರವದರಿಂದ, **ಇವ್ವನುಸನ್ಧಾನಂ** - ಅಂಗವಾಗಿ ಹೇಳಲ್ಪಟ್ಟ ಫಲ ಮೊದಲಾದವುಗಳ ತ್ಯಾಗರೂಪದನುಸಂಧಾನವು, **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ, **ಸಾಙ್ಗಸಮರ್ಪಣದಶೈಯಿಲೆ** - ಅಂಗಸಹಿತವಾದ ಶರಣಾಗತಿಯನ್ನನುಷ್ಠಿಸುವ ಸಮಯದಲ್ಲಿ, **ಕರ್ತವ್ಯಂ** - ಮಾಡತಕ್ಕದ್ದು, ಇಲ್ಲಿ ಹೇಳಿರುವ ಅಂಗವು ಈ ಮೋಕ್ಷಾರ್ಥಿಯನ್ನು ಅನುಷ್ಠಿಸುವ ಪ್ರಪತ್ತಿಗೂ ಮತ್ತು ಇತರ ನಿತ್ಯ ನೈಮಿತ್ತಿಕರೂಪ ನಿವೃತ್ತಿ ಧರ್ಮಗಳೆಲ್ಲಕ್ಕೂ ಸಾಧಾರಣವಾದುದು. ಈ ಮೋಕ್ಷಾರ್ಥಿಯ ಪ್ರಪತ್ತಿಗೆ ಮಾತ್ರವೇ ಅಲ್ಲವು. **"ಅತ್ರರಕ್ಷಾಭರನ್ಯಾಸಸ್ಸಮಸ್ಸರ್ವಫಲಾರ್ಥಿನಾಂ"** ಎಂದು ಹೇಳಿರುವ ಹಾಗೆ, ಮೋಕ್ಷಾಕಾಂಕ್ಷೆ ಇಲ್ಲದೆ, ಪ್ರಪತ್ತಿಯು ಇತರ ಫಲಾಪೇಕ್ಷೆಗಳಿಂದ ಅನುಷ್ಠಿಸಲ್ಪಡಬಹುದು. ಅಂತಹ ಪ್ರಪತ್ತಿಗೆ ಫಲಸಙ್ಗಕರ್ತೃತ್ವಾದಿ ತ್ಯಾಗವು ಆವಶ್ಯಕವಿಲ್ಲವು, ಆದರೆ ಮೋಕ್ಷಾರ್ಥಿಯ ಪ್ರಪತ್ತಿಗೆ ಆವಶ್ಯಕವು. ಈ ಅಭಿಪ್ರಾಯವನ್ನು ಸಂಹಿತೆಯು ತಿಳಿಸಿತೇ ವಿನಾ ಪ್ರಪತ್ತಿಗೆ ಮಾತ್ರವೇ ಇದು ವಿಲಕ್ಷಣವಾದುದೆಂದೇನೂ ಹೇಳಲಿಲ್ಲವು. ಈ ತ್ಯಾಗಕ್ಕೆ ಸಾತ್ತ್ವಿಕ ತ್ಯಾಗವೆನ್ನುತ್ತಾರೆ. ಮುಮುಕ್ಷುವಾದವನು ಆಚರಿಸಬೇಕಾದ ಸಂಧ್ಯಾವಂದನಾದಿ ಸಮಸ್ತ ನಿತ್ಯ ನೈಮಿತ್ತಿಕ ಕರ್ಮಗಳಲ್ಲೂ ಈ ಸಾತ್ವಿಕತ್ಯಾಗವನ್ನು ಹೇಳತಕ್ಕದ್ದು. ಇದನ್ನೇ ಇಲ್ಲಿ ಫಲಸಙ್ಗಕರ್ತೃತ್ವಾದಿ ತ್ಯಾಗವೆಂದು ಹೇಳಿರುತ್ತಾರೆ. **ಫಲತ್ಯಾಗ**ವೆಂದರೆ, ಫಲದಲ್ಲಿ ಆಶೆಯಿಲ್ಲದಿರುವಿಕೆ; **ಸಙ್ಗತ್ಯಾಗ**ವೆಂದರೆ, ಈ ಕರ್ಮವು ನನಗೆ ಸಂಭಂಧಿಸಿದುದಲ್ಲವೆಂದು ಭಾವಿಸುವದು, ಆ ಕರ್ಮವು ತನಗೆ ಶೇಷವಾದುದಲ್ಲವು ಸರ್ವ ಕರ್ಮಾರಾಧ್ಯನಾದ ಸರ್ವೇಶ್ವರನಿಗೆ ಶೇಷಭೂತವಾದುದೆಂಬಭಿಪ್ರಾಯವು; **ಕರ್ತೃತ್ವತ್ಯಾಗ**ವೆಂದರೆ, ಈ ಕರ್ಮಕ್ಕೆ ತಾನು ಕರ್ತಾವಲ್ಲವು, ಸರ್ವೇಶ್ವರನೇ ಕರ್ತಾವಾಗಿ ಪ್ರಾರಂಭಿಸಿ, ಅವನೇ ಪೂರೈಸಿರುತ್ತಾನೆಂಬ ಭಾವವು; ಇಲ್ಲಿ ಆದಿ ಶಬ್ದದಿಂದ ಕರ್ಮದಲ್ಲಿ ಫಲೋಪಾಯತ್ವವುಂಟೆಂದು ಭಾವಿಸದಿರುವಿಕೆಯು; ಇಂತಹ ತ್ಯಾಗಬುದ್ಧಿಯಿಂದ ಪ್ರಪನ್ನನು ಸಮಸ್ತ ನಿವೃತ್ತಿ ಧರ್ಮಗಳನ್ನು ಆಚರಿಸಬೇಕಾದ ಪ್ರಯುಕ್ತ, ಸಾತ್ವಿಕ ತ್ಯಾಗವನ್ನು ಹೇಳತಕ್ಕದ್ದು ಅತ್ಯಾವಶ್ಯಕವೆಂದು ಭಾವಿಸಿ ನಮ್ಮಲ್ಲೇ ಒಂದು ಪಂಗಡದವರು ಹೇಳುತ್ತಾರೆ. ಇನ್ನೊಂದು ಪಂಗಡದವರು ಸಾತ್ವಿಕತ್ಯಾಗವನ್ನು ಹೇಳುವದಿಲ್ಲವು. ಇದಕ್ಕೆ ಕಾರಣವೇನೆಂದರೆ:—ಅವರುಗಳು ಅನುಷ್ಠಿಸುವ

ಅಙ್ಗಾನಾಂ ನಿಬಂಧನಪ್ರಯೋಜನಾನಿ

ಇಙ್ಗ ಪರಿಕರಂಗಳಾನವತ್ತಿಲ್ ಆನುಕೂಲ್ಯಸಂಕಲ್ಪತ್ತುಕ್ಕುಮ್

ಕರ್ಮವೆಲ್ಲಾ ಕೈಂಕರ್ಯರೂಪವು. ಅಂತಹ ಕೈಂಕರ್ಯವೆಲ್ಲಾ ಸರ್ವೇಶ್ವರನದೇ ಆಗಿರುವಾಗ, ಅದಕ್ಕೆ ಸಾತ್ತ್ವಿಕತ್ಯಾಗ ಹೇಳುವದೇನೋ ಅನಾವಶ್ಯಕವಾದುದೇ, ಆದರೆ ಶಾಸ್ತ್ರಗಳಲ್ಲೇ ತ್ಯಾಗವು, "ಶ್ರೀವಿಷ್ಣವೇ ಸ್ವಾಹಾ, ಶ್ರೀವಿಷ್ಣವೇ ಪರಮಾತ್ಮನೇ ಇದಂ ನಮಮ" ಎಂದು ಹೇಳಿರುತ್ತವೆ. ಸಾತ್ತ್ವಿಕತ್ಯಾಗ ಕ್ರಮ ಹೇಗೆಂದರೆ, "ಭಗವಾನೇವ ಸ್ವನಿಯಾಮ್ಯ ಸ್ವರೂಪಸ್ಥಿತಿ ಪ್ರವೃತ್ತಿ ಸ್ವಶೇಷತೈಕರಸೇನ ಮಯಾಸ್ವಕೀಯೈಶ್ಚೋಪಕರಣೈಃ ಸ್ವಾರಾಧನೈಕ ಪ್ರಯೋಜನಾಯಪರಮ ಪುರುಷಸ್ಸರ್ವಶೇಷೀ ಸ್ವಶೇಷಭೂತಮಿದಂ ಕರ್ಮಸ್ವಸ್ಮೈ ಸ್ವಪ್ರೀತಯೇ ಸ್ವಯಮೇವ ಕಾರಿತವಾನ್" ಎಂದು ಹೇಳಿ, "ಅನೇನ ಕರ್ಮಣಾ ಭಗವಾನ್ ಪ್ರಿಯತಾಂ ವಾಸುದೇವಃ" ಎಂದು ಕರ್ಮ ಪರಿಸಮಾಪ್ತಿಯನ್ನು ಮಾಡುವದು. ಕರ್ಮಾರಂಭದಲ್ಲೂ ಹೀಗೆಯೇ ಹೇಳಿ "ಸ್ವಸ್ಮೈ ಸ್ವಪ್ರೀತಯೇ ಸ್ವಯಮೇವ ಕಾರಯತಿ" ಎಂದು ಹೇಳತಕ್ಕದ್ದು. ಈ ಅಭಿಪ್ರಾಯಗಳನ್ನು ಶ್ರೀಮದಾಚಾರ್ಯರವರು ನ್ಯಾಸದಶಕವೇ ಮೊದಲಾಗಿ ಅನೇಕ ಕಡೆಗಳಲ್ಲಿ ಉಪಪಾದಿಸಿರುತ್ತಾರೆ. ಹಾಗೆಯೇ ಭಗವದ್ಗೀತೆಯಲ್ಲೂ ೧. "ತದರ್ಥಂಕರ್ಮ ಕೌನ್ತೇಯ ಮುಕ್ತಸಂಗಸ್ಸಮಾಚರ" ೨. "ಯೋಗಸ್ಥಃ ಕುರು ಕರ್ಮಾಣಿಸಙ್ಗಂತ್ಯಕ್ತ್ವಾಧನಂಜಯ" ೩. ತಸ್ಮಾದಸಕ್ತಸ್ಸತತಂ ಕಾರ್ಯಂ ಕರ್ಮ ಸಮಾಚರ" ಎಂಬ ಸ್ಥಳಗಳಲ್ಲಿ ಸಂಗತ್ಯಾಗವೂ, ೪. "ಅಹಂಕಾರವಿಮೂಢಾತ್ಮಾ ಕರ್ತಾಹ ಮಿತಿಮನ್ಯತೆ" ಎಂಬಲ್ಲಿ ಕರ್ತೃತ್ವ ತ್ಯಾಗವೂ, ೫. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ" ಎಂಬಲ್ಲಿ ಫಲತ್ಯಾಗವೂ ಹೇಳಿರುತ್ತವೆ. ಇದುವರಿವಿಗೂ ಆಚಾರ್ಯರವರು ಈ ಅಧಿಕಾರ ಸಙ್ಗ್ರಹ ಶ್ಲೋಕದಲ್ಲಿರುವ, ಇಯಾನಿತ್ಥಂಭೂತಃ ಎಂಬಲ್ಲಿ ಇಯಾನ್ ಎಂಬ ಶಬ್ದಾರ್ಥವನ್ನು ವ್ಯಾಖ್ಯಾನಮಾಡಿ, ಪರಿಕರಗಳು ಇವು ಇಷ್ಟೇ ಎಂದು ಸ್ಥಾಪಿಸಿದರು. ಮುಂದೆ ಇತ್ಥಂಭೂತಃ ಎಂಬುವದರ ವ್ಯಾಖ್ಯಾನವನ್ನು ವಿವರಿಸುತ್ತಾರೆ. ಆ ಪರಿಕರಗಳಿಗೆ ಕಾರಣ ಪ್ರಯೋಜನಗಳನ್ನು ತಿಳಿಸುತ್ತಾರೆ.

ಈ ಐದು ಅಂಗಗಳ ಆವಶ್ಯಕತೆ ಮತ್ತು ಪ್ರಯೋಜನಗಳು

ಪ್ರಥಮಥಃ ಆನುಕೂಲ್ಯಸಙ್ಕಲ್ಪದ ಪ್ರಾತಿಕೂಲ್ಯವರ್ಜನದ ಆವಶ್ಯಕತೆ

(೧) ಗೀ. ೩.೯. (೨) ಗೀ. ೨.೪೮. (೩) ಗೀ. ೩. (೪) ಗೀ. ೩.೨೭. (೫) ಗೀ. ೨.೪೭.

ಪ್ರಾತಿಕೂಲ್ಯವರ್ಜನತ್ತುಕ್ಕುಮ್ ನಿಬಂಧನಂ ಸರ್ವಶೇಷಿಯಾನ ಶ್ರಿಯಃ ಪತಿಯೈ ಪತ್ತ ಪ್ರವೃತ್ತಿ ನಿವೃತ್ತಿಗಳಾಲೇ ಅಭಿಮತಾನುವರ್ತನಮ್ ಪಣ್ಣವೇಣ್ಡುಮ್ ಪಡಿ ಇವನುಕ್ಕುಣ್ಡಾನ ಪಾರಾರ್ಥ್ಯ ಜ್ಞಾನಮ್.

ಏನೆಂದರೆ, ಒಂದು ಪುರುಷಾರ್ಥಕ್ಕಾಗಿ, ಲೋಕವ್ಯವಹಾರದಲ್ಲೂ ಒಬ್ಬನನ್ನು ಆಶ್ರಯಿಸುವ ಸಂದರ್ಭದಲ್ಲಿ, ತನ್ನ ಇಷ್ಟಾರ್ಥಸಿದ್ಧಿಗಾಗಿ ಆಶ್ರಿತನ ಅಭಿಮತಾನುಸಾರ ನಡಿಯುತಕ್ಕದ್ದೇ ಧರ್ಮವು. ಹಾಗೆ ನಡಿಯುವದಕ್ಕೆ, ತಾನು ಸರ್ವೇಶ್ವರನಿಗೆ ಶೇಷನು ಎಂಬ ಜ್ಞಾನವೇ ಕಾರಣವು. ಹಾಗೆ ನಡೆದರೇನೇ ಶೇಷಿಯು ಪ್ರೀತನಾಗಿ ಫಲಪ್ರದಾನ ಮಾಡುವನು. ಇಲ್ಲವಾದರೆ ಇಲ್ಲವು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಇಜ್ಗ - ಮೇಲೆ ನಾವು ಪರಿಕರಗಳು ಇವೇ ಎಂದು ವ್ಯವಸ್ಥೆ ಮಾಡಿದ ಸಂದರ್ಭದಲ್ಲಿ, **ಪರಿಕರಂಗಳಾನವತ್ತಿಲ್** - ಪರಿಕರಗಳೆಂದು ಹೇಳಲ್ಪಟ್ಟವುಗಳಲ್ಲಿ, ಆನುಕೂಲ್ಯ ಸಙ್ಕಲ್ಪಕ್ಕೂ ಪ್ರಾತಿಕೂಲ್ಯ ವರ್ಜನೆಗೂ ಸಹ, **ನಿಬಂಧನಂ** - ಕಾರಣವು, ಯಾವುದೆಂದರೆ ಹೇಳುತ್ತಾರೆ:—ಸರ್ವಶೇಷಿಯಾದ, **ಶ್ರಿಯಃಪತಿಯೈ ಪತ್ತ** - ಶ್ರಿಯಃಪತಿಯನ್ನು ಕುರಿತು, ಪ್ರವೃತ್ತಿ ನಿವೃತ್ತಿ ಧರ್ಮಗಳಿಂದ, **ಅಭಿಮತಾನುವರ್ತನಂ** - ಆತನ ಇಷ್ಟಾನುಸಾರವಾಗಿ ನಡಿಯೋಣವನ್ನು, **ಪಣ್ಣವೇಣ್ಡುಮ್ ಪಡಿ** - ಮಾಡಬೇಕು ಎಂಬುದಾಗಿ, **ಇವನಕುಣ್ಡಾನ**-ಈ ಮೋಕ್ಷಾರ್ಥಿಗೆ ಉಂಟಾಗುವ, **ಪಾರಾರ್ಥ್ಯಜ್ಞಾನಂ** - ತಾನು ಶೇಷಿಯ ಪ್ರಯೋಜನಕ್ಕಾಗಿಯೇ ಶೇಷಭೂತನಾದನೆಂಬ ಜ್ಞಾನವು. ಇವುಗಳಿಗೆ ಕಾರಣವ್ಯಾವುದೆಂದರೆ, **ಪಾರಾರ್ಥ್ಯಜ್ಞಾನಂ** - ಎಂದರೆ ಶೇಷತ್ವ ಜ್ಞಾನವು. ಪರಪ್ರಯೋಜನಕ್ಕಾಗಿಯೇ ತಾನಿರುವದು ಎಂಬ ಜ್ಞಾನವು ದಾಸನಾಗಿರುವವನು ತನ್ನ ಸ್ವಾಮಿಯ ಇಷ್ಟಪ್ರಕಾರ ನಡದರಲ್ಲವೇ ತನ್ನಿಷ್ಟವು ಕೈಗೂಡೀತು. ವಿರೋಧವಾಗಿ ನಡೆಯಕೂಡದಷ್ಟೇ. ಆದುದರಿಂದಲೇ ಆನುಕೂಲ್ಯ ಸಙ್ಕಲ್ಪವೂ ಪ್ರಾತಿಕೂಲ್ಯವರ್ಜನವೂ ಆವಶ್ಯಕವು. ಸರ್ವೇಶ್ವರನ ವಿಧಿನಿಷೇಧ ವಾಕ್ಯಗಳಿಗೆ ಗೌರವಕೊಟ್ಟು ಆತನ ಇಷ್ಟದಂತೆ ನಡಿಸಿದರೆ, ಆಗ ಸರ್ವೇಶ್ವರನೂ, ಇವನು ಮಹಾಪ್ರಾಜ್ಞನೆಂದು ತಿಳಿದು, "**ಆಜ್ಞಾಪಯ ಯಥೇಷ್ಟಂಮ್ಮೈ**" ಎಂದು ಶ್ರೀರಾಮನು ವಿಶ್ವಾಮಿತ್ರನ ಇಷ್ಟಕ್ಕೆ ಕಟ್ಟುಬಿದ್ದು ನಡಿಸಿಕೊಟ್ಟಹಾಗೆ, ನಮ್ಮ ಇಷ್ಟವನ್ನು ನಡಿಸುವನು. ಹಾಗಿಲ್ಲದೆ ವಿಪರೀತಾನುವರ್ತನೆಯಾದರೆ ಕೋರಿದ ಇಷ್ಟವು ಈಡೇರದು. ಈ ಚೇತನನಿಗೆ ಹಾಗೆ ನಡೆಯುವದೇನೋ ಪ್ರಯೋಜನವು, ಆ ಪ್ರಯೋಜನವೇನೆಂಬುವದನ್ನು ಸಪ್ರಮಾಣವಾಗಿ ಮುಂದಿನ ವಾಕ್ಯ

ಇತ್ತಾಲ್ “ಆನುಕೂಲ್ಯೇತರಾಭ್ಯಾನ್ತು ವಿನಿವೃತ್ತಿರಪಾಯತಃ” ಎಙ್ಗಿರ ಪಡಿಯೇ ಅಪಾಯಪರಿಹಾರಮ್ ಸಿದ್ಧಮ್.

ದಿಂದ ತಿಳಿಸುತ್ತಾರೆ. ಅವರೆ ಇಲ್ಲಿ ಇನ್ನೊಂದು ವಿಷಯವನ್ನು ಚರ್ಚಿಸಬಹುದು. ಹೀಗೆ ಈಶ್ವರಾಭಿಮತಾನುರೂಪವರ್ತನದಿಂದ ಈಶ್ವರನಿಗೇನಾದರೂ ಪ್ರಯೋಜನ ಉಂಟೋ ಎಂದರೆ, ಆತನು ಪರಿಪೂರ್ಣಕಾಮನಾದುದರಿಂದ ಆತನಿಗೇನೂ ಪ್ರಯೋಜನವಿಲ್ಲವು. ಆತನು ಸುಪ್ರೀತನಾಗುವದೇ ಪ್ರಯೋಜನವು; ಶೇಷಿಗೆ ಶೇಷಭೂತನು ತನ್ನ ಶಾಸ್ತ್ರಾನುಸಾರ ವರ್ತಿಸುವದು, “**ಯಃ ಪ್ರೀಣಯೇತ್ ಸುಚರಿತ್ರೈಃ ಪಿತರಂ ಸಪುತ್ರಃ**” ಎಂದು ಹೇಳಿರುವ ಹಾಗೆ ಲೋಕದಲ್ಲೂ ತಂದೆಗೆ ಶೇಷಭೂತನಾದ ಮಗನ ಸನ್ಮಾರ್ಗ ಪ್ರವರ್ತನೆಯು ಶೇಷಿಯಾದ ತಂದೆಗೆ ಹೇಗೆ ಆಹ್ಲಾದಕರವೋ, ಹಾಗೆಯೇ ಶೇಷಿಯಾದ ಲೋಕಪಿತಾವಿಗೆ ಪುತ್ರರಾದ ನಮ್ಮಗಳ ಅಭಿಮತಾನುವರ್ತನೆಯು ಪರಮಾಹ್ಲಾದಕರವಾದುದೆಂಬುದಾಗಿ ಭಾವವು. ಆದುದರಿಂದ “**ಭಗವತ್ಪ್ರೀತ್ಯರ್ಥಂ**” ಎಂದು ಸಙ್ಕಲ್ಪವು.

ಇಲ್ಲಿ ಪ್ರವೃತ್ತಿ ನಿವೃತ್ತಿಗಳಾಲೇ **ಅಭಿಮತಾನುವರ್ತನಂ** ಎಂದು ಹೇಳಿರುವದು ಶಾಸ್ತ್ರವಿಹಿತವಾದವುಗಳಲ್ಲಿ ಪ್ರವೃತ್ತಿಯೂ, ಶಾಸ್ತ್ರನಿಷಿದ್ಧವಾದವುಗಳಲ್ಲಿ ನಿವೃತ್ತಿಯೂ, ಹೀಗೆ ಆತನ ಇಷ್ಟಾನುಸಾರ ನಡೆಯುವದು ಎಂಬ ತಾತ್ಪರ್ಯವು. ಆನುಕೂಲ್ಯ ಸಙ್ಕಲ್ಪರೀತ್ಯಾ ಪ್ರವೃತ್ತಿಯೂ, ಪ್ರಾತಿಕೂಲ್ಯ ವರ್ಜನ ಸಙ್ಕಲ್ಪರೀತ್ಯಾ ನಿಷಿದ್ಧ ನಿವೃತ್ತಿಯೂ ಎಂದಿಟ್ಟುಕೊಳ್ಳತಕ್ಕದ್ದು. ಈ ಸಂದರ್ಭದಲ್ಲಿ “**ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ**” “ಯಾವುದು ಮಾಡತಕ್ಕದ್ದು ಯಾವುದು ಮಾಡತಕ್ಕದಲ್ಲವು ಎಂಬ ವಿಷಯದಲ್ಲಿ ಭಗವಂತನ ಆಜ್ಞಾರೂಪವಾದ ಶಾಸ್ತ್ರವೇ ಪ್ರಮಾಣವು” ಎಂಬ ಗೀತಾವಾಕ್ಯವು ಈ ಸಂದರ್ಭದಲ್ಲಿ ಅನುಸಂಧೇಯವು

ಇತ್ತಾಲ್ ಎಂದರೆ ಈ ಶೇಷತ್ವಜ್ಞಾನಮೂಲಕವಾಗಿ ಪ್ರವೃತ್ತಿ ನಿವೃತ್ತಿಗಳಲ್ಲಿ ಈಶ್ವರಾಭಿಮತಾನುರೂಪವಾಗಿರುವದರಿಂದ, **ಆನುಕೂಲ್ಯೇತರಾಭ್ಯಾಂತು**-ಆನುಕೂಲ್ಯ ಸಂಕಲ್ಪ ಮತ್ತು **ಇತರಾಭ್ಯಾಂ** ಪ್ರಾತಿಕೂಲ್ಯವರ್ಜನ ಇವೆರಡುಗಳಿಂದಲೂ, **ಅಪಾಯತಃ** - ಆಜ್ಞಾತಿಲಂಘನ ದ್ವಾರಾ ಉಂಟಾಗುವ ಭಗವನ್ನಿಗ್ರಹದಿಂದ **ವಿನಿವರ್ತಿಃ** - ಪರಿಹಾರವುಂಟಾಗುತ್ತದೆ, ಎಙ್ಗಿರ **ಪಡಿಯೇ** - ಎಂದು ಹೇಳಿರುವ ಹಾಗೆ, **ಅಪಾಯಪರಿಹಾರಮ್** - ಕೃತ್ಯಾಕರಣ, ಅಕೃತ್ಯಕರಣರೂಪ ಅಪಾಯದ ಪರಿಹಾರವು, **ಸಿದ್ಧಂ** - ಸಿದ್ಧಿಸುತ್ತದೆ. ಹೀಗೆ ಸರ್ವೇಶ್ವರನ ಅಭಿಮತಾನುರೂಪವಾಗಿ ವರ್ತಿಸುವದರಿಂದ ಅಪಾಯ ಪರಿಹಾರ

ಕಾರ್ಪಣ್ಯಂ.

ಕಾರ್ಪಣ್ಯಮಾವದು ? ಮುನ್ಬುಕೊನ್ನ ಆಕಿಂಚನ್ಯಾದಿಗಳುಡೈಯ ಅನುಸನ್ಧಾನಮಾದಲ್, ಅದಡಿಯಾಗ ವನ್ದ ಗರ್ವಹಾನಿಯಾದಲ್,

---

ವಾಗುತ್ತದೆಂದು ಹೇಳಿ ಅದಕ್ಕಾಗಿ ಈ ಲಕ್ಷ್ಮೀತಂತ್ರ ವಾಕ್ಯವನ್ನು (೧೭. ೭೬) ಉದಾಹರಿಸಿರುತ್ತಾರೆ. ಈ ಮೇಲಿನ ಎರಡು ವಾಕ್ಯಗಳಿಂದುಪದೇಶಿಸಲ್ಪಟ್ಟ ಅಭಿಪ್ರಾಯಗಳನ್ನೆಲ್ಲಾ ಮುಂದೆ ಕಾಣಿಸಿರುವ ಅಹಿರ್ಬುಧ್ನ್ಯ, ವಿಷ್ಣುಧರ್ಮವಾಕ್ಯಗಳಿಂದ ಗ್ರಹಿಸಬಹುದು:—

> **"ಅಂತರ್ಸ್ಥಿತೋಽಹಂ ಸರ್ವೇಷಾಂ ಭಾವಾನಾಮಿತಿ ನಿಶ್ಚಯಾತ್ ।**
> **ಸರ್ವಭೂತೇಷು ಮಯಿಚಹ್ಯಾನುಕೂಲ್ಯಂ ಸಮಾಚರೇತ್ ॥**
> **ತಥೈವ ಪ್ರಾತಿಕೂಲ್ಯಂಚ ಭೂತೇಷು ಪರಿವರ್ಜಯೇತ್ ।**
> **ಚರಾಚರಾಣಿ ಸರ್ವಾಣಿ ಭೂತಾನಿ ಭಗವದ್ವಪುಃ ॥**
> **ಅತಸ್ತದಾನುಕೂಲ್ಯಂ ಮೇ ಕಾರ್ಯಮಿತ್ಯೇವ ನಿಶ್ಚಯಃ ।"**

ಮತ್ತು

> **"ಶ್ರುತಿಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ ।**
> **ಆಜ್ಞಾಚ್ಛೇದೀ ಮಮದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ ॥"**

ಇದರರ್ಥವೇನೆಂದರೆ :—ಸಮಸ್ತ ವಸ್ತುಗಳಲ್ಲಿ ನಾನು ಅಂತರಾತ್ಮನಾಗಿರುತ್ತೇನೆಂಬ ನಿಶ್ಚಯದಿಂದ, ಸರ್ವ ಭೂತಗಳಲ್ಲೂ ನನ್ನಲ್ಲೂ ಅನುಕೂಲನಾಗಿ ವರ್ತಿಸತಕ್ಕದ್ದು. ಹಾಗೆಯೇ ನನ್ನಲ್ಲೂ ಸರ್ವಭೂತಗಳಲ್ಲೂ ಪ್ರತಿಕೂಲವಾಗಿರಕೂಡದು. ಸಮಸ್ತ ಚರಾಚರಗಳೂ ಭಗವಂತನ ಶರೀರವು; ಆದುದರಿಂದ ಎಲ್ಲಾದಕ್ಕೂ ಅನುಕೂಲನಾಗಿರತಕ್ಕದ್ದೇ ಕರ್ತವ್ಯವೆಂದು ನಿಶ್ಚಯಿಸತಕ್ಕದ್ದು; ಮತ್ತು ಶ್ರುತಿ ಸ್ಮೃತಿಗಳೆಲ್ಲಾ ನನ್ನ ಆಜ್ಞೆಯು, ಅವನ್ನೆಲ್ಲಾ ಉಲ್ಲಂಘಿಸಿ ನಡೆದರೆ ಆತನು ನನ್ನ ಆಜ್ಞೆಯನ್ನತಿಕ್ರಮಿಸಿದವನಾಗುವನು, ನನಗೆ ದ್ರೋಹಿಯೂ ಆಗುವನು, ಆತನು ನನಗೆ ಭಕ್ತನಾಗಿ ನನ್ನನ್ನಾಶ್ರಯಿಸಿದವನೂ, ವಿಷ್ಣುವಾದ ನನ್ನ ಸಂಬಂಧಿಯಲ್ಲವು. ಈ ಆನುಕೂಲ್ಯಸಂಕಲ್ಪ ಪ್ರಾತಿಕೂಲ್ಯವರ್ಜನಗಳು ಭರನ್ಯಾಸ ಕಾಲದಲ್ಲಿ ಇರುವದರ ಪ್ರಯೋಜನವು ಸಂಕಲ್ಪಿಸಿದುದನ್ನು ಅನುಷ್ಠಿಸುವದು. ಉತ್ತರಕಾಲದಲ್ಲಿರುವದರ ಪ್ರಯೋಜನವು ಅಪರಾಧ ನಿವೃತ್ತಿಯು. ಮುಂದೆ ಕಾರ್ಪಣ್ಯದ ಸ್ವರೂಪವನ್ನೂ ಅದರ ಪ್ರಯೋಜನವನ್ನೂ ತಿಳಿಸುತ್ತಾರೆ.

ಕಾರ್ಪಣ್ಯಮಾವದು ? — ಕಾರ್ಪಣ್ಯವೆಂದರೇನು ? **ಮುನ್ಬುಕೊನ್ನ** — ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ, ಪ್ರಪತ್ತಿಗೆ ವಿಶೇಷಾಧಿಕಾರವನ್ನುಪಪಾದಿ

ಕೃಪಾಜನಕ ಕೃಪಣವೃತ್ತಿಯಾದಲಾಯ್ ನಿನ್ರು ಶರಣ್ಯನುಡೈಯ ಕಾರುಣ್ಯೋತ್ತಂಭನಾರ್ಥಮುಮಾಯ್. "ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೇರಿತಾ" ಎನ್ಗಿರಪಡಿಯೇ ಪಿನ್ಬುಂ ಅನನ್ಯೋಪಾಯತ್ವತ್ತುಕ್ಕುಮ್ ಉಪಯುಕ್ತಮಾಯಿರುಕ್ಕುಮ್.

ಸುವ ಸಂದರ್ಭದಲ್ಲಿ, **ಆಕಿಂಚನ್ಯಾದಿಗಳುಡೈಯ** - ಆಕಿಂಚನ್ಯವೇ ಮೊದಲಾದವುಗಳ, ಇಲ್ಲಿ ಆದಿ ಶಬ್ದದಿಂದ ಅನನ್ಯಗತಿತ್ವವೇ ಮೊದಲಾದವು ಹೇಳಲ್ಪಟ್ಟಿವೆ, **ಅನುಸನ್ಧಾನಮಾದಲ್** - ಅನುಸಂಧಾನವಾಗಲಿ, ಅಥವಾ **ಅದಡಿಯಾಕ** - ಆ ಆಕಿಂಚನ್ಯಾದಿಗಳ ಮೂಲವಾಗಿ, **ಗರ್ವಹಾನಿಯಾದಲ್** - ಗರ್ವಹಾನಿಯೇ ಯಾಗಲಿ, **ಕೃಪಾಜನಕಕೃಪಣವೃತ್ತಿಯಾದಲಾಯ್** - ಸರ್ವೇಶ್ವರನ ಕೃಪೆಯನ್ನುಂಟುಮಾಡುವ ತನ್ನ ದೈನ್ಯವೃತ್ತಿಯಾಗಿಯಾಗಲಿ, **ನಿನ್ರು** - ಆಗಿದ್ದುಕೊಂಡು, **ಶರಣ್ಯನುಡೈಯ** - ಸರ್ವರಕ್ಷಕನಾಗಿ ದೀನಬಂಧುವಾದ ಸರ್ವೇಶ್ವರನ, **ಕಾರುಣ್ಯೋತ್ತಂಭನಾರ್ಥಮುಮಾಯ್** - ಸರ್ವೇಶ್ವರನ ಸಹಜಕಾರುಣ್ಯದ ವಿಕಾಸಾರ್ಥವಾಗಿಯೂ ಮತ್ತು, **ಪಿನ್ಬುಂ** - ಪ್ರಪತ್ತ್ಯನುಷ್ಠಿಸಿದ ಉತ್ತರ ಕಾಲದಲ್ಲಿಯೂ ಕೂಡ, "**ಕಾರ್ಪಣ್ಯೇನಾಪಿ**-ಕಾರ್ಪಣ್ಯದಿಂದಲೂ ಕೂಡ, **ಉಪಾಯಾನಾಂ** - ಇತರ ಉಪಾಯಗಳ, ವಿನಿವೃತ್ತಿಃ-ನಿವೃತ್ತಿಯು, **ಇಹ** - ಈ ಸಂದರ್ಭದಲ್ಲಿ, **ಈರಿತಾ** - ಹೇಳಲ್ಪಟ್ಟಿತು" ಎನ್ಗಿರಪಡಿಯೇ - ಎಂದು ಲಕ್ಷ್ಮೀತಂತ್ರದಲ್ಲಿ (೧೭ ೧೭) ಹೇಳಿರುವ ಹಾಗೆ, **ಅನನ್ಯೋಪಾಯತ್ವಕ್ಕು ಮುಪಯುಕ್ತಮಾಯಿರುಕ್ಕುಮ್** - ಬೇರೆ ಉಪಾಯದ ಸಂಬಂಧವಿಲ್ಲದಿರುವದಕ್ಕೆ ಉಪಯುಕ್ತವಾಗಿರುತ್ತದೆ. ಈ ವಾಕ್ಯದಿಂದ ಮೊದಲು ಕಾರ್ಪಣ್ಯ ಸ್ವರೂಪಕ್ಕೆ ಮೂರು ವಿಧ ಅಭಿಪ್ರಾಯಗಳನ್ನು ತಿಳಿಸಿ, ಅನಂತರ ಪ್ರಪತ್ತಿ ಕಾಲದಲ್ಲಿ ಅದರ ಪ್ರಯೋಜನವನ್ನೂ, ಪ್ರಪತ್ತ್ಯನಂತರ ಕಾಲದಲ್ಲಿ ಅದರ ಪ್ರಯೋಜನವನ್ನೂ ತಿಳಿಸುತ್ತಾರೆ. ಕಾರ್ಪಣ್ಯವೆಂದರೆ ೧. ಪ್ರಪತ್ತಿಯೋಗ್ಯಾಧಿಕಾರದಲ್ಲಿ ಅಧಿಕಾರ ವಿಶೇಷಣಗಳೆಂದು ಹೇಳಿದ ಆಕಿಂಚನ್ಯ ಅನನ್ಯಗತಿತ್ವಾದಿಗಳಾಗಬಹುದು "ಆತ್ಮನೋ ದುರ್ಗತಾಪತ್ತಿಂ ವಿಮೃಶ್ಯ ಚಗುಣಾನ್ಮಮ । ಮದೇಕೋಪಾಯಸಂವಿತ್ತಿಃ ಸರ್ವಂಪ್ರಪನ್ನೋ ವಿಮುಚ್ಯತೇ ಎಂದು ಹೇಳಿರುವ ಹಾಗೆ ಚೇತನನಿಗೆ ಈಗ ಪ್ರಾಪ್ತವಾಗಿರುವ ದುರ್ಗತಿಯನ್ನೂ ಮತ್ತು ನನ್ನಲ್ಲಿರುವ ಕಲ್ಯಾಣಗುಣಗಳಾದ ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿಗಳನ್ನೂ ಚೆನ್ನಾಗಿ ವಿಮರ್ಶೆಮಾಡಿ, ನಾನೇ ಮುಖ್ಯೋಪಾಯನೆಂಬ ಜ್ಞಾನಹೊಂದಿದವನಾಗಿ ಮತ್ತು ಶರಣಾಗತಿಯನ್ನನುಷ್ಠಿಸುವವನಾಗಿ ಸಂಸಾರ ಬಂಧದಿಂದ ಬಿಡ

ಲ್ಲಿದುವನು.'' ಎಂಬ ಆಕಿಂಚನ್ಯಾನುಸಂಧಾನವೇ ಕಾರ್ಪಣ್ಯವು. ಅಥವಾ ೨. ಅಂತಹ ಆಕಿಂಚನ್ಯಾನು ಸಂಧಾನದಿಂದುಂಟಾಗುವ ಅಭಿಮಾನಹಾನಿಯೇ ಕಾರ್ಪಣ್ಯವಾಗಬಹುದು. ಇದಕ್ಕೆ ಪ್ರಮಾಣವು :—''ತ್ಯಾಗೋ ಗರ್ವಸ್ಯ ಕಾರ್ಪಣ್ಯಂ ಶ್ರುತಶೀಲಾದಿಜನ್ಮನಃ । ಅಙ್ಗಸಾಮಗ್ರ್ಯಸಂಪತ್ತೇರಶಕ್ತೇಶ್ಚಾಪಿ ಕರ್ಮಣಾಂ । ಅಧಿಕಾರಸ್ಯ ಚಾಸಿದ್ಧೇಃ ದೇಶಕಾಲಗುಣಕ್ಷಯಾತ್ । ಉಪಾಯಾನ್ನೈವ ಸಿಧ್ಯನ್ತಿ ಹ್ಯಪಾಯಬಹುಳಾಸ್ತಥಾ । ಇತಿಯಾಗರ್ವಹಾನಿಸ್ತದ್ದೈನ್ಯಂ ಕಾರ್ಪಣ್ಯಮುಚ್ಯತೇ'' ತಾನು ವೇದಾಧ್ಯಯನಸಂಪನ್ನನು, ಸದಾಚಾರನು ಎಂಬಿವೇ ಮೊದಲಾದವುಗಳಿಂದುಂಟಾದ ಅಹಂಕಾರ ತ್ಯಾಗವೇ ಕಾರ್ಪಣ್ಯವು. ಅಥವಾ ಅಙ್ಗಸಾಮಗ್ರಿಗಳ ಸಂಪತ್ತಿ ಇಲ್ಲದಿರುವದರಿಂದಲೂ, ಕರ್ಮಗಳಿಗೆ ಅಶಕ್ತನಾಗಿರುವದರಿಂದಲೂ, ದೇಶಕಾಲಗುಣನ್ಯೂನತೆಗಳಿಂದ ಅಧಿಕಾರ ಸಿದ್ಧಿ ಇಲ್ಲದಿರುವದರಿಂದಲೂ ಉಪಾಯಗಳು ಸಿದ್ಧಿಸುವದೇ ಇಲ್ಲವು, ಅಪಾಯಗಳು ಹೆಚ್ಚು ಎಂಬ ಯಾವ ಗರ್ವಹಾನಿಯುಂಟೋ ಅಂತಹ ದೈನ್ಯವು ಕಾರ್ಪಣ್ಯವೆನಿಸುತ್ತದೆ. ಅಥವಾ (೩). ಸರ್ವೇಶ್ವರನ ಕೃಪೆಯನ್ನುಂಟುಮಾಡುವ ಮತ್ತು ತನ್ನ ದೈನ್ಯವನ್ನು ತೋರಿಸುವ ವೃತ್ತಿಯು ಕಾರ್ಪಣ್ಯವಾಗಬಹುದು. ಧ್ರುವನ ಹಾಗೆ, ಅನ್ನ ಆಹಾರಗಳನ್ನು ತೊರೆದು ತಪಸ್ಸುಮಾಡುವದು. ೧. ''ಬದ್ಧಾಂಜಲಿಪುಟಂ ದೀನಂ'' ೨. ''ನಿಪಪಾತ ವಿಭೀಷಣಃ ಪಾದಯೋಃ ಶರಣಾನ್ವೇಷೀ'' ಎಂದು ಹೇಳಿರುವ ಹಾಗೆ, ವಿಭೀಷಣನ ಹಾಗೆಕೈಜೋಡಿಸಿಕೊಂಡು ದೀನನಾಗಿ ನಿಂತಿರುವದು, ಶ್ರೀರಾಮನ ಕಾಲನ್ನು ಗಟ್ಟಿಯಾಗಿ ಹಿಡಿದುಕೊಳ್ಳುವದು. ೩. ಗೋವಿಂದೇತಿ ಯದಾಕ್ರಂದತ್ ಕೃಷ್ಣಾ ಮಾಂ ದೂರವಾಸಿನಂ । ಋಣಂಪ್ರವೃದ್ಧಮಿವ ಮೇಹೃದಯಾನ್ನಾಪಸರ್ಪತಿ ಎಂದು ಹೇಳಿರುವ ಹಾಗೆ, ದ್ರೌಪದಿಯು ದುಷ್ಟನಾದ ದುರ್ಯೋಧನನ ಸಭೆಯಲ್ಲಿ ದುರುಳ ದುಶ್ಶಾಸನನಿಂದುಂಟಾದ ಅವಮಾನಕ್ಕಾಗಿ ಗೋವಿಂದಾ ಎಂದು ಗಟ್ಟಿಯಾಗಿ ಕೂಗಿಕೊಂಡು ''ದ್ವಾರಕಾವಾಸಿಯಾದವನಂದನ'' ಎಂದು ಅಳೋಣವು ಇವೇ ಮೊದಲಾದ ದೈನ್ಯಸೂಚಕವ್ಯಾಪಾರಗಳು ಕಾರ್ಪಣ್ಯವಾಗಬಹುದು. ಹೀಗೆ ಕಾರ್ಪಣ್ಯಕ್ಕೆ (೧) ಆಕಿಂಚನ್ಯಾನನ್ಯಗತಿತ್ವ (೨) ಅಥವಾ ಗರ್ವಹಾನಿ (೩) ಅಥವಾ ದೈನ್ಯಸೂಚಕವ್ಯಾಪಾರವೆಂದು ಈ ಮೂರರಲ್ಲಿ ಯಾವುದಾದರೂ ಒಂದು ಅರ್ಥವನ್ನು ಹೇಳಬಹುದೆಂಬ ಭಾವವು. ಈ ಕಾರ್ಪಣ್ಯದಿಂದುಂಟಾಗುವ ಪ್ರಯೋಜನವೇನೆಂದರೆ :—

(೧) ಪ್ರಪತ್ತಿಕಾಲದಲ್ಲಿ ಇದು ಸರ್ವೇಶ್ವರನ ಕಾರುಣ್ಯೋತ್ಥಾಪನವನ್ನುಂಟು

(೧) ರಾಮಾ. ಯು. ೧೮. ೨೭. (೨) ರಾಮಾ. ಯು. ೧೯. ೨. (೩) ಭಾರ. ಉದ್ಯೋ

ಮಹಾವಿಶ್ವಾಸಸ್ಯ ಸ್ವರೂಪಪ್ರಯೋಜನ ಕಥನಂ

ಮಹಾವಿಶ್ವಾಸವು, (೧) "ರಕ್ಷಿಷ್ಯತೀತಿ ವಿಶ್ವಾಸಾದಭೀಷ್ಟೋ

ಮಾಡುತ್ತದೆ. ಏಕೆಂದರೆ ಪ್ರಪತ್ತಿಗೆ ವಿಘ್ನವಾದ ಅನ್ಯೋಪಾಯಾವಲಂಬನವನ್ನು ತಿರಸ್ಕರಿಸುತ್ತದೆ. ಆತನು ಕೃಪಾಸಾಗರನು, ಆದುದರಿಂದ ಕೃಪೆಯು ಯಾವಾಗಲೂ ಆತನಲ್ಲಿ ಉಂಟೇ ಉಂಟು. ಈ ಕಾರ್ಪಣ್ಯದಿಂದ ಆ ಕೃಪಾಪ್ರವಾಹದ ಏಕದೇಶವು ತನ್ನ ಕಡೆಗೆ ತಿರುಗುತ್ತದೆ. ಆ ಕಾಲದಲ್ಲಿ ಮಾತ್ರವೇ ಉತ್ಪನ್ನವಾಗುವದಿಲ್ಲವು. ಆ ಕಾರಣದಿಂದಲೇ "**ಉತ್ತಂಭನ**" ವೆಂಬ ಪ್ರಯೋಗವು ; **ಉತ್ತಂಭನ** ವೆಂದರೆ ಒಳಗಿರುವದು ಉಕ್ಕಿ ಹೊರಗೆ ಬರೋಣವು.

(೨) ಪ್ರಪತ್ಯನಂತರಕಾಲದಲ್ಲಿ ತಾನು ಕೃತಕೃತ್ಯನಾಗುವದರಿಂದ, ಆಗಲೂ ಅನ್ಯೋಪಾಯ ಸಂಬಂಧ ಉಂಟಾಗುವದಿಲ್ಲವು. ಪ್ರಪತ್ತ್ಯನುಷ್ಠಾನವಾಗಿರುವದರಿಂದ ಆಗ ಕಾರ್ಪಣ್ಯವೇನು ಅಜ್ಞತ್ವವಾಗಿಯಿಲ್ಲವು. ಈತನ ಉತ್ತರಕೃತ್ಯಾರೂಪಸಿದ್ಧಿಗೂ ಈ ಕಾರ್ಪಣ್ಯವು ಸಾಧಕವು ಎಂಬ ಭಾವವು.

ಲೌಕಿಕ ದೃಷ್ಟಾಂತದಲ್ಲೂ ಧನ ಮುಂತಾದ ಶ್ರೇಯಸ್ಕಾಮಿಯು, ದಾನಶೀಲನೆದುರಿಗೆ ತನ್ನ ಕಾರ್ಪಣ್ಯವನ್ನು ಹೀಗೆಯೇ ಪ್ರಕಟಿಸಿ ಫಲಾವಾಪ್ತಿಯನ್ನು ಪಡೆದಿರುವದನ್ನು ಕಂಡಿರುವೆವೆಯಷ್ಟೇ. ಹೀಗೆ ಗುಣಹೀನನು ತನ್ನಭೀಷ್ಟವನ್ನು ಹೊಂದಬಹುದು. ಗುಣಯುಕ್ತನಾಗಿದ್ದು ಅನುಗ್ರಹಕ್ಕೆ ಯೋಗ್ಯನಾಗಿದ್ದರೆ, ಗರ್ವಹಾನಿಯಿಂದ ತನ್ನ ಮನೋರಥವನ್ನು ಪಡೆಯಬಹುದು. "**ಪ್ರಸೀದಂತು ಭವಂತೋ ಮೇ ಹ್ರೀರೇಷಾ ಹಿ ಮಮಾತುಲಾ । ಯದೀದೃಶೈರಹಂ ವಿಪ್ರೈರುಪಸ್ಥೇಯೈರುಪಸ್ಥಿತಃ**" ಎಂದರೆ "ಮಹನೀಯರಾದ ಪೂಜ್ಯರಾದ ವಿಪ್ರರುಗಳಿಂದ ನಾನು ಹೀಗೆ ಅಭಿಮಾನಿಸಲ್ಪಟ್ಟವನೆಂಬುವದು ನಾವುದುಂಟೋ, ಅದು ನನಗೆ ಅಸದೃಶ ಲಜ್ಜಾವಹವಾದುದು. ಆದುದರಿಂದ ತಾವುಗಳು ದಾಸನಲ್ಲಿ ಅನುಗ್ರಹವುಳ್ಳವರಾಗಿರಬೇಕು" ಎಂದು ಹೇಳಿದ ಹಾಗೆ ಜ್ಞಾನಿಯು ಗರ್ವಹಾನಿಯಿಂದ ಕಾರ್ಪಣ್ಯಯುಂಟಾಗಬಹುದು.

ಮಹಾವಿಶ್ವಾಸದ ಸ್ವರೂಪ ಪ್ರಯೋಜನಗಳು

ಮಹಾವಿಶ್ವಾಸ ವೆಂಬುವದು, "**ರಕ್ಷಿಷ್ಯತೀತಿ** - ಸರ್ವೇಶ್ವರನು ರಕ್ಷಿಸಿಯೇ

(೧) ಲಕ್ಷ್ಮೀತಂತ್ರ. ೧೭. ೭೩

ಪಾಯುಕಲ್ಪನಂ'' ಎಜ್ಞರಪಡಿಯೇ ಅಣೆಯಿಡಾದವನುಷ್ಠಾನ ಸಿಧ್ಯರ್ಥ ಮುವನಾಯ್ ಪಿನ್ಬುನಿರ್ಭರತ್ತೈಕ್ಕು ಮುರುಪ್ಪಾಯಿರುಕ್ಕುಮ್.

ಬಿಡುವನೆಂಬ, **ವಿಶ್ವಾಸಾತ್** - ಪೂರ್ಣನಂಬಿಕೆಯಿಂದ, **ಅಭೀಷ್ಟೋಪಾಯ ಕಲ್ಪನಂ** - ತನಗೆ ಇಷ್ಟವಾದ ಫಲಕ್ಕೆ ಸರ್ವೇಶ್ವರನೇ ಉಪಾಯನೆಂದು ಕಲ್ಪಿಸೋಣವು ಅಥವ ಸ್ವೀಕರಿಸೋಣವು''. ಪ್ರಪತ್ತ್ಯನುಷ್ಠಾನಕಾಲದಲ್ಲಿ, ತನ್ನ ಮನೋರಥಸಿದ್ಧಿಗೆ ಶ್ರಿಯಃಪತಿಯೇ ಉಪಾಯವಾಗಿ ನಿಂತು ನಡಿಸಿಕೊಡುವನೆಂಬ ಪೂರ್ಣ ನಂಬಿಕೆಯು. ಇಂತಹ ನಂಬಿಕೆಯಿಲ್ಲದ್ದಿದರೆ **"ಸಂಶಯಾತ್ಮಾ ವಿನಶ್ಯತಿ"** ಎಂದು ಹೇಳಿರುವ ಹಾಗೆ, ಈತನ ಪ್ರಪದನಾನುಷ್ಠಾನವು ಸಿದ್ಧಿಸದು. ಅಂತಹ ಪರಿಪೂರ್ಣ ನಂಬಿಕೆಗೆ ಮಹಾ ವಿಶ್ವಾಸವೆಂದು ಹೆಸರು. ಮುಂದಿನ ಅರ್ಥವಾಕ್ಯದಿಂದ ಶರಣಾಗತ್ಯನುಷ್ಠಾನಕಾಲದಲ್ಲೂ, ತದನಂತರವೂ ಅಂತಹ ಮಹಾ ವಿಶ್ವಾಸದಿಂದಾಗುವ ಪ್ರಯೋಜನವನ್ನು ತಿಳಿಸುತ್ತಾರೆ:—

ಎಜ್ಞರಪಡಿಯೇ - ಎಂದು ಲಕ್ಷ್ಮೀತಂತ್ರದಲ್ಲಿ ಹೇಳಿರುವಹಾಗೆ, **ಅಣಿಯಿಡಾದ** - **ಅಣಿ** ಎಂದರೆ ಮುಂದೆ ಶತೃವಿನೊಂದಿಗೆ ಯುದ್ಧಮಾಡುತ್ತಿರುವ ಸೈನ್ಯಗೆ ಹಿಂದೆ ಬೆಂಬಲವಾಗಿ ಬರುತ್ತಿರುವ ಸೇನೆಯು, **ಯಿಡಾದ** - ಎಂದರೆ ಆವಶ್ಯಕತೆಯಿಲ್ಲದಿರುವ, ಆದುದರಿಂದ **ಅಣೆಯಿಡಾದ** ವೆಂದರೆ **ಬೇರೆ** ಸಹಾಯದಪೇಕ್ಷೆಯಿಲ್ಲದೆ ಎಂಬರ್ಥವು, ಕೆಲವರು ಇದಕ್ಕೆ ನಿಸ್ಸಂದೇಹವಾದ ಎಂಬರ್ಥವನ್ನೂ ಹೇಳಿರುತ್ತಾರೆ; **ಅನುಷ್ಠಾನ ಸಿಧ್ಯರ್ಥಮುವನಾಯ್** - ಪ್ರಪದನಾನುಷ್ಠಾನಸಿದ್ಧಿಗೋಸ್ಕರ ಇರುವಂಥಾದ್ದಾಗಿ, **ಪಿನ್ಬು** - ಆ ಪ್ರಪದನಾನುಷ್ಠಾನವಾದ ನಂತರ, **ನಿರ್ಭರತ್ತೈಕ್ಕು** - ತನ್ನ ಮೇಲೆ ಇನ್ಯಾವ ಭಾರವೂ ಇಲ್ಲವು, ತಾನು ಈಗ ಕೃತಕೃತ್ಯನೆಂಬ ಭಾವಕ್ಕೂ, **ಮುರುಪ್ಪಾಯಿರುಕ್ಕುಮ್** - ಉಪಯುಕ್ತವಾಗಿರುವದು. ಸರ್ವೇಶ್ವರನ ಮೇಲೆ ಸರ್ವ ಭಾರವನ್ನೂ ಹಾಕಿಬಿಟ್ಟು ಆತನು ರಕ್ಷಿಸದೇ ಎಂದಿಗೂ ಇರಲಾರನೆಂಬ **ಪೂರ್ಣ** ನಂಬಿಕೆಯು, ಶರಣಾಗತಿಕಾಲದಲ್ಲಿ ಆವಶ್ಯಕವು. ರಕ್ಷಿಸುತ್ತಾನೋ ಇಲ್ಲವೋ ಎಂಬ ಸಂದೇಹವಿದ್ದುದಾದರೆ, **ಪ್ರಪತ್ತ್ಯನುಷ್ಠಾನವೇ** ಸಿದ್ಧಿಸುವದಿಲ್ಲವು. ಹಾಗೆ ಮಹಾ ವಿಶ್ವಾಸವಿಲ್ಲದಿದ್ದರೆ ಪುನಶ್ಶರಣಾಗತಿಯನ್ನು ಮಹಾ ವಿಶ್ವಾಸದೊಂದಿಗೆ ಅನುಷ್ಠಿಸಬೇಕೆಂಬ **ಭಾವವು**. ಅಂತಹ ಮಹಾ ವಿಶ್ವಾಸವು **ಉತ್ತರಕಾಲದಲ್ಲೂ** ಇರತಕ್ಕದ್ದು. ಆಗ ಅದರುಪಯೋಗವೇನೆಂದರೆ ಸ್ವಾಮಿಯಲ್ಲಿ ತನ್ನ ರಕ್ಷಾಭರವನ್ನು ಇಟ್ಟುಬಿಟ್ಟಿರುವದರಿಂದ ಇನ್ನು **ತಾನು ಕೃತಕೃತ್ಯನು, ಇನ್ನೇನೂ ಮಾಡತಕ್ಕ** ಭಾರವು ತನ್ನಲ್ಲೀವು. **ತಾನ್ನ**

ಗೋಪ್ತೃತ್ವವರಣಂ

ಸ್ವರೂಪಾನುಚಿತ ಪುರುಷಾರ್ಥಙ್ಗಳ್‌ಪೋಲೆ ಸ್ವರೂಪಪ್ರಾಪ್ತಮಾನ ಅಪವರ್ಗಮುಮ್ ಪುರುಷಾರ್ಥಮಾಮ್‌ಪೋದು ಪುರುಷನರ್ಥಿಕ್ಕ

೧. "ನಿರ್ಭರೋನಿರ್ಭಯೋಽಸ್ಮಿ" ಎಂದು ಹೇಳಿರುವ ಹಾಗೆ ನೈರ್ಭರ್ಯವನ್ನುಂಟು ಮಾಡುವ ಫಲವುಳ್ಳದ್ದಾಗುತ್ತದೆಂದುಪದೇಶಿಸಿರುತ್ತಾರೆ ನೈರ್ಭರ್ಯವೆಂದರೆ ಮೋಕ್ಷವನ್ನು ಹೊಂದಲು ಇನ್ನೇನಾದರೂ ಮಾಡತಕ್ಕದ್ದೇ ಎಂಬ ವಿಚಾರದ ಭಾರವಿಲ್ಲದಿರುವಿಕೆಯು.

ಗೋಪ್ತೃತ್ವವರಣವು.

ಆನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯ ವರ್ಜನಗಳೂ, ದೈನ್ಯವೂ ಪೂರ್ಣ ನಂಬಿಕೆಗಳೆಲ್ಲಾ ಅಂಗವಾಗಿರುವಾಗ, ರಕ್ಷಾಪೇಕ್ಷಾರೂಪವಾದ ಗೋಪ್ತೃತ್ವ ವರಣದ ಆವಶ್ಯಕವೇನು ? ಎಂಬುವ ಶಂಕೆಯು ಉಂಟಾಗಬಹುದು. ಇದೂ ಅಲ್ಲದೆ ಹಿಂದೆ ಪ್ರಪತ್ತ್ಯನುಷ್ಠಾನ ಮಾಡುವ ಕಾಲದಲ್ಲಿ ಫಲಸಂಗ ಕರ್ತೃತ್ವಾದಿ ತ್ಯಾಗವಿರಬೇಕೆಂದು ಹೇಳಿ, ಈ ರಕ್ಷಾಪೇಕ್ಷಾರೂಪವಾದ ಫಲದಲ್ಲಿ ಇಚ್ಛೆಯನ್ನು ತೋರುವದು, "ಫಲೇಪ್ಸಾತದ್ವಿರೋಧಿನೀ" ಎಂಬ ಅಹಿರ್ಬುಧ್ನ್ಯ ವಾಕ್ಯಕ್ಕೆ ವಿರೋಧವಾದುದಾಗುವದಿಲ್ಲವೇ ? ಸರ್ವೇಶ್ವರನು ಮಹಾ ಕರುಣಾಶಾಲಿಯು, ಸರ್ವಜ್ಞನು, ಸರ್ವಶಕ್ತನು. ನಾವಾದರೋ ಆತನ ದಾಸರು ಮತ್ತು ಆತನ ಪದಾರ್ಥವು ಹೀಗಿರುವಲ್ಲಿ ಲೋಕದಲ್ಲೇ ಸ್ವಾಮಿಯಾದವನು ತನ್ನ ಪ್ರಿಯದಾಸನನ್ನು ಕಾಪಾಡಿಕೊಳ್ಳುವದೂ, ಒಡವೆಯ ಯಜಮಾನನು ಒಡವೆಯನ್ನು ಕಾಪಾಡುವದೂ ಅವರವರ ಕರ್ತವ್ಯವಾಗಿರುವಲ್ಲಿ, ನಾವು ಆತನನ್ನು ರಕ್ಷಿಸು ಎಂದು ಕೇಳಿಕೊಳ್ಳಬೇಕೇ ? ಆತನೇ ರಕ್ಷಿಸಬೇಕಲ್ಲವೇ ? ಮತ್ತೂ ಇಂತಹ ರಕ್ಷಾಪೇಕ್ಷಾರೂಪ ಪ್ರಾರ್ಥನೆಯು ಭಕ್ತಿಯೋಗನಿಷ್ಠನಿಗೂ ಉಂಟು. ಹೀಗಿರುವಲ್ಲಿ ಈ ಪ್ರಪತ್ತಿಗೇ ಅಂಗವೆಂದೇ ಹೇಳಬಹುದೇ ? ತನಗೆ ಪ್ರಿಯನಾದ ಜೀವಾತ್ಮನ ಸ್ವರೂಪಕ್ಕೆ ವಿಹಿತವಲ್ಲದ ತುಚ್ಛ ಪುರುಷಾರ್ಥಗಳಾದ ಐಹಿಕೈಶ್ವರ್ಯಸುಖ, ಸ್ವರ್ಗ ಭೋಗಾದಿಗಳನ್ನು ಕೇಳದೆ, ಪರಮ ಹಿತೈಷಿಯಾದ ಸರ್ವೇಶ್ವರನು ಕೊಡತಕ್ಕ

(೧) ನ್ಯಾಸದಶಕ.

ಕೊಡುಕ್ಕವೇಣ್ಡುಗೈಯಾಲೆ ಇಙ್ಗು ಗೋಪ್ತೃತ್ವ ವರಣಮುಮಪೇಕ್ಷಿತಮ್. ನನ್ರಾಯಿರುಪ್ಪದೊನ್ರೈಯುಮ್ ಈಪುರುಷನರ್ಥಿಕ್ಕ ಕೊಡಾದ ಪೋದು ಪುರುಷಾರ್ಥಙ್ಗಳ್ಕೊಡುತ್ತಾನಾಕಾನಿರೇ.

ದ್ದೇನೋ ಸರಿಯಲ್ಲವು. ನಿರತಿಶಯಸುಖರೂಪವಾದ ಮೋಕ್ಷವು ಪರಮ ಹಿತವಾದುದು. ಇದನ್ನು ಆತನಿಂದ ಕೇಳಿಸಿಕೊಂಡೇ ಸರ್ವೇಶ್ವರನು ಕೊಡಬೇಕೇ ? ಇಂತಹ ಶಂಕಾಗಳಿಗೆ ಸಮಾಧಾನವಾಗಿ ಅಪ್ಪಣೆ ಕೊಡಿಸುತ್ತಾರೆ.

ಸ್ವರೂಪಾನುಚಿತಪುರುಷಾರ್ಥಙ್ಗಳ್ಪೋಲೆ-ಜೀವಾತ್ಮನ ದಿವ್ಯಸ್ವರೂಪವಾದ ಜ್ಞಾನತ್ವ, ಆನಂದತ್ವ,ಅಮಲತ್ವಾದಿಗಳಿಗೆ ಯೋಗ್ಯವಲ್ಲದ, ಈತನು ಅಪೇಕ್ಷಿಸುವ,ಸ್ವರ್ಗ ಭೋಗ, ಇಹಲೋಕದ ಐಶ್ವರ್ಯ ಸಮೃದ್ಧಿಗಳ ಹಾಗೆ, **ಸ್ವರೂಪಪ್ರಾಪ್ತಮಾನ**-ತನ್ನ ದಿವ್ಯ ಸ್ವರೂಪಕ್ಕೆ ಯೋಗ್ಯವಾದ, **ಅಪವರ್ಗಮುಮ್** - ಮೋಕ್ಷವೂ, ಇದಕ್ಕೆ ಅಪವರ್ಗವೆಂದು ಏಕೆ ಹೆಸರೆಂದರೆ **ಅಪವರ್ಜ್ಯತೇ ಇತಿ ಅಪವರ್ಗಃ** ಎಂಬ **ವ್ಯುತ್ಪತ್ತಿ**ಯಿಂದ ಐಶ್ವರ್ಯಾದಿ ಸಾಂಸರಿಕ ಭೋಗನಿವೃತ್ತಿಯು ಆಗ ಉಂಟಾಗುವದರಿಂದ ಅಪವರ್ಗವೆಂದರೆ ಮೋಕ್ಷವೂ, **ಪುರುಷಾರ್ಥಮಾಂಪೋದು** - ಪುರುಷನು ಅಪೇಕ್ಷಿಸುವಂಥಾದ್ದು ಯಾವಾಗ ಆಯಿತೋ ಆಗ, **ಪುರುಷನು ಅರ್ಥಿಕ್ಕ ಕೊಡುಕ್ಕವೇಣ್ಡುಗೈಯಾಲೇ** - ಪುರುಷನು ಅರ್ಥಿಸಿದರೆ ಎಂದರೆ ಪ್ರಾರ್ಥಿಸಿದರೇನೇ ಕೊಡತಕ್ಕದಾದುದರಿಂದ, **ಇಙ್ಗೆ** - ಈ ಸಂದರ್ಭದಲ್ಲಿ ಎಂದರೆ ಪ್ರಸತ್ತ್ಯನುಷ್ಠಿಸುವ ಸಂದರ್ಭದಲ್ಲಿ, ಗೋಪ್ತೃತ್ವ ವರಣವೂ ಕೂಡ ಆವಶ್ಯಕವಾದುದು. **ನನ್ರಾಯಿರುಪ್ಪದೊನ್ರೈಯುಮ್**-ಚನ್ನಾಗಿರುವದೊಂದನ್ನೂ ಎಂದರೆ ಶ್ರೇಯಸ್ಕರವಾದುದು ಯಾವುದೋ ಅದನ್ನೂ, ಈ ಪುರುಷನು, **ಅರ್ಥಿಕ್ಕಕೊಡಾದಪೋದು**-ಪ್ರಾರ್ಥಿಸಿಕೊಡದೇ ಹೋದರೆ, **ಪುರುಷಾರ್ಥಙ್ಗಳ್ಕೊಡುತ್ತಾನಾಕಾನಿರೇ** - ಪುರುಷಾರ್ಥವನ್ನು ಕೊಡುವವನು, ಪುರುಷಾರ್ಥಪ್ರದಾತಾ ಎಂದು ಹೇಳಿಸಿಕೊಳ್ಳಲಾರನಷ್ಟೇ, ತನ್ನನ್ನು ಪ್ರಾರ್ಥಿಸದೇ ಫಲವನ್ನು ಕೊಟ್ಟಿದುವಾದರೆ, ಪ್ರಾರ್ಥಿಸುವದನ್ನು ಕೊಡಲಿಲ್ಲವು, ಬೇರೆ ಕೊಟ್ಟನೆಂಬ ಅಪವಾದವು ತನಗೆ ಉಂಟಾಗುತ್ತದೆ. ಆದುದರಿಂದ ಪ್ರಾರ್ಥಿಸಿಯೇ ಕೊಡತಕ್ಕದ್ದು ನ್ಯಾಯವು. ಚತುರ್ವಿಧಪುರುಷಾರ್ಥಗಳಲ್ಲಿ, ಧರ್ಮಾರ್ಥಕಾಮಗಳು, ಅಲ್ಪಾಸ್ಥಿರಗಳಾದವು. ಅವುಗಳನ್ನು ಅಪ್ರಾರ್ಥಿತವಾಗಿ ಕೊಟ್ಟದಾದರೆ, ನೀಚ ಪುರುಷಾರ್ಥಗಳನ್ನು ಸರ್ವೇಶ್ವರನು ಕೊಟ್ಟನು ಎಂಬ ಅಪವಾದಕ್ಕೆ ಗುರಿಯಾಗುವನು. ಇಂತಹ ಅಲ್ಪಾಸ್ಥಿರ ಪುರುಷಾರ್ಥಗಳ ಪ್ರಾರ್ಥನೆಯೂ ಕೂಡ, ತನ್ನ ಪೂರ್ವಕರ್ಮ

ನುಸಾರವಾದುದರಿಂದ, ಹಾಗೆಯೇ ಚೇತನನು ಪ್ರಾರ್ಥಿಸಿ ಪಡೆಯುವನು. ಶ್ರೀ ಪರಾಶರರು ಈ ಅಭಿಪ್ರಾಯವನ್ನೇ

"ಕೌಪೀನಾಚ್ಛಾದನಪ್ರಾಯಾವಾಞ್ಛಾ ಕಲ್ಪದ್ರುಮಾದಪಿ ।
ಜಾಯತೇಽಯದಪುಣ್ಯಾನಾಂ ಸೋಽಪರಾಧ ಸ್ಸ್ವದೋಷಜಃ ॥"

ಎಂದರೆ "ಕಲ್ಪವೃಕ್ಷವು ಎದುರಿಗೆ ನಿಂತು ಮಹದೈಶ್ವರ್ಯವನ್ನು ಕೊಡಲು ಸಾಮರ್ಥ್ಯವಿದ್ದರೂ, ಕೌಪೀನಾಚ್ಛಾದನೆಗೆ ಸ್ವಲ್ಪ ಬಟ್ಟೆಯನ್ನು ಕೊಡು ಎಂಬ ತುಚ್ಛಪ್ರಾರ್ಥನೆಯು ಪಾಪಿಷ್ಠರಿಗೆ ಉಂಟಾಗುತ್ತದೆ. ಅದಕ್ಕೆ ಅವರ ದುಷ್ಕೃತವೇ ಮುಖ್ಯ ಕಾರಣವೆಂದು ಶ್ರೀ ವಿಷ್ಣು ಪುರಾಣದಲ್ಲಿ (ವಿ. ಪು. ೫. ೩೦ ೨೦) ಹೇಳಿರುತ್ತಾರೆ. ತಾನೇ ಜೀವಾತ್ಮರ ಹೃದಯದಲ್ಲಿ ನಿಂತು ಅವರವರ ಸುಕೃತ ದುಷ್ಕೃತಾನುಸಾರ ಇಂತಹ ಪ್ರಾರ್ಥನೆಯುಂಟಾಗಲೆಂದು ಸಙ್ಕಲ್ಪಿಸಿ, ತದನುಸಾರ ಜೀವಾತ್ಮರ ಪುರುಷಾರ್ಥಪ್ರಾರ್ಥನೆಯನ್ನುಂಟುಮಾಡುತ್ತಾನೆ ತಾನೂ ಪುರುಷಾರ್ಥಪ್ರದಾತಾನೆನ್ನಿಸಿಕೊಳ್ಳುತ್ತಾನೆ. ಹಾಗಿಲ್ಲದೆ ತಾನೇ ಫಲಗಳನ್ನು ಕೊಡುತ್ತಾ ಬಂದರೆ ತನಗೆ ಕೇಳಿದುದನ್ನು ಕೊಡದೆ ಬೇರೆ ಕೊಟ್ಟನೆಂಬ ಅಪಕೀರ್ತಿಯೂ, ವೈಷಮ್ಯನೈರ್ಘೃಣ್ಯಗಳಿಗೆ ಒಳಪಟ್ಟವನೆಂಬಪವಾದವೂ ಉಂಟಾಗುತ್ತದೆ. ಪುರುಷಾರ್ಥದಾಯಕ ಶಬ್ದಕ್ಕೆ ಪುರುಷನಾದ ಜೀವಾತ್ಮನು ಭಕ್ತಿಯೊಂದಿಗೆ ಅಪೇಕ್ಷಿಸಿದುದನ್ನು ಕೊಡುವವನು ಎಂಬರ್ಥವು. ಹಾಗೆ ಅಪೇಕ್ಷಿಸಲ್ಪಟ್ಟು ಕೊಟ್ಟರೇನೇ ಆ ಬಿರುದು ಸರ್ವೇಶ್ವರನಿಗೆ ಸಲ್ಲುತ್ತದೆ. ಇಲ್ಲದಿದ್ದರೆ ಇಲ್ಲವು. ತುಚ್ಛ ಪುರುಷಾರ್ಥಗಳನ್ನು ಯಾವಾಗ ಅಪ್ರಾರ್ಥಿತನಾಗಿ ಕೊಡತಕ್ಕದ್ದನುಚಿತವೋ, ಹಾಗೆಯೇ ನಾಲ್ಕನೇ ಪುರುಷಾರ್ಥದ ವಿಷಯದಲ್ಲೂ ಅನುಚಿತವೆಂಬ ಭಾವವು. ಐಹಿಕ ಭೋಗಗಳಲ್ಲಿಯಾಗಲಿ, ಸ್ವರ್ಗಾನುಭವದಲ್ಲಾಗಲಿ ಮಮತೆಯಿರುವಾಗ ತಾನಾಗಿಯೇ ಮೋಕ್ಷಸುಖವನ್ನು ಕೊಡಕೂಡದಷ್ಟೇ. ಜೀವಾತ್ಮನಿಗೆ ಪ್ರಕೃತಿ ಸಂಬಂಧವು ಅನಾದಿಯಾಗಿ ಬಂದು ಬಹುಕಾಲವನುಭವಿಸಿರುತ್ತಾನೆ. ಅಂತಹ ಸಂಬಂಧವನ್ನು ಬಿಡಲು ಆತನಿಗೆ ಇಷ್ಟ ಉಂಟೋ ಇಲ್ಲವೋ ಆದುದರಿಂದ ಪ್ರಕೃತಿ ಭೋಗನಿವೃತ್ತಿ ಬೇಕೆಂದು ಆತನು ತಿಳಿಸತಕ್ಕದ್ದು ತುಂಬಾ ಆವಶ್ಯಕವು. ಆ ಕಾರಣದಿಂದಲೇ ಅಪವರ್ಗ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಅಪವರ್ಗವೆಂದರೆ ಸಮಾಪ್ತಿಯು, ಪ್ರಕೃತಿ ಸಂಬಂಧದ ಸಮಾಪ್ತಿಯು. ಇದರಿಂದ ಗೋಪ್ತೃತ್ವವರಣದ ಪ್ರಯೋಜನವೇನೆಂದರೆ, ಸರ್ವೇಶ್ವರನಿಗೆ ಮೋಕ್ಷರೂಪ ಫಲವನ್ನು ಪ್ರಪನ್ನನಿಗೆ ಕೊಡಬೇಕೆಂಬ ಅಪೇಕ್ಷೆಯನ್ನುಂಟುಮಾಡುತ್ತದೆ. ಹೀಗೆಯೇ ಶ್ರೀ ಗದ್ಯದ ಭಾಷ್ಯದಲ್ಲಿ ಶ್ರೀಮದಾಚಾರ್ಯರವರು,

"ಸರ್ವಜ್ಞೋಽಪಿ ಸ್ವಕ್ರೋ ದೇವೋ ಯಾಚ್ಞಾ ವಿಜ್ಞಾಪನಾದಿಭಿಃ ।
ತತ್ತದಿಷ್ಟಪ್ರದಿತ್ಸಾತ್ಮಾ ಪ್ರೀತಿರೇವ ಪ್ರಸಾಧ್ಯತೇ ॥

ಎಂದರೆ, ಕ್ರೀಡಾಪರನಾದ ಸರ್ವೇಶ್ವರನು ಸರ್ವಜ್ಞನಾಗಿದ್ದರೂ ಕೂಡ, ತಾನೇ ಜೀವಾತ್ಮರುಗಳ ಪ್ರಾರ್ಥನೆ ವಿಜ್ಞಾಪನೆ ಮೊದಲಾದವುಗಳಿಂದ ಅವರವರ ಅಭೀಷ್ಟವನ್ನು ಸಲ್ಲಿಸುವ ಅಪೇಕ್ಷಾರೂಪ ಭಗವಂತನ ಪ್ರೀತಿಯು ಸಾಧಿಸಲ್ಪಡುತ್ತದೆ ಎಂಬದಾಗಿ ಅಪ್ಪಣೆಕೊಡಿಸಿರುತ್ತಾರೆ. ಇದರಿಂದ ಭಗವತ್ಪ್ರೀತಿಯುಂಟಾಗಲು ಗೋಪ್ತೃತ್ವವರಣವು ಆವಶ್ಯಕವೆಂದು ಹೇಳಲ್ಪಟ್ಟಿತು. ಭರನ್ಯಾಸದ ಫಲಕ್ಕೂ ಕೂಡ ಪುರುಷಾರ್ಥವೆಂಬ ಭಾವವನ್ನುಂಟುಮಾಡುವದೇ ಗೋಪ್ತೃತ್ವವರಣದ ಪ್ರಯೋಜನವೆಂದು ಕೆಲವರು ಹೇಳುವರು. ಇದು ಸರಿಯಲ್ಲವೆಂದು ಸಾರಾಸ್ವಾದಿನಿ ವ್ಯಾಖ್ಯಾತೃವಿನಭಿಪ್ರಾಯವು. ಏಕೆಂದರೆ:-ಪುರುಷನು ಅರ್ಥಿಸುವದರಿಂದಲೇ ಮೋಕ್ಷವೂ ಪುರುಷಾರ್ಥವಾಗುವದರಿಂದ, ಆಗ ಗೋಪ್ತೃತ್ವವರಣವು ಬೇಡವೆಂದು ಏರ್ಪಡುತ್ತದೆ. ಪುರುಷನು ಅರ್ಥಿಸುವ ಮಾತ್ರದಿಂದಲೇ ಪುರುಷಾರ್ಥವಾಗಿ, ಅಂತಹ ಪುರುಷಾರ್ಥಭಾವನೆಯೇ ಗೋಪ್ತೃತ್ವವರಣವಾದರೆ, ಶ್ರೀಮದಾಚಾರ್ಯರವರು **"ಪುರುಷನರ್ಥಿಕ್ಕ ವೇಣ್ಡುಗೈಯಾಲೇ"** ಎಂದು ಇಷ್ಟುಮಾತ್ರವೇ ಬರೆಯುತ್ತಿದ್ದರು. ಆದರೆ ಗ್ರಂಥವು **ಪುರುಷನರ್ಥಿಕ್ಕ ಕೊಡುಕ್ಕವೇಣ್ಡುಗೈಯಾಲೇ** ಎಂದು ಇರುತ್ತದೆ.ಆದುದರಿಂದ ಭಗವಂತನಿಗೆ ಫಲಪ್ರದಾನದಲ್ಲಿ ಇಷ್ಟವನ್ನುಂಟುಮಾಡುವಪ್ರೀತಿಯ ಉತ್ಪಾದನವೇ ಗೋಪ್ತೃತ್ವವರಣಮುಪಯೋಗವೆಂದು ಸಾರಾಸ್ವಾದಿನಿಯುವರಭಿಪ್ರಾಯವು.

ಆದರೆ ಸಾರದೀಪಿಕಾ, ಸಾರಪ್ರಕಾಶಿಕೆ, ಸಾರವಿವರಣಿವ್ಯಾಖ್ಯಾತೃಗಳು, ಭರನ್ಯಾಸದಿಂದ ಸಾಧ್ಯವಾದ ಫಲಕ್ಕೆ ಪುರುಷಾರ್ಥತ್ವವನ್ನುಂಟುಮಾಡುವದೇ, ಗೋಪ್ತೃತ್ವವರಣರೂಪವಾದ ಅಂಗದ ಪ್ರಯೋಜನವೆಂದು ಹೇಳುತ್ತಾರೆ. ಮೂಲವನ್ನು ಪರಿಶೀಲಿಸಿ ನೋಡಿದುದಾದರೆ ಈ ಅಭಿಪ್ರಾಯವೇ ಶ್ರೀಮದಾಚಾರ್ಯರವರಭಿಪ್ರಾಯವಾಗಿರಬಹುದಾಗಿ ತೋರುತ್ತದೆ. ಆದರೆ ಇಂತಹ **ಗೋಪ್ತೃತ್ವವರಣವು** ಅಹಿರ್ಬುಧ್ನ್ಯವಾಕ್ಯವಾದ "**ಫಲೇಪ್ಸಾತದ್ವಿರೋಧಿನೀ**" ಎಂಬುವದಕ್ಕೆ, ಫಲಾಕಾಂಕ್ಷೆಯನ್ನುಂಟುಮಾಡುವದರಿಂದ ವಿರೋಧವಾಗುವದಿಲ್ಲವೇ ಎಂದರೆ, ಏನೂ ವಿರೋಧವಾಗುವದಿಲ್ಲವೆಂದುಪಪಾದಿಸಿರುತ್ತಾರೆ. "**ಗೋಪಾಯಿತಾ ಭವೇತ್ಯೇವಂ ಗೋಪ್ತೃತ್ವವರಣಂ ಸ್ಮೃತಂ**" ಎಂದು ಹೇಳಿರುವ ಹಾಗೆ, ನನಗೆ ರಕ್ಷಕನಾಗು ಎಂದು ಇಷ್ಟುಮಾತ್ರ ಹೇಳಿದರೆ, ಫಲಸಂಗತ್ಯಾಗಕ್ಕೆ ಎಂದಿಗೂ ವಿರೋಧವಾಗುವದಿಲ್ಲವೆಂದು ಹೇಳಿರುತ್ತಾರೆ. ಏಕೆಂದರೆ ರಕ್ಷಕನಾಗು ಎಂದು ಹೇಳಿದುದರಿಂದ ಫಲದಲ್ಲಿ ಇಚ್ಛಾರೂಪವಾಗುವದಿಲ್ಲವು. ಹೀಗೆ ಈ ಅಭಿಪ್ರಾಯವು

ಪ್ರಪದನಕ್ಕೆ ಮಾತ್ರವೇ ಅಂಗವು, ಭಕ್ತಿಯೋಗಕ್ಕೆ ಅಂಗವಾಗಿ ಹೇಳಲಿಲ್ಲವು. **"ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ಶರಣಾಗತಿಃ''** ಎಂದು ಶರಣಾಗತಿಗೆ ಮಾತ್ರ ಇದು ಪ್ರಧಾನವಾಗಿ ಹೇಳಲ್ಪಟ್ಟಿರುತ್ತದೆ.

ಆದರೆ ಶರಣಾಗತಿ ಲಕ್ಷಣವನ್ನು ಬೋಧಿಸುವ ಈ ಮೇಲಿನ ವಾಕ್ಯದಲ್ಲಿ, ಶರಣಾಗತಿಗೆ ಉಪಾಯತ್ವವನ್ನು ಅಂಗಿಯಾಗಿ ಹೇಳಿ, ಪುನಃ ಗೋಪ್ತೃತ್ವವರಣದಿಂದ ರಕ್ಷಕತ್ವವನ್ನು ಅಂಗವಾಗಿ ಹೇಳಿದುದಾದರೆ, ಉಪಾಯಭಾವದಲ್ಲಿ ರಕ್ಷಣೆಯೂ ಸೇರಲಿಲ್ಲವೇ ? ಒಬ್ಬನು ಒಂದು ಆಭರಣವನ್ನು ತಂದು ಇನ್ನೊಬ್ಬನಲ್ಲಿಟ್ಟರೆ, ತನಗೆ ರಕ್ಷಿಸಿಕೊಳ್ಳಲು ಶಕ್ತಿಯಿಲ್ಲದುದರಿಂದಲ್ಲವೇ ಇನ್ನೊಬ್ಬನಲ್ಲಿ ಅದನ್ನಿಡುವದು ? ರಕ್ಷಣೆಗೆ ಉಪಾಯಭೂತನಾಗು ಎಂದು ಪ್ರಾರ್ಥಿಸಿದರೆ ಪುನಃ ಅದನ್ನು ರಕ್ಷಿಸು ಎಂದು ಬೇರೆ ಕೇಳಿಕೊಳ್ಳಬೇಕೆ ? ಎಂದರೆ ಉಪಾಯವಾಗಿ ಸ್ವೀಕರಿಸೋಣವೂ ರಕ್ಷಣೆಯೂ ಒಂದೇಯಲ್ಲವು. ಹೇಗೆಂದರೆ :—**"ಉಪಾಯ ಭೂತೋ ಮೇ ಭವ"** ಎಂದು ಉಪಾಯನಾಗ ಎಂದು ಪ್ರಾರ್ಥಿಸುವದರಿಂದ "ಉಪಾಯಸಾಧ್ಯವಾದ ಫಲವನ್ನು, ಉಪಾಯ ಸಹಾಯವಿಲ್ಲದೇ ಉಪಾಯಸ್ಥಳದಲ್ಲಿ ನೀನೇ ನಿಂತು ರಕ್ಷಿಸುವ ಭಾರವನ್ನು ವಹಿಸಿಕೋ" ಎಂಬ ಭಾವವು ಹೀಗೆ ಅರ್ಥ ಹೇಳಿದರೂ ಕೂಡ, **"ಉಪಾಯ ಭೂತೋ ಮೇ ಭವ"** ಎಂಬ ಪ್ರಾರ್ಥನೆ ಯಾವಾಗ ಆಯಿತೋ, ಆಗ ಉಪಾಯಸಾಧ್ಯಫಲವನ್ನು ಉಪಾಯಾಪೇಕ್ಷೆಯಿಲ್ಲದೆ ಉಪಾಯಸ್ಥಾನದಲ್ಲಿ ನೀನೇ ನಿಂತು ಕೊಡು ಎಂದಾಗುವಾಗ ಬೇರೇ ಗೋಪ್ತೃತ್ವ ವರಣರೂಪವಾದ ರಕ್ಷಣಾ ಪ್ರಾರ್ಥನೆಯಿಂದ ಏನು ಪ್ರಯೋಜನವೆಂದು ಪುನಃ ಕೇಳಬೇಕಾಗುತ್ತದೆ. ಅದಕ್ಕೆ ಅವರುಗಳು ಸಮಾಧಾನ ಹೇಳುತ್ತಾರೇನೆಂದರೆ :—ಆಕ್ಷೇಪವೇನೋ ಸರಿಯಾದುದೇ, ಏಕೆಂದರೆ, ಉಪಾಯಪ್ರಾರ್ಥನೆಯೂ ಗೋಪ್ತೃತ್ವವರಣವೂ ಒಂದೇಯಾಗಿ ಪರಿಣಮಿಸುವಹಾಗೆ ತೋರುತ್ತದೆ. ಆದರೆ ಒಂದೇಯಲ್ಲವು. ಉಪಾಯಭಾವದಲ್ಲಿ, ಶ್ರಿಯಃಪತಿಯನ್ನು ಉಪಾಯವಾಗಿ ಅಂಗೀಕರಿಸುವದೇ ಅಭಿಪ್ರಾಯವು. ಇದನ್ನು **"ಉಪಾಯಂ ವೃಣು ಲಕ್ಷ್ಮೀಶಂ''** ಎಂಬ ಪ್ರಮಾಣದಲ್ಲಿ ಕಾಣಬಹುದು. ಇಲ್ಲಿ ವೃಣು ಶಬ್ದಕ್ಕೆ ಅಂಗೀಕಾರವೆಂಬ ಭಾವವು. ಹೀಗೆ ಉಪಾಯವಾಗಿ ಅಂಗೀಕರಿಸುವುದರಿಂದಲೇ "**ನ್ಯಸ್ಯಾಮಿ .... ಆತ್ಮರಕ್ಷಾಭರಂ ತ್ವಯಿ**" ಎಂದು ಶ್ರೀ ನಿಗಮಾಂತ ದೇಶಿಕರವರೇ ನ್ಯಾಸದಶಕದಲ್ಲಿ ಹೇಳಿರುತ್ತಾರೆ. ಹಾಗೆಯೇ "**ಶರಣಂ ಪ್ರಪದ್ಯೇ**'' ಎಂಬ ಶರಣಾಗತ್ಯನುಷ್ಠಾನರೂಪವಾದ ದ್ವಯವಾಕ್ಯದಲ್ಲಿ ಉಪಾಯತ್ವ ಪ್ರಾರ್ಥನೆ ಏನೂ ಇಲ್ಲವು. ನೀನು ಉಪಾಯವಾಗುವಿ ಎಂಬ ದೃಢ ನಿಶ್ಚಯವುಳ್ಳವನಾಗಿದ್ದೇನೆಂಬಭಿಪ್ರಾಯವು.

ಮೋಕ್ಷವು ಪುರುಷಾರ್ಥವೆಂದು ತೋರುವದಕ್ಕಾಗಿಯೇ "ನೀನು ರಕ್ಷಕನಾಗಬೇಕೆಂಬ" ಗೋಪ್ತೃತ್ವವರಣವು ಇದರಲ್ಲೇ ಅಂತರ್ಗತವೆಂದು ಭಾವಿಸತಕ್ಕದ್ದು.

ಗೋಪ್ತೃತ್ವವರಣವು ಭರನ್ಯಾಸ ಸಾಧ್ಯಫಲಕ್ಕೆ ಪುರುಷಾರ್ಥ ಭಾವವನ್ನುಂಟುಮಾಡುವದೇ ಪ್ರಯೋಜನವೆಂದು ಇನ್ನೊಂದು ವಿಧದಲ್ಲೂ ಉಪಪಾದಿಸಬಹುದು. ಹೇಗೆಂದರೆ :—ಭರನ್ಯಾಸದ ಫಲವು ಪರ್ಯವಸಾನದಲ್ಲಿ ಶ್ರಿಯಃಪತಿಗೆ ಕೈಂಕರ್ಯರೂಪವಾದುದರಿಂದ, ಕೈಂಕರ್ಯಪ್ರಾಪ್ತಿಯೇ ಪುರುಷಾರ್ಥಸಿದ್ಧಿಯು. ಇದು ಉಂಟಾಗಬೇಕಾದರೆ, ಚೇತನನಿಗೆ ಸರ್ವದೋಷಗಳ ನಿವೃತ್ತಿಮೂಲಕ ಪ್ರಕೃತಿ ಸಂಬಂಧವು ತೊಲಗಬೇಕು. ಶರೀರದ ಕೊಳೆಗಳೆಲ್ಲಾ ಹೋಗುವ ಹಾಗೆ ಮಾಡಿಕೊಳ್ಳುವದು ಹೇಗೆ ಶರೀರಿಗೆ ಫಲಕಾರಿಯೋ, ಮತ್ತು ಹೆಂಡತಿ ಮಕ್ಕಳುಗಳಿಗೆ ಆಭರಣಾದಿಗಳನ್ನು ಕೇಳಿಕೊಂಡು ಕೊಡುವದು ಪತಿಗೆ ಹೇಗೆ ಪ್ರೀತಿ ಮತ್ತು ಭೋಗಗಳಿಗೆ ವರ್ಧಕವೋ, ಹಾಗೆಯೇ ಸರ್ವೇಶ್ವರನಿಗೆ ಶರೀರವಾದ ಜೀವಾತ್ಮನ ಸರ್ವದೋಷ ನಿವೃತ್ತಿ ಮೂಲಕ, ಪ್ರಾಪ್ತವಾಗುವ ಸರ್ವೇಶ್ವರಕೈಂಕರ್ಯದಿಂದ ಸರ್ವೇಶ್ವರನಿಗೇನೇ ಅತಿಶಯವುಂಟಾಗುತ್ತದೆ. ಮತ್ತು ದಾಸಭೂತನಾಗಿಯೂ ಪುತ್ರನಾಗಿಯೂ ಇರುವ ಈ ಚೇತನನಿಗೆ ಉಂಟಾಗುವ ಅತಿಶಯವು ಸ್ವಾಮಿಯಾಗಿಯೂ ಪಿತಾವಾಗಿಯೂ ಇರುವ ಸರ್ವೇಶ್ವರನಿಗೂ ಅತಿಶಯವನ್ನುಂಟುಮಾಡುತ್ತದೆ. ಭರನ್ಯಾಸಫಲವು ಇಂತಹ ಕೈಂಕರ್ಯರೂಪವಾದುದರಿಂದ, ಅಹಿರ್ಬುಧ್ನ್ಯವಾಕ್ಯದಲ್ಲಿ ಹೇಳಿರುವ ಫಲಸಂಗಾದಿ ತ್ಯಾಗವೂ ಸಿದ್ಧಿಸುತ್ತದೆ; ಗೋಪ್ತೃತ್ವವರಣದಿಂದ ಶರಣಾಗತಿಗೆ ಪುರುಷಾರ್ಥತ್ವವನ್ನುಂಟುಮಾಡುವ ಪ್ರಯೋಜನವೂ ಸಿದ್ಧಿಸುತ್ತದೆ.

ಆದುದರಿಂದ ಶರಣಾಗತಿಯನ್ನನುಷ್ಠಿಸುವ ಕಾಲದಲ್ಲಿ "ಸ್ವರ್ಗವನ್ನು ಹೊಂದುವನಾಗುವೆನು, ಅದಕ್ಕಾಗಿ ಈ ಯಜ್ಞವನ್ನನುಷ್ಠಿಸುವೆನು" ಎಂಬ ಸಂಕಲ್ಪದ ಹಾಗೆ, "ನನ್ನ ಸ್ವರೂಪಕ್ಕುಚಿತವಾದ ಭಗವತ್ಕೈಂಕರ್ಯ ಉಂಟಾಗುವದರಿಂದ ನಾನು ಸುಖಿಯಾಗುವೆನು, ಅದಕ್ಕಾಗಿ ಭಗವಂತನಲ್ಲಿ ಭರನ್ಯಾಸವನ್ನು ಮಾಡುವೆನು" ಎಂದು ಶರಣಾಗತಿಯನ್ನು ಮಾಡಬಾರದು. **ಫಲೇಪ್ಸಾ ತದ್ವಿರೋಧಿನೀ** ಎಂಬ ಪ್ರಮಾಣವಾಕ್ಯವು ಅಂತಹ ಶರಣಾಗತಿಯನ್ನು ನಿರಾಕರಿಸುತ್ತದೆ "ಭಗವಂತನಿಗೆ ಅಧೀನವಾದ ಸ್ವರೂಪ ಸ್ಥಿತಿ ಪ್ರವೃತ್ತಿಗಳುಳ್ಳ ಶೇಷಭೂತನಾದ ನಾನೂ, ನನ್ನ ರಕ್ಷಣೆಯಾದ ಫಲವೂ ಸಹ ಭಗವಂತನಾದ ನಿನಗೇನೇ ಸೇರಿದುದು" ಎಂದೀಗ ಶರಣಾಗತಿಯನ್ನನುಷ್ಠಿಸತಕ್ಕದ್ದು. ಈ ಕಾರಣಗಳಿಂದ ಗೋಪ್ತೃತ್ವವರಣದ ಪ್ರಯೋಜನವು ಶರಣಾಗತಿಫಲಕ್ಕೆ ಪುರುಷಾರ್ಥತೆಯನ್ನುಂಟುಮಾಡುವದೇ ಎಂದು ಈ ವ್ಯಾಖ್ಯಾತೃಗಳ ಅಭಿಪ್ರಾಯವು. ಚೇತನನು ಯಾವುದನ್ನು

ಅಕ್ಕೈಯಾಲೆ ಯಿರೆ (೧) "ಅಪ್ರಾರ್ಥಿತೋ ನ ಗೋಪಾಯೇತ್" ಎನ್ರುಮ್ (೨) "ಗೋಪ್ತೃತ್ವವರಣಂ ನಾಮ ಸ್ವಾಭಿಪ್ರಾಯ ನಿವೇದನಂ" ಎನ್ರುಮ್ ಶೊಲ್ಲುಗಿರದು .

•

ನನ್ನಾಯಿರುಪ್ಪದು, ಚನ್ನಾಗಿದೆ ಎಂದು ಭಾವಿಸಿ ಪ್ರಾರ್ಥಿಸುವನೋ, ಅದು ಚತುರ್ವಿಧ ಪುರುಷಾರ್ಥವಲ್ಲಿ ಯಾವುದೇ ಆಗಿರಲಿ, ಅದನ್ನೇ ಭಗವಂತನು ದಯ ಪಾಲಿಸುವನು. ಆದರೆ ಮೋಕ್ಷೇತರ ಪುರುಷಾರ್ಥಗಳು ಚೇತನನಿಗೆ ಆ ಕಾಲದಲ್ಲಿ ನನ್ನಾಯಿರುಪ್ಪದು ಎಂದು ತೋರಿದರೂ, ಅಲ್ಪಾಸ್ಥಿರಗಳಾದುದರಿಂದ ತುಚ್ಛವಾದವು. ಮೋಕ್ಷವು, ನಮಗೆ ನೈಯಾಯಿಕನು ಹೇಳುವಹಾಗೆ ಪಾಷಾಣಸಮವಾದ ಅವಸ್ಥೆಯಲ್ಲದೆ ನಿರತಿಶಯಾನಂದ ರೂಪವಾದುದರಿಂದ, ಅದನ್ನೂ ಕೂಡ ಪ್ರಪನ್ನನು ಅಪೇಕ್ಷಿಸಿದರೇನೇ ಕೊಡತಕ್ಕದ್ದು ಯುಕ್ತವು. ಚೇತನನು ಜ್ಞಾನಸ್ವರೂಪನಾಗಿ, ಜ್ಞಾನವುಳ್ಳವನಾಗಿ, ಕರಣ ಕಳೇಬರಾದಿಗಳನ್ನು ಹೊಂದಿರುವದರಿಂದ ಸುಕೃತ ದುಷ್ಕೃತಗಳನ್ನು ಮಾಡುವನು ; ತದನುಸಾರವಾಗಿ ಇವನಿಗೆ ಪ್ರಾರ್ಥನೆಯುಂಟಾಗುತ್ತದೆ. ಆದುದರಿಂದ ಭಗವಂತನು ಪ್ರಾರ್ಥಿಸಲ್ಪಟ್ಟೀ ಚತುರ್ವಿಧ ಪುರುಷಾರ್ಥಗಳನ್ನು ಕೊಡುವನು. ಇದು ಸರ್ವ ಪುರುಷಾರ್ಥಸಾಮಾನ್ಯವಾದುದೆಂಬುವದಕ್ಕೆ ಮುಂದೆ ಪ್ರಮಾಣಗಳನ್ನು ಉದಾಹರಿಸುತ್ತಾರೆ.

ಅಕ್ಕೈಯಾಲೆ ಇರೆ - ಹೀಗೆ ಪ್ರಾರ್ಥನೆಯು ಸರ್ವ ಪುರುಷಾರ್ಥಗಳಿಗೂ ಸಮಾನವಾಗಿರುವದರಿಂದಲ್ಲವೇ, ಅಪ್ರಾರ್ಥಿತಃ - ಭಗವಂತನು ರಕ್ಷಿಸೆಂದು ಪ್ರಾರ್ಥಿಸಲ್ಪಡದೆ, ನಗೋಪಾಯೇತ್-ರಕ್ಷಿಸಲಾರನು, ಎಂದೂ, ಗೋಪ್ತೃತ್ವವರಣಂ ನಾಮ - ಗೋಪ್ತೃತ್ವವರಣವೆಂದರೆ, ಸ್ವಾಭಿಪ್ರಾಯ ನಿವೇದನಮ್ - ತನ್ನ ಅಭಿಪ್ರಾಯವೇನೆಂಬುವವನ್ನು ಅರಿಕೆಮಾಡಿಕೊಳ್ಳುವದು, ಎನ್ರು ಶೊಲ್ಲು ಕಿರದು - ಎಂದು ಹೇಳಲ್ಪಡುತ್ತದೆ ಎಂದರೆ, ಇಂತಹ ಪುರುಷಾರ್ಥವೆಂದುವಿಶೇಷಿಸಿ ಹೇಳದೆ ಸಾಮಾನ್ಯರೂಪದಿಂದ ಹೇಳಲ್ಪಟ್ಟಿರುತ್ತದೆ ಎಂಬ ತಾತ್ಪರ್ಯವು. ಲೋಕನೀತಿಯಲ್ಲೇನೋ ಕೇಳದೆ ಯಾವ ಪ್ರಯೋಜನವೂ ದೊರಕುವದಿಲ್ಲವು. ಆ ನ್ಯಾಯವೇ ಈ ಸರ್ವವಿಧ ಪುರುಷಾರ್ಥಗಳ ವಿಷಯದಲ್ಲೂ ಉಂಟು ಎಂದು ಹೇಳಲ್ಪಟ್ಟಿತು. ಮೋಕ್ಷವಿಷಯದಲ್ಲಿ ಹಾಗಲ್ಲವೆ, ಅಪ್ರಾರ್ಥಿತನಾಗಿಯೇ ಕೊಡುವನೆಂಬುವದು ಶಾಸ್ತ್ರಸಮ್ಮತವಾಗಿದ್ದ ಪಕ್ಷದಲ್ಲಿ ಈ ಲಕ್ಷ್ಮೀ

(೧) ಲಕ್ಷ್ಮೀತಂತ್ರ ೧೭ ೭೨ (೨) ಲಕ್ಷ್ಮೀತಂತ್ರ ೧೭ ೭೪

ನ್ಯಾಸಃ ಪಂಚಾಂಗಸಂಯುತಃ

ಇಪ್ಪಡಿ ಇವ್ವೈನ್ದುವ್ ಇವ್ವಿದ್ಯಾನುಷ್ಠಾನ ಕಾಲತ್ತಿಲ್ ಉಪಯುಕ್ತಙ್ಗಳಾಕೈಯಾಲ್. ಇವೈ ಇವ್ವಾತ್ಮನಿಕ್ಷೇಪತ್ತುಕ್ಕು ಅವಿನಾಭೂತ ಸ್ವಭಾವಂಗಳ್.

ತಂತ್ರ ವಾಕ್ಯಗಳು ಎಲ್ಲಾ ಪುರುಷಾರ್ಥಗಳಿಗೂ ಸಾಮಾನ್ಯವಾಗುವ ಹಾಗೆ ಎಂದಿಗೂ ಹೇಳುತ್ತಿರಲಿಲ್ಲವು.

ಈಗ ಈ ಐದು ಅಂಗಗಳ ಸ್ವರೂಪವೂ, ಅವು ಹೇಗೆ ಪ್ರಪತ್ತಿಗೆ ಪ್ರಯೋಜನವೆಂಬುವನೂ ವಿಶದವಾಗಿ ಉಪದೇಶಿಸಲ್ಪಟ್ಟವು. ಪ್ರಪತ್ತ್ಯನುಷ್ಠಾನಕಾಲದಲ್ಲಿ ಇವು ಐದೂ ಇದ್ದೇ ಇರಬೇಕೇ, ಅಥವಾ ಇವುಗಳಲ್ಲಿ ಒಂದೆರಡಾಗಲಿ ಇದ್ದರೆ ಸಾಕೇ ಎಂಬ ಶಂಕಾವಿಗೆ ಐದೂ ಆವಶ್ಯಕವೆಂದು ಉತ್ತರ ಹೇಳುತ್ತಾರೆ:—ಇಪ್ಪಡಿ - ಈ ಮೇಲೆ ಉಪಪಾದಿಸಲ್ಪಟ್ಟ ರೀತ್ಯಾ, **ಇವ್ವೈನ್ದುವ್** - ಈ ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ಕಾರ್ಪಣ್ಯ, ಮಹಾವಿಶ್ವಾಸ, ಗೋಪ್ತೃತ್ವವರಣವೆಂಬೀ ಐದು ಅಂಗಗಳೂ, ಈ ಪ್ರಪತ್ತಿಯನ್ನನುಷ್ಠಿಸುವ ಕಾಲದಲ್ಲಿ, **ಉಪಯುಕ್ತಙ್ಗಳಾ ಕೈಯಾಲೇ** - ಪ್ರಯೋಜನವಾದವುಗಳಾದುದರಿಂದ, ಇವೈ - ಈ ಐದು ಅಂಗಗಳೆಲ್ಲವೂ, ಒಂದೊಂದೇ ಅಲ್ಲವು ಎಂಬಭಿಪ್ರಾಯವು, ಇವ್ವಾತ್ಮನಿಕ್ಷೇಪಕ್ಕು - ಇವುಗಳಿಗೆ ಅಂಗಿಯಾದ ಆತ್ಮನಿಕ್ಷೇಪಕ್ಕೆ ಭಗವಂತನ ಪಾದದಲ್ಲಿ ತನ್ನ ಆತ್ಮವನ್ನು ಸಮರ್ಪಿಸುವದಕ್ಕೆ, **ಅವಿನಾ ಭೂತ ಸ್ವಭಾವಙ್ಗಳ್** - ಎಡಬಿಡದೆ ಇರತಕ್ಕವುಗಳು. ಇವೈದೂ ಶರಣಾಗತ್ಯನುಷ್ಠಾನ ಕಾಲದಲ್ಲಿ ಮುಖ್ಯವಾಗಿರತಕ್ಕದ್ದು. ಒಂದೊಂದರುಪಯೋಗವೂ ವಿಲಕ್ಷಣವಾದುದರಿಂದ ಐದೂ ಸೇರಿದರೇನೇ ಅಂಗಿನಿಷ್ಪತ್ತಿಯೂ ಪ್ರಪತ್ತಿಯೂ ಸಹ ನಿಷ್ಪನ್ನವಾಗುತ್ತವೆ, ಇಲ್ಲವಾದರೆ ಇಲ್ಲವೆಂಬ ಭಾವವು. ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಂದ ಅಪಾಯ ಪರಿಹಾರವಾಗದೆ, ಕಾರ್ಪಣ್ಯದಿಂದ ಇತರೋಪಾಯ ವಿನಿವೃತ್ತಿಮೂಲಕ ಕಾರುಣ್ಯೋತ್ತಂಭನವಾಗದೆ, ಮಹಾ ವಿಶ್ವಾಸದಿಂದ ಅನುಷ್ಠಾನ ಸಿದ್ಧಿಸದೆ. ಗೋಪ್ತೃತ್ವವರಣದಿಂದ ಈಶ್ವರನಿಗೆ ರಕ್ಷಣಾಸಂಕಲ್ಪ ಉಂಟಾಗದೆ, ಪ್ರಪತ್ತಿಯು ಸಿದ್ಧಿಸಲಾರದೆಂಬ ಭಾವವು. ಆದುದರಿಂದ ಪ್ರಪತ್ತ್ಯನುಷ್ಠಾನಕಾಲದಲ್ಲಿ ಐದೂ ಇದ್ದೇ ಇರಬೇಕೆಂದು "ಅವಿನಾ ಭೂತ ಸ್ವಭಾವಙ್ಗಳ್" ಇಲ್ಲದಿದ್ದರಾಗುವದೇ ಇಲ್ಲವೆಂಬ ಸ್ವಭಾವ ವುಳ್ಳವುಗಳೆಂದು ಅಪ್ಪಣೆ ಕೊಡಿಸಿರುತ್ತಾರೆ. ಹೀಗೆ ಹೇಳುವಾಗ "**ನಿಕ್ಷೇಪಾಪರ ಪರ್ಯಾಯಃ ನ್ಯಾಸಃ**

ತತ್ರ ತ್ರಿಜಟಾಶರಣಾಗತಿಪ್ರಕರಣಸ್ಥ ವಾಕ್ಯೋದಾಹರಣಂ

ಇವ್ವರ್ಥಮ್ ಪಿರಾಟ್ಟಿಯೈ ಶರಣಮಾಕಪ್ಪತ್ತ ವಾರುಙ್ಗೋಳ್ ಎನ್ರು ಸಾತ್ವಿಕ ಪ್ರಕೃತಿಯಾನ ತ್ರಿಜಟೈ ರಾಕ್ಷಸಿಗಳುಕ್ಕು ಚೊಲ್ಲುಗಿರ ವಾಕ್ಯತ್ತಿಲುಮ್ ಕಾಣಲಾಮ್.

ಪಂಚಾಂಗ ಸಂಯುತಃ" ಎಂಬ ಹಿಂದೆ ಉದಾಹರಿಸಿದ ಲಕ್ಷ್ಮೀತಂತ್ರವಾಕ್ಯವನ್ನು (೧೭.೭೪) ಮನಸ್ಸಿನಲ್ಲಿಟ್ಟವರಾಗಿ ಆ ವಾಕ್ಯಕ್ಕೆ ಇಲ್ಲಿ ತಾವೇ ಅರ್ಥವನ್ನು ಬರೆದಿರುತ್ತಾರೆ. ಈ ಪ್ರಮಾಣವು ಶಿಷ್ಯರುಗಳಿಗೆ ಜ್ಞಾಪಕಕ್ಕೆ ಬರಲೆಂದು, ಈ ವಿವೈಗೆ, ಎಂದು ಹೇಳದೆ "**ಇನ್ವ ಇಪ್ಪಾತ್ತ ನಿಕ್ಷೇಪತ್ತುಕ್ಕು**" ಎಂದು ಪ್ರಯೋಗಿಸಿರುತ್ತಾರೆ. "**ಪಂಚಾಂಗ ಸಂಯುತಃ**" ಎಂಬಲ್ಲಿ ಸಂಯುತ ಪದಕ್ಕೆ "**ಅವಿನಾಭೂತ ಸ್ವಭಾವಙ್ಗಳ್**" ಎಂಬುವದೇ ಅರ್ಥವೆಂದು ಉಪದೇಶಿಸಿರುತ್ತಾರೆ.

ವಿಕಲ್ಪ ಕೂಡದು, ಸಮುಚ್ಚಯವೇ ಆವಶ್ಯಕವು ಎಂದರೆ ಒಂದೊಂದು ಅಂಗವೇ ಸಾಲದು, **ಎಲ್ಲವೂ** ಇರತಕ್ಕದ್ದು ಎಂಬುವದರ ನಿದರ್ಶನಾರ್ಥವಾಗಿ ಶ್ರೀ ವಾಲ್ಮೀಕಿಮಹರ್ಷಿಯು ಶರಣಾಗತಿ ಸಾರಭೂತ ಶಾಸ್ತ್ರವಾದ ರಾಮಾಯಣವನ್ನು ಅನುಗ್ರಹಿಸಿರುವದರಿಂದ ಅಲ್ಲಿರುವ ಒಂದೆರಡು ಶರಣಾಗತ್ಯನುಷ್ಠಾನ ಸಂದರ್ಭವನ್ನು ಉದಾಹರಿಸಿ, ಐದು ಅಂಗಗಳನ್ನೂ ವ್ಯಕ್ತಪಡಿಸುತ್ತಾರೆ.

ಈ ಸಂದರ್ಭದಲ್ಲಿ ತ್ರಿಜಟಾ ಶರಣಾಗತಿಯು ಉದಾಹರಣೆಯು

ಇವ್ವರ್ಥಮ್-ಪ್ರಪದನಾನುಷ್ಠಾನಕಾಲದಲ್ಲಿ ಈ ಅಙ್ಗಿಯಾದ ಆತ್ಮನಿಕ್ಷೇಪಕ್ಕೆ ಇತರ ಪರಿಕರಗಳು ಅವಿನಾಭೂತವಾದ ಅಙ್ಗಗಳು ಎಂಬ ಮೇಲೆ ಉಪಪಾದಿಸಲ್ಪಟ್ಟ ಅಭಿಪ್ರಾಯವು, **ಪಿರಾಟ್ಟಿಯೈ** - ಸೀತೆಯನ್ನು, **ಶರಣಮಾಕಪ್ಪತ್ತ ವಾರುಂಗೋಳ್** - ಉಪಾಯವಾಗಿ ಅವಲಂಬಿಸೋಣ ಬನ್ನಿ, **ಎನ್ರು** - ಎಂಬುದಾಗಿ, **ಸಾತ್ವಿಕ ಪ್ರಕೃತಿಯಾನ** - ಸಾತ್ವಿಕ ಸ್ವಭಾವವುಳ್ಳ, ಏಕೆಂದರೆ ಸಾತ್ವಿಕ ಶಿರೋಮಣಿಯಾದ ವಿಭೀಷಣನ ಪುತ್ರಿಯಾದುದರಿಂದ ಈಕೆಯೂ **ಸಾತ್ವಿಕಸ್ವಭಾವವುಳ್ಳ**ವಳು, ಅಥವಾ ಇಂತಹ ಶರಣಾಗತಿಯಲ್ಲಿ ಅಭಿರುಚಿಯುಂಟಾಗಬೇಕಾದರೆ, ಸಾತ್ವಿಕಸ್ವಭಾವವಿಲ್ಲದಿದ್ದರೆ ಉಂಟಾಗಲಾರದೆಂಬ ಭಾವವು, ತ್ರಿಜಟೆಯು ರಾಕ್ಷಸಸ್ತ್ರೀಯರುಗಳಿಗೆ, **ಚೊಲ್ಲುಗಿರ** - ಹೇಳುವ, ವಾಕ್ಯದಲ್ಲಿ, ಕಾಣಬಹುದು. ಎಂದರೆ ಈ ಐದು ಅಂಗಗಳೊಂದಿಗೇನೇ ಸೀತಾಸನ್ನಿಧಿಯಲ್ಲಿ ಶರ

(೧) ತದಲಂಕ್ರೂರವಾಕ್ಯೈರ್ವ" ಎನ್ಯೈಯಾಲೇ ಪ್ರಾತಿಕೂಲ್ಯ

ಣಾಗತಿಯು ಉಪದೇಶಿಸಲ್ಪಟ್ಟಿರುತ್ತದೆ. ಕೇವರಭಿಪ್ರಾಯವು ಐದು ಅಂಗಗಳೊಂದಿಗೆ ಪ್ರಪತ್ತ್ಯನುಷ್ಠಾನವು ಆವಶ್ಯಕವಿಲ್ಲವು. ಪ್ರಪತ್ತ್ಯುತ್ತರಕಾಲದಲ್ಲಿ ಈ ಐದು ಅಂಗಗಳ ಆವಶ್ಯಕತೆಯೇ ವಿನಾ ಆ ಕಾಲದಲ್ಲಿ ಆವಶ್ಯಕವಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರಾದುದರಿಂದ ಆ ಅಭಿಪ್ರಾಯವು ಸರಿಯಲ್ಲವೆಂದು ತೋರಿಸುವದಕ್ಕಾಗಿಯೂ, ಐದು ಅಂಗಗಳೂ ಸೇರಿದ್ದರೇನೇ ಶರಣಾಗತಿಯು ನಿಷ್ಪತ್ತಿಯುಂಟೆಂದು ತೋರಿಸುವದಕ್ಕಾಗಿಯೂ ತ್ರಿಜಟಾವಾಕ್ಯಗಳನ್ನು ಉದಾಹರಿಸುತ್ತಾರೆಂದು. ತಿಳಿಯತಕ್ಕದ್ದು

ಪ್ರಕರಣವೇನೆಂದರೆ:- ರಾವಣನು ಸೀತೆಯನ್ನು ಅಪಹರಿಸಿತಂದು ಅಶೋಕವನದಲ್ಲಿಟ್ಟು ತ್ರಿಜಟೆಯನ್ನೂ ಇತರ ರಾಕ್ಷಸಿಯರನ್ನೂ ಸಹ ಕಾವಲಿಟ್ಟು, ಅವರಿಗೆ ಸೀತೆಯು ತನ್ನನ್ನು ವರಿಸುವ ಹಾಗೆ ಯತ್ನವಾಡತಕ್ಕದ್ದೆಂದು ಆಜ್ಞಾಪಿಸಿದ್ದನು. ಈ ರಾಕ್ಷಸೀಯರು ಎಷ್ಟು ಪ್ರಯತ್ನಪಟ್ಟರೂ ಸೀತೆಯನ್ನು ಒಡಂಬಡಿಸಲು ಆಗಲಿಲ್ಲವು. ತುಂಬಾ ಕ್ರೂರವಾಕ್ಯಗಳಿಂದ ಆಕೆಯನ್ನು ಬೆದರಿಸಿ, ಒಪ್ಪದ ಪಕ್ಷದಲ್ಲಿ ಆಕೆಯನ್ನು ಕೊಂದುಬಿಟ್ಟು ಸ್ವಾತಂತ್ರ್ಯಾರ್ಥವಾಗಿ ಉಪಯೋಗಿಸಿ ಬಿಡುವದಾಗಿ ಭಯಪಡಿಸುತ್ತಿದ್ದರು. ಇದನ್ನೆಲ್ಲಾ ವೃಕ್ಷದಲ್ಲಿ ಬಚ್ಚಿಟ್ಟುಕೊಂಡಿದ್ದ ಆಂಜನೇಯನು ನೋಡುತ್ತಿರುವಾಗಲೇ ತ್ರಿಜಟೆಗೆ ಸ್ವಪ್ನವುಂಟಾಗಿದೆ. ರಾವಣ ಕುಂಭಕರ್ಣಾದಿ ಸರ್ವರಾಕ್ಷಸರ ನಾಶವೂ, ವಿಭೀಷಣನಿಗೆ ಲಂಕಾರಾಜ್ಯವೂ, ಶ್ರೀ ರಾಮನಿಗೆ ಜಯವೂ, ಸೀತೆಯೊಂದಿಗೆ ಸಂಶ್ಲೇಷವೂ ಉಂಟಾದ ಹಾಗೆ ಆದ ಸ್ವಪ್ನವನ್ನು ತನ್ನ ಸಖಿಯರಿಗೆ ತ್ರಿಜಟೆಯು ತಿಳಿಸಿ, ಇವಳು ತುಂಬಾ ಸಾತ್ವಿಕ ಸ್ವಭಾವವುಳ್ಳವಳಾದುದರಿಂದ, ಇತರ ರಾಕ್ಷಸಿಯರಿಗೆ ಬುದ್ಧಿವಾದವನ್ನು ಹೇಳುತ್ತಾಳೆ :— ಏನೆಂದರೆ ೧. "ತದಲಂ **ಕ್ರೂರವಾಕ್ಯೈರ್ವಃ**, ತತ್ - ಆದಕಾರಣದಿಂದ, **ವಃ**- ನಿಮ್ಮಗಳ, **ಕ್ರೂರವಾಕ್ಯೈಃ** - ಇಂತಹ ಕ್ರೂರವಾದ ಕೆಟ್ಟವಾಕ್ಕುಗಳಿಂದ, **ಅಲಂ** - ಸಾಕು ಎಂದರೆ ಇನ್ನು ಮೇಲೆ ಬಿಟ್ಟುಬಿಡಿ" **ಎನ್ಯೈಯಾಲೆ** - ಎಂದು ಹೇಳಿರುವದರಿಂದ, ಪ್ರಾತಿಕೂಲ್ಯ ವರ್ಜನವು ಹೇಳಲ್ಪಟ್ಟಿತು. ೨. ಮುಂದಿನ ಪಾದವಾದ **ಸಾಂತ್ವಮೇವಾಭಿಧೀಯತಾಂ** ಎಂಬುವದರಿಂದ ಆನುಕೂಲ್ಯ ಸಂಕಲ್ಪವು ಉಪದೇಶಿಸಲ್ಪಟ್ಟಿತು. "**ಸಾಂತ್ವಮೇವ** - ಸಾಂತ್ವೋಕ್ತಿಗಳನ್ನು

(೧). ರಾಮಾ. ಸುಂದರ. ೨೭. ೪೧.

ವರ್ಜನಂ ಶೊಲ್ಲಪ್ಪಟ್ಟದು (೨) ‘ಸಾಂತ್ವಮೇವಾಭಿಧೀಯತಾಂ’, ಎನ್ಗೈಯಾಲೆ ಮನಃಪೂರ್ವಕ ವಾಕ ಮಲ್ಲದು ವಾಕ್ಪ್ರವೃತ್ತಿ ಯಿಲ್ಲಾ ಮೈಯಾಲೆ ಆನುಕೂಲ್ಯ ಸಙ್ಕಲ್ಪ ಮಾಕೃಷ್ಟಮಾಯಿತ್ತು.

ಎಂದರೆ ಸಮಾಧಾನರೂಪವಾದ ಒಳ್ಳೇಮಾತುಗಳನ್ನೇ ಅಭಿಧೀಯತಾಂ - ಹೇಳಲ್ಪಡಲಿ" ಎಂಬುವದರಿಂದ, **ಮನಃಪೂರ್ವಕ ಮಾಕಮಲ್ಲದು ವಾಕ್ಪ್ರವೃತ್ತಿ ಯಿಲ್ಲಾಮೈಯಾಲೆ** - ಮನಸ್ಸಿನ ಸಂಕಲ್ಪವಿಲ್ಲದೆ ವಾಕ್ಕಿನ ಪ್ರವೃತ್ತಿ ಎಂದರೆ ಮಾತಾಡುವದು ಇಲ್ಲವಾದುದರಿಂದ, ಆನುಕೂಲ್ಯ ಸಂಕಲ್ಪವು, **ಆಕೃಷ್ಟಮಾಯಿತ್ತು** - ಅರ್ಥಾತ್ ಪ್ರಾಪ್ತವಾಯಿತು. ಇಲ್ಲಿ **ಸಾಂತ್ವಮೇವಾಭಿಧೀಯತಾಂ** ಎಂದು ಇಷ್ಟೇ ಹೇಳಿರುವದರಿಂದ, ಒಳ್ಳೇಮಾತನಾಡಿರಿ ಎಂದು ವಾಕ್ಪ್ರವೃತ್ತಿ ಮಾತ್ರವೇ ಹೇಳಿರುವದರಿಂದ ಆನುಕೂಲ್ಯ ಸಂಕಲ್ಪವು ಆ ವಾಕ್ಯದಲ್ಲಿ ಕಾಣಬರಲಿಲ್ಲವಲ್ಲಾ ಎಂಬಾಕ್ಷೇಪ ಉಂಟಾದೀತೆಂದು ಭಾವಿಸಿ ವಾಕ್ಪ್ರವೃತ್ತಿಯು ಮನಸ್ಸಿನ ಸಂಕಲ್ಪವಿಲ್ಲದೆ ಉಂಟಾಗಲಾರದಾದುದರಿಂದ ಅರ್ಥಾತ್ ಸಙ್ಕಲ್ಪವೂ ತೋರಿಬರುತ್ತದೆ ಎಂಬ ತಾತ್ಪರ್ಯವು **"ಯನ್ಮನಸಾ ಧ್ಯಾಯತಿ ತದ್ವಾಚಾವದತಿ ತತ್ಕರ್ಮಣಾಕರೋತಿ"** ಎಂದರೆ "ಯಾವುದನ್ನು ಮನಸ್ಸಿನಿಂದ ಸಂಕಲ್ಪಿಸುತ್ತಾನೋ, ಅದನ್ನೇ ವಾಕ್ಕಿನಿಂದ ಹೇಳುವನು, ಅದನ್ನೇ ಕರ್ಮಮೂಲಕ ಮಾಡುವನು" ಎಂದು ಹೇಳಿರುವದರಿಂದ, ಮೇಲಿನ **"ಸಾಂತ್ವಮೇವಾಭಿಧೀಯತಾಂ"** ಎಂಬ ವಾಕ್ಯದಲ್ಲಿ ಆನುಕೂಲ್ಯ ಸಂಕಲ್ಪವು ತೋರಿಬರುತ್ತದೆಂಬ ಭಾವವು. ಸಾಧಾರಣವಾಗಿ ಮನುಷ್ಯನು ವಂಚಕನಲ್ಲದೇ ಇದ್ದರೆ, **"ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ"** ಎಂದು ಹೇಳಿರುವಹಾಗೆ ಮನಸ್ಸು, ವಾಕ್ಕು, ಕರ್ಮ ಮೂರು ಏಕೀಭವಿಸುತ್ತವೆ. ಅಂತವನು ಮಹಾತ್ಮನು. ಹಾಗಿಲ್ಲದೆ **"ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ"** ಎಂದು ಹೇಳಿರುವ ಹಾಗೆ ಮನಸ್ಸಿನಲ್ಲೇ ಒಂದು, ಮಾತಿನಲ್ಲೇ ಒಂದು, ಕರ್ಮದಲ್ಲೇ ಒಂದು, ಹೀಗೆ ವಂಚಕನಿಗೆ ಬೇರೆ ಬೇರೆ ಯಾಗಿರುತ್ತದೆ. ಈ ಸಂದರ್ಭದಲ್ಲಾದರೋ, ವಂಚನೆಗೆ ಕಾರಣವಿಲ್ಲದಿರುವದರಿಂದ, ಮನದ ಸಂಕಲ್ಪಾನುಗುಣವಾಗಿ ವಾಕ್ಕಿನಪ್ರವೃತ್ತಿಯಿರುತ್ತದೆಂಬಭಿಪ್ರಾಯವು.

೩. ಹೀಗೆ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನೆ ತೋರುವ ವಾಕ್ಯ

---

(೩) ರಾಮಾ. ಸುಂದರ. ೨೭.೪೪.

(೩) "ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಂ" ಎನ್ರು ಪ್ರೋಕ್ತತ್ತು ನಿರ್ಕ್ಕಿರ ನಿಲೈಯೈ ಚೊಲ್ಲುಗೈಯಾಲೇ ಅಧಿಕಾರವಾನ ಆಕಿಂಚನ್ಯಮುಮ್, ಅದಿನುಡೈಯ ಅನುಸಂಧಾನ ಮುಖತ್ತಾಲೆ ವನ್ದ ಗರ್ವಹಾನ್ಯಾದಿರೂಪವಾಯ್ ಅಙ್ಗವಾನ ಕಾರ್ಪಣ್ಯಮುಮ್ ಶೊಲ್ಲಿತ್ತಾಯಿತ್ತು.

ಗಳನ್ನು ನಿದರ್ಶಿಸಿ ಮುಂದೆ ಮೂರನೆಯದಾದ ಕಾರ್ಪಣ್ಯಕ್ಕೆ ನಿದರ್ಶನ ವಾಕ್ಯವನ್ನು ತೋರಿಸುತ್ತಾರೆ. **ಹಿ** - ಯಾವ ಕಾರಣದಿಂದ, **ರಾಘವಾತ್** - ಶ್ರೀರಾಮನ ದೆಶೆಯಿಂದ, **ರಾಕ್ಷಸಾನಾಂ** - ರಾಕ್ಷಸರಾದ ನಮಗೆ, ಘೋರವಾದ ಭಯವು, **ಉಪಸ್ಥಿತಂ** – ಸನ್ನಿಹಿತವಾಗಿ ಪ್ರಾಪ್ತವಾಗಿರುತ್ತದೋ, ಆ ಕಾರಣದಿಂದ ಮುಂದೆ **"ಅಭಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ"** ಎಂದರೆ ಸೀತೆಯು ಶರಣಾಗತರಿಗೆ ಪ್ರಸನ್ನಳಾದವಳು, ಆದುದರಿಂದ ಅವಳೊಬ್ಬಳೇ ನಮ್ಮನ್ನು ರಕ್ಷಿಸಲು ಸಮರ್ಥಳು ಎಂದಿರುತ್ತದೆ. ಶ್ರೀರಾಮನ ದೆಶೆಯಿಂದ ಇಂತಹ ಘೋರವಾದ ಭಯವು ರಾಕ್ಷಸರಾದ ತಮಗೆ ಪ್ರಾಪ್ತವಾಗಿದೆ ಎಂದು, **ಪ್ರೋಕ್ತತ್ತು** - ಬೇರೇ ಗತಿಯಿಲ್ಲದೆ, **ನಿರ್ಕ್ಕಿರನಿಲೈಯೈ** - ಇರುವ ಸ್ಥಿತಿಯನ್ನು, **ಚೊಲ್ಲುಗೈಯಾಲೇ** - ಹೇಳುವದರಿಂದ, **ಅಧಿಕಾರವಾನ ಆಕಿಂಚನ್ಯಮುಮ್** - ಅಧಿಕಾರ ವಿಶೇಷವೆಂದು ಹೇಳಿಸಿಕೊಳ್ಳುವ ಆಕಿಂಚನ್ಯವೂ, **ಅದಿನುಡೈಯ** - ಆ ಆಕಿಂಚನ್ಯದ, **ಅನುಸನ್ಧಾನ ಮುಖತ್ತಾಲೆ** – ಸ್ಮರಣೆ ಮೂಲಕ, **ವನ್ದ** - ಬಂದ ಎಂದರೆ ಉಂಟಾದ, **ಗರ್ವಹಾನ್ಯಾದಿರೂಪವಾಯ್** - ಗರ್ವಶೂನ್ಯತೆಯೇ ಮೊದಲಾದ ರೂಪದಿಂದ, ಅಂಗವಾದ ಕಾರ್ಪಣ್ಯವೂ, **ಶೊಲ್ಲಿತ್ತಾಯಿತ್ತು** - ಹೇಳಲ್ಪಟ್ಟಿತು. ಇಲ್ಲಿ **ಅದಿ**ಶಬ್ದದಿಂದ ದೈನ್ಯಸೂಚಕೋಕ್ತಿಯು ಸೂಚಿಸಲ್ಪಟ್ಟಿತು. ರಾಕ್ಷಸರಿಗೆಲ್ಲಾ ಘೋರಭಯಪ್ರಾಪ್ತವಾಗಿದೆ ಎಂದು ಹೇಳಿರುವದರಿಂದ ಕಾರ್ಪಣ್ಯವು ತನಗೆ ಬೇರೆ ಗತಿಯಿಲ್ಲವೇ ಎಂಬುವದರಿಂದಲಾಗಲಿ, ಅದರಿಂದ ತೋರಿಬರುವ ಗರ್ವಹಾನಿ, ದೈನ್ಯ ಇವುಗಳಿಂದಲಾಗಲಿ ತೋರಿ ಬರುತ್ತದೆಂಬ ಭಾವವು. ಮುಂದೆ ಮಹಾ ವಿಶ್ವಾಸ ತೋರುವ ವಾಕ್ಯವನ್ನು ಕುರಿತು ಹೇಳುತ್ತಾರೆ. "**ಹೇ ರಾಕ್ಷಸ್ಯಃ** - ಓ ರಾಕ್ಷಸ ಸ್ತ್ರೀಯರುಗಳಿರಾ, **ಮಹತೋ ಭಯಾತ್** - ಮಹತ್ತಾದ ಭಯದಿಂದ, **ಪರಿತ್ರಾತುಂ** - ರಕ್ಷಿಸಲು, **ಏಷಾ** - ಈ ಸೀತೆಯು, **ಅಲಂ** - ಸಮರ್ಥಳು" **ಎನ್ಗೈಯಾಲುಮ್** - ಎಂದು ಹೇಳಿರುವದರಿಂದಲೂ, ಮತ್ತು **ಇತ್ಯೈ** – ಈ ವಾಕ್ಯವನ್ನೇ" **ವಿವರಿತ್ತುಕೊಣ್ಡು**-

(೪) ರಾಮಾ. ಸುಂದರ. ೨೭.೪೩.

(೪) ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ ” ಎನ್ಗೈಯಾಲುಮ್, ಇತ್ತೈ ವಿವರಿತ್ತುಕೊಣ್ಡು (೫) “ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಮ್ ಎನ್ರು ತಿರುವಡಿ ಅನುವದಿಕ್ಕೈಯಾಲುಮ್, ಪೆರುಮಾಳೊರುತ್ತನೈನಿಗ್ರಹಿಕ್ಕ ಪಾರ್ಕ್ಕಿಲುಮ್ ಅವರ ಶೀತ್ತತ್ತೈಯಾತ್ತಿ, ಇವಳ್ ರಕ್ಷಿಕ್ಕವಲ್ಲವಳಾಕೈಯಾಲೇ ರಕ್ಷಿಷ್ಯತೀತಿ ವಿಶ್ವಾಸಮ್ ಶೊಲ್ಲಪ್ಪಟ್ಟದು.

ವಿವರಿಸಿ ಎಂದರೆ ವ್ಯಾಖ್ಯಾನರೂಪವಾಗಿ ವಿಸ್ತರಿಸಿ, **“ಅಲಮೇಷಾಂ ಪರಿತ್ರಾತುಂ ರಾಘವಾದ್ರಾಕ್ಷಸೀಗಣಮ್ ”** ಎಂದು, **ತಿರುವಡಿ** - ಆಂಜನೇಯನು, **ಅನುವದಿಕ್ಕೈಯಾಲುಮ್** - ಅಂಗದ ಮೊದಲಾದ ವಾನರ ಪ್ರಮುಖರ ಸನ್ನಿಧಿಯಲ್ಲಿ ವೃತ್ತಾಂತವನ್ನು ಅರಿಕೆಮಾಡಿಕೊಳ್ಳುವಾಗ ಅನುವಾದ ಮಾಡಿ ಹೇಳಿರುವದರಿಂದ, ಎಂದರೆ “ಮಹತ್ತಾದ ಭಯದಿಂದ ರಕ್ಷಿಸಲು ಈ ಜನಕನಂದನೆಯು ಶಕ್ತಳು ” ಎಂದು ಹೇಳಿದ ವಾಕ್ಯದಲ್ಲಿ ಮಹತ್ತಾದ ಭಯವ್ಯಾವುದೆಂದರೆ, ಶಿಷ್ಟಪರಿಪಾಲನೆಗಾಗಿ ದುಷ್ಟನಿಗ್ರಹದಲ್ಲಿ ಬದ್ಧಕಂಕಣನಾಗಿ ಸರ್ವ ಶಾಸ್ತಾವಾದ ಶ್ರೀರಾಮನಿಂದುಂಟಾದ ಭಯದಿಂದ ರಕ್ಷಿಸಲು ಈಕೆ ಈಗ ಸಮರ್ಥಳು ಎಂದು ಅನುವಾದಮಾಡಿ ಆಂಜನೇಯನು ಅರಿಕೆಮಾಡಿಕ್ಕೊಂಡುದದರಿಂದಲೂ, **ಪೆರುಮಾಳ್** - ಸರ್ವೇಶ್ವರನು, **ಒರುತ್ತನೈ** - ಒಬ್ಬ ಅಧರ್ಮಿಯನ್ನು, **ನಿಗ್ರಹಿಕ್ಕ ಪಾರ್ಕ್ಕಿಲುಮ್** - ನಿಗ್ರಹಿಸಬೇಕೆಂದಿದ್ದರೆ, **ಅವರ್ ಶೀತತ್ತೈ ಯಾತ್ತಿ** - ಅವರ ಎಂದರೆ ತನ್ನ ಪತಿಯಾದ ಸರ್ವೇಶ್ವರನ ಕೋಪವನ್ನು ಆರಿಸಿ, **ಇವಳ್** - ಈ ಸರ್ವೇಶ್ವರಪತ್ನಿಯು ರಕ್ಷಿಸಲು ಸಮರ್ಥಳಾದುದರಿಂದ, **ರಕ್ಷಿಷ್ಯತೀತಿ ವಿಶ್ವಾಸಮ್** - ರಕ್ಷಿಸಿಯೇ ರಕ್ಷಿಸುವಳೆಂಬ ಮಹಾ ವಿಶ್ವಾಸವು, **ಶೊಲ್ಲಪಟ್ಟದು** - ಹೇಳಲ್ಪಟ್ಟಿತು. ಶ್ರೀಮನ್ನಾರಾಯಣನು ಶಿಷ್ಟಪರಿಪಾಲನೆಯಲ್ಲಿ ಕಂಕಣಬದ್ಧನು. ಅಂತಹ ಶಿಷ್ಟರಿಗೆ ವೈರಿಗಳಾಗಿಯೂ, ಅಧರ್ಮಪರರಾಗಿಯೂ, ಇರುವ ದುಷ್ಟರ ನಿಗ್ರಹವೂ ಕೂಡ ನಾರಾಯಣನಿಗೆ ಅತ್ಯಾವಶ್ಯಕವು. ಸರ್ವೇಶ್ವರನು ಶಿಷ್ಟರಿಗೆ ಅನುಗ್ರಹ ಮಾಡುವ ಕೆಲಸವನ್ನು ತನ್ನ ಸತಿಗೆ ಕೊಟ್ಟು ದುಷ್ಟರನ್ನು ಶಿಕ್ಷಿಸುವ ಕೆಲಸವನ್ನು ಶಾಸ್ತಾವಾಗಿ ತಾನು ವಹಿಸಿರುತ್ತಾನೆ. ಹೀಗೆ ಕಾರ್ಯವಿಭಾಗವನ್ನು ಮಾಡಿಕೊಂಡಿರುತ್ತಾರೆ. (೫೮ ನೆಯ ಪುಟವನ್ನು ಪರಾಂಬರಿಸಿ) ಆದುದರಿಂದ ಲಕ್ಷ್ಮಿಗೆ ನಿಗ್ರಹವು ಅಷ್ಟು ಇಷ್ಟವಾದುದಲ್ಲವು, “ಅನುಗ್ರಹಮಯೀಂ ವಂದೇ ನಿತ್ಯ

(೫). ರಾಮಾ. ಸುಂದರ. ೨೭.-೪೧,೪೩. (೫) ರಾಮಾ. ಸುಂದರ ೫೮-೯೧.

(೫) **"ಅಭಿಯಾಚಾಮವೈದೇಹೀಮೇತದ್ಧಿ ಮಮ ರೋಚತೇ ಭರ್ತ್ಸಿತಾಮಪಿ ಯಾಚಧ್ವಂ ರಾಕ್ಷಸ್ಯಃ ಕಿಂ ವಿವಕ್ಷಯಾ" ಎನ್ನೆ ಯಾಲೇ ಗೋಪ್ತೃತ್ವವರಣಂ ಶೊಲ್ಲಿತ್ತಾಯಿತ್ತು.**

ಮಜ್ಞಾತ ನಿಗ್ರಹಾಂ" ಎಂದು ಇವರೇ ಯತಿರಾಜ ಸಪ್ತತಿಯಲ್ಲಿ ಹೇಳಿರುವ ಹಾಗೆ, ಅನುಗ್ರಹವಲ್ಲೇ ಈಕೆಗೆ ಇಷ್ಟವು. ಆದುದರಿಂದ ಈಗ ಈ ರಾಕ್ಷಸ ಸ್ತ್ರೀಯರು ರಾವಣ ಪ್ರೀತ್ಯರ್ಥವಾಗಿ ಇಂತಹ ಅನುಗ್ರಹಮಯಳಾದ ಸೀತೆ ಗೇನೇ ಕ್ರೂರವಾಗಿ ನಟಿಸಿ ಹಿಂಸಿಸಿರುತ್ತಾರೆ. ಆದುದರಿಂದ ಶ್ರೀರಾಮನು ಶಾಸ್ತಾವಾದುದರಿಂದ ಕೋಪಗೊಂಡು ಶಿಕ್ಷಿಸುವದೇನೋ ನಿಶ್ಚಯವು. ಆದು ದರಿಂದ ಈ ಅನುಗ್ರಹಮಯಳಾದ ಸೀತೆಯ ಅನುಗ್ರಹಕ್ಕೆ ತಾವು ಪಾತ್ರ ರಾದರೆ, ತನ್ನ ವಾತ್ಸಲ್ಯಾತಿಶಯದ ಮಾಹಾತ್ಮ್ಯೆಯಿಂದ ಶ್ರೀರಾಮನ ಕೋಪ ದಿಂದ ರಕ್ಷಿಸಲು ಈಕೆಯೇ ಶಕ್ತಳು ಎಂದು ತ್ರಿಜಟೆಯು **ಮಹತೋ ಭಯಾತ್ ಪರಿತ್ರಾತುಂ ಅಲಂ** - ಎಂದು ಹೇಳಿದಳು. ಈ ತ್ರಿಜಟಾ ಅಭಿ ಪ್ರಾಯವನ್ನು ವಿವರಿಸಿ, ಆ ಮಹದ್ಭಯವು ಎತ್ತಣದು ಎಂದರೆ ಶ್ರೀರಾಮನ ಕೋಪಮೂಲವಾದುದೆಂದು ವಿವರಿಸಿ ಆಂಜನೇಯನು ಹೇಳಿದನು ಎಂಬ ತಾತ್ಪ ರ್ಯವು. ಆದರೆ, ಹೀಗೆ ರಕ್ಷಿಸಲು ಶಕ್ತಳು ಎಂದು ಇಷ್ಟು ಮಾತ್ರ ಹೇಳಿದರೆ ಮಹಾ ವಿಶ್ವಾಸವನ್ನು ಹೇಳಿದ ಹಾಗೆ ಹೇಗಾಯಿತೆಂದರೆ, ಸರ್ವೇಶ್ವರನಿಗೆ ಈಕೆಯು ಅಧೀನಳಾದರೂ, ತನ್ನ ಪತಿಯನ್ನೂ ಕೂಡ ವಶಮಾಡಿಕೊಂಡು, ಆತನ ಕೋಪದಿಂದಲೂ ರಕ್ಷಿಸುವ ಸಾಮರ್ಥ್ಯವಿದ್ದರೆ ಸರ್ವ ಶಕ್ತತೆಯುಂಟೆಂಬು ವದು ತೋರಿಬರುವದರಿಂದ, ಅಂಥಾವಳು ರಕ್ಷಿಸುವದರಲ್ಲಿ ಮಹಾವಿಶ್ವಾಸವು ಎಂದರೆ ಪೂರ್ಣ ನಂಬಿಕೆಯುಂಟೆಂಬುವದು ಸ್ವತಸ್ಸಿದ್ಧವು. ಈ ಪ್ರಕರಣವು ಲಕ್ಷ್ಮಿಗೆ ಸರ್ವೇಶ್ವರನ ಹಾಗೆ ಉಪಾಯತ್ವ ಪುರುಷಕಾರತ್ವಗಳುಂಟೆಂಬ ಶಾಸ್ತ್ರಾ ರ್ಥವನ್ನು ವ್ಯಕ್ತಪಡಿಸುತ್ತದೆ. ಈ ಅಂಶಗಳೆಲ್ಲಾ ಬಹು ವಿಸ್ತಾರವಾಗಿ ಶ್ರೀಸ್ತುತಿ ಚತುಶ್ಶ್ಲೋಕೀಗಳ ವ್ಯಾಖ್ಯಾನದಲ್ಲಿ ಉಪಪಾದಿಸಲ್ಪಟ್ಟಿವೆ. ಮುಂದೆ ಗೋಪ್ತೃತ್ವ ವರಣವನ್ನು ನಿದರ್ಶಿಸುವ ವಾಕ್ಯವನ್ನು ಉದಾಹರಿಸುತ್ತಾರೆ.

ವೈದೇಹೀಂ-ಸೀತೆಯನ್ನು ಕುರಿತು **ಅಭಿಯಾಚಾಮ**-ಚನ್ನಾಗಿ ಅಭಯ ವನ್ನು ಪ್ರಾರ್ಥಿಸೋಣ, **ಏತದ್ಧಿ**-ಇದೀಗ, **ಮಮ ರೋಚತೇ** - ನನಗೆ ಅಭಿ ಮತವಾದುದು, **ಹೇ ರಾಕ್ಷಸ್ಯಃ** - ಓ ರಾಕ್ಷಸ ಸ್ತ್ರೀಯರುಗಳಿರಾ, **ಭರ್ತ್ಸಿತಾ ಮಪಿ** - ನಿಮ್ಮಗಳಿಂದ ಇದಕ್ಕೆ ಮುಂಚೆ ಸೀತೆಯು ಭಯಪಡಿಸಲ್ಪಟ್ಟಿದ್ದರೂ

---

(೫) ರಾಮಾ. ಸುಂ. ೨೭.೪೧

ಕೂಡ, **ಯಾಚಧ್ವಂ** - ಅಭಯವನ್ನಪೇಕ್ಷಿಸಿರಿ, **ವಿವಕ್ಷಯಾ** - ಹಾಗೆ ಭಯ ಪಡಿಸಲ್ಪಟ್ಟವಳಾದುದರಿಂದ ಅಂಥಾವರು ನಮ್ಮ ವಿಷಯದಲ್ಲಿ ಪ್ರಸನ್ನಳಾಗು ವಳೋ ಇಲ್ಲವೋ ಎಂಬ ಸಂದೇಹದಿಂದ, **ಕಿಂ** – ಏನು ಪ್ರಯೋಜನವು'' **ಎನ್ನೈಯಾಲೆ** - ಎಂದು ಹೇಳಿರುವದರಿಂದ, ಗೋಪ್ತೃತ್ವವರಣವು, **ಶೊಲ್ಲಿ ತ್ತಾಯಿತ್ತು** - ಹೇಳಲ್ಪಟ್ಟಿದ್ದಾಯಿತು. ಇಲ್ಲಿ ಅಭಯ ಪ್ರಾರ್ಥನೆಯು, **ಅಭಿ ಯಾಚಾಮ, ಯಾಚಧ್ವಂ** ಎಂಬ ಪದಗಳಿಂದ ತೋರಿಬರುತ್ತದೆ. ಇಲ್ಲಿ ಸಾಧನೋಪಾಯವು ಹೇಳಲ್ಪಟ್ಟರೂ ಅದರಲ್ಲಿ ಅಂತರ್ಗತವಾಗಿರುವ ಗೋಪ್ತೃ ತ್ವವರಣವೂ ಹೇಳಲ್ಪಟ್ಟಿತು. **ಭರ್ತ್ಸಿತಾಮಪಿ ಯಾಚಧ್ವಂ** - ಹೇಳಿರುವದ ರಿಂದ, ಎಷ್ಟು ದೋಷಿಯಾಗಿದ್ದರೂ ಯಾವಾಗ ಶರಣಾಗತಿ ಅನುಷ್ಠಿಸಲ್ಪ ಟ್ಟಿತೋ, ಆಗ ಸೀತೆಯು ಪ್ರಸನ್ನಳಾಗಿ ರಕ್ಷಿಸುವಳೆಂಬುವದು ಸಿದ್ಧವು. ರಾವಣವಧಾನಂತರ ಈ ರಾಕ್ಷಸಸ್ತ್ರೀಯರುಗಳು **ತುಂಬಾ** ಸೀತೆಗೆ ಹಿಂಸೆ ಕೊಟ್ಟಿದ್ದರಿಂದ, ಅವರುಗಳನ್ನೆಲ್ಲಾ ಕೊಂದುಬಿಡಲು, ಆಂಜನೇಯನು ಸೀತೆಯ ಅನುಜ್ಞೆಯನ್ನು ಪ್ರಾರ್ಥಿಸಲು, ಆಗ ಆಕೆಯು

"ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ ।
ಕಾರ್ಯಂ ಕರುಣಮಾರ್ಯೇಣ ನಕಶ್ಚಿನ್ನಾಪರಾಧ್ಯತಿ'' ॥

ಎಂದು ಹೇಳಿ, ಯಾರು ತಾನೇ ದೋಷಿಗಳಲ್ಲವು, ದೋಷಿಗಳ ವಿಷಯದಲ್ಲೂ ಕರುಣೆಯನ್ನು ತೋರಿಸುವದು ಪೂಜ್ಯರ ಲಕ್ಷಣವೆಂದು ಹೇಳಿದುದರಿಂದ, ತ್ರಿಜಟೆಗೆ ಸೀತೆಯು ದೋಷಿಗಳನ್ನೂ ರಕ್ಷಿಸುವಳೆಂಬುವದರಲ್ಲಿ ಪೂರ್ಣ ನಂಬಿಕೆಯು. ಆದುದರಿಂದ **ಭರ್ತ್ಸಿತಾಮಪಿ ಯಾಚಧ್ವಂ** ಎಂದು **ಅಪಿ ಪ್ರಯೋಗವು**, ಈ ವಿಷಯದಲ್ಲಿ ಮಹಾವಿಶ್ವಾಸವು ಆವಶ್ಯಕವೆಂದು ಹೇಳಲು ಹೊರಟು, **ಕಿಂ ವಿವಕ್ಷಯಾ** ಎಂದು ಉಪದೇಶಿಸುತ್ತಾಳೆ. ಹೀಗೆ **ತ್ರಿಜಟಾ** ಉಪದೇಶದಿಂದ, ಪ್ರಪತ್ತಿಯು ಗುರುಮುಖೇನ ಅನುಷ್ಠಿಸತಕ್ಕ ದ್ದೆಂಬುವದು ವ್ಯಕ್ತವು. ಶಿಷ್ಯನಲ್ಲಿ **ಕಾರ್ಪಣ್ಯ** ಮಹಾವಿಶ್ವಾಸಾದಿ ಅಂಗ ಗಳು **ಇರುವದು** ಮುಖ್ಯವೇ ವಿನಾ, ಆತನು ದೋಷಿ ಅಥವಾ ದೋಷಿಯ ಲ್ಲವೆಂಬ ವಿವೇಚನವು ಬೇಕಿಲ್ಲವು ಎಂಬುವದೂ ಇದರಿಂದ ತೋರಿ ಬರುತ್ತದೆ, ಏಕೆಂದರೆ " **ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂಬ ವಾಗ್ದಾನದಿಂದಲೇ ಇದು ಸುವ್ಯಕ್ತವು.

ಈ ಅಂಗಗಳೆಲ್ಲಾ ಈ ಮೇಲಿನ ವಾಕ್ಯಗಳಿಂದ ತೋರಿಬರುತ್ತದೆಂದೇನೋ ಒಪ್ಪಬಹುದು. ಆದರೆ ಅಂಗಿಯಾದ ಆತ್ಮನಿಕ್ಷೇಪವೇ ಇಲ್ಲದಿದ್ದರೆ, ಅಂಗಗ ಳಿರುವದು ವ್ಯರ್ಥವು ಆದುದರಿಂದ ಇಲ್ಲಿ **ಆತ್ಮನಿಕ್ಷೇಪವನ್ನೂ** ಕೂಡ ನಿದರ್ಶಿಸುತ್ತಾರೆ.

ಇನ್ನೈ ಐನ್ದುಕ್ಕುಮ್ ಅಙ್ಗಿಯಾನ ವಾತ್ಮನಿಕ್ಷೇಪಮ್ (೧) **“ಪ್ರಣಿಪಾತಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ.” ಎನ್ರು ಪ್ರಸಾದ ಕಾರಣ ವಿಶೇಷತ್ತೈ ಚೊಲ್ಲುಗಿರ ಪ್ರಣಿಪಾತ ಶಬ್ದತ್ತಾಲೆ ವಿವಕ್ಷಿತಮಾಯಿತ್ತು. ಆಕೈಯಾಲ್** (೨) **“ನ್ಯಾಸಃ ಪಂಚಾಂಗ ಸಂಯುತಃ”**

೬. **ಇನ್ನೈ ಐನ್ದುಕ್ಕುಮ್** - ಈ ಮೇಲೆ ಹೇಳಿದ ಐದು ಅಂಗಗಳಿಗೂ, ಅಂಗಿಯಾದ **ಆತ್ಮನಿಕ್ಷೇಪವು**, “**ಮೈಥಿಲೀ** - ಮಿಥಿಲಾಧಿಪತಿಯ ಮಗಳಾದ, **ಜನಕಾತ್ಮಜಾ** – ರಾಜರ್ಷಿಯಾದ ಜನಕಮಹಾರಾಜನ ಪುತ್ರಿಯಾದುದರಿಂದಲೇ ಸೀತೆಯು **ಪ್ರಣಿಪಾತಪ್ರಸನ್ನಾಹಿ** - ದಂಡವತ್ಪ್ರಣಾಮದಿಂದ ಎಂದರೆ ಶರಣಾಗತಿಯಿಂದ, ಪ್ರಸನ್ನಳಪ್ಪಳ್” **ಎನ್ರು** - ಎಂದು, **ಪ್ರಸಾದ ಕಾರಣವಿಶೇಷತ್ತೈ** - ಅನುಗ್ರಹಕ್ಕೆ ವಿಶೇಷವಾದ ಕಾರಣವನ್ನು, **ಚೊಲ್ಲುಗಿರ** - ಬೋಧಿಸುವ, **ಪ್ರಣಿಪಾತ** ಶಬ್ದದಿಂದ, **ವಿವಕ್ಷಿತಮಾಯಿತ್ತು** – ನಿರ್ದೇಶಿಸಲ್ಪಟ್ಟಿತು. **ಪ್ರಣಿಪಾತಪ್ರಸನ್ನಾ ಹಿ** ಎಂಬುವವಾಕ್ಯದಲ್ಲಿ ಆತ್ಮನಿಕ್ಷೇಪವು ಹೇಳಲ್ಪಟ್ಟಿತು ಎಂಬಭಿಪ್ರಾಯವು. **ಪ್ರಣಿಪಾತ** ಶಬ್ದಕ್ಕೆ ಪ್ರಕರ್ಷೇಣ ನಿಪಾತವೆಂಬ ವ್ಯುತ್ಪತ್ತಿಯಿಂದ ದಂಡವತ್ಪ್ರಣಾಮವು ಹೇಳಲ್ಪಟ್ಟಿತು. ಈ ನಮಸ್ಕಾರವೇ ಶರಣಾಗತಿಯು, ತನ್ನ ಆತ್ಮಾವನ್ನೂ ಮತ್ತು ತನ್ನ ರಕ್ಷಾಭರಣವನ್ನೂ ಸಮರ್ಪಿಸುವವೇ ಶರಣಾಗತಿಯು. ಇದಕ್ಕೆ ನ್ಯಾಸ, ಭರನ್ಯಾಸ, ಆತ್ಮನಿಕ್ಷೇಪಗಳೆಂಬ ಹೆಸರುಗಳುಂಟು. ಇದೇ ದ್ವಯಮಂತ್ರದ **ನಮಃ**ಎಂಬ ಶಬ್ದದಿಂದ ಬೋಧಿತವಾಗುತ್ತದೆ. ಆದುದರಿಂದಲೇ **ಪ್ರಣಿಪಾತ** ಶಬ್ದಪ್ರಯೋಗವು. ಇದನ್ನೇ ಮಹರ್ಷಿಯೂ (೩) “ **ದ್ರೌಪದ್ಯಾ ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಂ**” ಎಂಬಲ್ಲಿ, ದ್ರೌಪದಿಯೊಂದಿಗೆ ಪಾಂಡವರೆಲ್ಲರೂ ಶರಣಾಗತಿಯನ್ನನುಷ್ಠಿಸಿದರು ಎಂದು ಹೇಳಲು **ನಮಶ್ಚಕ್ರುಃ** ಎಂದು ಪ್ರಯೋಗಿಸಿರುತ್ತಾರೆ. ಮಹಾ ಕರ್ಮನಿಷ್ಠನಾದ ಶಾಸ್ತ್ರಜ್ಞನಾದ ಜನಕಮಹಾರಾಜನ ಹತ್ತಿರ ಬೆಳದವಳಾದುದರಿಂದ ಶರಣಾಗತವಾತ್ಸಲ್ಯಾತಿಶಯವನ್ನು ಚನ್ನಾಗಿ ಅರಿತವಳಾಗಿ, ಪ್ರಣಿಪಾತ ಪ್ರಸನ್ನಳು ಎಂಬಭಿಪ್ರಾಯವು. ಕೆಲವು ಕೋಶಗಳಲ್ಲಿ **ಪ್ರಣಿಪಾತ** ಶಬ್ದಕ್ಕೆ ಬದಲಾಗಿ **ಅಭಿಪಾತ**ವೆಂದಿರುತ್ತದೆ, ಅಭಿಪಾತವೆಂದರೆ ಅಭಿಮುಖವಾಗಿ ದಂಡವತ್ಪ್ರಣಾಮವೆಂಬರ್ಥವು, ಹಿಂದೆ ಉಪಪಾದಿಸಿ ನಿದರ್ಶಿಸಿದ ರೀತಿಯಲ್ಲಿ ಐದು ಅಂಗಗಳೂ ಈ ತ್ರಿಜಟೆಯು ಉಪದೇಶಿಸಿದ ಶರಣಾಗತಿಯಲ್ಲಿ ಅಡಗಿವೆ ಎಂದು ಸಂಗ್ರಹಿಸಿ ಮುಂದಿನ ವಾಕ್ಯದಲ್ಲಿ ಹೇಳುತ್ತಾರೆ.

(೧). ರಾ. ಸುಂ. ೨೭,೪೩ (೨). ಲಕ್ಷ್ಮೀತಂತ್ರ ೧೭ ೭೪ (೩). ಭಾರ. ಆನ. ೧೯೨.೫೬

ಎಜ್ಞ್ಗರ ಶಾಸ್ತ್ರಾರ್ಥಮಿಜ್ಞ್ಗ ಪೂರ್ಣಂ. ಇಪ್ಪಡಿ ಉಪದೇಶಿಕ್ಕ ರಾಕ್ಷಸಿಗಳ್ ವಿಲಕ್ಕಾದ ಮಟ್ಟೇ ಪತ್ತಾಶಾಕಪ್ಪಿರಾಟ್ಟಿ ತನ್ವಾತ್ಸಲ್ಯಾತಿಶಯತ್ತಾಲೆ (೧) "ಭವೇಯಂ ಶರಣಂ ಹಿ ವಃ" "ಎನ್ರುಳಿಚ್ಚೆಯ್‌ದಾಳ್.

ಆಗೈಯಾಲ್ – ಈ ಮೇಲೆ ಉದಾಹರಿಸಿದ ವಾಕ್ಯಗಳಲ್ಲಿ ಎಲ್ಲಾ ಅಂಗಗಳೂ ಅಂಗಿಯೂ ಸಹ ಶಾಬ್ದವಾಗಿಯಾಗಲಿ ಆರ್ಥವಾಗಿಯಾಗಲಿ ತೋರಿಬರುವವರಿಂದ, "ನ್ಯಾಸವು ಐದು ಅಂಗಗಳಿಂದ ಸೇರಿದುದು" ಎಂಬ **ಶಾಸ್ತ್ರಾರ್ಥಂ** - ಶಾಸ್ತ್ರಾಭಿಪ್ರಾಯವು, **ಇಜ್ಞ್ಗೀ** - ಈ ತ್ರಿಜಟಾ ಸ್ವಪ್ನ ಪ್ರಕರಣದ ಉಪದೇಶದಲ್ಲಿ, **ಪೂರ್ಣಂ** – ಸಂಪೂರ್ಣವಾಗಿ ತೋರಿಬರುತ್ತದೆ. ಇಲ್ಲಿ **ಶಾಸ್ತ್ರಾರ್ಥವೆಂದು** ಹೇಳಿರುವದರಿಂದ ಈ ನ್ಯಾಸವಿದ್ಯೆಯು **ಕಲ್ಪಿತವಲ್ಲವು**, ಶಾಸ್ತ್ರಗಳಲ್ಲಿ ಉಪಪಾದಿಸಲ್ಪಟ್ಟಿರುತ್ತದೆಂದು ಹಿಂದೆ ಹೇಳಿದ ಅಭಿಪ್ರಾಯವೇ ಪುನಃ ಸಮರ್ಥಿಸಲ್ಪಟ್ಟಿರುತ್ತದೆ.

ಹೀಗೆ ಪ್ರಪತ್ತಿಯನ್ನು ಐದು ಅಂಗಗಳಿಂದ ಯುಕ್ತವಾಗಿ, ಅನುಷ್ಠಿಸುವದು ಯುಕ್ತವೆಂದು ತ್ರಿಜಟೆಯಿಂದ ಉಪದೇಶಿಸಲ್ಪಟ್ಟಿತು. ಹೀಗೆ ಶರಣಾಗತಿಯನ್ನು ಅನುಷ್ಠಿಸಿದುದಾದರೆ, ಅಂತಹ ಶರಣಾಗತಿಯು ಫಲಕಾರಿಯಾಗುವದರಲ್ಲಿ ನಿಸ್ಸಂದೇಹವೆನ್ನುವದಕ್ಕೆ ಪ್ರಮಾಣವನ್ನು ತೋರಿಸುವದೂ, ಅಲ್ಲದೆ ಶಿಷ್ಯರಿಗಾಗಿ ಗುರುವು ಸಾಂಗಪ್ರಪದನವನ್ನು ಮಾಡುವದರಿಂದ ಶಿಷ್ಯರು ಫಲವನ್ನು ಹೊಂದಬಹುದೆಂದೂ, ಆದರೆ ಅವರಲ್ಲಿ ಪ್ರಾತಿಕೂಲ್ಯವರ್ಜನೆ ಆವಶ್ಯಕವೆಂದೂ, ತೋರಿಬರುತ್ತವೆ. ಇಲ್ಲಿ ತ್ರಿಜಟೆಯು ಶರಣಾಗತಿಯನ್ನು ಮಾಡಿದವಳು; ರಾಕ್ಷಸಿಯರು ಅನುಷ್ಠಿಸಲಿಲ್ಲವು. ಆದರೂ ತ್ರಿಜಟಾ ಶರಣಾಗತಿಯಲ್ಲಿ ರಾಕ್ಷಸಿಯರೂ ಅಂತರ್ಭೂತರಾದುದರಿಂದ ತ್ರಿಜಟೆಯೊಂದಿಗೆ ರಾಕ್ಷಸಿಯರೂ ಸಂರಕ್ಷಿಸಲ್ಪಟ್ಟರೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಇಪ್ಪಡಿ - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ. **ಉಪದೇಶಿಕ್ಕ** – ಐದು ಅಂಗಗಳಿಂದಲೂ ಕೂಡಿದ ಪ್ರಪತ್ತಿಯು ಕರ್ತವ್ಯವೆಂದು **ಉಪದೇಶಿಕ್ಕ** - ಉಪದೇಶಿಸಲಾಗಿ, **ರಾಕ್ಷಸಿಗಳ್** - ರಾಕ್ಷಸಸ್ತ್ರೀಯರು, **ವಿಲಕ್ಕಾದ ಮಟ್ಟೇ** - ಪ್ರತಿಕೂಲಾಚರಣೆ ಇಲ್ಲದಿರುವದನ್ನೇ, **ಪತ್ತಾಶಾಕ** - ಆಶ್ರಯಿಸಿದಾಗಿ ಭಾವಿಸಿ ಎಂದರೆ ಸೀತೆಯನ್ನು ಕುರಿತು ಭರ್ತ್ಸನ ಮೊದಲಾದವುಗಳನ್ನು ಮಾಡದಿರುವವನ್ನೇ ವ್ಯಾಜೀಕರಿಸಿ, **ಪಿರಾಟ್ಟಿತನ್ವಾತ್ಸಲ್ಯಾತಿಶಯತ್ತಾಲೆ** -

---

(೧). ರಾಮಾ. ಸುಂದರ. ೫೮.೮೯.

ಸೀತೆಯು ತನ್ನನ್ನಾಶ್ರಯಿಸಿದವರಲ್ಲಿರುವ ವಾತ್ಸಲ್ಯಾತಿಶಯದಿಂದ, ವಾತ್ಸಲ್ಯವೆಂದರೆ, ಅಪರಾಧಗಳನ್ನೆಲ್ಲಾ ಮನ್ನಿಸಿ ಆಕಳು ಕರುವನ್ನು ಪ್ರೀತಿಸುವ ಹಾಗೆ ಆಶ್ರಿತರನ್ನು ಪ್ರೀತಿಸುವ ಸ್ವಭಾವವು, **ರಿಪೂಣಾಮಪಿ ವತ್ಸಲಾ** ಎಂಬ ಪ್ರಯೋಗದಲ್ಲಿ **ಈ** ಅಭಿಪ್ರಾಯವು ವ್ಯಕ್ತಪಡುತ್ತದೆ; "**ಭವೇಯಂ ಶರಣಂ ಹಿ ವಃ**, ವಃ - ನಿಮಗೆ, **ಶರಣಂ** - ರಕ್ಷಕಳು, **ಭವೇಯಂ** - ಆಗುವೆನು." **ಎನ್ರು ಅರುಳಿಚ್ಚೆ ಯ್ದಾಳ್** - ಕೃಪೆಮಾಡಿ ಹೇಳಿದಳು

"**ತತಸ್ಸಾ ಹ್ರೀಮತೀಬಾಲಾ ಭರ್ತುರ್ವಿಜಯಹರ್ಷಿತಾ ।**
ಅವೋಚತ್ಯದಿತತ್ತಥ್ಯಂ ಭವೇಯಂ ಶರಣಂ ಹಿ ವಃ" ॥

ಎಂಬುವದು ಪೂರಾ ಶ್ಲೋಕವು. "**ಪ್ರಣಿಪಾತಪ್ರಸನ್ನಾಹಿ**" ಎಂದು, "**ಅಭಿಯಾಚಾಮ ವೈದೇಹೀಂ**" ಎಂದು ತ್ರಿಜಟೆಯು ಹೇಳಿ ಆಕೆಯು ಮಾಡಿದ ಶರಣಾಗತಿಯನ್ನು ಅಂಗೀಕರಿಸಿದ ಸೀತೆಯು, ತ್ರಿಜಟಾ ಮೊದಲಾದ ರಾಕ್ಷಸಿಯರನ್ನು ತನ್ನ ಕೃಪಾಕಟಾಕ್ಷದಿಂದ ವೀಕ್ಷಿಸಿ ಹೇಳುವ ಮಾತಾಗಿರುತ್ತದೆ. ಅವರುಗಳು ತನ್ನ ಭರ್ತಾವಿಗೆ ವಿಜಯ ಉಂಟೆಂದು ಸ್ವಪ್ನಾಭಿಪ್ರಾಯವನ್ನು ತಿಳಿಸಲು, ಅದಕ್ಕೆ ಲಜ್ಜಾಯುಕ್ತಳಾಗಿ, ನೀವು ಹೇಳುವದು ಸತ್ಯವಾದುದಾದರೆ ನಾನು ನಿಮಗೆ ರಕ್ಷಕಳಾಗುವೆನೆಂದು ಭರವಸೆಯನ್ನು ಕೊಟ್ಟಳು ಎಂಬ ತಾತ್ಪರ್ಯವು. ಹೀಗೆ ಸೀತೆಯು ಹೇಳಿದುದಾಗಿ ತ್ರಿಜಟಾಸ್ವಪ್ನ ಕಥನ ಪ್ರಕರಣವಾದ ೨೭ನೇ ಸರ್ಗದಲ್ಲಿ ಹೇಳಲಿಲ್ಲವು. ಬಳಿಕ ಆಂಜನೇಯನು, ಲಂಕೆಯನ್ನು ಬಿಟ್ಟು ತನ್ನ ಪರಿವಾರವನ್ನು ಸೇರಿ, ಅಂಗದಾದಿಗಳಿಗೆ ನಡೆದ ವೃತ್ತಾಂತವನ್ನೆಲ್ಲಾ ಅರಿಕೆಮಾಡಿಕೊಳ್ಳುವಾಗ, ಸೀತೆಯು ಹೀಗೆ ಹೇಳಿದುದಾಗಿ ಬರೆದಿರುತ್ತದೆ. ಮಹರ್ಷಿಯು ಹೀಗೆ ಪೌನರುಕ್ತ್ಯವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಒಂದು ಸಲ ನಡೆದ ವೃತ್ತಾಂತವನ್ನು ಇನ್ನೊಂದು ಸಮಯದಲ್ಲಿ ವ್ಯಕ್ತಪಡಿಸುವದುಂಟು.

ಆದರೆ ಸೀತೆಯು ಸ್ತ್ರೀಯು, ಸ್ತ್ರೀಯರಿಗೆ ಆತ್ಮಪ್ರಶಂಸೆಯಲ್ಲಿ ಸ್ವಾಭಾವಿಕವಾಗಿ ಇಷ್ಟವು; ಇದೂ ಅಲ್ಲದೆ ಬಾಲಳು, ಪರಾಧೀನದೆಶೆಯಲ್ಲಿ ದೀನತೆಯನ್ನು ಹೊಂದಿರುವಾಗ, ತನ್ನ ಪತಿಗೆ ಜಯವಾಗುತ್ತದೆಂಬ ಶುಭವಾರ್ತೆಯಿಂದುಂಟಾದ ಹರ್ಷದಿಂದ ಚಿತ್ತವಿಭ್ರಮವುಳ್ಳವಳು. ಇಂಥಾವಳು ಸ್ವಶಕ್ತಿ ಎಷ್ಟೆಂಬುವದನ್ನರಿಯದೆ ರಾಕ್ಷಸೀಯರಿಗೆಲ್ಲಾ ಉಪಾಯವಾಗಿ ರಕ್ಷಕಳಾಗುವಳೆಂದು ಹೇಳಿಕೊಂಡಳೆಂದು ಕೆಲವರು ಭಾವಿಸಬಹುದು. ಆದರೆ ಅಂತಹ ಸಂದೇಹಕ್ಕೆ ಕಾರಣವೇ ಇಲ್ಲವೆಂದೂ ಲಕ್ಷ್ಮಿಯೂ ಕೂಡ ಸರ್ವೇಶ್ವರನ ಹಾಗೆ ಉಪಾಯವೂ ರಕ್ಷಕಳೂ ಹೌದು ಎಂಬುವದಕ್ಕೆ ಪೂರ್ವಾಚಾರ್ಯರಲ್ಲಿ ಪೂಜ್ಯರಾದ ಶ್ರೀಪರಾಶರ ಭಟ್ಟರವರ ದಿವ್ಯಸೂಕ್ತಿಯ ಪ್ರಮಾಣವನ್ನು ಉದಾಹರಿಸುತ್ತಾರೆ.

ಇಪ್ಪಾಶುರಮ್ ಸಹೃದಯಮಾಯ್ ಫಲಪರ್ಯನ್ತಮಾನ ಪಡಿ ಯೈ (೧) "ಮಾತರ್ಮೈಥಿಲಿ ರಾಕ್ಷಸೀಸ್ತ್ವಯಿ ತಥೈವಾಽರ್ದ್ರಾಪರಾಧಾಸ್ತ್ವಯಾ । ರಕ್ಷಂತ್ಯಾ ಪವನಾತ್ಮಜಾಲ್ಲಘುತರಾ ರಾಮಸ್ಯ ಗೋಷ್ಠೀ ಕೃತಾ ।" ಎನ್ರಭಿಯುಕ್ತರ್ ವೆಳಿಯಿಟ್ಟಾರ್‌ಗಳ್.

ಇಪ್ಪಾಶುರಂ - "ಭವೇಯಂ ಶರಣಂ ಹಿ ವಃ" ಎಂಬ ಸೀತಾವಾಕ್ಯವು, **ಸಹೃದಯಮಾಯ್**-ತನ್ನ ಅಭಿಪ್ರಾಯಕ್ಕನುಸಾರವಾಗಿ, **ಫಲಪರ್ಯಂತಮಾನ ಪಡಿಯೈ** - ಫಲಪ್ರದವಾದ ರೀತಿಯನ್ನು, **"ಮಾತರ್ಮೈಥಿಲಿ"** ಎಂಬ ಶ್ಲೋಕ ಮೂಲಕ **ಅಭಿಯುಕ್ತರ್** - ಪೂಜ್ಯರಾದ ಶ್ರೀ ಪರಾಶರಭಟ್ಟರು, **ವೆಳಿಯಿಟ್ಟಾರ್‌ಗಳ್** - ಪ್ರಚುರ ಮಾಡಿದರು ಅಥವಾ ಪ್ರಕಾಶಪಡಿಸಿದರು. ಆ ಶ್ಲೋಕಾರ್ಥವೇನೆಂದರೆ:—**ಹೇ ಮೈಥಿಲಿ** - ಓ ಮಿಥಿಲಾಧಿಪತಿಯ ಕುಮಾರಿಯಾದ ಸೀತೆಯೇ, **ಹೇ ಮಾತಃ** - ಓ ಲೋಕಜನನಿಯೇ, **ತ್ವಯಿ**- ನಿನ್ನ ವಿಷಯದಲ್ಲಿ, **ತಥೈವ** - ಹಾಗೆಯೇ, **ತದೈವ** ಎಂಬ ಪಾಠಾಂತರವುಂಟು. **ತದೈವ** - ಆಗ ತಾನೆ ಎಂಬರ್ಥವು. **ಆರ್ದ್ರಾಪರಾಧಃ** - ಇನ್ನೂ ಒಣಗದೇ ಒದ್ದೆಯಾಗಿರುವ ಅಪರಾಧವುಳ್ಳವರೆಂದರೆ ಇನ್ನೂ ಆಗತಾನೇ ಹೊಸಹೊಸದಾಗಿ ಅಪರಾಧಗಳನ್ನು ಮಾಡುತ್ತಿರುವ, **ರಾಕ್ಷಸೀಃ** - ರಾಕ್ಷಸಸ್ತ್ರೀಯರುಗಳನ್ನು, **ಪವನಾತ್ಮಜಾತ್** – ಅವರನ್ನು ಕೊಲ್ಲಬೇಕೆಂದಿರುವ ವಾಯುಪುತ್ರನಾದ ಆಂಜನೇಯನಿಂದ, **ರಕ್ಷಂತ್ಯಾ** - ರಕ್ಷಿಸಿದ, **ತ್ವಯಾ** - ಅನುಗ್ರಹಮಯಳಾದ ನಿನ್ನಿಂದ, **ರಾಮಸ್ಯ ಗೋಷ್ಠೀ** - ಶ್ರೀರಾಮನ ಸಭೆಯು, ಶ್ರೀರಾಮ, ಲಕ್ಷ್ಮಣ, ಸುಗ್ರೀವ, ಆಂಜನೇಯಾದಿಗಳಿಂದ ಕೂಡಿದ ಸಭೆಯು, **ಲಘುತರಾ** - ಮಹಿಮೆಯಲ್ಲಿ ಕಡಿಮೆಯಾದುದಾಗಿ, **ಕೃತಾ** - ಮಾಡಲ್ಪಟ್ಟಿತು. ಏಕೆಂದರೆ ಉತ್ತರಾರ್ಧದಿಂದ ಹೇಳುತ್ತಾರೆ.

"ಕಾಕಂ ತಂ ಚ ವಿಭೀಷಣಂ ಶರಣಮಿತ್ಯುಕ್ತಿಕ್ಷಮೌ ರಕ್ಷತಃ ।
ಸಾನಃ ಸಾಂದ್ರಮಹಾಗಸಸ್ಸುಖಯತು ಕ್ಷಾಂತಿಸ್ತವಾಕಸ್ಮಿಕೀ"॥

ಶ್ರೀರಾಮನಾದರೋ, **ಕಾಕಂ** - ಕಾಕಾಸುರನನ್ನೂ, **ತಂ ಚ ವಿಭೀಷಣಂ** - ಮಹಾಪ್ರಸಿದ್ಧನಾಗಿ ಮಹಾ ಪ್ರಾಜ್ಞನಾದ ಆ ವಿಭೀಷಣನನ್ನೂ ಕೂಡ, ಎಂದರೆ ಶಾಂತನೂ ಸತ್ವಗುಣಯುಕ್ತನಾದ ವಿಭೀಷಣನನ್ನೂ ಕೂಡ ಎಂದು ಹೇಳಿದಹಾಗೆ, **ಶರಣಮಿತ್ಯುಕ್ತಿಕ್ಷಮೌ** - ನಿನ್ನನ್ನು ಶರಣಹೊಂದಿದೆವೆಂದು ಹೇಳಲು ಯೋಗ್ಯರಾದವರನ್ನು **ರಕ್ಷತಃ** - ರಕ್ಷಿಸಿದಂಥವನಾದ ಶ್ರೀರಾಮನು.

(೧). ಶ್ರೀಗುಣ. ೫೦.

ಅಂಥಾವನ ಗೋಷ್ಠಿಯು ಅಪುತರಾಕೃತಾ. ಇಂದ್ರಪುತ್ರನಾದ ಕಾಕಾಸುರನೂ, ರಾವಣನ ಸಹೋದರನಾದ ವಿಭೀಷಣನೂ ಸಹ ಇಬ್ಬರೂ ಬಂದು ಶರಣಾಗತರಾಗಿ ಕಾಲಿನಮೇಲೆ ಬಿದ್ದು ಪ್ರಾರ್ಥಿಸಿದನಂತರ ರಕ್ಷಿಸಲ್ಪಟ್ಟರು. ಕಾಕನೇನೋ ಮಹಾಪರಾಧಿಯು, ಆತನು ಶರಣಾಗತನಾದರೂ (೧) "**ತತಸ್ತಸ್ಯಾಕ್ಷಿಕಾಕಸ್ಯಹಿನಸ್ತಿಸ್ಮ ಸದಕ್ಷಿಣಂ**" ಎಂದು ಹೇಳಿರುವ ಹಾಗೆ ಒಂದು ಕಣ್ಣು ಕಿತ್ತು ರಕ್ಷಿಸಿದನು. ಇದಾದರೂ ಹೋಗಲಿ. "**ತಂಚ ವಿಭೀಷಣಂ**" ಅಂತಹ ವಿಭೀಷಣನನ್ನೂ ಸಹ, ಎಂತವನೆಂದರೆ, ಸತ್ವಗುಣನಿಧಿಯಾಗಿ ಮಹರ್ಷಿಯೇ ಮೊದಲಾದವರಿಂದಲೂ, ಕೊನೆಗೆ ರಾಮನಿಂದಲೂ ಸಹ, "**ವಿಭೀಷಣೋ ಮಹಾಪ್ರಾಜ್ಞಃ**" ಎಂದು ಹೊಗಳಲ್ಪಟ್ಟವನಾಗಿ, ಪರಮ ಭಾಗವತೋತ್ತಮನಾಗಿ, ಇದ್ದರೂ ಕೂಡ. **ನಿವೇದಯತ ಮಾಂಕ್ಷಿಪ್ರಂ** ಎಂದು ಭಾಗವತರ ಮೂಲಕ ಶರಣಾಗತಿಯನ್ನನುಷ್ಠಿಸಿದ್ದರೂ ಕೂಡ ಸಭೆಯಲ್ಲಿ ಚರ್ಚೆಮಾಡಿ, ಶ್ರೀರಾಮನು ಆತನನ್ನು ತನ್ನ ಸಂಗಡಕ್ಕೆ ಸೇರಿಸಿಕೊಂಡನು. ಸೀತೆಯಾದರೋ ಇನ್ನೂ ತನಗೆ ಅಪರಾಧ ಮಾಡುತ್ತಲೇ ಇದ್ದ ದುಷ್ಟ ರಾಕ್ಷಸಸ್ತ್ರೀಯರನ್ನೂ ಸಹ, ಪ್ರಪತ್ತ್ಯನುಷ್ಠಾನವು ಆವಶ್ಯಕವೆಂಬ ತ್ರಿಜಟಾ ವಾಕ್ಯವನ್ನು ಸಂಪೂರ್ಣವಾಗಿ ಅಂಗೀಕರಿಸದಿದ್ದರೂ, ತ್ರಿಜಟೆಯು ಅನುಷ್ಠಿಸಿದ ಶರಣಾಗತಿ ಮಾತ್ರದಿಂದಲೇ, ದಂಡಿಸಲು ಆಜ್ಞೆಯನ್ನು ಕೇಳಿದ ಆಂಜನೇಯನಭಯದಿಂದ ಆ ರಾಕ್ಷಸಿಯರನ್ನು ರಕ್ಷಿಸಿಬಿಟ್ಟಳು. ಆದುದರಿಂದ ಅನುಗ್ರಹಮಯಳಾದ ಸೀತೆಯು ರಾಮಗೋಷ್ಠಿಗಿಂತ ಮಹಿಮೆಯಲ್ಲಿ ಅಧಿಕಳು ಎಂಬ ಭಾವವು. ಆದುದರಿಂದ, **ಸಾ** - ಅಂತಹ ಅನುಗ್ರಹಮಯವಾದ, **ಆಕಸ್ಮಿಕೀ** - ನಿರ್ಹೇತುಕವಾದ, ಅಂತಹ ಕೃಪೆಗೆ ಅರ್ಹವಾದ ಒಂದು ಸುಗುಣ ಕೂಡ ಇಲ್ಲದಿದ್ದರೂ ನಿರ್ಹೇತುಕವಾದ, **ಕ್ಷಾಂತಿಃ** - ಕ್ಷಮೆಯು, ಅಪರಾಧಗಳನ್ನೆಲ್ಲಾ ಸಹಿಸುವ ಸ್ವಭಾವವು, **ಸಾಂದ್ರಮಹಾಗಸಃ** - **ಅಪರಾಧ ಸಹಸ್ರಭಾಜಿನಂ** ಎಂದು ಹೇಳಿರುವ ಹಾಗೆ ನಿಬಿಡವಾಗಿರುವ ಮಹಾಪರಾಧಗಳುಳ್ಳ, **ನಃ** - ನಮ್ಮುಗಳನ್ನು, **ಸುಖಯಿತು** - ನಿರತಿಶಯಾನಂದವನ್ನು ಕೊಟ್ಟು ಸುಖಿಗಳನ್ನಾಗಿ ಮಾಡಲಿ ಎಂಬ ಪ್ರಾರ್ಥನೆಯು.

ಈ ಶ್ಲೋಕದಲ್ಲಿ ಉಪಪಾದಿಸಲ್ಪಟ್ಟ ರಾಕ್ಷಸಸ್ತ್ರೀಯರು ಮಾಡುತ್ತಿದ್ದ ಪ್ರತಿಕೂಲಾಚರಣೆಯನ್ನು ಸ್ವಲ್ಪ ಬಿಟ್ಟಿದುದರಿಂದ, ಅವರು ಸೀತೆಯಿಂದ ರಕ್ಷಿಸಲ್ಪಟ್ಟರೆಂದರೆ ಅತಿಶಯೋಕ್ತಿಯಾಗುವದಿಲ್ಲವೇ ? ಅವರು ಶರಣಾಗತಿಯನ್ನು ಅನುಷ್ಠಿಸದೇ ಇರುವ ಕಾಲದಲ್ಲಿ ಅವರು ರಕ್ಷಣೆಗೆ ಹೇಗೆ ಯೋಗ್ಯರಾದಾರು ? ಎಂಬ ಶಂಕಾಪಿಗೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ.

---

(೧) ರಾಮಾ. ಸುಂದರ. ೩೮-೩೭.

ಆತ್ಮಭರಸಮರ್ಪಣೆ ಆತ್ಮೀಯಾ ಅನ್ತರ್ಭೂತಾಃ.

ಇನ್ವಿಡತ್ತಿಲ್ ತ್ರಿಜಟೆಯುಡೈಯ ವಾತ್ಮಾತ್ಮೀಯ ಭರಸಮರ್ಪಣ ತ್ತಿಲೇ ಅವ(ರ್ಗ)ಳುಕ್ಕು ಪಿರವಿ ತುವಕ್ಕಾಲೆ ನಮ್ಮವರ್ಗಳೆನ್ರು ಕಣ್ಣೋಟ್ಟಮ್ ಪಿರಕ್ಕುಮ್ ರಾಕ್ಷಸಿಗಳುಮ್ ಅನ್ತರ್ಭೂತೈಗಳ್.

ತಾನು ಮಾಡುವ ಭರಸಮರ್ಪಣೆಯಲ್ಲಿ ಉದ್ದಿಶ್ಯರಾದ ತನ್ನವರೂ ಅಂತರ್ಭೂತರು.

ಇನ್ವಿಡತ್ತಿಲ್ - ಈ ಸ್ಥಳದಲ್ಲಿ ಎಂದರೆ ಈ ಸಂದರ್ಭದಲ್ಲಿ, **ತ್ರಿಜಟೆಯುಡೈಯ ಆತ್ಮಾತ್ಮೀಯ ಭರಸಮರ್ಪಣತ್ತಿಲೇ** - ತ್ರಿಜಟೆಯು ತನ್ನ ಮತ್ತು ತನಗೆ ಸಂಬಂಧಪಟ್ಟ ಉದ್ದಿಶ್ಯರಾದವರ ರಕ್ಷಣೆಯ ಭರವನ್ನು ಸಮರ್ಪಿಸಿದ ಪ್ರಪತ್ತಿಯಲ್ಲಿಯೇ, **ಅವಳುಕ್ಕು ಪಿರಪಿತುವಕ್ಕಾಲೆ** - ಆ ತ್ರಿಜಟೆಯ ಜನ್ಮಸಂಬಂಧದಿಂದ ಎಂದರೆ ಈ ರಾಕ್ಷಸಿಯರೂ ತ್ರಿಜಟೆಯೂ ಅನುಬಂಧಿಗಳಾಗಿ ರಾಕ್ಷಸರಾಗಿ ಹುಟ್ಟಿದುದರಿಂದ, **ನಮ್ಮವರ್ಗಳೆನ್ರು** - ತ್ರಿಜಟೆಗೆ ತನ್ನವರೆಂಬ, **ಕಣ್ಣೋಟ್ಟಮ್ ಪಿರಕ್ಕುಮ್** - ದೃಷ್ಟಿಪ್ರಸರಣವು ಉಂಟಾಗುವ ಹಾಗೆ ಇರುವ ಎಂದರೆ ಅಭಿಮಾನವು ಉಂಟಾಗುವ ಹಾಗೆ ಇರುವ, ರಾಕ್ಷಸೀಗಳು ಸಹ ಅಂತರ್ಭೂತರು. ಒಬ್ಬರು ಮಾಡಿದ ಭರಸಮರ್ಪಣೆಯಿಂದ ಇನ್ನೊಬ್ಬರೂ ಕೂಡ ಫಲಸಿದ್ಧಿಯನ್ನು ಹೊಂದಲು ಅರ್ಹರೆಂಬುವದಕ್ಕೆ ನಿದರ್ಶನವನ್ನು ತೋರಿಸುತ್ತಾರೆ. ಇಲ್ಲಿ ತ್ರಿಜಟೆಯು ಸೀತೆಯ ಸನ್ನಿಧಿಯಲ್ಲಿ ಶರಣಾಗತಿಯನ್ನನುಷ್ಠಿಸಿದಳು. ತನ್ನ ಅನುಬಂಧಿಗಳಾದ ರಾಕ್ಷಸೀಯರಿಗೆ ಪ್ರತಿಕೂಲಾಚರಣೆಯ ನಿಷೇಧವನ್ನು ಪದೇಶಿಸಿ, ಅವರು ತತ್ಕಾಲದಲ್ಲಿ ಹಾಗೆಯೇ ನಡಿಸಿದುದರಿಂದ, ತನಗಾಗಿಯೂ ಅವರಿಗಾಗಿಯೂ ಪ್ರಪತ್ತಿಯನ್ನು ಅನುಷ್ಠಿಸಿದುದರಿಂದ ಅವರೂ ಕೂಡ ಫಲಸಿದ್ಧಿಯನ್ನು ಹೊಂದಿದರು. ಆಂಜನೇಯನಿಂದುಂಟಾದ ಭಯನಿವರ್ತನೆಯೂ, ಶ್ರೀರಾಮನಿಂದಲೂ ಏನೊಂದೂ ಭಯವಿಲ್ಲದಿರೋಣವೂ ಸಹ ಫಲಸಿದ್ಧಿಯು. ಇಲ್ಲಿ **ನಮ್ಮವರ್ಗಳೆನ್ರು ಕಣ್ಣೋಟ್ಟಂ ಪಿರಕ್ಕುಂ** ಎಂಬ ಪ್ರಯೋಗವಿರುವದರಿಂದ, ಪರಸ್ಪರ ದೇಹಸಂಬಂಧ ಅಥವಾ ಗುರುಶಿಷ್ಯಸಂಬಂಧವುಳ್ಳವರಾಗಿ ಒಂದೇ ಕಾಲದಲ್ಲಿರುವವರ ವಿಷಯದಲ್ಲಿ ಈ ಆತ್ಮಾತ್ಮೀಯ ಪ್ರಪತ್ತಿಯು ಕಾರ್ಯಕಾರಿಯಾಗುತ್ತದೆಂಬುವದು ಶ್ರೀಮದಾಚಾರ್ಯರವರ ಅಭಿಪ್ರಾಯವಾಗಿ ತೋರುತ್ತದೆ ಆದರೆ ಕೆಲವರಭಿಪ್ರಾಯವು ಭಿನ್ನವಾದುದಾಗಿರುತ್ತದೆ. ಶ್ರೀಭಾಷ್ಯಕಾರರೇ ಶ್ರೀವೈಷ್ಣವರಪರವಾಗಿ ಪ್ರಪದನಾನುಷ್ಠಾನವನ್ನು ಮಾಡಿರುವದರಿಂದ, ಈಗ ನಾವುಗಳೆಲ್ಲಾ ಅನುಷ್ಠಿಸುವದು

ಅಪ್ಪಡಿಯೇ ಶ್ರೀ ವಿಭೀಷಣಾಳ್ವಾನೋಡು ಕೂಡವನ್ದ ನಾಲು ರಾಕ್ಷಸರುಮ್ ಅವರುಡೈಯ ಉಪಾಯತ್ತಿಲೇ ಅನ್ತರ್ಭೂತರ್.

ಅನಾವಶ್ಯಕವೆಂದು ಹೇಳುತ್ತಾರೆ. ಆದರೆ ನಾಥಮುನಿಗಳಾಗಲಿ, ಯಾಮುನೇಯ ರಾಗಲಿ ಹಾಗೆ ಅನುಷ್ಠಿಸಿರಬಹುದಾಗಿ, ಶ್ರೀ ಭಾಷ್ಯಕಾರರವರೂ ಅನುಷ್ಠಿಸಿದುದು ಅನಾವಶ್ಯಕವೆಂದೂ ಕೂಡಾ ಹೇಳಬಹುದಷ್ಟೇ. ಪಿತಾಪುತ್ರರನ್ನು ತ್ಯಜಿಸಿ, ಧನವಸನ ಧಾನ್ಯಾದಿಗಳಲ್ಲಿ ಮಮತೆಯನ್ನು ತೊರೆದು, ವಿರಕ್ತಿಯನ್ನು ಹೊಂದಿ **"ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂಗತಃ"** ಎಂದು ಶರಣಾಗತಿಯನ್ನು ಮಾಡಿದುದೂ ಸರಿಯಲ್ಲವಾಗುತ್ತದೆ. ಏಕೆಂದರೆ ಪಿತಾಮಹ ಪ್ರಪಿತಾಮಹ ಮೊದಲಾದವರಲ್ಲಿ ಯಾರಾದರೂ ಶರಣಾಗತಿಯನ್ನನುಷ್ಠಿಸದೇ ಇರುತ್ತಾರೆಯೇ ? ಆದುದರಿಂದ ಆ ಸುಕೃತವೇ ನಮ್ಮನ್ನು ಕಾಯಬಹುದಲ್ಲವೇ ? ಎಂಬಾಕ್ಷೇಪ ಉಂಟಾಗಬಹುದು. ಆದರೆ **"ಏಕಃ ಪಾಪಾನಿ ಕುರುತೇ ಫಲಂ ಭುಙ್ಕ್ತೇ ಮಹಾಜನಃ"** ಎಂದು ಹೇಳಿರುವ ಹಾಗೆ, ಒಬ್ಬನು ಪಾಪಕ್ಕೆ ಬದಲಾಗಿ ಸುಕೃತವನ್ನಾಚರಿಸಿದರೂ ಕೂಡ ಆ ಫಲವೂ ಇತರರಿಗೆ ಏಕೆ ಕೂಡದು ? ಮತ್ತು ಪ್ರಪಿತಾಮಹನು ಸುಕೃತ ವಿಶೇಷದಿಂದ ಗಳಿಸಿದ ಹಣಕ್ಕೆ ಪೌತ್ರನು ಹಕ್ಕುದಾರನಾಗುವದಿಲ್ಲವೇ ಎಂದರೆ, ಫಲಸಿದ್ಧಿಯೇನೋ ಉಂಟು. ಆದರೆ ಶಿಷ್ಯನಾದವನು ಗುರುವಿನ ಆಜ್ಞೆಗಳಾದ ಪ್ರತಿಕೂಲಾಚರಣೆಯ ನಿಷೇಧ ಮೊದಲಾದವುಗಳಿಗೆ ಸರಿಯಾದ ಪ್ರವೃತ್ತಿಗಳುಳ್ಳವನಾಗಿ ತಾನೂ ಹಿಂದಿನವರು ಮಾಡಿದ ಶರಣಾಗತಿಯಲ್ಲಿ ಬುದ್ಧಿಶ್ರದ್ಧನಾಗಿದ್ದರೆ ಆಗಬಹುದು. ಹೀಗೆ ಇಂತಹ ಮುಖ್ಯವಾದ ವಿಷಯವು ಹಿಂದಿನವರು ಮಾಡಿದರೋ ಇಲ್ಲವೋ ಎಂಬ ಸಂದೇಹವುಳ್ಳ ಸ್ಥಿತಿಯಲ್ಲಿ ಬಿಟ್ಟಿರುವದು ಸರಿಯಲ್ಲವಾದುದರಿಂದಲಾಗಲಿ, ಗುರುಮುಖೇನ ಪ್ರಪತ್ತಿಯನ್ನನುಷ್ಠಿಸುವದು ವಿವೇಕವಾದ ಮಾರ್ಗವೆಂದಾಗಲಿ, ಭಾವಿಸತಕ್ಕದ್ದು. ಈ ತ್ರಿಜಟಾ ಪ್ರಪತ್ತಿಯಲ್ಲಿ ಆಕೆಯ ಅನುಬಂಧಿಗಳಾದ ರಾಕ್ಷಸಿಗಳೂ ಅಂತರ್ಭೂತರೆಂಬ ನ್ಯಾಯಕ್ಕೆ ಇನ್ನೊಂದು ನಿದರ್ಶನವನ್ನು ಹೇಳುತ್ತಾರೆ.

ಅಪ್ಪಡಿಯೇ - ಈ ರಾಕ್ಷಸಿಯರು ಹೇಗೆ ತಾವು ಅನುವರ್ತಿಸಿ, ಗುರುವಾಗಿ ಭಾವಿಸಿದ ತ್ರಿಜಟೆಯ ಶರಣಾಗತಿಯಲ್ಲಿ ಅಂತರ್ಭೂತರಾದರೋ, ಹಾಗೆಯೇ **ಶ್ರೀ ವಿಭೀಷಣಾಳ್ವಾನೋಡು ಕೂಡವನ್ದ** - ಶ್ರೀ ವಿಭೀಷಣನೊಂದಿಗೆ ಬಂದ **ನಾಲುರಾಕ್ಷಸರುಮ್** - ನಾಲ್ಕು ಮಂದಿ ರಾಕ್ಷಸರೂ ಕೂಡ, **ಅವರುಡೈಯ**, **ಉಪಾಯತ್ತಿಲ್** - ಆ ಶ್ರೀ ವಿಭೀಷಣರನುಷ್ಠಿಸಿದ ಉಪಾಯವಾದ ಶರಣಾಗತಿಯಲ್ಲಿಯೇ, **ಅಂತರ್ಭೂತರ್** - ಸೇರಿದವರು, ಎಂದರೆ ಆ ಶರಣಾಗತಿಯೇ **ಈ**

ನಾಲ್ವರಿಗೂ ಉಪಾಯವಾಗಿ ಪರಿಣಮಿಸಿ, ಫಲಸಿದ್ಧಿಗೆ ಹೇತುವಾಯಿತು ಎಂಬಭಿಪ್ರಾಯವು. ಇಲ್ಲಿ ಪ್ರಪದನವನ್ನು ಅನುಷ್ಠಿಸಿದವನಿಗೂ ಇತರನಿಗೂ ಸಂಬಂಧ ಮಾತ್ರವಿರುವದೇ ಫಲಸಿದ್ಧಿಗೆ ಸಾಲದೆಂದು ತಿಳಿಸುತ್ತಾರೆ. ಭರಸಮರ್ಪಣೆಯು ಸುಮ್ಮನೆ ಆತ್ಮಭರಸಮರ್ಪಣೆಯಾದರೆ ಸಾಲದು, ಇತರರಿಗೂ ಅದರ ಫಲಸಿದ್ಧಿಯುಂಟಾಗಬೇಕಾದರೆ, ಆ ಭರಸಮರ್ಪಣೆಯು ಆತ್ಮೀಯರಿಗಾಗಿಯೂ ಇರತಕ್ಕದೆಂಬುವದನ್ನು ತಿಳಿಸುವದಕ್ಕಾಗಿ ಆತ್ಮಾತ್ಮೀಯ ಭರಸಮರ್ಪಣ ತ್ರಿಲೆ ಅಂತರ್ಭೂತರ್ ಎಂದು ಪ್ರಯೋಗಿಸಿರುತ್ತಾರೆ. ಆದುದರಿಂದಲೇ ವಿಭೀಷಣನು ರಜೋಗುಣದಿಂದ ಗರ್ವಿತನಾದ ಭ್ರಾತಾವಾದ ರಾವಣನಿಗೆ ಪ್ರಾತಿಕೂಲ್ಯ ವರ್ಜನರೂಪವಾದ ೧ "ಪ್ರದೀಯತಾಂ ದಾಶರಥಾಯಮೈಥಿಲೀ" ಶ್ರೀರಾಮನಿಗೆ ಸೀತೆಯನ್ನು ಕೊಟ್ಟು ಶರಣಾಗತನಾಗು ಎಂದು ಉಪದೇಶವನ್ನು ಮಾಡಿದರೂ, ನಿರರ್ಥಕವಾದುದನ್ನು ಕಂಡು, ಅಂಥಾ ದುಷ್ಕರ್ಮಿಯೊಂದಿಗಿರುವದು ತನಗೆ ಸ್ವರೂಪವಲ್ಲವೆಂದು, ೨ "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ" ಎಂದೂ, ೩, "ಪರಿತ್ಯಕ್ತ್ವಾ ಮಯಾಲಂಕಾ ಮಿತ್ರಾಣಿ ಚ ಧನಾನಿಚ" ಎಂದೂ, ಹೇಳಿರುವಹಾಗೆ, ಸರ್ವವನ್ನೂ ತ್ಯಜಿಸಿ ಶ್ರೀ ರಾಘವನನ್ನು ಶರಣವನ್ನು ಹೊಂದಲು ಹೊರಟಾಗ, ವಿಭೀಷಣನನ್ನೇ ಗುರುವಾಗಿ ಭಾವಿಸಿ, ಆತನನ್ನೇ ಆಶ್ರಯಿಸಿ ಆತನನ್ನೇ ಹಿಂಬಾಲಿಸಿ ೪ "ಉತ್ಪಪಾತಗದಾಪಾಣಿ ಶ್ಚತುರ್ಭಿಸ್ಸಹ ರಾಕ್ಷಸೈಃ" ಎಂದು ಹೇಳಿರುವಹಾಗೆ ಈ ನಾಲ್ಕು ಜನರೂ ಎಲ್ಲಾ ಸಂಬಂಧವನ್ನೂ ತ್ಯಜಿಸಿ, ಪರಮ ಭಾಗವತನಾದ ವಿಭೀಷಣನಲ್ಲೇ ಸರ್ವ ಭರವನ್ನಿಟ್ಟು ಅನಂತರ ಆತನು ಸ್ವಾಮಿಯ ಪಾದದಲ್ಲಿ ಬಿದ್ದಾಗಲೂ

೫ "ಸತುರಾಮಸ್ಯ ಧರ್ಮಾತ್ಮಾ ನಿಪಪಾತ ವಿಭೀಷಣಃ ।
ಪಾದಯೋಃ ಶರಣಾನ್ವೇಷೀ ಚತುರ್ಭಿಸ್ಸಹರಾಕ್ಷಸೈಃ ।

ಎಂದು ಹೇಳಿರುವ ಹಾಗೆ ಈ ನಾಲ್ವರೂ ಜೊತೆಯಲ್ಲೇ ಇದ್ದುಕೊಂಡು, ತಮ್ಮ ಆಚಾರ್ಯನಾದ ವಿಭೀಷಣನನ್ನು ಅನುವರ್ತಿಸಿ ನಡೆದುದರಿಂದ, ಆ ವಿಭೀಷಣನ ಶರಣಾಗತಿಯಲ್ಲೇ ಈ ನಾಲ್ವರೂ ಅಂತರ್ಭೂತರು ಎಂಬಭಿಪ್ರಾಯವು. ಹೀಗೆ ಶಿಷ್ಯರುಗಳು ತಮ್ಮ ಗುರುಗಳಾದ ಮಹಾಭಾಗವತರನ್ನು ಆಶ್ರಯಿಸುವದು ಪರಮ ಸುಲಭವಾದ ನಿಸ್ಸಂದೇಹವಾದ ಮಾರ್ಗವು. ವಿಭೀಷಣನ ವಿಷಯದಲ್ಲಾದರೋ ಶರಣಾಗತವತ್ಸಲನು ಸ್ವಲ್ಪ ಚರ್ಚೆಯನ್ನಾದರೂ ನಡಿಸಿದನು, ಸುಗ್ರೀ

(೧). ರಾಮಾ. ಯುದ್ಧ. ೧೪-೩.
(೨) ರಾಮಾ. ಯುದ್ಧ. ೧೭-೧೪.
(೩). ರಾಮಾ. ಯು. ೧೯ ೨೦.
(೪) ರಾಮಾ. ಯು. ೧೬-೧೬.
(೫) ರಾ.ಮಾ. ಯುದ್ಧ. ೧೯-೩.

ಶ್ರೀ ವಿಭೀಷಣ ಶರಣಾಗತೌ ಅಙ್ಗಾಙ್ಗ ಪ್ರದರ್ಶನಂ

ಅಙ್ಗತ್ತ ವಭಯಪ್ರದಾನ ಪ್ರಕರಣತ್ತಿಲು ಮಿವ್ವಙ್ಗಾಙ್ಗಙ್ಗಳೈ ಯುಮಡೈಕ್ಕಲಾಮ್. ಎಙ್ಗನೇಎನ್ನಿಲ್.— ಪ್ರಾತಿಕೂಲ್ಯತ್ತಿಲೆ ವ್ಯವಸ್ಥಿತನಾನ ರಾವಣನುಕ್ಕುಮ್ ಕೂಡ (೩) " ಪ್ರದೀಯತಾಂ ದಾಶರಥಾಯ ಮೈಥಿಲೀ" (೪) ಸೀತಾಂ ಚ ರಾಮಾಯ ನಿವೇದ್ಯದೇವೀಂ ವಸೇವ

ವಾದಿಗಳು ಪ್ರತಿಭಟಿಸಿದರು. ಈ ನಾಲ್ವರು ರಾಕ್ಷಸರ ವಿಷಯದಲ್ಲಿ ಯಾರೂ ಪ್ರತಿಭಟಿಸಲಿಲ್ಲವು. ಆದುದರಿಂದಲೇ ಆ ವಿಭೀಷಣನ ಶರಣಾಗತಿಯಲ್ಲೇ ಇವರೂ ಅನ್ತರ್ಭೂತರು.

ಶ್ರೀ ವಿಭೀಷಣ ಶರಣಾಗತಿಯಲ್ಲೂ ಅಙ್ಗಾಙ್ಗಗಳ ಪ್ರದರ್ಶನವು

ಅಙ್ಗತ್ತ - ಆ ಸಂದರ್ಭದ, **ಅಭಯಪ್ರದಾನ ಪ್ರಕರಣತ್ತಿಲುಮ್** -

(೧) "**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ॥

ಎಂದು ಪ್ರತಿಭಟಿಸಿದ ಗೋಷ್ಠಿಗೆ ತನ್ನ ಸಂಕಲ್ಪವನ್ನು ತಿಳಿಸಿ ಶ್ರೀ ರಾಮನು ವಿಭೀಷಣನಿಗೆ ಅಭಯವನ್ನು ಕೊಟ್ಟ ಪ್ರಕರಣದಲ್ಲೂ, ಈ ಅಂಗಾಂಗಿಗಳನ್ನೆಲ್ಲಾ **ಅಡೈಕ್ಕಲಾಮ್** - ಅಂಗೀಕರಿಸಬಹುದು ; ಎಂದರೆ ತ್ರಿಜಟಾ ಶರಣಾಗತಿಯಲ್ಲಿ ಸುವ್ಯಕ್ತವಾಗಿ ತೋರುವ ಹಾಗೆ ಇಲ್ಲದಿದ್ದರೂ, ಪರಿಶೀಲಿಸಿ ನೋಡಿದುದಾದರೆ ಅವುಗಳನ್ನೆಲ್ಲಾ ತಿಳಿಯಬಹುದೆಂಬ ಭಾವವು. ಎಲ್ಲೆಲ್ಲಿ ಆ ಅಂಗಾಂಗಿಗಳನ್ನು ತಿಳಿಯಬಹುದೆಂದರೆ ಹೇಳುತ್ತಾರೆ. **ಎಙ್ಗನೇ ಎನ್ನಿಲ್** - ಎಲ್ಲಿ ಇವುಗಳನ್ನು ತಿಳಿಯಬಹುದು ಎಂದರೆ: —

೧. **ಪ್ರಾತಿಕೂಲ್ಯತ್ತಿಲೆ ವ್ಯವಸ್ಥಿತನಾನ** - ಪ್ರಾತಿಕೂಲ್ಯಾಚರಣೆಯಲ್ಲಿ ಸ್ಥಿರಬುದ್ಧಿಯುಳ್ಳ, ರಾವಣನಿಗೂ ಕೂಡ "**ಪ್ರದೀಯತಾಂ ದಾಶರಥಾಯ ಮೈಥಿಲೀ**" ಎಂದರೆ ದಶರಥ ಕುಮಾರನಾದ ಶ್ರೀರಾಮನಿಗೆ ಮಿಥಿಲಾಧಿಪತಿ ಕುಮಾರಿಯಾದ ಸೀತೆಯು ಸಮರ್ಪಿಸಲ್ಪಡಲಿ ಎಂದೂ ಮತ್ತು **ರಾಮಾಯ** - ಶ್ರೀರಾಮನಿಗೋಸ್ಕರ. **ಸೀತಾಂ ಚ ದೇವೀಂ** – ಸೀತಾದೇವಿಯನ್ನಾದರೋ.

---

(೨) ರಾಮಾ. ಯುದ್ಧ. ೧೮-೩೩. (೩) ರಾಮಾ. ಯುದ್ಧ. ೧೪-೩.
(೪) ರಾಮಾ. ಯುದ್ಧ. ೧೫-೧೪..

ರಾಜನ್ನಿಹ ವೀತಶೋಕಾಃ" ಎನ್ರುಹಿತಮ್ ಶೊಲ್ಲುಗ್ಯೆಯಾಲೆ ಆನುಕೂಲ್ಯಸಙ್ಕಲ್ಪಂ ತೋತ್ತಿತ್ತು. ಇನ್ದ ಹಿತವಚನಂ ಪಿತ್ತೋಪಹತನುಕ್ಕು ಪಾಲು ಕೈಕ್ಕುಮಾಪ್ಪೋಲೆ ಯವನುಕ್ಕು ಉದ್ವೇಗಹೇತುವಾಯ್ತ್ತು ;

ನಿವೇದ್ಯ - ಸಮರ್ಪಿಸಿ, ಹೇ **ರಾಜನ್** - ಓ ರಾಜನಾದ ರಾವಣನೇ, **ಇಹ** - ಈ ಲಂಕೆಯಲ್ಲೇ, **ವೀತಶೋಕಾಃ** - ಹೋಗಲಾಡಿಸಲ್ಪಟ್ಟ ಶೋಕವುಳ್ಳವರಾಗಿ. ವಸೇಮ - ಸುಖವಾಗಿರೋಣ" **ಎನ್ರುಮ್** - ಎಂದೂ, **ಹಿತಮ್ ಶೊಲ್ಲುಗ್ಯೆಯಾಲೆ** - ಹಿತವಾದ ಬುದ್ಧಿವಾದವನ್ನು ಹೇಳಿರುವದರಿಂದ, **ಆನುಕೂಲ್ಯಸಂಕಲ್ಪಂ** - ಆನುಕೂಲ್ಯ ಸಂಕಲ್ಪವು, **ತೋತ್ತಿತ್ತು** - ತೋರಿಬರುತ್ತದೆ.

(೧) **"ಪರಸ್ವಾನಾಂ ಚ ಹರಣಂ ಪರದಾರಾಭಿ ಮರ್ಶನಂ ।**
ಸುಹೃದಾ ಮತಿಶಂಕಾ ಚ ತ್ರಯೋದೋಷಾಃ ಕ್ಷಯಾವಹಾಃ ।
ಮಹರ್ಷೀಣಾಂ ವಧೋಘೋರ ಸ್ಸರ್ವದೇವೈಶ್ಚವಿಗ್ರಹಃ ।
ಅಭಿಮಾನಶ್ಚ ಕೋಪಶ್ಚ ವೈರಿತ್ವಂ ಪ್ರತಿಕೂಲತಾ ॥

ಪರಸ್ವತ್ತನ್ನು ಅಪಹರಿಸೋಣವೂ, ಪರದಾರ ಗ್ರಹಣವೂ, ಸ್ನೇಹಿತರಲ್ಲಿ ಸಂದೇಹವೂ, ಎಂಬೀನಾಶಕಹೇತುಗಳಾದ ಮೂರು ದೋಷಗಳೂ, ಮತ್ತು ಮಹರ್ಷಿಗಳನ್ನು ವಧಿಸೋಣವೂ, ಸಮಸ್ತ ದೇವತೆಗಳೊಂದಿಗೂ ಕಲಹವೂ, ಗರ್ವವೂ, ಕೋಪವೂ, ಶತ್ರುತನವೂ, ಶ್ರೇಯಸ್ಸುಗಳಿಗೆ ಪ್ರತಿಕೂಲತೆಯೂ" **ಏತೇದೋಷಾ ಮಮಭ್ರಾತು ರ್ಜೀವಿತೈಶ್ವರ್ಯ ನಾಶನಾಃ,"** ಇಂತಹ ದೋಷಗಳು ತನ್ನಣ್ಣನಿಗೆ ಪ್ರಾಣ ಮತ್ತು ಐಶ್ವರ್ಯಗಳಿಗೆ ಹಾನಿಕರಗಳೆಂದು ವಿಭೀಷಣನೇ ಇನ್ನೊಂದು ಪ್ರಕರಣದಲ್ಲಿ ಹೇಳಿರುತ್ತಾನೆ. ಆದುದರಿಂದ **ರಾಕ್ಷಸೋ ಪಾಪನಿಶ್ಚಯಃ** ಎಂದು ಹೇಳಿರುವಹಾಗೆ ಪ್ರಾತಿಕೂಲ್ಯದಲ್ಲಿ ನಿಶ್ಚಯಬುದ್ಧಿಯುಳ್ಳವನೆಂದು ಪ್ರಯೋಗಿಸಿರುತ್ತಾರೆ. ಇಂತಹ ಪಾಪನಿಶ್ಚಯ ಬುದ್ಧಿಯುಳ್ಳವನಿಗೂ ಕೂಡ ಉಪದೇಶಿಸಬೇಕಾದರೆ, ತನ್ನ ಅಣ್ಣನು ವೃಥಾ ನಾಶವನ್ನು ಹೊಂದುತ್ತಾನಲ್ಲಾ ಎಂಬ ತುಂಬಾ ಪರಿತಾಪದಿಂದ ವಿಭೀಷಣನು ಬುದ್ಧಿವಾದವನ್ನು ಹೇಳಿದನೆಂದು ಊಹಿಸಬಹುದು. ಅಥವಾ, ಆನುಕೂಲ್ಯ ಸಂಕಲ್ಪವೆಂದರೆ **"ಆನುಕೂಲ್ಯಮಿತಿಪ್ರೋಕ್ತಂ ಸರ್ವಭೂತಾನುಕೂಲತಾ"** ಎಂದು ಹೇಳಿರುವ ರೀತ್ಯಾ ಸರ್ವಚೇತನರಿಗೂ ಅನುಕೂಲವಾಗಿರುವೆನೆಂಬ ಸಂಕಲ್ಪವು. ಇಂತಹ ಭಗವದ್ವೇಷಿಯಾದ ರಾವಣನಿಗೂ ಅನುಕೂಲನಾಗಿರುವವನು ಇತರರಿಗೂ ಅನುಕೂಲನಾ

---

(೧) ರಾಮಾ. ಯುದ್ಧ. ೮೭-೨೩,೨೪.

ಗಿಯೇ ಇರುವನೆಂಬುವದು ಕೈಮುತಿಕ ನ್ಯಾಯಸಿದ್ಧವು. ಆದರೆ ರಾವಣನು ತುಂಬಾ ಕಷ್ಟದೆಶೆಯಲ್ಲಿದ್ದರೂ, ಜ್ಯೇಷ್ಠಭ್ರಾತಾ ಪಿತೃಸಮಃ ಎಂದಿರುವದರಿಂದ ತಂದೆಗೆ ಸಮಾನನಾದ ಅಣ್ಣನಿಗೆ ಅಂತಹ ದುರ್ದೆಸೆಯು ಒದಗಿದಾಗ ಅಣ್ಣನನ್ನೂ ಬಿಟ್ಟಿದಲ್ಲದೆ, ಅಗ್ನಿಸಾಕ್ಷಿಯಾಗಿ ವಿವಾಹಮಾಡಿಕೊಂಡ ಹೆಂಡತಿಯನ್ನು ಬಿಡಬಹುದೇ ? ಮಕ್ಕಳನ್ನು ತ್ಯಜಿಸಬಹುದೇ ? ಹೀಗೆ ಮಾಡುವುದು ಪ್ರತಿಕೂಲಾಚರಣೆಯಾಗುವದಿಲ್ಲವೇ ? ಎಂದರೆ ಅಂತಹ ಅಣ್ಣನನ್ನೂ ದಾರಪುತ್ರಾದಿಗಳನ್ನು ತ್ಯಜಿಸಲು ಇಷ್ಟವಿಲ್ಲದೇನೇ, ಅಣ್ಣನಿಗೆ ತುಂಬಾ ದೂರ ಉಪದೇಶ ಮಾಡಿ, 'ವಸೇಮ ರಾಜನ್ನಿಹವೀತ ಶೋಕಾಃ" ಸುಖವಾಗಿ ಲಂಕೆಯಲ್ಲೇ ಇರೋಣವೆಂಬಪೇಕ್ಷೆಯಿಂದಲೇ, ಯತ್ನಿಸಿ ನೋಡಿದನು. ಆದರೆ ಆತನು ಕರ್ಮವಶ್ಯನಾದುದರಿಂದ ಈತನು ಹೇಳಿದ ಹಿತೋಪದೇಶವು ಆತನಿಗೆ ಅಹಿತವಾಗಿ ಪರಿಣಮಿಸಿತು. ಪರದಾರಾಭಿಮರ್ಶನಾದಿಗಳು ತುಂಬಾ ಅಧರ್ಮಕೃತ್ಯವು. ಅಂಥಾವನ ಸಂಸರ್ಗವೂ, ತತ್ಸಂಬಂಧೀಯರ ಸಂಸರ್ಗವೂ ಕೂಡ ಪ್ರಪನ್ನನಿಗೆ ಯೋಗ್ಯವಾದುದಲ್ಲವು. ಪ್ರಪನ್ನನು ಇರತಕ್ಕ ಸ್ಥಾನವಲ್ಲವೆಂದು ಸ್ಥಾನವಿಶೇಷಾಧಿಕಾರದಲ್ಲಿ ಉಪದೇಶಿಸುತ್ತಾರೆ. ಅಂತಹ ದುರ್ವೃತ್ತರ ಸಂಸರ್ಗವು ತನ್ನ ಸ್ವರೂಪಕ್ಕೆ ತುಂಬಾ ಕುಂದಕವು. ಆದುದರಿಂದ ಅಂತಹ ಪ್ರತಿಕೂಲಾಚರಣೆಯ ಶಂಕಾಗಳಿಗೆ ಕಾರಣವಿಲ್ಲವೆಂಬ ಭಾವವು.

೨. ವಿಭೀಷಣನು ಮಹಾಪ್ರಾಜ್ಞನಾದುದರಿಂದ ತನ್ನ ಅಣ್ಣನಿಗೆ ತುಂಬಾ ಹಾನಿಯು ಪ್ರಾಪ್ತವಾಗಬಹುದೆಂದು ಚನ್ನಾಗಿ ತಿಳಿದವನಾದುದರಿಂದಲೇ ತುಂಬಾ ದೂರ ಹಿತೋಪದೇಶವನ್ನು ಮಾಡಿದರೂ, ಇನ್ದ್ಹಿತವಚನಂ - ಈ ಹಿತವಾದ ಬುದ್ಧಿವಾದವು, ಪಿತ್ಥದಿಂದ ಪೀಡಿತನಾದವನಿಗೆ, ಪಾಲುಕೈಕ್ಕು ಮಾಪ್ಪೋಲೆ ಹಾಲು ಕಹಿಯಾಗಿ ತೋರುವ ಹಾಗೆ, ಅವನುಕ್ಕು - ಆ ರಾವಣನಿಗೆ, ಉದ್ವೇಗ ಹೇತುವಾಯಿತ್ತು - ಕೋಪತಾಪಕ್ಕೆ ಕಾರಣಭೂತವಾಯಿತು. ಹಾಲು ಆರೋಗ್ಯಭಾಗ್ಯವನ್ನು ಹೊಂದಿದವನಿಗೆ ಅಮೃತ ಸದೃಶವಾಗಿರುವ ರುಚಿಯಾದ ಹಿತವಾದ ಪದಾರ್ಥವು ಅದೇ ಪಿತ್ಥರೋಗ ಪೀಡಿತನಿಗೆ ಕಹಿಯಾಗಿ ತೋರುತ್ತದೆ. ಹಾಗೆಯೇ ಸಾತ್ವಿಕಶಿಖಾಮಣಿಗೆ ಹಿತೋಪದೇಶವು ತುಂಬಾ ಇಷ್ಟವಾದುದು. ಆದರೆ ಕರ್ಮವಶ್ಯನಾದ ರಾಜಸ ಪ್ರಕೃತಿಯಾದ ರಾವಣನಿಗೆ ಅಮಿತಹಿತವಾಗಿ ಪರಿಣಮಿಸಿದುದರಿಂದ,

(೧) "ಸವಚನಪ್ರತಿಜಗ್ರಾಹ ರಾವಣಃ ಕಾಲಚೋದಿತಃ ।
ಉಚ್ಯಮಾನಂ ಹಿತಂ ವಾಕ್ಯಂ ವಿಪರೀತಮಿವೌಷಧಂ॥"

೧. ರಾಮಾ. ಯುದ್ಧ ೧೬,೧೪

“ತ್ವಾಂತುಧಿಕ್ಕುಲಪಾಸನಂ” ಎನ್ರು ಧಿಕ್ಕಾರಮ್ ಪಣ್ಣಿನ ಪಿನ್ಬು, ಇನಿ ಇವನುಕ್ಕು ಉಪದೇಶಿಕ್ಕವುಮಾಕಾದು ; ಇವನೋಡು ಅನುಬಂಧಿತ್ತ ವಿಭೂತಿಗಳು ಮಾಕಾದು ; ಇವನಿರುನ್ದ ವಿಡತ್ತಿಲಿರುಕ್ಕವುಮಾಕಾದು ;

ಆ ರಾವಣನು ಮೃತ್ಯುಪ್ರೇರಿತನಾದುದರಿಂದ, ಈ ಹಿತೋಪದೇಶವನ್ನು, ಮೃತ್ಯುವಶನಾಗುವನು ಸಂಜೀವನರೂಪವಾದ ಔಷಧವನ್ನು ಹೇಗೆ ಅಂಗೀಕರಿಸುವದಿಲ್ಲವೋ, ಹಾಗೆ ಅಂಗೀಕರಿಸಲಿಲ್ಲವು ಎಂಬ ಭಾವವು. ಹಾಗೆ ಉದ್ವೇಗ ಹೇತುವಾದುದರಿಂದಲೇ (೧) “**ಅಬ್ರವೀತ್ ಪರುಷಂವಾಕ್ಯಂ ರಾವಣಃ ಕಾಲಚೋದಿತಃ**” ರಾವಣನು ಮೃತ್ಯುಪ್ರೇರಿತನಾದುದರಿಂದ ಬಹು ಕ್ರೂರವಾದ ಮಾತನ್ನಾಡಿ ವಿಭೀಷಣನನ್ನು ನಿಂದಿಸುತ್ತಾನೆ. (೨) “**ಜಾನಾಮಿ ಶೀಲಂ ಜ್ಞಾತೀನಾಂ**” “ಜ್ಞಾತಿಗಳ ನಡತೆಯನ್ನು ಕಂಡಿರುವೆನು” ಎಂದು ಪ್ರಾರಂಭಿಸಿ, (೨) “**ಹೃಷ್ಯಂತಿ ವ್ಯಸನೇಷು**” ತನಗೆ ವ್ಯಸನಪ್ರಾಪ್ತವಾಗಿರುವಾಗ, ಜ್ಞಾತಿಗಳು ಸಂತೋಷಿಸುವರು ಎಂದೂ, (೩) ‘‘**ವಿದ್ಯತೇಜ್ಞಾತಿತೋಭಯಂ**’ ಎಂದರೆ ಜ್ಞಾತಿಯು ಎಂದು ಯಾವಾಗ ಆಯಿತೋ ಆಗ ಅತನಿಂದ ಭಯವುಂಟಾಗುವದು ಸಿದ್ಧವು ಎಂದೂ ಹೇಳಿ, ನಿನ್ನಂತಹ ಅನಾರ್ಯನ ಸಂಬಂಧವು ಪರಮ ವಿಘಾತರೂಪವಾದುದು ಎಂದು ನಿರೋಧಿಸಿ, ಕಡೆಗೆ

(೪) “**ಅನ್ಯಸ್ತ್ವೇವಂ ವಿಧಂ ಬ್ರೂಯಾದ್ವಾಕ್ಯಮೇತನ್ನಿಶಾಚರ।**
ಅಸ್ಮಿನ್ಮುಹೂರ್ತೇ ನಭವೇತ್ತ್ವಾಂತು ಧಿಕ್ಕುಲಪಾಂಸನಂ॥”

ಎಂದರೆ, ಓ ರಾಕ್ಷಸನೇ, ತಮ್ಮನಾದ ನೀನಲ್ಲದೆ ಇನ್ನು ಯಾವನಾದರೂ ಇಂತಹ ಮಾತುಗಳನ್ನಾಡಿದ್ದರೆ ಈ ಕ್ಷಣವೇ ಇಲ್ಲದೆ ಹೋಗುತ್ತಿದ್ದನು, “**ತ್ವಾಂತು ಧಿಕ್ಕುಲಪಾಂಸನಂ**” ಕುಲನಾಶಕನಾದ ನಿನ್ನನ್ನು ಸುಡಬೇಕು” ಎಂದು ನಿಂದಿಸಿ, **ಧಿಕ್ಕಾರಮುಂ ಪಣ್ಣಿನ ಪಿನ್ಬು** - ತಿರಸ್ಕಾರವನ್ನು ಮಾಡಿದ ನಂತರ, **ಇನಿ** - ಇನ್ನುಮೇಲೆ, **ಇವನುಕ್ಕು** - ಈ ರಾವಣನಿಗೆ, **ಉಪದೇಶಿಕ್ಕವು ಮಾಕಾತು**- ಬುದ್ಧಿವಾದವನ್ನು ಹೇಳಲೂಬಾರದು ; **ಇವನೋಡು ಅನುಬಂಧಿತ್ತ** - ಇವನಿಗೆ ಸೇರಿದ, **ವಿಭೂತಿಗಳುಮಾಕಾದು** - ನಿಯಾಮ್ಯ ವರ್ಗಗಳೂ ಗೃಹಾರಾಮ ಧನಕನಕ ವಸನಾದಿಗಳು ದಾಸವರ್ಗ ಮೊದಲಾದವು ಕೂಡ ತನಗೆ ಬೇಕಿಲ್ಲವು ; **ಇವನಿರುನ್ದ ವಿಡತ್ತಿಲಿರುಕ್ಕವು ಮಾಕಾದು** - ಈ ರಾವಣ

೧. ರಾಮಾ. ಯುದ್ಧ ೧೬-೨
೨. ರಾಮಾ. ಯುದ್ಧ ೧೬.೩
೩. ರಾಮಾ. ಯುದ್ಧ.೧೬-೯.
೪. ರಾಮಾ. ಯುದ್ಧ. ೧೬-೧೫.

ಎನ್ರುದಿಯಿಟ್ಟು "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ" "ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ" ಎಙ್ಗಿರ ಸ್ವವಾಕ್ಯತ್ತಿನ್ ಪಡಿಯೇ ಯುಙ್ಗ ತುವಕ್ಕತ್ತು ಪ್ಪೋರುಗೈಯಾಲೆ ಪ್ರಾತಿಕೂಲ್ಯವರ್ಜನಾಭಿಸಂಧಿ ತೋತ್ತುತ್ತು.

ಸಿರುವ ಸ್ಥಳದಲ್ಲೂ ಇರಲೂ ಕೂಡದು, **ಎನ್ರುದಿಯಿಟ್ಟು** - ಎಂದು ನಿಶ್ಚಯಿಸಿ, **"ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ"** "ಹೆಂಡತಿ ಮಕ್ಕಳನ್ನು ಬಿಟ್ಟು" ಎಂದೂ, "**ಮಯಾ** - ನನ್ನಿಂದ, ಲಂಕೆಯೂ ಮಿತ್ರರೂ ಧನವೂ ಸಹ, **ಪರಿತ್ಯಕ್ತಾ** - ಸಂಪೂರ್ಣವಾಗಿ ಸ್ವಲ್ಪವಾಗಲಿ ಅವರಲ್ಲಿ ವಾಸನಾ ಇಲ್ಲದ ಹಾಗೆ ತೊರೆದು, ಎಂಬ **ಸ್ವವಾಕ್ಯತ್ತಿನ್ ಪಡಿಯೇ** - ವಿಭೀಷಣನ ಸ್ವಂತ ವಾಕ್ಯದಲ್ಲಿ ಹೇಳಿರುವ ಪ್ರಕಾರ, **ತುವಕ್ಕತ್ತು ಪ್ಪೋರುಗೈಯಾಲೇ** - ಸಂಬಂಧವನ್ನು ತ್ಯಜಿಸಿ ಹೋಗುವದರಿಂದ, **ಪ್ರಾತಿಕೂಲ್ಯವರ್ಜನದ ಅಭಿಸಂಧಿಯು**-ಅಭಿಪ್ರಾಯವು, **ತೋತ್ತುತ್ತು** - ತೋರಿಬರುತ್ತದೆ. (ಸಾತ್ವಿಕಶಿರೋಮಣಿಗೆ ರಾಜಸ ತಾಮಸ ಪ್ರಕೃತಿಯುಳ್ಳವರ ಸಂಸರ್ಗವು ಅನರ್ಥಗಳಿಗೆ ಕಾರಣವಾದೀತು. ಪ್ರತಿಕೂಲಾಚರಣೆಯುಳ್ಳವರೊಂದಿಗೆ ಸ್ನೇಹವೂ, ಅವರುಗಳಿಂದುಂಟಾಗುವ ಧನ ವಸನಾದಿಗಳೂ, ಅವರುಗಳ ಸಂಬಂಧದಿಂದುಂಟಾಗುವ ಹೆಂಡತಿ, ತನ್ಮೂಲಕ ಹುಟ್ಟುವ ಮಕ್ಕಳೂ, ಅವರುಗಳಿರುವ ಸ್ಥಳದಲ್ಲಿ ವಾಸವೂ, ಎಲ್ಲವೂ ದೋಷಾವಹಗಳೆಂದು ಭಾವಿಸಿ ಎಲ್ಲವನ್ನು ಬಿಟ್ಟವನಾದುದರಿಂದ ವಿಭೀಷಣನು ಪ್ರಾತಿಕೂಲ್ಯವರ್ಜನವನ್ನು ಆ ಕಾಲದಲ್ಲಿ ಆಚರಿಸಿದನೆಂದು ತಾತ್ಪರ್ಯವು. ಹಾಗಾದರೆ ಇಷ್ಟು ದಿವಸಗಳು ಅಂತಹ ಪ್ರತಿಕೂಲಾಚರಣೆಯಲ್ಲಿ ಮಗ್ನನಾದ ಅಣ್ಣನೊಂದಿಗೆ ಇರಬಹುದೋ ಎಂದರೆ, ಜ್ಯೇಷ್ಠಭ್ರಾತಾ ಪಿತೃಸಮಃ ಎಂದಿರುವದರಿಂದ ಅಣ್ಣನು ಅಪರಾಧ ಮಾಡಿದರೆ, ಅಣ್ಣನನ್ನು ಹೇಗಾದರೂ ಮಾಡಿ ಸನ್ಮಾರ್ಗಕ್ಕೆ ಬರುವ ಹಾಗೆ ಮಾಡತಕ್ಕದ್ದು ತನಗೆ ಕರ್ತವ್ಯವು, ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾದುದು, ಕರ್ತವ್ಯವಾದುದರಿಂದ, ಇದ್ದದ್ದಾಯಿತು. ಆದರೆ ಅನ್ಯಾಯವಾಗಿ ಅಧರ್ಮ ಪ್ರವರ್ತನೆಯಿಂದ ಲಂಕಾಧಿಪತ್ಯವನ್ನೂ ಲಂಕೆಯನ್ನೂ ಸಹ ನಾಶಮಾಡಿಕೊಳ್ಳುತ್ತಾನಲ್ಲಾ ಎಂದು ಹಿತವನ್ನು ಹೇಳಿದುದಕ್ಕೆ ಪೂರ್ಣಸಭೆಯಲ್ಲಿ "**ತ್ವಾಂ ತು ಧಿಕ್ ಕುಲಪಾಂಸನಂ**" ಎಂದು ಅವಮರ್ಯಾದೆಯುಂಟಾದ ನಂತರ ಇನ್ನು ಇರಬಾರದೆಂದು ನಿಷ್ಕರ್ಷಿಸಿ ಹೊರಟು ಬಂದನು ಎಂದು ತಿಳಿಸುತ್ತಾರೆ. ಇನ್ನು ಮುಂದೆ ಕಾರ್ಪಣ್ಯ ತೋರುವ ವಾಕ್ಯಗಳನ್ನು ಉದಾಹರಿಸುತ್ತಾರೆ.

(೩) "ರಾವಣೋಽನಾಮದುರ್ವೃತ್ತಃ" ಎನ್ರು ತುಡಙ್ಗಿ ಸರ್ವ ಜಿತ್ತಾನ ರಾವಣನೋಟ್ಟೈ ವಿರೋಧತ್ತಾಲೆ ತಾಮ್ ಪೋಕ್ಕತ್ತು ನಿರ್ಕಿರ ನಿಲೈಯೈ ಚೊಲ್ಲುಗೈಯಾಲುಮ್, ಪಿನ್ಬು "ಅನುಜೋ ರಾವಣಸ್ಯಾಹಂ ತೇನಚಾಸ್ಮ್ಯವಮಾನಿತಃ । ಭವಂತಂ ಸರ್ವಭೂತಾನಾಂ ಶರಣ್ಯಂ ಶರಣಂಗತಃ," ಎನ್ಗೈಯಾಲುಮ್, ಕಾರ್ಪಣ್ಯಂ ಶೊಲ್ಲಪ್ಪಟ್ಟದು.

೩. "ಕಾರ್ಪಣ್ಯವು. ರಾವಣೋ ನಾಮ ದುರ್ವೃತ್ತಃ - ರಾವಣನೆಂಬ ಹೆಸರುಳ್ಳ, ಪ್ರಸಿದ್ಧನಾದ ಕೆಟ್ಟ ನಡತೆಯುಳ್ಳವನು" ಎಂದು, [1]ತುಡಙ್ಗಿ-ಪ್ರಾರಂಭಿಸಿ, ಸರ್ವಜಿತ್ತಾನ - ಸಮಸ್ತರನ್ನೂ ಜಯಿಸಿರುವ, ರಾವಣನೊಟ್ಟೈ - ರಾವಣನೊಂದಿಗೆ, ವಿರೋಧತ್ತಾಲೆ - ವಿರೋಧದಿಂದ, ತಾಮ್ ಪೋಕ್ಕತ್ತು- ತಾನು ಬೇರೆ ಉಪಾಯವಿಲ್ಲದೆ, ನಿರ್ಕಿರನಿಲೈಯೈ - ಇರುವ ಸ್ಥಿತಿಯನ್ನು, ಚೊಲ್ಲುಗೈಯಾಲುಮ್ – ಸುಗ್ರೀವಾದಿಗಳ ಸಮೀಪದಲ್ಲಿ ಹೇಳಿಕೊಂಡಿರುವದರಿಂದಲೂ, ಪಿನ್ಬು - ಅನಂತರವೆಂದರೆ ಶ್ರೀರಾಮನಿಂದ ಅಭಯಪ್ರದಾನವಾದನಂತರವೂ, "ಅನುಜೋ ರಾವಣಸ್ಯಾಹಂ - ನಾನು ರಾವಣನ ತಮ್ಮನು, ತೇನ ಚ – ಅವನಿಂದಲೂ ಕೂಡ, ಅವಮಾನಿತಃ - ಅವಮಾನಪಡಿಸಲ್ಪಟ್ಟವನೂ, ಅಸ್ಮಿ - ಆಗಿದ್ದೇನೆ, ಸರ್ವಭೂತಾನಾಂ – ಸರ್ವ ಪ್ರಾಣಿಗಳಿಗೂ, ಶರಣ್ಯಂ - ರಕ್ಷಕನಾದ, ಭವಂತಂ - ನಿಮ್ಮನ್ನು, ಶರಣಂ ಗತಃ - ಶರಣವನ್ನು ಹೊಂದಿರುತ್ತೇನೆ" ಎನ್ಗೈಯಾಲುಮ್ - ಎಂದು ಆಮೇಲೆ ಶ್ರೀರಾಮನಲ್ಲಿ ಹೇಳಿಕೊಂಡಿರುವದರಿಂದಲೂ, ಕಾರ್ಪಣ್ಯವು ಹೇಳಲ್ಪಟ್ಟಿತು.

"ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ॥"

ಎಂಬುವದು ಪೂರಾ ಶ್ಲೋಕವು. ಇಲ್ಲಿ ರಾವಯತೀತಿ ರಾವಣಃ ಎಂದಾಗುವದರಿಂದ, ಎಲ್ಲರನ್ನೂ ಹಿಂಸಿಸಿ ಕೂಗಿಸುವನಾದುದರಿಂದಲೇ ದುರ್ವೃತ್ತನೂ ಹೌದು, ಮತ್ತೂ ಸರ್ವಜಿತ್ತೂ ಹೌದು. ಇದೂ ಅಲ್ಲದೆ ಸ್ವಯಂ ರಾಕ್ಷಸನು, ಮೇಲೂ ರಾಕ್ಷಸೇಶ್ವರನು. ಅಂಥಾವನಿಗೆ ಬುದ್ಧಿವಾದವನ್ನು ಹೇಳಲು ಆತನೊಂದಿಗೆ ಪ್ರಬಲ ವಿರೋಧವನ್ನು ಕಟ್ಟಿಕೊಂಡಿದುದರಿಂದ ತನಗಿನ್ನಾರ್ಯರೂ ಗತಿಯಿಲ್ಲವೆಂಬ ಅನನ್ಯಗತಿತ್ವವೂ ಕಾರ್ಪಣ್ಯರೂಪ ಅಧಿಕಾರ ವಿಶೇಷವೂ ತೋರಿಬರುತ್ತದೆ. "ತೇನ ಚಾಸ್ಮ್ಯವಮಾನಿತಃ" ಎಂದು ಹೇಳಿರುವದರಿಂದ, ತನಗೆ

(೧) ರಾಮ ಯುದ್ಧ ೧೭,೧೦

(೪) ಅಂಜಾದೆ ವನ್ದು ಕಿಟ್ಟಿ (೧) "ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ" ಎನ್ರು ಶೊಲ್ಲುಮ್‌ಪಡಿ ಪಣ್ಣಿನ ಮಹಾವಿಶ್ವಾ

ಗರ್ವಹಾನಿಯೂ ಪ್ರಾಪ್ತವಾಯಿತೆಂಬುವದು ವ್ಯಕ್ತವಾದುದರಿಂದ, ಗರ್ವ ಹಾನಿಯಿಂದ ತೋರುವ ಕಾರ್ಪಣ್ಯವು ನಿದರ್ಶಿಸಲ್ಪಟ್ಟಿತು. ಈ ಅಭಿಪ್ರಾಯ ಗಳನ್ನೇ ಶ್ರೀ ನಿಗಮಾನ್ತದೇಶಿಕರವರು **ಅಭಯಪ್ರದಾನಸಾರದಲ್ಲಿ** ನಾಲ್ಕನೇ ಅಧಿಕಾರದಲ್ಲಿ ಉಪಪಾದಿಸಿರುತ್ತಾರೆ. ಅಲ್ಲಿ ಹೇಳಿರುವದೇನೆಂದರೆ "**ರಾವಣೋ ನಾಮ ದುರ್ವೃತ್ತಃ**" ಎನ್ರು ತುಡಙ್ಗಿ "**ಸೋऽಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ**" ಎನ್ರದುದಿಯಾಕ ದುಷ್ಪ್ರಕೃತಿಯಾನ ರಾವಣನುಕ್ಕು ತಾನ್ ಹಿತೋಪದೇಶಮ್ ಪಣ್ಣಿ, ಪಾಳುಕ್ಕು ನೀರಿರೈತ್ತು ಪರಿಭೂತನಾನಪಡಿ ಶೊಲ್ಲುಗೈಯಾಲುಮ್, "**ಸ್ವರೇಣ ಮಹತಾ ಮಹಾನ್**" ಎನ್ಗಿರ ವಾರ್ತಸ್ವರತ್ತಾಲುಮ್, "**ನಿವೇದಯತ ಮಾಂ ಕ್ಷಿಪ್ರಂ**" ಎನ್ಗಿರ ತ್ವರಾತಿಶಯತ್ತಾಲುಮ್, "**ಪ್ರನಾದಶ್ಚ ಮಹಾನೇಷಃ ತತೋऽಸ್ಯ ಭಯಮಾಗತಂ**" ಎನ್ಗಿರ ಸರ್ವಜ್ಞನಾನ ಶರಣ್ಯನುಡೈಯ ವಾಕ್ಯತ್ತಾಲುಮ್ ಕಾರ್ಪಣ್ಯಂ ಶೊಲ್ಲಪ್ಪಟ್ಟದು. ಇಲ್ಲಿ ಆ ದುರುಳ ರಾವಣನು ಸೇವಕನಿಗೆ ಅವಮಾನಮಾಡಿ ಧಿಕ್ಕರಿಸುವ ಹಾಗೆ ನಿಂದಿಸಿದುದರಿಂದಲೂ, ಆತನಿಗೆ ಹಿತೋಪದೇಶಮಾಡಿ ಹಾಳು ಭೂಮಿಗೆ ನೀರು ಎತ್ತಿದಹಾಗೆ ಪ್ರಯಾಸಪಟ್ಟು ಬಳಲಿದುದರಿಂದಲೂ, ಆರ್ತಸ್ವರದಿಂದ "**ನಿವೇದಯತ ಮಾಂ ಕ್ಷಿಪ್ರಂ** ಎಂದು ಕೂಗಿಕೊಂಡಿದುದರಿಂದ ತೋರುವ ತ್ವರಾತಿಶಯ ದಿಂದಲೂ, ಶ್ರೀರಾಮನೇ ಜ್ಞಾತಿ ಭಯವು ಇವನಿಗೆ ಉಂಟಾಗಿದೆ ಎಂದು ಹೇಳಿದುದರಿಂದಲೂ, ಕಾರ್ಪಣ್ಯವು ನಿದರ್ಶಿಸಲ್ಪಟ್ಟಿತೆಂದು, ಅಲ್ಲಿ ಉಪಪಾದಿಸಿರುತ್ತಾರೆ. ಮುಂದೆ ಮಹಾವಿಶ್ವಾಸವನ್ನು ನಿದರ್ಶಿಸುವ ಪದವಾಕ್ಯಗಳನ್ನು ಉದಾಹರಿಸುತ್ತಾರೆ.

(೪) **ಅಞ್ಜಾದೆ ವನ್ದು ಕಿಟ್ಟಿ** - ಭಯಪಡದೆ ಬಂದು ಶ್ರೀರಾಮನ ಸಮೀಪವನ್ನು ಹೊಂದಿ, **ಸರ್ವಲೋಕ ಶರಣ್ಯಾಯ** - ಸಮಸ್ತ ಲೋಕಕ್ಕೂ ರಕ್ಷಕನಾದ, **ಮಹಾತ್ಮನೇ** - ಮಹತ್ತಾದ ಮನೋಭಿಪ್ರಾಯವುಳ್ಳ ಅಥವಾ ಪರಮಾತ್ಮನಾದ, **ರಾಘವಾಯ** - ರಘುಕುಲೋತ್ಪನ್ನನಾದುದರಿಂದ ಶರಣಾಗತ ಪರಿಪಾಲನದಲ್ಲಿ ಮಹಾ ಉದಾರ ಸ್ವಭಾವವುಳ್ಳ ಶ್ರೀರಾಮನಿಗೋಸ್ಕರ ನನ್ನನ್ನು ಶೀಘ್ರವಾಗಿ ಸಮರ್ಪಿಸಿ ಎಂಬದಾಗಿ ಮುಂದಕ್ಕೆ "**ನಿವೇದಯತ**

(೧) ರಾಮಾ. ಯುದ್ಧ. ೧೯.೫

ಸಮ್ (೨) "ವಿಭೀಷಣೋ ಮಹಾಪ್ರಾಜ್ಞಃ" ಎನ್ರು ಕಾರಣಮುಖತ್ತಾಲೆ

ನಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ ಎಂದಿರುತ್ತದೆ ; **ಎನ್ರುಂಕೊಲ್ಲುಮ್ ಪಡಿ ಪಣ್ಣಿನ ಮಹಾವಿಶ್ವಾಸಂ** – ಎಂದು ಹೇಳುವಹಾಗೆ ಮಾಡಿದ್ದ ಮಹಾ ವಿಶ್ವಾಸವು, **ವಿಭೀಷಣೋ ಮಹಾಪ್ರಾಜ್ಞಃ** ಎಂದರೆ ವಿಭೀಷಣನ ವಿಶೇಷ ತಿಳುವಳಿಕೆಯುಳ್ಳವನು ಎಂದು, **ಕಾರಣಮುಖತ್ತಾಲೆ ಶೊಲ್ಲಪ್ಪಟ್ಟದು** - ಆ ಮಹಾ ವಿಶ್ವಾಸಕ್ಕೆ ಕಾರಣವು ಮಹಾ ಪ್ರಾಜ್ಞತೆಯನ್ನು ಹೊಂದಿರುವನು ಎಂಬಭಿಪ್ರಾಯದಿಂದ ಆ ಮಹಾವಿಶ್ವಾಸಕ್ಕೆ ಕಾರಣರೂಪ ವಾದುದಾಗಿ ಹೇಳಲ್ಪಟ್ಟಿತು. ಸರ್ವಲೋಕಶರಣ್ಯತೆಯು ಶ್ರೀರಾಮನಲ್ಲಿದೆ ಎಂದು ಚನ್ನಾಗಿ ತಿಳಿದವನಾದುದರಿಂದಲೇ, ತನಗೂ ಕೂಡ ಶರಣ್ಯನಾಗುವದರಲ್ಲಿ ಸಂದೇಹ ವಿಲ್ಲವೆಂದು ತೋರುವದರಿಂದ ಮಹಾವಿಶ್ವಾಸವು ಸುವ್ಯಕ್ತವು. ಮತ್ತು ರಘು ಕುಲದ ರಾಜರು ಶರಣಾಗತರಕ್ಷಣೆಯಲ್ಲಿ ಸ್ಥಿರಸಂಕಲ್ಪವುಳ್ಳವರು : ಶ್ರೀರಾಮ ನಾದರೋ ರಘುಕುಲತಿಲಕನು, ಆಶ್ರಿತರಕ್ಷಣೆ ಎಂಬುವ ವ್ರತವನ್ನು ಕೈಕೊಂಡಿರು ವವನು, ಆದುದರಿಂದ ರಾಘವನಾದ ಎಂಬಭಿಪ್ರಾಯವು. ಇದರಿಂದಲೂ ಮಹಾ ವಿಶ್ವಾಸವು ವ್ಯಕ್ತವು. ಮತ್ತು ಆಶ್ರಯಿಸುವನು ಎಷ್ಟು ದೋಷಿಯಾಗಿದ್ದರೂ **'ಯದಿ ವಾ ರಾವಣಸ್ಸ್ವಯಂ''** ಎಂದು ಹೇಳಿ **''ಆನಯೈನಂ"** ಎಂದು ಹೇಳು ವಉದಾರಿಯು ಎಂದು ಚನ್ನಾಗಿ ತಿಳಿದವನು ; ದುಷ್ಟನಾದ ರಾವಣನನ್ನು ಇದುವ ರಿವಿಗೂ ಆಶ್ರಯಿಸಿದ್ದನೆಂಬ ದೋಷಭಾವವನ್ನು ಎಂದಿಗೂ ಮನದಲ್ಲಿ ಎಣಿಸನು ಎಂದು ತಿಳಿದು ಮಹಾತ್ಮನೇ ಎಂದು ಹೇಳಿದುದರಿಂದಲೂ, ವಿಭೀಷಣನು ಮಹಾವಿ ಶ್ವಾಸಯುಕ್ತನಾಗಿ ಬಂದು ನಿರ್ಭಯನಾಗಿ **"ಅಜಗಾಮ ಮುಹೂರ್ತೇನ ಯ ತ್ರರಾಮಸ್ಸಲಕ್ಷ್ಮಣಃ''** ಲಕ್ಷ್ಮಣನೊಂದಿಗಿರುವ ರಾಮನು ಎಲ್ಲಿದ್ದನೊ ಅಲ್ಲಿಗೇ ಒಂದು ಮುಹೂರ್ತದಲ್ಲಿ ಬಹು ತ್ವರೆಯಿಂದ ಬಂದುಬಿಟ್ಟನು ಎಂದು ಹೇಳಿರುವದ ರಿಂದ ಮಹಾ ವಿಶ್ವಾಸರೂಪವಾದ ಅಂಗವು ಇತ್ತೆಂಬುವದನ್ನು ಅರ್ಥಾತ್ ಊಹಿಸಬಹುದೆಂಬುವದು ತಾತ್ಪರ್ಯವು. ಅಂತಹ ಮಹಾ ವಿಶ್ವಾಸ ಉಂಟಾಗ ಬೇಕಾದರೆ, ಈ ವಿಭೀಷಣನಿಗೆ ಪೂರ್ಣವಾದ ಪ್ರಾಜ್ಞತೆಯಿರಬೇಕು. ಅಂತಹ ಸಂಪೂರ್ಣ ಪ್ರಾಜ್ಞತೆಯು, ಮಹಾ ವಿಶ್ವಾಸಕ್ಕೆ ಕಾರಣಭೂತವಾದುದಾಗಿ ಆ ವಿಭೀಷಣನಲ್ಲಿತ್ತೆಂದು, ಮಹರ್ಷಿಯು **''ವಿಭೀಷಣೋ ಮಹಾಪ್ರಾಜ್ಞಃ'** ಎಂಬ ಪ್ರಯೋಗದಿಂದ ವ್ಯಕ್ತಪಡಿಸಿರುತ್ತಾರೆ. ಪ್ರಾಜ್ಞತಾತಿಶಯವಿದ್ದರೇನೇ

(೨) ರಾಮಾ. ಯುದ್ಧ. ೧೯.೩೪

ಕೊಲ್ಲಪ್ಪಟ್ಟದು. ಪ್ರಾಜ್ಞತೆಯ್ಯೆ ವಿಶೇಷಿಕ್ಕಿರ ಮಹಚ್ಛಬ್ದತ್ತಾಲ್ ವಿಶ್ವಾಸಾತಿಶಯನ್ತಾನೇ ವಿವಕ್ಷಿತಮಾಕವುಮಾಮ್. (೧) "ರಾಘವಂ ಶರಣಂ ಗತಃ" ಎನ್ಗೈಯಾಲೆ ಉಪಾಯವರಣಾನ್ತರ್ನೀತಮಾನ ಗೋಪ್ತೃತ್ವವರಣಂ ಕೊಲ್ಲಿತ್ತಾಯಿತ್ತು.

ವಿಶ್ವಾಸಾತಿಶಯ ಉಂಟಾಗುತ್ತವೆಂದು ತಿಳಿಸುವದಕ್ಕಾಗಿ ಎರಡು ಕಡೆಯಲ್ಲೂ ಮಹಚ್ಛಬ್ದವು ಉಪಯೋಗಿಸಲ್ಪಟ್ಟಿರುತ್ತದೆ. ಫಲದಲ್ಲಿ ಶಂಕಾಯುಕ್ತನಾಗಿರುವವನು, ಸ್ವಲ್ಪ ಭಯದಿಂದ ಸಮಯಾಪಾಯಗಳನ್ನಾಲೋಚಿಸಿ ಸಾವಕಾಶನಾಗಿ ತಾನು ಆಶ್ರಯಿಸಬೇಕೆಂಬುವನಲ್ಲಿಗೆ ಹೋಗುವನು. ಹಾಗಿಲ್ಲದೆ ನಿರ್ಭಯನಾಗಿ, ತ್ವರೆಯಿಂದ ಹೋಗಿ ಆಶ್ರಯಿಸಿರುವದರಿಂದ ಮಹಾ ವಿಶ್ವಾಸ ಉಂಟೆಂಬುವದು ತೋರಿಬರುತ್ತದೆಂಬ ಭಾವವು.

ಪ್ರಾಜ್ಞತೆಯ್ಯೆ ವಿಶೇಷಿಕ್ಕಿರ - ಪ್ರಾಜ್ಞನೆಂಬ ಪದವನ್ನು ವಿಶೇಷಿಸುವ, **ಮಹಚ್ಛಬ್ದತ್ತಾಲೆ** - ಮಹತ್ತೆಂಬ ಶಬ್ದದಿಂದ, **ವಿಶ್ವಾಸಾತಿಶಯನ್ತಾನೇ** - ಹೆಚ್ಚಾದ ವಿಶ್ವಾಸವೇ ಎಂದರೆ ಮಹಾ ವಿಶ್ವಾಸವು ತಾನೇ, **ವಿವಕ್ಷಿತಮಾಕವುಮಾಮ್** - ಚನ್ನಾಗಿ ತೋರಿಬರುತ್ತದೆ ಆ ಪ್ರಾಜ್ಞತೆಯು ಎಂಥಾದ್ದೆಂದರೆ ಆ ಮಹಾನುಭಾವನಾದ ಶ್ರೀರಾಮನನ್ನು ರಾಕ್ಷಸಶತ್ರುವೆಂದು ಭಾವಿಸದೆ ಮಿತ್ರಭಾವದಿಂದ ನೋಡಿದರೆ, ಎಂದರೆ "**ಸರ್ವಸ್ಯಶರಣಂಸುಹೃತ್**" ಎಂದು ಹೇಳಿರುವ ಹಾಗೆ "**ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ**" ಎಂದು ಹೇಳುವನೆಂಬ ಪೂರ್ಣ ನಂಬಿಕೆಯಿಂದ, ತನ್ನ ಆಶ್ರಯನಾದ ಸ್ವಾಮಿಯಲ್ಲಿ, ಉದಾರಭಾವ, ಕೃಪಾ, ಸೌಶೀಲ್ಯ, ಸೌಲಭ್ಯಾದಿ ಮಹಾಗುಣಗಳಿವೆ ಎಂದು ತಿಳಿಯೋಣವು.

(೫) ಮುಂದೆ ಗೋಪ್ತೃತ್ವವರಣವೆಂಬುವದು ಕೂಡ ಅರ್ಥಾತ್ ತೋರಿಬರುತ್ತದೆಂದು ತೋರ್ಪಡಿಸುತ್ತಾರೆ. ಯಾವಾಗ ಶರಣುಹೊಂದಿದನೆಂದು ಹೇಳಲ್ಪಟ್ಟಿತೋ, ಅದರಲ್ಲೇ ಗೋಪ್ತೃತ್ವವರಣವೂ ಅಂತರ್ಭೂತವೆಂದು ತಿಳಿಸುತ್ತಾರೆ.

"**ಸೋಽಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ ।**
ತ್ಯಕ್ತ್ವಾ ದಾರಾಂಶ್ಚ ಪುತ್ರಾಂಶ್ಚ ರಾಘವಂ ಶರಣಂಗತಃ " ॥

ಎಂಬ ಶ್ಲೋಕದಲ್ಲಿ, "**ರಾಘವಂ ಶರಣಂಗತಃ**" ಶ್ರೀರಾಮನನ್ನು ತಾನು ಉಪಾಯನಾಗಿ ಹೊಂದಿದವನು, **ಎನ್ಗೈಯಾಲೇ** - ಎಂದು ಹೇಳಿರುವ

---

೧. ರಾಮಾ. ಯುದ್ಧ ೧೭,೧೪

ಉಪಾಯವರಣಶಬ್ದತ್ತಾಲೆ ವ್ಯಂಜಿತವಾಗಿರವಳವನ್ನಿಕ್ಕೆ (೧) "ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ" ಎನ್ಗಿೖಯಾಲೆ

ದರಿಂದ, ಉಪಾಯ ವರಣಾನ್ತರ್ಗೀತವಾನ - ಉಪಾಯವನ್ನು ಅವಲಂಬಿಸುವದರಲ್ಲೇ ಅಂತರ್ಭೂತವಾದ, ಗೋಪ್ತೃತ್ವವರಣವು, **ಶೊಲ್ಲಿತ್ತಾಯಿತ್ತು** - ಹೇಳಿದಂತಾಯಿತು. ಇಲ್ಲಿ ಗೋಪ್ತೃತ್ವವರಣವು ಸಾಕ್ಷಾತ್ತಾಗಿ ಶಾಬ್ದರೂಪವಾಗಿ ಹೇಳದಿದ್ದರೂ ಅರ್ಥಾತ್ ಸಿದ್ಧವೆಂಬ ಭಾವವು ಇಲ್ಲಿ "ಶರಣಂಗತಃ" ಎಂಬಲ್ಲಿ ಉಪಾಯಾನುಷ್ಠಾನ ಮಾತ್ರ ಹೇಳಲ್ಪಟ್ಟಿತು, ಇಲ್ಲಿ ಗೋಪ್ತೃತ್ವವರಣವು ಹೇಳಲಿಲ್ಲವಲ್ಲಾ ಎಂದರೆ, ಅದರಲ್ಲೇ ಈ ಗೋಪ್ತೃತ್ವವರಣವೂ ಅಂತರ್ಗೀತವೆಂದು ಹೇಳುತ್ತಾರೆ. ಉಪಾಯಾನುಷ್ಠಾನವು ಗೋಪ್ತೃತ್ವವರಣಕ್ಕಿಂತಲೂ ಭಿನ್ನವಾದುದೇನೂ ಅಲ್ಲವೆಂಬ ಅಭಿಪ್ರಾಯದಿಂದ ಅದರಲ್ಲೇ ಅಂತರ್ಭೂತವೆಂದು ಹೇಳಿರುತ್ತಾರೆ. ಹೇಗೆ ಅಂತರ್ಭೂತವೆಂದರೆ, ಸರ್ವಜ್ಞನಾಗಿ ಸರ್ವರಕ್ಷಕನಾಗಿರುವ ಗೋಪ್ತೃವಿನ ಸಾಮೀಪ್ಯದಲ್ಲಿ ಮಾಡಿದ ಉಪಾಯವು ರಕ್ಷಣರೂಪವಾದ ಗೋಪ್ತೃತ್ವ ಪ್ರಾರ್ಥನೆಯಾಗಿ ಪರಿಣಮಿಸದೇ ಎಂದಿಗೂ ಹೋಗಲಾರದು. ಗೋಪ್ತೃವಿನ ಸಮೀಪದಲ್ಲಿ ಮಾಡುವ ಉಪಾಯವು ಸಾಮಾನ್ಯವು, ಅದು ವಿಶೇಷವಾದ ಗೋಪ್ತೃತ್ವರೂಪ ಪ್ರಾರ್ಥನೆಯಾಗುವದರಲ್ಲೇನೂ ಸಂದೇಹವಿಲ್ಲವು. ನಿಕ್ಷೇಪರಕ್ಷೆಯಲ್ಲಿ ಶರಣ ಶಬ್ದವೂ ಗೋಪ್ತೃತ್ವ ಶಬ್ದವೂ ಸಮಾನಾರ್ಥ ಉಳ್ಳವುಗಳಾಗಿಯೇ ಹೇಳಲ್ಪಟ್ಟಿರುತ್ತದೆ. ಆದುದರಿಂದ "ಶರಣಂ ಗತಃ" ಎಂದು ಯಾವಾಗ ಹೇಳಲ್ಪಟ್ಟಿತೋ, ಆವಾಗ ಗೋಪ್ತೃತ್ವವರಣವೂ ಸಹ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಉಪಾಯಾಂತರ ಸ್ಥಾನದಲ್ಲಿ ಶ್ರಿಯಃಪತಿಯನ್ನಿಟ್ಟು ನನ್ನ ರಕ್ಷಾಭರವು ನಿನ್ನಲ್ಲೇ ಎಂಬ ಭರನ್ಯಾಸವೇ ಉಪಾಯ ವರಣವು. ಇದಿಲ್ಲದೇ ಬೇರೆ ಇನ್ನಾವ ಉಪಾಯವೂ ಇರುವದಿಲ್ಲವು. ಆದುದರಿಂದಲೇ, ಗೋಪ್ತೃತ್ವವರಣವು ಉಪಾಯವರಣದಲ್ಲೇ **ಅಂತರ್ಗೀತವು.**

ಹೀಗೆ ಈ ವಿಭೀಷಣ ಶರಣಾಗತಿ ಪ್ರಕರಣದಲ್ಲಿ ಐದು ಅಂಗಗಳೂ ಇವೆ ಎಂದು ತೋರ್ಪಡಿಸಿದವರಾಗಿ ಮುಂದೆ ಅಂಗಿಯಾದ ಆತ್ಮನಿಕ್ಷೇಪವೂ ಕೂಡ ಹೇಳಲ್ಪಟ್ಟಿದೆ ಎಂದು ವ್ಯಕ್ತಪಡಿಸುತ್ತಾರೆ.

ಉಪಾಯವರಣಶಬ್ದತ್ತಾಲೆ - ಉಪಾಯಾನುಷ್ಠಾನವನ್ನು ಬೋಧಿಸುವ ಶಬ್ದದಿಂದ, ಅದು ಯಾವುದೆಂದರೆ, **ರಾಘವಂ ಶರಣಂಗತಃ** ಎಂಬಲ್ಲಿ

(೧) ರಾಮಾ. ಸುಂದರ. ೧೭-೧೫.

ಘಟಕ ಪುರಸ್ಸರಮಾನ ಆತ್ಮನಿಕ್ಷೇಪಂ ಶೊಲ್ಲಿತ್ತು. ಇಪ್ಪ್ರಕರಣತ್ತಿಲ್

ರುವ **ಶರಣ** ಶಬ್ದದಿಂದಲೇ, **ವ್ಯಂಜಿತಮಾಗಿರ ವಳವನ್ರಿಕ್ಕೆ** - ತೋರಿ ಬರುವದು ಮಾತ್ರವೇ ಅಲ್ಲದೆ, "ಉಪಸ್ಥಿತಂ - ಶತ್ರುಪಕ್ಷನೆಂದು ಭಾವಿಸದೆ ತನಗೆ ಮಿತ್ರಪಕ್ಷವಾಗಿ ಸರ್ವವಿಧದಲ್ಲೂ ರಕ್ಷಕನೆಂಬ ಮಹಾವಿಶ್ವಾಸದಿಂದ ಅಭಿಮುಖವಾಗಿ ಸನ್ನಿಹಿತನಾಗಿರುವ, **ವಿಭೀಷಣಂ** – ವಿಭೀಷಣನಾಗಿರುವ, **ಮಾಂ** - ನನ್ನನ್ನು, **ಕ್ಷಿಪ್ರಂ** - ಬೇಗನೆ, **ನಿವೇದಯತ** - ಆ ಶ್ರೀರಾಮನ ಪಾದದಲ್ಲಿ ಸಮರ್ಪಿಸಿರಿ ಎಂದರೆ ನನ್ನನ್ನು ಅವರ ಪಾದದಲ್ಲಿ ಸಮರ್ಪಿಸಿದ ಪುಣ್ಯವನ್ನು ಹೊಂದಿರಿ ಎಂಬ ಭಾವವು." **ಎನ್ರೈಯಾಲೆ** - ಎಂದು ಹೇಳಿರುವದರಿಂದ, **ಘಟಕಪುರಸ್ಸರಮಾನ** - ಹಾಗೆ ಸೇರಿಸುವರಾದ ಹನುಮಂತನೇ ಮೊದಲಾದವರುಗಳನ್ನು ಮುಂದಿಟ್ಟು, **ಆತ್ಮನಿಕ್ಷೇಪಂ ಶೊಲ್ಲಿತ್ತು** - ಅಂಗಿಯಾದ ಆತ್ಮನಿವೇದನವು ಹೇಳಲ್ಪಟ್ಟಿತು. ಈ ಪ್ರಕರಣದಲ್ಲಿ ಅಂಗಿಯಾದ ಆತ್ಮನಿಕ್ಷೇಪವು ಹೇಳಲ್ಪಟ್ಟಿತೆಂಬುವದನ್ನು ಎರಡು ವಿಧವಾಗಿ ತಿಳಿಯಬಹುದೆಂದು ಉಪದೇಶಿಸುತ್ತಾರೆ. "**ರಾಘವಂ ಶರಣಂಗತಃ**" ಎಂದು ವಿಭೀಷಣನು ಹೇಳಿಕೊಂಡಿರುವ ವಾಕ್ಯದಲ್ಲಿ **ಉಪಾಯವರಣ ಶಬ್ದವು ಯಾವುದೆಂದರೆ ಶರಣಂ ಗತಃ** ಎಂಬುವದು. ಹಿಂದೆಯೇ (೯೪೨ ನೆಯ ಪುಟವನ್ನು ಪರಾಂಬರಿಸಿ) ಲಕ್ಷ್ಮೀತಂತ್ರ ವಾಕ್ಯವಾದ,

ನಿಕ್ಷೇಪಾಪರಪರ್ಯಾಯೋ ನ್ಯಾಸಃ ಪಂಚಾಂಗಸಂಯುತಃ ।
ಸನ್ನ್ಯಾಸಸ್ತ್ಯಾಗ ಇತ್ಯುಕ್ತಶ್ಶರಣಾಗತಿರಿತ್ಯಪಿ ॥"

ಎಂಬ ಪ್ರಮಾಣದಲ್ಲಿ ಆತ್ಮನಿಕ್ಷೇಪಕ್ಕೆ ಬೇರೇ ಹೆಸರೇ ಶರಣಾಗತಿಯು ಎಂದು ಹೇಳಿ ಉಪಪಾದಿಸಿರುವದರಿಂದ **ಶರಣಂಗತಃ** ಎಂಬುವದರಿಂದಲೇ ಆತ್ಮನಿಕ್ಷೇಪವು **ವ್ಯಂಜಿತವಾಯಿತು** ಎಂದು ತಿಳಿಸುವದಕ್ಕಾಗಿ **ವ್ಯಂಜಿತಮಾಗಿರ ವಳವನ್ರಿಕ್ಕೇ** - ಎಂದು ಪ್ರಯೋಗಿಸಿರುತ್ತಾರೆ. ಯಾವಾಗ ಶರಣಂಗತಃ ಎಂದು ಹೇಳಲ್ಪಟ್ಟಿತೋ, ಆದರಿಂದಲೇ ಆತ್ಮನಿಕ್ಷೇಪವು ಹೇಳಲ್ಪಟ್ಟಿತೆಂಬ **ಭಾವವು.** ಇದೂ ಅಲ್ಲದೆ ಇನ್ನೊಂದು ವಿಧವಾಗಿಯೂ ಆತ್ಮನಿಕ್ಷೇಪವನ್ನು ಗ್ರಹಿಸಬಹುದು. **ನಿವೇದಯತ ಮಾಂ ಕ್ಷಿಪ್ರಂ** ಎಂದರೆ ನನ್ನನ್ನು, **ರಾಘವಾಯ ಮಹಾತ್ಮನೆ** - ಆ ಶ್ರೀರಾಮನಿಗೋಸ್ಕರವಾಗಿ ಸಮರ್ಪಿಸಿರಿ ಎಂದು ಆಂಜನೇಯಾದಿಗಳನ್ನು ಮುಂದಿಟ್ಟು ಪ್ರಾರ್ಥಿಸಿರುತ್ತಾನೆ ಹಿಂದೆ ತಾದರ್ಥ್ಯರೂಪಚತುರ್ಥಿಯೂ, ಹವಿಸ್ಸನ್ನು ಸಮರ್ಪಿಸುವ ಹಾಗೆ ತೋರುವ ನಿವೇದನ ಶಬ್ದವೂ ಇರುವದರಿಂದ ಆತ್ಮನಿಕ್ಷೇಪವು ಬಹು ಸ್ಪಷ್ಟವಾಗಿ ತೋರಿಬರುತ್ತದೆ. ಹೇಗೆಂ

ನಿವೇದನಶಬ್ದಂ ವಿಜ್ಞಾಪನ ಮಾತ್ರ ಪರಮಾಗಾಲ್ ನಿಷ್ಪ್ರಯೋಜನಮ್.

ದನೆ, ಈ ಆತ್ಮನು ಸರ್ವೇಶ್ವರನಿಗಾಗಿಯೇ ಎಂದರೆ ಆತನ ಸ್ವತ್ತಾಗಿ ಆತನಿಗೇನೇ ಶೇಷಭೂತನಾಗಿರುವದರಿಂದ ಆತನಲ್ಲೇ ತನ್ನನ್ನೂ ತನ್ನ ರಕ್ಷಾಭರವನ್ನೂ ಇಟ್ಟಿರುವೆನು ಎಂದು ತಿಳಿಸಿ ಎಂಬ ಭಾವವು. "**ವಸುರಣ್ಯೋ ವಿಭೂರಸಿ**" ಎಂಬ ಮಂತ್ರದಲ್ಲಿ ಹೇಳಿರುವಹಾಗೆ ಹವಿಸ್ಸಮರ್ಪಣೆ ರೂಪವಾಗಿ ಆತ್ಮನಿಕ್ಷೇಪವನ್ನು ಹೇಳುವದಕ್ಕಾಗಿ ಇಲ್ಲಿ **ನಿವೇದಯತ** ಎಂಬ ಪ್ರಯೋಗವು. ತಾನಾಗಿಯೇ ಸ್ವತಃ **ನಿವೇದನ ಮಾಡದೆ,** ಆಂಜನೇಯಾದಿಗಳನ್ನು ಮುಂದಿಟ್ಟು ಸಮರ್ಪಿಸಿದನೆಂದು ತಿಳಿಸಿರಿ ಎಂಬ ಪ್ರಾರ್ಥನೆ ಏತಕ್ಕೆಂದರೆ, ಭರನ್ಯಾಸವು ಸರ್ವೇಶ್ವರನಿಗೆ ಅಂತರಂಗ ಸಖರಾದ ಆಚಾರ್ಯರ ಮೂಲಕ ನಡಿಸುವದೇ ಸುಕರವು, ಶಾಸ್ತ್ರಸಮ್ಮತವಾದುದೆಂದು ತಿಳಿಸುವದಕ್ಕಾಗಿಯೇ ಮಹರ್ಷಿಯು **ನಿವೇದಯತ** ಎಂಬ ಪ್ರಯೋಗವು. ಈ ಮಹರ್ಷಿಯ ಹೃದಯವನ್ನರಿತ ಸಂಪೂರ್ಣಜ್ಞಾನನಿಧಿಗಳಾದ ಶ್ರೀಮದಾಚಾರ್ಯರು ಅದರ ವ್ಯಾಖ್ಯಾನವನ್ನು ವಿವರಿಸುವದಕ್ಕಾಗಿ, **ಘಟಕಪುರಸ್ಸರಮಾನ** ಆತ್ಮನಿಕ್ಷೇಪವೆಂದು ಉಪದೇಶಿಸಿರುತ್ತಾರೆ.

ನಿವೇದಯತ ಶಬ್ದಕ್ಕೆ ಇಷ್ಟೇಲ್ಲಾ ಅರ್ಥವೇ ? **ನಿವೇದಯತ** ಎಂದರೆ ಶ್ರೀರಾಮನಲ್ಲಿ ನಾನು ಬಂದಿರುವದಾಗಿ ವಿಜ್ಞಾಪಿಸಿರಿ ಎಂದು ಇಷ್ಟುಮಾತ್ರ ಅರ್ಥವಾಗುವದಿಲ್ಲವೇ ? ಎಂದರೆ, ಹಾಗೆ ಅರ್ಥಮಾಡುವದು ನಿಸ್ಸಾರವಾದ ಅಭಿಪ್ರಾಯವಾಗುತ್ತದೆ. ಅಷ್ಟುಮಾತ್ರ ವಿಜ್ಞಾಪಿಸಿ ಬಿಟ್ಟರೆ, ಶತ್ರುಪಕ್ಷದಿಂದ ಬಂದವನಾಗುದರಿಂದ ಪ್ರತ್ಯಕ್ಷ ವಿರೋಧವಾದೀತೇ ವಿನಾ ಕಾರ್ಯಕಾರಿಯಾಗುವದಿಲ್ಲವಾದುದರಿಂದ, ವಿಭೀಷಣನ ಅಭಿಪ್ರಾಯವು ಹಾಗಲ್ಲವು. ಫಲಕಾರಿಯೇ ಆಗಬೇಕು, ಅನ್ಯಥಾ ಆಗಕೂಡದೆಂದಿರುವದರಿಂದ ವಿಭೀಷಣನಿಗೆ **ನಿವೇದಯತ** ಎಂದು ಹೇಳುವಾಗ ಆತ್ಮರಕ್ಷಾಭರಸಮರ್ಪಣೆಯುಳ್ಳೂ, ನೀವುಗಳೂ ಪುರುಷಕಾರರೂಪದಲ್ಲಿ ಸಹಾಯವಾಗತಕ್ಕದ್ದೆಂಬಭಿಪ್ರಾಯವಲ್ಲೂ ಆದರವು, ಎಂಬ ವದು ಸುವ್ಯಕ್ತವಾದುದರಿಂದ, ನಿಸ್ಸಾರವಾದ ವಿಜ್ಞಾಪನ ಮಾತ್ರ ಅರ್ಥವನ್ನು **ನಿವೇದನ** ಶಬ್ದಕ್ಕೆ ಹೇಳತಕ್ಕದ್ದುಚಿತವಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಇಪ್ಪ್ರಕರಣತ್ತಿಲ್- ಈ ಸಂದರ್ಭದಲ್ಲಿ ಎಂದರೆ ವಿಭೀಷಣನು **ನಿವೇದಯತ** ಎಂದು ಹೇಳಿರುವ ಸಂದರ್ಭದಲ್ಲಿ ಅಥವಾ ಈ ಶರಣಾಗತಿಯು ಉಪಪಾದನೆಯ ಸಂದರ್ಭದಲ್ಲಿ, **ನಿವೇದನಶಬ್ದಂ-ನಿವೇದಯಿತ** ಎಂಬಲ್ಲಿರುವ ನಿವೇದನ ಶಬ್ದವು **ವಿಜ್ಞಾಪನಮಾತ್ರ ಪರಮಾನಾಲ್** - ವಿಜ್ಞಾಪನೆಯನ್ನು ಮಾತ್ರ ತಿಳಿಸುತ್ತದೆ

ಲೋಕದೃಷ್ಟಾನ್ತೇ ಚ ಅಙ್ಗಾಙ್ಗ್ಯವಿನಾಭೂತಪ್ರದರ್ಶನಮ್

ಇಪ್ಪಡಿ ಮತ್ತುಮುಳ್ಳ ಪ್ರಪತ್ತಿ ಪ್ರಕರಣಙ್ಗಳಿಲುಮ್, ಲೌಕಿಕ ದ್ರವ್ಯನಿಕ್ಷೇಪಙ್ಗಳಿಲುಮ್ ಸಂಕ್ಷೇಪವಿಸ್ತಾರಪ್ರಕ್ರಿಯೈಯಾಲೆ ಇವ್ವ

ಎಂದರೆ, **ನಿಷ್ಪ್ರಯೋಜನಮ್** - ನಿಸ್ಸಾರವಾದುದಾಗುವದರಿಂದ ನಿಷ್ಪ್ರಯೋಜನವು. ಅಥವಾ ಆಗ ಅದು ವಿಭೀಷಣನಿಗೆ ಫಲಕಾರಿಯಾಗದೆಯೂ ಹೋಗಬಹುದಾದುದರಿಂದ ನಿಷ್ಪ್ರಯೋಜನವು. ಅಥವಾ ಶರಣಾಗತಿಗೆ ಅಂಗಿಯೇ ಇಲ್ಲದುದರಿಂದ, ಹಿಂದೆ ಹೇಳಿದ **ಶರಣಂಗತಃ** ಎಂಬುವದಕ್ಕೆ ವಿರೋಧವಾಗಿ **ಶರಣಾಗತಿಯೇ** ನಿಷ್ಪ್ರಯೋಜನವಾಗುತ್ತದೆಂಬ ಭಾವಗಳು ತೋರಿಬರುತ್ತವೆ. ಇಲ್ಲಿ ಪ್ರಕರಣವು ಶರಣಾಗತಿಯು, ತಾನು ಶರಣಾಗತಿಯನ್ನವಲಂಬಿಸಿರುತ್ತೇನೆಂದು ತಿಳಿಸಬೇಕೆಂಬುವದು ವಿಭೀಷಣನ ಮನೋಽಭಿಪ್ರಾಯವು ಇವನ್ನು ಬಿಟ್ಟು ತಾನು ಬಂದಿದ್ದೇನೆಂದು ತಿಳಿಸಿ ಎಂಬ ವಿಜ್ಞಾಪನಾಪರವೆಂದು ಹೇಳಿದರೆ ನಿಷ್ಪ್ರಯೋಜನವಾಗುತ್ತದೆಂಬ ಭಾವವು. ಇದೂ ಅಲ್ಲದೆ ವಿಭೀಷಣನು ಗೋಪ್ಯವಾಗಿ ಬರಲಿಲ್ಲವು. ಎಲ್ಲರೂ ಕಾಣುವ ಹಾಗೆ ಬಂದು **"ಉವಾಚ ಚ ಮಹಾಪ್ರಾಜ್ಞಃ ಸ್ವರೇಣ ಮಹತಾಮಹಾನ್"** ಎಂದು ಹೇಳಿರುವದರಿಂದ ರಾಮ ಲಕ್ಷ್ಮಣರೂ ಕೂಡ ಕೇಳುವ ಹಾಗೆ ಹೇಳಿರುತ್ತಾನೆ ಆದುದರಿಂದ ಬರೀ ವಿಜ್ಞಾಪನೆಯು ಇಲ್ಲಿ ಅನಾವಶ್ಯಕವಾದುದರಿಂದ, ನಿವೇದನಕ್ಕೆ ಬರೀ ವಿಜ್ಞಾಪನೆಯನ್ನು ಹೇಳುವದು ನಿಷ್ಪ್ರಯೋಜನವಾದುದು. ಆತ್ಮನಿಕ್ಷೇಪಾರ್ಥದಲ್ಲಿ **ನಿವೇದನ** ಶಬ್ದವನ್ನೇ ಉಪಯೋಗಿಸಿರುವದಕ್ಕೆ, **"ಸಖ್ಯಮಾತ್ಮನಿವೇದನಂ"** ಎಂಬ **"ಕಿಂಕರೋಸ್ಮೀತಿ ಚಾತ್ಮಾನಂ ದೇವಾಯೈವಂ ನಿವೇದಯೇತ್"** ಎಂಬ ಪ್ರಮಾಣಗಳೂ ಉಂಟು. ಈ ಅಭಿಪ್ರಾಯಗಳನ್ನೆಲ್ಲಾ ಶ್ರೀವೇದಾಚಾರ್ಯರವರು **"ಅಭಯಪ್ರದಾನಸಾರ"** ದಲ್ಲಿ ಬಹು ಚನ್ನಾಗಿ ಉಪಪಾದಿಸಿರುತ್ತಾರೆ.

ಹೀಗೆ ಮೇಲೆ ಹೇಳಿದ ತ್ರಿಜಟಾ ವಿಭೀಷಣ ಶರಣಾಗತಿಗಳಲ್ಲಿ **ಈ ಐದು** ಅಂಗಗಳನ್ನೂ ಅಂಗಿಯನ್ನೂ ಸಹ ತೋರಿಸಿದವರಾಗಿ ಇನ್ನು **ಲೌಕಿಕ** ದೃಷ್ಟಾಂತಗಳಲ್ಲೂ ಈ ಐದು ಅಂಗಗಳನ್ನೂ ಅಂಗಿಯನ್ನೂ ಕಾಣಬಹುದೆಂದು ಉಪಪಾದಿಸುತ್ತಾರೆ.

ಲೋಕದೃಷ್ಟಾನ್ತದಲ್ಲೂ ಈ ಅಂಗಾಂಗಿಗಳ ಪ್ರದರ್ಶನವು

ಇಪ್ಪಡಿ - ಈ ಮೇಲೆ ಹೇಳಿದ, ತತ್ಸಹಿತ ಪುರುಷಾರ್ಥಗಳನ್ನು ಬೋಧಿ

ರ್ಥಙ್ಗಳ್ ಕಾಣಲಾಮ್. ತಾನ್ ರಕ್ಷಿಕ್ಕಮಾಟ್ಟಾದ ದೊರುವಸ್ತುವೈ ರಕ್ಷಿಕ್ಕವಲ್ಲನೊರುವನ್ ಪಕ್ಕಲಿಲೇ ಸಮರ್ಪಿಕ್ಕುಮ್ ಪೋದು, ತಾನವನ್ ತಿರತ್ತಿಲ್ ಅನುಕೂಲಾಭಿಸಂಧಿಯೈ ಯುಡೈಯನಾಯ್, ಪ್ರತಿಕೂಲಾಭಿಸಂಧಿಯೈತ್ತವಿರ್ನ್ದು, "ಅವನ್ ರಕ್ಷಿಕ್ಕವಲ್ಲನ್ ಅಪೇಕ್ಷಿತ್ತಾಲ್ ರಕ್ಷಿಪ್ಪ

ಸುವ ಶ್ರೀಮದ್ರಾಮಾಯಣದಲ್ಲಿ ಮಹರ್ಷಿಯಿಂದ ಉಪಪಾದಿತವಾಗಿರುವ ಎರಡು ಶರಣಾಗತಿ ಪ್ರಕರಣಗಳಲ್ಲಿನ ಹಾಗೆ, ಮತ್ತು ಮುಳ್ಳ - ಇತರ, **ಪ್ರಕರಣಙ್ಗಳಿಲುಮ್** - ಕಾಕ, ಗಜೇಂದ್ರ, ಕಪೋತಾದಿ ಪ್ರಕರಣಗಳಲ್ಲೂ, ಮತ್ತು **ಲೌಕಿಕದ್ರವ್ಯನಿಕ್ಷೇಪಙ್ಗಳಿಲುಮ್** - ಈ ಲೋಕದಲ್ಲಿ ಹಣವನ್ನು ಇನ್ನೊಬ್ಬರಲ್ಲಿ ಇಟ್ಟಿರುವ ಸಂದರ್ಭಗಳಲ್ಲೂ, **ಸಂಕ್ಷೇಪವಿಸ್ತರ ಪ್ರಕ್ರಿಯೈಯಾಲೆ** - ಒಂದು ಸಂದರ್ಭದಲ್ಲಿ ಸಂಕ್ಷೇಪವಾಗಿಯೂ ಇನ್ನೊಂದು ಸಂದರ್ಭದಲ್ಲಿ ವಿಸ್ತಾರವಾಗಿಯೂ ಇರೋಣ ಹೇಗೋ ಹಾಗೆ, **ಇವ್ವರ್ಥಙ್ಗಳ್** - ಈ ಅಂಗಾಂಗಿಗಳಿರುವದನ್ನು, **ಕಾಣಲಾಂ** - ತಿಳಿಯಬಹುದು. ಈ ವಾಕ್ಯದಲ್ಲಿ ದ್ರವ್ಯ ಶಬ್ದವು ಹಣವನ್ನಾಗಲಿ, ಅಥವಾ ಪೆಟ್ಟು ಬೆಲೆಯುಳ್ಳ ಆಭರಣ ಮೊದಲಾದ ಯಾವ ವಸ್ತುವನ್ನಾಗಲಿ ಬೋಧಿಸಬಹುದು. **ಲೌಕಿಕದ್ರವ್ಯನಿಕ್ಷೇಪ** ದೃಷ್ಟಾಂತದಲ್ಲೂ ಈ ಐದು ಅಂಗಗಳೂ ಮತ್ತು ಅಂಗಿಯೂ ಸಹ ಅವಿನಾಭೂತವಾಗಿ ಸೇರಿರುತ್ತವೆ ಎಂದು ಮುಂದಿನ ವಾಕ್ಯದಿಂದ ತೋರ್ಪಡಿಸುತ್ತಾರೆ. **ತಾನ್ ರಕ್ಷಿಕ್ಕಮಾಟ್ಟಾದ ದೊರುವಸ್ತುವೈ** – ತಾನು ರಕ್ಷಿಸಲು ಶಕ್ತಿಯಿಲ್ಲದಿರುವ ಒಂದು ವಸ್ತುವನ್ನು, ಎಂದರೆ ಅದು ಹೆಚ್ಚು ಬೆಲೆಯುಳ್ಳದಾದುದರಿಂದ ಯಾರಾದರೂ ಅಪಹರಿಸಿಬಿಟ್ಟಾರೆಂಬ ಭೀತಿಯಿಂದ, ತನಗೆ ರಕ್ಷಿಸಿಕೊಳ್ಳಲು ಶಕ್ತಿಯಿಲ್ಲದ ವಸ್ತುವನ್ನು ಎಂಬ ಭಾವವು, **ರಕ್ಷಿಕ್ಕವಲ್ಲನೊರುವನ್ ಪಕ್ಕಲಿಲೇ** - ರಕ್ಷಿಸಲು ಶಕ್ತಿಯುಳ್ಳ ಒಬ್ಬನಲ್ಲಿ, **ಸಮರ್ಪಿಕ್ಕುಂಪೋದು** - ಸಮರ್ಪಿಸುವಾಗ, ಇಟ್ಟಿರಬೇಕೆಂದು ತಾನು ಪ್ರಾರ್ಥಿಸುವಾಗ, **ತಾನವನ್ ತಿರತ್ತಿಲ್** – ತಾನು ಅವನ ವಿಷಯದಲ್ಲಿ, **ಅನುಕೂಲಾಭಿಸಂಧಿಯೈ ಯುಡೈಯನಾಯ್** - ಅನುಕೂಲನಾಗಿರುವ ಸಂಕಲ್ಪವನ್ನುಳ್ಳವನಾಗಿಯೂ, (ಇದರಿಂದ ಆನುಕೂಲ್ಯಸಂಕಲ್ಪವು ಉದಾಹರಿಸಲ್ಪಟ್ಟಿತು) **ಪ್ರತಿಕೂಲಾಭಿಸಂಧಿಯೈತ್ತವಿರ್ನ್ದು** - ಪ್ರತಿಕೂಲಾಚರಣೆಯನ್ನು ಬಿಟ್ಟು, (ಇದರಿಂದ ಪ್ರಾತಿಕೂಲ್ಯವರ್ಜನವು ಹೇಳಲ್ಪಟ್ಟಿತು) "**ಅವನ್** - ಅವನು, **ರಕ್ಷಿಕ್ಕವಲ್ಲನ್** - ರಕ್ಷಿಸುವ ಶಕ್ತಿಯುಳ್ಳವನು, **ಅಪೇಕ್ಷಿತ್ತಾಲ್** - ಪ್ರಾರ್ಥಿಸಿದರೆ, **ರಕ್ಷಿಪ್ಪದುಂ ಶೆಯ್ಯುಂ** - ರಕ್ಷಣೆಯನ್ನೂ ಮಾಡುವನು", **ಎನ್ರುತೇರಿ** - ಎಂದು ವಿಶ್ವಾಸವನ್ನು ತೋರಿ,

ದುಮ್ ಶೆಯ್ದು" ವೆನ್ರು, ತೇರಿ, ತಾನ್ ರಕ್ಷಿತ್ತುಕ್ಕೊಳ್ಳ ಮಾಟ್ಟಾಮೈಯೈ ಯರಿವಿತ್ತು, ನೀ ರಕ್ಷಿಕ್ಕವೇಣುಮೆನ್ರಪೇಕ್ಷಿತ್ತು, ರಕ್ಷ್ಯವಸ್ತುವೈ ಯವನ್ಸಕ್ಕಲಿಲೆ ಸಮರ್ಪಿತ್ತು, ತಾನ್ ನಿರ್ಭರನಾಯ್, ಭಯಮ್ ಕೆಟ್ಟು, ಮಾರಿಲೆ ಕೈವೈತ್ತುಕ್ಕೊಂಡು ಕಿಡನ್ದುರಙ್ಗಕ್ಕಣ್ಡಾನಿನ್ರೋಮಿರೇ.

(ಇದರಿಂದ ಮಹಾ ವಿಶ್ವಾಸವು ಪ್ರದರ್ಶಿಸಲ್ಪಟ್ಟಿತು.) **ತಾನ್ ರಕ್ಷಿತ್ತುಕೊಳ್ಳ ಮಾಟ್ಟಾಮೈಯೈ ಯರಿವಿತ್ತು** - ತನಗೆ ರಕ್ಷಿಸಿಕೊಳ್ಳಲು ಶಕ್ತಿಯಿಲ್ಲವೇ ಎಂಬ ಆಕಿಂಚನ್ಯವನ್ನು ವಿಜ್ಞಾಪಿಸಿ, (ಇದರಿಂದ ಕಾರ್ಪಣ್ಯವು ತಿಳಿಸಲ್ಪಟ್ಟಿತು.) **ನೀರಕ್ಷಿಕ್ಕವೇಣುಮೆನ್ರು ಅಪೇಕ್ಷಿತ್ತು** - ನೀನು ರಕ್ಷಿಸಬೇಕು ಎಂದು ಪ್ರಾರ್ಥಿಸಿ, (ಇದರಿಂದ ಗೋಪ್ತೃತ್ವವರಣವು ಹೇಳಲ್ಪಟ್ಟಿತು.) **ರಕ್ಷ್ಯವಸ್ತುವೈ** - ರಕ್ಷಿಸಬೇಕಾದ ವಸ್ತುವನ್ನು, **ಅವನ್ಸಕ್ಕಲಿಲೆ** - ಅವನ ಸನ್ನಿಧಿಯಲ್ಲಿ, **ಸಮರ್ಪಿತ್ತು** - ಸಮರ್ಪಿಸಿ, (ಇದರಿಂದ ಆತ್ಮನಿಕ್ಷೇಪಕ್ಕೆ ಸಮಾನವಾದ ನಿಕ್ಷೇಪವು ತೋರಿಸಲ್ಪಟ್ಟಿತು.) **ತಾನ್ ನಿರ್ಭರನಾಯ್** - ತಾನು ಅವನ್ನು ರಕ್ಷಿಸುವ ಭಾರವಿಲ್ಲದವನಾಗಿ, (ಇದರಿಂದ ಶರಣಾಗತಿಯಿಂದುಂಟಾಗುವ ನಿರ್ಭರತ್ವವು ಸೂಚಿಸಲ್ಪಟ್ಟಿತು.) **ಭಯಮ್ ಕೆಟ್ಟು** - ಭಯವನ್ನು ತ್ಯಜಿಸಿ, (ಇದರಿಂದ ನಿರ್ಭಯತ್ವವು, (೧) "ನಿರ್ಭರೋ ನಿರ್ಭಯೋಽಸ್ಮಿ" ಎಂದು ಹೇಳಿರುವ ನಿರ್ಭಯವೂ ಪ್ರದರ್ಶಿಸಲ್ಪಟ್ಟಿತು.) **ಮಾರಿಲೆ ಕೈವೈತ್ತುಕೊಂಡು**- ವಕ್ಷಸ್ಥಳದಲ್ಲಿ ತನ್ನ ಕೈಯನ್ನಿಟ್ಟುಕೊಂಡು, **ಕಿಡನ್ದು** - ಮಲಗಿ, **ಉರಂಗ** - ನಿದ್ರಿಸುವದನ್ನು, (ಇದರಿಂದ ತನಗೆ ಸಮಾನರಿಲ್ಲವೆಂಬ ಭಾವ ತೋರಿಬರುವದರಿಂದ ಶರಣಾಗತಿ ಮಾಡಿದವನ ಕೃತಕೃತ್ಯತೆಯು ಸೂಚಿಸಲ್ಪಟ್ಟಿತು.) **ಕಾಣಾನಿನ್ರೋಮಿರೇ** - ಕಂಡಿರುವೆನಷ್ಟೇ. ಎಂದರೆ ಮಾಡತಕ್ಕದ್ದನ್ನು ಮಾಡಿಬಿಟ್ಟು ಕೃತಕೃತ್ಯನಾದ ಹಾಗೆ ನಿಶ್ಚಿಂತೆಯಿಂದ ಮಲಗಿ ನಿದ್ರೆಮಾಡುವದನ್ನು ಕಂಡಿರುವೆವು ಅಲ್ಲವೇ ಎಂದು ಹೇಳುತ್ತಾರೆ. ಹೀಗೆ ಲೌಕಿಕ ದೃಷ್ಟಾಂತದಲ್ಲೂ ಐದು ಅಂಗಗಳೂ ಒಂದು ಅಂಗಿಯನ್ನೂ ಕಂಡಿರುವೆವು ಎಂದು ಹೇಳಿ, ದ್ವಯಮಂತ್ರವು ಶರಣಾಗತ್ಯನುಷ್ಠಾನರೂಪವಾದುದರಿಂದ ಅದರಲ್ಲೇ ಈ ಐದು ಅಂಗಗಳೂ ಅಂಗಿಯೂ ಸಹ ಇವೆಯೇ ಎಂದರೆ, ಉಂಟು ಎಂದು ಸಮರ್ಥನೆ ಮಾಡಿ ಮುಂದಿನ ವಾಕ್ಯದಿಂದ ಹೇಳುತ್ತಾರೆ.

---

(೧) ನ್ಯಾಸದಶಕ

ದ್ವಯೇ ಅಙ್ಗಾಙ್ಗಿನಾಮನುಸನ್ಧಾನಪ್ರಕಾರಃ, ಶಂಕಾಪಂಚಕಂ, ತನ್ನಿವೃತ್ತಿಪ್ರಕಾರಶ್ಚ.

ಇಕ್ಕಟ್ಟಳೆಯೆಲ್ಲಾವರ್ ಕ್ರಿಯಮಾಣಾರ್ಥ ಪ್ರಕಾಶಕಮಾನ ದ್ವಯಾಖ್ಯಮನ್ತ್ರತ್ತಿಲೇ ಯನುಸನ್ಧಿಕ್ಕುಮ್ಪಡಿ ಎಙ್ಗನೇಯೆನ್ನಿಲ್? ಸಾರ್ವಜ್ಞ

ದ್ವಯಮಂತ್ರದಲ್ಲಿ ಈ ಅಂಗಾಂಗಿಗಳ ಅನುಸನ್ಧಾನ ಸ್ಥಳವು. ಐದು ವಿಧ ವಿಶ್ವಾಸ ಪ್ರತಿಬಂಧಕ ಶಂಕಾಗಳು, ಅವುಗಳ ನಿವೃತ್ತಿಯೂ

ಇಕ್ಕಟ್ಟಳೆಯೆಲ್ಲಾಂ – ಈ ಅಂಗಾಂಗಿಗಳ ಪ್ರಕಾರವನ್ನೆಲ್ಲಾ, ಈ ಅಂಗಾಂಗಿಗಳ ಕಟ್ಟಳೆ ಎಂದು ಹೇಳಿರುವದರಿಂದ, ಇವುಗಳೆಲ್ಲಾ ವ್ಯವಸ್ಥೆ ಹೊಂದಿದವು ಎಂದೂ, ಮತ್ತು ಇವುಗಳೆಲ್ಲಾ ಶರಣಾಗತಿ ವೇಳೆಯಲ್ಲಿ ತುಂಬಾ ಆವಶ್ಯಕವೆಂಬ ಭಾವವೂ ತೋರಿಬರುತ್ತದೆ; **ಕ್ರಿಯಮಾಣಾರ್ಥ ಪ್ರಕಾಶಕಮಾನ** - ದ್ವಯವು ಕರಣಮಂತ್ರವಾಗಿರುವದರಿಂದ ಆಗ ಮಾಡಬೇಕಾಗಿರುವದರ ಅಭಿಪ್ರಾಯಗಳನ್ನು ಪ್ರಕಾಶಪಡಿಸುವ, **ದ್ವಯಾಖ್ಯಮನ್ತ್ರತ್ತಿಲೆ**- ದ್ವಯವೆಂಬ ಮಂತ್ರದಲ್ಲಿ, **ಅನುಸನ್ಧಿಕ್ಕುಪ್ಪಡಿ ಎಙ್ಗನೇ ಎನ್ನಿಲ್** - ಅನುಸಂಧಾನಮಾಡುವ ಪ್ರಕಾರವು ಹೇಗೆ ಎಂದರೆ ಹೇಳುತ್ತಾರೆ. ಮೊದಲು ಆನುಕೂಲ್ಯಸಂಕಲ್ಪ ಪ್ರಾತಿಕೂಲ್ಯವರ್ಜನ ಪ್ರದರ್ಶಕ ಸ್ಥಳವನ್ನು ಮಂತ್ರದಲ್ಲಿ ತೋರಿಸುತ್ತಾರೆ; ದ್ವಯಮಂತ್ರದ ಶ್ರೀಮಚ್ಛಬ್ದದಲ್ಲೂ, ನಾರಾಯಣಶಬ್ದದಲ್ಲೂ ಇವುಗಳನ್ನು ಅರ್ಥವಾಗಿ ಅನುಸಂಧಾನ ಮಾಡಬಹುದೆಂದು ತಿಳಿಸಿ. ಮುಂದೆ ಅದನ್ನೇ ಉಪಪಾದಿಸುತ್ತಾರೆ. ಹೀಗೆ ಉಪಪಾದಿಸುವದಕ್ಕೆ ಮುಂಚಿತವಾಗಿ ಐದು ಶಂಕಾಗಳ ಸ್ವರೂಪವನ್ನು ಉಪಾದಿಸಿ, ಅನಂತರ ಆ ಶಂಕಾಗಳ ಪರಿಹಾರವನ್ನು ಮಾಡುತ್ತಾರೆ. ಆ ಐದು ಶಂಕಾಗಳು ಯಾವುವೆಂದರೆ :—

(೧) **ಸಾರ್ವಜ್ಞ ಸರ್ವಶಕ್ತಿಯುಕ್ತನಾಯ್ ಸರ್ವೇಶ್ವರನ್ ಅನನ್ತಾಪರಾಧಙ್ಗಳೈಯುಡೈಯಾರ್ಕ್ಕು ಅಭಿಗಮ್ಯನಾಗೈಯುಮ್ ಕೂಡುಮೋ?** ಎಂಬುವದು ಪ್ರಥಮ ಶಂಕೆಯು.

(೨) **ಕರ್ಮಾನುರೂಪ ಫಲಪ್ರದನಾಯ್ ಸರ್ವೇಶ್ವರರ್ ಪ್ರಾಪ್ತಿ ವಿರೋಧಿಯಾನ ಅನನ್ತಾಪರಾಧಙ್ಗಳೈಯುಡೈಯಾರ್ಕ್ಕು ಅಳವಿಲ್ಲಾದ ಫಲತ್ತೈತ್ತರುಗೈಯುಮ್ ಕೂಡುಮೊ?** ಎಂಬುವದು ಎರಡನೆಯ ಶಂಕೆಯು.

(೩) **ಸರ್ವೋಪಕಾರ ನಿರಪೇಕ್ಷನಾಯ್ ಸರ್ವೇಶ್ವರನ್ ಅಲ್ಪವ್ಯಾ**

ಸರ್ವಶಕ್ತ್ಯಯುಕ್ತನಾಯ್, ಕರ್ಮಾನುರೂಪ ಫಲಪ್ರದನಾಯ್, ಸರ್ವೋಪ

ಪಾರತ್ತುಕ್ಕು ತರುಗೈಯುಮ್ **ಕೂಡುಮೋ?** ಎಂಬುವದು ಮೂರನೆಯ ಶಂಕೆಯು.

(೪) **ಕ್ಷುದ್ರದೇವತೈಗಳೈಪ್ಪೋಲೆ ಕ್ಷಿಪ್ರಕಾರಿಯ ನಿಕ್ಕೇಯಿರುಪ್ಪನಾಯ್ ಸರ್ವೇಶ್ವರನ್ ತಾಳಾದೆ ತರುಗೈಯುಮ್ ಕೂಡುಮೋ?** ಎಂಬುವದು ನಾಲ್ಕನೆಯ ಶಂಕೆಯು.

(೫) **ಸಮಾಧಿಕದರಿದ್ರನಾನ ಸರ್ವೇಶ್ವರನ್ ತರಂಪಾರಾದೆ ತರುಗೈಯುಮ್ ಕೂಡುಮೋ?** ಎಂಬುವದು ಐದನೆಯ ಶಂಕೆಯು.

ಹೀಗೆ ಸರ್ವೇಶ್ವರನಿಗೆ ಐದು ವಿಶೇಷಣಗಳನ್ನು **ಕೊಟ್ಟು**, ಆ ಕಾರಣಗಳಿಂದ ಸರ್ವೇಶ್ವರನು ಅನೇಕ ಜೀವಾತ್ಮರುಗಳಿಗೆ ಕೃಪೆ ಮಾಡಲಾರನೆಂಬ ಶಂಕಾಗಳಿಗೆ ಸಮಾಧಾನವಾಗಿ, ಆ ಮೇಲೆ ಹೇಳಿದ ಸರ್ವೇಶ್ವರನ ವಿಶೇಷಣಗಳೇ ಕೃಪೆಮಾಡಲು ಈ ಕಾರಣವೆಂದು ಬಹು ಸ್ವಾರಸ್ಯವಾಗಿ **ತೋರ್ಪಡಿಸುತ್ತಾರೆ.** ಶಂಕಾಗಳ ಅಭಿಪ್ರಾಯವೇನೆಂದರೆ:—

(೧) **ಸಾರ್ವಜ್ಞ ಸರ್ವಶಕ್ತ್ಯಯುಕ್ತನಾಯ್** ಎಂದರೆ ಅಪರಾಧಿಗಳ ದೋಷವನ್ನು ತಿಳಿಯುವ ಸರ್ವಜ್ಞತ್ವ, ಎಷ್ಟು ಬಲಿಷ್ಠರಾಗಿದ್ದರೂ ದಂಡಿಸುವ ಶಕ್ತಿಯುಳ್ಳವನಾಗಿ ಸರ್ವೇಶ್ವರನು, **ಅನನ್ತಾಪರಾಧಿಗಳುಡೈಯಾರ್ಕ್ಕು** - ಹೆಚ್ಚಾದ ಅಪರಾಧಗಳನ್ನು ಹೊಂದಿರುವವರಿಗೆ **ಅಭಿಗಮ್ಯನಾಗೈಯುಮ್ - ಪ್ರಾಪ್ಯ**ನಾಗಿರುವನು, **ಕೂಡುಮೋ** - ಸಲ್ಲುತ್ತದೋ? ಎಂಬುವದು ಮೊದಲಿನ ಶಂಕೆಯು. ಅನೇಕಾಪರಾಧಗಳನ್ನು ಮಾಡಿರುವದನ್ನೆಲ್ಲಾ ಸರ್ವೇಶ್ವರನು ತಿಳಿದಿರುವನು, ಸರ್ವಶಕ್ತನಾದುದರಿಂದ ನಮ್ಮ ಅಪರಾಧಾನುಗುಣವಾಗಿ ಶಾಸ್ತ್ರವಾಗಿ ದಂಡಿಸಲು ಶಕ್ತಿಯುಳ್ಳವನು, ಇಂಥಾವನು ಎಂದಿಗಾದರೂ ಪ್ರಾಪ್ಯನಾಗಿರುವನೇ ಎಂಬದಾಗಿ ಶಂಕೆಯು.

(೨) ಕರ್ಮಾನುರೂಪ ಫಲಪ್ರದನಾಗಿರುವ ಸರ್ವೇಶ್ವರನು, **ಪ್ರಾಪ್ತಿವಿರೋಧಿಯಾನ** - ಭಗವತ್ಪ್ರಾಪ್ತಿಗೆ ವಿರೋಧವಾದ, **ಅನನ್ತಾಪರಾಧಙ್ಗಳೈಯುಡೈಯಾರ್ಕ್ಕು** - ಅನೇಕಾಪರಾಧಗಳನ್ನು ಹೊಂದಿರುವವರಿಗೆ, **ಅಳವಿಲ್ಲಾದ ಫಲತ್ತೈ ತರುಗೈಯುಮ್** - ಅಪರಿಮಿತ ಫಲವಾದ ಮೋಕ್ಷವನ್ನು ಕೊಡುವದು, **ಕೂಡುಮೋ** - ಸಲ್ಲುತ್ತದೋ? **"ಶುಭಕೃಚ್ಛುಭಮಾಪ್ನೋತಿ ಪಾಪಕೃತ್ ಪಾಪಮಶ್ನುತೇ"** "ಶುಭಕೆಲಸಗಳನ್ನು ಮಾಡಿದವನು ಮಂಗಳಗಳನ್ನು ಹೊಂದುವನು; ಪಾಪಕಾರ್ಯಗಳನ್ನು ಮಾಡಿದವನು ಅಮಂಗಳಗಳನ್ನು

ಕಾರ ನಿರಪೇಕ್ಷನಾಯ್, ಕ್ಷುದ್ರದೇವತೆಗಳ್ಳೈ ಪ್ಪೋಲೆ ಕ್ಷಿಪ್ರಕಾರಿಯು ನ್ರಿಕ್ಕೇ ಯಿರುಪ್ಪಾನಾಯ್, ಸಮಾಧಿಕ ದರಿದ್ರನಾಯ್ ಸರ್ವೇಶ್ವರರ್, ಅನ

ಹೊಂದುವನು" ಎಂದೂ ಹೇಳಿರುವ ಹಾಗೆ ಸತ್ಕರ್ಮಕ್ಕೆ ಸತ್ಫಲವೂ, ದುಷ್ಕರ್ಮಕ್ಕೆ ದುಷ್ಫಲವೂ, ಮಹತ್ಕರ್ಮಕ್ಕೆ ಮಹತ್ಫಲವೂ, ಅಲ್ಪಕರ್ಮಕ್ಕೆ ಅಲ್ಪಫಲವೂ, ಹೀಗೆ ಸರ್ವೇಶ್ವರನು ಕರ್ಮಾನುರೂಪ ಫಲಪ್ರದನು. ಹೀಗಿರುವಾಗ, ಅನಂತಾಪರಾಧಗಳಿರುವಾಗ ಅನಂತ ದುಷ್ಫಲಗಳನ್ನು ಕೊಡದೆ, ಸತ್ಫಲವನ್ನು ಸರ್ವೇಶ್ವರನು ಕೊಡುವನೋ, ಅವರೆಲ್ಲೂ ಪ್ರಾಪ್ತಿವಿರೋಧಿಯಾದ ಮಹಾಪಾಪಗಳನ್ನು ಮಾಡಿರುವಾಗ, ನಿರತಿಶಯಫಲವಾದ ಮೋಕ್ಷವನ್ನು ಕೊಡುವನೋ ಎಂಬುವದು ಎರಡನೆಯ ಶಂಕೆಯು.

(೩) **ಸರ್ವೋಪಕಾರ ನಿರಪೇಕ್ಷನಾಯ್** - ಪರಿಪೂರ್ಣ ಕಾಮನಾದುದರಿಂದ ಯಾವುದೊಂದು ಉಪಕಾರವನ್ನು ಅಪೇಕ್ಷಿಸದವನಾಗಿ, ಸರ್ವೇಶ್ವರನು, **ಅಲ್ಪವ್ಯಾಪಾರತ್ತುಕ್ಕು ತರುಗೈಯುಮ್** - ಅಲ್ಪ ವ್ಯಾಪಾರವಾದ ಪ್ರಪದನಾನುಷ್ಠಾನದಿಂದ ಮಹತ್ತಾದ ಫಲವಾದ ಮೋಕ್ಷವನ್ನು ಕೊಡುವದು, **ಕೂಡುಮೋ** - ಸಾಧ್ಯವೋ? ಸರ್ವೇಶ್ವರನು ಪರಿಪೂರ್ಣ ಕಾಮನಾದುದರಿಂದ ಅತನಿಗೆ ಯಾವುದೊಂದು ಉಪಕಾರವೂ ಬೇಕಾಗಿರುವದಿಲ್ಲವು. ಹೀಗಿರುವಾಗ ಈ ಅಲ್ಪವಾದ ಭರನ್ಯಾಸದಿಂದ ಮಹತ್ತಾದ ವೈಕುಂಠಪ್ರಾಪ್ತಿಯು ಎಂದಿಗಾದರೂ ಸಾಧ್ಯವೇ? ಎಂಬುವದು ಮೂರನೆಯ ಶಂಕೆಯು.

(೪) **ಕ್ಷುದ್ರದೇವತೈಗಳ್ಳೈಪ್ಪೋಲೆ** - ನಿಕೃಷ್ಟರಾದ ದೇವತೆಗಳ ಹಾಗೆ, ಬ್ರಹ್ಮರುದ್ರೇಂದ್ರಾದಿ ದೇವತೆಗಳೆಲ್ಲಾ ಪರಮಾತ್ಮನಿಗೆ ಹೋಲಿಸಿದರೆ ನಿಕೃಷ್ಟರೇ, ಆದುದರಿಂದ **"ಆವಿರಂಚಾದ ಮಂಗಳಂ"** ಚತುರ್ಮುಖ ಮೊದಲುಗೊಂಡು ಸರ್ವರೂ ಅಮಂಗಳವೆಂದೂ, ಪರಮಾತ್ಮನೊಬ್ಬನೇ **"ಮಂಗಳಾನಾಂ ಚ ಮಂಗಳಂ"** ವೆಂದೂ ಮಹರ್ಷಿಗಳು ಹೇಳಿರುತ್ತಾರೆ; ಅಂತಹ ಕ್ಷುದ್ರರಾದ ದೇವತೆಗಳ ಹಾಗೆ, **ಕ್ಷಿಪ್ರಕಾರಿಯುನ್ರಿಕ್ಕೇ** – ಶೀಘ್ರಫಲವನ್ನು ಉಂಟುಮಾಡದೇ, **ಯಿರುಪ್ಪನಾಯ್** – ಇರುವನಾಗಿ, ಸರ್ವೇಶ್ವರನು, **ತಾಳಾದೆ ತರುಗೈಯುಮ್ ಕೂಡುಮೋ** - ಕಾಲವಿಳಂಬವಿಲ್ಲದೆ ಮೋಕ್ಷವನ್ನು ಕೊಡುವನೆಂಬುವದು ಉಂಟೋ? ಎಂದು ನಾಲ್ಕನೇ ಶಂಕೆಯು. ವಿವೇಕವಿಲ್ಲದೆ ದೂರಾಲೋಚನೆಯಿಲ್ಲದೆ, ಕೇಳಿದುದರಿಂದಲೇ ಪರಮಪ್ರೀತರಾಗಿ ಶೀಘ್ರದಲ್ಲೇ ವರಗಳನ್ನು ದಯಪಾಲಿಸುವವರು ಬ್ರಹ್ಮರುದ್ರೇಂದ್ರಾದಿಗಳು. ರಾವಣ, ನರಕಾಸುರ, ಬಾಣಾಸುರ, ಮೊದಲಾದವರುಗಳಾದ ಅವಿವೇಕಿಗಳಿಗೆ ವರಗಳನ್ನು

ನ್ಯಾಪರಾಧಙ್ಗಳೈಯುಡೈಯರ್ಕ್ಕು ಅಭಿಗಮ್ಯನಾಗೈಯುಮ್, ಪ್ರಾಪ್ತಿ ವಿರೋಧಿಯಾನ ಅನನ್ತಾಪರಾಧಙ್ಗಳೈಯುಡೈಯರ್ಕ್ಕಳವಿಲ್ಲಾದ ಫಲತ್ತೈ ತರುಗೈಯುಮ್, ಅಲ್ಪವ್ಯಾಪಾರತ್ತುಕ್ಕು ತರುಗೈಯುಮ್, ತಾಳಾದೆ ತರುಗೈಯುಮ್, ತರಮ್ ಪಾರಾದೆ ತರುಗೈಯುಮ್, ಕೂಡುಮೋವೆಙ್ಗಿರ ಶಙ್ಕೈಗಳುಕ್ಕು, ನಿವರ್ತಕಙ್ಗಳುಮಾಯ್ ಯಥಾ ಸಮ್ಭವ

ಶೀಘ್ರದಲ್ಲಿತ್ತು ಲೋಕಕ್ಕೆ ತುಂಬಾ ಸಂಕಟವನ್ನುಂಟುಮಾಡಿ ತಾವೂ ತುಂಬಾ ಪರಿತಾಪಕ್ಕೆ ಒಳಗಾದರು. ಸರ್ವೇಶ್ವರನಾದರೋ ಹೀಗೆ ಅವಿವೇಕದಿಂದ ಕೇಳಿದ ಒಡನೆಯೇ ನಿರತಿಶಯವಾದ ಮೋಕ್ಷಸುಖವನ್ನು ಎಂದಿಗಾದರೂ ಕೊಡುವನೋ ಎಂಬುವದು ನಾಲ್ಕನೆಯ ಶಂಕೆಯು. ಬ್ರಹ್ಮರುದ್ರೇಂದ್ರಾದಿಗಳಾದರೋ ಸ್ವಮಹಾತ್ಮ್ಯೆಯಲ್ಲಿ ತುಂಬಾ ಆದರವಿರುವದರಿಂದ ಕೇಳಿದ ಒಡನೆಯೇ ಕ್ಷುದ್ರಫಲರೂಪಪ್ರಾಪ್ತಿಯನ್ನು ಕೊಡುವರು. ಸರ್ವೇಶ್ವರನಾದರೋ ಸರ್ವರಿಗೂ ತಿಳಿದ ಮಹಾತ್ಮ್ಯೆಯನ್ನು ಹೊಂದಿದವನಾದುದರಿಂದ ಹಾಗೆ ಎಂದಿಗೂ ಶೀಘ್ರ ಫಲದಾಯಕನಲ್ಲವು. ಹೀಗಿರುವಲ್ಲಿ ಶರಣಾಗತಿಯನ್ನನುಷ್ಠಿಸಿದ ಮಾತ್ರದಿಂದಲೇ ಆರ್ತನ ವಿಷಯದಲ್ಲಿ ಒಡನೆಯೇ, ದೃಪ್ತನ ವಿಷಯದಲ್ಲೂ ಸಹ ದೇಹಾವಸಾನಾನಂತರವೇ, ಆಗುವದರಿಂದ ಹೀಗೆ ಶೀಘ್ರವಾಗಿ ಪುನರ್ಜನ್ಮವಿಲ್ಲದೆ ಮೋಕ್ಷವನ್ನು ಅನುಗ್ರಹಿಸುವನೇ ಎಂಬದಾಗಿ ನಾಲ್ಕನೆಯ ಶಂಕೆಯು.

(೫) **ಸಮಾಧಿಕದರಿದ್ರನಾಯ್** - ತನಗೆ ಸಮರೂ ಅಧಿಕರೂ ಇಲ್ಲದಿರುವನಾಗಿ, **ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ** ಎಂದಲ್ಲವೇ ಶ್ರುತಿಯು ಉದ್ಘೋಷಿಸುತ್ತದೆ. ಹೀಗಿರುವ ಸರ್ವೇಶ್ವರನು, **ತರಂಪಾರಾದೆ** - ತಾರತಮ್ಯವನ್ನು ವಿಚಾರಮಾಡದೆ, **ತರುಗೈಯುಮ್ ಕೂಡುಮೋ** – ನಿರತಿಶಯ ಮೋಕ್ಷಪ್ರಾಪ್ತಿಯನ್ನುಂಟುಮಾಡುವನೆಂಬುವದು ಸಲ್ಲುತ್ತದೆಯೇ ? ಎಂಬುವದು ಐದನೆಯ ಶಂಕೆಯು. ಮಹಾಮಹಿಮೆಯುಳ್ಳವನಾಗಿ, **ಉಭಯ** ವಿಭೂತಿಯುಕ್ತನಾಗಿ, ಕಲ್ಯಾಣಗುಣಾಕರನಾಗಿ, ಹೇಯಗಂಧವೇ ಇಲ್ಲದಿರುವನಾಗಿ, ಮಹಾಪ್ರಭುವಾದವನು ತುಂಬಾ ಅಲ್ಪಮಹಿಮೆಯುಳ್ಳವರಾಗಿ ವಿಭೂತಿಶೂನ್ಯರಾಗಿ, ಹೇಯರಾಗಿ ಅಲ್ಪರಾಗಿರುವವರಿಗೆ ಈ ಶರಣಾಗತಿ ವ್ಯಾಜಮಾತ್ರದಿಂದ ನಿರತಿಶಯ ಮೋಕ್ಷಸುಖವನ್ನು ಕೊಡುವನೋ ಎಂಬ ಆಕ್ಷೇಪವು.

ಇಂತಹ ಈ ಐದು ಶಂಕಾಗಳಿಗೂ, **ನಿವರ್ತಕಙ್ಗಳುಮಾಯ್** - ಪರಿಹಾರ ರೂಪವಾಗಿ, **ಯಥಾಸಂಭವಂ** - ಯಾವಯಾವ ಸಂದರ್ಭದಲ್ಲಿ ಹೇಗೆ ಯೋಗ್ಯವೋ ಹಾಗೆ, **ಉಪಾಯತ್ವ ಪ್ರಾಪ್ಯತ್ವೋಪಯುಕ್ತಙ್ಗಳುಮಾ**

ಮುಪಾಯತ್ವ ಪ್ರಾಪ್ಯತ್ವೋಪಯುಕ್ತಙ್ಗಳುಮಾಯಿರುನ್ದಳ್ಳ ಪುರುಷಕಾರಸಂಬನ್ಧ ಗುಣವ್ಯಾಪಾರ ಪ್ರಯೋಜನವಿಶೇಷಙ್ಗಳಾಗಿರ ಶೇಷಿಯಿನು

ಯಿರುನ್ದಳ್ - ಉಪಾಯ ಭಾವಕ್ಕೂ ಉಪೇಯ ಭಾವಕ್ಕೂ ಉಪಯೋಗವಾಗಿರುವ, **ಪುರುಷಕಾರಸಂಬನ್ಧ ಗುಣವ್ಯಾಪಾರ ಪ್ರಯೋಜನ ವಿಶೇಷಙ್ಗಳಾಗಿರ** - ಈ ಪದದಲ್ಲಿರುವ ವಿಶೇಷಶಬ್ದವು ಪುರುಷಕಾರಾದಿ ಐದೂ ಸೇರಿರುವ ದ್ವಂದ್ವ ಸಮಾಸಯುಕ್ತವಾದುದಕ್ಕೆ ಸೇರಿರುವದರಿಂದ, ಪ್ರತಿಯೊಂದಕ್ಕೂ ಸೇರಿಸಿ ಪುರುಷಕಾರ ವಿಶೇಷ, ಸಂಬಂಧ ವಿಶೇಷ, ಗುಣವಿಶೇಷವೆಂದು ಇಟ್ಟುಕೊಳ್ಳತಕ್ಕದ್ದು. **ಪುರುಷಕಾರವಿಶೇಷವು ಲಕ್ಷ್ಮಿಯು**; ಪುರುಷಕಾರವೆಂದರೆ ಆಶ್ರಯಿಸುವವನನ್ನು ಆಶ್ರಯನಾದವನಲ್ಲಿ ಸೇರಿಸುವ ಚೇತನವು. ಲಕ್ಷ್ಮಿಯು ವಾತ್ಸಲ್ಯಾತಿಶಯತ್ವ, ಅನುಗ್ರಹಮಯತ್ವ, ಅಜ್ಞಾತನಿಗ್ರಹತ್ವಾದಿಗಳಿಂದ, ಆಕೆಯು ಸ್ವಾಮಿಯ ಉಪಾಯತ್ವಕ್ಕೆ ಉಪಯುಕ್ತಳು; ಆಕೆಯು ಆನಂದ ಸೌಂದರ್ಯಾದಿಗಳಿಂದ ಪ್ರಾಪ್ಯತ್ವದಲ್ಲೂ ಸೇರಿರುವಿಕೆಗೂ ಅನ್ವಯವಾಗಿರುವವಳು. ಆದುದರಿಂದಲೇ ಉಪಾಯತ್ವ ಪ್ರಾಪ್ಯತ್ವಕ್ಕುಪಯುಕ್ತಂಗಳಾಗಿರ ಎಂಬದಾಗಿ ಪ್ರಯೋಗವು. ಈ ಅಭಿಪ್ರಾಯವನ್ನೇ ಶ್ರೀ ಪರಾಶರ ಭಟ್ಟರವರೂ (೧) "**ನೇತೃತ್ವಂ ನಿತ್ಯಯೋಗಂ**" ಎಂಬುವದರಿಂದ ತಿಳಿಸುತ್ತಾರೆ. ನೇತೃತ್ವವೆಂದರೆ ಪುರುಷಕಾರತ್ವವನ್ನು ಎಂಬರ್ಥವು, ಇದು ಶ್ರೀಮಚ್ಛಬ್ದದಿಂದ ತೋರಿಬರುತ್ತದೆ.

ಸಂಬಂಧವಿಶೇಷವೆಂದರೆ ಸ್ವಾಮಿತ್ವ ಸಂಬಂಧವು. ಇದು ಉಪಾಯತ್ವಕ್ಕು ಉಪಯುಕ್ತವಾದುದು; ಹೇಗೆಂದರೆ ವಿಧೇಯನಾಗಿ ಶರಣಾಗತನಾದ ದಾಸನಿಗೆ ಏನಾದರೂ ಸರಿಯಾದ ಮಾರ್ಗ ತೋರಿಸಿ ಆತನನ್ನು ಒಳ್ಳೇ ಸ್ಥಿತಿಗೆ ತರಬೇಕೆಂಬುವದು ಕಲ್ಯಾಣ ಗುಣಾಕರನಾದ ಸ್ವಾಮಿಗೆ ಸೇರಿದುದಾದುದರಿಂದ ಈ ಸಂಬಂಧವು ಉಪಾಯತ್ವಕ್ಕೆ ಉಪಯುಕ್ತವಾದುದು, ಮತ್ತು ದಾಸನಾಗಿ ಈತನು ಪ್ರಾಪ್ಯದೆಶೆಯಲ್ಲಿ ಮಾಡುವ ಕೈಂಕರ್ಯವೂ ಕೂಡ ಸ್ವಾಮಿಯಾದವನಿಗೆ ತುಂಬಾ ಇಷ್ಟವಾದುದರಿಂದ, ಪ್ರಾಪ್ಯತ್ವಕ್ಕೂ ಕೂಡ ಈ ಸಂಬಂಧವು ಉಪಯುಕ್ತವಾದುದು ಇದು ನಾರಾಯಣ ಶಬ್ದದಲ್ಲಿ ಅಡಗಿರುವ ಅರ್ಥವು. ನಾರ ಶಬ್ದಕ್ಕೆ ಸೇರಿರುವ ಚೇತನರುಗಳೇ ಯಾರಿಗೆ ಆಧಾರವೋ ಅವನು ಎಂಬ ಬಹುವ್ರೀಹಿ ಅರ್ಥದಲ್ಲಿ ತೋರುವ ಅಂತರ್ಯಾಮಿತ್ವ ಸೌಲಭ್ಯಗಳಿಂದ ಉಪಾಯತ್ವಕ್ಕೆ ಈ ಸಂಬಂಧವು ಉಪಯುಕ್ತವಾದುದೆಂಬ ಭಾವವು.

(೧) ಅಷ್ಟಶ್ಲೋಕೀ

ಡೈಯು ಆಕಾರಙ್ಗಳೈಪ್ಪೊದಿನ್ದುಕ್ಕೊಂಡಿರುಕ್ಕಿರ ಶ್ರೀಮಚ್ಛಬ್ದತ್ತಿಲುಮ್ ನಾರಾಯಣಶಬ್ದತ್ತಿಲುಮ್ ಅರ್ಥಮಾಕ ಅನುಕೂಲ್ಯಸಙ್ಕಲ್ಪಮುಮ್ ಪ್ರಾತಿಕೂಲ್ಯವರ್ಜನಮುಮ್, ಅನುಸನ್ಧೇಯಮಾಗಕ್ಕಡವದು.

---

3 ಗುಣ ವಿಶೇಷವೆಂದರೆ, ಉಪಾಯತ್ವಕ್ಕೆ ಉಪಯುಕ್ತವಾದ ಗುಣಗಳಾದ ಸ್ವಾಮಿತ್ವ, ಸೌಶೀಲ್ಯ, ವಾತ್ಸಲ್ಯ, ಸೌಲಭ್ಯಾದಿಗಳು; ಮತ್ತು ಉಪೇಯತ್ವಕ್ಕೆ ಉಪಯುಕ್ತವಾದ ಸೌಂದರ್ಯ ಲಾವಣ್ಯಾದಿಗಳು;

ಚಂದ್ರಕಾನ್ತಾನನಂ ರಾಮಂ ಅತೀವ ಪ್ರಿಯದರ್ಶನಂ।
ರೂಪೌದಾರ್ಯಗುಣೈಃ ಪುಂಸಾಂದೃಷ್ಟಿ ಚಿತ್ತಾಪ ಹಾರಿಣಂ ॥

ಎಂಬುವವರಲ್ಲಿ ತೋರುವ ಗುಣಗಳು, ಇದು ನಾರಾಯಣ ಶಬ್ದದಲ್ಲಿ ತೋರಿಬರುವಂಥಾದ್ದು. ಇದನ್ನೇ ಶ್ರೀ ಪರಾಶರಭಟ್ಟರವರು "**ಸಮುಚಿತಗುಣಜಾತಂ**" ಎಂದು ವ್ಯಾಖ್ಯಾನಮಾಡಿರುತ್ತಾರೆ.

4 ವ್ಯಾಪಾರವಿಶೇಷ - ಇದು ಸರ್ವೇಶ್ವರನ ಸಂಕಲ್ಪರೂಪವಾದುದು. ಇದು ಉಪಾಯತ್ವ ಪ್ರಾಪ್ಯತ್ವಗಳೆರಡಕ್ಕೂ ಉಪಯುಕ್ತವಾದುದು. **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ**" ವೆಂಬ ಮತ್ತು "**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ**" ಎಂಬ ಅನೇಕ ಸಂಕಲ್ಪರೂಪವಾದುದು. ಅಥವಾ ವ್ಯಾಪಾರವು ಸೃಷ್ಟಿದೆಸೆಯಲ್ಲಿ ಕರಣ ಕಳೇಬರಯೋಗ ಶಾಸ್ತ್ರದೀಪಪ್ರದಾನ ರೂಪವಾದುದೆಂದೂ ಭಾವಿಸಬಹುದು. ಶ್ರೀಮದಾಚಾರ್ಯರವರೇ ಮುಂದೆ ಉಪಪಾದಿಸಿರುವದರಲ್ಲಿ ಸಂಕಲ್ಪರೂಪವೆಂದೇ ಉಪಪಾದಿಸಿರುತ್ತಾರೆ.

5 ೪ ಪ್ರಯೋಜನ ವಿಶೇಷ - ಆಶ್ರಿತರ ಅಭೀಷ್ಟವನ್ನು ದಯಪಾಲಿಸುವದೇ ತನಗೆ ಮುಖ್ಯ ಪ್ರಯೋಜನವೆಂದು ಭಾವಿಸುವಿಕೆಯು. ಇದು ಉಪಾಯತ್ವಕ್ಕೆ ಉಪಯುಕ್ತವಾದುದು ಮತ್ತು ಪ್ರಾಪ್ಯದೆಸೆಯಲ್ಲಿ ಕೈಂಕರ್ಯವೇ ಫಲವಾದುದರಿಂದ ಆಗಲೂ ಕೂಡ ಸರ್ವೇಶ್ವರನಿಗೇನೇ ಪ್ರಯೋಜನರೂಪವಾದುದರಿಂದ ಪ್ರಾಪ್ಯತ್ವಕ್ಕೂ ಉಪಯುಕ್ತವಾದುದು.

ಈ ಐದು ವಿಶೇಷಗಳಾಗಿರುವ, **ಶೇಷಿಯಿನುಡೈಯ ಆಕಾರಙ್ಗಳೈ** - ನಮಗೆ ಶೇಷಿಯಾಗಿರುವ ಸರ್ವೇಶ್ವರನ ವಿಶೇಷಣಗಳನ್ನು, **ಪೊದಿನ್ದುಕೊಂಡಿರುಕ್ಕಿರ** - ಗರ್ಭೀಕರಿಸಿಕೊಂಡಿರುವ, **ಶ್ರೀಮಚ್ಛಬ್ದತ್ತಿಲುಮ್** - ದ್ವಯಮಂತ್ರದ ಶ್ರೀಮತ್ ಎಂಬ ಪದದಲ್ಲೂ, **ನಾರಾಯಣ ಶಬ್ದತ್ತಿಲುಮ್** - ನಾರಾಯಣ ಶಬ್ದದಲ್ಲೂ, **ಅರ್ಥಮಾಕ** - ಅರ್ಥರೂಪವಲ್ಲಿ, ಅನುಕೂಲ್ಯ

ಇಪ್ಪಡಿ ವಿಶಿಷ್ಟನಾನ ಸ್ವಾಮಿಯೈ ಕಾಟ್ಟುಗಿರ ಶಬ್ದಙ್ಗಳ್ ಔಚಿತ್ಯತ್ತಾಲೆ ಯವನ್ವಿರತ್ತಿಲ್ ಪ್ರಾಪ್ತಮಾನ ಅಭಿಮತಾನುವರ್ತನ ಸಙ್ಕ

ಸಙ್ಕಲ್ಪಮುಮ್ ಪ್ರಾತಿಕೂಲ್ಯವರ್ಜನಮುಂ, **ಅನುಸನ್ಧೇಯಮಾಕಕ್ಕಡವದು** – ಅನುಸಂಧಾನ ಮಾಡಲ್ಪಡುವದು. ದ್ವಯಮಂತ್ರದ ಶ್ರೀಮಚ್ಛಬ್ದದಿಂದ ಅರ್ಥರೂಪವಾಗಿ ಈ ಆನುಕೂಲ್ಯಸಂಕಲ್ಪವೂ ಪ್ರಾತಿಕೂಲ್ಯವರ್ಜನವೂ ಹೇಗೆ ಸಿದ್ಧಿಸುತ್ತದೆ ಎಂದರೆ, ತಾನು ಹಿಂದೆ ಮಾಡಿದ ಸಹಸ್ರಾಪರಾಧಗಳ ಫಲರೂಪವಾದ ಭಗವನ್ನಿಗ್ರಹ ನಿವೃತ್ತಿಗಾಗಿ ಲೋಕಮಾತೆಯನ್ನು ಆಶ್ರಯಿಸಿದವನಾಗಿ, ಆಕೆಯ ಪುರುಷಕಾರತ್ವವನ್ನು ಅಪೇಕ್ಷಿಸಿದವನಾಗಿ, ಆನುಕೂಲ್ಯಸಂಕಲ್ಪವೂ ಪ್ರಾತಿಕೂಲ್ಯವರ್ಜನವೂ ಇಲ್ಲದಿದ್ದರೆ ಪುರುಷಕಾರವು ಸಿದ್ಧಿಸಲಾರದಾದುದರಿಂದ, ಶ್ರೀಮಚ್ಛಬ್ದದಿಂದ ಇವೆರಡೂ ಸಿದ್ಧಿಸುತ್ತವೆ. ಹಾಗೆಯೇ ದ್ವಯಮಂತ್ರದ **ನಾರಾಯಣ** ಶಬ್ದದಿಂದ ಸರ್ವೇಶ್ವರನಿಗೆ ಸರ್ವಾಂತರ್ಯಾಮಿತ್ವವೂ ಸರ್ವಸ್ವಾಮಿತ್ವವೂ ಬೋಧಿತವಾಗುವದರಿಂದ, ಆತನ ಸ್ವತ್ತಾಗಿ ಪರಾಧೀನನಾದ ಈ ಚೇತನನಿಗೆ ಸರ್ವೇಶ್ವರನ ಅಭಿಮತಾನುರೀತ್ಯಾವರ್ತನವೂ ಆತನಿಗೆ ಅನಭಿಮತವಾದವುಗಳಿಂದ ನಿವೃತ್ತಿಯೂ ಕೂಡ ಸಿದ್ಧಿಸುತ್ತವೆ ಎಂಬ ಭಾವವು. ಈ ಅಭಿಪ್ರಾಯಗಳು ಶಬ್ದತಃ ತೋರದೆ ಅರ್ಥತಃ ತೋರುವದರಿಂದ **ಅರ್ಥಮಾಕ** ಎಂದು ಪ್ರಯೋಗಿಸಿರುತ್ತಾರೆ.

ಈ ಮೇಲಿನ ಅಭಿಪ್ರಾಯಗಳನ್ನೇ ಮನಸ್ಸಿನಲ್ಲಿಟ್ಟವರಾಗಿ, ಮುಂದಿನ ವಾಕ್ಯದಿಂದ ಶ್ರೀಮಚ್ಛಬ್ದದಿಂದಲೂ ನಾರಾಯಣ ಶಬ್ದದಿಂದಲೂ ಈ ಆನುಕೂಲ್ಯಸಂಕಲ್ಪ ಪ್ರಾತಿಕೂಲ್ಯವರ್ಜನಗಳು ಸಿದ್ಧಿಸುತ್ತವೆ ಎಂದು ತಿಳಿಸುತ್ತಾರೆ.

ಇಪ್ಪಡಿ ವಿಶಿಷ್ಟನಾನ ಸ್ವಾಮಿಯೈ - ಹೀಗೆ ಪುರುಷಕಾರಭೂತೆಯಾದ ಲಕ್ಷ್ಮೀವಿಶಿಷ್ಟನಾದ ಸರ್ವೇಶ್ವರನನ್ನು, ಅಥವಾ ಹೀಗೆ ಪುರುಷಕಾರ ಸಂಬಂಧಗುಣ ವ್ಯಾಪಾರ ಪ್ರಯೋಜನ ವಿಶಿಷ್ಟನಾದ ಸರ್ವೇಶ್ವರನನ್ನು, **ಕಾಟ್ಟುಕಿರ ಶಬ್ದಙ್ಗಳ್** - ತೋರಿಸುವ ಶಬ್ದಗಳಾದ ಶ್ರೀಮತ್, ನಾರಾಯಣ ಎಂಬ ಪದಗಳು, ಶ್ರೀಮಚ್ಛಬ್ದವು ಪುರುಷಕಾರಭೂತೆಯಾದ ಲಕ್ಷ್ಮಿಯ ಸಂಬಂಧವನ್ನು ತೋರಿಸುತ್ತದೆ, ಸಂಬಂಧಗುಣ ವ್ಯಾಪಾರಪ್ರಯೋಜನಗಳುಳ್ಳ ಭಾವವನ್ನು ನಾರಾಯಣ ಶಬ್ದವು ತೋರಿಸುತ್ತದೆ ಎಂಬಭಿಪ್ರಾಯವು, **ಔಚಿತ್ಯತ್ತಾಲೆ** - ಸ್ವಾಮಿಯ ವಿಷಯದಲ್ಲಿ ನಡೆಯಬೇಕಾದುದು ಉಚಿತವಾದುದರಿಂದ, **ಅವನ್ವಿರತ್ತಿಲ್** - ಅವನ ವಿಷಯದಲ್ಲಿ, **ಪ್ರಾಪ್ತಮಾನ** – ಉಂಟಾದ, **ಅಭಿಮತಾನುವರ್ತನ ಸಂಕಲ್ಪತ್ತೈ** - ಇಷ್ಟಾನುಸಾರ ನಡೆಯುವನೆಂಬ ಸಂಕಲ್ಪವನ್ನೂ

ಲ್ಪತ್ತೈಯುಮ್ ಅನಭಿಮತ ನಿವರ್ತನತ್ತೈಯುಮ್ ಪ್ರಕಾಶಿಪ್ಪಿಕ್ಕಿನ್ರನ. ಶಙ್ಕಾ ಪಂಚಕ ನಿವೃತ್ತಿಪ್ರಕಾರ ಕಥನಂ.

ಇಪ್ಪುರುಷಕಾರಾದಿಗಳೈನ್ದುಕ್ಕುಮ್ ವಿಶೇಷಙ್ಗಳಾವನ ? ಮರುಕ್ಕವೊಣ್ಣಾಮೈಯುಮ್ ಒಳಿಕ್ಕವೊ (ಣ್ಣಾಮೈ) ಳಿಯಾಮೈಯುಮ್,

ಎಂದರೆ ಅನುಕೂಲ್ಯ ಸಂಕಲ್ಪವನ್ನೂ, **ಅನಭಿಮತನಿವರ್ತನತ್ತೈಯುಮ್** - ಆ ಸರ್ವೇಶ್ವರನಿಗೆ ಇಷ್ಟವಿಲ್ಲದುದರ ನಿವೃತ್ತಿಯನ್ನೂ ಎಂದರೆ ಪ್ರಾತಿಕೂಲ್ಯ ವರ್ಜನವನ್ನೂ, **ಪ್ರಕಾಶಿಪ್ಪಿಕ್ಕಿನ್ರನ** - ಪ್ರಕಾಶಗೊಳಿಸುತ್ತವೆ. ಹೀಗೆ ಈ ಪುರುಷಕಾರಾದಿ ಐದು ವಿಶೇಷಣಗಳಿಂದ ಯುಕ್ತನಾದ ಸರ್ವೇಶ್ವರನನ್ನೇ ಬೋಧಿಸುವ ಈ ದ್ವಯಮಂತ್ರದಲ್ಲಿರುವ ಶ್ರೀಮತ್, ನಾರಾಯಣ ಶಬ್ದಗಳು ಅನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನಗಳನ್ನು ತೋರಿಸುತ್ತವೆ ಎಂದು ಉಪದೇಶಿಸುತ್ತಾರೆ.

ಮೇಲಿನ ಐದು ಶಂಕಾಗಳ ಪರಿಹಾರವು.

ಹಿಂದೆ ಪುರುಷಕಾರಾದಿ ಐದು ಪದಗಳಿಂದ ಸೇರಿದ ದ್ವಂದ್ವ ಸಮಾಸದ ಕೊನೆಯಲ್ಲಿ ಹೇಳಲ್ಪಟ್ಟ ವಿಶೇಷ ಶಬ್ದವು ಐದಕ್ಕೂ ಅನ್ವಯಿಸುತ್ತದೆಂದು ಹೇಳಿ ಪುರುಷಕಾರ ವಿಶೇಷ, ಸಂಬಂಧ ವಿಶೇಷ, ಗುಣವಿಶೇಷಾದಿಗಳೆಂದು ಇಟ್ಟುಕೊಳ್ಳತಕ್ಕದ್ದೆಂದು ಹೇಳಲ್ಪಟ್ಟಿತು. ಈಗ ಆ ವಿಶೇಷಗಳು ಯಾವುವೆಂದು ತಿಳಿಸಲ್ಪಡುವವು.

ಈ ಪುರುಷಕಾರಾದಿಗಳೈನ್ದುಕ್ಕು - ಈ ಪುರುಷಕಾರನೇ ಮೊದಲಾದ ಐದಕ್ಕೂ, **ವಿಶೇಷಙ್ಗಳಾವನ** ? - ವಿಶೇಷಗಳು ಯಾವುವು ? **ಮರುಕ್ಕವೊಣ್ಣಾಮೈಯುಮ್** - ವಾತ್ಸಲ್ಯಾತಿಶಯದಿಂದ ಹೇಳಿದ ಮಾತಿಗೆ ತಿರಸ್ಕರಿಸದಿರೋಣವು, ಇದು ಪುರುಷಕಾರಕ್ಕೆ ವಿಶೇಷವು. ಲಕ್ಷ್ಮಿಯಲ್ಲಿ ಸರ್ವೇಶ್ವರನಿಗೆ ವಿಶೇಷ ಪ್ರೀತ್ಯತಿಶಯವಿರುವದರಿಂದ ಅನುಗ್ರಹಮಯಳಾದ ಆಕೆಯ ಪುರುಷಕಾರತೆಯ ವಿಷಯದಲ್ಲಿ ಉಲ್ಲಂಘಿಸದಿರೋಣವು; ಆದುದರಿಂದ ಈ ಚೇತನನು ಮಹಾಪರಾಧಿಯಾಗಿದ್ದರೂ **"ಕಿಮೇತನ್ನಿರ್ದೋಷಃ ಕ ಇಹ ಜಗತೀತಿ ತ್ವಮುಚಿತೈರ್ಪ್ಸ್ವಾರ್ಯ ಸ್ವಜನಯಸಿ ಮಾತಾ ತದಸಿ ನಃ"** ಎಂದು ಶ್ರೀ ಭಟ್ಟರವರುಪಪಾದಿಸಿರುವಹಾಗೆ, ಶಿಕ್ಷಿಸಬಾರದು ಎಂದು ಹೇಳಿ ಸಮಾಧಾನಮಾಡಿ, ಚೇತನನ ಸರ್ವಾಪರಾಧವನ್ನೂ ಕ್ಷಮಿಸುವ ಹಾಗೆ ಲಕ್ಷ್ಮಿಯು ಮಾಡುವಳಾದುದರಿಂದ ಆಕೆಯ ಪುರುಷ

ನಿರುಪಾಧಿಕ ವ್ಮಾಗ್ಯೈಯುುವ್, ಸಹಕಾರಿಯೈಪ್ಪಾರ್ತ್ತಿರುಕ್ಕವೇಣ್ಡಾ ವ್ಯೈಯುುವ್, ತಣ್ಣಿಯರಾನ ಪಿರರುಡೈಯ ಪೇರೇರ್ತ್ತ ಪೇರಾಗ್ಯೈ

ಕಾರತ್ವವನ್ನು ಸರ್ವೇಶ್ವರನು ಉಲ್ಲಂಘಿಸಲಾರನೆಂಬ ಭಾವವು. **ಒಳಿಕ್ಕ ಒಳಿಯಾನ್ಯೈಯುುವ್** - ಬಿಡಬೇಕೆಂದರೂ ಬಿಡಲು ಸಾಧ್ಯವಿಲ್ಲದಿರೋಣವು, ಇದು ಸ್ವಾಮಿತ್ವ ಸಂಬಂಧಕ್ಕೆ ವಿಶೇಷಣವು. ಈ ಚೇತನನು ಸ್ವಾಮಿಯಾದ ತನ್ನನ್ನು ಬಿಟ್ಟು ಅನ್ಯ ದೇವತಾಶ್ರಯಣ ಮಾಡುವದರಿಂದ ಭಗವನ್ನಿಗ್ರಹಕ್ಕೆ ಪಾತ್ರನಾಗುವದರಿಂದ ತ್ಯಜಿಸಲರ್ಹನಾದರೂ, ಸರ್ವೇಶ್ವರನಿಗೆ ಈತನು 'ಸ್ವಂ' ಎಂದರೆ ಸ್ವತ್ತಾದುದರಿಂದ ಅಪೃಥಕ್ಸಿದ್ಧ ವಿಶೇಷಣನಾಗಿ ತ್ಯಜಿಸಲಸಾಧ್ಯನೆಂಬ ಭಾವವು:— **"ನ ಚ ಸೀತಾತ್ವಯಾ ಹೀನಾ ನ ಚಾಹಮಪಿರಾಘವ । ಮುಹೂರ್ತಮಪಿ ಜೀವಾವ ಮತ್ಸ್ಯಾವಿವ ಜಲೋದ್ಧೃತೌ"** ಎಂಬ ಲಕ್ಷ್ಮಣೋಕ್ತಿಯು ಇವನ್ನು ಉಪಪಾದಿಸುತ್ತದೆ. "ನಿನ್ನನ್ನು ಬಿಟ್ಟು ಸೀತೆಯಾಗಲಿ ಜೀವಾತ್ಮನಾದ ನಾನಾಗಲಿ ಒಂದು ಕ್ಷಣವಾಗಲಿ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವು; ನೀರನ್ನು ಬಿಟ್ಟು ಮತ್ಸ್ಯಗಳು ಹೇಗೆ ಇರಲಾರವೋ ಹಾಗೆ" ಎಂಬುವದು ಈ ಶ್ಲೋಕ ತಾತ್ಪರ್ಯವು. ಸ್ವಾಮಿತ್ವದಾಸತ್ವ ಸಂಬಂಧವು ತಪ್ಪಿದ್ದಲ್ಲವಾದುದರಿಂದ, ಕರ್ಮಾನುಗುಣ ಫಲವನ್ನು ಸರ್ವೇಶ್ವರನು ಕೊಡುವನಾಗಿದ್ದರೂ, ಈತನು ಮಾಡುವ ಪ್ರಪದನವನ್ನು ವ್ಯಾಜೀಕರಿಸಿ ಪುತ್ರನಿಗೆ ದಾಯಭಾಗಕ್ರಮದಲ್ಲಿ ನಿರತಿಶಯ ಫಲ ಕೊಡುವನಾದುದರಿಂದ ಈ ಸಂಬಂಧವು ಎಂದಿಗೂ ತಪ್ಪಿದ್ದಲ್ಲವೆಂಬ ಭಾವವು.

ನಿರುಪಾಧಿಕವ್ಮಾಗ್ಯೈಯುುವ್ - ನಿರ್ಹೇತುಕವಾಗಿರೋಣವು. ಇದು ಗುಣಕ್ಕೆ ವಿಶೇಷವು. ಆದುದರಿಂದಲೇ ಅಲ್ಪವ್ಯಾಪಾರವಾದ ಪ್ರಪದನಾನುಷ್ಠಾನಕ್ಕೆ ಫಲವಾಗಿ ಮಹತ್ತಾದ ಮೋಕ್ಷವನ್ನು ಕೊಡಬಹುದೆಂಬ ಭಾವವು. ಆತನ ನಿರ್ಹೇತುಕ ದಯೌದಾರ್ಯಾದಿಗುಣಗಳಿಗೆ ಅಂತಹ ಮಾಹಾತ್ಮ್ಯಯುಂಟೆಂಬಭಿಪ್ರಾಯವು.

ಸಹಕಾರಿಯೈಪ್ಪಾರ್ತ್ತಿರುಕ್ಕ ವೇಣ್ಡಾವ್ಯೈಯುುವ್ - ಬೇರೆ ಇನ್ನು ಯಾವ ಸಹಾಯವನ್ನೂ ನಿರೀಕ್ಷಿಸದೇ ಇರೋಣವು. ಇದು ಸರ್ವೇಶ್ವರನ ಸಙ್ಕಲ್ಪ ರೂಪವ್ಯಾಪಾರಕ್ಕೆ ವಿಶೇಷಣವು. ಇಂತಹ ಸತ್ಯಸಙ್ಕಲ್ಪರೂಪವ್ಯಾಪಾರಕ್ಕೆ ಯಾವುದೊಂದೂ ತಡೆಯಿಲ್ಲದುದರಿಂದ ಶೀಘ್ರವಾಗಿಯೇ, '**ತಾಳಾದೆ ತರುವ್**' ಎಂಬು ಹೇಳಿರುವ ಹಾಗೆ ನಿರತಿಶಯ ಫಲವನ್ನು ಕೊಡುವನೆಂಬ ಭಾವವು. ಯಾವ ಪ್ರತಿಬಂಧ ಒದಗಿದರೂ, "**ತಾ ಹನ್ಯಾಂ ಇಚ್ಛ**" ಎಂದು ಹೇಳಿರುವ ಹಾಗೆ, ಅವುಗಳನ್ನೆಲ್ಲಾ ಪ್ರತಿಭಟಿಸಿ ಶರಣಾಗತನ ಕೋರಿಕೆಯನ್ನು ಅಪೇಕ್ಷಿಸಿದ ಕಾಲ

ಯುಮ್; ಇವ್ವಿಶೇಷಗಳ್ಲೈನ್ದಾಲುಮ್ ಶಂಕಾ ಪರಿಹಾರಮ್ ಪಿರನ್ದ ಪಡಿ ಎಙ್ಙನೇ ಎನ್ನಿಲ್.

೧. ಸರ್ವಜ್ಞನಾಯ್ ಸರ್ವ ಶಕ್ತಿಯೂಯಿರುನ್ದಾನೇಯಾಗಿಲುಮ್, ಮರುಕ್ಕವೊಣ್ಣಾದ ಪುರುಷಕಾರ ವಿಶೇಷತ್ತಾಲೆ, ಅಂತಃಪುರ ಪರಿಜನ ವಿಷಯಿತ್ತಿರ್ರ್ಪೋಲೆ ಅಭಿಗಂತವ್ಯತಾ ವಿರೋಧಿಗಳಾನ ಅಪರಾಧಙ್ಗಳೈ

ದಲೇ ಸಲ್ಲಿಸುವನಾದುದರಿಂದ ಆತನಿಗೆ ಸಹಕಾರಿಯು ಅಪೇಕ್ಷೆಯು ಇಲ್ಲವೆಂಬ ಭಾವವು

ತಣ್ಣಿಯರಾನ - ಅತ್ಯಂತ ನಿಕೃಷ್ಟರಾದ, **ಪಿರರುಡೈಯ** - ಇತರರ, ಎಂದರೆ ಚೇತನರ, **ಪೇರೆ** - ಪ್ರಯೋಜನವೇ, **ತನ್ ಪೇರಾಗೈಯುಮ್** - ತನ್ನ ಪ್ರಯೋಜನವಾಗಿ ಭಾವಿಸೋಣವು. ಇದು ಪ್ರಯೋಜನಕ್ಕೆ ವಿಶೇಷವು. ಹೀಗೆ ಸರ್ವೇಶ್ವರನು ಭಾವಿಸುವದರಿಂದ, **ತರಂಪಾರಾದೆ** - ತಾರತಮ್ಯವನ್ನು ನೋಡದೆ ಕೊಡುವನು ಎಂಬ ಭಾವವು. ಈ ಚೇತನನ ಕುಲ, ಗುಣ, ವ್ಯಾಪಾರ ಮೊದಲಾದವುಗಳಲ್ಲಿ ಯಾವುದನ್ನೂ ನೋಡದೆ, ಶರಣಾಗತನಾದುದರಿಂದ ಮೋಕ್ಷ ಸುಖವನ್ನು ಕೊಡುವದರಿಂದ, ಈ ಚೇತನರ ಪ್ರಯೋಜನವೇ ತನ್ನ ಪ್ರಯೋಜನವೆಂದು ಭಾವಿಸುವನೆಂಬ ತಾತ್ಪರ್ಯವು. "**ಇವ್ವಿಶೇಷಗಳ್ಲೈನ್ದಾಲುಮ್** - ಹೀಗೆ ಈ ಐದು ವಿಶೇಷಗಳಿಂದಲೂ, **ಶಂಕಾ ಪರಿಹಾರಮ್** - ಮೇಲೆ ಉಪಾದಿಸಲ್ಪಟ್ಟ ಮಹಾ ವಿಶ್ವಾಸಕ್ಕೆ ವಿರೋಧಿಗಳಾದ ಐದು ಶಂಕಾಗಳ ನಿವೃತ್ತಿಯೂ ಉಂಟಾಗುತ್ತದೆಂಬುವದು, **ಎಙ್ಙನೇ ಎನ್ನಿಲ್**-ಹೇಗೆ ಎಂದರೆ? ಈ ಐದು ವಿಶೇಷಗಳಿಂದಲೂ ಕ್ರಮವಾಗಿ ಈ ಮಹಾ ವಿಶ್ವಾಸಕ್ಕೆ ವಿರೋಧಿಯಾದ ಶಂಕಾಗಳ ನಿವೃತ್ತಿಯು ಹೇಗೆ ಉಂಟಾಗುತ್ತದೆಂಬುವದನ್ನು ಉಪಪಾದಿಸುತ್ತಾರೆ :—

೧. ಸರ್ವಜ್ಞನಾಗಿ ಸರ್ವಶಕ್ತಿಯುಳ್ಳವನಾಗಿದ್ದರೂ, **ಮರುಕ್ಕವೊಣ್ಣಾದ ಪುರುಷಕಾರ ವಿಶೇಷತ್ತಾಲೆ** - ಅತಿಲಂಘಿಸಲು ಸಾಧ್ಯವಿಲ್ಲದ ಲಕ್ಷ್ಮಿಯ ಪುರುಷಕಾರ ವಿಶೇಷದಿಂದ, **ಅಂತಃಪುರಪರಿಜನ ವಿಷಯತ್ತಿರ್ರ್ಪೋಲೆ**-ಲೋಕದಲ್ಲಿ ಪಟ್ಟಮಹಿಷಿಯ ಕಡೆಯ ಜನಗಳ ವಿಷಯದಲ್ಲಿ ಹೇಗೋ ಹಾಗೆ, **ಅಭಿಗಂತವ್ಯತಾವಿರೋಧಿಗಳಾನ**-ತನ್ನ ಪ್ರಾಪ್ತಿಗೆ ವಿರೋಧಿಗಳಾದ, ಅಪರಾಧಗಳನ್ನೆಲ್ಲಾ ಕ್ಷಮಿಸಿ, **ಇವತ್ತಿಲ್ "ಅವಿಜ್ಞಾತಾ" ಎನ್ರುಮ್ಪಡಿ** - ಈ ಅಪರಾಧಗಳ ವಿಷಯದಲ್ಲಿ "**ಅವಿಜ್ಞಾತಾ**" ಎಂದರೆ ತಿಳುವಳಿಕೆ ಇಲ್ಲದವನು ಎಂದರೆ ಭಕ್ತರ

---

(೧) ಭಾರ. ಅನುಶಾ. ಸಹಸ್ರನಾಮ. ೫೭.

ಯೆಲ್ಲಾಮ್ ಕ್ಷಮಿತ್ತು, ಇನತ್ತಿಲ್ (೧) "ಅವಿಜ್ಞಾತಾ" ಎನ್ಱುಮ್ಪಡಿ ನಿನ್ರು ಅಭಿಗಂತವ್ಯನಾವನ್.

೨. ಕರ್ಮಾನುರೂಪ ಫಲಪ್ರದನೇ ಯಾಗಿಲುಮ್, ಇಪ್ಪ್ರಪತ್ತಿ ರೂಪ ವ್ಯಾಜತ್ತಾಲೆ ಪ್ರಸನ್ನನಾಯ್, ಸ್ವಾಮಿತ್ವ ದಾಸತ್ವ ಸಂಬಂಧೋ

ದೋಷದ ವಿಷಯದಲ್ಲಿ ಅನಭಿಜ್ಞನು, ಎನ್ರುಮ್ಪಡಿ - ಎಂದು ಹೇಳುವ ಹಾಗೆ ನಿನ್ರು ಅಭಿಗಂತವ್ಯನಾವನ್ - ಇದ್ದುಕೊಂಡು ಪ್ರಾಪ್ಯನಾಗುವನು. ಸರ್ವಜ್ಞನಾದುದರಿಂದ ನಮ್ಮ ಅಪರಾಧಗಳನ್ನೆಲ್ಲಾ ತಿಳಿದಿರುವನು; ಸರ್ವಶಕ್ತನಾದುದರಿಂದ ಅಪರಾಧಾನುಗುಣವಾಗಿ ದಂಡಿಸುವ ಸಾಮರ್ಥ್ಯವುಳ್ಳವನು, ಇಂಥಾವನು ಮಹಾಪರಾಧಿಗಳಿಗೆ ಶರಣಾಗತನಾದುದರಿಂದ ದಂಡಿಸದಿರುವನೇ ಎಂದು ಶಂಕೆ ಹಿಂದೆ ಹೇಳಲ್ಪಟ್ಟಿತು. ಆ ಸರ್ವಜ್ಞತೆಯೇ ಈಗ ಈತನನುಷ್ಠಿಸಿದ ಶರಣಾಗತಿಯ ಮೂಲಕ ಈತನು ಭಕ್ತನೆಂದರಿತು ಸರ್ವಶಕ್ತನಾದುದರಿಂದ ಆತನ ಅಪರಾಧಗಳನ್ನೆಲ್ಲಾ ಹೋಗಲಾಡಿಸಬಲ್ಲನು; ಎಂದರೆ ಈತನು ಪುರುಷಕಾರಭೂತಳಾಗಿ ಅನುಗ್ರಹಮಯಳಾಗಿರುವ ಲಕ್ಷ್ಮಿಯುಕ್ತನಾಗಿರುವದರಿಂದ, ಆಕೆಯ ವಾತ್ಸಲ್ಯಾತಿಶಯಕ್ಕೆ ಕಟ್ಟುಬಿದ್ದು, ಆಕೆಯು ಅನುಗ್ರಹಿಸಬೇಕೆಂದಿರುವವನ ವಿಷಯದಲ್ಲಿ ತಾನು ಶಾಸ್ತ್ರನಾಗದೆ, ಅಂಥಾವನಿಗೂ ಕೂಡ ಪ್ರಾಪ್ಯನಾಗಲು ಸಂದೇಹವಿಲ್ಲವೆಂಬಭಿಪ್ರಾಯವು ಆದುದರಿಂದಲೇ ಶ್ರೀ ಭಾಷ್ಯಕಾರರವರು ಲಕ್ಷ್ಮಿಯಲ್ಲಿ ಶರಣಾಗತಿಯನ್ನು ಮಾಡಿ ಅನಂತರ ನಾರಾಯಣನಲ್ಲಿ ಶರಣಾಗತಿಯನ್ನನುಷ್ಠಿಸಿದಹಾಗೆ ಶರಣಾಗತಿಗದ್ಯದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಈ ಪುರುಷಕಾರ ಮಾಹಾತ್ಮ್ಯೆಯಿಂದ ಶಾಸ್ತ್ರನಾದ ನಾರಾಯಣನು (೨) "ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ" ಈ ಭಕ್ತನ ಶತಾಪರಾಧಗಳನ್ನು ಪರಿಗಣಿಸದಿರುವದರಿಂದಲೇ "ಅವಿಜ್ಞಾತಾ" ಎಂದು ಹೇಳಿಸಿಕೊಳ್ಳುವನು. ಸರ್ವಜ್ಞನೇಯಾದರೂ ಈ ವಿಷಯದಲ್ಲಿ ಅವಿಜ್ಞತೆಯುಳ್ಳವನು.

೨. ಕರ್ಮಾನುರೂಪ ಫಲಪ್ರದನೇಯಾಕಿಲುಮ್ - ಸರ್ವೇಶ್ವರನು ಚೇತನರ ಕರ್ಮಾನುಸಾರವಾಗಿ ಫಲವನ್ನು ಕೊಡುವವನೇಯಾದರೂ, ಈ ಪ್ರಪತ್ತಿ, ಎಂಬ ವ್ಯಾಜದಿಂದ, ಪ್ರಸನ್ನನಾಗಿ, ಸ್ವಾಮಿತ್ವ ದಾಸತ್ವ ಸಂಬಂಧೋಪಾಧಿಕನಾಯ್ - ತಾನು ಸ್ವಾಮಿ, ಚೇತನನು ದಾಸನು, ಎಂಬ ಸಂಬಂಧವನ್ನೇ ಕಾರಣಮಾಡಿಕೊಂಡು, ದಾಯಂಪೋಲೆ - ಸ್ವಾಮಿಯಾದವನು ತನ್ನ ದಾಸ

(೨) ರಾಮಾ. ಅಯೋಧ್ಯಾ

ಸಾಧಿಕನಾಯ್, ದಾಯುಮಾ ಪೋಲೆ ಸ್ವತಃಪ್ರಾಪ್ತಮಾನ ಮಳವಿಲ್ಲಾದ ಫಲತ್ರೈಯುಮರ್ ತರುಮ್.

೩ ಅವಾಪ್ತ ಸಮಸ್ತ ಕಾಮನಾಗೈಯಾಲೆ ಸರ್ವೋಪಕಾರ ನಿರ

ನಿಗಾಗಿಯಾಗಲಿ, ಅಥವಾ ಪಿತಾವಾದವನು ಪುತ್ರನಿಗಾಗಿಯಾಗಲಿಇಟ್ಟ ಧನದಹಾಗೆ,**ಸ್ವತಃಪ್ರಾಪ್ತಮಾನ**-ನಿರಾಯಾಸವಾಗಿ ಉಂಟಾದ, **ಅಳವಿಲ್ಲಾದ ಫಲತ್ರೈಯುಮರ್ ತರುಮ್** - ನಿರವಧಿಕವಾದ ಮೋಕ್ಷಫಲವನ್ನೂ ಕೊಡಬಲ್ಲನು. ಸರ್ವೇಶ್ವರನು ಕರ್ಮಾನುಗುಣವಾಗಿ ಫಲಪ್ರದನಾಗಿರುವಾಗ ಅನಂತಾಪರಾಧಗಳನ್ನು ಮಾಡಿರುವ ಚೇತನನಿಗೆ ಎಲ್ಲಿಯಾದರೂ ನಿರತಿಶಯಸುಖರೂಪ ಮೋಕ್ಷವನ್ನು ಕೊಡುವನೇ ಎಂಬದಾಗಿ ಹಿಂದೆ ಎರಡನೇ ಶಂಕಾ ಹೇಳಲ್ಪಟ್ಟಿತು. ಅದಕ್ಕೆ ಸಮಾಧಾನ ಹೇಳುತ್ತಾರೆ. ಸರ್ವೇಶ್ವರನು ಸಾರ್ವತ್ರಿಕವಾಗಿ ಕರ್ಮಾನುರೂಪವಾಗಿ ಫಲವನ್ನು ಕೊಡುವನೇನೋ ಸತ್ಯವು. ಆದರೆ ಪ್ರಪನ್ನನ ವಿಷಯದಲ್ಲಾದರೋ ಆತನ ಪೂರ್ವ ಕರ್ಮಗಳೆಲ್ಲಾ ನಾಶವಾಗಿ ಉತ್ತರ ಕರ್ಮಗಳೆಲ್ಲಾ ಅಂಟದಿರುವದರಿಂದ, ಹಾಗೆ ಫಲಕೊಡದೆ ಚೇತನನಿಗೂ ತನಗೂ ಇರುವ ಸಂಬಂಧವು ಎಂದಿಗೂ ತಪ್ಪಿದಲ್ಲವಾದುದರಿಂದ ಕರುಣಾಳುವಾದ ತಂದೆಯು ಮಗನಿಗೆ ವಿಭಾಗಿಸಿಟ್ಟ ಹಣದೋಪಾದಿಯಲ್ಲಿ, ನಿರತಿಶಯ ಮೋಕ್ಷಸುಖವನ್ನು ಕೊಡುವನು. ಆದರೆ ಹೀಗೆ ಅನಂತಾಪರಾಧಗಳ ನಿವೃತ್ತಿಯು ಈ ಅಲ್ಪವ್ಯಾಪಾರವಾದ ಪ್ರಪತ್ತಿಯಿಂದ ಸಾಧ್ಯವೇ ಎಂಬ ಚೋದ್ಯಪರಿಹಾರಕ್ಕಾಗಿ, ಸ್ವಾಮಿಯು ಈ ಪ್ರಪತ್ತಿಯನ್ನು ವ್ಯಾಜೀಕರಿಸಿ, ಅಂತಹ ಅನಂತಾಪರಾಧ ನಿವೃತ್ತಿಮೂಲಕ ನಿರತಿಶಯ ಸುಖರೂಪಪ್ರಾಪ್ತಿಯನ್ನು ಸಂಕಲ್ಪಿಸಿರುವದರಿಂದ "**ಪ್ರಪತ್ತಿರೂಪ ವ್ಯಾಜತ್ತಾಲೇ**" ಎಂಬ ಪ್ರಯೋಗವು. ಲೋಕದಲ್ಲಿಯೂ ಮಹಾಪರಾಧಿಯು ಪ್ರಣಿಪಾತಾದಿಗಳ ಮೂಲಕ ತನ್ನ ಅಪರಾಧಕ್ಷಾಮಣೆಯನ್ನು ಬೇಡಿಕೊಂಡರೆ ಮಹಾಪರಾಧವನ್ನೂ ಕೂಡಿ ಕ್ಷಮಿಸಿರುವದನ್ನು ಕಂಡಿರುವೆವು. ಆ ಸಂದರ್ಭದಲ್ಲಿ ಪ್ರಣಿಪಾತಾದಿಗಳು ಹೇಗೆ ವ್ಯಾಜಗಳಾದವೋ ಹಾಗೆಯೇ ಇಲ್ಲಿಯೂ ಪ್ರಪದನವು ವ್ಯಾಜಮಾತ್ರವಾದುದೆಂದು ಹೇಳಲ್ಪಟ್ಟಿತು. ಯಾವಾಗ ಚೇತನರು ನಿಯಮೇನ ದಾಸರಾದರೋ ಆವಾಗ ಆತನು ಕೊಡುವ ನಿರತಿಶಯ ಸುಖಕ್ಕೆ ಸ್ವತಃ ಹಕ್ಕುಳ್ಳವರಾದರೆಂಬಭಿಪ್ರಾಯ ತೋರುವಹಾಗೆ, **ದಾಯಂ ಪೋಲೆ**-ಎಂದು ಪ್ರಯೋಗಿಸಿರುತ್ತಾರೆ.

೩ **ಅವಾಪ್ತ ಸಮಸ್ತಕಾಮನಾಕೈಯಾಲೆ** - ಪರಿಪೂರ್ಣ ಕಾಮನಾದುದರಿಂದ, **ಸರ್ವೋಪಕಾರ ನಿರಪೇಕ್ಷನೇಯಾಗಿಲುಮ್** - ಯಾವದೊಂದುಪ

ಪೇಕ್ಷನೇಯಾಗಿಲುಮ್, ಅಲ್ಪತ್ತಾಲೆ ವಶೀಕಾರ್ಯನಾನ ಸುಜನಸಾರ್ವಭೌಮನ್ನೈಪ್ಪೋಲೆ ತನ್ನಿರುಪಾಧಿಕ ಕಾರುಣ್ಯಾದಿಗಳಾಲೆ ಇವರ್‌ ಶೆಯ್‌ಗಿರ ಶಿಲ್ಪಾನವ್ಯಾಪಾರತ್ತೈ ತನಕ್ಕು ಪರಮೋಪಕಾರಮಾಗ ಆದರಿತ್ತುಕ್ಕೊಣ್ಡು ಕೃತಜ್ಞನಾಯ್ ಕಾರ್ಯಮ್ ಶೆಯ್ಯುಮ್.

ಕಾರವೂ ಆ ಸರ್ವೇಶ್ವರನಿಗೆ ಬೇಕಾಗಿಲ್ಲದಿದ್ದರೂ, **ಅಲ್ಪತ್ತಾಲೆ ವಶೀಕಾರ್ಯನಾನ ಸುಜನ ಸಾರ್ವಭೌಮನ್ನೈಪ್ಪೋಲೆ** - ಒಂದು ನಿಂಬೇಹಣ್ಣಿನ ನಜರು, ಮುಂತಾದ ಅಲ್ಪ ಮರ್ಯಾದೆಯಿಂದ ಪ್ರೀತನಾಗಿ ಪ್ರಸನ್ನನಾದ ಒಳ್ಳೆ ಚಕ್ರವರ್ತಿಯು ಹಾಗೆ; ಸಾರ್ವಭೌಮನು ಸುಜನನಾಗಿದ್ದರಲ್ಲವೇ ಕಾರುಣ್ಯೌದಾರ್ಯಯುಕ್ತನಾಗಿ ಪ್ರಸನ್ನನಾಗಿ ಈತನ ಕೋರಿಕೆಯನ್ನು ಸಲ್ಲಿಸುವನು. ಹಾಗಿಲ್ಲದೆ ದುಷ್ಟನಾದರೆ ಎಂದಿಗೂ ಹೀಗೆ ವಶ್ಯನಾಗನು. ತಾನು ರಾಜನೆಂಬ ಹೆಮ್ಮೆಯಿಂದ ಅಲಕ್ಷ್ಯದಿಂದ ಕಾಣುವನು ಎಂಬಭಿಪ್ರಾಯವು. **ತನ್ನಿರುಪಾಧಿಕ ಕಾರುಣ್ಯಾದಿಗಳಾಲೆ** - ತನ್ನ ನಿರ್ಹೇತುಕವಾದ ಕಾರುಣ್ಯ ಮೊದಲಾದ ಗುಣಗಳಿಂದ, ಇಲ್ಲಿ ಆದಿಶಬ್ದದಿಂದ ಔದಾರ್ಯ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿ ಗುಣಗಳು ಬೋಧಿಸಲ್ಪಟ್ಟವು, **ಇವರ್‌ ಶೆಯ್‌ಗಿರ** - ಈ ಚೇತನನು ಮಾಡುವ, **ಶಿಲ್ಪಾನ ವ್ಯಾಪಾರತ್ತೈ** - ಈ ಅಲ್ಪ ವ್ಯಾಪಾರವಾದ ಶರಣಾಗತಿಯನ್ನು, **ತನಕ್ಕು ಪರಮೋಪಕಾರಮಾಗ ಆದರಿತ್ತುಕೊಂಡು** - ತನಗೆ ಪರಮೋಪಕಾರವೆಂದು ಭಾವಿಸಿಕೊಂಡು, **ಕೃತಜ್ಞನಾಯ್** - ಮಾಡಿದುದನ್ನು ತಿಳಿಯುವನಾಗಿ, ಅದಕ್ಕಾಗಿ ಕೃತಜ್ಞತಾಭಾವವುಳ್ಳವನಾಗಿ, **ಕಾರ್ಯಮ್ ಶೆಯ್ಯುಮ್** - ಕಾರ್ಯವನ್ನು ಮಾಡುವನು ಸರ್ವೇಶ್ವರನು ಪರಿಪೂರ್ಣಕಾಮನು, ಆದುದರಿಂದ ಆತನಿಗೆ ಯಾರಿಂದಲೂ ಏನೊಂದೂ ಪ್ರಯೋಜನವೂ ಬೇಕಾಗಿರುವದಿಲ್ಲವು, ಇಂಥವನು ಈ ಅಲ್ಪವ್ಯಾಪಾರಕ್ಕೆ ಕಟ್ಟುಬಿದ್ದು ಅಂತಹ ಮಹತ್ತಾದ ಫಲರೂಪವಾದ ಮೋಕ್ಷವನ್ನು ಎಂದಿಗಾದರೂ ದಯಪಾಲಿಸುವನೇ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ ಲೋಕದಲ್ಲೀ ಸುಜನ ಸಾರ್ವಭೌಮನು, ತನ್ನನ್ನು ಪ್ರಾರ್ಥಿಸುವನಿಂದ ಏನೊಂದು ಪ್ರಯೋಜನವು ತನಗೆ ಉಂಟಾಗದಿದ್ದರೂ ಕೃಪೌದಾರ್ಯಗುಣಗಳಿಂದ ಆತನ ಪ್ರಾರ್ಥನೆಯಿಂದಲೂ ಆತನು ಮಾಡುವ ಪ್ರಣಾಮಾದಿ ಅಲ್ಪಮರ್ಯಾದೆಯಿಂದಲೂ ಪ್ರೀತನಾಗಿ ಮಹತ್ತಾದ ಅಭೀಷ್ಟಗಳನ್ನು ದಯಪಾಲಿಸುವ ತೆರದಿ, ಈ ರಾಜಾಧಿರಾಜನೂ ಕೂಡ ಈ ಚೇತನನು ಮಹಾದೈನ್ಯದಿಂದ ಮಾಡುವ ಈ ಅಲ್ಪ ವ್ಯಾಪಾರವಾದ ಶರಣಾಗತಿಗೆ ಕಟ್ಟುಬಿದ್ದವನಾಗಿ, ತನ್ನ ನಿರುಪಾಧಿಕ ಗುಣಗಳಿಂದ ಪ್ರೇರಿತನಾಗಿ ಈತನು ಪರಮೋ

ಪಕಾರವನ್ನು ಎಸಗಿದನು ಎಂದು ಭಾವಿಸಿ, ಉದಾರಭಾವದಿಂದ ಆತನಿಗೆ ಮೋಕ್ಷಸುಖವನ್ನು ಈಯುವನು. ಈತನು ಮಾಡಿದ ಶರಣಾಗತಿಯು ಒಂದು ವ್ಯಾಜಮಾತ್ರವು. ಆದರಿಂದಲೇ ಪ್ರೀತನಾಗಿ ಸಕಲಾಭೀಷ್ಟಗಳನ್ನು ಕೊಡುವನು. ಅಲ್ಪವ್ಯಾಪಾರದಿಂದಲೇ ಪ್ರೀತನಾಗುವನೆಂಬುವದಕ್ಕೆ

"ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥

ಎಂಬ ಗೀತಾ ಪ್ರಮಾಣವಿರುತ್ತದೆ. ಕುಚೇಲನ ಪೃಥುಕ ತಂಡುಲವೇ ಸರ್ವೈಶ್ವರ್ಯವನ್ನು ಆತನ ಪತ್ನಿಗೆ ಉಂಟುಮಾಡಿತು. ಈ ಚೇತನನು ಮಾಡುವ ಅಲ್ಪವ್ಯಾಪಾರಗಳಾದ ಪ್ರಣಾಮಗಳಿಗೆ ಪ್ರೀತನಾಗಿ ತನ್ನ ಔದಾರ್ಯ ಮಹಾತ್ಮ್ಯೆಯನ್ನು ಪ್ರಕಾಶಪಡಿಸಿದವರೆಂದು ಭಾವಿಸಿ **"ಉದಾರಾಸ್ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಂ"** (ಗೀ. ೭-೧೮) ಎಂದು ಹೇಳಿರುವ ಹಾಗೆ ಕೃತಜ್ಞತಾ ಭಾವದಿಂದ ಅಂಥಾವರನ್ನು ಉದಾರಿಗಳಾಗಿ ಸರ್ವೇಶ್ವರನು ಭಾವಿಸುವನು. ಹಾಗೆಯೇ, ದ್ರೌಪದಿಯ ವಿಷಯದಲ್ಲಿ

"ಗೋವಿನ್ದೇತಿ ಯದಾ ಕ್ರಂದತ್ಕೃಷ್ಣಾ ಮಾಂ ದೂರವಾಸಿನಂ
ಋಣಂ ಪ್ರವೃದ್ಧಮಿವ ಮಾಂ ಹೃದಯಾನ್ನಾಪಸರ್ಪತಿ॥"

ಆ ದಿನ ದುರುಳ ದುರ್ಯೋಧನನ ಸಭೆಯಲ್ಲಿ ದುಶ್ಶಾಸನನಿಂದ ಅವಮಾನ ಹೊಂದಿ ಗೋವಿಂದಾ ಎಂಬ ಆರ್ತಧ್ವನಿಯುಕ್ತಳಾಗಿ ದ್ರೌಪದಿಯು ಶರಣಾಗತಿಯನ್ನು ಮಾಡಿದುದನ್ನು ಶ್ರೀಕೃಷ್ಣನು ಒಂದು ಪ್ರವೃದ್ಧವಾದ ಋಣವಾಗಿ ಭಾವಿಸಿದ ಹಾಗೆ ಕೃತಜ್ಞತಾ ಭಾವದಿಂದ ಹೇಳಿಕೊಂಡಿರುತ್ತಾನೆ. ಹಾಗೆಯೇ ಶ್ರೀರಾಮನೂ ಕೂಡ ತನ್ನ ತಮ್ಮನಾದ ಭರತನು ಮಾಡಿದ ಶರಣಾಗತಿಗೆ ಕಟ್ಟುಬಿದ್ದು ಕೃತಜ್ಞತಾಭಾವದಿಂದುಂಟಾದ ಪರಿತಾಪದಿಂದ

(೧)**" ಮಾಂ ನಿವರ್ತಯಿತುಂ ಯೋಸೌ ಚಿತ್ರಕೂಟಮುಪಾಗತಃ ।**
ಶಿರಸಾ ಯಾಚಿತೋ ಯಸ್ಯ ವಚನಂ ನ ಕೃತಂ ಮಯಾ ॥"

ಭರತನು ಅಷ್ಟು ದೈನ್ಯದಿಂದ ತಲೆಯನ್ನು ಬಾಗಿ ಯಾಚಿಸಿದರೂ ಆತನ ಮಾತನ್ನು ನಡಿಸಿಕೊಡದೇ ಹೋದೆನಲ್ಲಾ! ಈಗಲಾದರೂ ನಡಿಸಿಕೊಡಬೇಕೆಂದು ವಿಭೀಷಣನಿಗೆ ಹೇಳುತ್ತಾನೆ. ಆದುದರಿಂದ ಅಂತಹ ಪ್ರಪನ್ನರ ವಿಷಯದಲ್ಲಿ **ಕೃತಜ್ಞನಾಯ್ ಕಾರ್ಯಮ್ ಶೆಯ್ಯುವರ್** ಎಂದು ಹೇಳಿರುತ್ತಾರೆ. ಮತ್ತು ವಿಭೀಷಣನು ಇನ್ನೂ ರಾವಣಾದಿಗಳ ಸಮುದ್ರತರಣಕ್ಕೆ ಮೊದಲೇ ಬಂದು

(೧) ರಾಮಾ. ಯುದ್ಧ. ೧೨೫-೨೦.

೪. ಕ್ಷುದ್ರದೇವತೈಗಳೈಪ್ಪೋಲೆ ಕ್ಷಿಪ್ರಕಾರಿಯನ್ನಾಕಿಲುಮ್, ಮತ್ತುಳ್ಳ ಶಾಸ್ತ್ರಾರ್ಥಙ್ಗಳುಕ್ಕುವಿಳಮ್ಬಿತ್ತು ಫಲಮ್ ಕೊಡುತ್ತಾನೇಯಾಕಿಲುಮ್, ಅನನ್ಯ ಶರಣನುಡೈಯ ಪ್ರಪತ್ತಿ ಕ್ಕೌದಾರ್ಯಾದಿ ಗುಣ ಸಹಿತನಾಯ್ ಸಹಕಾರ್ಯಂತರ ನಿರಪೇಕ್ಷವಾನ ತ(ನ್) ಸಙ್ಕಲ್ಪಮಾತ್ರತ್ತಾಲೇ ಕಾಕ ವಿಭೀಷಣಾದಿಗಳುಕ್ಕು ಪ್ಪೋಲೆ ಇವನ್ಕ್ಕುಮಿನ ಕಾಲತ್ತಿಲ್ ಅಪೇಕ್ಷಿತಮ್ ಕೊಡುಕ್ಕುಮ್.

ಶರಣಾಗತನಾದ ಒಡನೆಯೇ, ಶ್ರೀರಾಮನು ಆತನಿಗೆ ಲಂಕಾರಾಜ್ಯಕ್ಕಾಗಿ ಅಭಿಷೇಕವಮಾಡಿಸಿದನು. ತಾನು ಸತ್ಯ ಸಂಕಲ್ಪನಾದುದರಿಂದ ಅದನ್ನು ನೆರವೇರಿಸುವ ಭರವಸೆಯು ತನಗೆ ಇತ್ತು. ಅನಂತರ ರಾವಣಾದಿ ಮುಖ್ಯ ರಾಕ್ಷಸರೆಲ್ಲಾ ಹತರಾದ ಬಳಿಕ

"ಅಭಿಷಿಚ್ಯ ಚ ಲಙ್ಕಾಯಾಂ ರಾಕ್ಷಸೇಂದ್ರಂ ವಿಭೀಷಣಂ ।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದಹ"

ಎಂದು ಹೇಳಿರುವ ರೀತಿಯಲ್ಲಿ ವಿಭೀಷಣನನ್ನು ರಾಕ್ಷಸರಾಜನನ್ನಾಗಿ ಪುನಃ ಅಭಿಷೇಕಮಾಡಿಸಿ, ತಾನು ಆಗ ಕೃತಕೃತ್ಯನಾದವನೆಂದು ಭಾವಿಸಿಕೊಂಡನು. ಭಕ್ತನಿಗೆ ಇನ್ನೂ ಏನನ್ನೂ ಮಾಡಲಿಲ್ಲವೇ ಎಂದಿದ್ದ ಅಂತರ್ಜ್ವರವನ್ನು ಹೋಗಲಾಡಿಸಿಕೊಂಡನು; ಮತ್ತು ವಿಶೇಷ ಸಂತೋಷವನ್ನೂ ಹೊಂದಿದನು ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದಲೇ ತಲ್ಪವ್ಯಾಪಾರದಿಂದ ಪ್ರೀತನಾಗಿ, ಕೃತಜ್ಞನಾಗಿ ಭಕ್ತಾಭೀಷ್ಟವನ್ನು ಸರ್ವೇಶ್ವರನು ಕೊಡುವನು.

೪. ಕ್ಷುದ್ರದೇವತೈಗಳೈಪ್ಪೋಲೆ ಕ್ಷಿಪ್ರಕಾರಿಯನ್ನಾಕಿಲುಮ್ – ಸರ್ವೇಶ್ವರನು ಬ್ರಹ್ಮರುದ್ರೇಂದ್ರರ ಹಾಗೆ ಶೀಘ್ರಫಲದಾಯಕನಲ್ಲದಿದ್ದರೂ, **ಮತ್ತುಳ್ಳ ಶಾಸ್ತ್ರಾರ್ಥಙ್ಗಳುಕ್ಕು** - ಮಿಕ್ಕ ಇತರಗಳಾದ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಯಜನ ಭಜನಾದಿಗಳಿಗೂ, ಯೋಗಕ್ಕೂ, **ವಿಳಂಬಿತ್ತು ಫಲಂ ಕೊಡುತ್ತಾನೇ ಯಾಗಿಲುಮ್** - ಸರ್ವೇಶ್ವರನು ಸಾವಕಾಶವಾಗಿ ಫಲವನ್ನು ಕೊಟ್ಟರೂ, **ಅನನ್ಯ ಶರಣನುಡೈಯ** – ಸರ್ವೇಶ್ವರನಲ್ಲದೇ ಬೇರೆ ಗತಿಯಿಲ್ಲದಿರುವ ಪ್ರಪನ್ನನು ಮಾಡಿದ, **ಪ್ರಪತ್ತಿಕ್ಕು** - ಪ್ರಪದನಕ್ಕೆ, **ಔದಾರ್ಯಾದಿ ಗುಣ ಸಹಿತನಾಯ್** - ಔದಾರ್ಯವೇ ಮೊದಲಾದ ಗುಣಗಳಿಂದ ಯುಕ್ತನಾಗಿ, ಇಲ್ಲಿ ಆದಿ ಪದದಿಂದ ಕಾರುಣ್ಯ ವಾತ್ಸಲ್ಯ ಸೌಶೀಲ್ಯ ಸೌಲಭ್ಯ ಗುಣಗಳೂ ಸಂಗ್ರಹಿಸಲ್ಪಟ್ಟವು, **ಸಹಕಾರ್ಯಂತರ ನಿರಪೇಕ್ಷವಾನ** - ಬೇರೆ ಯಾವ ಸಹಾಯವೂ ಬೇಕಾಗದಿರುವ, **ತ(ನ್) ಸಙ್ಕಲ್ಪ ಮಾತ್ರತ್ತಾಲೆ** - ತನ್ನ ಸಂಕಲ್ಪ

ಮಾತ್ರದಿಂದಲೇ, **ಕಾಕ ವಿಭೀಷಣಾದಿಗಳುಕ್ಕುಪ್ಪೋಲೆ** - ಕಾಕಾಸುರ ವಿಭೀಷಣಾದಿಗಳಿಗೆ ಹೇಗೋ ಹಾಗೆ ಇಲ್ಲಿ **ಆದಿ** ಶಬ್ದದಿಂದ ಇತರ ಇತಿಹಾಸಗಳಲ್ಲಿ ಪ್ರಖ್ಯಾತರಾದ, ಶರಣಾಗತರು ಹೇಳಲ್ಪಟ್ಟರು. ಗ್ರಂಥಕರ್ತರೇ ಇನ್ನೊಂದು ಕಡೆಯಲ್ಲಿ ಅನೇಕ ಶರಣಾಗತರನ್ನು ಕುರಿತು ಹೇಳಿರುತ್ತಾರೆ.

"ಕಯಾಧುಸುತ ವಾಯಸ ದ್ವಿರದ ಪುಙ್ಗವ ದ್ರೌಪದೀ।

ವಿಭೀಷಣ ಭುಜಙ್ಗಮವ್ರಜಗಣಾಂಬರೀಷಾದಯಃ"॥

(ಅಭೀತಿಸ್ತವ ೧೩ನೇ ಪುಟವನ್ನವಲೋಕಿಸಿ.) **ಇವನ್ ಕೋಲಿನ ಕಾಲತ್ತಿಲ್**- **ಈ** ಪ್ರಪನ್ನನು ಅಪೇಕ್ಷಿಸಿದ **ಕಾಲದಲ್ಲೇ, ಅಪೇಕ್ಷಿತಮ್** - ಅಪೇಕ್ಷಿತವಾದುದನ್ನು, ಮೋಕ್ಷವೇ ಆಗಲಿ ಇನ್ನಾವುದು ಅಪೇಕ್ಷಿತವೋ ಅದನ್ನೇಯಾಗಲಿ, **ಕೊಡುಕ್ಕುಮ್** - ಕೊಡುವನು. ಇಲ್ಲಿ ಸಂದೇಹವೇನೆಂದರೆ ಬ್ರಹ್ಮರುದ್ರೇಂದ್ರಾದಿಗಳ ಹಾಗೆ ಈ ಸರ್ವೇಶ್ವರನು ಶೀಘ್ರಫಲವನ್ನು ಕೊಡುವನಲ್ಲವು; ಇವರೀಗ ಕೇಳಿದ ಒಡನೆಯೇ ಅನೇಕ ರಾಕ್ಷಸರಿಗೆ ವರಗಳನ್ನು ಕೊಟ್ಟು ಲೋಕಕ್ಕೆ ತೊಂದರೆಯನ್ನುಂಟುಮಾಡಿದರು. ಸರ್ವೇಶ್ವರನಾದರೋ ಹಾಗೆ ವಿಮರ್ಶೆಯಿಲ್ಲದೆ ಕೊಡಲಾರನು. ಹೀಗಿರುವಲ್ಲಿ ಈ ಶರಣಾಗತಿಯನ್ನು ಮಾಡಿದ ಮಾತ್ರದಿಂದಲೇ ಕ್ಷಿಪ್ರದಲ್ಲಿ ಮೋಕ್ಷಸುಖವನ್ನು ದೇಹಾವಸಾನವಾದ ಒಡನೆಯೇ ಕೊಟ್ಟು ಬಿಡುವನೇ ಎಂದಾಕ್ಷೇಪವು. ಅದಕ್ಕೆ ಸಮಾಧಾನ ಹೇಳುತ್ತಾರೆ. ಸರ್ವೇಶ್ವರನೇನೋ ಬ್ರಹ್ಮರುದ್ರಾದಿಗಳ ಹಾಗೆ ವಿಳಂಬವಿಲ್ಲದೆ ಫಲವನ್ನು ಕೊಡವವಿಲ್ಲವು ಅದು ಯಾವ ಸಂದರ್ಭದಲ್ಲಿ ಎಂದರೆ ಯಜನ, ಉಪಾಸನ ಮುಂತಾದವುಗಳಲ್ಲಿ ವಿಳಂಬಿಸಿ ಕೊಡುವನು. ಏಕೆಂದರೆ ಆತನು ಉಪಾಯವನ್ನು ಅವಲಂಬಿಸಿದುದರಿಂದ, ಆ ಯೋಗವು ಸಾಙ್ಗವಾಗಿ ನಡೆದು, ಪ್ರಾರಬ್ಧಕರ್ಮವು ಕ್ಷಯವಾಗಬೇಕಾಗಿ ಸರ್ವೇಶ್ವರನು ಸಙ್ಕಲ್ಪಿಸಿರುವುದರಿಂದ, ಹಾಗೆ ವಿಳಂಬವು. ಇಲ್ಲಿ ಈ ಪ್ರಪನ್ನನು ಅನನ್ಯಶರಣನಾಗಿ ಮಹಾವಿಶ್ವಾಸಕಾರ್ಪಣ್ಯಗಳಿಂದ ಶರಣಾಗತಿಯನ್ನು ಮಾಡಿರುವದರಿಂದ ಆತನ ವಿಷಯದಲ್ಲಿ, ಆರ್ತನಾದರೆ ಬಹುಕ್ಷಿಪ್ರದಲ್ಲೇ ಅಂದರೆ ಒಡನೆಯೇ, ದೃಪ್ತನಾದರೆ, ದೇಹಾವಸಾನದಲ್ಲೇ, ಮುಕ್ತಿಯನ್ನು ಕೊಡುವದಾಗಿ ಸಙ್ಕಲ್ಪಿಸಿರುತ್ತಾನೆ. ಆದುದರಿಂದ ಈತನಿಗೆ ಕ್ಷಿಪ್ರಫಲಪ್ರಾಪ್ತಿಗೆ ಕಾರಣವನ್ನು ಹೇಳುವದಕ್ಕಾಗಿಯೇ **ಅನನ್ಯ ಶರಣನೆಂಬ** ಪ್ರಯೋಗವು. ಇಂತಹ ವ್ಯತ್ಯಾಸಕ್ಕೆ ಕಾರಣವು ಸರ್ವೇಶ್ವರನ ಸಙ್ಕಲ್ಪವುಎಂದು ಹೇಳಲ್ಪಟ್ಟಿತು. ಹೀಗೆ ವ್ಯತ್ಯಾಸ ಪ್ರಸರಿಯೇ ಎಂದರೆ ಲೋಕದಲ್ಲಿಪಿತಾವಾದವನು ಬೇರೆ ಗತಿಯುಳ್ಳ ಪುತ್ರನ ವಿಷಯದಲ್ಲಿ ವಿಳಂಬಿಸಿ ಸಹಾಯಮಾಡುವದೂ, ನಿರ್ಗತಿಕನಾದ ಪುತ್ರನವಿಷಯದಲ್ಲಿ ಒಡನೆ ಸಹಾಯಮಾಡುವದೂ ಸಹಜವಾದುದೇ, ಹೀಗೆ ಸಙ್ಕಲ್ಪ ಏತರಿಂದೆಂದರೆ:—ಅನನ್ಯಶರಣನವಿಷಯದಲ್ಲಿ ಕೃಪೌದಾರ್ಯಾದಿಗಳ ಮಹಿಮೆಯಿಂದ ಎಂದು ಹೇಳಿರುತ್ತಾರೆ.

೫ ಸಮಾಧಿಕ ದರಿದ್ರನೇಯಾಗಿಲುಮ್ ಸ್ವಾತಂತ್ರ್ಯಾದಿ ಗುಣವಿಶಿಷ್ಟನಾಯ್ ತ್ತ ಪ್ರಯೋಜನಮಾಕ ವಾಶ್ರಿತರ್ಕಪೇಕ್ಷಿತಂ ಶೆಯ್‌ಗಿರನಾಗೈಯಾಲ್, ಕೋಸಲ ಜನಪದತ್ತಿಲ್ ಜನ್ತುಕ್ಕಳುಕ್ಕು ಪ್ಪೋಲೆ

ಹೀಗೆ ಕ್ಷಿಪ್ರಕಾರಿಯಾಗಿ ಫಲವನ್ನು ಕೊಡುವದಕ್ಕೆ ಯಾವುದರ ಸಹಾಯವೇನಾದರೂ ಬೇಕೋ ಎಂದರೆ ಸರ್ವೇಶ್ವರನಿಗೆ ಯಾವುದರ ಸಹಾಯವೂ ಬೇಕಿಲ್ಲವು. ಪ್ರಪನ್ನನಿಂದಲೇಯಾಗಲಿ, ಇತರರಿಂದಲೇಯಾಗಲಿ ಸಹಾಯ ಬೇಕಿಲ್ಲವು. ಸತ್ಯಸಙ್ಕಲ್ಪದಮಹಿಮೆಯು ಅಮೋಘವಾದುದು. ಅದಕ್ಕೆ ಯಾವುದೂ ತಡೆಯಿಲ್ಲವು. ಇದಕ್ಕೇನಾದರೂ ನಿದರ್ಶನಗಳುಂಟೋ ಎಂದರೆ, **ಕಾಕ ವಿಭೀಷಣಾದಿಗಳ** ದೃಷ್ಟಾಂತವನ್ನು ಹೇಳುತ್ತಾರೆ. ಇವರುಗಳು ಅಪೇಕ್ಷಿಸಿದ ಒಡನೆಯೇ ಅವರುಗಳ ಕೋರಿಕೆಗಳನ್ನು ದಯಪಾಲಿಸಿದರು. ವಿಭೀಷಣನ ವಿಷಯದಲ್ಲಾದರೋ ಆತನ ಶರಣಾಗತಿಗೆ ಕಟ್ಟುಬಿದ್ದು ಲಂಕಾರಾಜ್ಯಾಧಿಪತಿಯಾಗಿ ಮಾಡಲಪೇಕ್ಷಿಸಿ ಇನ್ನೂ ಸಮುದ್ರವನ್ನು ದಾಟದಿದ್ದರೂ, ಯುದ್ಧೋಪಕ್ರಮವಿಲ್ಲದಿದ್ದರೂ, ರಾವಣನು ಹತನಾಗದಿದ್ದರೂ, ಶ್ರೀರಾಮನು ಲಕ್ಷ್ಮಣನನ್ನು ಕುರಿತು,

> **"ಸಮುದ್ರಾಜ್ಜಲಮಾನಯ । ತೇನ ಚೇಮಂ ಮಹಾಪ್ರಾಜ್ಞಂ ಅಭಿಷಿಂಚ ವಿಭೀಷಣಂ । ರಾಜಾನಂ ರಕ್ಷಸಾಂ ಕ್ಷಿಪ್ರಂ ಪ್ರಸನ್ನೇ ಮಯಿ ಮಾನದ"**

ಓ ಲಕ್ಷ್ಮಣನೇ ಸಮುದ್ರದ ನೀರನ್ನು ತರಿಸಿ ಅದರಿಂದ ಈ ಮಹಾ ಪ್ರಾಜ್ಞನಾದ ವಿಭೀಷಣನಿಗೆ ಅಭಿಷೇಕವನ್ನು ಮಾಡಿ ಈತನನ್ನು, ನಾನು ಪ್ರಸನ್ನನಾಗುವದೊಂದೇ ಸಾವಕಾಶವು, ಪ್ರಸನ್ನನಾದ ಬಳಿಕ ಬೇಗ ರಾಕ್ಷಸರಾಜನನ್ನಾಗಿ ಮಾಡು ಎಂದು ಇಲ್ಲಿಯೂ, **ಕ್ಷಿಪ್ರಂ** ಎಂಬ ಶಬ್ದವನ್ನು ಮಹರ್ಷಿಯು ಉಪಯೋಗಿಸಿ, ಆತನ ಸಂಕಲ್ಪಕ್ಕೆ ಯಾವುದೊಂದು ಸಹಕಾರಿಯೂ ಬೇಕಿಲ್ಲವು, ಅದು ಅಪ್ರತಿಹತವಾದುದೆಂದು ಬಹು ಸ್ವಾರಸ್ಯವಾಗಿ ತೋರ್ಪಡಿಸಿರುತ್ತಾರೆ. ಆದುದರಿಂದ **"ಸಹಕಾರಿಯೈ ಪಾರ್ತ್ತಿರುಕ್ಕ ವೇಣ್ಡಾ ಮೈಯಾಲ್"** ಎಂಬೀ ವಿಶೇಷದಿಂದ ಈ ಶಂಕಾ ಪರಿಹಾರವೆಂದು ತಿಳಿಯತಕ್ಕದ್ದು.

೫. ಸಮಾಧಿಕ ದರಿದ್ರನೇಯಾಗಿಲುಮ್ – ಸರ್ವೇಶ್ವರನಿಗೆ ಸಮರೂ ಅಧಿಕರೂ ಆದವರ್‍ಯಾರೂ ಇಲ್ಲದಿದ್ದರೂ, ಸ್ವಾತಂತ್ರ್ಯಾದಿಗುಣಗಳಿಂದ ಯುಕ್ತನಾಗಿ, ಇಲ್ಲಿ ಆದಿ ಪದದಿಂದ ದಯಾ ವಾತ್ಸಲ್ಯವೇ ಮೊದಲಾದ ಗುಣಗಳು ಹೇಳಲ್ಪಟ್ಟವು, **ತ್ತ ಪ್ರಯೋಜನಮಾಕ** – ಈಶ್ವರನಾದ ತನ್ನ ಪ್ರಯೋಜನಕ್ಕಾಗಿ **ಆಶ್ರಿತರ್ಕಪೇಕ್ಷಿತಂ ಶೆಯ್‌ಗಿರನಾಗೈಯಾಲೆ** – ತನ್ನನ್ನಾಶ್ರಯಿಸಿದವ

ಕುಮಾರನೋಡೊಕ್ಕತ್ತಿರ್ಯಕ್ಕಾನ ಕಿಳಿಕ್ಕಿ ಪಾಲೂಟ್ಟುಮ್ ಕಣಕ್ಕಿಲೇ ತರಂಪಾರಾದೆ ಕೊಡುಕ್ಕುಮ್ ; ಇಪ್ಪಡಿ ಯಥಾ ಲೋಕಂ ಪಿರನ್ನ ಶಂಕೈ

ರಿಗೆ ಅವರ ಪ್ರಾರ್ಥನೆಗಳನ್ನು ನಡಿಸಿಕೊಡುವನಾದುದರಿಂದ, **ಕೋಸಲ ಜನಪದ ತ್ತಿಲ್** - ಕೋಸಲರಾಜ್ಯದಲ್ಲಿನ, **ಜನ್ತುಕ್ಕಳೈಪ್ಪೋಲೆ** - ಇತರ ಜೀವಜನ್ತುಗಳ ಹಾಗೆ, **ಕುಮಾರನೋಡೊಕ್ಕ** - ಕುಮಾರನೊಂದಿಗೆ, **ತಿರ್ಯಕ್ಕಾನಕಿಳಿಕ್ಕಿ** - ತಿರ್ಯಗ್ಜನ್ತುವಾದ ಗಿಳಿಗೆ, **ಪಾಲೂಟ್ಟುಮ್ ಕಣಕ್ಕಿಲೆ** - ಹಾಲು ಕುಡಿಸುವ ತೆರದಿ ಎಂದರೆ ಕುಮಾರನಿಗೆ ಹೇಗೆ ಹಾಲು ಕುಡಿಸುತ್ತಾನೋ ಹಾಗೆಯೇ ತನ್ನ ಲೀಲೆ ಗಾಗಿ ಸಾಕಿದ ಗಿಣಿಗೂ ಹಾಲು ಕುಡಿಸುವ ಹಾಗೆ ಎಂಬ ಭಾವವು, **ತರಂಪಾರಾದೆ** ತಾರತಮ್ಯವೇನೊಂದನ್ನೂ ನೋಡದೆ, **ಕುಡುಕ್ಕುಮ್** - ಕೊಡುವನು. ಸರ್ವೇ ಶ್ವರನು ನಿಸ್ಸಮಾಭ್ಯಧಿಕನಾದುದರಿಂದ ತುಂಬಾ ಉತ್ಕೃಷ್ಟ ಪದವಿಯುಳ್ಳವನಾಗಿ, ಅಲ್ಪರಾದ ನಮ್ಮಗಳಿಗೆ ತಾರತಮ್ಯವನ್ನೇನೂ ನೋಡದೆ ಮೋಕ್ಷಸುಖವನ್ನು ಕೊಡುವನೇ ಎಂಬುವದು ಐದನೆಯ ಶಂಕೆಯು. ಅದಕ್ಕೆ ಪರಿಹಾರವನ್ನು ಅಪ್ಪಣೆ ಕೊಡಿಸುತ್ತಾರೆ. " **ನತತ್ಸಮಶ್ಚಾಭ್ಯಧಿಕಶ್ಚದೃಶ್ಯತೇ** " ಎಂಬ ಶ್ರುತ್ಯನುಸಾರ ವಾಗಿ ಸರ್ವೇಶ್ವರನಿಗೆ ಸಮರೂ ಅಧಿಕರೂ ಇಲ್ಲದೆ ಇರುವದರಿಂದಲೇ, ತುಂಬಾ ಉನ್ನತ ಪದವಿಯಲ್ಲಿದ್ದರೂ, ತನಗಿಂತಲೂ ತುಂಬಾ ಹೀನಸ್ಥಿತಿಯಲ್ಲಿರುವ ಈ ಚೇತನರ ವಿಷಯದಲ್ಲಿ ಅನುಗ್ರಹಿಸಲು ಯೋಗ್ಯವಾದ ಸ್ವಾತಂತ್ರ್ಯ ದಯಾವಾ ತ್ಸಲ್ಯಾದಿಗಳನ್ನು ಹೊಂದಿರುವದರಿಂದಲೂ, ಶರಣಾಗತನಿಗೆ ಉಂಟಾಗುವ ಪ್ರಯೋ ಜನವೇ ತನ್ನ ಪ್ರಯೋಜನವೆಂದು ಭಾವಿಸುವದರಿಂದಲೂ, ಹೀಗೆ ತಾರತಮ್ಯವ ನ್ನೇನು ನೋಡದೆ ಕೊಡುವನು, ಅದು ಹೇಗೆ ಎಂಬುವದನ್ನು ಎರಡು ದೃಷ್ಟಾಂತ ಗಳಿಂದ ಸಮರ್ಥಿಸಿ ಹೇಳಿರುತ್ತಾರೆ :—ಶ್ರೀರಾಮನು ತನ್ನ ಅವತಾರ ಪರಿಸಮಾಪ್ತಿ ಕಾಲದಲ್ಲಿ, ಸರಯೂನದಿಯನ್ನು ಪ್ರವೇಶಿಸುವ ಸಂದರ್ಭದಲ್ಲಿ, ಕೋಸಲದೇಶದ ಸಮಸ್ತ ಜನರೂ, ಮೃಗಪಶುಪಕ್ಷಿಗಳೇ ಮೊದಲಾದ ಸರ್ವಜನ್ತುಗಳೂ ತನ್ನನ್ನನು ಸರಿಸಿ ಬರಲು ಸಮ್ಮತಿಸಿ ಎಲ್ಲರಿಗೂ ಏನೊಂದೂ ತಾರತಮ್ಯವಿಲ್ಲದೆ ಸಾಂತಾನಿಕ ಲೋಕಪ್ರಾಪ್ತಿಯುಂಟಾಗುವಹಾಗೆ ಹೇಗೆ ಮಾಡಿದನೋ ಹಾಗೆ ಎಂಬದಾಗಿ ಹೇಳಲ್ಪಟ್ಟಿತು. ಮತ್ತು ನೆಮ್ಮದಿಯಲ್ಲಿರುವ ತಂದೆಯು ತನ್ನ ಕುಮಾರನ ಜೊತೆ ಯಲ್ಲಿಯೇ ತನ್ನ ಲೀಲಾ ಶುಕಕ್ಕೂ ಏನೊಂದೂ ತಾರತಮ್ಯವಿಲ್ಲದೆ ಹಾಲು, ಮೃಷ್ಟಾನ್ನ, ಫಲ ಮುಂತಾದ ಭೋಗಗಳನ್ನು ಕಲ್ಪಿಸುವ ತೆರದಿ, ಸರ್ವೇಶ್ವರನೂ ಕೂಡ ಪ್ರಪನ್ನನಿಗೆ ಅಪೇಕ್ಷಿತಗಳಾದ ಸರ್ವಾಭೀಷ್ಟಗಳನ್ನೂ ಉಂಟುಮಾಡುವನು ಎಂಬ ತಾತ್ಪರ್ಯವು. **ಇಪ್ಪಡಿ** - ಈಗ ಮೇಲೆ ವಿಶದವಾಗಿ ಹೇಳಿದ ರೀತಿಯಲ್ಲಿ,

ಗಳುಕ್ಕು ಯಥಾಲೋಕಂ ಪರಿಹಾರ ಮುಂಡಾಕ್ಕೈಯಾಲೆ ಯಥಾಶಾಸ್ತ್ರಂ ಪ್ರಪತ್ತಿ ಅಪೇಕ್ಷಿತಸಾಧನ ಮಾಕಕ್ಕುರೈಯಿಲ್ಲೈ.

ಯಥಾಲೋಕಂ ಪಿರನ್ದ ಶಂಕೈಗಳಕ್ಕು - ಲೋಕನ್ಯಾಯವನ್ನನುಸರಿಸಿ ಉಂಟಾದ ಶಂಕೆಗಳಿಗೆ. **ಯಥಾಲೋಕಂ ಪರಿಹಾರ ಮುಣ್ಡಾಗೈಯಾಲೆ** - ಲೋಕನ್ಯಾಯರೀತ್ಯಾ ಪರಿಹಾರವೂ ಕೂಡ ತಾವು ಈಗ ಅಂತಃಪುರಜನ, ದಾಯ ಭಾಗ, ಸುಂದನ ಸಾಧ್ವಭಾವ, ಕಾಕ ವಿಭೀಷಣರು, ಕೋಸಲದೇಶ ತಿರ್ಯಕ್ಕುಗಳು ಶುಕ ಭೋಗ ಮೊದಲಾದ ಲೋಕದೃಷ್ಟಾಂತಗಳ ಮೂಲಕವ್ಯಕ್ತಪಡಿಸಿದ ರೀತಿ ಯಲ್ಲಿ ಉಂಟಾಗಬಹುದಾದುದರಿಂದ, **ಯಥಾಶಾಸ್ತ್ರಂ** - ಅತೀನ್ದ್ರಿಯ ವಿಷಯ ದಲ್ಲಿ ಶಾಸ್ತ್ರವೇ ಪ್ರಮಾಣವಾಗಿ, ಆ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ, **ಪ್ರಪತ್ತಿ** - ಪ್ರಪತ್ತಿಯು, **ಅಪೇಕ್ಷಿತ ಸಾಧನಮಾಕ** - ತನ್ನ ಕೋರಿಕೆಯನ್ನು ಸಾಧಿಸಿ ಕೊಡುವಂಥಾದ್ದಾಗಲು, **ಕುರೈ ಯಿಲ್ಲೈ** – ಏನೂ ನ್ಯೂನತೆ ಇರುವದಿಲ್ಲವು; ಎಂದರೆ ಸಾಧಿಸಿ ಕೊಡುತ್ತದೆಂಬುವದರಲ್ಲಿ ನಿಸ್ಸಂದೇಹವೆಂಬ ತಾತ್ಪರ್ಯವು. ಶರಣಾ ಗತವತ್ಸಲನ ಸಙ್ಕಲ್ಪವು ಅತಿ ಅಮೋಘವಾದದೆಂಬುವದು ಶಾಸ್ತ್ರಪ್ರತಿಪಾದ್ಯ ವಿಷಯವು. ಅಂತಹ ಸರ್ವೇಶ್ವರನ ಸತ್ಯಸಙ್ಕಲ್ಪದ ವಿಷಯದಲ್ಲಿ ಲೋಕನ್ಯಾಯ ಗಳನ್ನು ತಂದು ಐದು ಶಂಕಾಗಳು ಹೇಳಲ್ಪಟ್ಟವಾದುದರಿಂದ ಅವುಗಳಿಗೆ ಪರಿಹಾರ ಗಳನ್ನೂ ಲೋಕನ್ಯಾಯಗಳಿಂದಲೇ ಹೇಳಲ್ಪಟ್ಟವು. ಆದುದರಿಂದ ಅಂತಹ ಶಂಕಾಗಳನ್ನು ದೂರೀಕೃತಮಾಡಿ ಪ್ರಪದನವು ಸರ್ವ ಪುರುಷಾರ್ಥದಾಯಿಕವೆಂದು ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವದರಿಂದ, ಅದು ಈತನ ಸರ್ವಾಭೀಷ್ಟಗಳನ್ನು ಸಾಧಿಸಿಕೊಡುತ್ತದೆಂಬ ವಿಷಯದಲ್ಲಿ ಈಷದಪಿ ಸಂದೇಹವು ಬೇಡವೆಂಬ ಉಪ ದೇಶವು.

ಈ ಐದು ವಿಧ ಶಂಕಾಗಳಿಂದ ಮನಸ್ಸು ಅಬಾಧಿತವಾಗುವಹಾಗೆ, ಈ ಮೇಲೆ ಹೇಳಿದ ಪುರುಷಕಾರ ಸಂಬನ್ಧಗುಣ ವ್ಯಾಪಾರ ಪ್ರಯೋಜನಗಳ ಸರಿಯಾದ ಜ್ಞಾನದಿಂದಲೇ ಮಹಾ ವಿಶ್ವಾಸ ಉಂಟಾಗುತ್ತದೆಂದು ಹೇಳುತ್ತಾರೆ. ಆದರೆ ಇಂತಹಜ್ಞಾನವಿದ್ದರೂ ಕೂಡ ಮಹಾ ವಿಶ್ವಾಸ ಉಂಟಾಗದೇ ಹೋಗುತ್ತದೆ ಯಲ್ಲಾ. ಅದಕ್ಕೆ ಕಾರಣವೇನು ಎಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಅಂತಹ ಜ್ಞಾನವಿದ್ದರೂ ಸದಾಚಾರ್ಯಕಟಾಕ್ಷವು ಮುಖ್ಯ. ಆ ಸದಾಚಾರ್ಯೋಪದೇಶ ರೂಪಸಂಸ್ಕಾರ ಉಂಟಾದದೇನೇ ಜ್ಞಾನದಿಂದ ಸರಿಯಾದ ಪ್ರವೃತ್ತಿಯು; ಅಂತಹಸಂಸ್ಕಾರವಿಲ್ಲದಿದ್ದರೆ ಜ್ಞಾನವು ಸರಿಯಾದ ಮಾರ್ಗದಲ್ಲಿ ಪ್ರವೃತ್ತಿಸಲಾರ ದೆಂದು ಹೇಳುತ್ತಾರೆ:—

ಮಹಾ ವಿಶ್ವಾಸಾವಿರ್ಭಾವಸ್ಯ ದುಸ್ತರತ್ವಂ

ಇನ್ವಿಶಿಷ್ಟಮಾನ ಪುರುಷಕಾರಾದಿಗಳೈನ್ಮೈಯುಮ್ ಸದಾಚಾರ್ಯ ಕಟಾಕ್ಷ ವಿಶೇಷತ್ತಾಲೆ ತೆಳಿನ್ದವನುಕ್ಕಲ್ಲದು ಮಹಾ ವಿಶ್ವಾಸಂ ಪಿರವಾದ.೨

ಮಹಾ ವಿಶ್ವಾಸ ಉಂಟಾಗುವದು ತುಂಬಾ ದುರ್ಲಭವು.

ಇನ್ವಿಶಿಷ್ಟಮಾನ ಪುರುಷಕಾರಾದಿಗಳೈನ್ಮೈಯುಮ್ – ಈ ಮೇಲೆ ವಿವರಿಸಲ್ಪಟ್ಟ ವಿಶೇಷಗಳಿಂದ ಯುಕ್ತವಾದ ಪುರುಷಕಾರ, ಸಂಬನ್ಧ, ಗುಣ, ವ್ಯಾಪಾರ, ಪ್ರಯೋಜನಗಳೈದನ್ನೂ, ವಿಶೇಷಗಳು ಯಾವುವೆಂದರೆ:– "**ಮರುಕ್ಕ ವೊಣ್ಣಾಮೈಯುಮ್**" ಎಂದು ಹಿಂದೆ ಪ್ರಾರಂಭಿಸಿ ಹೇಳಿದ ಐದು ವಿಶೇಷಗಳು, (೧೧೩ನೆಯ ಪುಟವನ್ನು ಪರಾಂಬರಿಸಿ) ಸದಾಚಾರ್ಯಕಟಾಕ್ಷವಿಶೇಷದಿಂದ, **ತೆಳಿನ್ದವನುಕ್ಕಲ್ಲದು** – ಉಂಟಾದ ಜ್ಞಾನಮೂಲಕ ತಿಳಿದವನಿಗಲ್ಲದೆ, **ಮಹಾ ವಿಶ್ವಾಸಂ ಪಿರವಾದು** – ಇನ್ನು ಯಾರಿಗೂ ಈ ಅಂಗವಾದ ಮಹಾ ವಿಶ್ವಾಸವು ಹುಟ್ಟುವದಿಲ್ಲವು. ಈ ಐದು ಶಂಕಾಗಳು ಪರಿಹಾರವಾಗುವದಕ್ಕೆ ಕಾರಣಭೂತವಾದ ಈ ಮೇಲೆ ಉಪಪಾದಿಸಿದ ವಿಶೇಷಗಳಿಂದ ಯುಕ್ತವಾದ ಪುರುಷಕಾರ ಮೊದಲಾದವುಗಳ ಜ್ಞಾನ ಉಂಟಾಗಬೇಕು. ಅಂತಹ ಬರೀ ಜ್ಞಾನದಿಂದಲೂ ಪ್ರಯೋಜನವಿಲ್ಲವು. ಜ್ಞಾನವಿದ್ದರೂ ಮಹಾ ವಿಶ್ವಾಸವಿಲ್ಲದೆಯೂ ಹೋಗಬಹುದು. ಆ ಜ್ಞಾನವು ಕಾರ್ಯಕಾರಿಯಾಗಲು ಸಂಸ್ಕಾರಯುಕ್ತವಾಗಬೇಕು. ಅಂತಹ ಸಂಸ್ಕಾರವು ಸದಾಚಾರ್ಯ ಕಟಾಕ್ಷ ಒದಗಿ ಅವರ ಉಪದೇಶರೂಪಜ್ಞಾನ ಮೂಲಕ ಉಂಟಾದ ಹೊರತು, ಶರಣಾಗತಿಯ ಅಂಗವಾದ ಮಹಾವಿಶ್ವಾಸವು ಹುಟ್ಟುವದಿಲ್ಲವು. ಆದುದರಿಂದ ಆಚಾರ್ಯಕೃಪಾ ಅತ್ಯಾವಶ್ಯಕವೂ ಎಂಬ ಭಾವವು. ಈ ಆಚಾರ್ಯಕೃಪೆಯು ಏನು ಮಾಡುತ್ತದೆಂದರೆ:– ಉಪದೇಶವನ್ನು ಅನುಗ್ರಹಿಸುವದೂ ಅಲ್ಲದೆ ಆ ಉಪದೇಶಾನುಗುಣವಾಗಿ ನಡೆಯುವ ವಿವೇಕವನ್ನೂ ಉಂಟುಮಾಡುತ್ತದೆ ಇವೆರಡನ್ನೂ ಮನಸ್ಸಿನಲ್ಲಿಟ್ಟು ಸದಾಚಾರ್ಯಕಟಾಕ್ಷ ವಿಶೇಷವೆಂದು ಪ್ರಯೋಗಿಸಿರುತ್ತಾರೆ. ಹಾಗೆಯೇ ಸಂಕಲ್ಪ ಸೂರ್ಯೋದಯದಲ್ಲಿ ಈ ಗ್ರಂಥಕರ್ತರು ಶ್ರೀ ಸದಾಚಾರ್ಯ ಕಟಾಕ್ಷ ಮಹಿಮೆಯು ಬ್ರಹ್ಮರುದ್ರೇಂದ್ರಾದಿಗಳ ಕಟಾಕ್ಷಮಹಿಮೆಗಿಂತಲೂ ಅಮೋಘವಾದುದೆಂದು ಈ ಮುಂದಿನ ಶ್ಲೋಕದಿಂದ ಹೇಳಿರುತ್ತಾರೆ :—

ಎಙ್ಙನೇ ಎನ್ನಿಲ್ :—ಈಶ್ವರನಭಿಮುಖನಲ್ಲಾಮ್ಮೈಯಾಲೇ ಕರ್ಮಯೋಗಾದಿಗಳುಕ್ಕು ಅನರ್ಹನಾಮ್ಪಡಿಯಾನ ಮಹಾಪರಾಧಙ್ಗಳೈಯುಡೈಯನಾಯ್, "ಧಿಗಶುಚಿಮವಿನೀತಮ್" ಎಙ್ಗರ ಶ್ಲೋಕತ್ತಿನ್

ಏಕಯೈವ ಗುರೋರ್ದೃಷ್ಟ್ಯಾ ದ್ವಾಭ್ಯಾಂ ವಾಪಿ ಲಭೇತಯತ್ ।
ನ ತತ್ರಿಸೃಭಿರಷ್ಟಾಭಿಸ್ಸಹಸ್ರೇಣಾಪಿ ಕಸ್ಯಚಿತ್ ॥

ಎಂದರೆ ಶಿಷ್ಯನು ಗುರುವಿನ ಒಂದು ಅಥವಾ ಎರಡು ಕಟಾಕ್ಷಗಳಿಂದ ಯಾವ ನಿರತಿಶಯವಾದ ಸುಖವನ್ನು ಹೊಂದಬಹುದೋ ಅದನ್ನು ತ್ರಿನೇತ್ರನ ಮೂರು ಕಣ್ಣಿನ ನೋಟದಿಂದಲೂ, ಚತುರ್ಮುಖನ ಎಂಟು ಕಣ್ಣಿನ ದೃಷ್ಟಿಯಿಂದಲೂ, ಸಹಸ್ರಾಕ್ಷನ ಸಹಸ್ರ ಕಣ್ಣುಗಳ ವೀಕ್ಷಣದಿಂದಲೂ ಹೊಂದಲಸಾಧ್ಯವೆಂಬ ಭಾವವು ಆದುದರಿಂದ ಮಹಾ ವಿಶ್ವಾಸವಾದ ಮುಖ್ಯಾಂಗವು ಹುಟ್ಟುವವಕ್ಕೆ (೧) ಪುರುಷಕಾರಾದಿಗಳಾದ ಐದರ ಜ್ಞಾನ ಮತ್ತು (೨) ಸದಾಚಾರ್ಯೋಪದೇಶ ರೂಪಾನುಗ್ರಹ, ಇವೆರಡೂ ಆವಶ್ಯಕವು; ಇವುಗಳಿಲ್ಲದೆ ಆಸ್ತಿಕನಿಗೆ ಕೂಡ ಮಹಾ ವಿಶ್ವಾಸವು ಹುಟ್ಟಲಾರದೆಂಬ ತಾತ್ಪರ್ಯವು.

ಹೀಗೆ ಮಹಾ ವಿಶ್ವಾಸವು ಲಭಿಸುವದು ತುಂಬಾ ದುರ್ಲಭವೆಂದು ಹೇಳಲು ಹೊರಟು ಮುಂದಿನ ವಾಕ್ಯದಿಂದ ಮೇಲೆ ಹೇಳಿದ ಐದು ಶಂಕಾಗಳನ್ನು ಪುನಃ ದೃಢೀಕರಿಸಿ ಹೇಳಿ ಮಹಾ ಪೂಜ್ಯರಾದ ಎಂಬಾರ್‌ರವರು ಸೂಕ್ತಿಮೂಲಕವಾಗಿ ಅದನ್ನು ಅನುವಾದಮಾಡಿ ಹೇಳುತ್ತಾರೆ. ಶ್ರೀ ಎಂಬಾರ್‌ರವರು ಶ್ರೀ ಯತಿರಾಜರವರ ಶಿಷ್ಯರು.

ಎಙ್ಙನೇಯೆನ್ನಿಲ್ - ಅದು ಹೇಗೆಂದರೆ :—**ಈಶ್ವರನಭಿಮುಖನಲ್ಲಾಮ್ಮೈಯಾಲೆ** - ಈಶ್ವರನ ಕಟಾಕ್ಷವಿಲ್ಲದಿರುವದರಿಂದ, **ಕರ್ಮಯೋಗಾದಿಗಳುಕ್ಕು**-ಕರ್ಮಯೋಗ ಆದಿಪದದಿಂದ ಜ್ಞಾನಯೋಗ ಭಕ್ತಿಯೋಗಗಳು ಹೇಳಲ್ಪಟ್ಟವು. **ಅನರ್ಹನಾಂಪಡಿಯಾನ** - ಯೋಗ್ಯತೆಯಿಲ್ಲದಿರೋಣ ಹೇಗೋ ಹಾಗೆ **ಮಹಾಪರಾಧಂಗಳೈಯುಡೈಯನಾಯ್** - ಪ್ರಬಲವಾದ ಅಪರಾಧಗಳನ್ನು ಮಾಡಿ (೧) ದಿಗಶುಚಿಮವಿನೀತಂ (ಆಳವಂದಾರ್ ಸ್ತೋತ್ರ ೪೭) ಎಂಬುವ,

---

(೧) " ದಿಗಶುಚಿಮವಿನೀತಂ ನಿರ್ಭಯಂ (ನಿರ್ದಯಂ) ಮಾಮಲಜ್ಜಂ
ಪರಮಪುರುಷ ಯೋಹಂ ಯೋಗಿ ವರ್ಯಾಗ್ರಗಣ್ಯೈಃ ॥
ವಿಧಿಶಿವಸನಕಾದ್ಯೈರ್ಧ್ಯಾತು ಮತ್ಯಂತದೂರಂ
ತವಪರಿಜನಭಾವಂ ಕಾಮಯೇ ಕಾಮವೃತ್ತಃ ॥ "

ಪಡಿಯೇ ಎಟ್ಟವರಿಯ ಫಲತ್ತೈಕ್ಕಣಿಶಿಕ್ಕುಮ್ ಪಡಿಯಾನ ಚಾಪಲತ್ತೈಯುಡೈಯನಾಯ್, ಇಪ್ಫಲತ್ತುಕ್ಕು ಅನುಷ್ಠಿಕ್ಕಪ್ಪುಗುಗಿರ ಉಪಾಯಮ್, ಕಾಯಕ್ಲೇಶಾರ್ಥವ್ಯಯ ಕಾಲದೈರ್ಘ್ಯಾದಿಗಳೊನ್ರುಮ್ ವೇಣ್ಡಾದದೊರು ಸಕೃದನುಸನ್ಧಾನಮಾದಲ್, ಸಮುದಾಯ ಜ್ಞಾನಪೂರ್ವಕ ಸಕೃದುಕ್ತಿಮಾತ್ರ ಮಾದಲಾಯ್, ಇನ್ನ ಲಘುತರಮಾನ ಉಪಾ

ಶ್ಲೋಕತ್ತಿಲ್ ಪಡಿಯೆ-ಶ್ಲೋಕದಲ್ಲಿ ಹೇಳಿರುವ ಹಾಗೆ, ಎಟ್ಟವರಿಯ ಫಲತ್ತೈ ಬ್ರಹ್ಮರುದ್ರೇಂದ್ರಾದಿಗಳಿಗೂ ಕೂಡ ಹೊಂದಲಸಾಧ್ಯವಾದ ಫಲವನ್ನು, ಕಣಿಶಿಕ್ಕುಂಪಡಿಯಾನ - ಅಪೇಕ್ಷಿಸೋಣ ಹೇಗೋ ಹಾಗೆ, ಚಾಪಲತ್ತೈಯುಡೈಯನಾಯ್ - ಚಪಲಸ್ವಭಾವ ಉಳ್ಳವನಾಗಿ, ಇಪ್ಫಲತ್ತುಕ್ಕು - ಈ ಭಗವತ್ಕೈಂಕರ್ಯಪ್ರಾಪ್ತಿರೂಪ ಮೋಕ್ಷಫಲಕ್ಕಾಗಿ, ಅನುಷ್ಠಿಕ್ಕಪ್ಪುಗುಗಿರ ಉಪಾಯಮ್-ಅನುಷ್ಠಿಸುವದಕ್ಕಾಗಿ ಪ್ರವೇಶಿಸಿರುವ ಉಪಾಯವು ಎಂದರೆ ಅನುಷ್ಠಿಸತಕ್ಕದ್ದಾಗಿರುವ ಉಪಾಯವು, ಕಾಯಕ್ಲೇಶ-ದೇಹಶ್ರಮ, ಅರ್ಥವ್ಯಯ-ದ್ರವ್ಯವ್ಯಯವು, ಕಾಲದೈರ್ಘ್ಯಾದಿಗಳ್ - ಬಹು ಕಾಲದ ವಿಳಂಬವೇ ಮೊದಲಾದವುಗಳು, ಇವೆಲ್ಲಾ ಇನ್ನೊಂದು ಉಪಾಯಕ್ಕೆ ಬೇಕಾದವು, ಒನ್ರುಮ್ ವೇಣ್ಡಾದ-ಒಂದೂ ಬೇಕಾಗದಿರುವ, ಒರುಸದನು ಸಕೃನ್ಧಾನಮಾದಲ್-ಒಂದೇಸಲ ಮಾತ್ರವೇ ಮಾಡಿದ ಭರಸಮರ್ಪಣೆಯಿಂದಲಾಗಲಿ, ಸಮುದಾಯಜ್ಞಾನಪೂರ್ವಕ - ಒಟ್ಟಿನಲ್ಲಿ ಉಂಟಾಗುವ ಜ್ಞಾನದಿಂದ ಕೂಡಿದ, ಸಕೃದುಕ್ತಿಮಾತ್ರ ಮಾದಲಾಯ್ - ಒಂದಾವರ್ತಿ ಗುರುವು ಹೇಳಿ

ಎಂದು ಪೂರಾ ಶ್ಲೋಕವು. ಓ ಸರ್ವೇಶ್ವರನೇ ನೀನಾದರೋ ಪರಮ ಪುರುಷನು, ನಾನಾದರೋ ಪ್ರಕೃತಿ ಸಂಸ್ಪೃಷ್ಟನಾಗಿ ನಿನ್ನ ಕೈಂಕರ್ಯಾದಿಗಳಿಗೆ ಅನರ್ಹನಾಗಿ ಅಪರಿಶುದ್ಧನು, ಆಚಾರ್ಯರನ್ನು ಹೊಂದಿದ್ದರೂ ವಿನಯಶೂನ್ಯನು. ಪುರೋಡಾಶವನ್ನು ಅಪೇಕ್ಷಿಸಿದ ನಾಯಿಯು ಹಾಗೂ ಕೂಡ ಭಯವಿಲ್ಲದವನಾಗಿ, ನಾಯಿಯು ಸಿಂಹಾಸನಾರೋಹಣ ಮಾಡುವದು ಹೇಗೆ ಲಜ್ಜಾಸ್ಪದವೋ ಹಾಗೆ ತನಗೆ ಸಾಧ್ಯವಲ್ಲದ ಪರಮಪದ ಸುಖವನ್ನು ಬಯಸುವದರಿಂದ ನಿರ್ಲಜ್ಜನಾಗಿ ಚತುರ್ಮುಖಬ್ರಹ್ಮ ರುದ್ರ ಸನಕಾದಿಗಳಿಂದ ಧ್ಯಾನಮಾಡಲು ಕೂಡ ಸಾಧ್ಯವಿಲ್ಲದೆ ಅತಿದೂರವಾಗಿರುವ ನಿನ್ನ ಪರಿಜನರಾದ ನಿತ್ಯಮುಕ್ತರುಗಳು ಮಾಡುವ ಕೈಂಕರ್ಯ ಸಾಮ್ರಾಜ್ಯ ಪದವಿಯನ್ನು ಅಪೇಕ್ಷಿಸುವೆನಲ್ಲವೇ ? ಆದುದರಿಂದ ಇಂತಹ ಅಪಹಾಸ್ಯಕ್ಕೆ ಗುರಿಯಾದ ನನ್ನನ್ನು ನಿಂದಿಸಿಕೊಳ್ಳುತ್ತೇನೆ, ಎಂಬುವದು ಈ ಶ್ಲೋಕ ತಾತ್ಪರ್ಯವು.

ಯತ್ತೈ ಕೊಣ್ಡು ಅನ್ದ ಗುರುತರಮಾನ ಫಲತ್ತೈ ತಾನ್ ಕೋಲಿನ ಕಾಲತ್ತಿಲೆ ಪೆರ ಆಶೈಪಟ್ಟು, ಇಷ್ಫಲತ್ತುಕ್ಕು (೧) "ಶುನಾಮಿವ ಪುರೋಡಾಶಃ" ಎಙ್ಗ್ರಪಡಿಯೇ ಜನ್ಮವೃತ್ತಾದಿಗಳಾಲೇ ತಾನನರ್ಹನಾಯ್ ನೈತ್ತು, ತನ್ನನುಬಂಧಿಗಳೈಯುಮ್ ಕೊಣ್ಡಿಪ್ಪೇರು ಪೆರುವದಾಕ ಒರುತ್ತನಕ್ಕು ಮಹಾ ವಿಶ್ವಾಸಮ್ ಪಿರಕ್ಕೈಯಿಲರುಮೈಯೈ ನಿನೈತ್ತು "ಕಲವೆಳ್ಳುಕ್ಕಟ್ಟು ಪೋಯ್ಕ್ಕಲ ಎಣ್ಣೆಯಾಯಿತ್ತು" ಎನ್ರು ಎಮ್ಬಾರ್ ಅರುಳಚೆಯ್ದಾರಿರೇ.

ಕೊಟ್ಟಿದುದನ್ನು ಉಚ್ಚರಿಸುವದು ಮಾತ್ರವಾಗಲಿ, ಆಗಿ, ಇನ್ದ ಲಘುತರಮಾನ **ಉಪಾಯತ್ತೈಕೊಣ್ಡು** - ಇಂತಹ ತುಂಬಾ ಸುಲಭವಾದ ಉಪಾಯವಾದ ಭರಸಮರ್ಪಣಮೂಲಕ, **ಅನ್ದ ಗುರುತರಮಾನ ಫಲತ್ತೈ** - ಅಂತಹ ಮಹತ್ತಾದ ಪರಮಪದಪ್ರಾಪ್ತಿರೂಪವಾದ ಫಲವನ್ನು. **ತಾನ್ ಕೋಲಿನ ಕಾಲತ್ತಿಲೆ**- ತಾನು ಅಪೇಕ್ಷಿಸಿದ ಕಾಲದಲ್ಲಿ, **ಪೆರ ಆಶೈಪಟ್ಟು** - ಹೊಂದಲು ಅಪೇಕ್ಷಿಸಿ, **ಇಷ್ಫಲತ್ತುಕ್ಕು** - ಈ ಮೋಕ್ಷಪ್ರಾಪ್ತಿಗೆ, **" ಶುನಾಮಿವ ಪುರೋಡಾಶಃ "** ನಾಯಿಗಳಿಗೆ, ಯಾಗಗಳಲ್ಲಿ ಉಪಯೋಗಿಸುವ ಪುರೋಡಾಶ ಎಂಬ ಹವಿಸ್ಸಿನ ಹಾಗೆ, **ಎಙ್ಗ್ರಪಡಿಯೇ** - ಎಂದು ಹೇಳಿರುವ ಹಾಗೆ, **ಜನ್ಮವೃತ್ತಾದಿಗಳಾಲೆ** ತನ್ನ ಜನ್ಮ ಮತ್ತು ನಡತೆ ಮೊದಲಾದವುಗಳಿಂದ, **ತಾನನರ್ಹನಾಯ್** - ತಾನು ಅರ್ಹನಲ್ಲದವನಾಗಿ, ತನಗೆ ಯೋಗ್ಯತೆ ಇಲ್ಲದವನಾಗಿ, **ನೈತ್ತು** - ಇದ್ದರೂ ಕೂಡ **ತನ್ನನುಬಂಧಿಗಳೈಯುಮ್ ಕೊಣ್ಡು** - ತನ್ನ ಸಂಬಂಧೀಕರ ಎಂದರೆ ದಾರ ಪುತ್ರಾದಿಗಳೊಡನೆ ಕೂಡ, **ಇಪ್ಪೇರುಪೆರುವದಾಗ** - ಈ ಪುರುಷಾರ್ಥ ಪ್ರಾಪ್ತಿಯು ಸಿದ್ಧಿಸುವದೆಂದು, **ಒರುತ್ತನುಕ್ಕು**-ಒಬ್ಬ ಚೇತನನಿಗೆ, **ಮಹಾ ವಿಶ್ವಾಸಮ್ ಪಿರಕ್ಕೈಯಿಲ್**-ಮಹಾ ವಿಶ್ವಾಸವು ಆವಿರ್ಭವಿಸುವದರಲ್ಲಿ, **ಅರುಮೈಯೈ** - ದೌರ್ಲಭ್ಯವನ್ನು, ತುಂಬಾ ಕಷ್ಟವೆಂಬುವದನ್ನು, **ನಿನೈತ್ತು** - ಆಲೋಚಿಸಿ ತಿಳಿದು, **"ಕಲ ಎಳ್ಳುಕ್ಕಟ್ಟು**-ಹನ್ನೆರಡುಬಳ್ಳ ಎಳ್ಳಿನ ಹೊರೆ, **ಪೋಯ್** ಹೋಗಿ ಎಂದರೆ ಅದಕ್ಕೆ ಬದಲಾಗಿ, **ಕಲ ಎಣ್ಣೆಯಾಯಿತ್ತು** - ಹನ್ನೆರಡು ಬಳ್ಳದಷ್ಟು ಎಣ್ಣೆಯಾಯಿತು " ಎಂದು **ಎಮ್ಬಾರರ್** - ಶ್ರೀ ಯತಿರಾಜರ ಶಿಷ್ಯರಾದ ಎಂಬಾರರು, **ಅರುಳಚೆಯ್ದಾರಿರೇ**- ಅಪ್ಪಣೆ ಕೊಡಿಸಿದರಲ್ಲವೇ. ಈ ವಾಕ್ಯದಿಂದ ಮಹಾವಿಶ್ವಾಸವು ಹುಟ್ಟುವದು ತುಂಬಾ ದುಸ್ತರವೆಂದು ಹೇಳುತ್ತಾರೆ. ಸಾಧ್ಯೋ

---

(೧) ಪಾದ್ಮೋತ್ತರಂ. ೧೨.೮೩.

ಪಾಯಗಳು ಭಕ್ತಿಪ್ರಪತ್ತಿಗಳೆಂದು ಹೇಳಿ, ಭಕ್ತಿಮಾರ್ಗವು ಅಷ್ಟಾಂಗಯುಕ್ತವಾದುದಾಗಿ ಯಾವಜ್ಜೀವವೂ ಉಪಾಸನದಿಂದ ಸಾಧ್ಯವಾದುದರಿಂದ ಗುರೂಪಾಯವೆಂದೂ, ಪ್ರಪದನವು ಸಕೃದನುಷ್ಠಿತವಾದುದರಿಂದ ತುಂಬಾ ಲಘುವಾದ ಉಪಾಯವೆಂದೂ ಹೇಳಲ್ಪಟ್ಟಿತು. ಆದರೆ ಈ ಲಘೂಪಾಯವೂ ಕೂಡ ಪಂಚಾಂಗಗಳಿಂದ ಯುಕ್ತವಾದುದಾಗಿ, ಮಹಾ ವಿಶ್ವಾಸವೂ ಒಂದು ಅಂಗವಾಗಿರುತ್ತದೆ. ಈ ಮಹಾ ವಿಶ್ವಾಸವು ಆವಿರ್ಭವಿಸದೆ ಫಲೋತ್ಪತ್ತಿಯುಂಟಾಗಲಾರದಾದುದರಿಂದ ಈ ಅಂಗವು ಮುಖ್ಯವಾಗಿರತಕ್ಕದ್ದು. ಆದರೆ ಈ ಅದರುತ್ಪತ್ತಿಯು ಸಾಧಾರಣವಾಗಿ ಉಂಟಾಗಲಾರದಾದುದರಿಂದ, ಇದು ಉಂಟಾಗುವದು ತುಂಬಾ ದುಸ್ತರವೆಂದು ಹೇಳಿ, ಅದಕ್ಕೆ ಶ್ರೀ ಎಂಬಾರವರ ಸೂಕ್ತಿಯ ಮೂಲಕ ಒಂದು ದೃಷ್ಟಾಂತದಿಂದ ವ್ಯಕ್ತಪಡಿಸುತ್ತಾರೆ. ಒಬ್ಬ ರಾಜನು ಒಬ್ಬ ಭೃತ್ಯನನ್ನು ಕುರಿತು ಬಹಳ ಭಾರವಾದ ಒಂದು ಹೊರೆ ಎಳ್ಳನ್ನು ತಂದುಕೊಡು ಎನಲು, ಅದು ಬಹಳ ಭಾರವೆಂದು ಭೃತ್ಯನು ಯೋಚಿಸುತ್ತಿರಲು, ಅದನ್ನೇ ಗಾಣವಾಡಿ ಎಣ್ಣೆ ಮಾಡಿ ತಂದುಕೊಡು ಎಂದು ಮೊದಲಿಗಿಂತ ಕಷ್ಟವಾದುದನ್ನು ಹೇಳಿದಹಾಗೆ, ಭಕ್ತಿ ಮಾರ್ಗವು ತುಂಬಾ ಕಷ್ಟವೆಂದು ಯೋಚಿಸುತ್ತಿರುವಾಗ, ಸುಲಭಮಾರ್ಗ ಪ್ರಪದನವು ಎಂದು ಹೇಳಿ, ಮಹಾ ವಿಶ್ವಾಸವು ಹುಟ್ಟುವದೇ ತುಂಬಾ ದುಸ್ತರವಾದುದರಿಂದ ಭಕ್ತಿಮಾರ್ಗಕ್ಕಿಂತಲೂ ಅದು ಕಷ್ಟತರವಾದ ಮಾರ್ಗವೇ ಆಯಿತು ಎಂಬಭಿಪ್ರಾಯವು. ಹೀಗೆ ಹೇಳುವ ಸಂದರ್ಭದಲ್ಲಿ ಮೇಲೆ ವಿವರಿಸಿದ ಐದು ಶಂಕೆಗಳ ಸಮಾಧಾನವನ್ನೇ ಪುನಃ ಉಪಪಾದನೆ ಮಾಡಿ ಹೇಳುತ್ತಾರೆ. **ಮಹಾಪರಾಧಜ್ಞೈಯು ದೈಯುನಾಯ್** ಎಂಬುವದರಿಂದ ಪ್ರಥಮಶಂಕೆಗೂ, **ಎಟ್ಟುವರಿಯಫಲತ್ತೈ ಕಣಿಶಿಕ್ಕುಂಪಡಿಯಾನ ಚಾಪಲತ್ತೈಯುಂ ಡೈಯನಾಯ್** ಎಂಬುವದರಿಂದ ಎರಡನೆಯ ಶಂಕೆಗೂ, ಕಾಯಕ್ಲೇಶಾದಿಗಳು ಬೇಕಾಗದ ಸಕೃದನುಷ್ಠಾನವಾದ ಲಘುತರ ಉಪಾಯವೆಂಬುವದರಿಂದ ಮೂರನೆಯ ಅಲ್ಪ ವ್ಯಾಪಾರಶಂಕೆಗೂ, **ತಾಳ್ ಕೋಲಿಸಕಾಲತ್ತಿಲೆ ಪೆರ** ಎಂಬುವದರಿಂದ ತಾಳಾದೆ ತರುಗೆಯುಂ ಎಂಬ ಕ್ಷಿಪ್ರಫಲದಾಯಕವಾದ ನಾಲ್ಕನೆಯ ಶಂಕೆಗೂ, **ಶುನಾಮಿವ ಪುರೋಡಾಶಃ** ಎಂಬೀ ದೃಷ್ಟಾಂತದಿಂದ ತಾರತಮ್ಯವಿಲ್ಲದೆ ಫಲಪ್ರದನೆಂಬ ಐದನೆಯ ಶಂಕೆಗೂ ಸಹ ಕಾರಣವಿರುವದರಿಂದ ಮಹಾವಿಶ್ವಾಸವು ಉಂಟಾಗುವದು ದುಸ್ತರವೆಂದು ಹೇಳಿ, ಹೀಗೆ ದುಸ್ತರವಾದರೂ ಮಹಾವಿಶ್ವಾಸವು ಪ್ರಾಪ್ತವಾದರೆ, ಈ ಉಪಾಯವು ಅಂತಹ ಗುರುತರ ಫಲವನ್ನು ತನಗೂ ತನ್ನ ಅನುಬಂಧಿಗಳಿಗೂ ಪಡೆದುಕೊಡುವದರಲ್ಲಿ ಈಷದಪಿ ಸಂದೇಹವಿಲ್ಲವೆಂಬ ಭಾವವು. ಈ ಚೇತನನು ಮಹಾಪರಾಧಿಯೆಂದೂ, ಗುಣಗಳಿಂದಾಗಲಿ, ಜನ್ಮವೃತ್ತಾಂತಾದಿಗಳಿಂದಾಗಲಿ ಅನರ್ಹನೆಂದೂ ಎಂದಿಗೂ ಸರ್ವೇಶ್ವರನು ಎಣಿಸುವನಲ್ಲವು. ಈ

ಇನ್ನಿಡತ್ತಿಲ್ ಸರ್ವೇಶ್ವರನುಡೈಯ ಪರತ್ವಮಾತ್ರತ್ತೈ ಯರಿನ್ದ

ಸಕೃದನುಷ್ಠಿಸಿದ ಉಪಾಯದ ಮಾಹಾತ್ಮ್ಯೆಯು ಅಷ್ಟು ನಿರತಿಶಯವಾದುದೆಂಬ ಭಾವವು.

ನ ಜಾತಿಭೇದಂ ನ ಕುಲಂ ನ ಲಿಂಗಂ ನ ಗುಣಕ್ರಿಯಾಃ ।
ನ ದೇಶಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ ॥

ಪ್ರಪದನರೂಪವಾದ ಈ ಯೋಗವು, ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪಂಚಮ ಮೊದಲಾದ ಜಾತಿಭೇದದ ಉತ್ಕೃಷ್ಟತೆ ನಿಕೃಷ್ಟತೆಯನ್ನಾಗಲಿ, ಸತ್ಕುಲ ಹೀನಕುಲವೆಂಬ ಕುಲಭೇದವನ್ನಾಗಲಿ, ಸ್ತ್ರೀಪುರುಷ ಭೇದವನ್ನಾಗಲಿ, ಗುಣಕ್ರಿಯೆಗಳ ಉತ್ತಮಾಧಮ ಸ್ಥಿತಿಯನ್ನಾಗಲಿ, ದೇಶಕಾಲ ಅವಸ್ಥೆಗಳ ವಿವೇಚನೆಯನ್ನಾಗಲಿ, ಅಪೇಕ್ಷಿಸುವದಿಲ್ಲವೆಂದು ಹೇಳಲ್ಪಟ್ಟಿರುತ್ತದೆ. ಇಂತಹ ಉಪಾಯಾನುಷ್ಠಾನಕ್ಕೆ ಬೇಕಾದ ಮಹಾವಿಶ್ವಾಸ ಉಂಟಾಗುವದು ತುಂಬಾ ದುಸ್ತರವು ಎಂದು ತೋರಿಸುವದಕ್ಕಾಗಿ ಅಭಿಯುಕ್ತರಾದ ಶ್ರೀ ಎಂಬಾರರ ಸೂಕ್ತಿಯನ್ನು ಉದಾಹರಿಸಿರುತ್ತಾರೆ. ಅನಾದಿಕಾಲದಿಂದ ಬಹು ಜನ್ಮಸಂತತಿಗಳನ್ನನುಸರಿಸಿ ಬಂದ ಮಹಾಪಾಪಪರಂಪರೆಗಳಿಂದ ಕರ್ಮಾದಿ ಯೋಗಗಳಿಗೆ ತುಂಬಾ ಅನರ್ಹನು ತಾನು; ತಾನು ಅಪೇಕ್ಷಿಸುವ ಫಲವು ಬ್ರಹ್ಮರುದ್ರಾದಿಗಳಿಗೂ ಕೂಡ ಇನ್ನೂ ಲಭಿಸದೆ ಇರುವಂಥಾದ್ದು; ಉಪಾಯಸ್ವರೂಪವಾದರೋ ಕಾಯ ಕ್ಲೇಶ, ದ್ರವ್ಯವ್ಯಯ ಮುಂತಾದ್ದೇನೂ ಬೇಕಾಗದೆ ಸಕೃದನುಸಂಧಾನ ಅಥವಾ ಸಕೃದುಕ್ತಿರೂಪವಾದುದು; ಫಲಪ್ರಾಪ್ತಿಯು ತಾನು ಅಪೇಕ್ಷಿಸಿದ ಕಾಲದಲ್ಲೇ; ತನ್ನ ಈಗಿನ ಸ್ವರೂಪವನ್ನು ವಿಚಾರಿಸಿದರೆ ತಾನು ಅಂತಹ ಫಲವನ್ನಪೇಕ್ಷಿಸುವದು ನಾಯಿಯು ಪುರೋಡಾಶಕ್ಕೆ ಆಶಿಪಟ್ಟಹಾಗೆ; ಇಂತಹ ಅಮೋಘ ಫಲವು ತನಗೆ ಮಾತ್ರವೇ ಅಲ್ಲವು ತನ್ನ ಅನುಬಂಧಿಗಳಿಗೂ ಸಹ ಉಂಟು; ಹೀಗೆಲ್ಲಾ ಎಲ್ಲಾದರೂ ಉಂಟೇ ಎಂದು ಶಂಕೆಯಿಂದ ಪೀಡಿತರಾಗಿರುವವರು ಯಾರೆಂದರೆ ಸರ್ವೇಶ್ವರನ ಕಟಾಕ್ಷಕ್ಕೆ ಪಾತ್ರರಾಗದೇ ಇರುವವರು. ಭಗವತ್ಕಟಾಕ್ಷಕ್ಕೆ ಪಾತ್ರರಾದವರಿಗೆ ಇಂತಹ ಶಂಕಾಗಳುಂಟಾಗದೆ ಮಹಾ ವಿಶ್ವಾಸವು ದೊರೆಯುತ್ತದೆ ಎಂಬುವದು ಮುಖ್ಯ ತಾತ್ಪರ್ಯವು. ತಾವು ಅಂತಹ ಭಗವತ್ಕಟಾಕ್ಷಕ್ಕೆ ಪಾತ್ರರಾದುದರಿಂದಲೇ, ಗುರುಮುಖೇನ ತಮಗೂ ಮಹಾ ವಿಶ್ವಾಸವು ಉಂಟಾಗಿರುತ್ತದೆಂಬ ಭಾವವೂ ತೋರಿಬರುತ್ತದೆ.

ಇನ್ನಿಡತ್ತಿಲ್-ಈ ಸಂದರ್ಭದಲ್ಲಿ ಎಂದರೆ ಸರ್ವೇಶ್ವರನನ್ನು ಎಂದಿಗೂ ಬಿಟ್ಟು ಅಗಲಿರಲಾರೆನೆಂಬುವಹಾಗೆ ಮಹಾ ವಿಶ್ವಾಸವು ಹುಟ್ಟುವದು ದುರ್ಲಭವು

ಗಲುಗ್ಕೈಯಾಲೆ "ನರಾಧಮರ್" ಎನ್ರು ಪೇರ್ ಪೆತ್ತು ಪಿರಸ್ಸು ಕೆಟ್ಟಾ ನಿಲ್ ಕಾಟ್ಟಿಲ್, ಇಡೈಚ್ಚಿಗಳೈಪ್ಪೋಲೆ ವಿವೇಕ ಮಿಲ್ಲೈಯೇ ಯಾಗಿಲುಮ್, ಸೌಲಭ್ಯತ್ತೈಯುರಿನ್ದು "ಅನ್ನಲನುಡೈಯೊರುವನೈ ನಣಕುಮವನೇ" ಪರಮಾಸ್ತಿಕ ನೆನ್ರು ಅಪ್ಪುಳ್ಳಾರರುಳಿಚ್ಚೆಯ್ದ ಪಾಶುರಂ.

ಎಂದು ಹೇಳುವ ಸಂದರ್ಭದಲ್ಲಿ, ಸರ್ವೇಶ್ವರನ ಪರತ್ವ ಮಾತ್ರವನ್ನು, **ಅರಿನ್ದು** - ತಿಳಿದು, **ಅಗಲುಗ್ಕೈಯಾಲೆ** - ಆತನನ್ನು ಸೇರುವದು ಸಾಧ್ಯವಿಲ್ಲವೆಂದು ಆತನನ್ನು ಬಿಟ್ಟು ಅಗಲಿಹೋಗುವದರಿಂದ, **"ನರಾಧಮರ್" ಎನ್ರು** - ನರಾಧಮನೆಂದು, **ಪೇರ್ ಪೆತ್ತು** - ಗೀತೆಯಲ್ಲಿ ಹೇಳಿರುವ ಹಾಗೆ ಹೆಸರನ್ನು ಹೊಂದಿ, **ಪಿರಸ್ಸು ಕೆಟ್ಟಾನಿಲ್ ಕಾಟ್ಟಿಲ್** - ಬ್ರಹ್ಮಜ್ಞಾನವು ಹುಟ್ಟಿಯೂ ಕೂಡ ಕೆಟ್ಟುಹೋದವನಿಗಿಂತಲೂ, ಪರಬ್ರಹ್ಮನ ಪರತ್ವಜ್ಞಾನ ಹುಟ್ಟಿದ್ದರೂ ಕೂಡ ಫಲಕಾರಿಯಾಗದೆ ಹೋದುದರಿಂದ ನಾಶವನ್ನು ಹೊಂದಿದವನಿಗಿಂತಲೂ, **ಇಡೈಚ್ಚಿಗಳೈಪ್ಪೋಲೆ** - ಗೋಪಿಕಾಸ್ತ್ರೀಯರ ಹಾಗೆ, **ವಿವೇಕಮಿಲ್ಲೆಯ್ಯೆಯಾಗಿಲುಮ್** - ಶ್ರೀಕೃಷ್ಣನಲ್ಲಿ ಪರತ್ವಜ್ಞಾನ ರೂಪವಾದ ವಿವೇಕವು ಇಲ್ಲದೇ ಇದ್ದರೂ, **ಸೌಲಭ್ಯತ್ತೈಯುರಿನ್ದು** - ಸೌಲಭ್ಯವೆಂದರೆ, ಪರತ್ವಾದಿ ಮಹಿಮೆಯುಳ್ಳವನಾಗಿದ್ದರೂ ಸಾಧಾರಣ ಪುರುಷರಾದ ಸರ್ವರಿಗೂ ಸುಲಭನಾಗಿ ವಶ್ಯನಾಗಿ ದೃಗ್ಗೋಚರನಾಗಿರುವಿಕೆಯು, ಅಂತಹ ಗುಣಯುಕ್ತನೆಂದು ತಿಳಿದು, **"ಅನ್ನಲನುಡೈಯೊರುವನೈ** - ಅಂತಹ ನಿರತಿಶಯಾನಂದ ಕಲ್ಯಾಣ ಸಮೂಹವನ್ನು ಹೊಂದಿದ ಒಬ್ಬನನ್ನು ಎಂದರೆ ಮಹಾ ಪುರುಷನಾದ ಸರ್ವೇಶ್ವರನನ್ನೂ, **ನಣುಗಿನಮ್ ನಾಮೇ** - ನಿಕೃಷ್ಟರಾಗಿದ್ದರೂ ಆಶ್ರಯಿಸಿದ ಭಾಗ್ಯವಂತರು ನಾವೇ" ಎಂದು ಹೇಳಿರುವ ಹಾಗೆ ಸೌಲಭ್ಯವನ್ನರಿತು ಆಶ್ರಯಿಸಿದವನೇ ಪರಮ ಆಸ್ತಿಕನೇ ವಿನಾ, ಪರತ್ವಜ್ಞಾನವುಳ್ಳವನಾಗಿ ಸರ್ವೇಶ್ವರನನ್ನು ಆಶ್ರಯಿಸದೇ ಇರುವನಲ್ಲವು ಎಂದು, ಅಪ್ಪುಳ್ಳಾರವರು, **ಅರುಳ್ ಚೆಯ್ದಪಾಶುರಂ** - ಕೃಪೆ ಮಾಡಿ ಹೇಳಿದ ಉಕ್ತಿಯು. ತುಂಬಾ ಜ್ಞಾನಿಯಾಗಿದ್ದುಕೊಂಡು ಸರ್ವೇಶ್ವರನ ಪರತ್ವವನ್ನು ತಿಳಿದವನಾಗಿ, ಅಂತಹ ಮಹಿಮೆಯನ್ನು ಹೊಂದಿದ ಸರ್ವೇಶ್ವರನು ತನ್ನಂಥಾ ನಿಕೃಷ್ಟನಾಗಿ ಮಹಾಪರಾಧಿಯಾದವನಿಗೆ ಕೃಪೆಗೈವನೇ ಎಂಬ ಸಂಶಯಾವಿಷ್ಟನಾಗಿರುವವನು ನರಾಧಮನೆನಿಸುವನು. ಶ್ರೀಕೃಷ್ಣನು ಹಾಗೆಯೇ ಹೇಳಿರುವದರಿಂದ, ಅಲ್ಲಿನ ನರಾಧಮ ಶಬ್ದವನ್ನೇ ಇಲ್ಲಿ ಉಪಯೋಗಿಸಿರುತ್ತಾರೆ. ಪರತ್ವಜ್ಞಾನವನ್ನು ಹೊಂದುವದು ಪರಮ ದುರ್ಲಭವು. ಅಂತಹ ಜ್ಞಾನಿಯನ್ನು ಶ್ರುತಿಯೂ ಕೂಡ **"ಅಸ್ತಿ ಬ್ರಹ್ಮೇತಿ ಚೇದ್ವೇದ ಸನ್ತಮೇನಂ ತತೋವಿದುಃ"**

ಎಂದು ಕೊಂಡಾಡುತ್ತದೆ. ಹೀಗೆ ಸತ್ತ್ವೆಯನ್ನು ಹೊಂದಿದ್ದರೂ ಕೂಡ, ಸರ್ವೇ ಶ್ವರನನ್ನು ಆಶ್ರಯಿಸುವದು ಸಾಧ್ಯವಲ್ಲವೆಂದು, ಆಶ್ರಯಿಸದೇ ಬಿಟ್ಟವನು, ಮಹಾ ವಿಶ್ವಾಸವನ್ನು ಹೊಂದದೆ ಇರುವದರಿಂದ ನರಾಧಮನೆಂದು ಕರೆಯು ಲ್ಪಡುತ್ತಾನೆ :—

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥

(ಗೀ. ೭-೧೫)

ಏಕೆ ಸರ್ವರೂ ಸಾಧ್ಯೋಪಾಯವನ್ನನುಷ್ಠಿಸಿ ಆ ಕೃಪಾಸಾಗರನ ದಯೆಗೆ ಪಾತ್ರ ರಾಗದೆ ಹೋಗುತ್ತಾರೆಂದರೆ, ಹಾಗೆ ಆಶ್ರಯಿಸದಿರುವ ದುಷ್ಕರ್ಮಿಗಳು ನಾಲ್ಕು ವಿಧವೆಂದು ಹೇಳಿ, ಅದರಲ್ಲಿ ಮೂಢರು ವಿಪರೀತ ಜ್ಞಾನವುಳ್ಳವರಾಗಿ ಪ್ರಕೃತಿ ಭೋಗಾಸಕ್ತರಾಗಿರುವವರು, ಎರಡನೆಯ ದುಷ್ಕೃತಿಗಳು, ಸ್ವಾಮಿಯ ಸ್ವರೂ ಪವನ್ನು ಸಾಮಾನ್ಯವಾಗಿ ತಿಳಿದಿದ್ದರೂ, ಮಹಾವಿಶ್ವಾಸವು ಅವರ ದುಷ್ಕರ್ಮ ದಿಂದ ಹುಟ್ಟದೆ, ತನ್ನನ್ನು ಆಶ್ರಯಿಸದೇ ಇರುವವರಿಂದ, ನರಾಧಮರೆಂದು ಹೇಳಿಸಿಕೊಳ್ಳುವವರು. ಉತ್ತರಾರ್ಧದಿಂದ ಇನ್ನು ಎರಡು ವಿಧ ದುಷ್ಕೃತಿ ಗಳು ಯಾರೆಂಬುವವನ್ನು ಹೇಳುತ್ತಾರೆ. ಮೂರನೆಯವರು, **ಮಾಯಯಾಪ ಹೃತ ಜ್ಞಾನರು** ಎಂದರೆ, ಸರ್ವೇಶ್ವರನ ಸ್ವರೂಪ ಐಶ್ವರ್ಯಾದಿಗಳ ಜ್ಞಾನ ವನ್ನೂ ಕೂಡ ತಮ್ಮ ಕುಯುಕ್ತಿಗಳಿಂದ ಕಳೆದುಕೊಂಡಿರುವವರು ನಾಲ್ಕನೆಯವರು, **ಆಸುರಂ ಭಾವಮಾಶ್ರಿತಾಃ** - ಸರ್ವೇಶ್ವರನ ಸ್ವರೂಪ ವಿಭವೈಶ್ವರ್ಯಾದಿಗಳನ್ನು ತಿಳಿಯೋಣವೇ ಯಾರಿಗೆ ಆತನಲ್ಲಿ ದ್ವೇಷಕ್ಕೆ ಕಾರಣವಾಗುತ್ತದೋ ಅಂಥಾ ವರು. ಇವರನ್ನು ನರಾಧಮಾಧಮರೆಂದು ಹೇಳಬಹುದು ಎಂಬ ಭಾವವು.

ಆದುದರಿಂದ ಪ್ರಕೃತಿ ಭೋಗಾಸಕ್ತನಾಗಿ ಆಶ್ರಯಿಸದೇ ಇರುವವನಿ ಗಿಂತ ಸಾಧಾರಣ ಜ್ಞಾನ ಹೊಂದಿಯೂ ಆತನನ್ನು ಆಶ್ರಯಿಸಿದವನು ತುಂಬಾ ಪಾಪಿಷ್ಠನಾದುದರಿಂದ ನರಾಧಮನೆಂದು ಹೇಳಿಸಿಕೊಳ್ಳುವನೆಂಬ ಭಾವವು. ತುಂಬಾ ಜ್ಞಾನವಿಲ್ಲದೆ ಇದ್ದರೂ ಮಹಾ ವಿಶ್ವಾಸದಿಂದ ಆಶ್ರಯಿಸುವವನು ಆಸ್ತಿಕನೇ ವಿನಾ, ಸರ್ವೇಶ್ವರನ ಸ್ವರೂಪಾದಿಗಳ ಜ್ಞಾನವಿದ್ದೂ ಮಹಾ ವಿಶ್ವಾಸವಿಲ್ಲದೆ ಆಶ್ರಯಿಸದವನು ಆಸ್ತಿಕನಾಗುವದಿಲ್ಲವು. ಹೀಗೆಯೇ ಭಗವ ಚ್ಛಾಸ್ತ್ರದಲ್ಲೂ ಹೇಳಿರುತ್ತದೆ.

ಹರೇರ್ವಿಜ್ಞಾಯ ಸಾರಮ್ಯಮುಪಗಚ್ಛೇನ್ನರಾಧಮಃ ।
ಸೌಲಭ್ಯವೇದೀ ಭಜತೇಕಶ್ಚಿತ್ತಂ ಪರಮಾಸ್ತಿಕಃ ॥

ಇದರರ್ಥವೇನೆಂದರೆ :—ಶ್ರೀಹರಿಯ ಸರ್ವ ಶ್ರೇಷ್ಠತೆಯನ್ನು ಚನ್ನಾಗಿ ತಿಳಿದಿ

8.3.2002

ದ್ವಯೇ ಮಹಾವಿಶ್ವಾಸ ಕಾರ್ಪಣ್ಯಗೋಪ್ತೃತ್ವವರಣಾನು ಸನ್ಧಾನ ಸ್ಥಲಪ್ರದರ್ಶನಂ

ಇಪ್ಪಡಿ ಪುರುಷಕಾರಾದಿ ಜ್ಞಾನತ್ತಾಲೆ ಪಿರನ್ದ ವಿಶ್ವಾಸಮಹತ್ವ ಮುಮ್, ವಿಶ್ವಾಸಸ್ವರೂಪಮುಮ್, ಕಾರ್ಪಣ್ಯಮುಮ್ "ಪ್ರಪದ್ಯೇ" ಎಙ್ಗಿರ ಕ್ರಿಯಾಪದತ್ತಿಲುಪಸರ್ಗತ್ತಿಲುಮ್, ಶರಣಶಬ್ದೋಪಶ್ಲಿಷ್ಟ ಮಾನ ಧಾತುವಿಲುಮ್, ಉತ್ತಮನಿಲುಮನ ಸನ್ಧೇಯಙ್ಗಳ್.

ದ್ವರೂ ದುಷ್ಕೃತಿಯಾದ ನರಾಧಮನು ಆತನನ್ನು ಬಿಟ್ಟು ತೊಲಗುವನು. ಯಾವನೋ ಒಬ್ಬನು ಆತನ ಸೌಲಭ್ಯವನ್ನು ತಿಳಿದವನೀಗ ಆತನನ್ನು ಹೊಂದು ವನು. ಅವನೀಗ ಪರಮಾಸ್ತಿಕನು. ಹಾಗೆ ಸೌಲಭ್ಯವನ್ನರಿತು ಆಶ್ರಯಿಸಿದವ ರಿಗೆ ದೃಷ್ಟಾಂತವಾಗಿ ಗೋಪಿಕಾ ಸ್ತ್ರೀಯರನ್ನು ಹೇಳಿದರು. ಇವರಿಗೆ ಶ್ರೀಕೃಷ್ಣ ನಲ್ಲಿ ಪರತ್ವ ಜ್ಞಾನವಿಲ್ಲದಿದ್ದರೂ, ಮಹಾವಿಶ್ವಾಸದಿಂದ ಆತನ ಸೌಲಭ್ಯವನ್ನ ರಿತು ಆಶ್ರಯಿಸಿದರು. ಆದುದರಿಂದ ನಿರತಿಶಯ ಫಲವನ್ನು ಹೊಂದಿದರು. ಈ ಅಭಿಪ್ರಾಯವನ್ನು ತಮಗೆ ಉದಾರಭಾವದಿಂದ ಉಪದೇಶಿಸಿದವರು ತಮ್ಮ ಗುರುಗಳಾದ ಶ್ರೀ ವಾದಿಹಂಸಾಂಬುವಾಹರು ಎಂಬದಾಗಿ ತಮ್ಮ ಕೃತಜ್ಞತಾ ಭಾವವನ್ನು ಸೂಚಿಸಿರುತ್ತಾರೆ.

ದ್ವಯದಲ್ಲಿ ಮಹಾ ವಿಶ್ವಾಸ ಕಾರ್ಪಣ್ಯಗೋಪ್ತೃತ್ವ ವರಣ ತೋರುವ ಸ್ಥಳಗಳು

ಇಪ್ಪಡಿ - ಈ ರೀತಿಯಲ್ಲಿ, ಮೇಲೆ ಹೇಳಿದ ರೀತಿಯಲ್ಲಿ, **ಪುರುಷಕಾರಾದಿ ಜ್ಞಾನತ್ತಾಲೆ** - ಪುರುಷಕಾರವೇ ಮೊದಲಾದ ಜ್ಞಾನದಿಂದ, ಲಕ್ಷ್ಮಿಯು ಪುರುಷ ಕಾರ ಭಾವವನ್ನು ವಹಿಸಿರುವದರಿಂದ, **"ಅನುಗ್ರಹ ಮಯೀಂ ವಂದೇ ನಿತ್ಯಮಜ್ಞಾತ ನಿಗ್ರಹಾಂ"** (ಯತಿರಾಜಸಪ್ತತಿ) ಎಂದು ಹೇಳಿರುವಹಾಗೆ ಅನು ಗ್ರಹ ಮಯಳಾಗಿಯೂ, ನಿಗ್ರಹವನ್ನರಿಯದವಳಾಗಿಯೂ ಇದ್ದಾಳೆಂಬುವ ಜ್ಞಾನ ದಿಂದ, **ಪಿರನ್ದ ವಿಶ್ವಾಸಮಹತ್ವಮುಂ** - ಹುಟ್ಟಿದ ವಿಶ್ವಾಸದ ಮಹತ್ವವೂ, **ವಿಶ್ವಾಸಸ್ವರೂಪವೂ, ಕಾರ್ಪಣ್ಯವೂ, ಪ್ರಪದ್ಯೇ ಎಙ್ಗಿರ ಕ್ರಿಯಾಪದತ್ತಿ ಲುಮ್**-ಎಂಬುವ ಕ್ರಿಯಾಪದದಲ್ಲಿರುವ, **ಉಪಸರ್ಗತ್ತಿಲುಮ್** ಪ್ರ ಎಂಬುವ ಉಪಸರ್ಗದಲ್ಲೂ, **ಶರಣಶಬ್ದೋಪಶ್ಲಿಷ್ಟಮಾನ** - ಶರಣ ಶಬ್ದದಿಂದ ಸೇರಿದ,

ಧಾತುವಿಲುಮ್ - ಪ್ರಪದ್ಯೇ ಎಂಬುವ ಕ್ರಿಯಾಪದದಲ್ಲೂ, **ಉತ್ತಮ ನಿಲುಮ್** - ಪ್ರಪದ್ಯೇ ಎಂಬಲ್ಲಿರುವ ಉತ್ತಮಪುರುಷದಲ್ಲಿಯೂ, **ಅನುಸನ್ಧೇಯಂಗಳ್** - ತಿಳಿಯತಕ್ಕವುಗಳಾಗಿರುತ್ತವೆ. ಇದು ಕ್ರಮಾಲಂಕಾರವು :— ವಿಶ್ವಾಸಮಹತ್ವವು **ಪ್ರ** ಎಂಬ ಉಪಸರ್ಗದಲ್ಲೂ, ವಿಶ್ವಾಸ ಸ್ವರೂಪವು ಶರಣ ಶಬ್ದದಿಂದ ಕೂಡಿದ **ಪ್ರಪದ್ಯೇ** ಎಂಬುವದರ ಧಾತುವಿನಲ್ಲೂ, ಕಾರ್ಪಣ್ಯವು **ಪ್ರಪದ್ಯೇ** ಎಂಬುವದರಲ್ಲಿರುವ ಉತ್ತಮಪುರುಷದಲ್ಲೂ ಅನುಸನ್ಧೇಯಗಳೆಂದು ತಿಳಿಯತಕ್ಕದ್ದು. ಶರಣಾಗತಿಯನ್ನು ಮಾಡಿದರೆ ತನ್ನ ಕೋರಿಕೆಯು ಸಿದ್ಧಿಸುತ್ತದೆಂಬ ಪೂರ್ಣ ನಂಬಿಕೆ ಇದ್ದರಲ್ಲವೇ, ಪ್ರಪದ್ಯೇ ಎಂದು ಪ್ರಪದನಾನುಷ್ಠಾನದಲ್ಲಿ ಪ್ರವರ್ತಿಸುತ್ತಾನೆ. ಹಾಗೆ ಪೂರ್ಣ ನಂಬಿಕೆಯಿಂದ **ಪ್ರಕೃಷ್ಟೇನ** ಆಶ್ರಯಿಸುವಿಕೆ ಎಂಬುವವನ್ನು ತೋರಿಸುವ **ಪ್ರ** ಎಂಬ ಉಪಸರ್ಗವು ಈ ವಿಶ್ವಾಸ ಮಹತ್ವವನ್ನು ಬೋಧಿಸುತ್ತದೆ. ವಿಶ್ವಾಸಮಹತ್ವವೆಂದರೆ ಏನೊಂದೂ ಶಙ್ಕೆಗಳಿಗಾಸ್ಪದವಿಲ್ಲದಿರುವ ಪೂರ್ಣ ನಂಬಿಕೆಯು. **ಶರಣಂ ಪ್ರಪದ್ಯೇ** ಎಂಬುವದರಲ್ಲಿ ವಿಶ್ವಾಸಸ್ವರೂಪವು ತೋರಿಬರುತ್ತದೆಂದು ಉಪದೇಶಿಸಿರುತ್ತಾರೆ. **ಪ್ರಪದ್ಯೇ** ಎಂಬಲ್ಲಿರುವ ಧಾತುವು ಬದ್ಧ್ಯರ್ಥವುಳ್ಳದ್ದಾಗಿ ಜ್ಞಾನವನ್ನು ಬೋಧಿಸುವದರಿಂದ ಉಪಾಯರೂಪವಾದ ಮಹಾ ವಿಶ್ವಾಸವನ್ನು ಬೋಧಿಸಲಾರದೆಂಬಾಕ್ಷೇಪಣೆಯು ಬಂದೀತೆಂದು ಭಾವಿಸಿ, ಶರಣ ಶಬ್ದದಿಂದ ಸೇರಿದ **ಪ್ರಪದ್ಯೇ** ಎಂಬುವದರಲ್ಲಿ ವಿಶ್ವಾಸಸ್ವರೂಪವು ತೋರಿಬರುತ್ತದೆಂದುಪದೇಶಿಸಿರುತ್ತಾರೆ. ಆತನೇ ಗತಿ ಎಂದು ಯಾವಾಗ ತೋರಿತೋ ಆಗ ಮಹಾ ವಿಶ್ವಾಸವೂ ಉಂಟಾಯಿತೆಂಬುವದು ತೋರಿಬರುವದರಿಂದ, ಶರಣಶಬ್ದೋಪಶ್ಲಿಷ್ಟವಾದ ಧಾತುವಿನಲ್ಲಿ ಅದು ಅನುಸನ್ಧೇಯವೆಂದು ಹೇಳಿರುತ್ತಾರೆ. **ಪ್ರಪದ್ಯೇ** ಎಂಬ ಕ್ರಿಯಾಪದದಲ್ಲಿ ತೋರುವ ಉತ್ತಮಪುರುಷವಾದ **ಅಹಂ** ಎಂಬುವದರಿಂದ ಅನನ್ಯಶರಣತ್ವವೂ ಎಂದರೆ ಶ್ರಿಯಃಪತಿಯನ್ನು ಬಿಟ್ಟರೆ ತನಗಿನ್ನಾರೂ ಗತಿಯಿಲ್ಲವೆಂದೂ, ಮತ್ತು ಆ **ಅಹಂ** ಎಂಬುವನೆಂಥಾವನೆಂದರೆ, "**ಅಹಮಸ್ಮ್ಯಪರಾಧಾನಾ ಮಾಲಯೋಽಕಿಞ್ಚನೋಽಗತಿಃ**" (ಅಹಿ. ೩೭. ೧೦) ಸಮಸ್ತ ಅಪರಾಧಗಳಿಗೆ ತಾಣವಾದವನಾಗಿ, ಅಕಿಂಚನನಾಗಿ ಅಗತಿಕನಾಗಿರುವದರಿಂದ ತಾನು ತುಂಬಾ ಕಾರ್ಪಣ್ಯವನ್ನು ಎಂದರೆ ದೀನದೆಶೆಯನ್ನು ಹೊಂದಿರುವನೆಂಬುವದೂ ಸಹ ತೋರಿಬರುತ್ತದೆಂಬ ಭಾವವು. ಹೀಗೆ **ಅಹಂ** ಎಂಬ ಶಬ್ದಕ್ಕೆ ಅನನ್ಯಶರಣಸಂಬರ್ಧವಿವರಣೆಯನ್ನು ತಾವು ಮಾತ್ರವೇ ಮಾಡಿಬುವದಲ್ಲವೆಂದೂ, ಆಚಾರ್ಯಾಗ್ರೇಸರರಾದ ಶ್ರೀಯತಿವರ್ಯರೇ **ಅನನ್ಯ ಶರಣಃ ಶರಣಮಹಂ ಪ್ರಪದ್ಯೇ** ಎಂಬಲ್ಲಿ **ಅಹಂ** ಎಂಬ ಶಬ್ದಕ್ಕೆ **ಅನನ್ಯಶರಣಃ** ಎಂದು ವಿಶೇಷಿಸಿ ಉತ್ತಮ ಪುರುಷಾರ್ಥವನ್ನುಪದೇಶಿಸಿರುತ್ತಾರೆಂದೂ, ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಇದಿಲ್ ಉತ್ತಮನಿಲ್ ವಿವಕ್ಷಿತತ್ತೈ "ಅನನ್ಯ ಶರಣಃ" ಎನ್ರು ಗದ್ಯತ್ತಿಲೇ ವ್ಯಾಖ್ಯಾನಂ ಪಣ್ಣಿಯರುಳಿನಾರ್.

ಇವ್ವಿಡತ್ತಿಲ್ ಉಪಾಯಾ (ಯತ್ವಾ) ಧ್ಯವಸಾಯ ವಾಚಕ ಶಬ್ದ

ಇದಿಲ್ - ಈಗ ಮೇಲೆ ಹೇಳಿದ ಮೂರಭಿಪ್ರಾಯದಲ್ಲಿ, **ಉತ್ತಮನಿಲ್ ವಿವಕ್ಷಿತತ್ತೈ** - ಪ್ರಪದ್ಯೇ ಎಂಬ ಕ್ರಿಯಾಪದದ ಉತ್ತಮ ಪುರುಷದಲ್ಲಿ ತೋರಿಬರುವ ಅರ್ಥಕ್ಕೆ, **"ಅನನ್ಯಶರಣಃ"** - ಬೇರೆ ಯಾವುದು ಉಪಾಯ ಅಥವಾ ಗತಿಯಿಲ್ಲದವನಾಗಿ, **ಎನ್ರು** - ಎಂದು, **ಗದ್ಯತ್ತಿಲೆ** - ಶ್ರೀ ಭಾಷ್ಯಕಾರರು ರಚಿಸಿದ ಶರಣಾಗತಿ ಗದ್ಯದಲ್ಲಿ, **ವ್ಯಾಖ್ಯಾನಂ ಪಣ್ಣಿಯರುಳಿನಾರ್** - ವ್ಯಾಖ್ಯಾನಮಾಡಿ ಕೃಪೆಗೈದಿರುತ್ತಾರೆ, ಎಂದರೆ ವ್ಯಕ್ತಪಡಿಸಿರುತ್ತಾರೆಂಬ ಭಾವವು, ಮುಂದೆ ಗೋಪ್ತೃತ್ವವರಣವನ್ನು ಎಲ್ಲಿ ಅನುಸನ್ಧಾನಮಾಡಬಹುದೆಂಬುವದನ್ನು ತಿಳಿಸುತ್ತಾರೆ :—

ಇವ್ವಿಡತ್ತಿಲ್ - ಈ ಸಂದರ್ಭದಲ್ಲಿ ಎಂದರೆ ಉಪಾಯಾನುಷ್ಠಾನರೂಪವಾದ ದ್ವಯಮಂತ್ರದಲ್ಲಿ ಪರಿಕರಗಳ ಅನುಸಂಧಾನದಲ್ಲಿ, **ಉಪಾಯಾಧ್ಯವಸಾಯವಾಚಕಶಬ್ದತ್ತಿಲೇ** - ಅಧ್ಯವಸಾಯವೆಂದರೆ ಮಹಾವಿಶ್ವಾಸವೆಂದರ್ಥವು, ಉಪಾಯದಲ್ಲಿ ಮಹಾವಿಶ್ವಾಸವನ್ನು ಬೋಧಿಸುವ ಶಬ್ದವಾದ **"ಶರಣಂಪ್ರಪದ್ಯೇ"** ಎಂಬುವದರಲ್ಲೇ **ಗೋಪ್ತೃತ್ವವರಣಮನುಸ್ಮರ್ತಂ** - ಗೋಪ್ತೃತ್ವವರಣವು ಅಡಗಿರುತ್ತದೆ ಎಂದರೆ ಅದರಿಂದಲೇ ತೋರಿಬರುತ್ತದೆಂಬ ಭಾವವು ಹೇಗೆಂದರೆ, ನಿನ್ನನ್ನು ಉಪಾಯವಾಗಿ ಮಹಾ ವಿಶ್ವಾಸದಿಂದ ಹೊಂದಿರುತ್ತೇನೆ ಎಂಬುವದರಿಂದಲೇ, ನೀನು ನನಗೆ ರಕ್ಷಕನಾಗಿರಬೇಕೆಂಬ ಗೋಪ್ತೃತ್ವವು ಶಾಬ್ದವಾಗಿಲ್ಲದಿದ್ದರೂ ಆರ್ಥವಾಗಿ ತೋರಿಬರುತ್ತದೆಂಬ ಭಾವವು ಯಾವಾಗ **ಶರಣಂ ಪ್ರಪದ್ಯೇ**, ಎಂಬುವದರಿಂದ ಮಹಾವಿಶ್ವಾಸವು ತೋರಿತೋ, ಅದರೊಂದಿಗೇನೇ ಅದರ ಕಾರ್ಯರೂಪವಾದ ಗೋಪ್ತೃತ್ವವರಣವೂ ಶಬ್ದದಿಂದಲೇ ಅರ್ಥಾತ್ ದ್ಯೋತಿತವು. ಈ ಅಭಿಪ್ರಾಯವು ವಿಭೀಷಣ ಶರಣಾಗತಿ ಸಂದರ್ಭದಲ್ಲಿ ಸುವ್ಯಕ್ತವು. (೧) **"ಸ ತು ರಾಮಸ್ಯ ಧರ್ಮಾತ್ಮಾ ನಿಪಪಾತ ವಿಭೀಷಣಃ । ಪಾದಯೋಃ"** ಎಂದು ಹೇಳಿ **"ಶರಣಂ ಪ್ರಪದ್ಯೇ"** ಎಂಬುವದರ ಅರ್ಥವನ್ನು ವ್ಯಕ್ತಪಡಿಸಿ, ಅವರಿಂದ ಗೋಪ್ತೃತ್ವವರಣವೂ ವ್ಯಕ್ತವೆಂದು ತೋರಿಸುವದಕ್ಕಾಗಿ ಮುಂದೆ (೧) **ಶರಣಾನ್ವೇಷೀ**

(೧) ರಾಮಾ ಯುದ್ಧ ೧೯-೨.

ತ್ರಿಲೇ ಗೋಪ್ತೃತ್ವವರಣ ಮನ್ತರ್ನೀತಮ್. (೧) “ಅಹಮಸ್ಮ್ಯಪರಾಧಾನಾಮಾಲಯೋ ಕಿಂಚನೋ ಗತಿಃ । ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ ಪ್ರಯುಜ್ಯತಾಂ ।” ಎನ್ನುಮ್ (೨) “ಉಪಾಯೋ ಗೃಹರಕ್ಷಿತ್ರೋ

ಎಂದು ಪ್ರಯೋಗಿಸಿರುವವಲ್ಲದೆ, (೩) **ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ**” ಎಂದು ಆ ಗೋಪ್ತೃತ್ವವರಣವನ್ನು ಮುಂದೆ ವಿಶದೀಕರಿಸಿರುತ್ತಾರೆ. ಆದರೆ ಶರಣ ಶಬ್ದಕ್ಕೇನೇ ರಕ್ಷಕನೆಂಬ ಅರ್ಥವಿರುವದರಿಂದ **ಶರಣಂ ಪ್ರಪದ್ಯೇ**, ನಿನ್ನನ್ನು ರಕ್ಷಕನನ್ನಾಗಿ ಹೊಂದುತ್ತೇನೆಂದು ಅರ್ಥ ಹೇಳಿಬಿಟ್ಟರೆ, ಶಾಬ್ದವಾಗಿಯೇ ಗೋಪ್ತೃತ್ವವರಣವು ತೋರಿಬರಬಹುದಲ್ಲಾ ಎಂದರೆ, ಶರಣ ಶಬ್ದಕ್ಕೆ ಈ ದ್ವಯಮಂತ್ರದಲ್ಲಿ ರಕ್ಷಕನೆಂಬ ಅಭಿಪ್ರಾಯಕ್ಕಿಂತಲೂ ಉಪಾಯರೂಪನೆಂದು ಅರ್ಥಹೇಳುವದೇ ಸರಸವೆಂದು ಹೇಳಿ, ಹಾಗೆ ಉಪಾಯವೆಂದು ಅರ್ಥಹೇಳಿದರೂ ಗೋಪ್ತೃತ್ವವರಣಾಭಿಪ್ರಾಯವು ಆರ್ಥವಾಗಿ ಸಿದ್ಧವೆಂದು ಮುಂದೆ ಉಪಪಾದಿಸುತ್ತಾರೆ. ಆದುದರಿಂದ **ಶರಣಂ ಪ್ರಪದ್ಯೇ** ಎಂಬುವದು ಉಪಾಯಾಧ್ಯವಸಾಯವಾಚಕ ಶಬ್ದವೆಂದು ನಿರ್ಧರಿಸಿ ಅದರಲ್ಲಿ ಗೋಪ್ತೃತ್ವವರಣವು ಅಂತರ್ನೀತವೆಂದೇ ಸ್ಥಾಪಿಸುತ್ತಾರೆ. ಮೊದಲು **ಶರಣ** ಶಬ್ದಕ್ಕೆ ಉಪಾಯಾರ್ಥವನ್ನೇ ಹೇಳತಕ್ಕದ್ದೆಂಬುವದಕ್ಕೆ ಪ್ರಮಾಣವನ್ನು ಸೂಚಿಸುತ್ತಾರೆ. **ಅಹಂ** - ನಾನು, **ಅಪರಾಧಾನಾಂ** - ಅಪರಾಧಗಳಿಗೆ, **ಆಲಯಃ** - ನಿವಾಸಸ್ಥಾನವು, **ಅಕಿಂಚನಃ** - ತುಂಬಾ ದೈನ್ಯದೆಶೆಯಲ್ಲಿರುವವನು, **ಅಗತಿಃ** - ಬೇರೊಂದು ಗತಿಯಿಲ್ಲದವನು, **ಅಸ್ಮಿ** - ಆಗಿದ್ದೇನೆ. **ತ್ವಮೇವ** - ಸರ್ವೇಶ್ವರನಾದ ನೀನೇ, **ಮೇ** - ನನಗೆ, **ಉಪಾಯಭೂತೋ ಭವ** - ಉಪಾಯಭೂತನಾಗು, **ಇತಿ** - ಎಂಬದಾಗಿ, **ಪ್ರಾರ್ಥನಾಮತಿಃ** - ಪ್ರಾರ್ಥಿಸುವ ಅನುಸಂಧಾನವು, **ಶರಣಾಗತಿರಿತ್ಯುಕ್ತಾ** - ಶರಣಾಗತಿ ಎಂಬದಾಗಿ ಹೇಳಲ್ಪಟ್ಟಿತು, **ಸಾ** - ಅಂತಹ ಶರಣಾಗತಿಯು, **ಅಸ್ಮಿನ್ ದೇವೇ** - ಈ ಸರ್ವೇಶ್ವರನಲ್ಲಿ, **ಪ್ರಯುಜ್ಯತಾಂ** - ಪ್ರಯೋಗಿಸಲ್ಪಡಲಿ, ಎಂದರೆ ನಾನು ಮಹಾಪರಾಧಿಯು, ಇದರಿಂದ ತುಂಬಾ ದೈನ್ಯಭಾವದಿಂದಿದ್ದೇನೆ, ನನಗೋ ಇನ್ನಾವ ಗತಿಯೂ ಇಲ್ಲವು, ಆದುದರಿಂದ ಈ ಪಾಪಗಳನ್ನೆಲ್ಲಾ ನೀಗಿಕೊಂಡು ನಿನ್ನನ್ನು ರಕ್ಷಕನನ್ನಾಗಿ ಹೊಂದಬೇಕಾದರೆ ಭಕ್ತಿಯೋಗವಲ್ಲಿಳಿದು ನಿನ್ನನ್ನು

---

(೧) ಅಹಿ. ೩೭-೩೦ (೨) ಅಹಿ. ೩೭-೨೮ (೩) ರಾಮಾ. ಯುದ್ಧ. ೧೯-೬

ಶ್ಬಶ್ಶರಣಮಿತ್ಯಯಂ । ವರ್ತತೇ ಸಾಂಪ್ರತಂ ತ್ವೇಷ ಉಪಾಯಾರ್ಥೈಕ ವಾಚಕಃ ।" ಎನ್ರುಮ್ ಶೊಲ್ಲುಗಿರ ಪಡಿಯೇ ಉಪಾಯಾನ್ತರಾಶಕ್ತನುಕ್ಕು ಸರ್ವೇಶ್ವರನ್ ಸರ್ವ ಶಾಸ್ತ್ರಾರ್ಥ ಸಾಧಾರಣಮಾನ ರಕ್ಷಕತ್ವಮಾತ್ರತ್ತಿಲೆ ನಿರ್ಕೈಯನ್ರಿಕ್ಕೇ ಸ್ವೀಕೃತ ಭರನಾಯ್ ಕೊಣ್ಡು ಉಪಾಯಾನ್ತರ ಸ್ಥಾನತ್ತಿಲೆ ನಿವೇಶಿಕ್ಕೈಯಾಲುಮ್, ನ್ಯಸ್ತಭರನಾನ ಇವ್ವಧಿ

ಪಾಸನೆಮಾಡಬೇಕು. ಇದೇ ಉಪಾಯವು. ಅಂತಹ ಕಷ್ಟತರವಾದ ಉಪಾಸನೆಯಲ್ಲಿ ಪ್ರವರ್ತಿಸಲು ನಾನು ಅಶಕ್ತನು, ಆದುದರಿಂದ ಆ ಉಪಾಯಕ್ಕೆ ಬದಲಾಗಿ ನೀನೇ ಉಪಾಯಭೂತನಾಗಿ ರಕ್ಷಿಸತಕ್ಕದ್ದು. ಇದೀಗ ಶರಣಾಗತಿಯ ಅಭಿಪ್ರಾಯವು. ಆದುದರಿಂದ ಈ ಸರ್ವೇಶ್ವರನಲ್ಲಿ ಶರಣಾಗತಿಯು ಪ್ರಯೋಗಿಸಲ್ಪಡಲಿ" **ಎನ್ರುಂ** - ಎಂದು ಹೇಳಿರುವದರಿಂದಲೂ ಮತ್ತು, "**ಅಯಂ** - ಈ, **ಶರಣಮಿತಿಶಬ್ದಃ** - ಶರಣವೆಂಬ ಶಬ್ದವು, **ಉಪಾಯೇ** - ಉಪಾಯವೆಂಬರ್ಥದಲ್ಲೂ, **ಗೃಹರಕ್ಷಿತ್ರೋಃ** - ಮನೆ ಮತ್ತು ರಕ್ಷಕನ ಎಂಬರ್ಥಗಳಲ್ಲೂ, **ವರ್ತತೇ** - ಪ್ರಯೋಗಿಸಲ್ಪಡುತ್ತದೆ. ಹೀಗೆ ಶರಣ ಶಬ್ದಕ್ಕೆ (೧) ಉಪಾಯವೆಂದೂ (೨) ಮನೆಯೆಂದೂ (೩) ರಕ್ಷಕನೆಂದೂ ಮೂರರ್ಥವು ಈ ಶರಣಾಗತ್ಯನುಷ್ಠಾನವನ್ನು ಬೋಧಿಸುವ ಮಂತ್ರದ **ಶರಣಂಪ್ರಪದ್ಯೇ** ಎಂಬಲ್ಲಿ ಯಾವರ್ಥವೆಂದರೆ, ಹೇಳುತ್ತಾರೆ. **ಸಾಂಪ್ರತಂ ತು** - ಈ ಶರಣಾಗತಿ ಸಂದರ್ಭದಲ್ಲಾದರೋ, **ಏಷಃ** - ಈ ಶರಣಶಬ್ದವು, **ಉಪಾಯಾರ್ಥೈಕವಾಚಕಃ** - ಉಪಾಯವೆಂಬರ್ಥಮಾತ್ರವನ್ನೇ ಬೋಧಿಸುತ್ತದೆ, ಪರಂತು ರಕ್ಷಕನೆಂಬರ್ಥದಲ್ಲಿಲ್ಲವೆಂಬ ಭಾವವು". **ಎನ್ರುಮ್** - ಎಂದು, **ಶೊಲ್ಲುಗಿರಪಡಿಯೇ** - ಹೇಳಿರುವಹಾಗೆ, **ಉಪಾಯಾನ್ತರಾಶಕ್ತನುಕ್ಕು** - ಶರಣಾಗತಿಯಲ್ಲದೆ ಬೇರೆ ಉಪಾಯವಾದ ಉಪಾಸನವಾದ ಭಕ್ತಿಮಾರ್ಗದಲ್ಲಿ ಪ್ರವರ್ತಿಸಲು ಅಶಕ್ತನಾದವನಿಗೆ ಸರ್ವೇಶ್ವರನು **ಸರ್ವಶಾಸ್ತ್ರಾರ್ಥ ಸಾಧಾರಣಮಾನ** - ಸಮಸ್ತ ಶಾಸ್ತ್ರಾಭಿಪ್ರಾಯದಲ್ಲೂ ಸಾಧಾರಣವಾಗಿ ಹೇಳಿರುವ, **ರಕ್ಷಕತ್ವಮಾತ್ರತ್ತಿಲೆ** - ರಕ್ಷಕನಾಗಿರುವ ಮಾತ್ರದಲ್ಲಿ, **ನಿರ್ಕೈಯನ್ರಿಕ್ಕೆ** - ಇರುವ ಭಾವವಲ್ಲದೆ, **ಸ್ವೀಕೃತಭರನಾಯ್‌ಕೊಣ್ಡು** - ನಮ್ಮ ರಕ್ಷಣೆಯ ಭರವನ್ನು ವಹಿಸಿದವನಾಗಿ, **ಉಪಾಯಾನ್ತರಸ್ಥಾನತ್ತಿಲ್** - ಈತನು ಅನನ್ಯೋಪಾಯನಾಗಿ ಸರ್ವೇಶ್ವರನಲ್ಲಿ ಭರನ್ಯಾಸ ಮಾಡಿರುವದರಿಂದ ಬೇರೆ ಉಪಾಯವಾದ ಉಪಾಸನ ಮಾರ್ಗವು ಸರಿಹೋದದ್ದಲ್ಲವಾದುದರಿಂದ, ಆ ಉಪಾಸನಸ್ಥಾನದಲ್ಲಿ, **ನಿವೇಶಿಕ್ಕೈಯಾಲೇ** - ತಾನೇ ಇರುವದರಿಂದ, **ನ್ಯಸ್ತಭರನಾನ** - ಭರನ್ಯಾಸವನ್ನು ಮಾಡಿ ತನ್ನ ರಕ್ಷಣಾ

ಕಾರಿಕ್ಕು ಪಿನ್ಬನನ್ಯೋಪಾಯತ್ವಮ್ ನಿಲೈನಿರ್ಕೈಕ್ಕಾಕವುಮ್ ಉಪಾಯತ್ವಾಧ್ಯವಸಾಯಮ್ ಇವ್ವಿಡತ್ತಿಲೇ ವಿವಕ್ಷಿತಮಾಯ್ ...

ಉಪಾಯಮೆನ್ರಾಲೊರು ವಿರಗೆನ್ನ ಮಾತ್ರಮಾಗೈಯಾಲೆ, ಇವ್ವುಪಾಯತ್ವಂ ಚೇತನಾಚೇತನ ಸಾಧಾರಣ ಮಾಯಿರುಕ್ಕೈಯಾಲುಮ್

ಭರವನ್ನು ಸರ್ವೇಶ್ವರನಲ್ಲಿಟ್ಟಿರುವ, ಇವ್ವಧಿಕಾರಿಕ್ಕು - ಈ ಸ್ವತಂತ್ರ ಪ್ರಪತ್ತಿನಿಷ್ಠನಿಗೆ, ಪಿನ್ಬು - ಅನಂತರ, **ಅನನ್ಯೋಪಾಯತ್ವಂ** - ಸರ್ವೇಶ್ವರನೇ ಉಪಾಯವಲ್ಲದೆ ಬೇರೆ ಇನ್ಯಾವ ಉಪಾಯವೂ ಇಲ್ಲದಿರುವ ಭಾವವೂ, **ನಿಲೈನಿರ್ಕೈಕ್ಕಾಕವುಮ್** ಸ್ಥಿರವಾಗಿ ನಿಲ್ಲುವದಕ್ಕಾಗಿಯೂ, **ಉಪಾಯತ್ವಾಧ್ಯವಸಾಯಮ್** - ಶ್ರಿಯಃಪತಿಯೇ ಉಪಾಯವೆಂಬ ಮಹಾವಿಶ್ವಾಸವು, **ಇವ್ವಿಡತ್ತಿಲ್** - ಈ ದ್ವಯಮಂತ್ರದ ಶರಣಶಬ್ದಾರ್ಥದಲ್ಲಿ, **ವಿವಕ್ಷಿತಮಾಯ್‌ತ್ತು** - ವ್ಯಕ್ತಪಟ್ಟಿತು. ಇಲ್ಲಿ ದ್ವಯಮಂತ್ರ ಶರಣ ಶಬ್ದಕ್ಕೆ ಉಪಾಯವೆಂದೇ ಅರ್ಥ ಮಾಡಬೇಕೆಂದು ಸಪ್ರಮಾಣವಾಗಿ ಎರಡು ಕಾರಣಗಳ ಮೂಲಕ ಸ್ಥಾಪಿಸುತ್ತಾರೆ. ಶರಣಶಬ್ದಕ್ಕಿರುವ ಮೂರರ್ಥದಲ್ಲಿ ಉಪಾಯವೆಂದೇ ಈ ಸಂದರ್ಭದಲ್ಲಿ ಅರ್ಥ ಮಾಡುವದುಚಿತವು: ಏಕೆಂದರೆ—(೧) ಭಕ್ತಿ ಮಾರ್ಗದಲ್ಲಿ ಪ್ರವರ್ತಿಸಲು ಈತನು ಅಶಕ್ತನಾದ ದರಿಂದ ಆ ಉಪಾಸನಸ್ಥಾನದಲ್ಲಿ ತಾನೇ ಉಪಾಯವಾಗಿ ನಿಲ್ಲುವದರಿಂದ ಇಲ್ಲಿ ಉಪಾಯತ್ವಾಧ್ಯವಸಾಯವೇ ಶರಣ ಶಬ್ದಕ್ಕೆ ಅರ್ಥವು. (೨) ಭರನ್ಯಾಸಾನಂತರವೂ ಕೂಡ ಈ ಅನನ್ಯೋಪಾಯತ್ವವು ಸ್ಥಿರವಾಗಿ ನೆಲಸುವದಕ್ಕಾಗಿಯೂ ಆ ಅರ್ಥವನ್ನೇ ಹೇಳತಕ್ಕದ್ದೆಂಬ ಭಾವವು.

ಹೀಗೆ **ಶರಣ** ಶಬ್ದಕ್ಕೆ ಉಪಾಯತಾಧ್ಯವಸಾಯವೆಂಬರ್ಥವಾದರೆ, **ಗೋಪ್ತೃ**ತ್ವವರಣಾಭಿಪ್ರಾಯವು ಹೇಗೆ ಕೊಡುತ್ತದೆ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.

ಉಪಾಯಮೆನ್ರಾಲ್ - **ಶರಣ** ಶಬ್ದಕ್ಕೆ ಉಪಾಯವೆಂಬರ್ಥವು ಹೇಳಲ್ಪಟ್ಟಿರುವದರಿಂದ ಆ ಉಪಾಯಶಬ್ದಕ್ಕೆ ಅರ್ಥವೇನೆಂಬುವದನ್ನು ತಿಳಿಸುತ್ತಾರೆ, ಉಪಾಯವೆಂದರೆ, ಒರುವಿರಗು**ಮಾತ್ರಮಾಗೈಯಾಲೇ** - ಒಂದುಮಾರ್ಗ ಅಥವಾ ತನಗೆ ಅಭಿಮತವಾದ ಫಲಕ್ಕೆ ಒಂದು ಸಾಧನವೆಂಬ ಇಷ್ಟುಮಾತ್ರ ಅರ್ಥವಾಗುವದರಿಂದ, **ಇವ್ವುಪಾಯತ್ವಂ** - ಈ ಉಪಾಯವಾಗಿರುವ ಭಾವವು, **ಚೇತನಾಚೇತನ ಸಾಧಾರಣಮಾಯಿರುಕ್ಕೈಯಿಲುಮ್** - ಪರಮ ಚೇತನನಾದ ಈಶ್ವರನಾದರೂ ಆಗಬಹುದು ಅಥವಾ ಅಚೇತನವಾದ ಬ್ರಹ್ಮದೃಷ್ಟಿಯಿಂದ ಉಪಾಸ್ಯಗಳಾದ ಪ್ರತೀಕಗಳಾದ ಮನಸ್ಸೇ ಮೊದಲಾದವುಗಳೇ ಆಗಬಹುದು.

"ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವ ವರಣಂ ತಥಾ" ಎನ್ರುಮ್. "ಸರ್ವಜ್ಞೋಽಪಿ ಹಿ ವಿಶ್ವೇಶಸ್ಸದಾ ಕಾರುಣಿಕೋಽಪಿಸನ್ । ಸಂಸಾರ ತನ್ತ್ರವಾಹಿತ್ವಾದ್ರಕ್ಷಾಪೇಕ್ಷಾಂ ಪ್ರತೀಕ್ಷತೇ" ಎನ್ರುಮ್ ಶೊಲ್ಲುಗಿರ ಪಡಿಯೇ ಚೇತನೈಕಾನ್ತಮಾನ ಗೋಪ್ತೃತ್ವ ವರಣಂ ಅನುಸನ್ಧೇಯ ಮಾಗೈಯಾಲುಮ್, ಗೋಪ್ತೃತ್ವವರಣ ಮಿಙ್ಗೇವಿವಕ್ಷಿತಮ್.

ಹೀಗೆ ಚೇತನಾಚೇತನಗಳಿಗೂ ಸಾಧಾರಣವಾಗಿರುವದರಿಂದ, "**ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ**" ಎಂದೂ, "**ಸರ್ವಜ್ಞೋಽಪಿಹಿ**" ಎಂಬ ಶ್ಲೋಕವಲ್ಲೂ ಸಹ **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ **ಚೇತನೈಕಾನ್ತಮಾನ** - ಚೇತನನಿಗೆ ಮಾತ್ರವೇ ಅನ್ವಯಿಸುವ, **ಗೋಪ್ತೃತ್ವವರಣಮ್** - ರಕ್ಷಕನಾಗು ಎಂಬ ಪ್ರಾರ್ಥನೆಯು, **ಇಙ್ಗೇ** - ಈ ಸಂದರ್ಭದಲ್ಲಿ ದ್ವಯ ಮಂತ್ರದ ಶರಣ ಶಬ್ದಾರ್ಥಾನು ಸಂಧಾನದಲ್ಲಿ, **ವಿವಕ್ಷಿತಂ** - ಹೇಳಲ್ಪಟ್ಟಿತು. ಈ ಶ್ಲೋಕಗಳ ಅರ್ಥವೇನೆಂದರೆ: —

(೧) "**ರಕ್ಷಿಷ್ಯತೀತಿವಿಶ್ವಾಸೋ ಗೋಪ್ತೃತ್ವವರಣಂ ತಥಾ**" - ಸರ್ವೇಶ್ವರನು ರಕ್ಷಿಸಿಬಿಡುವನೆಂಬ ವಿಶ್ವಾಸವೂ, ಹಾಗೆಯೇ ರಕ್ಷಿಸಬೇಕೆಂಬ ಪ್ರಾರ್ಥನೆಯೂ" ಯಾವಾಗ ರಕ್ಷಿಸುವನೆಂಬ ಪೂರ್ಣವಿಶ್ವಾಸ ಉಂಟಾಯಿತೋ ಒಡನೇ ರಕ್ಷಿಸು ಎಂಬ ಪ್ರಾರ್ಥನೆಯೂ ಉಂಟಾಗುತ್ತದೆಂಬ ಭಾವವು (ಇದು ಅಹಿ ೩೭-೨೮)

(೨) **ವಿಶ್ವೇಶಃ** - ಸರ್ವಲೋಕೇಶ್ವರನು, **ಸರ್ವಜ್ಞೋಽಪಿ ಹಿ** - ಸರ್ವಜ್ಞನಾಗಿದ್ದರೂ ಕೂಡ, ನಮ್ಮ ಹೃದಯವನ್ನರಿಯಲು ಬೇಕಾದ ಸರ್ವಜ್ಞತೆಯನ್ನು ಹೊಂದಿದ್ದರೂ ಕೂಡ, **ಸದಾಕಾರುಣಿಕೋಽಪಿಸನ್** - ಯಾವಾಗಲೂ ಕರುಣೆಯನ್ನು ಹೊಂದಿದವನಾದರೂ, ಆದುದರಿಂದ ನಮ್ಮ ಕೋರಿಕೆಗಳನ್ನು ಸಲ್ಲಿಸಲು ಬೇಕಾದ ದಯೆಯನ್ನು ಹೊಂದಿದ್ದರೂ ಕೂಡ, **ರಕ್ಷಾಪೇಕ್ಷಾಂ** - ರಕ್ಷಿಸು ಎಂಬ ಪ್ರಾರ್ಥನೆಯನ್ನು, ಗೋಪ್ತೃತ್ವವರಣವನ್ನು, **ಪ್ರತೀಕ್ಷತೇ** - ಎದುರು ನೋಡುತ್ತಾನೆ. ತಾನೇ ಸರ್ವಜ್ಞನು ಮತ್ತು ಪೂರ್ಣದಯೆಯೂ ಆತನಲ್ಲುಂಟು. ಆದರೂ ಆತನು ರಕ್ಷಾಪೇಕ್ಷೆಯನ್ನೆದರು ನೋಡುತ್ತಾನೆ. ಏಕೆಂದರೆ, ಕಾರಣವನ್ನು ಹೇಳುತ್ತಾರೆ. **ಸಂಸಾರತಂತ್ರವಾಹಿತ್ವಾತ್** - ಈ ಲೀಲಾವಿಭೂತಿಯಲ್ಲಿರುವ ಸಂಸಾರ ತಂತ್ರವನ್ನು ವಹಿಸಿರುವದರಿಂದ, ಅವರವರ ಕರ್ಮಾಧೀನತೆಯಿಂದುಂಟಾಗುವ ಕೋರಿಕೆಗಳಿಗನುಸಾರವಾಗಿ ಫಲವನ್ನು ಕೊಡಬೇಕಷ್ಟೆ ಅದಕ್ಕಾಗಿ **ರಕ್ಷಾಪೇಕ್ಷಾಂಪ್ರತೀಕ್ಷತೆ**, ಒಬ್ಬನು ಮುಕ್ತಿಳಿಲ್ಲವಲ್ಲಾ, ಮುಕ್ತಿಯನ್ನು ಕೊಡು ಎಂದು ಶರಣಾಗತನಾದರೆ, ಆತನಿಗೆ ಮೋಕ್ಷ ಕೊಡುವದು ನ್ಯಾಯುವಲ್ಲವಷ್ಟೇ ; ಅದಕ್ಕಾಗಿ

ಗೋಪ್ತೃತ್ವವರಣವು ಆವಶ್ಯಕವು. ಮೋಕ್ಷವನ್ನು ಬೇಡಿದ ಹೊರತು ಶ್ರಿಯಃ ಪತಿಯು ಮೋಕ್ಷವನ್ನೀಯನು ಎಂಬ ಭಾವವು. ಅದಿತಿಯು ಶ್ರೀಕೃಷ್ಣನನ್ನು ಕುರಿತು ಹೇಳುತ್ತಾಳೆ:—

ಕೌಪೀನಾಚ್ಛಾದನಪ್ರಾಯ ವಾಂಛಾ ಕಲ್ಪದ್ರುಮಾದಪಿ ।
ಜಾಯತೇ ಯದಪುಣ್ಯಾನಾಂ ಸೋಽಪರಾಧಸ್ಸ್ವದೋಷಜಃ॥

ಎಂದರೆ "ಕಲ್ಪವೃಕ್ಷವು ಸಕಲೈಶ್ವರ್ಯವನ್ನೂ ಕೊಡಲು ಸಿದ್ಧವಾಗಿ ಎದುರಿಗೆ ನಿಂತಿದ್ದರೂ ಕೌಪೀನಕ್ಕೆ ಬಟ್ಟೆಬೇಕೆಂಬ ಕೋರಿಕೆಯು ನಿರ್ಭಾಗ್ಯರಿಗೆ ಉಂಟಾಗಬಹುದು. ಇದಕ್ಕೆ ಕಾರಣವು ತನ್ನ ದುಷ್ಕರ್ಮವೇ" ಎಂದು ಹೇಳಿದಳು. ಏಕೆಂದರೆ ತಾನು ತಪಸ್ಸು ಮಾಡಿ ಮೋಕ್ಷದಾಯಕನಾದ ನೀನು ಪ್ರತ್ಯಕ್ಷವಾದಾಗ ನನಗೆ ಮಗನಾಗಬೇಕೆಂದು ಇಷ್ಟುಮಾತ್ರ ಪ್ರಾರ್ಥಿಸಿದೆನೇ ವಿನಾ ಮೋಕ್ಷ ಬೇಕೆಂದಪೇಕ್ಷಿಸಲಿಲ್ಲವು ಎಂದು ಅದಿತಿಯು ಹೇಳಿದಳು. ಹಾಗೆಯೇ ಎಲ್ಲರೂ ಅವರವರ ಕರ್ಮಾನುಸಾರ ಬೇಡುವರೇ ವಿನಾ, ಎಲ್ಲರೂ ಮೋಕ್ಷವನ್ನು ಪ್ರಾರ್ಥಿಸುವದಿಲ್ಲವು. ಸಂಸಾರ ತಂತ್ರವಾಹಿಯಾಗಿ ಅವರು ಕೇಳಿದುದನ್ನು ಕೊಡಬೇಕಾದ ಪ್ರಯುಕ್ತ, **ರಕ್ಷ್ಯಾಪೇಕ್ಷಾಂ ಪ್ರತೀಕ್ಷತೇ** ಎಂದು ಗೋಪ್ತೃತ್ವವರಣದ ಆವಶ್ಯಕವು ಹೇಳಲ್ಪಟ್ಟಿತು. ಹಾಗಲ್ಲದೆ ಕಾರುಣಿಕನಾದುದರಿಂದ ಸರ್ವರಿಗೂ ಮೋಕ್ಷವನ್ನು ಕೊಟ್ಟುಬಿಟ್ಟರೆ "**ಎಲ್ಲೀ ಒನ್ರ್ ಏತುಪೆಟ್ರಾಲುಲಗಿಲ್ಲೈಯೆನ್ರೇ**" ಎಂದು ಶ್ರೀ ನಮ್ಮಾಳ್ವಾರ್‌ರವರು (೪-೧೦-೭) ಹೇಳಿರುವ ಹಾಗೆ ಲೀಲಾವಿಭೂತಿಯೇ ಇಲ್ಲದೇ ಹೋಗುವ ಸಂದರ್ಭವು ಉಂಟಾದೀತೆಂಬ ಭಾವವು. ಮೋಕ್ಷಪ್ರಾಪ್ತಿಗೆ ಯೋಗ್ಯನೂ ಅಯೋಗ್ಯನೂ ಇಬ್ಬರೂ ಮೋಕ್ಷವನ್ನು ಹೊಂದುವದರಿಂದ ಸರ್ವೇಶ್ವರನು ಪಕ್ಷಪಾತವನ್ನು ಮಾಡಿದ ದೋಷಕ್ಕೆ ಗುರಿಯಾಗುವನು. ಆದುದರಿಂದ ಶರಣಾಗತಿಯು ಮತ್ತು ಅದರ ಅಂಗವಾದ ಗೋಪ್ತೃತ್ವವರಣದ ಆವಶ್ಯಕತೆಯೂ ಎಂಬ ಭಾವವು. **ಶರಣಂ ಪ್ರಪದ್ಯೇ** - ಎಂಬಲ್ಲಿ ಶರಣ ಶಬ್ದವು ಉಪಾಯಪರವೆಂದೂ ಇದರಿಂದ ಮಹಾವಿಶ್ವಾಸದ್ಯೋತಿತವೆಂದೂ ಹೇಳಲ್ಪಟ್ಟಿತು. ಈಗ ಆ ಪದಗಳಿಂದಲೇ ಗೋಪ್ತೃತ್ವವರಣವೂ ಕೂಡ ವೇದ್ಯವೆಂದು ಅಪ್ಪಣೆಕೊಡಿಸುತ್ತಾರೆ. ಶರಣಶಬ್ದಕ್ಕೆ ಉಪಾಯವೇ ಅರ್ಥವೆಂದು ಸಾಧಿಲ್ಪಟ್ಟಿತು. ಉಪಾಯವೆಂದರೆ ಒಂದು ಸಾಧನವೆಂಬ ಇಷ್ಟುಮಾತ್ರ ಅರ್ಥವು ತೋರಿಬರುತ್ತದೆ. ಆ ಸಾಧನಭಾವವು ಪರಮಾತ್ಮನಾದ ಚೇತನನಲ್ಲೂ ಇರಬಹುದು. ಅಚೇತನಗಳಾಗಿ ಬ್ರಹ್ಮದೃಷ್ಟಿಯಿಂದ ಉಪಾಸ್ಯಗಳಾದ ಪ್ರತೀಕಗಳಲ್ಲೂ ಇರಬಹುದು. ಆದರೆ ಈ ಉಪಾಯಸ್ಥಾನದಲ್ಲಿ ಪರಮಾತ್ಮನೇ ನಿಲ್ಲುವದರಿಂದ ಆತನು ಚೇತನನಾಗಿರುವದರಿಂದ, ಆತನಲ್ಲಿ ಯಾವಾಗ ರಕ್ಷಿಸುವನೆಂಬ ಮಹಾವಿಶ್ವಾಸ ಉಂಟಾಯಿತೋ, ಆದ

ಅದಿಲ್ ಶರಣಶಬ್ದಮೊರು ಪ್ರಯೋಗತ್ತಿಲೆ ಯಿರಣ್ಡರ್ಥತ್ತೈಯಭಿಧಾನಮ್ಪಣ್ಣಮಾಟ್ಟಾಮೈಯಾಲೆ ಇವ್ವಧಿಕಾರಿಕ್ಕಸಾಧಾರಣಮಾನ ಉಪಾಯತ್ವಾಧ್ಯವಸಾಯಮ್ ಇವ್ವಿಡತ್ತಿಲೆ ಶಾಬ್ದಮಾಯ್, ಸರ್ವಾಧಿಕಾರಿ ಸಾಧಾರಣಮಾನ ಗೋಪ್ತೃತ್ವವರಣಂ ಆರ್ಥಮಾಗಕ್ಕಡವದು,

---

ನೊಂದಿಗೆ ರಕ್ಷಿಸಬೇಕೆಂಬ ಪ್ರಾರ್ಥನೆಯೂ ಸಹ ಸಿದ್ಧಿಸಿತು ಎಂಬುವದು ಈ ಮೇಲಿನ ವಾಕ್ಯದ ತಾತ್ಪರ್ಯವು.

ಮೊದಲು ಶರಣ ಶಬ್ದವು ಉಪಾಯವೆಂಬರ್ಥವನ್ನೇ ಬೋಧಿಸುತ್ತದೆಂದು ಹೇಳಿ, ಉಪಾಯತ್ವಾಧ್ಯಾವಸಾಯವಾದ ಮಹಾ ವಿಶ್ವಾಸವು ಬೋಧಿತವಾಯಿತೆಂದು ಹೇಳಿ, ಈಗ ಅವರಿಂದಲೇ ಗೋಪ್ತೃತ್ವವರಣವೂ ಕೂಡ ವಿವಕ್ಷಿತವೆಂದುಪದೇಶಿಸಲ್ಪಟ್ಟಿತು. ಹಾಗಾದರೆ ಒಂದು ಶಬ್ದವೇ ಹೀಗೆ ಎರಡರ್ಥವನ್ನು ಬೋಧಿಸುತ್ತದೆಯೇ ಎಂಬ ಆಕ್ಷೇಪಕ್ಕೆ ಸಮಾಧಾನವಾಗಿ ಮೊದಲರ್ಥವು ಶಾಬ್ದವಾಗಿಯೂ, ಎರಡನೆಯದು ಆರ್ಥವಾಗಿಯೂ, ತೋರಿಬರುತ್ತವೆಂದು ಹೇಳುತ್ತಾರೆ.

ಅದಿಲ್ – ಅದರೊಳಗೆ, ಶರಣಶಬ್ದವು, **ಒರುಪ್ರಯೋಗತ್ತಿಲೆ** - ಒಂದೇ ಪ್ರಯೋಗದಲ್ಲಿ, **ಇರಣ್ಡರ್ಥತ್ತೈಯಭಿದಾನಮ್ಪಣ್ಣಮಾಟ್ಟಾಮೆಯಾಲೆ** - ಹೀಗೆ ಎರಡು ಅರ್ಥಗಳಾದ ಉಪಾಯಾಧ್ಯಾವಸಾಯವನ್ನೂ, ಗೋಪ್ತೃತ್ವವರಣವನ್ನೂ, ಬೋಧಿಸಲಾರದಾದುದರಿಂದ, **ಇವ್ವಧಿಕಾರಿಕ್ಕು** - ಈ ಭರನ್ಯಾಸವನ್ನನುಷ್ಠಿಸಿದ ಸ್ವತಂತ್ರ ಪ್ರಪತ್ತಿನಿಷ್ಠನಿಗೆ, **ಅಸಾಧಾರಣಮಾನ** - ಮಾತ್ರನೇ ಮುಖ್ಯವಾದ, **ಉಪಾಯತ್ವಾಧ್ಯವಸಾಯಂ** - ಉಪಾಯರೂಪವಾದ ಮಹಾವಿಶ್ವಾಸವೂ, **ಇವ್ವಿಡತ್ತಿಲೆ** - ಈ ಸ್ಥಳದಲ್ಲಿ ಎಂದರೆ ದ್ವಯಮಂತ್ರದ **ಶರಣಂ ಪ್ರಪದ್ಯೇ** ಎಂಬಲ್ಲಿ, **ಶಾಬ್ದಮಾಯ್** - ಶರಣ ಶಬ್ದಮೂಲಕವಾಗಿಯೇ ತೋರುವ ಅಭಿಪ್ರಾಯವಾಗಿ, **ಸರ್ವಾಧಿಕಾರಿಸಾಧಾರಣಮಾನ** - ಸಮಸ್ತ ಅಧಿಕಾರಿಗಳಿಗೂ ಸಾಧಾರಣವಾದ, **ಗೋಪ್ತೃತ್ವವರಣಂ** - ರಕ್ಷಕನಾಗೆಂಬ ಪ್ರಾರ್ಥನೆಯು, **ಆರ್ಥಮಾಗಕ್ಕಡವದು** - ಅರ್ಥಾತ್ ತೋರಿಬರುತ್ತದೆ. **ಶರಣ** ಶಬ್ದಕ್ಕೆ ಉಪಾಯವೆಂದೇ ಅರ್ಥವು ಹೇಳಲ್ಪಟ್ಟಿತು. **ಶರಣ**ವೆಂದರೆ ರಕ್ಷಕನೆಂಬರ್ಥವೂ ಸಹ ಬೋಧಿತವಾಗುವಾಗ ಅದನ್ನು ಬಿಟ್ಟು ಉಪಾಯವೆಂದೇ ಅರ್ಥಹೇಳಬೇಕಾದ ನಿರ್ಬಂಧವೇನು ಎಂದರೆ, ಈ ಭರನ್ಯಾಸದಲ್ಲಿ ಉಪಾಯವಾದ ಉಪಾಸನ ಸ್ಥಾನದಲ್ಲಿ ಶ್ರಿಯಃಪತಿಯೇ ಸಿದ್ಧೋಪಾಯನಾಗಿಯೂ ಸಾಧ್ಯೋಪಾಯನಾಗಿಯೂ ನಿಲ್ಲುವದರಿಂದ, ಉಪಾಯತ್ವಾಧ್ಯವ

ಅರವಿತ್ತನರಸ್ಸ್ರೆಯ್ಯುಮ್ ಪರ್ರೆಯು ಮುಪಾಯಮಿಲ್ಲಾ।
ತ್ತುರುವಿತ್ತುನಿಯಿ ॥ ॥ಜ್ಞೈಯಾನ್ ಪಿರನ್ಸೈ ವರಿಕ್ಕುಮ್ ವಗ್ಗೈ।

ಸಾಯುವೇ ಈ ಲಘೂಪಾಯನಿಷ್ಠನಿಗೆ ಅಸಾಧಾರಣವಾದ ಭಾವವಾದುದರಿಂದ, ಈ ಉಪಾಯತ್ವಾಧ್ಯವಸಾಯವೇ ಇಲ್ಲಿ ಶಾಬ್ದವಾಗಿಟ್ಟುಕೊಳ್ಳಬೇಕೆಂಬ ತಾತ್ಪರ್ಯವು **ಶರಣಂ** ಎಂಬ ಶಬ್ದದಿಂದ ಕೂಡಿದ **ಪ್ರಪದ್ಯೇ** ಎಂಬ ಕ್ರಿಯಾಪದದಲ್ಲಿ ಯಾವಾಗ ಶರಣ ಶಬ್ದಕ್ಕೆ ಉಪಾಯರೂಪವಾದ ಮಹಾವಿಶ್ವಾಸವೆಂದು ಏರ್ಪಟ್ಟಿತೋ, ಆಗ ರಕ್ಷಕನು ಎಂಬರ್ಥವನ್ನು ಶಾಬ್ದವಾಗಿ ಹೇಳಲಾಗುವದಿಲ್ಲವು, ಏಕೆಂದರೆ ಶರಣವೆಂಬ ಒಂದು ಶಬ್ದಕ್ಕೇ ಈ ದ್ವಯ ಮನ್ತ್ರದಲ್ಲಿ ಎರಡರ್ಥವನ್ನು ಜೋಡಿಸಲು ಸಾಧ್ಯವಲ್ಲವು ಅದೂ ಅಲ್ಲದೆ ಗೋಪ್ತೃತ್ವವರಣದಲ್ಲಿ ವರಣ ಶಬ್ದಾಭಿಪ್ರಾಯವು ಶರಣಶಬ್ದದಲ್ಲಿ ತೋರಿಬರುವದಿಲ್ಲವು. **ಶರಣಂಪ್ರಪದ್ಯೇ** ಎಂಬ ವಾಕ್ಯದಿಂದುಂಟಾಗುವ ಭಾವದಿಂದ ಗೋಪ್ತೃತ್ವವರಣವು ಉಂಟಾಗುವದರಿಂದ ಆರ್ಥವೆಂದು ಇಲ್ಲಿ ಹೇಳಲ್ಪಟ್ಟಿತು.

ಅವತಾರಿಕೆ. ಈ ಮುಂದಿನ ಪಾಶುರದಿಂದ ಹಿಂದೆ ಹೇಳಿದುದನ್ನೇ ಸಂಗ್ರಹಿಸುವರಾಗಿ, ಕರ್ಮಯೋಗಾದಿ ಪರಂಪರೆಗಳಿಂದ ಯುಕ್ತವಾದ ಉಪಾಸನೆಯ ಮೂಲಕ ಬಹು ಕಷ್ಟದಿಂದ ಸಾಧಿಸಬಹುದಾದ ಮೋಕ್ಷಸಾಮ್ರಾಜ್ಯವನ್ನು ಈ ಸಪರಿಕರವಾದ ಭರನ್ಯಾಸದಿಂದ ಸಾಧಿಸಬಹುದೇ ಎಂಬ ಸಂಶಯವು ಈಷದಪಿ ಇಲ್ಲದ ಹಾಗೆ, ಮಹಾವಿಶ್ವಾಸವುಂಟಾಗುವ ಹಾಗೆ ಅನ್ಯದೇವತಾಶ್ರಯಣರೂಪ ಪ್ರಾತಿಕೂಲ್ಯ ಪರಿತ್ಯಾಗವೇ ಮೊದಲಾದ ಪರಿಕರಗಳಿಂದ ಸೇರಿದ, ತನ್ನ ಆತ್ಮಾವನ್ನು ಶ್ರಿಯಃಪತಿಯಲ್ಲಿ ಸಮರ್ಪಿಸಬೇಕೆಂಬ ಶರಣಾಗತಿ ಸ್ವರೂಪವನ್ನು ನಮ್ಮಲ್ಲಿ ಪೂರ್ಣವಿಶ್ವಾಸವನ್ನಿಟ್ಟಿರುವ ಆಚಾರ್ಯರುಗಳು ನಮಗೆ ಪರಮ ಕೃಪಯಾ ಉಪದೇಶಿಸಿದರಲ್ಲವೇ ಎಂದು ಅವರಲ್ಲಿ ಕೃತಜ್ಞತಾಭಾವವನ್ನು ತೋರಿಸುತ್ತಾರೆ.

ಅರ್ಥ—ಅಸ್ಸರ್ - ಪ್ರತಿಫಲವನ್ನಪೇಕ್ಷಿಸದೆ ನಮ್ಮಲ್ಲಿ ನಿರ್ಹೇತುಕ ಪ್ರೀತ್ಯತಿಶಯವನ್ನು ತೋರುವ ನಮ್ಮ ಆಚಾರ್ಯರುಗಳು, **ಅರವಿತ್ತನರ್**- ಪರಮಕೃಪಯಾ ಉಪದೇಶಿಸಿದರು. ಏನನ್ನು ಉಪದೇಶಿಸಿದರೆಂದರೆ :—**ಪರನ್ಸೈ ವರಿಕ್ಕುಂವಗ್ಗೈ**, ಪರನ್ಸೈ – ಸರ್ವೋತ್ಕೃಷ್ಟನಾಗಿರುವ ಶ್ರಿಯಃಪತಿತ್ವಾದಿ ಪರತ್ವ ಸೂಚಕಗುಣಗಳಿಂದೊಪ್ಪುವ ಪರಮ ಪುರುಷನನ್ನು, **ವರಿಕ್ಕುಂವಗ್ಗೈ** - ನನ್ನ ರಕ್ಷಣಾಭರವೂ ನನ್ನ ರಕ್ಷಣಾದ ಫಲವೂ ಶ್ರಿಯಃಪತಿಯೇ ಎಂದು ಆತನ ಪಾದ ಕಮಲಗಳಲ್ಲಿ ಶರಣಾಗತಿಯನ್ನು ಮಾಡುವ ಪ್ರಕಾರವನ್ನು ಎಂದರೆ ಅದರ

**ಉರುವಿತ್ತನೈಯಿನ್ರಿ ಯೊತ್ತಾರೆನ ನಿನ್ರವುಮ್ಬರೈನಾಮ್ ।
ಪಿರವಿತ್ತುಯರ್ ಶೆಕುವೀರೆನ್ರಿರುಕ್ಕುಮ್ ಪಿಳ್ಳೈಯರನೇ ॥ ೧೪ ॥**

ಅಂಗಗಳನ್ನೂ ಅದರ ಸ್ವರೂಪವನ್ನೂ ಸಹ **ಉಪದೇಶಿಸಿದರು** ಎಂದು ತಾತ್ಪರ್ಯವು. ಆ ಪರಮ ಪುರುಷನು ಎಂಥಾವನೆಂದರೆ, ಅವಲಂಬಿಸಿದರೆ ತನ್ನ ಮನೋರಥವು ಕೈಗೂಡುತ್ತದೋ ಇಲ್ಲವೋ ಎಂಬ ಸಂಶಯವನ್ನುಂಟುಮಾಡುವಷ್ಟು ಕಷ್ಟತರವಾದ ಭಕ್ತಿಯೋಗಕ್ಕೆ ತನಗೆ ಸಾಮರ್ಥ್ಯವಿಲ್ಲವೇ ಎಂಬ ಆಕಿಂಚನ್ಯವು ಉಂಟಾದಾಗ, ಆ ಸ್ಥಳದಲ್ಲಿ ನಾನಿದ್ದೇನೆಂದು ಸಹಾಯಮಾಡುವಂಥಾ, ಆಶ್ರಯಿಸಲು ಯೋಗ್ಯವಾದ ಸ್ವಭಾವವುಳ್ಳವನೆಂದು ಹೇಳುತ್ತಾರೆ :— **ಐಯ್ಯಮ್**-ತನಗೆ ಫಲಾವಾಪ್ತಿಯುಂಟಾದೀತೋ ಇಲ್ಲವೋ ಎಂಬ ಸಂಶಯವನ್ನು, **ಪಯ್ಯುಮ್** - ಸೂಚಿಸುವ, **ಉಪಾಯುಮಿಲ್ಲಾ** - ಉಪಾಯವಾದ ಭಕ್ತಿಯೋಗವಿಲ್ಲದ, **ತುರುವಿ** - ದಾರಿದ್ರ್ಯ ಎಂದರೆ ಆಕಿಂಚನ್ಯದಿಂದುಂಟಾದ, **ತುನಿಯಿಲ್**-ದುಃಖದೆಸೆಯಲ್ಲಿ, **ತುಣೈಯಾಂ** - ಸಹಾಯಮಾಡುವ ಸ್ವಭಾವವುಳ್ಳ ಪುರುಷೋತ್ತಮನು, ಎಂದರೆ ಉಪಾಸನಾರೂಪ ಭಕ್ತಿಯೋಗಸ್ಥಾನಕ್ಕೆ ಬದಲಾಗಿ ತಾನೇ ನಿಂತು, ಆಶ್ರಯಿಸುವನ ಇಷ್ಟಾರ್ಥವನ್ನು ತಾನೇ ದಯಪಾಲಿಸುವನು ಎಂಬ ಭಾವವು. ಆಚಾರ್ಯರು ಹೇಗೆ ಉಪದೇಶಿಸಿದರೆಂದರೆ ಹೇಳುತ್ತಾರೆ. **ಉರುವು**-ಶೇಷಿಶೇಷಸಂಬನ್ಧವೇ ಮೊದಲಾದ ನವವಿಧ ಸಂಬಂಧಗಳಲ್ಲಿ, **ಇತ್ತನೈ**-ಇಷ್ಟಾದರೂ ಎಂದರೆ ಸ್ವಲ್ಪವಾದರೂ, **ಇನ್ರಿ** - ಇಲ್ಲದೆ, ಎಂದರೆ ಯಾವ ವಿಧವಾದ ಸಂಬಂಧವೂ ಇಲ್ಲದೆ **ಒತ್ತಾರೆನನಿನ್ರ** - ಕರ್ಮವಶ್ಯತ್ವವೇ ಮೊದಲಾದವುಗಳಿಂದ ನಮ್ಮ ಹಾಗೆಯೇ ಜೀವಕೋಟಿಗೆ ಸೇರಿದುದರಿಂದ ನಮಗೆ ಸಮಾನರಾದ, **ಉಮ್ಬರೈ** – ಬ್ರಹ್ಮರುದ್ರೇಂದ್ರಾದಿ ದೇವತೆಗಳನ್ನು, **ನಾಮ್** - ಮೋಕ್ಷಾರ್ಥಿಗಳಾದ ನಾವು, **ಪಿರವಿತ್ತುಯರ್** - ಜನ್ಮಗಳಿತ್ತುವ ದುಃಖವನ್ನು, **ಶೆಕುವೀರೆನ್ರು** – ಹೋಗಲಾಡಿಸಿರಿ ಎಂದು, **ಇರುಕ್ಕುಮ್** - ಯಾಚಿಸುವ, **ಪಿಳ್ಳೈ** - ಅನುಚಿತ ಕೃತ್ಯವು, **ಅರನೇ** – ಹೇಗೆ ಛೇದಿಸಿ ಹೋಗಬೇಕೋ ಹಾಗೆ ಉಪದೇಶಿಸಿದರು. ನಮಗೂ ಶ್ರಿಯಃಪತಿಗಾವರೋ ನವವಿಧ ಸಂಬಂಧವೂ ಉಂಟು. ಅಂಥಾವನಲ್ಲಿ ನಾವು ಶರಣಾಗತಿಯನ್ನು ಮಾಡಿದರೆ ಸರ್ವಶಕ್ತನಾಗಿ, ಆಶ್ರಯಿಸಲು ಯೋಗ್ಯನಾದ ಸೌಲಭ್ಯಾದಿ ಗುಣಗಳುಳ್ಳ ಪರತತ್ವವನ್ನು ಹೊಂದಿರುವದರಿಂದ ನಮ್ಮ ಕೋರಿಕೆಯಾದ ಮೋಕ್ಷಪ್ರಾಪ್ತಿಯು ಲಭಿಸಬಹುದು. ಬ್ರಹ್ಮರುದ್ರೇಂದ್ರಾದಿಗಳಿಗೂ ನಮಗೂ ಈ ವಿಧವಾದ ಯಾವ ಸಂಬಂಧದ ಲವಾಂಶವೂ ಇಲ್ಲವು. ಅದೂ ಅಲ್ಲದೆ ಜನ್ಮಸಂತತಿಗಳ ದುಃಖಗಳನ್ನೆಲ್ಲಾ ಹೋಗಲಾಡಿಸಿ ಮೋಕ್ಷವನ್ನು ಕೊಡು

ವ ಶಕ್ತಿಯು ಅವರಿಗಿಲ್ಲವು. ಅಂಥಾವರನ್ನು ನಮಗೆ ಜನ್ಮಸಂತತಿ ದುಃಖಗಳನ್ನು ತಪ್ಪಿಸಿ ಮೋಕ್ಷವನ್ನು ಕೊಡುಎಂದು ಯಾಚಿಸುವದು ನಮಗೆ ತುಂಬಾ ಸ್ವರೂಪ ಹಾನಿಕರವಾದ ಕೆಲಸವು; ಇಂತಹ ಅನುಚಿತಕೆಲಸವನ್ನು ಮಾಡದ ಹಾಗೆ ನಮ್ಮ ಆಚಾರ್ಯರು ಉಪದೇಶಿಸಿದರಲ್ಲವೇ ಎಂದು ಕೃತಜ್ಞತೆಯನ್ನು ತೋರಿಸುತ್ತಾರೆ. ಆಚಾರ್ಯರುಗಳ ನಿರ್ಹೇತುಕ ವಾತ್ಸಲ್ಯದ ಮಹಿಮೆಯು ನಮಗೆ ನಿರತಿಶಯ ವಾದಶ್ರೇಯಸ್ಸನ್ನುಂಟುಮಾಡುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವನ್ನು ಸೂಚಿಸಿರುತ್ತಾರೆ.

ಇದು ಪರಿಕರವಿಭಾಗಾಧಿಕಾರ ಸಂಗ್ರಹಶ್ಲೋಕವಾದುದರಿಂದ, ಎಲ್ಲಾ ಪರಿಕರಗಳೂ ಇಲ್ಲಿ ಜೋಂಧಿತವಾಗಿರುತ್ತವೆ. ಹೇಗೆಂದರೆ:—

ಉಪಾಯಮಿಲ್ಲಾತ್ತರುವಿ-ಭಕ್ತಿಯೋಗದಲ್ಲಿ ಪ್ರವರ್ತಿಸಲು ಸಾಮರ್ಥ್ಯವಿಲ್ಲದುದರಿಂದ, ಇನ್ನು ಯಾವ ಗತಿಯೂ ಇಲ್ಲವೇ ಎಂಬ ಆಕಿಂಚನ್ಯವು ಇಲ್ಲಿ ಪ್ರದರ್ಶಿಸಲ್ಪಟ್ಟಿತು. **ತುಣೈಯಾಂಪಿರನೈ** - ಅಂತಹ ದೀನದೆಸೆಯಲ್ಲಿ ಆ ಪುರುಷೋತ್ತಮನೇ ಸಹಾಯಕನಾಗಿ ಬಂದು ನಿಲ್ಲುವನೆಂದು ಹೇಳಿರುವದರಿಂದ ಮಹಾವಿಶ್ವಾಸವ ತೋರಿಬರುತ್ತದೆ. **ತುಣೈಯಾಂ** ಎಂದು ಹೇಳಿದುದರಿಂದಲೂ, ಮತ್ತು ಮುಂದೆ ರಕ್ಷಣೆಗೋಸ್ಕರ **ವರಿಕ್ಕುಂ ವಗೈ** ಎಂದು ಹೇಳಿದುದರಿಂದ ಗೋಪ್ತೃತ್ವವರಣವು ಅರ್ಥಾತ್ ಸೂಚಿಸಲ್ಪಟ್ಟಿತು. ನಮ್ಮಗಳ ಹಾಗೆ ಜೀವ ಕೋಟಿಗೆ ಸೇರಿದವರಾಗಿ ನಮ್ಮ ಹಾಗೆಯೇ ಮೋಕ್ಷಾರ್ಥಿಗಳಾದ ಬ್ರಹ್ಮರುದ್ರೇಂದ್ರಾದಿಗಳನ್ನು **ಪಿರವಿತ್ತುಯಿರ್ ಶಿಕುವಾರ್**, ಜನ್ಮಸಂತತಿಯ ದುಃಖವನ್ನು ತಪ್ಪಿಸಿ ಎಂದು ಯಾಚಿಸುವ ಸ್ವರೂಪಹಾನಿಕರವಾದ ಅಕೃತ್ಯವಿಲ್ಲದ ಹಾಗೆ ನಮ್ಮ **ಆಚಾರ್ಯರು** ಉಪದೇಶಿಸಿದರೆಂಬುವದರಿಂದ ಪ್ರಾತಿಕೂಲ್ಯವರ್ಜನವೂ, ಅದರಿಂದಲೇ ಆನುಕೂಲ್ಯಸಂಕಲ್ಪವೂ ಸಹ ತೋರಿಬರುತ್ತದೆ.

ಇನ್ನೊಂದು ವಿಶೇಷ ಭಾವವು ಈ ಪಾಶುರದಲ್ಲಿ ತೋರಿಬರುತ್ತದೆ. ಹಿಂದಿನ ಅಧಿಕಾರವಾದ ಪರದೇವತಾಪಾರಮಾರ್ಥ್ಯಾಧಿಕಾರದಲ್ಲಿ ಏನನ್ನು ತಾವು ಉಪದೇಶಿಸಿದರೋ ಅದನ್ನು ಇನ್ನೊಂದುಸಲ ಸಮರ್ಥನಮಾಡಿ ಹೇಳುವ ಹಾಗೆ ತೋರಿಬರುತ್ತದೆ. **ಒತ್ತಾರೆನ ನಿನ್ರುಉಮ್ಬರೈ** ಜೀವಕೋಟಿಗೆ ಸೇರಿ ನಮಗೆ ಸಮಾನರಾದವರಾದ ಬ್ರಹ್ಮರುದ್ರಾದಿಗಳು ಯಾರೂ ಮೋಕ್ಷದಾಯಕ ಶಕ್ತಿ ಇಲ್ಲದವರಾದುದರಿಂದ ಪರದೇವತೆಯೆಂದು ಹೇಳಿಸಿಕೊಳ್ಳಲು ಆಗುವದಿಲ್ಲ ವೆಂದೂ. **ಪರನೈವರಿಕ್ಕುಂವಗೈ** ಎಂಬುವದರಿಂದ ಪರತ್ವವನ್ನು ಹೊಂದಿರುವವನು ಶ್ರಿಯಃಪತಿಯಾಗಿರುವದರಿಂದ, ಶ್ರೀಮನ್ನಾರಾಯಣನೇ ಪರದೇವತೆ ಯೆಂದೂ ಪುನಃ ಸ್ಥಾಪಿಸಿ ಹೇಳಿದಂತಾಯಿತು. ಏಕೆಂದರೆ:—ಬ್ರಹ್ಮರುದ್ರಾದಿ ಗಳಿಗೂ ನಮಗೂ ಯಾವದೊಂದೂ ಸಂಬಂಧವೂ ಇಲ್ಲವು. ಶ್ರೀಮನ್ನಾರಾ

ಪ್ರಖ್ಯಾತಃ ಪಂಚಷಾಂಗಸ್ಸಕೃದಿತಿ ಭಗವಚ್ಛಾಸನೈರೇಷಯೋಗ
ಸ್ತತ್ರ ದ್ವಾಭ್ಯಾಮಪಾಯಾದ್ವಿರತಿ ರನಿತರೋಪಾಯತೈಕೇನ
ಬೋಧ್ಯಾ ।

ಯಣನಿಗೂ ನಮಗೋ ಎಂದರೆ ನವವಿಧ ಸಂಬಂಧವೂ ಉಂಟು. (ಇದು ಹಿಂದೆ ೧೭೨-೩ ನೇ ಪುಟದಲ್ಲಿ ಹೇಳಲ್ಪಟ್ಟಿರುತ್ತದೆ) ಅವುಗಳಲ್ಲಿ ಶರೀರ ಶರೀರಿ ಸಂಬಂಧವೂ, ರಕ್ಷ್ಯರಕ್ಷಕ ಸಂಬಂಧವೂ, ಶೇಷಶೇಷಿಸಂಬಂಧವೂ ಮುಖ್ಯವಾದು ದರಿಂದ ಆತನೇ ಪರತತ್ವವು. **ಉರುವು** ಎಂಬ ಶಬ್ದಕ್ಕೆ ಸುಮ್ಮನೆ ಸಂಬಂಧ ವೆಂದು ಅರ್ಥಹೇಳಿದರೆ, ಪುರುಷಕಾರರೂಪಳಾಗಿಯೂ, ಅನುಗ್ರಹಮಯಳಾ ಗಿಯೂ, ಅಜ್ಞಾತ ನಿಗ್ರಹಳಾಗಿಯೂ, ಇರುವ ಲಕ್ಷ್ಮಿಯ ಸಂಬಂಧವು ಅವರು ಗಳಿಗಿಲ್ಲದೆ ನಾರಾಯಣನಿಗೇನೇ ಉಂಟು ಎಂಬ ಭಾವವೂ ಉಂಟಾಗುವದರಿಂದ, ಪರದೇವತಾ ಪಾರಮಾರ್ಥ್ಯವು ಶ್ರೀಮನ್ನಾರಾಯಣನಲ್ಲಿ ಅನ್ವಯಿಸುತ್ತದೇ ವಿನಾ ಬ್ರಹ್ಮರುದ್ರಾದಿಗಳಲ್ಲಿಲ್ಲವೆಂಬುವದು ಸ್ಥಾಪಿಸಲ್ಪಟ್ಟಿತು, **ಪರನ್ಯೈಪರಿಕ್ಕುಮಃ** ವಗ್ಯ ಎಂದು ಹೇಳಿದುದರಿಂದ ಮುಂದೆ ಸಾಂಗಪ್ರಪದನಾಧಿಕಾರದಲ್ಲಿ ಇದನ್ನು ಚರ್ಚಿಸುವರೆಂಬ ಭಾವವೂ ತೋರಿಬರುತ್ತದೆ.

ಅವತಾರಿಕೆ :—ಈ ಅಧಿಕಾರದ ಪ್ರಥಮ ಶ್ಲೋಕದಲ್ಲಿ ಪರಿಕರ ಸಮು ದಾಯವು **ಇಯರ್ಾಇತ್ಥಂಭೂತಃ** ಎಂದು ಬಹು ಸಂಗ್ರಹವಾಗಿ ಹೇಳಿದು ದನ್ನೇ ವಿಸ್ತರಿಸಿ ಪರಿಕರಗಳ ಪ್ರಯೋಜನಗಳನ್ನು ಉಪದೇಶಿಸುತ್ತಾರೆ.

ಅರ್ಥ :—**ಏಷಯೋಗಃ** - ಈ ಭರನ್ಯಾಸರೂಪವಾದ ಉಪಾಯವು, **ಪಂಚ ಷಾಂಗಃ** - ಐದು ಅಥವಾ ಆರು ಅಙ್ಗಗಳುಳ್ಳದ್ದು, **ಸಕೃತ್** - ಮತ್ತು ಒಂದು ಸಲ ಮಾತ್ರವೇ ಅನುಷ್ಠಿಸತಕ್ಕದ್ದು, ಧ್ಯಾನಯೋಗದ ಹಾಗೆ ಅಸಕೃತ್, ಪುನಃ ಪುನಃ ಆವರ್ತಿಸತಕ್ಕದ್ದಲ್ಲವು, **ಇತಿ** - ಎಂಬದಾಗಿ. **ಭಗವಚ್ಛಾಸನೈಃ** - ಲಕ್ಷ್ಮೀ ತಂತ್ರ, ಅಹಿರ್ಬುಧ್ನ್ಯಸಂಹಿತೆ, ಭಗವಚ್ಛಾಸ್ತ್ರ ಇವೇ ಮೊದಲಾದವುಗಳಿಂದ, ಅಥವಾ, ಭಗವಂತನ ಆಜ್ಞಾರೂಪವಾಕ್ಯಗಳಿಂದಲೂ, **ಪ್ರಖ್ಯಾತಃ** - ಪ್ರಸಿದ್ಧವಾ ದುದು, **ತತ್ರ** - ಆ ಐದು ಅಥವಾ ಆರಾದ ಅಙ್ಗಗಳಲ್ಲಿ, **ದ್ವಾಭ್ಯಾಂ** - ಎರಡಾದ ಆನುಕೂಲ್ಯಸಙ್ಕಲ್ಪವೂ ಪ್ರಾತಿಕೂಲ್ಯವರ್ಜನೆಯೂ ಇವೆರಡರಿಂದ, **ಅಪಾಯಾ ದ್ವಿರತಿಃ** - ಆಜ್ಞಾತಿಲಂಘನದಿಂದುಂಟಾಗುವ ಭಗವನ್ನಿಗ್ರಹರೂಪವಾದ ಅಪಾಯ ದಿಂದ ನಿವೃತ್ತಿಯು, **ಬೋಧ್ಯಾ** - ತಿಳಿಯತಕ್ಕದ್ದು, **ಏಕೇನ** - ಅನಂತರ ದೊಂದಾದ ಕಾರ್ಪಣ್ಯದಿಂದ, **ಅನಿತರೋಪಾಯತಾ** - ಅನನ್ಯೋಪಾಯತ್ವವು, **ಬೋಧ್ಯಾ** - ತಿಳಿಯತಕ್ಕದ್ದು. **ಏಕೇನ** - ಇನ್ನೊಂದಾದ ಮಹಾವಿಶ್ವಾಸದಿಂದ

**ಏಕೇನ ಸ್ವಾಂತದಾರ್ಢ್ಯಂ ನಿಜಭರವಿಷಯೇಽನ್ಯೇನ ತತ್ಸಾಧ್ಯತೇಚ್ಛಾ
ತತ್ತ್ವಜ್ಞಾನಪ್ರಯುಕ್ತಾ ತ್ವಿಹ ಸಪರಿಕರೇ ತಾದಧೀನ್ಯಾದಿ ಬುದ್ಧಿಃ ॥೨೭**

ನಿಜಭರವಿಷಯೇ - ತನ್ನ ಭರನ್ಯಾಸದ ಉದ್ದೇಶ್ಯದಲ್ಲಿ. **ಸ್ವಾಂತದಾರ್ಢ್ಯಂ**- ಮನಸ್ಸಿನ ದಾರ್ಢ್ಯವು ನಿಶ್ಚಂಚಲಭಾವವು, **ಬೋಧ್ಯಾ** - ತಿಳಿಯತಕ್ಕದ್ದು, ಕಾಕಾಕ್ಷಿನ್ಯಾಯದಿಂದ **ನಿಜಭರವಿಷಯೇ** ಎಂಬುವದನ್ನು ಎರಡು ಕಡೆಗೂ ಅನ್ವಯಿಸತಕ್ಕದ್ದು, ತನ್ನ ಭರನ್ಯಾಸದ ಉದ್ದೇಶ್ಯಫಲದಲ್ಲಿ, **ಅನ್ಯೇನ** - ಇನ್ನೊಂದಾದ ಗೋಪ್ತೃತ್ವವರಣದಿಂದ, **ತತ್ಸಾಧ್ಯತೇಚ್ಛಾ** - ಆ ಭಗವಂತನಿಂದಲೇ ಅದು ಸಾಧಿಸತಕ್ಕದ್ದೆಂಬಪೇಕ್ಷೆಯು, **ಬೋಧ್ಯಾ** - ತಿಳಿಯತಕ್ಕದ್ದು. **ಸಪರಿಕರೇ** - ಪರಿಕರಗಳಿಂದ ಕೂಡಿದ, **ಇಹ** - ಈ ಪ್ರಪದನರೂಪವಾದ ಯೋಗದಲ್ಲಿ. **ತಾದಧೀನ್ಯಾದಿಬುದ್ಧಿಸ್ತು** - ತನ್ನ ಕರ್ತೃತ್ವವು ಆ ಭಗವಂತನಿಗೆ ಅಧೀನವೆಂಬ ಬುದ್ಧಿಯಾದರೋ ಆದಿ ಶಬ್ದದಿಂದ ಭಗವಂತನಿಗೆ ಶೇಷನಾಗಿರುವ **ಭಾವವೂ,** ಫಲಾವಾಪ್ತಿಯೂ ಆತನಿಗೇನೇ ಸೇರಿದುದೂ ಎಂಬ ಭಾವವೂ ಹೇಳಲ್ಪಟ್ಟವು, **ತತ್ತ್ವಜ್ಞಾನಪ್ರಯುಕ್ತಾ** - ಹೀಗೆ ಸಮಸ್ತವೂ ಭಗವದಧೀನವಾಗಿ ಭಗವಚ್ಛೇಷಭೂತವೆಂಬುವದು, ಶಾಸ್ತ್ರಗಳ ಮೂಲಕ ಹೊಂದಿದ ಜ್ಞಾನಮೂಲಕ ಉಂಟಾದುದು ಎಂದು **ಬೋಧ್ಯಾ** - ತಿಳಿಯತಕ್ಕದ್ದು.

ತಾತ್ಪರ್ಯ :---ವಿಷಯೋಗಃ - ಈ ಪ್ರಪದನ, ಭರನ್ಯಾಸ ಸ್ವತಂತ್ರ ಪ್ರಪತ್ತಿ ಮೊದಲಾದ ಹೆಸರುಗಳಿಂದ ಹೇಳಿಸಿಕೊಳ್ಳುವ ಶರಣಾಗತಿಗೆ ಆತ್ಮನಿಕ್ಷೇಪ ಅಂಗಿ ಎಂದೂ ಇದಕ್ಕೆ ಐದು ಅಂಗಗಳೆಂದೂ, "**ನ್ಯಾಸಃಪಂಚಾಂಗಸಂಯುತಃ**" ಇತ್ಯಾದಿ ಪ್ರಮಾಣಗಳಿಂದ ಬೋಧಿಸಲ್ಪಟ್ಟಿತು. ಆದರೆ ಅದಕ್ಕೆ ಇಲ್ಲಿ ಪಂಚಷಾಂಗ ಎಂಬ ವಿಶೇಷಣವನ್ನು ಕೊಟ್ಟು ಅದಕ್ಕೆ ಐದಾದರೂ ಅಂಗಗಳು ಆಗಬಹುದೆಂದೂ, ಆರಾದರೂ ಆಗಬಹುದೆಂದೂ ಹೇಳಲ್ಪಟ್ಟಿತು. ಇವೆರಡಭಿಪ್ರಾಯಗಳಿಗೂ ಏನೂ ವಿರೋಧವಿಲ್ಲವೆಂದು ತಿಳಿಸುತ್ತಾರೆ. ಧರ್ಮಗಳು, ಪ್ರವೃತ್ತಿ ಧರ್ಮವೆಂದೂ ನಿವೃತ್ತಿ ಧರ್ಮವೆಂದೂ ಎರಡು ವಿಧವು. ಪ್ರವೃತ್ತಿಧರ್ಮಗಳು ಐಹಿಕ ಸುಖಕ್ಕೆ ಕಾರಣಭೂತವಾದವು. ನಿವೃತ್ತಿ ಧರ್ಮಗಳಾದರೋ ಆಮುಷ್ಮಿಕವಾದ ಮೋಕ್ಷಸುಖಕ್ಕೆ ಹೇತುಭೂತವಾದವು, ಪ್ರವೃತ್ತಿ ಧರ್ಮವು ಪುನಃ ಪುನಃ ಸಂಸಾರಕ್ಕೆ ಹೇತುಭೂತವಾದುದು, ನಿವೃತ್ತಿ ಧರ್ಮವು ಅಪುನರಾವೃತ್ತಿಗೆ ಹೇತುಭೂತವಾದುದು, "**ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ**" ಎಂದು ವ್ಯಾಸಮಹರ್ಷಿಯು ಹೇಳಿರುತ್ತಾರೆ. (ಮೋಕ್ಷ. ೨೧೯. ೪) ಐದು ಅಂಗಗಳು ಮಾತ್ರವೇ ಇದ್ದುದಾದರೆ ಶರಣಾಗತಿಯು ಐಹಿಕ ಸುಖಕ್ಕಾಗಿ

ಪ್ರವೃತ್ತಿ ಧರ್ಮರೂಪವಾದುದಾಗುತ್ತದೆ. ಆರನೇ ಅಂಗವಾದ ಫಲಸಂಗಕರ್ತೃತ್ವತ್ಯಾಗವೂ ಸೇರಿದರೆ ಶರಣಾಗತಿಯು ಆಮುಷ್ಮಿಕ ನಿರತಿಶಯ ಸುಖಕ್ಕಾಗಿ ನಿವೃತ್ತಿ ಧರ್ಮರೂಪವಾದುದಾಗುತ್ತದೆ. ಈ ಆರನೇ ಅಂಗವು ಪ್ರತಿಯೊಂದು ಕರ್ಮಾನುಷ್ಠಾನದಲ್ಲೂ ಮೋಕ್ಷಾರ್ಥಿಯು ಹೇಳಬೇಕಾದುದು ಆವಶ್ಯಕವಾದುದರಿಂದ ಮುಮುಕ್ಷುವಿನ ವಿಷಯದಲ್ಲೂ ಇದನ್ನು ಒಂದು ಅಂಗವನ್ನಾಗಿ ಹೇಳುವದು ಅನಾವಶ್ಯಕವೆಂದು ಭಾವಿಸಿ, ಸಪರಿಕರ ಶರಣಾಗತಿಯು ಐದು ಅಂಗಗಳುಳ್ಳದ್ದೆಂದು ಶಾಸ್ತ್ರದಲ್ಲಿ ಹೇಳಿರುವದೇನೂ ವಿರೋಧವಲ್ಲವು. ಫಲಸಂಗಕರ್ತೃತ್ವತ್ಯಾಗದಿಂದ ಈ ಯೋಗವನ್ನು ಅನುಷ್ಠಿಸಿದವನೀಗ ಯಥಾರ್ಥವಾದ ತತ್ತ್ವಜ್ಞಾನ ನಿಶ್ಚಯವುಳ್ಳವನೆಂಬುವದು ಶ್ರೀಮದಾಚಾರ್ಯರವರ ಅಭಿಪ್ರಾಯವು. ಕರ್ಮಗಳ ಫಲಸಿದ್ಧಿಯೂ **ತದಧೀನವಾದುದೆಂದು** (೧) **"ದೈವಂ ಚೈವಾತ್ರ ಪಂಚಮಂ"** ಎಂಬ ಶ್ಲೋಕದಲ್ಲೂ, ಅಂತಹ ಬುದ್ಧಿಯು ಪ್ರಾಪ್ತಿಯೂ ಆತನ ಕೃಪಾಪ್ರಭಾವಮೂಲಕವಾಗಿ ತದಧೀನವಾದುದೆಂದು (೨) **"ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ"** ಎಂಬ ಶ್ಲೋಕದಲ್ಲೂ, ಗೀತೆಯಲ್ಲಿ ಹೇಳಲ್ಪಟ್ಟಿರುತ್ತವೆ. ಈ ಅಭಿಪ್ರಾಯವು ಅನೇಕ ಕಡೆಗಳಲ್ಲಿ ಉಪಪಾದಿಸಲ್ಪಟ್ಟಿರುತ್ತವೆ. ಕೈಕೇಯಿಯು ಅಧರ್ಮಕ್ಕೆ ಬಿದ್ದು ಶ್ರೀರಾಮನಿಗೆ ವನವಾಸವನ್ನೂ, ಭರತನಿಗೆ ರಾಜ್ಯವನ್ನೂ, ಅಪೇಕ್ಷಿಸಿದಳೇ ಎಂದು ಮಹಾಕ್ರೋಧಾವಿಷ್ಟನಾದ ತನ್ನ ತಮ್ಮನನ್ನು ಸಮಾಧಾನ ಮಾಡುವದಕ್ಕಾಗಿ ಶ್ರೀರಾಮನು ಹೇಳುತ್ತಾನೆ :—ಸತ್ಪ್ರಸೂತಳಾಗಿ ಗುಣಾಢ್ಯಳಾಗಿ ದಾರುಣ ಸ್ವಭಾವವಿಲ್ಲದ ಕೈಕೇಯಿಯು ಹೇಗೆ ನನ್ನನ್ನು ದೈವಸಂಕಲ್ಪವಿಲ್ಲದೆ ಭರ್ತೃಸನ್ನಿಧಾಭರ್ತೃಜನ ಸನ್ನಿಧಿಯಲ್ಲಿ, ನಿರ್ಲಜ್ಜಳಾಗಿ ನನ್ನನ್ನು ಕಾಡಿಗೆ ಕಳುಹಿಸುವಳು? (೩) **"ನನು ದೈವಸ್ಯ ಕರ್ಮ ತತ್"** ಎಂದು ಹೇಳಿ ಸಮಾಧಾನಮಾಡಿರುತ್ತಾರೆ. ಆದುದರಿಂದ ಜ್ಞಾನಿಗೆ ತಾದಧೀನ್ಯಾದಿ ಬುದ್ಧಿಯು ಆತನ ಕೃಪೆಯಿಂದಲೇ ಉಂಟಾಗುತ್ತದೆಂದು ತಿಳಿಯತಕ್ಕದ್ದು.

ಸಕೃತ್ - ಈ ಪ್ರಪದನ ರೂಪಯೋಗಕ್ಕೂ ಧ್ಯಾನರೂಪಯೋಗಕ್ಕೂ ವ್ಯತ್ಯಾಸವುಂಟು. ಈ ಪ್ರಪತ್ತಿಯು ಸಕೃದನುಷ್ಠಿಸತಕ್ಕದ್ದು ; ಅದಾದರೋ ಅಸಕೃತ್, ಪದೇಪದೇ ದೇಹಾವಸಾನದವರಿವಿಗೂ ಅನುಷ್ಠಿಸತಕ್ಕದ್ದು ; ಇದು ಸಕೃದೇವ ಅನುಷ್ಠೇಯವೆಂಬುವದಕ್ಕೆ **"ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಯಂ ತಾರಯೇನ್ನರಂ"** ಮತ್ತು **"ತದ್ದ್ವಯಂ ಸಕೃದುಚ್ಚಾರೋ ಭವತಿ"** ಎಂಬ ಪ್ರಮಾಣಗಳುಂಟು. ಹಾಗೆಯೇ

(೧) ಗೀ. ೧೮-೧೪. (೨) ಗೀ. ೧೦-೧೦. (೩) ರಾಮಾ. ಅಯೋಧ್ಯಾ ೨೨-೨೨

"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ"

ಎಂಬದಾಗಿ ಶರಣಾಗತಿಯು ಸಕೃದನುಷ್ಠೇಯವೆಂದು ಹೇಳಿ ಶ್ರೀರಾಮನೇ ತನ್ನ ಸತ್ಯಸಂಕಲ್ಪತೆಯನ್ನು ತೋರ್ಪಡಿಸಿರುತ್ತಾನೆ. **ಪ್ರಖ್ಯಾತಃ** - ಹೀಗೆ ಶರಣಾಗತಿಮಾಹಾತ್ಮ್ಯೆಯನ್ನು ಬೋಧಿಸುವ ಶಾಸ್ತ್ರಗಳಲ್ಲಿ ಸರ್ವೇಶ್ವರನ ಸ್ವೋಕ್ತಿಯಿಂದಲೇ ಇದು ಜಗದ್ವಿಖ್ಯಾತವಾಗಿರುತ್ತದೆ. ವಾಲ್ಮೀಕ್ಯಾದಿ ಮಹರ್ಷಿಗಳೂ ಕೂಡ ರಾಮಾಯಣ ಪಾದ್ಮಪುರಾಣಾದಿಗಳಲ್ಲಿ ಸಕೃದನುಷ್ಠೇಯವಾದ ಈ ಪ್ರಪದನವನ್ನು ಕೊಂಡಾಡಿರುತ್ತಾರೆ. ಕಠಾದಿಶ್ರುತಿಗಳಲ್ಲೂ ಈ ಉಪಾಯವು ಮಹತ್ತಾದುದಾಗಿ ಹೇಳಲ್ಪಟ್ಟಿರುತ್ತದೆ. ಜಲಾಶಯದಲ್ಲಿ ಅವಗಾಹನ ಸ್ನಾನವೇ ಸ್ನಾನವಾಗಿ, ಮಂತ್ರಸ್ನಾನವು ಅದಕ್ಕೆ ಹೇಗೆ ಪ್ರತ್ಯಾಮ್ನಾಯವೋ, ಹಾಗೆಯೇ ಉಪಾಸನವೇ ಮೋಕ್ಷಕ್ಕೆ ಸಾಕ್ಷಾತ್ತಾದ ಉಪಾಸನವಾಗಿ ಈ ಪ್ರಪದನವು ಪ್ರತ್ಯಾಮ್ನಾಯವು ಎಂದು ಹೇಳಲಾಗುವದಿಲ್ಲವು. ಇದೂ ಕೂಡ ಒಂದು ಸಾಕ್ಷಾತ್ತಾದ ಮಾರ್ಗವೇ ಎಂದು ತಿಳಿಸುವದಕ್ಕಾಗಿ, ಇಲ್ಲಿ **ಪ್ರಖ್ಯಾತಃ** ಎಂದು ಪ್ರಯೋಗಿಸಿರಬಹುದು

ದ್ವಾಭ್ಯಾಂ ಅಪಾಯಯಾಥ್ವಿರತಿಃ - "ಆನುಕೂಲ್ಯೇತರಾಭ್ಯಾಂಸ್ತು ವಿನಿವೃತ್ತಿರಪಾಯತಃ" ಎಂಬ ಪ್ರಮಾಣಾನುಸಾರವಾಗಿ ಭಗವನ್ನಿಗ್ರಹವು ಉಂಟಾಗುವದಿಲ್ಲವು. ಇಲ್ಲಿ ಮುಖ್ಯವಾಗಿ ಅಪಾಯವು ಯಾವುದೆಂದರೆ ಭಗವನ್ನಿಗ್ರಹವೇ ಎಂದರಿಯತಕ್ಕದ್ದು.

ಅನಿತರೋಪಾಯತಾ ಏಕೇನ ಬೋಧ್ಯಾ - ಕಾರ್ಪಣ್ಯವೆಂಬ ಅಂಗದಿಂದ ಇತರ ಉಪಾಯಗಳು ಯಾವುದೂ ಸಾಧ್ಯವಿಲ್ಲವೆಂಬ ಪ್ರಯೋಜನ ಉಂಟಾಗುತ್ತದೆಂಬ ಭಾವವು. "ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೇರಿತಾ" ಎಂದು ಹೇಳಿರುವಹಾಗೆ ಇತರೋಪಾಯ ವಿನಿವೃತ್ತಿಯುಂಟಾಗುತ್ತದೆಂದು ತಿಳಿಯತಕ್ಕದ್ದು,

ಏಕೇನ ಸ್ವಾಂತದಾರ್ಢ್ಯಂ ನಿಜಭರವಿಷಯೇ ಬೋಧ್ಯಂ - ಅನಂತರ ಮಹಾ ವಿಶ್ವಾಸವೆಂಬಂಗದಿಂದುಂಟಾಗುವ ಪ್ರಯೋಜನವೇನೆಂದರೆ ಹೇಳುತ್ತಾರೆ. ಭರನ್ಯಾಸೋದ್ದೇಶದ ಫಲವನ್ನು ಹೊಂದುವ ವಿಷಯದಲ್ಲಿ ತಾನು ಹೊಂದಿಯೇ ಹೊಂದುವೆನೆಂಬ ಮನಃಸ್ಥೈರ್ಯವುಂಟಾಗುತ್ತದೆಂದು ಭಾವಿಸತಕ್ಕದ್ದು. ಮನಸ್ಸು ಚಲಿಸಿ ಅನ್ಯದೇವತಾ ಭಜನಾದಿಗಳಲ್ಲಿ ಪ್ರವರ್ತಿಸುವ ಬುದ್ಧಿಚಾಂಚಲ್ಯವನ್ನು ಈ ಅಂಗವು ಹೋಗಲಾಡಿಸುತ್ತದೆ. ಭರನ್ಯಾಸಾಧಿಕಾರಿಸ್ವರೂಪವಿರೋಧಿಗಳು ಮುಖ್ಯವಾಗಿ ಎರಡು. (೧) ಅನ್ಯದೇವತಾಭಜನವು, (೨) ಭಾಗವತಾಪಚಾರವು.

ಇವೆರಡರ ಸಂಬಂಧವುಂಟಾಗದಹಾಗೆ ಮುಮುಕ್ಷುವು ಕಾಪಾಡಿಕೊಳ್ಳಬೇಕು. ಇದೂ ಅಲ್ಲದೆ ಉಪಾಸನದಿಂದಲೇನೋ ಮೋಕ್ಷಪ್ರಾಪ್ತಿಯು, ಭರನ್ಯಾಸದಿಂದ ಅದು ಸಿದ್ಧಿಸುತ್ತದೋ ಇಲ್ಲವೋ ಎಂಬ ಸಂದೇಹ ಉಂಟಾಗದ ಹಾಗೂ ಈ ಮನೋದಾರ್ಢ್ಯವು ಕಾಪಾಡುತ್ತದೆ. ಇವೀಗ ವಿಶ್ವಾಸದಿಂದುಂಟಾಗುವ ಪ್ರಯೋಜನಗಳು. ಇಲ್ಲಿ ಅನ್ಯದೇವತಾಭಜನ ಭಾಗವತಾಪಚಾರಗಳಿಲ್ಲದಹಾಗೆ ಮಾಡುತ್ತದೆ ಎಂಬುವದರಿಂದ ಭರನ್ಯಾಸದ ಉತ್ತರಕಾಲದಲ್ಲಿ ಉಂಟಾಗುವ ಪ್ರಯೋಜನವು ಹೇಳಲ್ಪಟ್ಟಿತಲ್ಲಾ; ಹಾಗಾದರೆ ಇದೇನು ಉತ್ತರಕಾಲದಲ್ಲಿ ಅಂಗವೇ ಎಂದರೆ ಹಾಗಲ್ಲವು, ಭರನ್ಯಾಸವು ಸಕೃತ್ ಅನುಷ್ಠಿಸತಕ್ಕದ್ದಾಗಿ ಅದು ಸಾಂಗವಾಗಿ ಫಲಕಾರಿಯಾಗಲು ಸಂದೇಹವಿಲ್ಲದುದರಿಂದ ಅಂಗಗಳೆಲ್ಲಾ ಆ ಭರನ್ಯಾಸಕಾಲದಲ್ಲೇ ಆವಶ್ಯಕವಾಗಿ ಇರತಕ್ಕವುಗಳೇ ವಿನಾ, ಉತ್ತರಕಾಲದಲ್ಲಿ ಅಂಗರೂಪದಿಂದ ಪ್ರಯೋಜನವಾದವೆಂದು ಭಾವಿಸತಕ್ಕದ್ದಲ್ಲವು. ಆದರೆ ಆ ಭರನ್ಯಾಸಕಾಲದಲ್ಲಿದ್ದ ಅಂಗಗಳು, ಉತ್ತರಕಾಲದಲ್ಲೂ ಪ್ರಯೋಜನಕಾರಿಗಳಾಗಲು ಅಭ್ಯಂತರವಿಲ್ಲವು. ಭರನ್ಯಾಸ ಮಾಡಿದವನಿಗೆ ದೇಹವಿಯೋಗ ಕಾಲದಲ್ಲಿ ಅಂತಿಮ ಸ್ಮರಣಾದಿಗಳನ್ನುಂಟುಮಾಡಲು ಭರನ್ಯಾಸವು ಹೇಗೆ ಉಪಕಾರಕವಾಗುತ್ತದೋ ಹಾಗೆಯೇ ಈ ಕಾರ್ಪಣ್ಯವೂ, ತತ್ಕಾಲದಲ್ಲಿ ಆವಶ್ಯಕವಾಗಿ ಆ ಕಾಲದಲ್ಲಿ ಕೃಪಾಮಹೋದಧಿಯು "ಕಾರುಣ್ಯೋತ್ತಂಭನಾರ್ಥ"ವಾಗಿ ಪರಿಣಮಿಸಿ, ಅನಂತರ ಅನನ್ಯೋಪಾಯತ್ವಕ್ಕೆ ಉಪಯುಕ್ತವಾಗಬಹುದು. ಈ ಪ್ರಕಾರ ಮಹಾವಿಶ್ವಾಸವೂ ಕೂಡ ಭರನ್ಯಾಸಕ್ಕೆ ತಾತ್ಕಾಲಿಕ ಅಂಗವಾಗಿಯೇ ತಿಳಿಯತಕ್ಕದ್ದು. ಅನಂತರವೂ ಕೂಡ ಅದು ಸ್ವಾಂತದಾರ್ಢ್ಯದಲ್ಲಿ ನೆಲಸಲು ಉಪಯುಕ್ತವಾಗಿ ಪರಿಣಮಿಸಬಹುದು ಇವರಿಂದ ಉತ್ತರಕಾಲದಲ್ಲೂ ಅಂಗವೆಂದು ಭಾವಿಸತಕ್ಕದ್ದಲ್ಲವು.

ಅನ್ಯೇನ ನಿಜಭರ ವಿಷಯೇ ತತ್ಸಾಧ್ಯತೇಚ್ಛಾಬೋಧ್ಯಾ - "ಸ್ವಾಭಿಪ್ರಾಯ ನಿವೇದನ"ವೆಂದರೆ ತನ್ನ ಅಭಿಪ್ರಾಯವನ್ನು ಅರಿಕೆಮಾಡಿಕೊಳ್ಳುವದೆಂಬ ಗೋಪ್ತೃತ್ವವರಣದ ಪ್ರಯೋಜನವೇನೆಂದರೆ, ಈ ಭರನ್ಯಾಸದ ಫಲವು ಭಗವಂತನಿಂದಲೇ ಸಾಧಿಸತಕ್ಕದ್ದೆಂಬ ಪ್ರಾರ್ಥನೆಯು. ಆದುದರಿಂದ ಭಗವಂತನೇ ಇದನ್ನು ಸಾಧಿಸಿಕೊಡಬೇಕೆಂಬ ಅಪೇಕ್ಷೆಯನ್ನು ಉಂಟುಮಾಡುತ್ತದೆ ಎಂಬ ಭಾವವು.

ಹೀಗೆ ಪ್ರಪತ್ತಿರೂಪವಾದ ಭರನ್ಯಾಸರೂಪಯೋಗದ ಸಾಧಾರಣವಾದ ಐದು ಅಂಗಗಳಿಂದುಂಟಾಗುವ ಪ್ರಯೋಜನಗಳು ಉಪದೇಶಿಸಲ್ಪಟ್ಟವು. ಮುಂದೆ ನಿವೃತ್ತಿಧರ್ಮರೂಪವಾದ ಯೋಗದ ಅಸಾಧಾರಣಾಂಗದಿಂದುಂಟಾಗುವ ಪ್ರಯೋಜನವು ಹೇಳಲ್ಪಡುತ್ತದೆ :---

ಶಾಸ್ತ್ರಜ್ಞಾನದಿಂದ, ಈ ಸಪರಿಕರವಾದ ಯೋಗ ಫಲಸಿದ್ಧಿಯು **ತಾದಧೀನ್ಯಾದಿ** ಎಂದರೆ ಭಗವಂತನಿಗೆ ಅಧೀನವಾದುದೇ ಎಂಬಿವೇ ಮೊದಲಾದ ಅಭಿಪ್ರಾಯವುಂಟಾಗುತ್ತದೆ, ಇಲ್ಲಿ ಆದಿ ಪದದಿಂದ ಈ ಭರನ್ಯಾಸವು ಭಗವದರ್ಥವಾಗಿ, ಆತನು ಸುಪ್ರೀತನಾಗುವನೆಂಬ ಅಭಿಪ್ರಾಯವು ತೋರಿಬರುತ್ತದೆ. ಆ ಶಾಸ್ತ್ರಜ್ಞಾನವೆಂಥಾದ್ದೆಂದರೆ :—"ಅನ್ತಃ **ಪ್ರವಿಷ್ಟ ಶ್ಶಾಸ್ತಾ ಜನಾನಾಂ ಸರ್ವಾತ್ಮಾ**" (ತೈ. ೩.೧೧.೧೦) ಸಮಸ್ತರಿಗೂ ಆತ್ಮಾವಾಗಿ, ಅನುಪ್ರವೇಶಮಾಡಿದವನಾಗಿ, ವಿಧಿನಿಷೇಧರೂಪವಾಕ್ಯಗಳ ಮೂಲಕ ಎಲ್ಲರನ್ನೂ ನಿಯಮಿಸುವನು. **ಯ ಆತ್ಮಾನ ಮನ್ತರೋ ಯಮಯತಿ** (ಮಾಧ್ಯನ್ದಿನಪಾಠೆ ಬೃ ೫.೭,೨೨) ಯಾವ ಪರಮಾತ್ಮನು ಜೀವಾತ್ಮನಿಗೆ ಅಂತರ್ಯಾಮಿಯಾಗಿ ಆತನನ್ನು ನಿಯಮಿಸುವನೋ, "**ಏಷತ ಆತ್ಮಾ ಅನ್ತರ್ಯಾಮ್ಯಮೃತಃ**" "ಈ ಪರಬ್ರಹ್ಮವು ನಿನಗೆ ಆತ್ಮಾವಾಗಿ ಅನ್ತರ್ಯಾಮಿಯಾಗಿದ್ದಾನೆ". **ಯಸ್ಯಾತ್ಮಾ ಶರೀರಂ**" ಯಾವ ಪರಮಾತ್ಮನಿಗ ಜೀವಾತ್ಮನು ಶರೀರವೋ, **ಏಷ ಏವ ಸಾಧುಕರ್ಮಕಾರಯತಿ ತಂ ಯಮೇಭ್ಯೋ ಲೋಕೇಭ್ಯ ಉನ್ನಿನೀಷತಿ**" (ಕೌ.೩.೯) ಯಾವನನ್ನು ಈ ಲೋಕದಿಂದ ಮೇಲಕ್ಕೆ ಎತ್ತಬೇಕೆಂದು ಸರ್ವೇಶ್ವರನು ಸಙ್ಕಲ್ಪಿಸುತ್ತಾನೋ ಆತನಿಂದ ಒಳ್ಳೇಕರ್ಮಗಳನ್ನು ಮಾಡಿಸುತ್ತಾನೆ, ಎಂಬೀ ಶ್ರುತಿಗಳು ಮೇಲಿನ ಅಭಿಪ್ರಾಯವನ್ನು ಬೋಧಿಸುತ್ತವೆ. ಹಾಗೆಯೇ ಸ್ಮೃತಿಯೂ ಕೂಡ ಉಪಪಾದಿಸುತ್ತದೆ

(೧) "**ಈಶ್ವರಸ್ಸರ್ವಭೂತಾನಾಂಹೃದ್ದೇಶೇರ್ಜುನ ತಿಷ್ಠತಿ ।**
ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ॥

ಈಶ್ವರಃ - ಸಮಸ್ತರನ್ನೂ ನಿಯಮಿಸುವ ಸ್ವಭಾವವುಳ್ಳ ವಾಸುದೇವನು, ಸಮಸ್ತ ಭೂತಗಳ ಎಂದರೆ ಪ್ರಾಣಿಗಳ, **ಹೃದ್ದೇಶೇ** - ಸಕಲ ಪ್ರವೃತ್ತಿ ನಿವೃತ್ತಿಗಳಿಗೂ ಮೂಲವಾದ ಜ್ಞಾನವನ್ನುಂಟುಮಾಡುವ ಸ್ಥಳದಲ್ಲಿ, **ತಿಷ್ಠತಿ** - ಇರುತ್ತಾನೆ **ಯನ್ತ್ರಾರೂಢಾನಿ ಸರ್ವಭೂತಾನಿ ಮಾಯಯಾ ಭ್ರಾಮಯನ್** - ದೇಹೇಂದ್ರಿಯರೂಪವಾಗಿರುವ ಪ್ರಕೃತಿ ಎಂಬ ಯಂತ್ರವನ್ನು ಆರೋಹಣಮಾಡಿರುವ ಸಮಸ್ತ ಪ್ರಾಣಿಗಳನ್ನು. **ಭ್ರಾಮಯನ್ ತಿಷ್ಠತಿ** - ಅವರವರುಗಳ ಕರ್ಮಾನುಗುಣವಾಗಿ ಕರ್ಮಪ್ರವೃತ್ತಿಗಳಲ್ಲಿ ಸುತ್ತಿಸುವನಾಗಿ ಅಲ್ಲಿ ಇರುವನು. **ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟೋ ಮತ್ತಃ ಸ್ಮೃತಿ ಜ್ಞಾನ ಮಪೋಹನಂಚ**" [ಗೀ. ೧೫. ೧೫] ಸಮಸ್ತ ಪ್ರಾಣಿಗಳ ಪ್ರವೃತ್ತಿ ನಿವೃತ್ತಿಗಳಿಗೆ ಬೇಕಾದ ಜ್ಞಾನಕ್ಕೆ ಆವಾಸವಾದ ಹೃದಯದಲ್ಲೂ ನಾನು ಅಂತರ್ಯಾಮಿಯಾಗಿರುವೆನು,

(೧) ಗೀ ೧೮. ೬೧.

ನನ್ನಿಂದಲೇ ಸಮಸ್ತರುಗಳ ಸ್ಮೃತಿಯೂ ಎಂದರೆ ಹಿಂದೆ ಅನುಭವಿಸಿದ ವಿಷಯದ ಅನುಭವ ಸಂಸ್ಕಾರದಿಂದುಂಟಾದ ಜ್ಞಾನವೂ, **ಜ್ಞಾನಂ** - ಪ್ರತ್ಯಕ್ಷಾನುಮಾನ ಶಾಬ್ದಗಳಿಂದುಂಟಾಗುವ ಜ್ಞಾನವು, **ಅಪೋಹನಂಚ** - ವಿಸ್ಮೃತಿಯೂ ಸಹ, **ಉಂಟಾಗುತ್ತದೆ.**

"ಅಹಂ ಸರ್ವಸ್ಯಪ್ರಭವೋಮತ್ತಸ್ಸರ್ವಂ ಪ್ರವರ್ತತೇ" (ಗೀ. ೧೦. ೮) "ನಾನು ಸಮಸ್ತವಾದ ವಿಚಿತ್ರ ಚಿದಚಿತ್ಪ್ರಪಂಚಕ್ಕೆ ಕಾರಣಭೂತನು, ನನ್ನಿಂದಲೇ ಸಮಸ್ತ ವಿಧವಾದ ಪ್ರವೃತ್ತಿ ನಿವೃತ್ತಿಯೂ ಉಂಟಾಗುತ್ತವೆ.

"ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।
ವಿವಿಧಾಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಂ ।
ಶರೀರವಾಙ್ಮನೋಭಿರ್ಯತ್ ಕರ್ಮಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂವಾ ಪಂಚೈತೇ ತಸ್ಯಹೇತವಃ" ॥
(ಗೀ. ೧೮-೧೪, ೧೫)

ಶಾಸ್ತ್ರವಿಹಿತವಾಗಿಯೇ ಆಗಲಿ ಅಥವಾ ಶಾಸ್ತ್ರವಿರುದ್ಧವಾಗಿಯೇ ಆಗಲಿ ಅನುಷ್ಠಿಸಲ್ಪಟ್ಟ ಕರ್ಮಕ್ಕೆ ಐದು ಕಾರಣಗಳುಂಟು ; (೧) **ಅಧಿಷ್ಠಾನಂ** - ಜೀವಾತ್ಮನು ಹೊಂದಿರುವ ಶರೀರವು, (೨) **ಕರ್ತಾ** - ಕರ್ತೃವಾದ ಜೀವಾತ್ಮನು (೩) **ಪೃಥಗ್ವಿಧಂ ಕರಣಂಚ** - ನಾನಾಬಗೆಯಾದ ಎಂದರೆ ಕರ್ಮೇಂದ್ರಿಯ, ಜ್ಞಾನೇಂದ್ರಿಯ ಮನಸ್ಸುಗಳಾದ ಏಕಾದಶೇಂದ್ರಿಯಗಳು (೪) **ವಿವಿಧಾಚ ಪೃಥಕ್ಚೇಷ್ಟಾ** - ಪಂಚಪ್ರಾಣ ವಾಯುವಿನ ವಿವಿಧವಾದ ಬೇರೆಬೇರೆಯಾದ ವ್ಯಾಪಾರವೂ, (೫) **ಅತ್ರ** - ಈ ಕರ್ಮಹೇತುಗಳಲ್ಲಿ **ದೈವಮೇವಚ ಪಂಚಮಂ** - ಈತನ ಕರ್ಮಾನುಸಾರ ಪ್ರೇರಿಸುವ ಈಶ್ವರನೇ ಐದನೇದಾದ ಮುಖ್ಯವಾದಕಾರಣವು. ಇದನ್ನೇ ಬಾದರಾಯಣರು ಪರಾತ್ತುತಚ್ಛ್ರುತೇಃ ಎಂಬ ಸೂತ್ರಮೂಲಕವ್ಯಕ್ತಪಡಿಸಿರುತ್ತಾರೆ.

ಹೀಗೆ ಸಮಸ್ತ ಕರ್ಮಗಳೂ ಸರ್ವೇಶ್ವರನಿಗೆ ಅಧೀನವಾದುವಾಗಿ ಜೀವಾತ್ಮನು ಪರತಂತ್ರನಾದರೆ, ಶಾಸ್ತ್ರಗಳ ವಿಧಿನಿಷೇಧ ವಾಕ್ಯಗಳ ವೈಯರ್ಥ್ಯವು ಉಂಟಾಗುವದಿಲ್ಲವೇ ? ಸರ್ವೇಶ್ವರನು ಈತನನ್ನು ಶಾಸ್ತ್ರೋಲ್ಲಂಘನಕ್ಕಾಗಿ ಶಿಕ್ಷಿಸುವದು ಅನ್ಯಾಯವಲ್ಲವೋ ಎಂದರೆ ಇಂತಹ ಆಕ್ಷೇಪಗಳು ಪ್ರಾಪ್ತವಾಗುತ್ತವೆಂದು ಭಾವಿಸಿಯೇ ಶ್ರೀ ವ್ಯಾಸಮಹರ್ಷಿಯು ಮುಂದಿನ ಸೂತ್ರವಾದ **"ಕೃತಪ್ರಯತ್ನಾಪೇಕ್ಷಸ್ತು ವಿಹಿತಪ್ರತಿಷಿದ್ಧಾವೈಯರ್ಥ್ಯಾದಿಭ್ಯಃ"** ಎಂಬುದರ ಮೂಲಕ ಸಮಾಧಾನವನ್ನು ಹೇಳಿರುತ್ತಾರೆ. ಈ ಪರಮಾತ್ಮಾಧೀನವಾದ **ಕರ್ತೃತ್ವವಾದರೂ?** ಜೀವಾತ್ಮನ ಸ್ವಬುದ್ಧಿಯಿಂದ ಮಾಡಲ್ಪಟ್ಟ **ಪ್ರಯತ್ನವನ್ನು ಅಪೇಕ್ಷಿಸುತ್ತದೆ.** ಆ ಪ್ರಯತ್ನವು ಶಾಸ್ತ್ರಚೋದಿತ ವಿಧಿ

ನಿಷೇಧವಾಕ್ಯಗಳಿಗನುಸಾರವಾದುದಾಗಿರಬೇಕು. ಹೀಗಿದ್ದರೆ ಭಗವದನುಗ್ರಹವೂ ವಿಪರೀತವಾದುದಾದರೆ ಭಗವನ್ನಿಗ್ರಹವೂ ಸಹ ಸಮಂಜಸವಾದುವೇ ಎಂದು ತಿಳಿಯಬೇಕು.

ಇಂತಹ ಅನೇಕ ಶಾಸ್ತ್ರಪ್ರಮಾಣಗಳ ಮೂಲಕ ತಾದಧೀನ್ಯ ಬುದ್ಧಿಯುಂಟಾಗುತ್ತದೆ. ಈ ಪ್ರಪದನಾನುಷ್ಠಾನದಲ್ಲಿ ತನಗೆ ಕರ್ತೃತ್ವವಿಲ್ಲವು, ಅದು ಆತನಿಗೇ ಸೇರಿದುದು ಎಂಬ ಭಾವವು ಈ ಮೇಲಿನ ಶಾಸ್ತ್ರಜ್ಞಾನದಿಂದುಂಟಾಗುತ್ತದೆಂಬಭಿಪ್ರಾಯವು. ಯಾವಾಗ ಕರ್ತೃತ್ವವು ಅವನಿಗೇ ಸೇರಿದುದೋ ಫಲವೂ ಕೂಡ ಆತನಿಗೇ ಸೇರಿದುದು ಎಂಬುವದು ಸುವ್ಯಕ್ತವು. ಹೀಗೆ ಕರ್ತೃತ್ವತ್ಯಾಗ ಮತ್ತು ಫಲಸಂಗತ್ಯಾಗ ಬುದ್ಧಿಯಿಂದ ಪ್ರಪದನವು ಅನುಷ್ಠಿಸಲ್ಪಡತಕ್ಕದ್ದೆಂಬ ಭಾವವು. ಹಿಂದೆ ಹೇಳಿದ ಐದು ಅಂಗಗಳಿಗೂ, ಆರನೇ ಅಂಗವೆಂದು ಕೆಲವರು ಹೇಳುವ ಈ ಅಂಗಕ್ಕೂ ತುಂಬಾ ವೈಲಕ್ಷಣ್ಯವುಂಟೆಂದು ತೋರಿಸುವದಕ್ಕಾಗಿ. **ತತ್ತ್ವಜ್ಞಾನಪ್ರಯುಕ್ತಾತು** ಎಂಬಲ್ಲಿ **ತು** ಎಂಬ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಹೀಗೆ ಇದಕ್ಕೆ ವೈಲಕ್ಷಣ್ಯವೆಂದರೆ, ಮುಮುಕ್ಷುವಿಗೆ ಯಾವ ಕರ್ಮದಲ್ಲಾಗಲಿ ಫಲದಲ್ಲಾಗಲಿ ಸಂಗ ಕೂಡದಾದ ಪ್ರಯುಕ್ತ ಇದಕ್ಕೆ ವೈಲಕ್ಷಣ್ಯವು; ಇದು ಸಮಸ್ತ ನಿತ್ಯನೈಮಿತ್ತಿಕ ಕರ್ಮಗಳಿಗೂ ಸಾಧಾರಣವಾದುದು.

ಹೀಗೆ ಈ ಶ್ಲೋಕದ ಮೂಲಕ ಪ್ರಪದನ ಪರಿಕರಗಳು ಎಂದರೆ ಅಂಗಗಳ ಪ್ರಯೋಜನಗಳು ಉಪದೇಶಿಸಲ್ಪಟ್ಟವು.

ಇಂತು

ಶ್ರೀಮದ್ರಹಸ್ಯತ್ರಯಸಾರದ

ಹನ್ನೊಂದನೆಯ **ಪರಿಕರವಿಭಾಗಾಧಿಕಾರಕ್ಕೆ**

ತಿರುನಾರಾಯಣಪುರಂ ವಿಜಯರಾಘವ ಶರ್ಮನ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ



ಅಥ ಸಾಙ್ಗಪ್ರಪದನಾಧಿಕಾರಃ. ೧೨.

ಅಭೀಷ್ಟೇ ದುಸ್ಸಾಧೇ ಸ್ವತ ಇತರತೋವಾ ಕ್ವಚನತತ್ ।
ಭರನ್ಯಾಸಂ ಯಾಚ್ಞಾನ್ವಿತ ಮಭಿವದನ್ತಿ ಪ್ರಪದನಂ ।

ಹಿಂದಿನ ಅಧಿಕಾರದಲ್ಲಿ ಪ್ರಪದನದ ಪರಿಕರಗಳೂ ಎಂದರೆ ಅಂಗಗಳೂ ಅವುಗಳ ಲಕ್ಷಣಗಳೂ ಪ್ರಯೋಜನಗಳೂ ವಿಶದವಾಗಿ ಉಪದೇಶಿಸಲ್ಪಟ್ಟವು. ಈ ಅಧಿಕಾರದಲ್ಲಿ ಅಂಗಿಯಾವುದೆಂದೂ ಅದರ ಸ್ವರೂಪಲಕ್ಷಣಗಳು ಯಾವುವು ಎಂದೂ ಎಂದರೆ ಅದಕ್ಕೆ ಅಸಾಧಾರಣವಾದ ಲಕ್ಷಣ ಯಾವುದೆಂದೂ ಅದನ್ನು ಸಾಂಗವಾಗಿ ಅನುಷ್ಠಿಸುವ ಕ್ರಮವೂ ಹೇಗೆ ಎಂದೂ ಉಪದೇಶಿಸಲ್ಪಡುತ್ತವೆ.

ಅರ್ಥ – **ಅಭೀಷ್ಟೇ** – ತನಗೆ ಅಪೇಕ್ಷಿತವಾದ ಫಲವು, ಅದು ಯಾವುದೆಂದರೆ ಸುಖಪ್ರಾಪ್ತಿ ದುಃಖನಿವೃತ್ತಿಯಾಗಲಿ ಅಥವಾ ಇವುಗಳಿಗೆ ಸಾಧನವಾಗಲಿ ಆಗಬಹುದು. **ಸ್ವತಃ** – ತನ್ನ ಮೂಲಕವಾಗಿಯೋ ಆಗಲಿ **ಇತರತೋವಾ** – ಬೇರೆ ಇತರರ ಮೂಲಕವಾಗಿಯೋ ಆಗಲಿ, **ದುಸ್ಸಾಧೇಸತಿ** – ಸಾಧಿಸಲು ಸಾಧ್ಯವಿಲ್ಲದೆ ಹೋಗಲು, **ಕ್ವಚನ** – ಯಾರನ್ನಾದರೂ ಒಬ್ಬ ಸಮರ್ಥನನ್ನು, **ಯಾಚ್ಞಾನ್ವಿತಂ** – ನೀನು ಉಪಾಯವಾಗಿರು ಎಂಬ ರಕ್ಷಾಪ್ರಾರ್ಥನೆಯಿಂದ ಕೂಡಿದ, **ತದ್ಭರನ್ಯಾಸಂ** ತನಗೆ ಅಭಿಲಾಷೆಯುಳ್ಳ ಫಲವನ್ನುಂಟುಮಾಡುವವನ ಭರವನ್ನಿಡುವುದನ್ನು, **ಪ್ರಪದನಂ** – ಪ್ರಪದನವೆಂಬದಾಗಿ, ಅಭಿ

ವದನ್ತಿ - ಹೇಳುತ್ತಾರೆ. ಯಾರು ಎಂದು ಕರ್ತೃಪದವು ಇಲ್ಲಿ ಹೇಳಲ್ಪಡಲಿಲ್ಲವು ಈ ಅಭಿಪ್ರಾಯವು ಭರತಮುನಿಯ ವಾಕ್ಯವಾದ

" ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ ॥ "

ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುವುದರಿಂದ, ಭರತಮುನಿಯೇ ಮೊದಲಾದ ತತ್ವಜ್ಞರು ಎಂದು ಕರ್ತೃಪದವನ್ನಿಟ್ಟುಕೊಳ್ಳತಕ್ಕದ್ದು. ಪ್ರಪದನವೆಂದರೆ ಶರಣಾಗತಿಯು; ಶರಣಾಗತಿ ಶಬ್ದಕ್ಕೆ ಲಕ್ಷಣವನ್ನು ಭರತಮುನಿಯ ಮೇಲಿನ ವಾಕ್ಯವೂ ಮತ್ತು ಅಹಿರ್ಬುಧ್ನ್ಯಸಂಹಿತೆಯ

" ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ ಪ್ರಯುಜ್ಯತಾಂ "

ಎಂಬ ವಾಕ್ಯವೂ ಸಹ ಬೋಧಿಸುತ್ತವೆ. ಇವುಗಳನ್ನನುಸರಿಸಿ ಶ್ರೀ ನಿಗಮಾನ್ತ ದೇಶಿಕರವರೂ ಪ್ರಪದನ ಶಬ್ದಕ್ಕೆ ಲಕ್ಷಣವನ್ನು ಈ ಶ್ಲೋಕಮೂಲಕ ಉಪಪಾದಿಸಿರುವುದರಿಂದ ಇಂತಹ ತತ್ವಜ್ಞರಾದ ಭರತಮುನಿ ಮೊದಲಾದವರೆಂದು ಕರ್ತೃಪದವನ್ನಿಟ್ಟುಕೊಳ್ಳತಕ್ಕದ್ದು. ಇಲ್ಲಿ **ಸ್ವತ ಇತರತೋವಾ** - ಎಂಬುವದು **ಅಭೀಷ್ಟೇ ದುಸ್ಸಾಧೇ** ಎಂಬುವದರೊಂದಿಗೆ ಅನ್ವಯಿಸಿರುತ್ತದೆ ಭರತಮುನಿವಾಕ್ಯವಾದ, ಅನನ್ಯಸಾಧ್ಯೇ- ಎಂಬುವದರ ವ್ಯಾಖ್ಯಾನವೇ **ಸ್ವತ ಇತರತೋವಾ ದುಸ್ಸಾಧೇ** ಎಂಬುವದಾಗಿರುತ್ತದೆಯಾದುದರಿಂದ, ಹೀಗೆ ಅನ್ವಯಿಸುವದೇ ಆ ಶ್ಲೋಕಾಭಿಪ್ರಾಯವಾಗಿ ತೋರುತ್ತದೆ. ಇದೀಗ ಸಾರಾಸ್ವಾದಿನಿಸಾರ ಪ್ರಕಾಶಿಕಾ ವ್ಯಾಖ್ಯಾತೃಗಳಭಿಪ್ರಾಯವು. ಆದರೆ ಸಾರದೀಪಿಕಾ ಮತ್ತು ಸಾರ ವಿವರಣೆ ವ್ಯಾಖ್ಯಾತೃಗಳು - **ಸ್ವತಃ ಇತರತೋವಾ**-ಎಂಬುವದನ್ನು **ಭರನ್ಯಾಸ**ದೊಂದಿಗೆ ಅನ್ವಯಿಸಿರುತ್ತಾರೆ. ಆಗ **ಸ್ವತಃ** ಎಂದರೆ ತಾನಾಗಿಯೇ ಆಗಲಿ ಅಥವಾ **ಇತರತೋವಾ** - ಆಚಾರ್ಯಮುಖವಾಗಿಯಾಗಲಿ ಮಾಡಿದ ರಕ್ಷಾಪೇಕ್ಷೆಯ ಪ್ರಾರ್ಥನೆಯೊಂದಿಗೆ ಮಾಡುವ ಭರನ್ಯಾಸವನ್ನೇ ಪ್ರಪದನವೆಂದು ತತ್ವಜ್ಞರು ಹೇಳುತ್ತಾರೆ ಎಂದು ಅರ್ಥಮಾಡಿರುತ್ತಾರೆ ಪ್ರಪದನಾನುಷ್ಠಾನವನ್ನು ಸ್ವತಃ ತಾನೇ ಅನುಷ್ಠಿಸಬಹುದು; ಅಥವಾ ಇತರತೋವಾ ಆಚಾರ್ಯಮೂಲಕವಾಗಿಯಾಗಲಿ ಅನುಷ್ಠಿಸಬಹುದು; ಎಂಬೀ ಅಭಿಪ್ರಾಯಗಳು ಇದರಿಂದ ಸೂಚಿತವಾಯಿತು ಶ್ರೀ ನಿಗಮಾನ್ತ ದೇಶಿಕರವರಿಗೆ, ಈ **ಸ್ವತ ಇತರತೋವಾ** ಎಂಬ ಪ್ರಯೋಗವು ಎರಡು ಕಡೆಗೂ ಅನ್ವಯಿಸತಕ್ಕದುದರಲ್ಲಿ ಅಭಿಪ್ರಾಯವಿರಬಹುದಾದುದರಿಂದ, ಈ **ಸ್ವತ ಇತರತೋವಾ** ಎಂಬುವದನ್ನು ಪಾದಮಧ್ಯದಲ್ಲಿಟ್ಟಿರುವದರಿಂದ ಎರಡು ಕಡೆಗೂ ಅನ್ವಯಿಸತಕ್ಕದಾಗಿರುತ್ತದೆ.

ಇತಃ ಪಶ್ಚಾದಸ್ಮದ್ಯತನ ನಿರಪೇಕ್ಷೇಣ ಭವತಾ ।
ಸಮುರ್ಥ್ಯೋ ಸಾವರ್ಥಸ್ತ್ವಿತಿ ಮತಿ ವಿಶೇಷಸ್ತದ(ತಮ)ವಿದುಃ ॥೨೮॥

ಪೂರ್ವಾರ್ಧದ ಸರಿಯಾದಭಿಪ್ರಾಯವೇನೆಂಬುವದನ್ನು ಉತ್ತರಾರ್ಧದಿಂದ ವಿಶದೀಕರಿಸುತ್ತಾರೆ.

ಇತಃ ಪಶ್ಚಾತ್ - ಈ ಕ್ಷಣದಿಂದ ಮುಂದಿನ ಕ್ಷಣದಲ್ಲಿ ಎಂದರೆ ಉತ್ತರ ಕ್ಷಣದಲ್ಲಿ, **ಅಸ್ಮದ್ಯತನ ನಿರಪೇಕ್ಷೇಣ** ಈ ದಾಸನಾದ ನನ್ನ ಯಾವುದೊಂದು ಪ್ರಯತ್ನದಪೇಕ್ಷೆಯಿಲ್ಲದೇನೇ, **ಅಸೌ ಅರ್ಥಸ್ತು** - ನನಗೆ ದುಸ್ಸಾಧವಾದ ಮತ್ತು ನನಗೆ ಅಭಿಲಾಷೆಯುಳ್ಳ ಫಲರೂಪಪ್ರಯೋಜನವಾದರೋ, **ಭವತಾ** - ಪರಮಕಾರುಣಿಕನಾಗಿಯೂ ಸಮರ್ಥನಾಗಿಯೂ ಇರುವ ನಿನ್ನಿಂದಲೇ, **ಸಮರ್ಥ್ಯಃ**- ಸಾಧಿಸತಕ್ಕದ್ದಾಗಿರುತ್ತದೆ, **ಇತಿ** - ಎಂಬ, **ಮತಿ ವಿಶೇಷಃ** - ಜ್ಞಾನವಿಶೇಷವು ಎಂಬದಾಗ, **ತತ್** - ಆ ಪ್ರಪದನವನ್ನು ಅಥವಾ, **ತಂ**-ಆಭರನ್ಯಾಸವನ್ನು **ಅವಿದುಃ** – ತಿಳಿದರು. ಭರನ್ಯಾಸಕ್ಕಿಂತ ವ್ಯತಿರಿಕ್ತವಾದ ನನ್ನ ಯಾವುದೊಂದು ಪ್ರಯತ್ನದ ಅಪೇಕ್ಷೆಯೂ ಇಲ್ಲದೆ ನಿನ್ನಿಂದಲೇ ಈ ನಮ್ಮ ಅಭೀಷ್ಟವಿಶೇಷವು ಸಾಧಿಸಲ್ಪಡತಕ್ಕದ್ದೆಂದು, ಆ ಸಾಧಿಸಿಕೊಡುವ ಭರವನ್ನು ನಿನ್ನಲ್ಲಿ ಸಮರ್ಪಿಸುತ್ತೇನೆಂಬ ಬುದ್ಧಿವಿಶೇಷವೇ ಪ್ರಪದನವೆಂದು ತಿಳಿದರು ಎಂಬ ಭಾವವು. ಯಾರುತಿಳಿದರೆಂದರೆ, ಮೇಲೆಹೇಳಿದ ಭರತಮುನಿ ಮೊದಲಾದ ತತ್ವಜ್ಞರೆಂಬ ಭಾವವು

ತಾತ್ಪರ್ಯ— ಪ್ರಪದನ ಶಬ್ದವೆಂದರೇನೆಂಬುವದನ್ನು ವಿಶದವಾಗಿ ತಿಳಿಸುವದಕ್ಕಾಗಿ ಅನುಗ್ರಹಿಸಿದ ಶ್ಲೋಕವಾಗಿರುತ್ತದೆ. **ಪ್ರಪದನ** ಶಬ್ದಲಕ್ಷಣವನ್ನು ಬೋಧಿಸುವ ವಾಕ್ಯಗಳು **ಅನನ್ಯಸಾಧ್ಯೇ** ಎಂಬ ಭರತಮುನಿಯ ವಾಕ್ಯವೂ, ಮತ್ತು " **ತ್ವಮೇವೋ ಪಾಯ ಭೂತೋಮೇ** " ಎಂಬ ಅಹಿರ್ಬುಧ್ನ್ಯ ಸಂಹಿತಾವಾಕ್ಯವೂ. ಈ ವಾಕ್ಯಗಳ ಸಿಷ್ಕಾರ್ಷಾಭಿಪ್ರಾಯವೇನೆಂದರೆ ತಿಳಿಸುತ್ತಾರೆ. ಶ್ರೀ ಭರತಮುನಿ ವಾಕ್ಯದ ಅರ್ಥವೇನೆಂದರೆ:—**ಅನನ್ಯಸಾಧ್ಯೇ** - ಭಗವಂತನ ವಿನಾ ಇನ್ನಾರಿಂದಲೂ ಸಾಧಿಸಲು ಸಾಧ್ಯವಲ್ಲದ, **ಸ್ವಾಭೀಷ್ಟೇ** - ತನಗಭಿಮತವಾದ ಫಲದಲ್ಲಿ, **ಮಹಾವಿಶ್ವಾಸಪೂರ್ವಕಂ** - ತನ್ನ ಅಭಿಮತ ಫಲವನ್ನು ಸಾಧಿಸಿಕೊಡುವನೆಂಬ ಪೂರ್ಣ ನಂಬಿಕೆಯೊಡನೆ, **ತದೇಕೋಪಾಯತಾ** - ಆ ಭಗವಂತನೇ ಮುಖ್ಯವಾದ ಸಿದ್ಧೋಪಾಯನೆಂಬ ಭಾವವುಳ್ಳ, **ಯಾಚ್ಞಾ** - ರಕ್ಷಾಪೇಕ್ಷೆಮಾಡ, **ಪ್ರಪತ್ತಿಃ** - ಭರನ್ಯಾಸವು, **ಶರಣಾಗತಿಃ** - ಶರಣಾಗತಿಯು. **ಅನನ್ಯಸಾಧ್ಯೇ** - ಎಂಬಲ್ಲಿರುವಭಿಪ್ರಾಯವು, **ಸ್ವತ ಇತರತೋವಾ ದುಸ್ಸಾಧೇ**-

ಎಂಬದಾಗಿ ವ್ಯಾಖ್ಯಾನಮಾಡಲ್ಪಟ್ಟಿತು. **ಮಹಾವಿಶ್ವಾಸಪೂರ್ವಕಂ** ಎಂಬು
ವದರಲ್ಲಿರುವ ಅಭಿಪ್ರಾಯವು, **ಕ್ವಚನ** ಎಂಬ ಪದದರ್ಥದಲ್ಲಿ ಗರ್ಭೀಕರಿಸಲ್ಪಟ್ಟಿ
ರುತ್ತದೆ. ವಿಶ್ವಾಸವಿರಬೇಕಾದರೆ, **ಸಂಪೂರ್ಣ** ಸಾಮರ್ಥ್ಯವು ಸಿದ್ಧೋಪಾಯ
ನಲ್ಲಿರಬೇಕಷ್ಟೇ. **ಯಾಚ್ಞಾ ಪ್ರಪತ್ತಿಃ** ಎಂಬುವದರಭಿಪ್ರಾಯವು, **"ಭರ
ನ್ಯಾಸಂ ಯಾಚ್ಞಾನ್ವಿತಂ ಅಭಿವದನ್ತಿ ಪ್ರಪದನಂ"** ಎಂಬ ವಾಕ್ಯದ
ಮೂಲಕ ಉಪಪಾದಿಸಲ್ಪಟ್ಟಿತು. ಈ ಭರತಮುನಿಯ ವಾಕ್ಯದಿಂದ ಪ್ರಪದನವು
ಯಾಚ್ಞೆಯೆಂದು ಹೇಳಲ್ಪಟ್ಟಿತು. ಹೀಗೆ ಹೇಳುವದರಭಿಪ್ರಾಯವೇನೆಂಬುವದನ್ನು
ಉತ್ತರಾರ್ಧದಿಂದ ಸ್ಪಷ್ಟೀಕರಿಸಿ ಹೇಳುತ್ತಾರೆ. **ಅಸ್ಮದ್ಯತ್ನ ನಿರಪೇಕ್ಷೇಣ** -
ನನ್ನ ಯಾವುದೊಂದೂ ಇತರ ಪ್ರವೃತ್ತಿಗಳಪೇಕ್ಷೆಗಳಿಲ್ಲದೆ, ನನ್ನ ಮನೋಭೀಷ್ಟ
ವು, ಭವತಾ **ಸಮರ್ಥ್ಯಃ** - ನಿನ್ನಿಂದಲೇ ಸಾಧಿಸತಕ್ಕದ್ದೆಂಬ ಭರವನ್ನು
ನಿನ್ನಲ್ಲೇ ಸಮರ್ಪಿಸಿರುತ್ತೇನೆಂಬ **ಮತಿವಿಶೇಷವೇ** ಪ್ರಪದನವೆಂದು ಪ್ರಾಜ್ಞರು
ತಿಳಿದುಕೊಂಡರೆಂದುಪದೇಶಿಸಿರುತ್ತಾರೆ. ಭರತಮುನಿಗಳು ಯಾಚ್ಞೆಯೇ ಪ್ರಪ
ದನವೆಂದೂ ಇವರು ಇದೊಂದು ಬುದ್ಧಿವಿಶೇಷವೆಂದೂ ಹೇಳುವದು ಪರಸ್ಪರ
ಭಿನ್ನಾಭಿಪ್ರಾಯಗಳಲ್ಲವೇ ಎಂದರೆ ಹಾಗೆ ಭಿನ್ನಾಭಿಪ್ರಾಯಗಳಲ್ಲವೆಂಬ ಭಾವವು.
ಹೇಗೆಂದರೆ, **ಯಾಚ್ಞಾರೂಪಪ್ರಪತ್ತಿ** ಎಂದು ಯಾವಾಗ ಹೇಳಲ್ಪಟ್ಟಿತೋ
ಆಗ ಪ್ರಪತ್ತಿಶಬ್ದದಿಂದ ಭವತಾ **ಸಮರ್ಥ್ಯಃ** - ಎಂಬ ಭರನ್ಯಾಸಾರ್ಥವೂ,
ಮತ್ತು ಯಾವಾಗ ಯಾಚ್ಞಾ ಶಬ್ದವು ಇಲ್ಲಿ ಉಪಯೋಗಿಸಲ್ಪಟ್ಟಿತೋ ಆಗ ಅದು
ಬರೀ ವಾಚಕರೂಪವಾದುದಲ್ಲವೆಂದೂ ಆ ಯಾಚ್ಞೆಯು **ಭವತಾಸಮರ್ಥ್ಯಃ**
ಎಂಬ ಹೇಳಿದುದರಿಂದ ಜ್ಞಾನರೂಪವಾದುದೆಂದೂ ಉಪದೇಶಿಸಲ್ಪಟ್ಟಿತು.
ಆದುದರಿಂದಲೇ ಇಲ್ಲಿ ಅರ್ಥಸ್ತು ಎಂದು ತು ಶಬ್ದವನ್ನುಪಯೋಗಿಸಿರುತ್ತಾರೆ.
ಇಂತಹ ವಿರೋಧಶಂಕೆಗೆ ಆಸ್ಪದವೇ ಇಲ್ಲವೆಂದೂ ಈ ಯಾಚ್ಞೆಯು ಮತಿ
ವಿಶೇಷರೂಪವಾದುದೆಂದೂ ತಿಳಿಸುವದಕ್ಕಾಗಿಯೇ ತು ಶಬ್ದಪ್ರಯೋಗವು.

ಪ್ರಪದನವೆಂದರೆ ಭರಸಮರ್ಪಣವು ಎಂದು ಇಷ್ಟು ಮಾತ್ರವೇ ಆಗುವ
ದಿಲ್ಲವು. ಒಬ್ಬ ಯಜಮಾನನು ತನ್ನ ಭೃತ್ಯನಲ್ಲಿ ತನಗೆ ಇಷ್ಟವಾದ ಕಾರ್ಯ
ನಿರ್ವಹಣ ಭರವನ್ನಿಡುವದೂ ಕೂಡ ಆಗ ಪ್ರಪದನವಾಗಬಹುದು. ಆದುದ
ರಿಂದಲೇ ಯಾಚ್ಞಾನ್ವಿತಂ - ಎಂಬ ಪ್ರಯೋಗವು. ಮಿತ್ರರೂ ಕೂಡ ತಮ್ಮ
ತಮ್ಮ ಕಾರ್ಯದ ಪ್ರಾರ್ಥನೆಯನ್ನು ಪರಸ್ಪರ ಮಾಡುವವರಿಂದ ಇದೂ ಕೂಡ
ಪ್ರಪದನವಲ್ಲವಿರುವದಕ್ಕಾಗಿ, **ಅಭೀಷ್ಟೇ ದುಸ್ಸಾಧೇ** - ಎಂಬ ಪ್ರಯೋಗವು.
ಇತರ ಯಾರಿಂದಲೂ ಸಾಧಿಸಲು ಸಾಧ್ಯವಲ್ಲದೇ ಒಬ್ಬ ಸಮರ್ಥನಿಂದ
ಮಾತ್ರ ಅದನ್ನು ಸಾಧಿಸಲು ಸಾಧ್ಯವಾದುದು; ಅಂಥಾವನಲ್ಲಿ ಭರಸಮರ್ಪಣವೇ
ಪ್ರಪದನವೆಂಬ ಭಾವವು. ಭರನ್ಯಸನವೇ ಪ್ರಪದನವು ಎಂದು ಏಕೆ ಹೇಳಲ್ಪ

ಅಙ್ಗ ಸ್ವರೂಪಮ್

ಮುಮುಕ್ಷುವಾನ ವಧಿಕಾರಿಕ್ಕು ಇವ್ವುಪಾಯತ್ತಿಲ್ ಅಙ್ಗ ಸ್ವರೂಪಮಾನದು ? ಆಭರಣತ್ತೈಯುಡೈಯವನುಕ್ಕು ಅವನ್ ತಾನೇ ರಕ್ಷಿತ್ತುಕ್ಕೊಣ್ಡು ಪೋಣಕ್ಕೊಡುಕ್ಕು ಮಾಪ್ಪೋಲೆ ಯಥಾವಸ್ಥಿತಮಾನ ವಾತ್ಮನಿಕ್ಷೇಪಮ್.

ಟ್ರಿತೆಂದರೆ, ಬರೀ ಪ್ರಾರ್ಥನೆಯೇ ಪ್ರಪದನವಾದರೆ ಗೋಪ್ತೃತ್ವವರಣವಾದ ಒಂದು ಅಂಗವೇ ಪ್ರಪದನವೆಂದು ಹೇಳಬಹುದಾಗುತ್ತದೆ. ಆದುದರಿಂದ ಯಾಚ್ಞಾನ್ವಿತವಾದ ಭರನ್ಯಸನವೇ ಪ್ರಪದನವೆಂದು ಹೇಳಲ್ಪಟ್ಟಿತು ಅದುದರಿಂದ ಈ ರಕ್ಷಾಭರನ್ಯಾಸರೂಪ ಅಂಗಿಯ ಯಥಾರ್ಥಾಭಿಪ್ರಾಯವೇನೆಂದರೆ :— ಐಹಿಕ ಪುರುಷಾರ್ಥರೂಪಫಲವಾಗಲಿ, ಮೋಕ್ಷರೂಪಫಲವಾಗಲಿ ಅನನ್ಯಸಾಧ್ಯವಾದುದರಿಂದ, ಭಗವಂತನಾದ ನೀನಲ್ಲದೆ ಇನ್ನು ಯಾರೂ ನಿರ್ವಹಿಸಿ ಕೊಡಲಾರದುದರಿಂದ ಆ ಫಲಸಾಧನಭರವನ್ನೆಲ್ಲಾ, ಮುಂದೆ ನನ್ನ ಯಾವ ಪ್ರಯತ್ನದ ಅಪೇಕ್ಷೆಯಿಲ್ಲದೇನೇ ನೀನೇ ಸಾಧಿಸಿಕೊಡುವಿ ಎಂಬ ಮಹಾ ವಿಶ್ವಾಸದಿಂದ ಈ ರಕ್ಷಾಭರವನ್ನೂ ನಿನ್ನಲ್ಲೇ ಸಮರ್ಪಿಸಿರುತ್ತೇನೆಂಬ ಜ್ಞಾನ ವಿಶೇಷವೇ ಪ್ರಪದನವು. ಇದಕ್ಕೆ ಪ್ರಪದನ, ಪ್ರಪತ್ತಿ, ಭರನ್ಯಾಸ ಶರಣಾಗತಿ ಇತ್ಯಾದಿ ಹೆಸರುಗಳುಂಟು. ಇದು **ಯಾಚ್ಞಾನ್ವಿತಂ** - ನೀನು ಉಪಾಯವಾಗಿ ರಕ್ಷಕರೂಪವಾಗಿರತಕ್ಕದ್ದೆಂಬ ಪ್ರಾರ್ಥನೆಯಿಂದ ಕೂಡಿದುದು ಎಂದು ಹೇಳುವುದರಿಂದ ಇದು ಸರ್ವಪುರುಷಾರ್ಥಿಗಳಿಗೂ ಸಾಮಾನ್ಯವು. ಇಲ್ಲಿ **ಯಾಚ್ಞಾ** ಯಾವುದೆಂದರೆ ರಕ್ಷಾಪೇಕ್ಷೆ ಎಂದು ಸ್ತೋತ್ರಭಾಷ್ಯದಲ್ಲಿ ಶ್ರೀ ನಿಗಮಾಂತ ದೇಶಿಕರವರೇ ವ್ಯಾಖ್ಯಾನ ಮಾಡಿರುತ್ತಾರೆ. ಅಧಿಕಾರಿಯು ಮೋಕ್ಷಾರ್ಥಿಯಾಗಿದ್ದರೆ ಇನ್ನೇನಾದರೂ ವಿಶೇಷ ವೈಲಕ್ಷಣ್ಯ ಉಂಟೋ ? ಎಂದರೆ ರಕ್ಷಾಭರವನ್ನಿಡುವುದರೊಂದಿಗೆ ಸ್ವರೂಪ ಫಲನಿಕ್ಷೇಪಗಳು ಇರತಕ್ಕದ್ದೆಂದು ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ. ಆದುದರಿಂದ **"ಮುಮುಕ್ಷುವಾನ ಅಧಿಕಾರಿಕ್ಕು"** ಎಂದು ವಾಕ್ಯಾರಂಭವು.

ಈ ಮೇಲಿನ ಶ್ಲೋಕಾರ್ಥವನ್ನೇ ಮುಂದೆ ಬಹು ಚನ್ನಾಗಿ ಉಪಪಾದಿಸುತ್ತಾರೆ. ಹಿಂದಿನ ಶ್ಲೋಕದಲ್ಲಿ ಬುಭುಕ್ಷು ಮುಮುಕ್ಷು ಸಾಧಾರಣವಾದ ಅಂಗಿ ಸ್ವರೂಪವನ್ನು ಉಪದೇಶಿಸಿದರು. ಮುಂದೆ ಮುಮುಕ್ಷುವಿಗೆ ಮಾತ್ರ ಅಸಾಧಾರಣವಾದ ಅಂಗಿ ಸ್ವರೂಪವನ್ನು ನಿರೂಪಿಸುತ್ತಾರೆ.

ಮುಮುಕ್ಷುವಾನ ವಧಿಕಾರಿಕ್ಕು - ಮೋಕ್ಷಾರ್ಥಿಯಾದ ಅಧಿಕಾರಿಗೆ, **ಇವ್ವುಪಾಯತ್ತಿಲ್** - ಈ ಸಾಂಗ ಪ್ರಪದನದಲ್ಲಿ, ಅಂಗಿ ಸ್ವರೂಪ ಯಾವುದು ? **ಆಭರಣತ್ತೈಯುಡೈಯವನುಕ್ಕು** - ಆಭರಣವನ್ನು ಅದರ ಯಜಮಾನ ನಿಗೆ, **ಪೂಣಕೊಡುಕ್ಕುಮಾಪ್ಪೋಲೆ** -ಹಿಂತಿರುಗಿ ಧರಿಸಲು ಕೊಡುವಹಾಗೆ, **ಯಥಾವಸ್ಥಿತಮಾನ** - ಯಾಥಾರ್ಥ್ಯಜ್ಞಾನದಿಂದ ಕೂಡಿದ, ಅದು ಎಂಥಾ ದ್ದೆಂದರೆ, ತನ್ನ ರಕ್ಷಣದಲ್ಲೂ, ಅದರ ಫಲದಲ್ಲೂ, ತನಗೆ ಸಂಬಂಧವಿಲ್ಲವು, ಅವುಗಳು ಭಗವಂತನಿಗೇನೇ ಸೇರಿದವು ಎಂಬ ಯಥಾರ್ಥವಾದ ತಿಳುವಳಿಕೆ ಯಿಂದ ಕೂಡಿದ. **ಆತ್ಮನಿಕ್ಷೇಪಮ್** - ಆತ್ಮಸಮರ್ಪಣೆಯು. ತನ್ನ ಸ್ವಾಮಿಗೆ ಸೇರಿದೊಂದು ಆಭರಣವು ಏನೋ ಒಂದು ಕಾರಣಾಂತರದಿಂದ ತನ್ನಲ್ಲಿ ಸೇರಿ ದ್ದರೆ, ಅದನ್ನು ತಾನು ರಕ್ಷಿಸಲು ಅಸಮರ್ಥನಾಗಿರುವಾಗ ಅದನ್ನು ಪುನಃ ತನ್ನ ಸ್ವಾಮಿಯಲ್ಲೇ ಇಟ್ಟು ಇದನ್ನು ರಕ್ಷಿಸಿಕೊಂಡು ಬರಬೇಕೆಂದು ಹೇಳುವ ಹಾಗೆ, ಇಲ್ಲಿಯೂ ಕೂಡ ಮುಮುಕ್ಷುವು, ಸರ್ವೇಶ್ವರನ ಸ್ವತ್ತಾದ ಈ ಆತ್ಮ ವನ್ನು ತಾನು ರಕ್ಷಿಸಲು ಸಾಮರ್ಥ್ಯವಿಲ್ಲದೆ, ಇದನ್ನು ರಕ್ಷಿಸುವ ಭಾರವು ನಿಮ್ಮದೆಂದು ಆತನ ಪಾದದಲ್ಲಿಡುವದು ನ್ಯಾಯವಾದುದೇ ಎಂಬ ಭಾವವು. ಆದುದರಿಂದ ಪ್ರಪದನದಲ್ಲಿ ಹಿಂದಿನ ಶ್ಲೋಕದಲ್ಲುಪಪಾದಿಸಿದ ಹಾಗೆ ಯಾಚ್ಞೆ ಯಿಂದ ಕೂಡಿದ ರಕ್ಷಾಭರಸಮರ್ಪಣವೊಂದಿಗೆ ಈ ಆತ್ಮಸಮರ್ಪಣವೂ ಮತ್ತು ಫಲಸಮರ್ಪಣವೂ ಇರಬೇಕೆಂಬ ಭಾವವು. ಆದುದರಿಂದ ಅಂಗಿ ಸ್ವರೂಪವು, ಈ ಆತ್ಮರಕ್ಷಾಭರನಿಕ್ಷೇಪ, ಫಲನಿಕ್ಷೇಪ, ಸ್ವರೂಪನಿಕ್ಷೇಪ, ಈ ಮೂರು ನಿಕ್ಷೇಪಗಳೊಂದಿಗೆ ಸೇರಿರುವದು ಎಂಬ ಭಾವವು. **ಆಭರಣತ್ತೈಯು ಡೈಯವನಕ್ಕು** ಎಂದು ಹೇಳಿರುವದರಿಂದ ಆತ್ಮಸ್ವರೂಪಸಮರ್ಪಣವೂ, **ಅವ ನ್ ತಾನೇ ರಕ್ಷಿತ್ತು ಕೊಂಡು** ಎಂಬುವದರಿಂದ ರಕ್ಷಾಭರಸಮರ್ಪಣವೂ, **ಪೂಣಕೊಡುಕ್ಕುಮಾಪ್ಪೋಲೆ** ಎಂಬುವದರಿಂದ ಫಲಸಮರ್ಪಣವೂ ಹೀಗೆ ಮೂರೂ ಈ ವಾಕ್ಯದಲ್ಲಿ ದ್ಯೋತಿತವು. ಇವುಗಳಲ್ಲದೆ ಬೇರೊಂದು ಅಂಗಿ ಯುಂಟೆಂದು ಹೇಳುವದು ಅಸಂಗತವು. ಆದರೆ ಈ ಜೀವಾತ್ಮನು ಭಗವಂತನ ಸ್ವಂ ಆಗಿ, ಆತನು ನಮಗೆ ಆ ಕಾರಣದಿಂದ ಸ್ವಾಮಿಯಾದರೆ, ಆತನ ಪದಾರ್ಥ ವನ್ನು ಆತನಿಗೆ ಸಮರ್ಪಿಸುವದೆಂಬುವದು ಅಸಮಂಜಸವಾಗುವದಿಲ್ಲವೇ ? ಆದರೆ ಯಾಗಾದಿಗಳಲ್ಲಿ ಭಗವಂತನ ಸ್ವತ್ತನ್ನು ಭಗವಂತನಿಗೆ ಸಮರ್ಪಿಸುವ ಕ್ರಮ ಶ್ರುತಿಸಿದ್ಧವಾಗಿದೆಯಲ್ಲಾ ? ಎಂದರೆ, ಈ ಸಂದರ್ಭದಲ್ಲಿ ಕರ್ಮೋಪಾಧಿಯುಕ್ತವಾ ದುದನ್ನು ಸಮರ್ಪಿಸುವದರಿಂದ ಏನೊಂದೂ ಅಸಂಗತವಿಲ್ಲವು. ಆತ್ಮಸ್ವರೂಪವಾ ದರೋ ವಸ್ತುತಃ ಅಂತಹ ಕರ್ಮೋಪಾಧಿಯುಕ್ತವಾದುದಲ್ಲವು; ಆದುದರಿಂದ ಭ್ರಾಂತಿಮೂಲಕ ಪ್ರಾಪ್ತವಾದುದು ಎಂದು ಹೇಳಬಹುದು. ಆದರೆ ಈ ಆತ್ಮನು

ಭಗವಂತನ ಸ್ವತ್ತಾಗಿದ್ದರೂ ಭ್ರಾಂತಿಯಿಂದ ತನ್ನದೆಂದು ಭಾವಿಸಿ ಭಗವಂತನಲ್ಲಿ ಸಮರ್ಪಿಸುತ್ತಾನೆಂದು ಹೇಳಬಹುದು. ಹೀಗೆ ಸಮರ್ಪಿಸೋಣವೇನು ಶಾಸ್ತ್ರ ಜ್ಞಾನವುಂಟಾದನಂತರವೇ, ಅಥವಾ ಅದಕ್ಕೆ ಪೂರ್ವಭಾವಿಯಾಗಿಯೇ ಎಂದು ಕೇಳಬೇಕಾಗಿರುತ್ತದೆ. ಶಾಸ್ತ್ರಜ್ಞಾನಾನಂತರವೆಂದರೆ ಭ್ರಾನ್ತಿಗೆ ಕಾರಣವೇ ಇಲ್ಲವು. ಶಾಸ್ತ್ರಜ್ಞಾನಪ್ರಾಪ್ತಿಗೆ ಮುಂದೆಯೇ ಎಂದರೆ ಪ್ರಪದನಾನುಷ್ಠಾನ ಉಂಟಾಗಲು ಕಾರಣವೇ ಇಲ್ಲವು. ಆದುದರಿಂದ ಇದೂ ಕೂಡುವುದಿಲ್ಲವು.

ಈ ಆತ್ಮವು ಪರಮಾತ್ಮನದೇ ಆದರೆ ಇದುವರಿವಿಗೂ ಅದು ನನ್ನದೆಂದು ಭಾವಿಸಿ ಆತ್ಮಾಪಹಾರವನ್ನು ಮಾಡಿದ್ದೆನು. ಈಗ ಇದು ಆತನದೆಂದು ತಿಳಿದುದ ರಿಂದ ಈ ಚೋರಕೃತ್ಯಮಾಡಿದ ಅಪರಾಧಪರಿಹಾರಕ್ಕಾಗಿ ಅದನ್ನು ಈಗ ಆತ ನಲ್ಲೇ ಸಮರ್ಪಣೆಮಾಡುವೆನೆಂದು ಹೇಳಬಹುದು. ಇದೂ ಸರಿಯಲ್ಲವು. ಏಕೆಂದರೆ ಇದುವರಿವಿಗೂ ತನ್ನದು ಎಂದು ತಿಳಿದುದರಿಂದ ಅಂತಹ ಚೋರ ಕೃತ್ಯದಂಡನೆಗಾಗಿ ಬಂಧನಿವೃತ್ತಿಗೆ ಒಡನೆ ಅವಕಾಶವು ಇಲ್ಲವಾದುದಾಗುತ್ತದೆ. ಸರ್ವೇಶ್ವರನು ಸರ್ವಜ್ಞನು, ಈ ಆತ್ಮಾ ತನ್ನದೆಂಬುವದು ಆತನಿಗೆ ಸುವ್ಯಕ್ತವು. ಹೀಗಿರುವಾಗ ಸಾಧ್ಯೋಪಾಯವಾದ ಪ್ರಪದನದ ಆವಶ್ಯಕತೆ ತಾನೇ ಏನು ಎಂದು ಕೂಡ ಆಕ್ಷೇಪಿಸಬಹುದು. ಕರ್ತಾ ಶಾಸ್ತ್ರಾರ್ಥವತ್ವಾತ್ (ಶಾ. ಸೂ. ೨-೩-೩೩) ಎಂದು ಹೇಳಿರುವ ಹಾಗೆ ಜೀವಾತ್ಮನು ತನ್ನ ಇಂದ್ರಿಯ ಮನಸ್ಸು ಬುದ್ಧಿಗಳ ಮೂಲಕ ಯತ್ನಿಸಲೆಂದು ಸಙ್ಕಲ್ಪಿಸಿರುವಾಗ ಅದಕ್ಕೆ ವ್ಯತ್ಯಸ್ತವಾಗಿ ಈ ಸಾಧ್ಯೋಪಾಯದ ಆವಶ್ಯಕತೆ ಇಲ್ಲದೇನೆ ರಕ್ಷಿಸಿಬಿಟ್ಟರೆ ವೈಷಮ್ಯನೈರ್ಘೃ ಣ್ಯಾದಿ ದೋಷಗಳು ಆತನಿಗೆ ಪ್ರಾಪ್ತವಾಗುತ್ತವೆ. ಆದುದರಿಂದ ಈ ಸಾಧ್ಯೋ ಪಾಯಾನುಷ್ಠಾನವು ಅತ್ಯಾವಶ್ಯಕವು. ಆದುದರಿಂದ ಆತ್ಮಾವನ್ನು ಸಮರ್ಪಿಸಿ, ರಕ್ಷಾಭರವನ್ನೂ ಫಲವನ್ನೂ ಆತನಲ್ಲಿಡತಕ್ಕದ್ದೆಂಬ ಭಾವವು.

ಅನ್ಯಥಾ ಸನ್ತಮಾತ್ಮಾನಂ ಅನ್ಯಥಾ ಪ್ರತಿಪದ್ಯತೇ ।
ಕಿಂ ತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥

(ಭಾರ ಆದಿ ೭೪-೨೮)ಎಂದು ಹೇಳಿರುವ ಹಾಗೆ ಅಜ್ಞಾನದಿಂದ ಭ್ರಾನ್ತಿಯಿಂದ ಆತ್ಮಾಪಹಾರ ರೂಪಚೋರ ಕೃತ್ಯಮಾಡಿದನಲ್ಲಾ ಎಂಬ ಪರಿತಾಪವುಂಟಾಗಿ ತಾನಾಗಿಯೇ ಆತನ ಸ್ವತ್ತನ್ನು ಶಾಸ್ತ್ರವಿಧಿಗನುಸಾರವಾಗಿ ಆತನಿಗೆ ಸಮರ್ಪಿಸು ವದು ಯುಕ್ತವೇ. ಲೋಕದಲ್ಲೂ ಕೂಡ ಅಂತಹ ಸಂದರ್ಭದಲ್ಲಿ ಪ್ರಭುವು ಮನ್ನಿಸಿಬಿಡಲೂಸಾಧ್ಯವು, ಹಾಗೆಯೇ ಈ ಸಂದರ್ಭದಲ್ಲೂ ಶಾಸ್ತ್ರವು ಬೋಧಿಸು ತ್ತದೆ ಎಂದು ತಿಳಿಸುವದಕ್ಕಾಗಿಯೇ, ಅಭರಣತ್ರೈಯುಡ್ರೈಯನ ನಕ್ಕು ಎಂಬ ದೃಷ್ಟಾನ್ತವನ್ನು ಇಲ್ಲಿ ಉಪಪಾದಿಸಿರುತ್ತಾರೆ

ಅದಾವದು ? ಪ್ರಣವತ್ತಿಲ್ ಪ್ರಥಮಾಕ್ಷರತ್ತಿಲ್ ಪ್ರಕೃತಿಪ್ರತ್ಯಯಙ್ಗಳಾಲೆ ಸರ್ವರಕ್ಷಕನಾಯ್ ಸರ್ವಶೇಷಿಯಾಯ್ ತೋಱಿನ ಸರ್ವೇಶ್ವರನೈಪತ್ತ, ಆತ್ಮಾತ್ಮೀಯ ರಕ್ಷಣ ವ್ಯಾಪಾರತ್ತಿಲುಮ್, ಆತ್ಮಾತ್ಮೀಯರಕ್ಷಣಫಲತ್ತಿಲುಮ್, ಸ್ವಾಧೀನಮಾಗವುಮ್, ಸ್ವಾರ್ಥಮಾಗವುಮ್ ತನಕ್ಕನ್ವಯ ಮಿಲ್ಲಾದಪಡಿ ಭರನ್ಯಾಸಪ್ರಧಾನಮಾನ ವತ್ಯನ್ತ ಪಾರತನ್ತ್ರ್ಯವಿಶಿಷ್ಟ ಶೇಷತ್ವಾನುಸನ್ಧಾನವಿಶೇಷಮ್.

ಮುಂದೆ ಆತ್ಮನಿಕ್ಷೇಪ ಶಬ್ದಾರ್ಥವನ್ನು ವಿವರಿಸುತ್ತಾರೆ :—ಆಭರಣವನ್ನಾವರೂ ಕೈಯಲ್ಲಿ ಮುಟ್ಟಿ ಎತ್ತಿ ಒಬ್ಬ ರಕ್ಷಕನ ವಶಕ್ಕೆ ಕೊಟ್ಟು ಇದನ್ನು ರಕ್ಷಿಸಲು ನನಗೆ ಶಕ್ತಿಯಿಲ್ಲವಾದುದರಿಂದ ಇದು ನಿನ್ನ ಆಭರಣವೇಯಾದುದರಿಂದ ಇದನ್ನು ರಕ್ಷಿಸುವ ಭಾರವು ನಿನ್ನದೇ ಎಂದು ಆತನಲ್ಲಿ ಸಮರ್ಪಿಸಬಹುದು. ಆತ್ಮವು ಕಣ್ಣಿಗೆ ಕಾಣಿಸದು, ಕೈಗೆ ಸಿಕ್ಕದು, ಹೀಗಿರುವಲ್ಲಿ ಪರಮಾತ್ಮನಲ್ಲಿ ಈ ಆತ್ಮನನ್ನು ಸಮರ್ಪಿಸತಕ್ಕದ್ದೆಂಬುವದರಭಿಪ್ರಾಯವೇನೆಂಬುವದನ್ನು ಸ್ಪಷ್ಟವಾಗುವ ಹಾಗೆ ಉಪದೇಶಿಸುತ್ತಾರೆ :—

ಅದಾವದು ? ಆತ್ಮಸಮರ್ಪಣೆ ಎಂಬುವದರಭಿಪ್ರಾಯವೇನು ? ಪ್ರಣವ ......**ಪ್ರತ್ಯಯಙ್ಗಳಾಲೇ** - ಓಮ್ ಎಂಬುವದರಲ್ಲಿರುವ ಮೊದಲನೆಯಕ್ಷರವಾದ ಅಕಾರದ, ಪ್ರಕೃತಿಯಾದ ಅಕಾರ, ಮತ್ತು ಆದರ ಪ್ರತ್ಯಯವಾದ ಲುಪ್ತ ಚತುರ್ಥಿಗಳಿಂದ, **ಸರ್ವರಕ್ಷಕನಾಯ್ ಸರ್ವಶೇಷಿಯಾಯ್ ತೋಱಿನ** - ಸರ್ವರಕ್ಷಕನಾಗಿಯೂ, ಸರ್ವಶೇಷಿಯಾಗಿಯೂ ತೋರಿಬರುವ, **ಸರ್ವೇಶ್ವರನೈಪ್ಪತ್ತ** - ಸರ್ವೇಶ್ವರನನ್ನು ಕುರಿತು, **ಆತ್ಮಾತ್ಮೀಯ ರಕ್ಷಣತ್ತಿಲುಮ್** - ತನಗೂ ಮತ್ತು ತನಗೆ ಸೇರಿದವರ ರಕ್ಷಣದಲ್ಲೂ, ಹಾಗೆಯೇ, **ಆತ್ಮಾತ್ಮೀಯ ರಕ್ಷಣಫಲತ್ತಿಲುಮ್** - ತನ್ನ ಮತ್ತು ತನಗೆ ಬೇಕಾದವರ ರಕ್ಷಣದ ಫಲದಲ್ಲೂ ಸಹ, **ಸ್ವಾಧೀನಮಾಗವುಮ್** - ತನಗೆ ಸ್ವಾಧೀನವಾದುದಾಗಿಯೂ, **ಸ್ವಾರ್ಥಮಾಗವುಮ್** - ತನಗೆ ಪ್ರಯೋಜನವಾದುದಾಗಿಯೂ, ಈ ಪ್ರಕಾರವಾಗಿ, **ತನಕ್ಕನ್ವಯಮಿಲ್ಲಾದಪಡಿ**-ತನಗೆ ಸಂಬಂಧವಿಲ್ಲದ ಹಾಗೆ **ಭರನ್ಯಾಸ ಪ್ರಧಾನಮಾನ** - ಸಮಸ್ತ ಭರವನ್ನೂ ಆತನಲ್ಲಿಡುವದೆಂಬ ಮುಖ್ಯವಾದ, **ಅತ್ಯನ್ತ ಪಾರತನ್ತ್ರ್ಯವಿಶಿಷ್ಟ** - ಅತ್ಯನ್ತಪಾರತನ್ತ್ರ್ಯದಿಂದ ಕೂಡಿದ, **ಶೇಷತ್ವಾನುಸನ್ಧಾನವಿಶೇಷಮ್** - ತಾನು ಪರಮಾತ್ಮನಿಗೆ ದಾಸನೆಂಬ ಭಾವವನ್ನು ತೋರಿಸಿಕೊಡುವ ವ್ಯಾಪಾರವಿಶೇಷವು.

ಇಲ್ಲಿ **ಆತ್ಮನಿಕ್ಷೇಪವು** ಒಂದು ಶೇಷತ್ವಾನುಸಂಧಾನ ವಿಶೇಷವೆಂದು ಹೇಳ

ಶ್ಪಿಷ್ಟತು. ಇದರಿಂದ ಪರಮಪ್ರಾಪಕನ ಪ್ರಯೋಜನವೇ ತನಗೂ ಪರಮಪ್ರ ಯೋಜನವೆಂದು ಭಾವಿಸಬೇಕೆಂದು ಹೇಳಿದಂತಾಯಿತು ಅನುಸಂಧಾನವು ಆತ್ಮ ನಿಕ್ಷೇಪವಾದರೆ, ಈ ಅಂಶಿಯು ರಕ್ಷಾಭರನಿಕ್ಷೇಪ ಫಲನಿಕ್ಷೇಪಗಳನ್ನೊಳ ಗೊಂಡಿರಬೇಕೆಂಬ ಆವಶ್ಯಕತೆಯೇತರ್ನೋ ಎಂದರೆ ಅವುಗಳೂ ಉದ್ದೇಶ್ಯ ವೆಂದೇ ತಿಳಿಸುವದಕ್ಕಾಗಿಯೇ ಭರನ್ಯಾಸಪ್ರಧಾನವಾದ ಎಂಬ ಪ್ರಯೋಗವು ಆ ಭರನ್ಯಾಸವು ಆತ್ಮಾತ್ಮೀಯರಕ್ಷಣ, ಮತ್ತು ಆತ್ಮಾತ್ಮೀಯರಕ್ಷಣಫಲ ವಿಷಯಗರ್ಭಿತವಾದುದೆಂಬುವದು ಈ ಮೇಲಿನ ವಾಕ್ಯದಿಂದಲೇ ಸುವ್ಯಕ್ತವು. ಈ ಎರಡೂ ತನಗೆ ಸ್ವಾಧೀನವಲ್ಲವು. ಮತ್ತು ಅವುಗಳಿಂದ ತನಗೇನೂ ಮುಖ್ಯ ಪ್ರಯೋಜನವಲ್ಲವು ಎಂಬುವ ತಿಳುವಳಿಕೆಯಿಂದ ಕೂಡಿದ ಅನುಸಂಧಾನವೇ ಆತ್ಮ ನಿಕ್ಷೇಪವು. ಹಾಗಾದರೆ ಇನ್ನು ಯಾರಿಗೆ ಮುಖ್ಯ ಪ್ರಯೋಜನವಾದುದು ಎಂದರೆ, ಶ್ರಿಯಃಪತಿಗೆ ಸ್ವಾಧೀನವಾದುದು ಮತ್ತು ಆತನಿಗೇನೇ ಪ್ರಯೋಜನಕರ ವಾದುದು. ಈಶ್ವರನು ಸರ್ವಸ್ವತನ್ತ್ರನು, ಸರ್ವರಕ್ಷಕನು, ಸರ್ವಶೇಷಿಯು ; ಆದುದ ರಿಂದ ಈ ಚೇತನನ ಆತ್ಮಾತ್ಮೀಯರಕ್ಷಣ ತತ್ಫಲಗಳಲ್ಲಿ ಶಕ್ತನಾದುದರಿಂದ, ಇವುಗಳು ಆತನಿಗೇನೇ ಸ್ವಾಧೀನವು ಮತ್ತು ಪ್ರಯೋಜನಕರವಾದುವು. ಸರ್ವೇ ಶ್ವರನು ಸರ್ವರಕ್ಷಕನೂ ಸರ್ವಶೇಷಿ ಎಂಬುವದು ಮೂಲಮನ್ತ್ರದ ಪ್ರಥಮಾಕ್ಷರ ದಲ್ಲಿ ಕಂಡುಬರುತ್ತದೆಂದು ಹಿಂದೆಯೇ ಉಪದೇಶಿಸಿರುತ್ತಾರೆ. ಆ ಅಭಿಪ್ರಾಯ ಗಳನ್ನೇ ಪುನಃ ಇಲ್ಲಿ ಸಮರ್ಥಿಸುವವರಾಗಿ ಅಂತಹ ಸರ್ವೇಶ್ವರನ ವಿಷಯದಲ್ಲಿ ಭರನ್ಯಾಸದಲ್ಲಿ ತೋರುವ ಸಂಪೂರ್ಣಪಾರತನ್ತ್ರ್ಯದ ಅನುಸಂಧಾನವು ಯುಕ್ತವಾ ದುದೇ ಸರಿ. ಪ್ರಣವದ ಅಕಾರದಿಂದ ಮುಖ್ಯವಾಗಿ ನಾಲ್ಕು ಅಭಿಪ್ರಾಯಗಳು ತೋರಿಬರುತ್ತವೆಂದು ಹೇಳಲ್ಪಟ್ಟಿರುತ್ತವೆ :—

ಏವ ಮಕ್ಷರ ರೂಪೇಣ ಕಾರಣತ್ವಮಿಹೋದಿತಂ ।
ರಕ್ಷಕತ್ವಂಚ ಧಾತ್ವರ್ಥಾ ಚ್ಛೇಷಿತ್ವಂ ಪದರೂಪತಃ ।
ಶ್ರೀಶತ್ವಂ ವಾಚ್ಯಗತ್ಯಾ ಚ ಯುಜ್ಯತೇ ಪರಮಾತ್ಮನಃ ॥

ಅಕಾರವಾಚ್ಯನಾದುದರಿಂದ ವಿಷ್ಣುವು (೧) ಜಗತ್ಕಾರಣನೆಂದೂ (೨) ಅವರಕ್ಷಣೆ ಎಂಬ ಧಾತ್ವರ್ಥದಿಂದ ಸರ್ವರಕ್ಷಕನೆಂದೂ (೩) ಮಕಾರವಾಚ್ಯಜೀವನು ಆಯ್ವವ ಅಕಾರವಾಚ್ಯನಾದ ವಿಷ್ಣುವಿಗೇನೇ ಎಂಬದಾಗಿ ಪದಗಳ ಭಾವದಿಂದ ಸರ್ವಶೇ ಷಿಯೆಂದೂ (೪) ಮತ್ತು ಶ್ರಿಯಃಪತಿಯೆಂದೂ ತೋರಿಬರುತ್ತದೆ.

ವಾಕ್ಯದಲ್ಲಿ ಸರ್ವೇಶ್ವರನ್ಯೈಪತ್ತ ಎಂಬುವದನ್ನು ಪಾರತನ್ತ್ರ್ಯವಿಶಿಷ್ಟ ಶೇಷತ್ವದೊಂದಿಗೆ ಅನ್ವಯಿಸತಕ್ಕದ್ದು. ಇಲ್ಲಿ ಮೂಲಮನ್ತ್ರದ ಅಭಿಪ್ರಾಯ ವನ್ನು ತಂದಿರೋಣದರಿಂದ ಈ ಮನ್ತ್ರಜನ್ಯತತ್ವಜ್ಞಾನವೇ ಈ ಭರನ್ಯಾಸರೂಪ

ಭರಸಮರ್ಪಣಾನುಷ್ಠಾನ ಪ್ರಕಾರಃ

(೧) "ಸ್ವಾತ್ಮಾನಂ ಮಯಿನಿಕ್ಷಿಪೇತ್" ಎನ್ರು ಚೋದಿತಮಾನ ಇನ್ನನುಸನ್ಧಾನ ವಿಶೇಷತ್ತೈಯುಮನುಷ್ಠಿಕ್ಕುಮ್ಪಡಿ:—ಶೇಷಿಯಾಯ್ ಸ್ವತ

ಉಪಾಯಕ್ಕೆ ಉಪಕಾರಕನೆಂದು ಹೇಳಲ್ಪಟ್ಟಿತು. ಇಲ್ಲಿ ಸರ್ವೇಶ್ವರನನ್ನು ಕುರಿತು ಪಾರತಂತ್ರ್ಯವು, ರಾಜನನ್ನು ಕುರಿತ ಭೃತ್ಯನ ಪಾರತಂತ್ರ್ಯದ ಹಾಗಲ್ಲವು. ಏಕೆಂದರೆ ಈ ಪಾರತಂತ್ರ್ಯದಲ್ಲಿ ತಾನು ಮಾತ್ರವೇ ಉದ್ದೇಶ್ಯವು. ಆತ್ಮೀಯರಲ್ಲವು. ಆದರೆ ಸರ್ವೇಶ್ವರನನ್ನು ಕುರಿತ ಪಾರತಂತ್ರ್ಯವು ಆತ್ಮಾತ್ಮೀಯರನ್ನೂ ಸಹ ಕುರಿತದ್ದಾಗಿರುತ್ತದೆ.

ಆದುದರಿಂದ ಆತ್ಮನಿಕ್ಷೇಪವು ಆತ್ಮಾತ್ಮೀಯ ರಕ್ಷಣ ತತ್ಫಲಗಳಲ್ಲಿ ತನಗೆ ಸ್ವಲ್ಪವಾದರೂ ಅನ್ವಯ ಸ್ವಾರ್ಥತೆಗಳಿಲ್ಲವೆಂದೂ, ಮೂಲಮನ್ತ್ರದಲ್ಲಿ ತೋರಿಬರುವ ಸರ್ವರಕ್ಷಕ ಸರ್ವಶೇಷಿಯಾದ ಸರ್ವೇಶ್ವರನಿಗೆ ಸ್ವಾಧೀನವು, ಪ್ರಯೋಜನವು ಎಂಬ ಪಾರತಂತ್ರ್ಯದಿಂದ ಸೇರಿದ ಶೇಷಭಾವದ ಅನುಸನ್ಧಾನವೇ ಎಂದು ಹೇಳಲ್ಪಟ್ಟಿತು.

ಆದರೆ (೧) "ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಎಂದು ಆತ್ಮನಿಕ್ಷೇಪವು ಆತ್ಮಸ್ವರೂಪನಿಕ್ಷೇಪ ಮಾತ್ರವೇ ಎಂದು ಹೇಳಿರುವ ಹಾಗೆ ತೋರುತ್ತದೆಯಲ್ಲಾ, ಹೀಗಿರುವಲ್ಲಿ ಅದು ರಕ್ಷಾಭರನಿಕ್ಷೇಪ, ಫಲನಿಕ್ಷೇಪಗಳನ್ನೂ ಒಳಗೊಂಡಿದೆ ಎಂದು-ಹೇಳಲು ಸಾಧನವೇನಿದೆ? "ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಎಂದು ಹೇಳಿರುವಾಗ ಆತ್ಮೀಯರೂ ಕೂಡ ಹೇಗೆ ಈ ಆತ್ಮನಿಕ್ಷೇಪದಲ್ಲಿ ಸೇರಿದರು. ? ಈ ಶಂಕಾಗಳಿಗೆ ಸಮಾಧಾನವನ್ನು "ಸ್ವಾತ್ಮಾನಂ" ಎಂದು ಪ್ರಾರಂಭಿಸಿ, ಭಾವಿಕ್ಕೈ ಎಂಬುವದರವರೆವಿಗೂ ಇರುವ ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ. ಹೀಗೆ ಉಪದೇಶಿಸುವ ವಾಕ್ಯದಿಂದಲೇ ಆತ್ಮನಿಕ್ಷೇಪದ ಅನುಷ್ಠಾನ ಕ್ರಮವನ್ನೂ ಬೋಧಿಸುತ್ತಾರೆ.

"ಸ್ವಾತ್ಮಾನಂ ಮಯಿ ನಿಕ್ಷಿಪೇತ್" "ನಿನ್ನ ಆತ್ಮವನ್ನೂ ಸರ್ವೇಶ್ವರನಾದ ನನ್ನಲ್ಲಿಡತಕ್ಕದ್ದು" ಎನ್ರು ಚೋದಿತಮಾನ - ಎಂದು ವಿಧಿವಾಕ್ಯರೂಪದಲ್ಲಿ ಪ್ರೇರೇಪಿಸಲ್ಪಟ್ಟ, ಇನ್ನನುಸನ್ಧಾನವಿಶೇಷತ್ತೈ - ರಕ್ಷಾ ಭರನ್ಯಾಸ, ಫಲನ್ಯಾಸಗಳಿಂದ ಸೇರಿದ ಆತ್ಮನಿಕ್ಷೇಪರೂಪವಾದ ಈ ಅನುಸನ್ಧಾನವನ್ನೂ,

---

[೧] ಸಾತ್ಯಕಿತನ್ತ್ರಂ. [೨] ಭಾರ ಶಾಂ ೨೫-೧೯

ನ್ತ್ರನಾನನೀಶ್ವರನ್ ತನ್ ಪ್ರಯೋಜನಮಾಗವೇ ತಾನೇ ರಕ್ಷಿಕ್ಕುಮ್ಪಡಿಕ್ಕೀಡಾಗ ಅನನ್ಯಾರ್ಹನನ್ಯಾಧೀನ ಶೇಷಭೂತನಾಯ್ ಅತ್ಯನ್ತಪರತನ್ತ್ರನಾನ ನಾನ್ (೧) "ಆತ್ಮಾಪಿಚಾಯಂ ನಮಮ" ಎಙ್ಗಿರಪಡಿಯೇ ಎನಕ್ಕುರಿಯೇನಲ್ಲೇನ್, ಒನ್ರೈನಿರುಪಾಧಿಕ ಮಾಗವೆನ್ನದೆನ್ರುವುಮುರಿಯೇ ನಲ್ಲೇನ್, (೨) "ಸ್ವಯಂ ಮೃತ್ಪಿಂಡಭೂತಸ್ಯ ಪರತಂ

ಅನುಷ್ಠಿಕ್ಕುಮ್ಪಡಿ - ಅನುಷ್ಠಿಸುವ ಪ್ರಕಾರವು, ಹೇಗೆಂದರೆ, ಇದೇ ಕರ್ತೃಪದವು, ಇದಕ್ಕೆ ಕ್ರಿಯಾಪದವು ಬಹಳ ಮುಂದೆ **ಭಾವಿಕ್ಕೈ ಭಾವಿಸೋಣವು** ಎಂದು ಇರುತ್ತದೆ, ಇದೂ ಕೂಡ ಒಂದು ಯಾಗದ ಹಾಗೆ ವಿಧಿ ವಾಕ್ಯದ ಮೂಲಕ ಚೋದನಾ ಮತ್ತು ಕೃತಿಸಾಧ್ಯವೆಂದೂ, ಆದರೆ ಇದು ಮಾನಸಭಾವನಾತ್ಮಕವಾದುದು ಎಂದೂ ತಿಳಿಯತಕ್ಕದ್ದು.

ಶೇಷಿಯಾಯ್ - ಮೂಲಮಂತ್ರದ ಪ್ರಣವದಿಂದ ತೋರುವ ಶೇಷಿಯಾದ **ಸ್ವತನ್ತ್ರನಾನ** - ನಮಶ್ಶಬ್ದದಿಂದ ಜೀವಪಾರತಂತ್ರ್ಯತೋರಿಬರುವದರಿಂದ ಸ್ವತಂತ್ರನಾದ ಈಶ್ವರನು, **ತನ್ ಪ್ರಯೋಜನವಾಗವೇ**-ನಾರಾಯಣಾಯ ಎಂಬಲ್ಲಿರುವ ಚತುರ್ಥಿಯಿಂದ ತೋರುವ, ತನ್ನ ಪ್ರಯೋಜನಕ್ಕಾಗಿಯೇ, **ತಾನೇ ರಕ್ಷಿಕ್ಕುಮ್ಪಡಿಕ್ಕೀಡಾಗ** - ತಾನೇ ರಕ್ಷಿಸುವದಕ್ಕೆ ಯೋಗ್ಯನಾಗಿ, **ಅನನ್ಯಾರ್ಹ**-ಪರಮಾತ್ಮನಲ್ಲದೆ ಇನ್ನ್ಯಾರಿಗೂ ನಿರುಪಾಧಿಕ ಶೇಷನಾಗಿರಲು ಅರ್ಹನಲ್ಲದ, **ಅನನ್ಯಾಧೀನ** - ಪರಮಾತ್ಮನಲ್ಲದೆ ಇನ್ನ್ಯಾರಿಗೂ ಅಧೀನನಾಗಿ ನಿಯಮಿಸಲ್ಪಡಲು ಯೋಗ್ಯನಲ್ಲದೆ, ಎಂದರೆ ಸರ್ವೇಶ್ವರನಿಗೇನೇ ನಿರುಪಾಧಿಕ ಶೇಷಭೂತನಾಗಿಯೂ ಸರ್ವೇಶ್ವರನಿಂದಲೇ ನಿಯಮಿಸಲ್ಪಡುವನಾಗಿಯೂ ಹೀಗೆ ಶೇಷಭೂತನಾಗಿ ಅತ್ಯನ್ತ ಪರತಂತ್ರನಾದ, **ನಾನ್** - ನಾನು, "**ಆತ್ಮಾಪಿ**, ಈ ನನ್ನ ಶರೀರದಲ್ಲಿರುವ ಜೀವಾತ್ಮನೂ ಕೂಡ, **ಅಯಂಚ**-ಈ ಆತ್ಮೀಯವಾದ ಜನಸಮೂಹ ರಾಜ್ಯವೊದಲಾದವೂ ಸಹ, **ನಮಮ**-ನನಗೆ ಸೇರಿದುದಲ್ಲವು, ಇದು ಮೂಲತಂತ್ರದ "**ನಮಶ್ಶಬ್ದದರ್ಥವು**" **ಎಙ್ಗಿರಪಡಿಯೇ**-ಎಂದು ಹೇಳಿರುವ ರೀತಿಯಲ್ಲಿ, **ಎನಕ್ಕುರಿಯೇ ನಲ್ಲೇನ್** - ನಾನೇ ಶೇಷಿಯಾಗಿರಲು ಶಕ್ತನಲ್ಲವು ; ಮತ್ತು **ಒನ್ರೈ**-ಒಂದನ್ನಾದರೂ, ನಿರುಪಾಧಿಕವಾಗಿ, **ಎನ್ನದೆನ್ರುವುರಿಯೇ ನಲ್ಲೇನ್** - ನನ್ನದೆಂದು ಅಭಿಮಾನಿಸಲೂ ಯೋಗ್ಯತೆ ಇಲ್ಲವು ; "**ಸ್ವಯಂ**-ತಾನೇ, **ಮೃತ್ಪಿಂಡಭೂತಸ್ಯ** - ಸರ್ವೇಶ್ವರನಿಂದುಂಟಾದ ಸತ್ತೆಯಿಲ್ಲದ ಪಕ್ಷದಲ್ಲಿ ಮಣ್ಣಿನ ಮುದ್ದೆಯ

---

(೧) ಭಾರ ಶಾಂ ೨೫ ೧೯ (೨) ಭಾರ ಶಾಂ ೨೯೪-೧೬

ತ್ರಸ್ಯ ದೇಹಿನಃ । ಸ್ವರಕ್ಷಣೇಽಪ್ಯಶಕ್ತಸ್ಯ ಕೋ ಹೇತುಃ ಪರರಕ್ಷಣೇ ॥" ಎಙ್ಗ್ಗರಪಡಿಯೇ ಎನ್ನೈಯುಮೆನ್ನದೆನ್ರು ಪೇರ್ ಪೆತ್ತವತ್ತೈಯುಮ್ ನಾನೇ ಸ್ವತಂತ್ರನಾಯುಮ್ ಪ್ರಧಾನಫಲಿಯಾಯುಮ್ ರಕ್ಷಿತ್ತು ಕ್ಕೊಳ್ಳೈಯೋಗ್ಯನುಮಲ್ಲೇನ್, (೧)"ಆತ್ಮಾರಾಜ್ಯಂ ಧನಂಚೈವ ಕಳತ್ರಂ ವಾಹನಾನಿ ಚ । ಏತದ್ಭಗವತೇ ಸರ್ವಮಿತಿ ತತ್ಪ್ರೇಕ್ಷಿತಂ ಸದಾ ।" ಎನ್ರು ವಿವೇಕಿಗಳ್ ಅನುಸನ್ಧಿತ್ತ ಕ್ರಮತ್ತಿಲೇ ಎನ್ನುಡೈಯ ವಾತ್ಮಾತ್ಮೀಯಙ್ಗಳುಮ್ ಅವನದೇ (೨) "ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ

ಹಾಗೆ ಏನೊಂದೂ ಸತ್ವವಿಲ್ಲದಿರುವ, **ಪರತಂತ್ರಸ್ಯ** - ಅಕಾರಣದಿಂದ ಸಂಪೂರ್ಣ ಪರತಂತ್ರನಾದ, **ದೇಹಿನಃ** - ಶರೀರವನ್ನು ಹೊಂದಿರುವ ಈ ಜೀವಾತ್ಮನಿಗೆ, **ಸ್ವರಕ್ಷಣೇಽಪ್ಯಶಕ್ತಸ್ಯ** - ತನ್ನ ರಕ್ಷಣೆಯಲ್ಲೂ ಕೂಡ ಅಶಕ್ತನಾಗಿರುವಾಗ **ಪರರಕ್ಷಣೇ** ಇತರರನ್ನು ರಕ್ಷಿಸುವದರಲ್ಲಿ, **ಕೋ ಹೇತುಃ** - ಕಾರಣವೇನಿದೆ ಎಂದರೆ ಸಂಪೂರ್ಣವಾಗಿ ಅಶಕ್ತನೇ ಎಂಬ ಭಾವವು," **ಎಙ್ಗ್ಗರಪಡಿಯೇ** - ಎಂದು ಹೇಳಿರುವ ಹಾಗೆ, **ಎನ್ನೈಯುಮ್** - ನನ್ನನ್ನೂ, **ಎನ್ನದೆನು, ಪೇರ್‌ಪೆತ್ತವತ್ತೈಯುಮ್** - ನನ್ನದೆಂದು ಹೆಸರನ್ನು ಹೊಂದಿರುವಂಥಾದ್ದನ್ನೂ ಸಹ, ನಾನೇ ಸ್ವತಂತ್ರನಾಗಿಯೂ, **ಪ್ರಧಾನಫಲಿಯಾಯುಮ್** - ಮುಖ್ಯವಾದ ಫಲಾನುಭವಮಾಡುವವನಾಗಿ, ಅಥವಾ ಮುಖ್ಯಕರ್ತೃವಾಗಿ, **ರಕ್ಷಿತ್ತುಕೊಳ್ಳೈಯೋಗ್ಯನುಮಲ್ಲೇನ್** - ರಕ್ಷಿಸಿಕೊಳ್ಳಲೂ ಯೋಗ್ಯನಲ್ಲವು, " **ಆತ್ಮಾ** - ಜೀವಾತ್ಮನೂ, **ರಾಜ್ಯವೂ, ಧನವೂ** ಕೂಡ, **ಕಳತ್ರಂ** - ಹೆಂಡತಿಯೂ, ವಾಹನಗಳೂ ಸಹ, ಏತತ್ ಸರ್ವಂ - ಇವೆಲ್ಲವೂ, **ಭಗವತೇ** - ಭಗವಂತನಿಗಾಗಿಯೇ, ಇತಿ - ಎಂಬುದಾಗಿ, **ಸದಾ** - ಯಾವಾಗಲೂ **ತತ್ಪ್ರೇಕ್ಷಿತಂ ತತ್** - ಆ ಉಪರಿಚರವಸುವಿನ, **ಪ್ರೇಕ್ಷಿತಂ** - ಭಾವನೆಯು, ಅನುಸಂಧಾನವು," **ಎನ್ರು ವಿವೇಕಿಗಳ್** - ಜೀವ ಪರಮಾತ್ಮಭೇದಗಳನ್ನರಿತ ಸಾರಾಸಾರ ವಿವೇಕಜ್ಞಾನವುಳ್ಳವರು, **ಅನುಸನ್ಧಿತ್ತಕ್ರಮತ್ತಿಲೆ** - ಅನುಸಂಧಾನಮಾಡಿದ ರೀತಿಯಲ್ಲಿ, **ಎನ್ನುಡೈಯ ಆತ್ಮಾತ್ಮೀಯಙ್ಗಳುಮ್** - ನನ್ನ ಆತ್ಮಾ ಮತ್ತು ನನಗೆ ಸಂಬಂಧಪಟ್ಟ ಚೇತನಾ ಚೇತನವರ್ಗವೂ, **ಅವನದೇ** - ಅವನಿಗೆ ಸೇರಿದವುಗಳೇ, ಮತ್ತು (೨) **ಆತ್ಮಾತ್ಮೀಯಭರನ್ಯಾಸೋ ಹಿ** - ತನ್ನ ಮತ್ತು ತನಗೆ ಸೇರಿದವರ ರಕ್ಷಣೆಯ ಭಾರವನ್ನು ಪರಮಾತ್ಮನಲ್ಲಿಡುವದು ತಾನೇ,

---

(೧) ಭಾರ ಶಾಂ ೩೪೦-೨೪ (೨) ಲಕ್ಷ್ಮೀತಂತ್ರ ೧೭-೭೯

ಉಚ್ಯತೇ"ಎನ್ಗೈಯಾಲ್ ಇವರ್ಗಳುಡೈಯ ರಕ್ಷಣ ಭರಮುಮ್ (೧) "ನಹಿಪಾಲನ ಸಾಮರ್ಥ್ಯಮೃತೇ ಸರ್ವೇಶ್ವರಂ ಹರಿಂ" ಎಙ್ಗಿಱಪಡಿಯೇ ರಕ್ಷಕನಾನ ಅವನದೇ (೨) "ತೇನ ಸಂರಕ್ಷಮಾಣಸ್ಯ ಫಲೇ ಸ್ವಾಮ್ಯ ವಿಯುಕ್ತತಾ। ಕೇಶವಾರ್ಪಣ ಪರ್ಯಂತಾ ಹ್ಯಾತ್ಮನಿಕ್ಷೇಪ ಉಚ್ಯತೇ" ಎಙ್ಗಿಱಪಡಿಯೇ ರಕ್ಷಣಫಲಮುಮ್ ಪ್ರಧಾನಫಲಿಯಾನ ಅವನದೇ, ಎನ್ರು ಭಾವಿಕ್ಕೈ.

ಆತ್ಮನಿಕ್ಷೇಪ ಉಚ್ಯತೇ - ಆತ್ಮನಿಕ್ಷೇಪವೆಂದು ಹೇಳಿಸಿಕೊಳ್ಳುತ್ತದೆ," **ಎನ್ಗೈಯಾಲ್**-ಎಂದು ಹೇಳಿರುವದರಿಂದ, **ಇವರ್ಗಳುಡೈಯ ರಕ್ಷಣಭರಮುಮ್**-ಇವುಗಳ ರಕ್ಷಣಭರವೂ ಕೂಡ, "**ಸರ್ವೇಶ್ವರಂ ಹರಿಂ ಋತೇ**-ಸರ್ವೇಶ್ವರನಾದ ಶ್ರೀಹರಿಯನ್ನು ಬಿಟ್ಟರೆ, **ನ ಹಿ ಪಾಲನಸಾಮರ್ಥ್ಯಂ** - ಬ್ರಹ್ಮರುದ್ರೇಂದ್ರಾದಿಗಳೇ ಮೊದಲಾದ ಯಾರಿಗೂ ರಕ್ಷಿಸುವ ಸಾಮರ್ಥ್ಯವಿಲ್ಲವು" **ಎಙ್ಗಿಱಪಡಿಯೇ** - ಎಂದು ಹೇಳಿರುವ ಹಾಗೆ, **ಸರ್ವರಕ್ಷಕನಾನ ಅವನದೇ** – ಸರ್ವಲೋಕಶರಣ್ಯನೆನಿಸಿ ಸರ್ವರಕ್ಷಕನಾಗಿರುವ ಶ್ರಿಯಃಪತಿಗೆ ಸೇರಿದುದೇ, ಮತ್ತು (೨) **ತೇನ** - ಆ ಸರ್ವೇಶ್ವರನಿಂದ, **ಸಂರಕ್ಷಮಾಣಸ್ಯ** - ಸಂರಕ್ಷಿಸಲ್ಪಡುವವನಿಗೆ, **ಫಲೇ** - ರಕ್ಷಣ ಪ್ರಯೋಜನದಲ್ಲಿ, **ಕೇಶವಾರ್ಪಣಪರ್ಯನ್ತಾ** - ಬ್ರಹ್ಮರುದ್ರರುಗಳಿಗೂ ಸ್ವಾಮಿಯಾದ ಶ್ರಿಯಃಪತಿಯಲ್ಲಿ ಸಮರ್ಪಣೆಮಾಡುವ ಪರ್ಯನ್ತವಾದ, **ಸ್ವಾಮ್ಯ ವಿಯುಕ್ತತಾ ಹಿ** - ತನಗೆ ಸ್ವಾಮಿತ್ವವಿಲ್ಲದಿರುವಿಕೆಯೇ, **ಆತ್ಮನಿಕ್ಷೇಪ ಉಚ್ಯತೇ** - ಆತ್ಮನಿಕ್ಷೇಪವೆಂದು ಹೇಳಿಸಿಕೊಳ್ಳುತ್ತದೆ," **ಎಙ್ಗಿಱಪಡಿಯೇ** - ಎಂದು ಹೇಳಿರುವಹಾಗೆ, **ಪ್ರಧಾನಫಲಿಯಾನ**-ಮುಖ್ಯ ಕರ್ತಾ ಭೋಕ್ತಾವಾದ **ಅವನದೇ** – ಸರ್ವೇಶ್ವರನದೇ **ಎನ್ರುಭಾವಿಕ್ಕೈ** - ಎಂದು ಭಾವಿಸೋಣವು. ಇದು ದೊಡ್ಡವಾಕ್ಯವು. ಆತ್ಮನಿಕ್ಷೇಪವೆಂಬುವದು ಮೂರು ಅಂಶಗಳುಳ್ಳದ್ದಾಗಿರಬೇಕೆಂದು ಮೂರು ಸಲ ಅವನದೇ ಎಂದು ಪ್ರಯೋಗಿಸಿ, ಆತ್ಮನಿಕ್ಷೇಪದಲ್ಲಿ ಸ್ವರೂಪನ್ಯಾಸ, ರಕ್ಷಾಭರನ್ಯಾಸ, ಫಲನ್ಯಾಸ ಮೂರೂ ಇರಬೇಕೆಂಬದಾಗಿ ಉಪದೇಶಿಸಿ, ಆ ಅಭಿಪ್ರಾಯಗಳಿಗೆ ಪ್ರಮಾಣಗಳನ್ನು ಉದಾಹರಿಸಿರುತ್ತಾರೆ. ಮುಖ್ಯವಾಗಿ ಈ ದೊಡ್ಡ ವಾಕ್ಯದ ಮೂಲಕ "**ಸ್ವಾತ್ಮಾನಂ ಮಯಿ ನಿಕ್ಷಿಪೇತ್**" ಎಂಬ ಸಾತ್ವಿಕತನ್ತ್ರದ ವಿಧಿವಾಕ್ಯಕ್ಕೆ ವ್ಯಾಖ್ಯಾನವನ್ನು ಅನುಗ್ರಹಿಸುತ್ತಾರೆ. ಈ ಆತ್ಮನಿಕ್ಷೇಪಕ್ಕೆ ಸೇರಿದ ಮೂರು ನ್ಯಾಸಗಳು ಯಾವುವೆಂದರೆ:—

೧. ಆತ್ಮಾತ್ಮೀಯಗಳೂ ಸರ್ವೇಶ್ವರನಿಗೆ ಸೇರಿದುದೇ ಎಂಬ ಭಾವನೆಯಿರ

[೧] ವಿ ಪು ೧ ೨೨ ೨೧ [೨] ಲಕ್ಷ್ಮೀತಂತ್ರ ೧೭ ೭೪

ಬೇಕು. ಇದಕ್ಕೆ ಪ್ರಮಾಣವು "ಆತ್ಮಾತ್ಮೀಯಭರನ್ಯಾಸೋಹ್ಯಾತ್ಮನಿಕ್ಷೇಪ ಉಚ್ಯತೇ" ಇದು ಏತಕ್ಕೆ ಅಂತಹ ಅನುಸನ್ಧಾನವೆಂದರೆ ;—ಸರ್ವೇಶ್ವರನಾದರೋ ಸರ್ವಸ್ವತನ್ತ್ರನು, ಸರ್ವಶೇಷಿಯು, ಸರ್ವರಕ್ಷಕನು; ನಾವಾದರೋ ಅತ್ಯನ್ತ ಪರತನ್ತ್ರರು. **ಅನನ್ಯಾರ್ಹಾನನ್ಯಾಧೀನ ಶೇಷಭೂತರು.** ಇಲ್ಲಿ **ಅನನ್ಯಾರ್ಹ**ವೆಂದು ಹೇಳಿದುದರಿಂದ ಸರ್ವೇಶ್ವರನಲ್ಲದೆ ಇನ್ನು ಯಾರೂ ಶೇಷಿಯಾಗಿರಲು ಯೋಗ್ಯರಲ್ಲವೆಂದೂ, **ಅನನ್ಯಾಧೀನ**ವೆಂದು ಹೇಳಿದುದರಿಂದ ಈಶ್ವರನಲ್ಲದೆ ಬೇರೇ ಇನ್ನು ಯಾರೂ **ನಿಯಂತಾವಿಲ್ಲ**ವೆಂದೂ ತೋರಿಬರುತ್ತದೆ. ಹೀಗೆ ಈಶ್ವರನೇ ನಮಗೆ ರಕ್ಷಕನು, ನಾವೇ ಆತನಿಂದ ರಕ್ಷ್ಯವಸ್ತುವು ಹೀಗೆ ರಕ್ಷ್ಯರಕ್ಷಕ ಸಂಬಂಧವು ಆತನಿಗೂ ನಮಗೂ ತಪ್ಪಿದ್ದಲ್ಲವು, ಇದು ವಿಧಿನಿರ್ಮಿತವು. ಈ ಅಭಿಪ್ರಾಯವೇ ಶ್ರೀ ಯಾಮುನೆಯರವರ

"ತದಹಂ ತ್ವದೃತೇನ ನಾಥವಾನ್ಮದೃತೇತ್ವಂ ದಯನೀಯವಾನ್ನಚ
ವಿಧಿ ನಿರ್ಮಿತ ಮೇತ ದನ್ವಯಂ ಭಗವನ್ಪಾಲಯ ಮಾಸ್ಮಜೀಹಪಃ॥

ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುತ್ತದೆ (ಸ್ತೋತ್ರರತ್ನ ೫೧) ಈ ಶ್ಲೋಕಾರ್ಥವೇನೆಂದರೆ ;—ಓ ಹೇಯ ಗುಣರಹಿತನಾಗಿ ಕಲ್ಯಾಣಗುಣಾಕರನಾಗಿರುವ ಸರ್ವೇಶ್ವರನೇ, ನಿನ್ನನ್ನು ಬಿಟ್ಟರೆ ನನಗೆ ಶೇಷಿಯಾಗಿ ಸ್ವಾಮಿಯಾಗಿ ರಕ್ಷಕನಾಗಿರುವವರು ಯಾರೊ ಇಲ್ಲವು, ನನ್ನನ್ನು ಅಥವಾ ನನಗೆ ಸಮಾನನಾದವರನ್ನು ನೀನು ತೊರೆದರೆ ನಿನ್ನ ದಯೆಗೆ ಪಾತ್ರರಾಗಿರುವ ಶೇಷರಾಗಿ ದಾಸರಾಗಿ ರಕ್ಷ್ಯವಾದ ಚೇತನವರ್ಗವೇ ಇಲ್ಲವು. ಈ ವಿಧವಾದ ನಮ್ಮಿಬ್ಬರಿಗಿರುವ ಸಂಬಂಧವು ನಿನ್ನ ಸಙ್ಕಲ್ಪದಿಂದಲೇ ನಿಯಮಿತವಾದುದು. ಆದುದರಿಂದ ಆ ಸಂಬಂಧವನ್ನು ನೀನು ಕಾಪಾಡಿಕೊಳ್ಳತಕ್ಕದ್ದು, ತ್ಯಜಿಸತಕ್ಕದ್ದಲ್ಲವು ಎಂಬ ಭಾವವು. ಆದುದರಿಂದ ಆತ್ಮಾತ್ಮೀಯಗಳು ಅವನದೇ ಎಂಬ ಭಾವನೆ ಇರಬೇಕೆಂಬುವದೂ ಅಲ್ಲದೆ,

೩. ಆತ್ಮಾತ್ಮೀಯಗಳ ರಕ್ಷಣಭರವೂ ಅವನದೇ ಎಂಬ ಭಾವನೆಯೂ ಇರಬೇಕೆಂದು ಹೇಳಿದಂತಾಯಿತು. ಇದಕ್ಕೆ ಉದಾಹರಿಸಿರುವ ಪ್ರಮಾಣವು;—

"ನಹಿಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂ ಹರಿಂ" ಇದಕ್ಕೆ ಅನೇಕ ಪುರಾಣೋಕ್ತ ಇತಿಹಾಸಗಳುಂಟು. ಚತುರ್ಮುಖಬ್ರಹ್ಮನಿಗೆ ಮಧುಕೈಟಭರಿಂದುಂಟಾದ, ರುದ್ರನಿಗೆ ಬಾಣಾಸುರ ಭಸ್ಮಾಸುರಾದಿಗಳಿಂದುಂಟಾದ, ಇಂದ್ರನಿಗೆ ದುರ್ವಾಸಮುನಿ ವೃತ್ರಾಸುರರಿಂದುಂಟಾದ, ಭಯಗಳಿಂದ ರಕ್ಷಿಸಲು ಶ್ರೀಹರಿಯೇ ಶಕ್ತನಾದವನೇ ವಿನಾ ಇತರರಾಗಲಿಲ್ಲವು ಎಂಬಿವೇ ಮೊದಲಾದವೇ ಇದಕ್ಕೆ ನಿದರ್ಶನಗಳು. ಹೀಗೆ ಈ ಬ್ರಹ್ಮರುದ್ರೇಂದ್ರಾದಿಗಳು ತಾನೇ ಸ್ವತಃ

ಮಣ್ಣಿನ ಮುದ್ದೆಯು ಹಾಗೆ ಇದ್ದುಕೊಂಡು ತನ್ನನ್ನೇ ರಕ್ಷಿಸಿಕೊಳ್ಳಲು ಸಾಮರ್ಥ್ಯವಿಲ್ಲದವರು ಇತರರನ್ನು ರಕ್ಷಿಸಿಯಾರೇ ? ಅವರಿಗೆ ಯೋಗ್ಯತೆಯುಂಟೇ ? ಸರ್ವಾತ್ಮನಾ ಇಲ್ಲವೆಂಬ ಭಾವವು. ಆದರೆ ನಿತ್ಯಸೂರಿಗಳು ಇಲ್ಲಿ ಅವತರಿಸಿ, ಅವರಲ್ಲಿಯೂ ಕೂಡ ಶೇಷಿತ್ವ ಉಂಟಲ್ಲಾ, ಅವರು ರಕ್ಷಕರಲ್ಲವೋ, ಶ್ರೀಹರಿ ಮಾತ್ರವೇ ಹೇಗೆ ರಕ್ಷಕನು ಎಂದರೆ ಅವರುಗಳಿಂದ ಪುರುಷಕಾರರೂಪ ಪ್ರಯೋಜನವೇ ವಿನಾ, ಸಾಕ್ಷಾದ್ರಕ್ಷಕತ್ವವಿಲ್ಲವು. ಇಲ್ಲಿ **ನಹಿಪಾಲನಸಾಮರ್ಥ್ಯಂ** - ಎಂಬಲ್ಲಿ ಭಯದಶೆಯಿಂದ ರಕ್ಷಿಸುವದು ಮಾತ್ರವೇ ಅರ್ಥವಲ್ಲವು. ಚೇತನನಿಗೆ ಮುಖ್ಯ ಭಯವು ಸಂಸಾರವು. ಅದನ್ನು ತಪ್ಪಿಸಿ ನಿರತಿಶಯಾನಂದವನ್ನು ಕೊಟ್ಟು ರಕ್ಷಿಸಿ, ಅಭಯವನ್ನುಂಟುಮಾಡುವದೇ ಮುಖ್ಯಪಾಲನೆಯು. ಈ ಶಕ್ತಿಯು ಶ್ರೀಹರಿಗಲ್ಲದೆ ಇತರರಿಗೆ ಸರ್ವಾತ್ಮನಾ ಇಲ್ಲವೆಂಬ ಭಾವನೆಯೂ ಆವಶ್ಯಕವು.

೩. ಈ ಆತ್ಮಾತ್ಮೀಯರ ರಕ್ಷಣದಿಂದುಂಟಾಗುವ ಫಲವೂ ಅವನದೇ ಎಂಬ ಭಾವನೆಯೂ, ಇರಬೇಕು. ಫಲವನ್ನೂ ಕೂಡ ಆತನಲ್ಲೇ ಸಮರ್ಪಿಸತಕ್ಕದ್ದೆಂಬ ಭಾವವು. ಆದರೆ ಈ ಮೋಕ್ಷಾರ್ಥಿಗೇನೂ ಫಲವಿಲ್ಲವೋ ? ಎಂದರೆ ಆ ಫಲವು **ಮುಖ್ಯ ಫಲಿಯಾದ** ಅವನಿಗೆ ಎಂದು ಹೇಳಿರುತ್ತಾರೆ. ಜೀವನು ಅಪ್ರಧಾನ ಫಲಿಯು, ಸರ್ವೇಶ್ವರನು ಪ್ರಧಾನ ಫಲಿಯು ಎಂಬ ಭಾವವು. ತನಗೆ ಉಂಟಾಗುವ ಭೋಗಾಂಶವು ತನ್ನ ಸ್ವಾಮಿಯಾದವನ ಭೋಗ ಶೇಷವಾಗಿ ಪ್ರಾಪ್ತವಾಗುವದರಿಂದ, ಇಲ್ಲಿ ಅವನದೇ ಎಂಬ ಅವಧಾರಣವು ಯುಕ್ತವಾಗುವದೇ. ಆದರೆ ಸ್ವಾಮಿಗೆ ಈ ಪ್ರಪನ್ನನ ಸಂರಕ್ಷಣೆಯಿಂದುಂಟಾಗುವ ಪ್ರಯೋಜನವೇನು ? ಎಂದರೆ, "**ಆತ್ಮಸನಾಯಾಸಹನೋದಸೇತ್ಸಂ** " ಎಂದು ಶರಣಾಗತಿ ದೀಪಿಕೆಯಲ್ಲಿ ಹೇಳಿರುವಹಾಗೆ ಲಕ್ಷ್ಮೀನಾರಾಯಣರಿಗೆ ಲೀಲಾರೂಪ ಭೋಗವೇ ಪ್ರಯೋಜನವು. "ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" "ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ" ಇತ್ಯಾದಿಗಳಲ್ಲಿ ತೋರುವ ಸತ್ಯಸಂಕಲ್ಪತ್ವ, **ಯದಿವಾ ರಾವಣಃ ಸ್ವಯಂ** ಎಂಬಲ್ಲಿ ತೋರುವ ಕ್ಷಮಾ ಕರುಣಾದಿಗಳೂ, ಉದಾರಾಸ್ಸರ್ವ ಏವೈತೇ ಎಂಬಲ್ಲಿ ತೋರುವ ಔದಾರ್ಯ ಮುಂತಾದವುಗಳು ಸರ್ವೇಶ್ವರನಲ್ಲುಂಟೆಂಬುವದೇ ಪ್ರಯೋಜನವು. ಹೀಗೆ ಪ್ರಪದನವು, ಆತ್ಮಾತ್ಮೀಯ ಭರನ್ಯಾಸ, ಅವುಗಳ ರಕ್ಷಾಭರನ್ಯಾಸ, ಫಲಭರನ್ಯಾಸ, ಈ ಮೂರರಿಂದಲೂ ಸೇರಿದ ಭಾವನೆ ಎಂದು ಹೇಳಿದಂತಾದರೆ, ಶರಣಾಗತಿಯನ್ನು ಮೋಕ್ಷೇತರ ಫಲಕ್ಕಾಗಿಯೂ ಅನುಷ್ಠಿಸಬಹುದು ; ಮತ್ತು ಉಪಾಸಕನಿಗೂ ಕೂಡ ಇವು ಮೂರು ಆವಶ್ಯಕವೆಂದು ತೋರಬಹುದು ; ಇವುಗಳು ಉಪಾಸಕನಿಗೆ ಅನಾವಶ್ಯಕವೆಂದರೆ ಸ್ವರೂಪಫಲ ಸಮರ್ಪಣೆಗಳು ಉಪಾಸಕನಿಗೂ ಬೇಡವೋ ಇತ್ಯಾದಿ ಶಂಕಾನಿವೃತ್ತಿಗಾಗಿ, ಮೋಕ್ಷಾರ್ಥಿಯು,

ಮುಮುಕ್ಷುಮಾತ್ರಸಾಮಾನ್ಯಂ ಸ್ವರೂಪಾದಿ ಸಮರ್ಪಣಂ ।
ಅಕಿಞ್ಚನೇ ಭರನ್ಯಾಸಸ್ತ್ವಧಿಕೋಽಂಗಿತಯಾ ಸ್ಥಿತಃ ॥ ೫ ॥

ಉಪಾಸಕನಾಗಿ ಸಕಿಂಚನನೇಯಾಗಲಿ, ಪ್ರಪನ್ನನಾಗಿ ಅಕಿಂಚನನೇಯಾಗಲಿ, ಸ್ವರೂಪ ಫಲಸಮರ್ಪಣೆಗಳ ಅನುಸಂಧಾನವು ಅತ್ಯಾವಶ್ಯಕವೆಂದೂ, ಅಕಿಂಚನನಾದ ಪಕ್ಷದಲ್ಲಿ ಇವುಗಳಿಂದ ಸೇರಿದ ಆತ್ಮಾತ್ಮೀಯ ರಕ್ಷಾಭರಸಮರ್ಪಣೆಯೂ ಆವಶ್ಯಕವೆಂದೂ, ಮುಂದಿನ ಕಾರಿಕೆಯಿಂದುಪದೇಶಿಸುತ್ತಾರೆ. ಇನ್ನೊಂದು ಕಾರಿಕೆಯಿಂದ, ಮೋಕ್ಷ ಮತ್ತು ಮೋಕ್ಷೇತರ ಫಲಾಕಾಂಕ್ಷೆಯುಳ್ಳ ಅಧಿಕಾರಿಗಳಿಗಿರುವ ವೈಲಕ್ಷಣ್ಯವನ್ನು ಪ್ರಕಾಶಿಸುವವರಾಗಿ, ರಕ್ಷಾಭರನ್ಯಾಸವು ಸಕಲ ವಿಧ ಐಹಿಕಾಮುಷ್ಮಿಕ ಪುರುಷಾರ್ಥಗಳಲ್ಲೂ ಉಂಟೆಂದು ಹೇಳಿ, ಮೋಕ್ಷಾರ್ಥಿಗಳಿಗೆ ಸ್ವರೂಪ ಫಲನಿಕ್ಷೇಪಗಳೂ ಸಹ ಆವಶ್ಯಕವೆಂದುಪದೇಶಿಸುತ್ತಾರೆ.

ಮುಮುಕ್ಷು ಮಾತ್ರ ಸಾಮಾನ್ಯಂ – ಮೋಕ್ಷಾರ್ಥಿಯಾಗಿದ್ದರೆ ಸಾಕು ಅಂಥಾವರೆಲ್ಲರಿಗೂ ಸಾಧಾರಣವಾದುದು. **ಸ್ವರೂಪಾದಿ ಸಮರ್ಪಣಂ** - ಸ್ವರೂಪ ಸಮರ್ಪಣವೂ, ಆದಿಶಬ್ದದಿಂದ ಫಲಸಮರ್ಪಣವೂ ಸಹ; ಇದರ ಅಭಿಪ್ರಾಯವೇನೆಂದರೆ ಮೋಕ್ಷಾರ್ಥಿಯು ಭಕ್ತಿಯೋಗನಿಷ್ಠನಾಗಿಯಾದರೂ ಅಥವಾ ಸ್ವತಂತ್ರ ಪ್ರಪತ್ತಿನಿಷ್ಠನಾಗಿಯಾದರೂ ಇರಬಹುದು. ಈ ಎರಡು ವಿಧ ಅಧಿಕಾರಿಯು ನಿಷ್ಠೆಯಲ್ಲೂ ಸ್ವರೂಪ ಫಲನಿಕ್ಷೇಪಗಳಿರಬೇಕೆಂಬ ಭಾವವು. ಇದರೊಂದಿಗೆ ಸರ್ವವಿಧ ಶರಣಾಗತಿಯಲ್ಲೂ ಇರಬೇಕಾದ ರಕ್ಷಾಭರಸಮರ್ಪಣವೂ ಇರಬೇಕಾದುದು ಆವಶ್ಯಕವಾಗಿ ಮುಂದೆ ಹೇಳಲ್ಪಡುವದರಿಂದ ಅದು ಇಲ್ಲಿ ಹೇಳಲ್ಪಡಲಿಲ್ಲವು. ಆದರೆ **ಅಕಿಂಚನೇತು** - ಆಕಿಂಚನ್ಯವು ಅಂಗವಾಗಿರುವ ಸ್ವತಂತ್ರ ಪ್ರಪತ್ತಿಯನ್ನನುಷ್ಠಿಸುವವನಿಗಾದರೋ **ಭರನ್ಯಾಸಃ** – ಆತ್ಮಾತ್ಮೀಯ ರಕ್ಷಾಭರನ್ಯಾಸವು, **ಅಂಗಿತಯಾ** – ಅಂಗಿಯಾಗಿ, **ಸ್ಥಿತಃ** - ವಿಹಿತವಾಗಿರುವದು, ಅಧಿಕಃ-ಹೆಚ್ಚಾದುದು ಎಂದರೆ ಹೆಚ್ಚಾದ ವೈಲಕ್ಷಣ್ಯವೆಂಬ ತಾತ್ಪರ್ಯವು. ಮುಮುಕ್ಷುವಿನ ಶರಣಾಗತಿಯ ಅಂಗಿಯಾದ ಭರನ್ಯಾಸದಲ್ಲಿ, ಸ್ವರೂಪ ಫಲಸಮರ್ಪಣಗಳಿರಬೇಕೆಂದು ಹೇಳಲ್ಪಟ್ಟಿತು. ಇವುಗಳೊಂದಿಗೆ ಮುಮುಕ್ಷು ಬುಭುಕ್ಷು ಸರ್ವವಿಧ ಶರಣಾಗತಿಗಳಲ್ಲೂ ಅಂಗಿಯಲ್ಲಿರಬೇಕಾದ ರಕ್ಷಾಭರಸಮರ್ಪಣೆಯೂ ಇರತಕ್ಕದ್ದು. ಆದರೆ ಆ ಮುಮುಕ್ಷುವಾದ ಅಧಿಕಾರಿಯು ಆಕಿಂಚನನಾದರೆ, ಎಂದರೆ ಉಪಾಸನಕ್ಕೆ ಅಶಕ್ತನಾಗಿ ಪ್ರಪತ್ತ್ಯಧಿಕಾರಿಯಾದರೆ ಮೇಲೆ ಹೇಳಿದ ಸ್ವರೂಪಫಲ ಭರಸಮರ್ಪಣಗಳೊಂದಿಗೆ ಆತ್ಮಾತ್ಮೀಯ ಭರಸಮರ್ಪಣವೂ ಅಂಗಿಯಲ್ಲಿರತಕ್ಕದ್ದೆಂದು ವಿಶದೀಕರಿಸಿರುತ್ತಾರೆ. " ಆತ್ಮಾ

ಅತ್ರ ರಕ್ಷಾ ಭರನ್ಯಾಸಸ್ಸಮಃ ಸರ್ವ ಫಲಾರ್ಥಿನಾಂ ।
ಸ್ವರೂಪ ಫಲನಿಕ್ಷೇಪ ಸ್ತ್ವಧಿಕೋ ಮೋಕ್ಷಕಾಂಕ್ಷಿಣಾಂ ॥ ೬ ॥

ತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ" ಎಂಬ ಪ್ರಮಾಣವು ಈ ಮೇಲಿನ ಭರನ್ಯಾಸವನ್ನು ಸೂಚಿಸುತ್ತದೆ ಅಕಿಂಚನನಾದ ಪ್ರಪತ್ತ್ಯಧಿಕಾರಿಯಲ್ಲಿ ರಕ್ಷಾಭರನ್ಯಾಸವು, ಆತ್ಮಾತ್ಮೀಯ ರಕ್ಷಾಭರನ್ಯಾಸರೂಪವಾದುದೆಂಬುವದು ಈ ಉತ್ತರಾರ್ಧದ ತಾತ್ಪರ್ಯವು.

ಅತ್ರ - ಈ ಅಕಿಂಚನಾಧಿಕಾರಿಯಾಗಿರುವ ಸಂದರ್ಭದಲ್ಲಿ ಎಂದರೆ ಪ್ರಪತ್ತಿಯಲ್ಲಿ, **ಸರ್ವ ಫಲಾರ್ಥಿನಾಂ** - ಚತುರ್ವಿಧ ಪುರುಷಾರ್ಥಗಳನ್ನಪೇಕ್ಷಿಸುವ ಸರ್ವರಿಗೂ, **ಭರನ್ಯಾಸಃ** - ಈ ರಕ್ಷಾಭರನ್ಯಾಸವು, **ಸಮಃ** - ಸಾಧಾರಣವಾದುದು. **ಸ್ವರೂಪಫಲನಿಕ್ಷೇಪಸ್ತು** - ಸ್ವರೂಪನಿಕ್ಷೇಪ, ಫಲನಿಕ್ಷೇಪವಾದರೋ, **ಮೋಕ್ಷಕಾಂಕ್ಷಿಣಾಂ**. ಮೋಕ್ಷಾರ್ಥಿಗಳಿಗೆ **ಅಧಿಕಃ** - ಹೆಚ್ಚಾದುದು.

ಮೋಕ್ಷಾರ್ಥಿಯು (೧) ಉಪಾಸಕನಾದರೆ, ಸ್ವರೂಪಫಲರಕ್ಷಾಭರನಿಕ್ಷೇಪಗಳಾವಶ್ಯಕವು ; ಈ ರಕ್ಷಾಭರವು, ಉಪಾಸನೆಗೆ ಪ್ರತಿಬಂಧಕನಿವೃತ್ತಿರೂಪವಾದುದು.

(೨) ಅಕಿಂಚನನಾದರೆ, ಸ್ವರೂಪಫಲ ಆತ್ಮಾತ್ಮೀಯ ರಕ್ಷಾನಿಕ್ಷೇಪಗಳು ಆವಶ್ಯಕವು.

ಅಕಿಂಚನನು:—ಮೋಕ್ಷಾರ್ಥಿಯಲ್ಲವಿದ್ದರೆ ರಕ್ಷಾಭರನ್ಯಾಸ **ಮಾತ್ರ** ಆವಶ್ಯಕವು ; **ಸ್ವರೂಪ** ಫಲನಿಕ್ಷೇಪವಾಗಲಿ, ಆತ್ಮಾತ್ಮೀಯಭರಸಮರ್ಪಣವಾಗಲಿ ಇಲ್ಲವು; ಎಂಬುವದೀಗ ಸಂಗ್ರಹವಾಗಿ ಈ ಮೇಲಿನ ಎರಡು ಕಾರಿಕೆಗಳ ತಾತ್ಪರ್ಯವು.

ಈಶ್ವರನೇ ಪ್ರಧಾನಫಲಿಯು.

ಹಿಂದೆ ಫಲನಿಕ್ಷೇಪವನ್ನು ಹೇಳುವ ಸಂದರ್ಭದಲ್ಲಿ ಜೀವನೂ ಕೂಡ ಫಲಿಯಾಗಿರುವಾಗ ಈಶ್ವರನು ಪ್ರಧಾನಫಲಿ ಎಂದು ಹೇಳಲ್ಪಟ್ಟಿತು. ಅದು ಹೇಗೆ ಎಂಬುವದನ್ನುಪಪಾದಿಸುತ್ತಾರೆ.

ಫಲಾರ್ಥಿಯಾಯ್ - **ಚತುರ್ವಿಧ** ಪುರುಷಾರ್ಥರೂಪ ಫಲವನ್ನಪೇಕ್ಷಿಸುವವನಾಗಿ, **ಉಪಾಯಾನುಷ್ಠಾನಂ** - ಉಪಾಯಾನುಷ್ಠಾನವನ್ನು, **ಪಣ್ಣುಗಿರ** - ಮಾಡುವ, **ಜೀವನ್ ಫಲಿಯಾಯಿರುಕ್ಕ** - ಜೀವನೇ ಅನುಭವಕರ್ತಾ ಎಂದರೆ

ಈಶ್ವರನ್ ಪ್ರಧಾನ ಫಲೀ

ಫಲಾರ್ಥಿಯಾಯ್ ಉಪಾಯಾನುಷ್ಠಾನಮ್ ಪಣ್ಣುಗಿರ ಜೀವರ್ಗಳ್ ಫಲಿಯಾಯಿರುಕ್ಕ, ಈಶ್ವರನಿಙ್ಙು ಪ್ರಧಾನ ಫಲಿಯಾನಪಡಿ ಯೆಙ್ಙನೇಯೆನ್ನಿಲ್ ? ಅಚಿತ್ತಿನ್ ಪರಿಣಾಮಙ್ಗಳ್ ಪೋಲೇ ಚಿತ್ತುಕ್ಕು ತಾನ್ ಕೊಡುತ್ತ ಪುರುಷಾರ್ಥಙ್ಗಳುಮ್ ಸರ್ವಶೇಷಿಯಾನ ತನಕ್ಕು ಉಗಪ್ಪಾಯಿರುಕ್ಕೈಯಾಲೇ ಈಶ್ವರನ್ ಪ್ರಧಾನ ಫಲಿಯಾಗಿರಾನ್.

ಭೋಕ್ತೃವಾಗಿರುವಾಗ, **ಈಶ್ವರನ್** - ಸರ್ವೇಶ್ವರನು, ಇಙ್ಙು - ಈ ಸಂದರ್ಭದಲ್ಲಿ **ಪ್ರಧಾನಫಲಿಯಾನ ಪಡಿಯೆಙ್ಙನೇ ಎನ್ನಿಲ್ ?** - ಪ್ರಧಾನಭೋಕ್ತೃವಾದವನು ಹೇಗೆ ಎಂದರೆ ? **ಅಚಿತ್ತಿನ್ ಪರಿಣಾಮಙ್ಗಳ್ ಪೋಲೇ** - ಅಚಿತ್ತಿಗೆ ತಾನು ಕೊಟ್ಟ ಪರಿಣಾಮಗಳಿಂದ ಹೇಗೆ ಸರ್ವೇಶ್ವರನು ಸಂತೋಷಪಡುತ್ತಾನೋ ಹಾಗೆಯೇ, **ಚಿತ್ತುಕ್ಕು ತಾನ್ ಕೊಡುತ್ತ** - ಚೇತನರಿಗೂ ಕೂಡ ತಾನು ಕೊಟ್ಟ ಪುರುಷಾರ್ಥಗಳೂ ಕೂಡ, **ಸರ್ವಶೇಷಿಯಾನ** - ಚಿದಚಿತ್ತುಗಳೆಲ್ಲಕ್ಕೂ ಶೇಷಿಯಾದ, **ತನಕ್ಕು ಉಗಪ್ಪಾಯಿರುಕ್ಕೈಯಾಲೇ** - ತನಗೇನೇ ತೃಪ್ತಿಕರವಾಗಿ ಸಂತೋಷಾವಹವಾಗಿರುವದರಿಂದ, **ಈಶ್ವರನ್ ಪ್ರಧಾನ ಫಲಿಯಾಗಿರಾನ್** - ಈಶ್ವರನೇ ಮುಖ್ಯ ಪ್ರಯೋಜನವುಳ್ಳವನಾಗುತ್ತಾನೆ. ಲೋಕದಲ್ಲಿ ಜೀವನೇ ಬಂಧಮೋಕ್ಷಗಳಿಗೆ ವಶನಾಗಿ ಸುಖದುಃಖಾನುಭವಗಳನ್ನು ಮಾಡುವವನು. ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಗಾಗಿ ಉಪಾಯಾನುಷ್ಠಾನಮಾಡತಕ್ಕವನು. ಈಶ್ವರನಿಗೆ ಬಂಧಾದಿಗಳಿಲ್ಲವು, ಇದಕ್ಕಾಗಿ ಆತನು ಉಪಾಯಾನುಷ್ಠಾನ ಮಾಡುವಾವ ಪ್ರಸಕ್ತಿಯಿಲ್ಲವು. ಉಪಾಯಾನುಷ್ಠಾನವನ್ನು ಮಾಡುವವನೇ ಫಲಾನುಭವವನ್ನೂ ಮಾಡುವವನು. ಹೀಗಿರುವಲ್ಲಿ ಈಶ್ವರನು ಪ್ರಧಾನ ಫಲಾನುಭವಮಾಡುವವನು ಹೇಗೆ ಎಂಬುವದು ಆಕ್ಷೇಪವು. ಇದಕ್ಕೆ ಸಮಾಧಾನ ಹೇಗೆಂದರೆ :— ಅಚಿತ್ತಿಗೆ ತನ್ನ ಸಙ್ಕಲ್ಪದಿಂದ ರೂಪರಸಗಂಧಾದಿಗಳೊಂದಿಗೆ ವಿಧವಿಧವಾಗಿ ವಿಚಿತ್ರವಾಗಿ ಪರಿಣಾಮಗಳನ್ನು ಹೊಂದುವ ಶಕ್ತಿಯನ್ನು ಕೊಟ್ಟಿರುತ್ತಾನೆ. ಅಚೇತನವು ಜ್ಞಾನಶೂನ್ಯವಾದುದರಿಂದ ಅದು ಎಂದಿಗೂ ಫಲಿಯಾಗಲಾರದು. ಆದುದರಿಂದ ಈ ಅಚಿತ್ತುಗಳ ಪರಿಣಾಮಗಳಿಗೆ ಈಶ್ವರನು ಆಶ್ರಯನಲ್ಲದಿದ್ದರೂ ಆತನೇ ಅನುಭವಕರ್ತೃ ಹೇಗೆಯೋ, ಹಾಗೆಯೇ ಸರ್ವೇಶ್ವರನು ಚೇತನರುಗಳಿಗೆ ಅವರವರ ಕರ್ಮಾನುಸಾರ ಸುಖದುಃಖಾದಿಗಳನ್ನಿತ್ತು, ತನ್ನನ್ನಾಶ್ರಯಿಸಿ ಬೇಡಿದ, ಇಷ್ಟಾರ್ಥಗಳನ್ನೂ ದಯಪಾಲಿಸಿ, ಅದರಿಂದ ಆತನು ಆನಂದ ಪಡು

ಅಚೇತನಮಾನ ಕುಳಮಣನೈ ಯುಳಿತ್ತುಪ್ಪಣ್ಣಿಯುಮ್ ಆಭರಣಮ್ ಪೂಟ್ಟಿಯುಮ್, ಅೞಗುಕಣ್ಡುಗಕ್ಕಿರತ್ತೋಡುಮ್, ಚೇತನಮಾನ ಕಿಳಿಯೈ ಪಂಜರತ್ತಿಲ್ ವೈತ್ತು ಪ್ಪಾಲ್ ಕೊಡುತ್ತುಮ್ ವೇಣ್ಡಿನ ಪಡಿಪರಕ್ಕ ವಿಟ್ಟುಮ್ ಅದಿ ನುಗಪ್ಪು ಕಣ್ಡುಗಕ್ಕಿರತ್ತೋಡು ವಾಶಿಯಿಲ್ಲೈಯಿರೆ ನಿರಪೇಕ್ಷರಾನ ರಸಿಕರುಕ್ಕು.

ತ್ತಾನೆ. ಆದುದರಿಂದ ಆತನು ಪ್ರಧಾನಫಲಿಎಂಬುವದು ಸಿದ್ಧವೆಂಬ ಭಾವವು. ಹೀಗೆ ಲೀಲಾವಿಭೂತಿಯಲ್ಲಿ ಆಸಕ್ತನಾದ ಶ್ರೀಹರಿಗೆ "ಕ್ರೀಡಾಹರೇರಿದಂ ಸರ್ವಂ" ಎಂದು ಹೇಳಿರುವಹಾಗೆ, ಸರ್ವಚಿದಚಿತ್ತಿನಿಂದಲೂ ಸರ್ವೇಶ್ವರನು ಆನಂದಿಸುವದರಿಂದಲೇ **ಸರ್ವಶೇಷಿಯಾನ ತನುಕ್ಕು** ಎಂಬ ಪ್ರಯೋಗವು. **ಈಶ್ವರರ್ ಪ್ರಧಾನಫಲಿ,** ಎಂದು **ಹೇಳಿರುವದರಿಂದಲೇ** ಜೀವನು ಅವಾನ್ತರ ಫಲಿ ಎಂಬುವದು ಸುವ್ಯಕ್ತವು. ಅಚಿತ್ತಿಗಾದರೋ ಫಲಿತ್ವವೇ ಇಲ್ಲವು.

ಈಶ್ವರನು ಚಿತ್ ಅಚಿತ್ತಿಗೂ ಸಹಶೇಷಿಯಾಗಿರುವದರಿಂದ ಹೇಗೆ ಪ್ರಧಾನ ಫಲಿಯು, ಹೇಗೆ ಅಚಿತ್ತಿನ ವಿವಿಧ ವಿಚಿತ್ರಪರಿಣಾಮಗಳಿಂದಲೂ ಚೇತನನಿಗೆ ಭೋಗಗಳನ್ನುಂಟುಮಾಡುವದರಿಂದಲೂ ಸರ್ವೇಶ್ವರನು ಭೋಕ್ತಾ ಎಂಬುವದನ್ನು ಒಂದು ಲೋಕ ದೃಷ್ಟಾಂತದ ಮೂಲಕ ಸಮರ್ಥನೆಮಾಡುತ್ತಾರೆ.

ಅಚೇತನಮಾನ ಕುಳಮಣನೈ - ಅಚೇತನವಾದ ಒಂದು ತಾಮ್ರ ಮೊದಲಾದುದರಿಂದ ಮಾಡಿದ ಬೊಂಬೆಯನ್ನು, ಇಲ್ಲಿ ಕುಳಮಣನ್ ಎಂದರೆ ಪ್ರತಿಮೆಗೆ ಹೆಸರು, **ಅಳಿತ್ತುಪ್ಪಣ್ಣಿಯುಮ್** - ಅಳಿಸಿಬಿಟ್ಟು ಪುನಃ ಮಾಡಿ **ಆಭರಣಂ ಪೂಟ್ಟಿಯುಮ್** - ಆಭರಣವನ್ನು ತೊಡಿಸಿ, **ಅೞಗುಕಣ್ಡು** - ಅದರ ಸೌಂದರ್ಯವನ್ನು ನೋಡಿ, **ಉಗುಕ್ಕಿರದೋಡುಂ** - ಆನಂದಿಸುವದಕ್ಕೂ, **ಚೇತನಮಾನ ಕಿಳಿಯೈ** - ಚೇತನವಾದ ಒಂದು ಗಿಣಿಯನ್ನು, **ಪಂಜರತ್ತಿಲ್ ವೈತ್ತು** - ಪಂಜರದಲ್ಲಿಟ್ಟು, **ಪಾಲ್ ಕೊಡುತ್ತುಂ** - ಹಾಲು ಮೊದಲಾದ ಭೋಗವನ್ನೆಲ್ಲಾ ಕೊಟ್ಟು, **ವೇಣ್ಡಿನಪಡಿ** - ತನ್ನಿಷ್ಟಾನುಸಾರ, **ಪರಕ್ಕ ವಿಟ್ಟುಂ** - ಅದನ್ನು ಹಾರುವದಕ್ಕೆ ಬಿಟ್ಟು, **ಅದಿ ಉಗಪ್ಪುಕ್ಕಂಡು** - ಅದರ ಸಂತೋಷವನ್ನು ಕಂಡು, **ಉಗಕ್ಕಿರದೋಡುಂ** - ತಾನೂ ಸಂತೋಷಪಡುವದಕ್ಕೂ, **ನಿರಪೇಕ್ಷರಾನ** - ಏನೊಂದೂ ಬೇಕಾಗಿಲ್ಲದೇ ಇರುವ, **ಪೂರ್ಣಕಾಮ**ರಾದ, **ರಸಿಕರುಕ್ಕುಂ** - ಲೀಲಾವಿನೋದಶೀಲರಿಗೆ, **ವಾಶಿಯಿಲ್ಲೈಯಿರೆ** - ತಾರತಮ್ಯವೇನೂ ಇಲ್ಲವು. ಇಲ್ಲಿ **ನಿರಪೇಕ್ಷರಾನ** ಎಂದು ಹೇಳಿರುವದರಿಂದ ಇನ್ನೊಂದಭಿಪ್ರಾಯವೂ ತೋರಬಹುದು. ಏನಾದರೂ ಅಪೇಕ್ಷೆಯುಳ್ಳ, ಎಂದರೆ

ಪ್ರಯೋಜನಸಾಕಾಂಕ್ಷಿಗಳಾದವರಿಗೆ ಕೃಪಾಮಾಡುವದರಲ್ಲಿ ತಾರತಮ್ಯವಿರಬಹುದು. ಹಾಗಿಲ್ಲದೆ ನಿರ್ಹೇತುಕಕೃಪಾಶಾಲಿಯು ಸರ್ವೇಶ್ವರನು. ಆದುದರಿಂದ ಆತನಲ್ಲಿ ವೈಷಮ್ಯ ನೈರ್ಘೃಣ್ಯಾದಿಗಳೇನೂ ಇಲ್ಲವೆಂಬುವದೂ ತೋರಿಬರುತ್ತದೆ. ಒಂದು ಪ್ರತಿಮೆಯು ಸರಿಯಾಗಿಲ್ಲದಿದ್ದರೆ ಅದನ್ನು ಅಳಿಸಿ ಸುಂದರವಾಗಿ ಪುನಃ ಮಾಡಿಸಿ ಅದಕ್ಕೆ ಆಭರಣಗಳನ್ನು **ತೊಡಿಸಿ** ಆನಂದಿಸುವದುಂಟು. ಹಾಗೆಯೇ ಒಂದು ಗಿಳಿಯನ್ನು ಪಂಜರದಲ್ಲಿಟ್ಟು ಅದಕ್ಕೆ ಬೇಕಾದ ಹಾಲುಹಣ್ಣನ್ನು ಕೊಟ್ಟು ಅದನ್ನು ಹಾರುವದಕ್ಕೆ ಬಿಟ್ಟು, ಅದು ಸಂತೋಷಪಟ್ಟರೆ ತಾನೂ ಅದರಿಂದ ಆನಂದಿಸುವದುಂಟು. ಆ ಬೊಂಬೆಯೂ ಈ ಗಿಳಿಯೂ ಎರಡೂ ತನಗೆ ಶೇಷಭೂತವಾಗಿರುವದರಿಂದ, ಈ ಎರಡು ವಿಧ ಆನಂದದಲ್ಲೂ ಏನೊಂದೂ ವ್ಯತ್ಯಾಸವಿಲ್ಲವೆಂದು ಹೇಳುತ್ತಾರೆ. ಈ ಪ್ರತಿಮೆ, ಗಿಳಿಗಳ ಯಜಮಾನನು ಹೇಗೆ ಆನಂದಿಸುತ್ತಾನೋ, ಹಾಗೆಯೇ ಈ ಅಚಿತ್ತುಗಳ ಸೌಂದರ್ಯಾದಿಗಳಿಂದಲೂ, ಚೇತನವರ್ಗದ ಸುಖದುಃಖೋಪಭೋಗಗಳಿಂದಲೂ ಸರ್ವೇಶ್ವರನು ಆನಂದಿಸುವನು. ಈ ಮೇಲಿನ ದೃಷ್ಟಾಂತವು ತುಂಬಾ ಸ್ವಾರಸ್ಯವಾದುದು. ಹೇಗೆಂದರೆ, ಅಚೇತನವಾದ ಪ್ರಕೃತಿಯು ವಿಕಾರಗಳಾದ ಮಹದಹಂಕಾರಾದಿರೂಪ ಸಮಷ್ಟಿರೂಪಸೃಷ್ಟಿ, ತದನಂತರ ಅಂಡಾದಿವ್ಯಷ್ಟಿಸೃಷ್ಟಿ, ಸ್ಥಿತಿ ಸಂಹಾರ ರೂಪಗಳನ್ನೂ ಮತ್ತು ವಿವಿಧ ವಿಚಿತ್ರರೂಪಗಳ ಸೌಂದರ್ಯವನ್ನು ಕಂಡು ಸರ್ವೇಶ್ವರನು ಆನಂದಿಸುವನು. ಇಲ್ಲಿ **ಅಳಿತ್ತು ಪ್ಪಣ್ಣಿಯುಮ್** ಎಂಬುವದರಿಂದ ಪ್ರಳಯವೂ ಸೃಷ್ಟಿಯೂ ಹೇಳಲ್ಪಟ್ಟವು. ಸೃಷ್ಟಿಲಯಗಳು ಯಾವಾಗ ಹೇಳಲ್ಪಟ್ಟವೋ ಅವುಗಳ ಮಧ್ಯಕಾಲವರ್ತಿಯಾದ ಸ್ಥಿತಿಯೂ ಅವುಗಳಲ್ಲೇ ಅಂತರ್ಗತವು. **ಆಭರಣಂಪೂಟ್ಟಿಯುಮ್** - ಎಂಬ ಪ್ರಯೋಗದಿಂದ ಅಚೇತನ ವಿಕಾರಗಳು ನಾನಾವಿಧ ಸಸ್ಯ ಸೃಷ್ಟಿ, ಪ್ರಾಣಿಶರೀರ ಸೃಷ್ಟಿ ಮುಂತಾದವುಗಳಿಂದ ಬಹು ಸುಂದರವಾಗಿಯೂ ರಮ್ಯವಾಗಿಯೂ ತೋರುತ್ತದೆಂಬುವದು ಸೂಚಿಸಲ್ಪಟ್ಟಿದೆ. ಹೀಗೆ ತನ್ನ ಸಂಕಲ್ಪದಿಂದ ಭೋಗ್ಯವಸ್ತುಗಳನ್ನುಂಟುಮಾಡಿ ಅವುಗಳ ಸೌಂದರ್ಯವನ್ನು ನೋಡಿ ಸರ್ವೇಶ್ವರನು ಆನಂದಿಸುವನು ಎಂಬುವದನ್ನು **ಅಳಗುಕಂಡು ಗಕ್ಕಿರದೋಡು** ಎಂಬ ಪ್ರಯೋಗದಿಂದ ತೋರ್ಪಡಿಸಿರುತ್ತಾರೆ.

ಮುಂದೆ **ಚೇತನವ**ರ್ಗವನ್ನು ಭೋಕ್ತೃಗಳನ್ನಾಗಿ ತನ್ನ ಸಂಕಲ್ಪದಿಂದ ಸರ್ವೇಶ್ವರನು ಮಾಡಿರುತ್ತಾನೆಂದು ಹೇಳುತ್ತಾರೆ. **ಚೇತನಮಾಸಕಿಳಿಯೈ** - ಎಂದು ಹೇಳಿರುವದರಿಂದ, ಗಿಳಿಯು ಹೇಗೆ ಸಾಕುವವನಿಗೆ ಹೃದ್ಯವೋ, ಹಾಗೆಯೇ ಸರ್ವರಕ್ಷಕನಾದ ಸರ್ವೇಶ್ವರನಿಗೆ ರಕ್ಷ್ಯವಸ್ತುವಾದ ಈ ಜೀವಾತ್ಮಗಣವು ಹೃದ್ಯವಾದುದೆಂಬುವದು ತೋರಿಬರುತ್ತದೆ. **ಪಂಜರತ್ತಿಲ್ ವೈತ್ತು** - ಎಂದು ಹೇಳಿರುವದರಿಂದ ಈ ಜೀವಾತ್ಮನಿಗೆ ಅನಾದಿಯಾಗಿ ಬಂದ ಸಂಸಾರ

ಬಂಧವು ಸೂಚಿಸಲ್ಪಟ್ಟಿತು. **ಪಾಲ್ ಕೊಡುತ್ತುಂ** - ಎಂಬುವದರಿಂದ ಸೃಷ್ಟಿ ಕಾಲದಲ್ಲಿ ಕರ್ಮಾನುಸಾರವಾಗಿ ಕೊಟ್ಟ ಕರಣ ಕಳೇಬರಯೋಗವೂ, ಕರ್ಮಾನುಸಾರ ಭೋಕ್ತೃತ್ವವೂ ಸಹ ತಿಳಿಸಲ್ಪಟ್ಟಿತು. **ವೇಣ್ಡಿನಪಡಿ ಪರಕ್ಕವಿಟ್ಟು** ಎಂಬುವದರಿಂದ ತನ್ನಿಷ್ಟಾನುಸಾರ ಈ ಜೀವಾತ್ಮರುಗಳಿಗೆ ಕರ್ತೃತ್ವವನ್ನು ಕೊಟ್ಟು ಪ್ರವೃತ್ತಿಯನ್ನುಂಟುಮಾಡುವನೆಂಬ ತಾತ್ಪರ್ಯವು ವ್ಯಕ್ತಪಟ್ಟಿತು. "**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ**", "**ದೈವಂ ಚೈವಾತ್ರ ಪಂಚಮಂ**" ಎಂಬೀ ಗೀತಾವಾಕ್ಯಗಳಲ್ಲಿ ಈ ಅಭಿಪ್ರಾಯವು ವ್ಯಕ್ತವು. ಆದರೆ ತನ್ನ ಇಷ್ಟಾನುಸಾರವೆಂದು ಹೇಳಿದುದರಿಂದ ಯಾವದೊಂದು ಕ್ರಮವೂ ಇಲ್ಲದೆ ಸುಕೃತಿ ದುಷ್ಕೃತಿಗಳನ್ನು ತನ್ನ ಇಷ್ಟಾನುಸಾರ ಸುಖ ದುಃಖ ಭಾಕ್ಕುಗಳನ್ನಾಗಿ ಮಾಡುವನೆಂಬರ್ಥವಲ್ಲವು; ತನ್ನ ಸತ್ಯ ಸಂಕಲ್ಪ ಮೂಲಕ ಸುಕೃತಿ ದುಷ್ಕೃತಿಗಳಿಗೆ ಯಾವ ಯಾವ ಫಲಾನುಭವವೆಂದು ವಿಧಿಸಿರುವನೋ ಆ ಕ್ರಮ ಮೂಲಕ ಅವರುಗಳಿಗೆ ಪ್ರವೃತ್ತಿಗಳನ್ನುಂಟುಮಾಡಿ ಭೋಕ್ತೃಗಳನ್ನಾಗಿ ಮಾಡುವನೆಂಬ ಭಾವವು. ಹಾಗೆ ಮಾಡದೆ ತನ್ನ ಮನ ಬಂದಂತೆ ಸ್ವೇಚ್ಛಾನುಸಾರ ಪ್ರವೃತ್ತಿಗಳನ್ನುಂಟುಮಾಡಿದರೆ ಸರ್ವೇಶ್ವರನಿಗೆ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಪ್ರಾಪ್ತವಾಗುತ್ತವೆ. ಭೋಗ್ಯವಾದ ಅಚೇತನಕ್ಕೆ ವೈಚಿತ್ರ್ಯವನ್ನೂ ಅಲಂಕಾರಗಳನ್ನೂ ಉಂಟುಮಾಡಿ ಆನಂದಿಸುವವರಲ್ಲೂ, ಹಾಗೆಯೇ ಚೇತನವರ್ಗಕ್ಕೆ ಕರ್ಮಾನುಸಾರ ಭೋಕ್ತೃಭಾವವನ್ನುಂಟುಮಾಡಿ ಆನಂದಿಸುವವರಲ್ಲೂ ಏನೊಂದೂ ತಾರತಮ್ಯವಿಲ್ಲವೆಂದು "**ಪಾಶಿಯಿಲ್ಲೈಯಿರೆ**" ಎಂದು ಪ್ರಯೋಗಿಸಿರುತ್ತಾರೆ. ಇಂತಹ ಲೀಲೆಯಿಂದುಂಟಾಗುವ ಆನಂದವು ಪರಿಪೂರ್ಣ ಕಾಮನಾದ ಸರ್ವೇಶ್ವರನಿಗೇ ವಿನಾ, ಇತರರಿಗೆ ಉಂಟಾಗಲಾರದೆಂದು ಹೇಳುವದಕ್ಕಾಗಿ, ನಿರಪೇಕ್ಷರಾನ ರಸಿಕರುಕ್ಕು ಎಂದು ಪ್ರಯೋಗಿಸಿರುತ್ತಾರೆ. ಈ ಅಭಿಪ್ರಾಯವು "**ಲೋಕವತ್ತು ಲೀಲಾಕೈವಲ್ಯಂ**" ಎಂಬ ಬ್ರಹ್ಮಸೂತ್ರದಲ್ಲಿ ಉಪಪಾದಿತವು

ಈ ಮೇಲಿನಭಿಪ್ರಾಯಗಳೆಲ್ಲಾ, ಶರಣಾಗತಿದೀಪಿಕೆಯ ೧೧ನೆಯ ಶ್ಲೋಕವಾದ,

ಭೋಗ್ಯಂ ಮುಕುನ್ದ ಗುಣಭೇದ ಮಚೇತನೇಷು ಭೋಕ್ತೃತ್ವಮಾತ್ಮಸು ನಿವೇಶ್ಯ ನಿಜೇಚ್ಛಯೈವ । ಪಾಂಚಾಲಿಕಾ ಶುಕ ವಿಭೂಷಣ ಭೋಗದಾಯೀ ಸಮ್ರಾಡಿವಾತ್ಮ ಸಮಯಾ ಸಹನೋದ ಸೇತ್ವಂ ॥

ಎಂಬುವದರಲ್ಲೂ ಬಹು ಚನ್ನಾಗಿ ಉಪಪಾದಿತಗಳಾಗಿವೆ. ೭ನೆಯ ಪುಟ ನೋಡಿ. ಇದಕ್ಕೆ ದೃಷ್ಟಾಂತವಾಗಿ,

ಗೀತವಾದಿತ್ರ ನಿರ್ಘೋಷಶ್ಶ್ರೂಯತೇ ಜಯತಾಂವರ ।
ನರ್ತತಾಂ ವಾನರಾಣಾಂ ಚ ಮೃದಂಗಾಡಂಬರೈಸ್ಸಹ ।
ಲಬ್ಧ್ವಾ ಭಾರ್ಯಾಂ ಕಪಿವರಃ ಪ್ರಾಪ್ಯರಾಜ್ಯಂ ಸುಹೃದ್ವೃತಃ।
ಧ್ರುವಂ ನಂದತಿ ಸುಗ್ರೀವ ಸ್ಸಂಪ್ರಾಪ್ಯ ಮಹತೀಂ ಶ್ರಿಯಂ.

(ರಾಮಾ. ಕಿಷ್ಕಿಂ. ೧೭ ೨೬-೭) ಶ್ರೀರಾಮನು ಸುಗ್ರೀವನಿಗೆ ರಾಜ್ಯದಾರ ಪ್ರಾಪ್ತಿಯನ್ನುಂಟುಮಾಡಿ, ಆತನು ಇಷ್ಟ ಮಿತ್ರರುಗಳೊಂದಿಗೆ ಕೂಡಿ ಮಹತ್ತಾದ ರಾಜ್ಯಶ್ರೀಯನ್ನು ಅನುಭವಿಸುತ್ತಾ ನಿಶ್ಚಯವಾಗಿಯೂ ಆನಂದಿಸುತ್ತಿದ್ದಾನೆಂದು ತಿಳಿದು ತುಂಬಾ ಹರ್ಷಗೊಂಡವರಾಗಿ ಆ ಕಿಷ್ಕಂಧೆಗೆ ಹತ್ತಿರದಲ್ಲೇ ಪ್ರಸ್ರವಣ ಗಿರಿಯ ಗುಹೆಯಲ್ಲಿ ನಾಲ್ಕು ತಿಂಗಳು ವಾಸಮಾಡಿದರೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಇನ್ನೊಂದು ದೃಷ್ಟಾಂತವಾಗಿ,

ವಿಷಮೇ ಪರಮಃ ಕಾಮೋಯದೀಮಂ ರಾವಣಾನುಜಂ ।
ಲಂಕಾಯಾಂ ಸೌಮ್ಯ ಪಶ್ಯೇಯ ಮಭಿಷಿಕ್ತಂ ವಿಭೀಷಣಂ ॥

ಎಂದು ಲಕ್ಷ್ಮಣನನ್ನು ಕುರಿತು ಶ್ರೀರಾಮನು ಹೇಳುತ್ತಾನೆ:—ಈ ವಿಭೀಷಣನು ಈ ಲಂಕೆಯಲ್ಲಿ ಅಭಿಷಿಕ್ತನಾಗಿರುವವನ್ನು ನೋಡಬೇಕೆಂಬ ಪರಮ ಕುತೂಹಲವು ನನಗುಂಟು. ಆದುದರಿಂದ ಅಭಿಷೇಕೋತ್ಸವವನ್ನು ಬೇಗ ನಡಿಸು ಎಂದೂ ಹೇಳಿದನು. ಈ ಶ್ರೀತನನಿಗೆ ಆನಂದವನ್ನುಂಟುಮಾಡುವದರಲ್ಲೇ ಆತನಿಗೆ ಪರಮ ಕುತೂಹಲವೆಂಬುವದು, ಸೀತಾನಿಮಿತ್ತವಾಗಿ ಸುಗ್ರೀವಸಖ್ಯ ಮೊದಲುಗೊಂಡು ರಾವಣವಧಪರಿವಿಗೂ ಮಹತ್ಕಾರ್ಯಗಳು ನಡೆದಿದ್ದರೂ, ಬಹಳ ದಿನಗಳಿಂದ ಬಂದಾದ ವಿಶೇಷ ದುಃಖಪೀಡಿತನಾಗಿದ್ದರೂ, ಸೀತೆಯನ್ನು ನೋಡುವದಕ್ಕಿಂತ ಮುಂಚೆಯೇ ವಿಭೀಷಣ ಪಟ್ಟಾಭಿಷೇಕವನ್ನು ನಡೆಸಿರುತ್ತಾನೆ.

ಅಭಿಷಿಚ್ಯ ಚ ಲಙ್ಕಾಯಾಂ ರಾಕ್ಷಸೇಂದ್ರಂ ವಿಭೀಷಣಂ ।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದಹ ।

ರಾವಣವಧಾನಂತರ ತನ್ನ ಪ್ರಿಯಭಕ್ತನಾದ ವಿಭೀಷಣನನ್ನು ಲಂಕೆಯಲ್ಲಿ ರಾಕ್ಷಸರಾಜನನ್ನಾಗಿ ಪಟ್ಟಾಭಿಷೇಕಮಾಡಿಸಿ, ಮೊದಲೇ ಲಂಕಾಧಿಪತ್ಯದಲ್ಲಿ ಅಭಿಷೇಕಮಾಡಿಸಿ ಬಿಟ್ಟಿನೇ ಅದು ನಡಿಯಬೇಕಲ್ಲವೇ ಎಂಬಲ್ಲಿ ಸಂತಾಪದಿಂದ ಬಿಡಲ್ಪಟ್ಟವನಾಗಿ, ತಾನೀಗ ಕೃತಕೃತ್ಯನೆಂದು ಭಾವಿಸಿ, ವಿಶೇಷವಾಗಿ ಆನಂದಿಸಿದನು ಎಂದು ಹೇಳಲ್ಪಟ್ಟಿರುತ್ತದೆ. ಹೇಗೆ ಆನಂದಿಸುವನು ಎಂದರೆ ಮಹರ್ಷಿಯು ಹೇಳುತ್ತಾರೆ. "**ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ**", ಮಗನು ಒಳ್ಳೇ ಸ್ಥಿತಿಯಲ್ಲಿರುವದನ್ನು ಕಂಡು ತಂದೆಯು ಹೇಗೆ ಆನಂದಪಡುವನೋ ಹಾಗೆ ಆನಂದಿಸುವನು.

ಆದರೆ ಸರ್ವೇಶ್ವರನು ಪ್ರಧಾನಫಲಿ ಎಂದು ಹೇಳಿದರೆ, ಕರ್ತೃತ್ವವು ಜೀವಾತ್ಮನಲ್ಲಿದ್ದರೆ ಫಲಾನುಭವವು ಸರ್ವೇಶ್ವರನಿಗೆ ಹೇಗೆ? "**ಶಾಸ್ತ್ರಫಲಂಪ್ರಯೋಕ್ತರಿ**" ಎಂಬ ನ್ಯಾಯಕ್ಕೆ ವಿರೋಧವಲ್ಲವೇ? ಯಜ್ಞವನ್ನು ಮಾಡುವನೊಬ್ಬನು, ಫಲಾನುಭವಮಾಡುವನಿನ್ನೊಬ್ಬನೆಂದರೆ, ಯಜ್ಞಮಾಡಲು ಯಾರಿಗೂ ಶ್ರದ್ಧೆಯುಂಟಾಗಲಾರದಷ್ಟೆ? ಅದೂ ಅಲ್ಲದೆ ಶುಕದೃಷ್ಟಾಂತವಲ್ಲ, ಶುಕವು ಅಜ್ಞಾನವುಳ್ಳದುವಾದುದರಿಂದ ತನ್ನ ಬಂಧವನ್ನು ನೀಗಿಕೊಳ್ಳಲು ಯಾವ ಪ್ರಯತ್ನವನ್ನಾಗಲಿ ಮಾಡಲಾರದು. ಆದುದರಿಂದ ಈ ಪಾಂಚಾಲಿಕಾ, ಶುಕದೃಷ್ಟಾಂತಗಳು ಸರಿಹೋಗಲಾರವು ಎಂಬ ಆಕ್ಷೇಪಗಳು ತೋರಿಬರಬಹುದು. ಒಬ್ಬ ಪರಿಚಾರಕನು ರಾಜನಿಗೋಸ್ಕರವಾಗಿಯೇ ಮೃಷ್ಟಾನ್ನವನ್ನು ಮಾಡಿದರೂ, ರಾಜನು ಪ್ರಧಾನಭೋಕ್ತೃವಾದರೂ, ತಾನೂ ಮೃಷ್ಟಾನ್ನಕ್ಕೆ ಹೇಗೆ ಭಾಗಿಯಾಗುವನೋ ಮತ್ತು ಪುತ್ರನು ಪಿತೃಗಳನ್ನುದ್ದೇಶಿಸಿ ಗಯಾಶ್ರಾದ್ಧವನ್ನು ಮಾಡಿದರೆ ಉದ್ದೇಶ್ಯರಾದವರಿಗೂ ಆ ಫಲವು ಹೇಗೆ ಉಂಟಾಗುತ್ತದೋ, ಹಾಗೆಯೇ, ಇಲ್ಲೂ ಸರ್ವೇಶ್ವರನು ಪ್ರಧಾನಫಲಿಯು. ಜೀವಾತ್ಮನು ಅವಾಂತರಫಲಿಯು.

ಎರಡನೇ ಆಕ್ಷೇಪಕ್ಕೂ ಕಾರಣವಿಲ್ಲವು. ಶುಕದೃಷ್ಟಾಂತವು ಪ್ರಕೃತಿಬಂಧವೇನು, ಭೋಕ್ತೃವಾಗಿ ಕರ್ಮಫಲಾನುಭವವೇನು, ಇವುಗಳಿಗಾಗಿಯೇ ವಿನಾ ಶುಕವು ಬಂಧನಿವೃತ್ತಿಗೆ ಏನೊಂದೂ ಪ್ರಯತ್ನಮಾಡಲಶಕ್ತತೆಯುಳ್ಳದಾದುದರಿಂದ, ಜೀವನೂ ಹಾಗೆಯೇ ಎಂದು ಹೇಳಲಾಗುವದಿಲ್ಲ. ಶುಕವೇನೋ ಅಜ್ಞಾನಿಯು, ಬಂಧನಿವೃತ್ತಿರೂಪ ಪ್ರವೃತ್ತಿಯು ಅದಕ್ಕಿಲ್ಲವು. ಆದರೆ ಮನುಷ್ಯನು ಹಾಗಲ್ಲವು ತಾನು ಜ್ಞಾನಸ್ವರೂಪನು. ಜ್ಞಾನತ್ವ, ಆನಂದತ್ವ, ಅಮಲತ್ವಾದಿಗಳುಳ್ಳ ಪರಿಶುದ್ಧನು, ಅನನ್ಯಾರ್ಹ ಭಗವಚ್ಛೇಷಭೂತನು. ಆದುದರಿಂದ ಆತನಿಗೆ ಪ್ರಿಯವಾದ ಕೈಂಕರ್ಯಗಳನ್ನು ಮಾಡಲು ಸ್ವಾಮಿದತ್ತ ಕರಣ ಕಳೇಬರ ಜ್ಞಾನಗಳಿಂದ ಯೋಗ್ಯನು. ಆದರೆ ಸ್ವಾಮಿಯ ಅಭಿಮತಕ್ಕೆ ವಿರುದ್ಧವಾದ ಆಚರಣೆಯುಳ್ಳವನಾದುದರಿಂದ, ಭಗವನ್ನಿಗ್ರಹಕ್ಕೆ ಪಾತ್ರನಾಗಿ ಅಂತಹ ಕೈಂಕರ್ಯಸಾಮ್ರಾಜ್ಯವನ್ನು ಇದುವರಿವಿಗೂ ಹೊಂದದಿರುತ್ತೇನೆಂಬ ಜ್ಞಾನವು ಸರ್ವೇಶ್ವರಕೃಪೆಯಿಂದ ಈತನಿಗೆ ಲಭಿಸಬಹುದಾದುದರಿಂದ, ಆ ಭಗವನ್ನಿಗ್ರಹವನ್ನು ತಪ್ಪಿಸಿಕೊಂಡು ಅನುಗ್ರಹವನ್ನು ಸಂಪಾದಿಸಿಕೊಳ್ಳಬೇಕೆಂದು ಪ್ರಯತ್ನವನ್ನು ಮಾಡಿ ಸಿದ್ಧಿಯನ್ನು ಹೊಂದುವನು. ಹಾಗಲ್ಲದೆ ತಾನು ಸರ್ವೇಶ್ವರನಿಗೆ ಎಲ್ಲಾ ವಿಧದಲ್ಲೂ ಪರತಂತ್ರನಾದುದರಿಂದ ತನ್ನ ಪ್ರಯತ್ನವು ಬೇಕಾಗಿಯೇ ಇಲ್ಲವು. ಆದುದರಿಂದ ಶುಕದಂತೆಯೇ ಇದ್ದುಬಿಟ್ಟರೆ ಸರ್ವೇಶ್ವರನೇ ತಾನಾಗಿಯೇ ತನ್ನ ಬಂಧವನ್ನು ಬಿಡಿಸುವನು ಎಂದರೆ ಆಗ ಮೋಕ್ಷೋಪಾಯ ಶಾಸ್ತ್ರಕ್ಕೆ ಆನರ್ಥಕ್ಯವು ಸಂಭವಿಸುತ್ತದೆ. ಪತಿವ್ರತಾಶಿರೋಮಣಿಯು ಪತಿಕೈಂಕರ್ಯವು ಯಾದೃಚ್ಛಿ

ಆನಪಿನ್ಬು ಇಙ್ಗು, ಸ್ವನಿರ್ಭರತ್ವಪರ್ಯಂತ ರಕ್ಷೈಕಕಾರ್ಥ್ಯಭಾವನಂ।
ತ್ಯಕ್ತರಕ್ಷಾಫಲಸ್ವಾಮ್ಯಂ ರಕ್ಷ್ಯಸ್ಯಾತ್ಮಸಮರ್ಪಣಂ ॥ ೭ ॥

ತನಗೇನೇ ಮೋಕ್ಷದಾಯಕನಾಗಿ ತಾನೇ ಅವಾಂತರಫಲಿಯಾದರೂ, ಅದು ಪತಿಗೆ ಅತಿಶಯಾವಹವಾಗುವದರಿಂದ ಪತಿಯು ಪ್ರಧಾನಫಲಿ ಎಂದು ಹೇಳುವವರಲ್ಲಿ ಏನೊಂದೂ ತೊಂದರೆಯಿಲ್ಲವು ಪತಿವ್ರತಾಶಿರೋಮಣಿಯು ಪತಿಯ ಅನುಗ್ರಹ ಸಂಪಾದಿಸಲು ಹೇಗೆ ಕೈಂಕರ್ಯರೂಪ ಪ್ರವೃತ್ತಿಯುಳ್ಳವಳಾದಳೋ ಹಾಗೆಯೇ ಸರ್ವೇಶ್ವರನ ಅನುಗ್ರಹಕ್ಕೆ ಪಾತ್ರನಾಗುವದಕ್ಕೆ ಈ ಚೇತನನೂ ಸಾಧ್ಯೋಪಾಯಗಳನ್ನನುಷ್ಠಿಸತಕ್ಕದ್ದು ಅತ್ಯಾವಶ್ಯಕವು.

ಹೀಗೆ ಅಂಗಿಯಾದ ಭರಸಮರ್ಪಣದಲ್ಲಿ ಮೂರು ಅಂಶಗಳಿರತಕ್ಕದ್ದೆಂದು ತಾವು ಸ್ಥಾಪಿಸಿದುದನ್ನು ವಿಶದವಾಗಿ ತಿಳಿದು ಜ್ಞಾಪಕದಲ್ಲಿಡಲು ಸೌಕರ್ಯಕ್ಕಾಗಿ ಒಂದು ಕಾರಿಕೆಯನ್ನನುಗ್ರಹಿಸುತ್ತಾರೆ **ಆನಪಿನ್ಬು** - ಈಶ್ವರನಿಗೆ ಪ್ರಧಾನ ಫಲಿತ್ವವು ಸರಿಯಾದುದಾಗಿ, ಮುಮುಕ್ಷುವಿಗೆ ಫಲತ್ಯಾಗವೂ ಕೂಡ ಯುಕ್ತವಾದುದಾದನಂತರ, ಇಙ್ಗು - ಈ ಮೋಕ್ಷಾರ್ಥಿಯಾದ ಅಧಿಕಾರಿಯ ವಿಷಯದಲ್ಲಿ, ಭರಸಮರ್ಪಣವೆಂದರೆ ಅರ್ಥವೇನೆಂಬುವದನ್ನು ತಿಳಿಸುತ್ತಾರೆ

ರಕ್ಷ್ಯಸ್ಯ-ರಕ್ಷಿಸಲು ಯೋಗ್ಯನಾದವನ, **ಆತ್ಮಭರಾರ್ಪಣಂ** ಎಂದು ಪಾಠಾಂತರವು, ಆತ್ಮಭರವನ್ನು ಸಮರ್ಪಿಸುವದು ಎಂಬರ್ಥವು ಆದರೆ ಆತ್ಮಭರಾರ್ಪಣಂ - ಎಂಬ ಪ್ರಯೋಗವನ್ನು ಇನ್ನೆಲ್ಲಿಯೂ ಮಾಡದೇ ಇರುವದರಿಂದಲೂ, ತನ್ನ ಭಾರದ ಸಮರ್ಪಣವೆಂದರೆ ತನಗೂ ಸಹ ರಕ್ಷಣಭರ ಉಂಟೆಂಬಾಭಿಪ್ರಾಯವು ತೋರುವದರಿಂದ, **ಆತ್ಮಸಮರ್ಪಣಂ** ಎಂಬ ಪಾಠವೇ ಸರಿಯಾಗಿ ತೋರುತ್ತದೆ. ಆತ್ಮಸಮರ್ಪಣವೆಂಥಾದ್ದೆಂದರೆ, **ಸ್ವನಿರ್ಭರತ್ವಪರ್ಯಂತ ರಕ್ಷೈಕಕಾರ್ಥ್ಯಭಾವನಂ**, **ಸ್ವನಿರ್ಭರತ್ವಪರ್ಯಂತ** - ತನ್ನ ರಕ್ಷಣವಿಷಯದಲ್ಲಿ ಭರವು ತನಗೆ ಇರುವದಿಲ್ಲವೆಂಬುವವರಿವಿಗೂ, **ರಕ್ಷೈಕಕಾರ್ಥ್ಯಭಾವನಂ** ಸರ್ವಲೋಕಶರಣ್ಯನಾದ ರಕ್ಷಕನಾದ ಆತನೊಬ್ಬನದೇ ಈ ಸ್ವರೂಪರಕ್ಷಾಭರ ಫಲಗಳೆಂಬ ಅನುಸಂಧಾನವು. ಮತ್ತು **ತ್ಯಕ್ತರಕ್ಷಾಫಲಸ್ವಾಮ್ಯಂ**-ಬಿಡಲ್ಪಟ್ಟ, ತನ್ನ ರಕ್ಷಣೆ ಮತ್ತು ಅದರಿಂದುಂಟಾಗುವ ಫಲ ಇವುಗಳಲ್ಲಿ ಅಧಿಕಾರವುಳ್ಳ ಭಾವನೆಯು, ಎಂದರೆ ತನ್ನ ರಕ್ಷಣೆ, ಅದರಿಂದುಂಟಾಗುವ ಫಲ, ಇವುಗಳಲ್ಲಿ ತನಗೆ ಸ್ವಲ್ಪವೂ ಅಧಿಕಾರವಿಲ್ಲವೆಂಬ ಭಾವನೆಯು ; ರಕ್ಷಾಫಲಗಳೆರಡು ಯಾವಾಗ ಹೇಳಲ್ಪಟ್ಟವೋ, ಆತ್ಮಸ್ವರೂಪಭರವೂ ತನ್ನದಲ್ಲವೆಂಬ ಭಾವನೆಯೂ ಅದರಲ್ಲೇ ಅಂತರ್ಗತವು ; ಅಥವಾ ಅದು ಸ್ವನಿರ್ಭರತ್ವ ಶಬ್ದದಿಂದ ತೋರಿಬರುತ್ತದೆ

ಆದುದರಿಂದ ಸಾಂಗಪ್ರಪದನದಲ್ಲಿ ಮೂರು ವಿಧ ಭಾವನೆಗಳು, ಮೂರ ವಿಧವಾದ ತ್ಯಾಗದ ಅನುಸನ್ಧಾನವೂ ಇರಬೇಕೆಂದು ಏರ್ಪಟ್ಟಿತು: (೧) ಆತ್ಮಸ್ವರೂಪಭರವೂ, (೨) ರಕ್ಷಣಭರವೂ (೩) ಫಲಭರವೂ, ತನ್ನದಲ್ಲವೆಂಬ ಭಾವನೆಯೂ, ಮತ್ತು (೧) ಆತ್ಮಸ್ವರೂಪಭರವೂ (೨) ರಕ್ಷಣಭರವೂ, (೩) ಫಲಭರವೂ ಸರ್ವೇಶ್ವರನಿಗೇನೇ ಸೇರಿದುದು ಎಂಬ ಭಾವನೆಯೂ ಉಳ್ಳದ್ದೇ ಸಾಂಗಪ್ರಪದನವು

ಈ ಅಭಿಪ್ರಾಯವನ್ನೇ ಶ್ರೀ ನಿಗಮಾನ್ತ ದೇಶಿಕರವರು, ತಾವು ಅನುಗ್ರಹಿಸಿರುವ ನ್ಯಾಸದಶಕದ ಪ್ರಥಮ ಶ್ಲೋಕದಲ್ಲಿಯೂ ಬಹು ಚೆನ್ನಾಗಿ ವ್ಯಕ್ತಪಡಿಸಿರುತ್ತಾರೆ

ಅಹಂ ಮದ್ರಕ್ಷಣಭರೋ ಮದ್ರಕ್ಷಣಫಲಂ ತಥಾ ।
ನ ಮಮ ಶ್ರೀಪತೇರೇವೇಹ್ಯಾತ್ಮಾನಂ ನಿಕ್ಷಿಪೇದ್ಬುಧಃ ॥

“**ಅಹಂ** - ನನ್ನ ಆತ್ಮಸ್ವರೂಪವೂ, **ಮದ್ರಕ್ಷಣಭರಃ** - ನನ್ನ ರಕ್ಷಣದ ಭರವೂ **ಮದ್ರಕ್ಷಣಫಲಂ ತಥಾ** - ಮದ್ರಕ್ಷಣದ ಫಲವೂ ಕೂಡ, **ನ ಮಮ** - ನನಗೆ ಸೇರಿದುದಲ್ಲವು, **ಶ್ರೀಪತೇರೇವ** - ಶ್ರಿಯಃಪತಿಗೇ ಸೇರಿದುದೇ, **ಇತಿ** - ಎಂಬದಾಗಿ, **ಬುಧಃ** - ಪಂಡಿತನು, **ಆತ್ಮಾನಂ ನಿಕ್ಷಿಪೇತ್** - ಆತ್ಮನಿಕ್ಷೇಪವನ್ನು ಅನುಷ್ಠಿಸತಕ್ಕದ್ದು” ಎಂದು ಹೇಳಿರುತ್ತಾರೆ **ನ ಮಮ** ಎಂದು ಹೇಳಿರುವದರಿಂದ, **ತ್ಯಕ್ತರಕ್ಷಾಫಲ ಸ್ವಾಮ್ಯರೂಪ** ಅನುಸಂಧಾನವು ತೋರಿಬರುತ್ತದೆ **ಶ್ರೀಪತೇರೇವ** ಎಂದು ಹೇಳಿರುವದರಿಂದ, **ರಕ್ಷೈಕಾರ್ಥ್ಯಭಾವನೆಯೂ** ಹೇಳಲ್ಪಟ್ಟಿತು.

ಆದುದರಿಂದ ಪ್ರಪನ್ನರೆಲ್ಲರೂ ಅನುಷ್ಠಿಸತಕ್ಕ ಪ್ರಪದನದ ಸ್ವರೂಪವನ್ನು ಇಲ್ಲಿ ವಿಶದವಾಗಿಯೂ ಸಂಕ್ಷೇಪವಾಗಿಯೂ ಹೇಳಬೇಕಾದುದು ಅತ್ಯಾವಶ್ಯಕವು. “**ಸರ್ವಲೋಕಶರಣ್ಯನೇ,** ಇನ್ನು ಮುಂದೆ ಅನುಕೂಲನಾಗಿಯೇ ವರ್ತಿಸುವೆನು, ಪ್ರತಿಕೂಲನಾಗಿ ಎಂದಿಗೂ ಆಚರಿಸುವದಿಲ್ಲವು, ನೀನೊಬ್ಬನೇ ರಕ್ಷಕನು, ಇನ್ನಾರೂ ಇಲ್ಲವು, ನೀನೇ ರಕ್ಷಿಸುವಿ ಎಂಬದಾಗಿ ಪೂರ್ಣವಿಶ್ವಾಸವನ್ನಿಟ್ಟಿರುವೆನು, ನಾನು ಮಹಾಪರಾಧಿಯು, ಅಕಿಂಚನನು, ನನಗಿನ್ನಾರೂ ಗತಿಯಿಲ್ಲದಾದುದರಿಂದ ನೀನೇ ರಕ್ಷಕನಾಗಿರು, ಎಂಬ ಐದು ಅಂಗಗಳಿಂದ ಸೇರಿದ ಜ್ಞಾನದೊಂದಿಗೆ, ಈ ಆತ್ಮಸ್ವರೂಪವೂ ನಿನ್ನದೇ, ಈ ಆತ್ಮನನ್ನು ರಕ್ಷಿಸುವ ಭಾರವೂ ನಿನ್ನದೇ. ಆದುದರಿಂದ ಉಪಾಸನಾದಿ ಸಾಧ್ಯೋಪಾಯಾನುಷ್ಠಾನ ವಿಷಯದಲ್ಲಿ ಅಶಕ್ತನಾದ ಪ್ರಯುಕ್ತ, ಸರ್ವಶಕ್ತನಾದ ನೀನೇ ಆ ಉಪಾಯಸ್ಥಾನದಲ್ಲಿ ನಿಂತು, ಆ ಉಪಾಯಾನುಷ್ಠಾನಕಾರ್ಯವನ್ನು ಸಾಧಿಸಿಕೊಡು ; ಇನ್ನು ಮುಂದೆ ನನ್ನ ರಕ್ಷಾವಿಷಯದಲ್ಲಿ ಯಾವ ವಿಧವಾದ ಯತ್ನವನ್ನೂ ಮಾಡುವದಿಲ್ಲವು. ನೀನೇ ನಿಂತು

ಸ್ತೋತ್ರತ್ತಿಲ್, "ವಪುರಾದಿಷು ಯೋಽಪಿ ಕೋಽಪಿವಾ
ಗುಣತೋಽಸಾನಿ ಯಥಾ ತಥಾ ವಿಧಃ

ರಕ್ಷಿಸತಕ್ಕದ್ದು. ಆದುದರಿಂದ ಈ ರಕ್ಷಾವಿಷಯದಲ್ಲಿ ಯಾವ ವಿಧವಾದ ಸ್ವಾತಂತ್ರ್ಯವೂ ನನಗಿರುವದಿಲ್ಲವು; ರಕ್ಷಾಫಲಗಳ ಅಧಿಕಾರವು ನನಗೆ ಸ್ವಲ್ಪವಾಗಲಿ ಇರುವದಿಲ್ಲವು; ಅವೆಲ್ಲವೂ ಸರ್ವಶೇಷಿಯಾದ ನಿನಗೇನೇ ಸೇರಿದವು. ಈ ಸಾಂಗ ಪ್ರಪದನಾನುಷ್ಠಾನದಲ್ಲೂ ಕೂಡ ನನಗೇನೊಂದೂ ಕರ್ತೃತ್ವವಿಲ್ಲವು" ಎಂದು ಅನುಸಂಧಾನಮಾಡಿ, ಸರ್ವಶ್ರೀಪ್ರಸಾದ ಗುರುವು ಹೇಳಿಕೊಟ್ಟ ಹಾಗೆ ದ್ವಯಮಂತ್ರೋಚ್ಚಾರಣವೇ ಪ್ರಪದನಾನುಷ್ಠಾನವೆಂದು ತಿಳಿಯತಕ್ಕದ್ದು.

ಆದರೆ, ಈ ಐದು ಅಂಗಗಳಿಂದ ಕೂಡಿದ, ಈ ಅಂಗಿರೂಪ ಅನುಸಂಧಾನವು ಪ್ರಪದನವಾದರೆ, ಹಾಗೆ ಸ್ವರೂಪಸ್ವಭಾವಜ್ಞಾನವಿಲ್ಲದವರು ಪ್ರಪದನಕ್ಕೆ ಅಧಿಕಾರಿಗಳಲ್ಲವೋ? ಇಂತಹ ಸ್ವರೂಪಸ್ವಭಾವಜ್ಞಾನವೊಂದೂ ಇಲ್ಲದೆಯೂ, ತತ್ತ್ವನಿತ್ಯಗಳಿಲ್ಲದೆಯೂ ಇರುವವರೂ ಸಹ, ಈ ಪ್ರಪದನಾನುಷ್ಠಾನಕ್ಕೆ ಅಧಿಕಾರಿಗಳು ಎಂಬ ಪೂರ್ವಾಚಾರ್ಯರುಗಳ ವಾಕ್ಯಕ್ಕೆ ಇದು ವಿರೋಧವಲ್ಲವೇ? ಮತ್ತು ಶ್ರೀಯಾಮುನೇಯರವರ ಸ್ತೋತ್ರರತ್ನ ಶ್ಲೋಕವಾದ "ವಪುರಾದಿಷು" ಎಂಬ ಶ್ಲೋಕಕ್ಕೂ ಸಹ ಈ ಮೇಲಿನ ಅಭಿಪ್ರಾಯವು ವಿರೋಧವಾದುದಲ್ಲವೇ? ಎಂದರೆ ಈ ಶಂಕೆಗಳಿಗೆ ಸಮಾಧಾನರೂಪವಾಗಿ ಆ "ವಪುರಾದಿಷು" ಎಂಬ ಶ್ಲೋಕಕ್ಕೆ ತಾತ್ಪರ್ಯವನ್ನು ಸೂಚಿಸುತ್ತಾರೆ. ತನ್ನ ಸ್ವರೂಪಾದಿಗಳಲ್ಲಿ ವಿಶದಜ್ಞಾನವಿಲ್ಲದಿದ್ದರೂ, ತನಗೆ ಆಗ ಇರುವ ಜ್ಞಾನಮೂಲಕವಾಗಿ ಮಾಡಿದ ಆತ್ಮಸಮರ್ಪಣವೂ ಕೂಡ ಕಾರ್ಯಕಾರಿಯಾಗುವುವರಲ್ಲಿ ಸಂದೇಹವಿಲ್ಲವೆಂಬುವದನ್ನು ತಿಳಿಸುವದಕ್ಕಾಗಿ ಅನುಗ್ರಹಿಸಿದ ಶ್ಲೋಕವೆಂದು ಹೇಳಿ ಶಂಕಾಸಮಾಧಾನವನ್ನು ಮಾಡುತ್ತಾರೆ.

ವಪುರಾದಿಷು - ಶರೀರ ಮೊದಲಾದವುಗಳಲ್ಲಿ, **ಆದಿ**ಪದದಿಂದ ಇಂದ್ರಿಯ ಮನಸ್ಸು, ಪ್ರಾಣ ಬುದ್ಧಿಗಳು ಹೇಳಲ್ಪಟ್ಟವು. **ಯೋಽಪಿಕೋಽಪಿವಾ** - ಯಾವುದಾದರೂ ಒಂದೋ ಅಥವಾ ಬೇರೆಯೋ, **ಅಸಾನಿ** - ನಾನು ಆಗಿರುವೆನು, ಎಂದರೆ ಕೆಲವರು ದೇಹವೇ ಆತ್ಮಾವೆಂದೂ, ಇನ್ನು ಕೆಲವರು ಇಂದ್ರಿಯಗಳೇ ಆತ್ಮಾವೆಂದೂ, ಹಾಗೆಯೇ ಮನಸ್ಸೇ ಆತ್ಮಾವೆಂದೂ, ಧರ್ಮಭೂತಜ್ಞಾನವೇ ಆತ್ಮಾ ಎಂದೂ ಹೇಳುವರು, ಇವೆಲ್ಲಾ ಅಪಸಿದ್ಧಾಂತವು. ಇವುಗಳಿಗಿಂತಲೂ ಬೇರೆ ಎಂದು ನಮ್ಮ ಸಿದ್ಧಾಂತವು. ಯಾಮುನೇಯರ ಆತ್ಮಸಿದ್ಧಿಯಲ್ಲಿ,

ತದಯಂ ತವ ಪಾದ ಪದ್ಮಯೋಃ
ಅಹಮದ್ಯೈವ ಮಯಾ ಸಮರ್ಪಿತಃ" ಎಂಬ ಉತ್ತರಾರ್ಧಕ್ಕೆ ತಾತ್ಪರ್ಯ
ವೇನೆನ್ನಿಲ್?

ದೇಹೇನ್ದ್ರಿಯಮನಃಪ್ರಾಣಧೀಭ್ಯೋಽನ್ಯೋಽನನ್ಯಸಾಧನಃ ।
ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಂ ಆತ್ಮಾ ಭಿನ್ನಃ ಸ್ವತಸ್ಸುಖೀ ॥

ಎಂದು ಹೇಳಿರುವ ಹಾಗೆ, ಅಂತಹ ಪರಿಶುದ್ಧ ತತ್ತ್ವಜ್ಞಾನವನ್ನು ರಹಿತವನಾಗಿಯೋ, ಅಥವಾ ದೇಹವೇ ಆತ್ಮಾವೋ, ಇಂದ್ರಿಯವೇ ಆತ್ಮಾವೋ, ಮನಸ್ಸೇ ಆತ್ಮಾವೋ, ಪ್ರಾಣವೇ ಆತ್ಮಾವೋ, ಬುದ್ಧಿಯೇ ಆತ್ಮಾವೋ ಅಥವಾ ಇವೆಕ್ಕೆಲ್ಲಾ ಬೇರೆಯಾಗಿ ಆತ್ಮವೋ, ಯಾವುದೋ ಒಂದು ಮೇಲಿನ ಶ್ಲೋಕದಲ್ಲಿನ ಹಾಗೆ ಯಥಾರ್ಥವಾಗಿರುವದು ಆಗಿರುವೆನು. ಹಾಗೆಯೇ **ಗುಣತೋ ವಾ** - ಗುಣಗಳ ಮೂಲಕವಾಗಿಯೂ, **ಯಥಾ ತಥಾ ವಿಧಃ**-ಯಾವುದೋ ಕೆಲವು ಬಗೆಯ ಗುಣಗಳುಳ್ಳವನಾಗಿ, ಅಸಾನಿ - ಆಗಿರುವೆನು. ಎಂದರೆ ನನ್ನನ್ನು ಕೆಲವರು ಶ್ರುತಿವಾಕ್ಯಕ್ಕೆ ಕಟ್ಟುಬಿದ್ದು ಅಣುವೆಂದೂ ಅಜಡನೆಂದೂ ಹೇಳುವರು, ನೈಯಾಯಿಕನು ವಿಭುವೆಂದೂ ಕಾಷ್ಠಪ್ರಾಯನೆಂದೂ ಹೇಳುವನು; ಶಾಸ್ತ್ರರೀತ್ಯಾ ಕೆಲವರು ಕರ್ತೃತ್ವ ಭೋಕ್ತೃತ್ವಾದಿಗಳುಂಟೆಂದು ಹೇಳುವರು, ಇನ್ನು ಕೆಲವರಾದ ಸಾಂಖ್ಯರು ಕರ್ತೃತ್ವ ಭೋಕ್ತೃತ್ವಾದಿಗಳಿಲ್ಲವೆಂದು ಹೇಳುವರು. ಆದರೆ ನನ್ನ ಯಥಾರ್ಥ ಗುಣಗಳು ಯಾವುವೋ ಅವುಗಳನ್ನುಳ್ಳವನಾಗಿಯೇ ಇರುವೆನು. ನನ್ನ ಯಥಾರ್ಥ ಸ್ವರೂಪವೇನು, ಯಥಾರ್ಥ ಗುಣಗಳಾವುವು ಎಂಬುವದನ್ನು ನೀನೇ ಬಲ್ಲೆ. ಆದುದರಿಂದ **ತದಯಂ** - ಅಂತಹ ಯಥಾವತ್ತಾದ ಈ ಸ್ವರೂಪ ಗುಣಗಳುಳ್ಳ, **ಅಹಂ** - ಅಹಂ ಎಂದು ತೋರುವ ನಾನು, **ತವ ಪಾದಪದ್ಮಯೋಃ** - ನಿನ್ನ ಎರಡು ಪಾದಕಮಲಗಳಲ್ಲೂ, **ಮಯಾ**-ನಿನ್ನ ನಿರ್ಹೇತುಕ ಕೃಪಾಮೂಲಕವಾಗಿ ಅನುಗ್ರಹಿಸಲ್ಪಟ್ಟ ಕರಣ ಕಳೇಬರ ಜ್ಞಾನ ವಿವೇಕಾದಿಗಳುಳ್ಳ ನನ್ನಿಂದ, **ಅದ್ಯೈವ** - ಇದುವರಿವಿಗೂ ಅನೇಕ ಭ್ರಮಗಳ ಮೂಲಕ ನಿನ್ನೊಂದಿಗೆ ವಿವಾದ ಮಾಡುತ್ತಿದ್ದುದು ತಪ್ಪಿಹೋಗಿ, ನಿನಗೆ ಶೇಷಭೂತನೆಂಬ ಭಾವವು ನೆಲಗೊಂಡಿರುವ ಈ ಸುಸಮಯದಲ್ಲೇ, ಅಥವಾ ಸೌಗತನು ಜ್ಞಾನವು ಕ್ಷಣಿಕವೆಂದರೂ, ಆ ಒಂದು ಕ್ಷಣದಲ್ಲೇ **ಸಮರ್ಪಿತಃ** -

ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ ।
ಅತೋಽಹಮಪಿ ತೇ ದಾಸ ಇತಿ ಮತ್ವಾ ನಮಾಮ್ಯಹಮ್ ॥

ಎಂದು ಈಶ್ವರಸಂಹಿತೆಯಲ್ಲಿ ರುದ್ರನು ಹೇಳಿರುವ ಹಾಗೂ, "ಸ್ವತ್ವಮಾತ್ಮನಿ

ಮುದ್ರೆಯಿಟ್ಟು ಯಿರುಕ್ಕಿರ ರಾಜಾರ್ಹಮಾನ ಕಿಳಿಚ್ಚೀರೈ ಒರು ಹೇತುವಾಲೇ ತನ್ಕೈಯಿಲೆ ಇರುನ್ದಾಲ್ ರಾಜಾಕ್ಕೈಕೊಳ್ಳುಮೆನ್ರು, ಉಳ್ಳಿರುಕ್ಕಿರ ಮಾಣಿಕ್ಕತ್ತಿನ್ ಸ್ವರೂಪ ಸ್ವಭಾವಙ್ಗಳೈ ವಿಶದಮಾಗ ಅರಿಯಾದೆ ಕಿಳಿಚ್ಚೀರೈಯೋಡೇ ವಿಲೈಕ್ಕೊಡುಕ್ಕುಮಾಪ್ಪೋಲೆ ದೇಹಾದ್ಯತಿರಿಕ್ತಾ

ಸಂಜಾತಂ ಸ್ವಾತ್ಮಾತ್ಮಂ ಬ್ರಹ್ಮಣೆಸ್ಥಿತಂ" ಸರ್ವೇಶ್ವರನೇ ಸರ್ವಕ್ಕೂ ಸ್ವಾಮಿಯಾಗಿ ನಾವೆಲ್ಲ ಆತನ ಸ್ವತ್ತೆಂದೂ ವಿಷ್ಣುತತ್ವದಲ್ಲಿ ಹೇಳಿರುವಹಾಗೂ, ಸಮರ್ಪಿಸಿಲ್ಪಟ್ಟೆನು.

ಹೀಗೆ ಹೇಳಿರುವದರಿಂದ, ತನ್ನ ಯಥಾರ್ಥ ಸ್ವರೂಪ ಗುಣಗಳ ಜ್ಞಾನ ವಿಲ್ಲದಿದ್ದರೂ, ಸರ್ವೇಶ್ವರನಲ್ಲಿ ಶರಣಾಗತಿಯನ್ನನುಷ್ಠಿಸಿ, ಆತನ ಸ್ವತ್ತಾದ ಆತ್ಮನನ್ನು ಆತನ ಪಾದ ಕಮಲಗಳಲ್ಲಿ ಸಮರ್ಪಿಸಬಹುದೆಂಬ ಭಾವವು ತೋರಿಬರುತ್ತದೆ. ಆ ತಾತ್ಪರ್ಯವನ್ನು ಸದೃಷ್ಟಾಂತವಾಗಿ ಉಪಪಾದನೆ ಮಾಡುತ್ತಾರೆ.

ಎಙ್ಗರತ್ತುಕ್ಕು - ಈ ಮೇಲಿನ ಶ್ಲೋಕಕ್ಕೆ, ತಾತ್ಪರ್ಯಮೆನ್ನೆನ್ನಿಲ್ - ಪರಿಜ್ಞಾನಾಭಿಪ್ರಾಯವು ಏನೆಂದರೆ. ಒಂದು ದೃಷ್ಟಾಂತಮೂಲಕ ತಿಳಿಸುತ್ತಾರೆ.

ರಾಜಾರ್ಹ - ರಾಜನಿಗೆ ಸೇರತಕ್ಕ, **ಮುದ್ರೆಯಿಟ್ಟುಯಿರುಕ್ಕಿರ** - ರಾಜನ ಮುದ್ರೆ ಹಾಕಿರುವ, **ಕಿಳಿಚ್ಚೀರೈ** - ಚೀಲವು, ಮುದ್ರೆ ಹಾಕುವದು ಒಳಗಿರುವ ಆಭರಣವು ಏನೂ ವ್ಯತ್ಯಾಸಬಾರದೇ ಇರುವದಕ್ಕಾಗಿ, **ತನ್ಕೈಯಿಲೆ ಇರುನ್ದಾಲ್** - ತನ್ನ ಕೈಗೆ ಬಂದು ಸೇರಿದರೆ, **ರಾಜಾಕ್ಕೈಕೊಳ್ಳುಮೆನ್ರು** - ರಾಜನು ಅಂಗೀಕರಿಸುವನೆಂಬವನಾಗಿ, **ಉಳ್ಳಿರುಕ್ಕಿರ** ಆ ಚೀಲದಲ್ಲಿ, ಅಡಕವಾಗಿರುವ, **ಮಾಣಿಕ್ಕತ್ತಿನ್ ಸ್ವರೂಪ ಸ್ವಭಾವಙ್ಗಳೈ** - ಅಮೋಘವಾದ ರತ್ನದ ಸ್ವರೂಪ ಸ್ವಭಾವಗಳನ್ನು, **ವಿಶದಮಾಗಅರಿಯಾದೆ** - ಚನ್ನಾಗಿ ತಿಳಿಯದೆ ಎಂದರೆ ಅದು ರತ್ನವೆಂದು ತಿಳಿದಿರಬಹುದು. ಆದರೆ ಆ ರತ್ನವೇನು ದೊಡ್ಡದೇ ಚಿಕ್ಕದೇ, ಒಳ್ಳೆ ಕಾಂತಿಯುಳ್ಳದೇ ಇಲ್ಲವೇ, ಸಾಧಾರಣ ಕಾಂತಿಯುಳ್ಳದೇ ಹೆಚ್ಚು ಖರೀದಿಯುಳ್ಳದೇ ಕಮ್ಮಿ ಖರೀದಿಯುಳ್ಳದೇ, ಎಂಬುವದೊಂದೂ ತಿಳಿಯದೇ ಎಂಬರ್ಥವು **ಕಿಳಿಚ್ಚೀರೈಯೋಡೆ** ಆ ಮುದ್ರಿಸಿದ ಥಾಂಗಿಯೊಂದಿಗೆ ವಿಲೈ - ಹಿಂತಿರುಗಿ, **ಕೊಡುಕ್ಕುಮಾಪ್ಪೋಲೆ** - ಸಮರ್ಪಿಸುವ ಹಾಗೆ, **ದೇಹಾದ್ಯತಿರಿಕ್ತನಾತ್ಮಾವಿನ್** - ದೇಹವೇನು, **ಆದಿಶಬ್ದ**ದಿಂದ ಮೇಲಿನ ಆತ್ಮಸಿದ್ಧಿ ಶ್ಲೋಕದಲ್ಲಿ ಉಪಪಾದಿತಗಳಾದ ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿಗಳೇನು, ಇವುಗಳಿಂತಲೂ ವಿಲಕ್ಷಣನಾಗಿ ಬೇರೆಯಾದ **ಆತ್ಮಾವಿನ**

ತ್ಮಾವಿನ್ ಸ್ವರೂಪ ಸ್ವಭಾವಸ್ಥಿತಿಗಳೈ ವಿಶದಮಾಗ ವಿವೇಕಿಕ್ಕ ವರಿಯಾದಾರ್, ಉಳ್ಳವರಿನ್ನೈಕೊಣ್ಡು ಆತ್ಮಸಮರ್ಪಣಂ ಪಣ್ಣಿನಾಲ್ ಅವ್ವಳವಾಲುಮ್ ಅನಾದಿಕಾಲಂ ಪಣ್ಣಿನ ಆತ್ಮಾಪಹಾರ ಚೌರ್ಯತ್ತಾಲುಣ್ಡಾನ ಭಗವನ್ನಿಗ್ರಹಂ ಶಮಿಕ್ಕುಮ್ ಎಙ್ಗ್ರ ಶಾಸ್ತ್ರಾರ್ಥತ್ತಿಲೆ ತಿರುವುಳ್ಳಮ್.

ಸ್ವರೂಪ ಸ್ವಭಾವ ಸ್ಥಿತಿಗಳೈ - ಸ್ವರೂಪ ಸ್ವಭಾವ ಮತ್ತು ಸರಿಯಾದ ಸ್ಥಿತಿಗಳನ್ನು, ಅವು ಯಾವುವೆಂದರೆ:— **ಸ್ವರೂಪಸ್ಥಿತಿಗಳು,** ಅಣುತ್ವ, ಜ್ಞಾನತ್ವ, ಆನಂದತ್ವ ಅಮಲತ್ವಗಳು ; **ಸ್ವಭಾವಸ್ಥಿತಿಗಳು.** ಅಪ್ರಧಾನ ಫಲಿತ್ವ, ಸ್ವಾಧೀನ ಕರ್ತೃತ್ವ, ಅತ್ಯಂತ ಪಾರತಂತ್ರ್ಯ, ತದೇಕ ಶೇಷತ್ವ, ರಕ್ಷ್ಯತ್ವಾದಿಗಳು ; **ವಿಶದಮಾಗ ವಿವೇಕಿಕ್ಕವರಿಯಾದಾರ್** - ಚನ್ನಾಗಿ ವಿವೇಚನ ಮಾಡಿ ತಿಳಿಯದಿರುವವರೂ ಸಹ, **ವಿವೇಕಿಕ್ಕ ವರಿಯಾತ್ತಾಲುಮ್** ಎಂದು ಪಾಠಾಂತರವು, ಚನ್ನಾಗಿ ವಿವೇಚನಮಾಡಿ ತಿಳಿಯದೇ ಇರುವದರಿಂದಲೂ, ಎಂಬದಾಗಿ ಅರ್ಥ ಹೇಳಬೇಕಾಗುತ್ತದೆ. **ವಿವೇಕಿಕ್ಕವರಿಯಾದಾರ್** ಎಂಬ ಪಾಠವೇ ಸಮಂಜಸವಾದುದು, ಅದೇ **ಪಣ್ಣಿನಾಲ್** ಎಂಬ ಕ್ರಿಯಾಪದಕ್ಕೆ ಕರ್ತೃಪದವು. **ಉಳ್ಳವರಿನ್ನೈಕೊಂಡು** - ಇರುವ ಜ್ಞಾನಮಾತ್ರದಿಂದಲೇ, **ಆತ್ಮಸಮರ್ಪಣವನ್ನು ಮಾಡಿದರೆ ಅವ್ವಳವಾಲುಮ್** - ತನ್ಮೂಲಕವಾಗಿಯೇ, ಅಥವಾ ಅಷ್ಟು ಮಾತ್ರದಿಂದಲೇ, ಅನಾದಿಕಾಲದಿಂದ ಮಾಡಿದ, **ಆತ್ಮಾಪಹಾರ ಚೌರ್ಯತ್ತಾಲುಣ್ಡಾನ** - ಈ ಜೀವಾತ್ಮನು ಪರಮಾತ್ಮನ ಸ್ವತ್ತು, ಅಂಥಾದನ್ನು ತನ್ನದು ಎಂದು ಭಾವಿಸುವದರಿಂದ ಆತ್ಮಾಪಹಾರವನ್ನು ಮಾಡಿದ ಚೌರ್ಯದಿಂದುಂಟಾದ ಭಗವನ್ನಿಗ್ರಹವನ್ನು, **ಶಮಿಕ್ಕುಂ** - ಶಮನಮಾಡುತ್ತದೆ, ಹೋಗಲಾಡಿಸುತ್ತದೆ, **ಎಙ್ಗ್ರ ಶಾಸ್ತ್ರಾರ್ಥತ್ತಿಲೇ ತಿರುವುಳ್ಳಂ** - ಎಂಬುವ ಶಾಸ್ತ್ರಾರ್ಥವನ್ನು ಉಪದೇಶಿಸುವದರಲ್ಲಿ ಉದ್ದೇಶ್ಯವು ಅಥವಾ ಅಭಿಪ್ರಾಯವು. **ವಪುರಾದಿಷು** ಎಂಬ ಶ್ಲೋಕತಾತ್ಪರ್ಯವನ್ನು ಈ ಮೇಲಿನ ವಾಕ್ಯದಿಂದ ಸದೃಷ್ಟಾಂತವಾಗಿ ವಿಶದೀಕರಿಸುತ್ತಾರೆ. ಒಬ್ಬ ರಾಜಾವಿಗೆ ಸೇರಿದ ಒಂದು ಭಾಂಗಿ ಮಾಡಿದ ರತ್ನವಡಕವಾಗಿರುವ ಚೀಲವು, ಒಬ್ಬನ ವಶದಲ್ಲಿದ್ದರೆ, ಆ ರತ್ನದ ಮಹಿಮೆ ಏನೊಂದೂ ಈತನಿಗೆ ತಿಳಿಯದಿದ್ದರೂ, ಈತನು ಅನಂತರ ರಾಜಾವಿಗೇನೇ ಪುನಃ ಸಮರ್ಪಿಸಿ ಬಿಟ್ಟರೆ ರಾಜನು ಹೇಗೆ ಅದರಿಂದ ಸುಪ್ರೀತನಾಗ್ರವನೋ, ಹಾಗೆಯೇ ಈ ಜೀವಾತ್ಮ ಸ್ವರೂಪ ಸ್ವಭಾವ ಯಾಥಾರ್ಥ್ಯ ಜ್ಞಾನವಿಲ್ಲದಿದ್ದರೂ, ಸರ್ವೇಶ್ವರನ ಸ್ವತ್ತಾಗಿರುವ ಆತ್ಮಾವನ್ನೂ ಅದರ ರಕ್ಷಣಾ ಫಲಭರಗಳನ್ನು ಆತನಲ್ಲಿ ಸಮರ್ಪಿಸುತ್ತೇನೆಂಬ ಭಾವವು. ಏವಂಚ ಸಸ್ವರೂಪ

ಗುಣ ಪೂರ್ಣತಾದಿಗಳ ವಿಶದ ಜ್ಞಾನದೊಡನೆ ಮಾಡುವ ಭರನ್ಯಾಸವನ್ನು ಮೇಲೆ ಹೇಳಿದ ಅನುಸಂಧಾನರೀತಿಯಲ್ಲಿ ಮಾಡುವದು ಸರ್ವೋತ್ತಮವು ಆದರೂ ಅಂತಹ ವಿಶದ ಜ್ಞಾನವಿಲ್ಲದಿದ್ದರೂ, ತನಗೆ ಪ್ರಾಪ್ತವಾಗಿರುವ ಜ್ಞಾನ ಮಾತ್ರದಿಂದಲೇ ಅಹಂಕಾರ ಮಮಕಾರತ್ಯಾಗಪೂರ್ವಕವಾಗಿ ಭರನ್ಯಾಸವನ್ನು ಮಾಡಿದರೂ ಕಾರ್ಯಕಾರಿಯಾಗಿ ಫಲಪ್ರದವಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಇಲ್ಲಿ ಅನಾದಿಕಾಲದಿಂದ ಆತ್ಮಾಪಹಾರ ಚೌರ್ಯವನ್ನು ಎಲ್ಲಿ ಮಾಡಿರುತ್ತಾನೆಂದರೆ,

"ಅನ್ಯಥಾಸಂತಮಾತ್ಮಾನ ಮನ್ಯಥಾ ಪ್ರತಿಪದ್ಯತೇ।
ಕಿಂತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ"

ಎಂಬ ಭಾರತವಾಕ್ಯಾನುಸಾರವಾಗಿ, ಸರ್ವೇಶ್ವರನಿಗೆ ಶೇಷಭೂತವಾದ ಆತ್ಮನನ್ನು ಆತನದು ಎಂದು ತಿಳಿಯದೆ, ಭ್ರಮಯುಕ್ತನಾಗಿ, ತಾನೇ ಸ್ವತಂತ್ರನು ಅಥವಾ ತಾನೇ ಪರಮಾತ್ಮನು, ಅಥವಾ ದೇಹವೇ ಆತ್ಮ, ಬೇರೆ ಯಾವ ಪರಮಾತ್ಮನೂ ಇಲ್ಲವು. ಇತ್ಯಾದಿ ಅಭಿಪ್ರಾಯಗಳಿಗೆ ವಶನಾಗಿ ಸೃಷ್ಟಿ ಮೊದಲುಗೊಂಡೂ ಮತ್ತು ತತ್ಪೂರ್ವವೂ ಸಹ ಇರುವದರಿಂದ ಅನಾದಿಕಾಲಮಾಡಿದ ಆತ್ಮಾಪಹಾರ ಚೌರ್ಯವೆಂದು ಹೇಳಲ್ಪಟ್ಟಿತು. ಆದರೆ ಈಗಿರುವ ಜ್ಞಾನಮಾತ್ರದಿಂದಲೇ ಆತ್ಮಾಪಹಾರ ಚೌರ್ಯದಿಂದುಂಟಾದ ಪಾಪನಿಗ್ರಹವು ಶಮನವಾಗುತ್ತದೆಂದು ಹೇಳುವದರಿಂದ, ಈಗ ತಾನು ಭಗವಚ್ಛೇಷಭೂತನು, ಆತನಿಗೆ ದಾಸನು ಎಂಬ ಜ್ಞಾನಮಾತ್ರವಾದರೂ ಇರಬೇಕೆಂಬುವದು ಸೂಚಿಸಲ್ಪಟ್ಟಿತು. ಆದುದರಿಂದ ಆತ್ಮ ತನ್ನದು, ತನಗೆ ಕರ್ತೃತ್ವದಲ್ಲಿ ಸ್ವಾತಂತ್ರ್ಯವುಂಟೆಂಬ ಭಾವನೆಗಳಿಂದ ಸರ್ವೇಶ್ವರನ ಸ್ವತ್ತಾದ ಈ ಆತ್ಮವನ್ನು ಸರ್ವೇಶ್ವರನಲ್ಲಿ ಸಮರ್ಪಿಸಲ್ಪಟ್ಟಿತೆಂಬುವದು ಈ ಶ್ಲೋಕ ತಾತ್ಪರ್ಯವು ಪುತರಾಂಶಿಲ್ಲವು. ಶ್ರೀ ನಮ್ಮಾಳ್ವಾರ್ರವರು ಒಂದು ಪಾಶುರದಲ್ಲಿ ಹಾಗೆಯೇ ಸರಿಯಾದ ಜ್ಞಾನವಿಲ್ಲದೆ ಆತ್ಮ ಸಮರ್ಪಣೆಮಾಡಿದನೇ ಎಂದು ಪರಿತಾಪಪಟ್ಟರೆಂದು ಭಾಷ್ಯ ಬರೆದಿರುತ್ತಾರೆ.

ಈ ಪಾಶುರವ್ಯಾವುದೆಂದರೆ:—

ಎನದಾವಿ ಯುಳ್ ಕಲಸ ಸೆರುನಲ್ಲಾತವಿಕ್ಕ್ಯವಾ।
ರಿನದಾವಿ ತನ್ನೊಪ್ಪಿಸ್ಸೇನಿ ನಿಮೀಳ್ವದೆನ್ನದುಣ್ಣೇ।
ಯೆನದಾವಿ ಯಾವಿಯು ನೀ ಪೋಳಿಲೇಳು ಮುಣ್ಬ್ವನೆನ್ದ।
ಎನದಾವಿ ಯಾರ್ ಯಾನಾರ್ ತನ್ದನೀ ಕೊಣ್ಣಾಕ್ಕನಿಯೇ॥

ಏಳು ಲೋಕವನ್ನೂ ಪ್ರಳಯದೆಸೆಯಲ್ಲಿ ನುಂಗಿದ ಎಂದರೆ ಸೂಕ್ಷ್ಮದೆಸೆಯಲ್ಲಿ ತನ್ನ ಉದರದಲ್ಲಿಟ್ಟು ರಕ್ಷಿಸಿದ ಓ ಸ್ವಾಮಿಯೇ, ನನ್ನ ಆತ್ಮನಿಗೂ ಕೂಡ ಅಂತರಾತ್ಮನಾಗಿ ನನ್ನೊಂದಿಗೆ ಸೇರಿ, ನನಗೆ ಮಾಡಿದ ಮಹೋಪಕಾರಕ್ಕೆ ಪ್ರತ್ಯುಪಕಾರವಾಗಿ ನನ್ನ ಆತ್ಮನನ್ನು ಅಂದರೆ ನಾನೇ ನಿನ್ನ ಪಾದದಲ್ಲಿ

ಸಮರ್ಪಿಸಿಕೊಂಡೆನು. ಇನ್ನು ಮುಂದೆ ನಾನು ಪ್ರತಿಕೂಲನಾಗಿರುವದಿಲ್ಲವು. ನನ್ನ ಆತ್ಮಾವಿಗೂ ಆತ್ಮನು ನೀನೇ ಎಂದರೆ ನನಗೂ ನಿಯಾಮಕನೂ ನೀನೇ ; ಸತ್ತೆಯನಿತ್ತವನೂ ನೀನೇ, ಅಂಥಾವನು ನಿನ್ನ ಸ್ವತ್ತನ್ನು ನೀನೇ ಸ್ವೀಕರಿಸಿರುತ್ತೀಯೇ ಎಂಬುವದು ಪಾಶುರಾರ್ಥವು. ಇದರ ವ್ಯಾಖ್ಯಾನದಲ್ಲಿ "ಭ್ರಾನ್ತಿ ಸಮಯತ್ತಿಲ್ ಸಮರ್ಪಿಕ್ಕವೇಣುಮ್, ತೆಲ್ಳ್ದಿನಾ ಕೊಡುತ್ತೋಮ್ ಎನ್ರಿರುಕ್ಕಕ್ಕಡವನಲ್ಲೇ ಎನ್ರಾರಿರೇ" ಎಂಬಭಿಪ್ರಾಯವು ಬರೆಯಲ್ಪಟ್ಟಿರುತ್ತದೆ. ಇದರ ವ್ಯಾಖ್ಯಾನದಲ್ಲಿ ಪುನಃ "ಪ್ರಕ್ಷಾಳನಾದ್ಧಿ ಪಙ್ಕಸ್ಯ ದೂರಾದ ಸ್ಪರ್ಶನಂ ವರಂ" ಕೆಸರು ತುಳಿದು ಅನಂತರ ಕಾಲು ತೊಳೆಯುವದಕ್ಕಿಂತ ಕೆಸರು ಮುಟ್ಟದಿರುವದು ಉತ್ತಮವಲ್ಲವೋ ಎಂದಿರವೆ, ಆತ್ಮಸಮರ್ಪಣವನ್ನು ಮಾಡುವದೇತಕ್ಕೆ, ಅನಂತರ ಲಜ್ಜಿಸುವದೇತಕ್ಕೆಂದು ಬರೆಯಲ್ಪಟ್ಟಿರುತ್ತದೆ. ಹೀಗೆ ನಮ್ಮಾಳ್ವಾರವರೂ ಭ್ರಮೆಯಿಂದ ಆತ್ಮಸಮರ್ಪಣೆಮಾಡಿ, ಅನಂತರ ಜ್ಞಾನೋದಯದಿಂದ ಅದಕ್ಕಾಗಿ ಅನುತಾಪಪಟ್ಟರೆಂದು ಹೇಳುವದು ಉಚಿತವಲ್ಲವು. ಸರ್ವಜ್ಞರಾದ ದ್ರಾವಿಡವೇದಸಾಗರರಾದ ನಮ್ಮಾಳ್ವಾರ್ರವರಿಗೆ ಭ್ರಮವೂ, ಅನಂತರ ಜ್ಞಾನೋದಯದಿಂದನುತಾಪವೂ ಉಂಟಾಯಿತೆಂದು ಹೇಳುವದು, ತುಂಬಾ ಅನುಚಿತವು. ಹಾಗೆಯೇ ಜ್ಞಾನದೀಪ್ತಿಯಿಂದ ಪ್ರಕಾಶಿಸಿದ ಯಾಮುನೇಯರೂ ಕೂಡ "ವಪುರಾದಿಷು" ಎಂಬ ಶ್ಲೋಕದಲ್ಲಿ ತಾವು ಮಾಡಿದ ಶರಣಾಗತಿಯನ್ನು ಕುರಿತು ಮುಂದಿನ "ಮಮ ನಾಥ" ಎಂಬ ಶ್ಲೋಕದಲ್ಲಿ ಅದು ಆತ್ಮಸಮರ್ಪಣೆಯೇ ಆಗುವದಿಲ್ಲವೇ ಎಂದು ಅನುತಾಪಪಟ್ಟರೆಂದೂ "ಅಥವಾ ಕಿನ್ನು ಸಮರ್ಪಯಾಮಿ ತೇ" ಎಂದು ಹೇಳಿಬಿಟ್ಟರೆಂದೂ, ಕೆಲವರು ಅಭಿಪ್ರಾಯಪಡುತ್ತಾರೆ. ಹೇಗೆಂದರೆ, "ಆತ್ಮಸ್ವರೂಪ ಜ್ಞಾನಗಳಿದ್ದು ಆತ್ಮಾವನ್ನು ಶ್ರೀಹರಿಯಲ್ಲಿ ಸಮರ್ಪಿಸಿದರೆ, ಇತರರ ಪದಾರ್ಥವನ್ನು ಇತರರಿಗೆ ಕೊಟ್ಟದುದು ಹೇಗೆ ಉಪಾಯವಾಗಬಹುದು ? ಅಂತಹ ಯಥಾರ್ಥಜ್ಞಾನವಿಲ್ಲದೆ ಸಮರ್ಪಿಸಿದರೆ, "ಅನ್ಯಥಾ ಸಂತಮಾತ್ಮಾನಂ" ಎಂಬ ಶ್ಲೋಕದಲ್ಲಿ ಹೇಳಿರುವಹಾಗೆ ಆತ್ಮಾಪಹಾರರೂಪ ಚೌರ್ಯಕ್ಕೂ ಭಗವನ್ನಿಗ್ರಹಕ್ಕೂ ಪಾತ್ರನಾಗುತ್ತಾನೆ. ಅದೂ ಅಲ್ಲದೆ "ಯಮೇವಂ ವಿದ್ವಾನಮೃತ ಇಹ ಭವತಿ, ನಾನ್ಯಃ ಪನ್ಥಾ ವಿದ್ಯತೇ ಅಯನಾಯ, ಕ್ಲೇಶಾನಾಂಚ ಕ್ಷಯಕರಂ ಯೋಗಾದನ್ಯನ್ನವಿದ್ಯತೇ, ಇತ್ಯಾದಿ ಪ್ರಮಾಣಗಳಿಂದ ಯೋಗವೇ ಉಪಾಯವೇ ವಿನಾ ಶರಣಾಗತಿಯು ಉಪಾಯವೇ ಅಲ್ಲವು, ಶರಣಾಗತಿಯು ಅಂಗವೇ ವಿನಾ ಅಂಗಿಯಾಗಲಾರದು ; ಆದರೆ ಶರಣಾಗತಿಯೂ ಕೂಡ ಉಪಾಯವಾಗಿ ಹೇಳಲ್ಪಟ್ಟು ಅದಕ್ಕೂ ಮೋಕ್ಷಫಲ ಉಂಟೆಂದು ಶಾಸ್ತ್ರಗಳಲ್ಲಿ ಹೇಳಿದೆ

ಯಲ್ಲ ಎಂದರೆ, ಅದೆಲ್ಲ ಅರ್ಥವಾದವು, ಅಂಗದ ಪ್ರಾಶಸ್ತ್ಯವನ್ನು ಬೋಧಿಸುವದಕ್ಕಾಗಿ ಹಾಗೆ ಹೇಳಿರುತ್ತದೆ, ಅದೇ ಸಾಕ್ಷಾತ್ತಾಗಿ ಉಪಾಯ ವಾಗಲಾರದು"; ಇತ್ಯಾದಿ ಪೂರ್ವಪಕ್ಷಗಳನ್ನು ತರಬಹುದು. ಇವುಗಳಿಗೆಲ್ಲಾ ಸಮಾಧಾನ ಹೇಳುವರಾಗಿ **"ಮಮ ನಾಥ"** ಎಂಬ ಶ್ಲೋಕದ ಸರಿಯಾದ ತಾತ್ಪರ್ಯವೇನೆಂಬುವದನ್ನೂ ತಿಳಿಸುತ್ತಾರೆ. ಆ ಶ್ಲೋಕ ಯಾವುದೆಂದರೆ:—

ಮಮನಾಥ ಯದಸ್ತಿ ಯೋಽಸ್ಮ್ಯಹಂ ಸಕಲಂ ತದ್ಧಿ ತವೈವ ಮಾಧವ।
ನಿಯತಸ್ವಮಿತಿ ಪ್ರಬುದ್ಧಧೀರಥವಾ ಕಿನ್ನು ಸಮರ್ಪಯಾಮಿ ತೇ।

ಮಮ ನಾಥ - ನನ್ನ ಸ್ವಾಮಿಯೇ, ಈ ಸಂಬೋಧನದಿಂದ ತಾನು ದಾಸನು, ತನಗೆ ಶ್ರಿಯಃಪತಿಯು ಸ್ವಾಮಿಯು, ಎಂಬ ಜೀವ ಪರಮಾತ್ಮ ಯಾಥಾತ್ಮ್ಯವು ಸೂಚಿಸಲ್ಪಟ್ಟಿತು. ಓ ಸರ್ವಶೇಷಿಯಾದ ಸ್ವಾಮಿಯೇ ಎಂಬರ್ಥವು; ಪ್ರಣವದ ಅಕಾರ ಮಕಾರಾರ್ಥಗಳು ಬೋಧಿಸಲ್ಪಟ್ಟವು. **ಯದಸ್ತಿ** - ತನಗೆ ಯಾವದು ಸಂಬಂಧವಾದುದು ಇದೆಯೋ, ಇದರಿಂದ ಆತ್ಮನ ಗುಣ, ಶರೀರ ಮತ್ತು ಈತನಿಗೆ ಸೇರಿದ ಸರ್ವವಸ್ತುಗಳೂ ಸಂಗ್ರಹಿಸಲ್ಪಟ್ಟವು. ಈತನಿಗೆ ಸೇರಿದುದು ದೇಹವು, ಎಂದು ವ್ಯಾವರ್ತಿಸಿ ಹೇಳಿದುದರಿಂದ ದೇಹಾತ್ಮ ಭ್ರಾಂತಿಯು ತೊಲಗಿರುತ್ತದೆಂದು ಹೇಳಿದಂತಾಯಿತು. ನಾಥ ಎಂಬುವದನ್ನು ಮಾತ್ರವೇ ಸಂಬೋಧನೆಯಾಗಿ ಭಾವಿಸಿ, **ಮಮ ಯದಸ್ತಿ** - ನನಗೆ ಸಂಬಂಧ ಪಟ್ಟಿದುದು ಎಂಬದಾಗಿ ನೀನು ಕೃಪೆಗೈದುದು ಯಾವದಿದೆಯೋ ಎಂಬದಾಗಿಯೂ ಅರ್ಥಮಾಡಬಹುದು. **ಯೋಽಸ್ಮ್ಯಹಂ** - ನಾನು ಯಾರಾಗಿದ್ದೇನೆಯೋ, ಇದ ರಿಂದ ಮಕಾರದಿಂದ ತೋರುವರ್ಥವು ಹೇಳಿದಂತಾಯಿತು, **ಸಕಲಂತದ್ಧಿ** - ಆ ಸಮಸ್ತವೆಲ್ಲವೂ, **ಹಿ** ಎಂಬುವದರಿಂದ, ಈ ವಿಷಯದಲ್ಲಿ ಸ್ವಲ್ಪವಾಗಲಿ ಸಂದೇಹವಿಲ್ಲದಿರುವ ಪ್ರಸಿದ್ಧವಾದ ವಿಷಯವೆಂಬ ಭಾವವು, **ತವೈವ** - ಪ್ರಥ ಮಾಕ್ಷರದಲ್ಲಿ ತೋರುವ ಸರ್ವಕಾರಣನಾದ, ಸರ್ವರಕ್ಷಕನಾದ ನಿನ್ನದೇ. ಇಲ್ಲಿ ಏವ ಎಂಬ ಅವಧಾರಣ ಪ್ರಯೋಗವಿರುವದರಿಂದ ಉಕಾರಾರ್ಥವು ಬೋಧಿ ಸಲ್ಪಟ್ಟಿತು. **ಹೇ ಮಾಧವ** - ಓ ಶ್ರಿಯಃಪತಿಯೇ, ಇಲ್ಲಿ ಅಕಾರದಿಂದಲೂ ದ್ವಯದಿಂದಲೂ ತೋರುವ ಲಕ್ಷ್ಮೀಪತಿತ್ವವು ಉಪದೇಶಿಸಲ್ಪಟ್ಟಿತು. **ನಿಯತ ಸ್ವಮಿತಿ** - ನಿನಗೆ ಯಾವಾಗಲೂ ನಿನ್ನ ಸ್ವತ್ತಾಗಿ ನಿನಗೆ ಶೇಷಭೂತನಾಗಿರುವೆ ನೆಂದು, **ಪ್ರಬುದ್ಧಧೀಃ** - ನಿನ್ನ ಕೃಪೆಯಿಂದಲಾಗಲಿ, ಅಥವಾ ಶಾಸ್ತ್ರಮೂಲಕ ವಾಗಲಿ ಅಥವಾ ಆಚಾರ್ಯಮೂಲಕವಾಗಿಯಾಗಲಿ, ವಿಕಸಿತವಾದ ಪ್ರಜ್ಞೆಯುಳ್ಳ ವನಾಗಿ, **ಅಥವಾ** - ಹಿಂದೆ **"ವಪುರಾದಿಷು"** ಎಂಬಲ್ಲಿ ಸಮರ್ಪಿಸಿದಹಾಗೆ ಸಮರ್ಪಿಸದೇ ಹೋದರೆ, **ಕಿನ್ನು ಸಮರ್ಪಯಾಮಿ ತೇ** - ನಿನಗೆ ಇನ್ನೇನನ್ನು

ತಾನೇ ಸಮರ್ಪಿಸುವೆನು ? ಇನ್ನೇನೊಂದೂ ಇಲ್ಲವು. ಆದುದರಿಂದ ಹಿಂದಿನ ಸಮರ್ಪಣೆ ವಿಷಯದಲ್ಲಿ ಅನುತಾಪದಿಂದ ಹೇಳಿದ ಶ್ಲೋಕವಲ್ಲವು. ಹಿಂದೆ ಹೇಳಿದುದನ್ನೇ ಸಮರ್ಥನೆಮಾಡಿ, ಅಂತಹ ಸಮರ್ಪಣೆ ವಿಷಯದಲ್ಲಿ ಆಕ್ಷೇಪಿಸಿದರೆ, ಇನ್ನು ಯಾವುದನ್ನು ಸಮರ್ಪಿಸಲು ಸಾಧ್ಯವು ? ಎಲ್ಲವೂ ನಿನ್ನದೇ ಆಗಿರುವಾಗ, ಯಾವುದನ್ನು ತಾನೇ ಸಮರ್ಪಿಸಬಹುದು ಎಂಬ ಭಾವವು ಹೀಗೆ ಅರ್ಥ ಹೇಳವೆ, **ಅಥವಾ ಕಿನ್ನು ಸಮರ್ಪಯಾಮಿ ತೇ** ಎಂಬುವದರಿಂದ, ಸರಿಯಾದ ಜ್ಞಾನವಿಲ್ಲದೆ ಏನೋ ಆತ್ಮಸಮರ್ಪಣೆ ಮಾಡಲ್ಪಟ್ಟಿತು, ಅದು ಯುಕ್ತವಾದುದಲ್ಲ, ಏಕೆಂದರೆ ಎಲ್ಲವೂ ನಿನ್ನದಾಗಿರುವದರಿಂದ ಸಮರ್ಪಿಸತಕ್ಕದ್ದು ತಾನೇ ಯಾವುದಿರುತ್ತದೆ ; ಆದುದರಿಂದ ಆತ್ಮಸಮರ್ಪಣೆಯೆಂಬುವದೇ ಸರಿಯಾದುದಲ್ಲವೆಂದು ಪರಿತಾಪಪಟ್ಟರೆಂದು ಅರ್ಥ ಹೇಳುವದು ಸರಿಯಾದುದಲ್ಲವೆಂದು ಶ್ರೀ ದೇಶಿಕರವರಭಿಪ್ರಾಯವು. ಮುಖ್ಯಾಭಿಪ್ರಾಯವು ಇಷ್ಟೇ:—ಸರಿಯಾದ ಜ್ಞಾನವಿಲ್ಲದೆ, ಶೇಷಭೂತಜ್ಞಾನದಿಂದ ಅಹಂಕಾರ ಮಮಕಾರಗಳಿಲ್ಲದ ಆತ್ಮಸಮರ್ಪಣೆಯೇ ಸಾಕಾಗಿರುತ್ತದೆ ; ಸರಿಯಾದ ಸ್ವರೂಪ ಗುಣಗಳ ಯಾಥಾರ್ಥ್ಯಜ್ಞಾನದಿಂದ ತಾನೇ ಸಮರ್ಪಿಸತಕ್ಕದ್ದು ಯಾವುದಿರುತ್ತದೆ ಎಂಬಭಿಪ್ರಾಯವು. ಹಿಂದೆ ಮಾಡಿದ ಆತ್ಮಸಮರ್ಪಣೆಯನ್ನೇ ನಿಷೇಧಿಸಿ ಅಪ್ಪಣೆಕೊಡಿಸಿದ ಶ್ಲೋಕವಲ್ಲವು. ಅದೂ ಅಲ್ಲದೆ **ಅದ್ಯೈವ ಮಯಾ ಸಮರ್ಪಿತಃ** ಎಂದು **ಅದ್ಯೈವ** ಎಂದು ಹಿಂದೆಯೇ ಹೇಳಿ ಒಡನೆಯೇ ಅದನ್ನು ನಿಷೇಧಿಸುತ್ತಾರೆಯೋ ? ಹಾಗೆ ಒಂದು ವೇಳೆ ನಿಷೇಧಿಸಿದರು ಎಂದು ಹೇಳಿದರೂ ಮುಂದಕ್ಕೆ ೬೦ನೇ ಶ್ಲೋಕದಲ್ಲಿ **ತನ್ಯೈನಾಸ್ಮಿ ಹಿ ಭರಃ** ಎಂದು ಹೇಳಿರುವ ವಾಕ್ಯಕ್ಕೂ ೬೪ನೇ ಶ್ಲೋಕದಲ್ಲಿ, "**ತವಾಹಮಸ್ಮಿ ...... ಕಿಮಿದಂ ವ್ರತಂ ತೇ**" ಎಂದು ಹೇಳಿರುವ ವಾಕ್ಯಕ್ಕೂ ಸಹ ವಿರೋಧವಲ್ಲವೇ ? ಮತ್ತು ನ್ಯಾಸವನ್ನು ಬೋಧಿಸುವ (೧) **ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ** (೨) **ಓಮಿತ್ಯಾತ್ಮಾನಂ ಯುಂಜೀತ** (೩) "**ತಂ ಗಚ್ಛ ಶರಣಂ ಹರಿಂ**" (೪) "**ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ। ತೇಽಪಿ ಮೃತ್ಯುಮತಿಕ್ರಮ್ಯ ಯಾನ್ತಿ ತದ್ವೈಷ್ಣವಂ ಪದಂ**" ॥ (೫) **ಅನೇನೈವತು ಮಂತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್** " (೬) **ಗಚ್ಛಧ್ವಮೇನಂ ಶರಣಂ**" (೭) **ಯದ್ಯೇನ ಕಾಮ ಕಾಮೇನ ನಸಾಧ್ಯಂ ಸಾಧನಾಂತರೈಃ। ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ**" ಇತ್ಯಾದ್ಯನೇಕ ಪ್ರಮಾಣಗಳಿಗೂ ವಿರುದ್ಧವಾಗುತ್ತದೆ, ಅದೂ ಅಲ್ಲದೆ ಆಗ ರಾಮಾನುಜಾದಿ ಶರಣಾಗತಿ ಪ್ರತಿಪಾದಕಗ್ರಂಥಗಳಿಗೆ **ನೈರರ್ಥಕ್ಯವೂ**, ಅಮೋಘ

ಚರಮಶ್ಲೋಕಕ್ಕೆ ವಿಫಲತ್ವವೂ ಪ್ರಾಪ್ತವಾಗುತ್ತನೆ.

ಆದರೆ ಈ ಪ್ರಮಾಣಗಳಿಗೆ ಸಾರ್ಥಕ್ಯ ಹೇಳಬೇಕಾದರೆ, ಭಗವಚ್ಛೇಷತ್ವಾನುಸಂಧಾನವೇ ಭರನ್ಯಾಸವೆಂದು ಹೇಳಿಬಿಡುವೆವು ಎಂದರೆ ಅದೂ ಕೂಡ ಅಸಂಗತವು. ಏಕೆಂದರೆ ಅನೇಕರಿಗೆ ಭಗವಚ್ಛೇಷತ್ವಜ್ಞಾನವಿರುತ್ತದೆಯಾದುದರಿಂದ ಅವರಿಗೆಲ್ಲಾ ಮುಕ್ತಿಯುಂಟಾಗಬೇಕೆಂಬ ಪ್ರಸಂಗವು ಪ್ರಾಪ್ತವಾಗಬಹುದು. ಇದೂ ಅಲ್ಲದೆ ಕಷ್ಟದೆಶೆಯಲ್ಲಿ ಒಬ್ಬನು ಪ್ರಪನ್ನನು ಅಥವಾ ಶರಣಾಗತನಾಗಬಹುದು. ದಾಸನೆಂಬ ಅನುಸಂಧಾನವು ಪರಾಜಿತನಾದ ರಾಜನಲ್ಲಿ ಹೇಗೋ ಹಾಗೆ ಇಲ್ಲದಿರಬಹುದು. ಆದುದರಿಂದ ಬರೀ ಶೇಷತ್ವಜ್ಞಾನವೇ ಮೋಕ್ಷಪ್ರಾಪ್ತಿಗೆ ಸಾಲದೆಂದು ಜ್ಞಾನನಿಧಿಗಳಾದ ಶ್ರೀಯಾಮುನೇಯರು ಚತುಶ್ಲೋಕಿಯಲ್ಲಿ **"ತಾತ್ವಾಂ ದಾಸಇತಿ ಪ್ರಪನ್ನ ಇತಿ ಚ"** ಎಂದು ಎರಡು ವಿಧ ಅನುಸಂಧಾನವೂ ಆವಶ್ಯಕವೆಂದು ಉಪದೇಶಿಸಿರುತ್ತಾರೆ. ಈ ಅಭಿಪ್ರಾಯವನ್ನೇ ಶ್ರೀಸ್ತೋತ್ರರತ್ನದಲ್ಲೂ **"ತ್ವದೀಯಸ್ತ್ವದ್ಭೃತ್ಯಸ್ತವಪರಿಜನ ಸ್ತ್ವದ್ಗತಿರಹಂ ಪ್ರಪನ್ನಶ್ಚೈವಂ ಸತ್ಯಹಮಪಿ ತವೈವಾಸ್ಮಿ ಹಿ ಭರಃ"** ಎಂದು ಪ್ರಕಟಿಸುವರಾಗಿ ಭೃತ್ಯಭಾವ ಪ್ರಪನ್ನಭಾವವೆರಡರನುಸನ್ಧಾನವೂ ಆವಶ್ಯಕವೆಂದೂ "ಚ" ಕಾರದಿಂದ ವ್ಯಕ್ತಪಡಿಸಿರುತ್ತಾರೆ. ಇಂತಹ ಉಜ್ಜ್ವಲಜ್ಞಾನದೀಪ್ತಿಯಿಂದ ವಿರಾಜಿಸಿದ ಮಹಾನುಭಾವರು ಮೊದಲು ಅಜ್ಞಾನದಿಂದಲಾಗಲಿ ಭ್ರಮದಿಂದಲಾಗಲಿ ಆತ್ಮನಿಕ್ಷೇಪಮಾಡಿಬಿಟ್ಟು, ಅನಂತರ! • ಜ್ಞಾನೋದಯವಾಗಿ ಶೋಕಿಸಿದರೆಂದು ವ್ಯಾಖ್ಯಾನಮಾಡುವದುಚಿತವೇ ?

ಆದರೆ ಈ ಆತ್ಮವು ನಮಗೆ ಸಂಬಂಧಪಟ್ಟ ಸರ್ವಚೇತನಾ ಚೇತನಗಳೂ ಸರ್ವೇಶ್ವರನದೇ ಆಗಿರುವಾಗ ಈ ಅಜಾಗಳ ಸ್ತನರೂಪವಾದ ಆತ್ಮಸಮರ್ಪಣೆಯಿಂದ ಮೋಕ್ಷಪ್ರಾಪ್ತಿಯು ಹೇಗೆ? ಎಂದು ಆಕ್ಷೇಪಿಸಿದರೆ, **"ಓಮಿತ್ಯಾತ್ಮಾನಂ ಯುಂಜೀತ" "ಆತ್ಮಾನಂ ಮಯಿ ನಿಕ್ಷಿಪೇತ್" "ಮಾಮೇಕಂ ಶರಣಂ ವ್ರಜ" "ಉನ್ನಡಿಕ್ಕೀಳಮರನ್ದು ಪುಗುಂದೇನೆ" "ಅಹಮದ್ಯೈವ ಮಯಾ ಸಮರ್ಪಿತಃ" "ತ್ವತ್ಪಾದಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ"** ಇತ್ಯಾದಿ ಪ್ರಮಾಣಗಳೇನು, ಆಳ್ವಾರಾಚಾರ್ಯಸೂಕ್ತಿಗಳೇನು, ಇವುಗಳಿಗನುಸಾರವಾಗಿ ಪ್ರಪದನವನ್ನನುಷ್ಠಿಸುವದು ನಮ್ಮ ಕರ್ತವ್ಯವು. ಅಂತಹ ಆತ್ಮಸಮರ್ಪಣೆಗೆ ಫಲವುಂಟೆಂದು ಭಗವಚ್ಛಾಸ್ತ್ರಾದಿಗಳಲ್ಲಿ ಹೇಳಿರುವದರಿಂದ ಆ ವಿಷಯದಲ್ಲಿ ಪೂರ್ಣವಿಶ್ವಾಸವನ್ನಿಡತಕ್ಕದ್ದು. ವಿಧಿವಾಕ್ಯಗಳಿಗೆ ಕಟ್ಟುಬಿದ್ದವರಿಗೆ ವಾದವು ಅನಾವಶ್ಯಕವು. ವಾದಬೇಕಾದವರಿಗೆ ಸಮಾಧಾನವನ್ನೂ ಕೂಡ ಹೇಳಬಹುದು. ಹೇಗೆಂದರೆ, ಉಪನಯನಕಾಲದಲ್ಲಿ

ಬ್ರಹ್ಮೋಪದೇಶವಮಾಡಿದ ಪಿತಾವಿಗೆ, ಆ ಮಹೋಪಕಾರಕ್ಕೆ ಪ್ರತ್ಯುಪಕಾರವಾಗಿ "**ಕೃತೇ ಚ ಪ್ರತಿಕರ್ತವ್ಯಂ ಏಷ ಧರ್ಮಸ್ಸನಾತನಃ**" ಎಂಬುಕ್ತಿಗೆ ಅನುಸಾರವಾಗಿ, ವಟುವು ಒಂದು ಗೋದಾನವನ್ನು ಕೊಡತಕ್ಕದ್ದೆಂಬ ವಿಧಿ ವಾಕ್ಯವಿರುತ್ತದೆ. ಆದರೆ "**ಅಷ್ಟವರ್ಷಂ ಬ್ರಾಹ್ಮಣಮುಪನಯೀತ**" ಎಂಬ ವಿಧಿವಾಕ್ಯಪ್ರಕಾರ, ಎಂಟು ವರ್ಷದ ಬಾಲನು ತಂದೆಗಾಗಿ ಗೋವನ್ನು ಸಂಪಾದಿಸಲು ಹೇಗೆ ಸಾಧ್ಯವು ? ಬಾಲನದಾಗಿ ಯಾವ ಪದಾರ್ಥವೂ ಇಲ್ಲದಿದ್ದರೂ, ಪಿತಾವಾದವನೇ ಒಂದು ಗೋವನ್ನಾಗಲಿ ಅದಕ್ಕೆ ಬದಲಾಗಿ ಹಿರಣ್ಯವನ್ನಾಗಲಿ ಬಾಲನ ಕೈಯಲ್ಲಿ ಕೊಟ್ಟು "**ವರಂದದಾಮಿ**" ಎಂದು ಮಂತ್ರಪೂರ್ವಕವಾಗಿ ಕೊಟ್ಟದ್ದನ್ನು ತಾನೇ ಪರಿಗ್ರಹಿಸುತ್ತಾನೆ. ಈ ಆಚರಣೆಯಲ್ಲಿ ಹಾಸ್ಯ ಶೋಕ ಲಜ್ಜೆಗಳಿಗೆ ಆಸ್ಪದವಿಲ್ಲದಪಕ್ಷದಲ್ಲಿ, ಸರ್ವೇಶ್ವರನಿಗೆ ದಾಸಭೂತವಾದ ಆತ್ಮವನ್ನು ಆತನ ಅನೋಘವಾಕ್ಯಗಳಿಗನುಸಾರವಾಗಿ ಸಮರ್ಪಿಸುವದರಲ್ಲಿ, ಅನುತಾಪಲಜ್ಜೆಗಳು ಹೇಗೆ ? ಆದರೆ ಬಾಲನು ಅಜ್ಞಾನಿಯು, ಆದುದರಿಂದ ಹಾಸ್ಯ ಶೋಕ ಲಜ್ಜೆಗಳಿಗೆ ಆಸ್ಪದವಿಲ್ಲವು. ಜ್ಞಾನಿಯಾದ ಪ್ರಪನ್ನನಿಗೆ ಇವು ಪ್ರಾಪ್ತವಾಗಬಹುದೆಂದರೆ, ಆಗ ವಿಧಿಬದ್ಧವಾದ ಕರ್ಮದಲ್ಲಿ ಕರ್ತೃತ್ವಾಭಿಮಾನವನ್ನು ವಹಿಸಿದಂತಾಗುವದಿಲ್ಲವೇ ? ಸಂಪೂರ್ಣ ಪಾರತಂತ್ರ್ಯ ಪ್ರಕಟನರೂಪವಾದ ಅಹಂಕಾರ ಮಮಕಾರತ್ಯಾಗದಿಂದನುಷ್ಠಿಸುವದರಲ್ಲಿ ಶೋಕಕ್ಕಾಗಲಿ ಲಜ್ಜೆಗಾಗಲಿ ಕಾರಣವೇ ಇರುವದಿಲ್ಲವು.

ಆದುದರಿಂದ, ಅಲ್ಲಿ ವಟುವು ಜ್ಞಾನದಿಂದಲೇಯಾಗಲಿ ಜ್ಞಾನವಿಲ್ಲದೇಯಾಗಲಿ ಪಿತಾವಿನ ಗೋವನ್ನೇ ಪಿತಾವಿಗೆ ಹೇಗೆ ಸಮರ್ಪಿಸತಕ್ಕದ್ದು ವಿಧಿವಾಕ್ಯಬಲದಿಂದ ಆವಶ್ಯಕವೋ, ಹಾಗೆಯೇ ಅಶಕ್ತ ಪ್ರಪನ್ನನಿಗೂ ಸರ್ವೇಶ್ವರನ ನಿರ್ಹೇತುಕ [illegible]ಮೂಲಕ ಪ್ರಾಪ್ತವಾದ ಕರಣ ಕಳೇಬರಯೋಗ, ಶಾಸ್ತ್ರಪ್ರದತ್ವ, ಆಚಾರ್ಯಪ್ರಾಪ್ತಿ, ಸಿದ್ಧೋಪಾಯತ್ವ ಮೊದಲಾದ ಉಪಕಾರಗಳಿಗೆ ಪ್ರತ್ಯುಪಕಾರರೂಪದಲ್ಲಿ ವಿಧಿವಾಕ್ಯಕ್ಕೆ ಕಟ್ಟುಬಿದ್ದು ಸರ್ವೇಶ್ವರನ ಸ್ವತ್ತಾದ ಈ ಆತ್ಮವನ್ನು ಆತನಿಗೇನೇ ಸಮರ್ಪಿಸತಕ್ಕದ್ದು ಆವಶ್ಯಕವು ಎಂಬ ಭಾವವು. ಆದರೆ ಈ ಆತ್ಮ ಯಾರದು ಎಂದು ಸರ್ವಜ್ಞನು ಪ್ರಶ್ನಿಸಿದರೆ, ಜ್ಞಾನಿಯಾದ ಪ್ರಪನ್ನನು, "**ನಿಯುತಸ್ತ್ವಂ**" "ನಿರುಪಾಧಿಕವಾಗಿ ನಿನ್ನದೇ ಎಂದು ಹೇಳಿ" ಆತ್ಮವನ್ನು ಸಮರ್ಪಿಸು ಎಂದು ಹೇಳಿದೆಯಲ್ಲಾ, ಆದುದರಿಂದ ನಿನ್ನದು ಎಂಬ "**ಪ್ರಬುದ್ಧ**" ಜ್ಞಾನವಿದ್ದರೂ ನಿನ್ನ ಆಜ್ಞೆಯನ್ನು ಶಿರಸಾವಹಿಸಿ ಸಮರ್ಪಿಸಿರುವನು. ಅದಿಲ್ಲದಿದ್ದರೆ "ಇನ್ನೇನನ್ನು ! ಸಮರ್ಪಿಸಲಾದೀತು," "**ಅಥವಾ ಕಿನ್ನು ಸಮರ್ಪಯಾಮಿ ತೇ**" "ಎಲ್ಲವೂ ನಿನ್ನದೇ ಆಗಿರುತ್ತದೆ

ಇದುಕ್ಕು ಮೇಲ್ "ಮಮ ನಾಥ ಯದಸ್ತಿ" ಎಙ್ಗಿರ ಶ್ಲೋಕತ್ತಿಲ್ ಇಸ್ಸಮರ್ಪಣಕ್ತ್ಯುಪಾಯ ಮನುಶಯಮುಂ ಪಣ್ಣಿನಾರ್, ಸ್ವರೂಪಾದಿ

ಯುಲ್ಲೈ", ಎಂದು ಹೇಳಿಬಿಟ್ಟರು. ಇಲ್ಲಿಯೂ ಕೂಡ ಸಮರ್ಪಯಾಮಿ ಎಂಬ ಪ್ರಯೋಗವಿರುವದರಿಂದ ಪ್ರತ್ಯುಪಕಾರರೂಪದಲ್ಲಿ ಸಮರ್ಪಣೆ ಏನೋ ಆವಶ್ಯಕವೆಂಬುವದು ತೋರಿಬರುತ್ತದೆ: "ಅಥವಾ ಕಿನ್ನು" ಎನ್ನದಾದುದರಿಂದ ಆತ್ಮಾವನ್ನು ಸಮರ್ಪಿಸದಿದ್ದರೆ ಇನ್ನೇನನ್ನು ತಾನೇ ಸಮರ್ಪಿಸಲಾದೀತು ಎಂಬ ಭಾವವು. ಇದರಿಂದ ಸಮರ್ಪಣವೇ ತಪ್ಪು ಎಂದು ಹೇಗಾಗುತ್ತದೆ ? ಸಮರ್ಪಣೆಯನ್ನೇನೋ ಮಾಡತಕ್ಕದ್ದು. ಆದರೆ ಯಾವುದನ್ನು ತಾನೇ ಸಮರ್ಪಿಸಲಾದೀತು.

ಶ್ರೀ ನಮ್ಮಾಳ್ವಾರವರೂ ಈ ಪ್ರತ್ಯುಪಕಾರಕ್ಕಾಗಿ ತಮ್ಮದಾಗಿ ಸಮರ್ಪಿಸಲು ಯೋಗ್ಯವಾದುದಿಲ್ಲವೇ ಎಂದು

"ಆರೆನಕ್ಕು ನಿನ್ ಪಾದಮೇ ಶರಣಾಗತ್ತನ್ದೊಳಿನ್ದಾಯುನಕ್ಕೋರ್ ಕೈಮಾರು ನಾ ನೊನ್ರಿಲೇನ್ ಎನದಾವಿಯುಮುನದೇ"

ಎಂಬ (ತಿ. ೨ ೧೦) ಪಾಶುರದಲ್ಲಿ ಹೇಳಿಕೊಂಡಿರುತ್ತಾರೆ. ತಿ ವಾನಮಾಮಲೆಯಲ್ಲಿ ಸೇವೆಯನ್ನೀಯುವ ದೇವನಾಯಕಸ್ವಾಮಿಯೇ. **ಎನಕ್ಕು** ಆರು - ನನಗೆ ನಿನ್ನ ಪ್ರಾಪ್ತಿಗೆ ಮಾರ್ಗವು, **ನಿನ್ ಪಾದಮೇ** - ನಿನ್ನ ಚರಣವನ್ನೇ **ಶರಣಾಗತಂದೊಳಿಂದಾಯ್** - ಉಪಾಯವಾಗಿ ತಂದು ಕೊಟ್ಟಿರುತ್ತೀಯೆ. ಈ ಮಹೋಪಕಾರಕ್ಕಾಗಿ, **ಉನಕ್ಕು** - ನಿನಗೆ, **ಓರ್ ಕೈಮಾರು** - ಒಂದು ಪ್ರತ್ಯುಪಕಾರವನ್ನು, **ನಾನ್** - ಅಕಿಂಚನನಾದ ನಾನು, **ಒನ್ರು ಇಲೇನ್** - ಮಾಡಲು ಒಂದು ವಿಧವಾದುದೂ ಇಲ್ಲವು, **ಎನದಾವಿಯುಮ್** - ನನ್ನದು ಎಂದು ನಾನು ಅನಾದಿಭ್ರಮಿಸಿ ಕೊಂಡಿರುವದಾಗಿಯೂ, ಈಗ ನಿನ್ನ ಚರಣಾರವಿಂದದಲ್ಲಿ ಸಮರ್ಪಿಸಲ್ಪಟ್ಟದಾಗಿಯೂ ಇರುವ ಈ ಆತ್ಮಾವು. **ನಿನ್ನದೇ** - ನಿನ್ನ ಸ್ವತ್ತಾಗಿರುತ್ತದೆ. ಆದುದರಿಂದ ನನ್ನದಾಗಿ ನನ್ನಿಂದ ಪ್ರತ್ಯುಪಕಾರವಾಗಿ ಸಮರ್ಪಿಸಲ್ಪಡತಕ್ಕದ್ದು ಯಾವುದೂ ಇಲ್ಲವೆಂಬ ಭಾವವು ಈ ಅಭಿಪ್ರಾಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟು ಮುಂದಿನ ವಾಕ್ಯದಿಂದ ಮಮನಾಥ ಎಂಬ ಶ್ಲೋಕತಾತ್ಪರ್ಯವನ್ನು ಸಂಗ್ರಹವಾಗಿ ಸದೃಷ್ಟಾಂತವಾಗಿ ತಿಳಿಸುತ್ತಾರೆ:—

ಇದುಕ್ಕುಮೇಲ್ - ಈ ಹಿಂದಿ ಶ್ಲೋಕಕ್ಕೆ ಮುಂದೆ **"ಮಮನಾಥ ಯದಸ್ತಿ"** ಎನ್ನುವ ಶ್ಲೋಕದಲ್ಲಿ, ಸಮರ್ಪಣಕ್ತ್ಯುಪಾಯ - **ವಪುರಾದಿಷು** ಎಂಬ ಶ್ಲೋಕದಲ್ಲಿ ಮಾಡಿದ ಆತ್ಮಸಮರ್ಪಣೆಯನ್ನು ಕುರಿತ, **ಅನುಶಯಂ**

ವಿವೇಕ ಮನ್ರಿಕ್ಕೇ ಸಮರ್ಪಿಕ್ಕಪ್ಪುಕ್ಕಾಲುಮ್, ತನ್ನುಡೈಯ ದ್ರವ್ಯತ್ತೈ ರಾಜಾವುಕ್ಕುಪಹಾರಮಾಗಕೊಡುಪ್ಪಾರೈಪ್ಪೋಲೆ, ಯೆನ್ನದೆನ್ನುಂ ವಭಿ ಮಾನತ್ತೋಡೆಸಮರ್ಪಿಕ್ಕಿಲ್ ಆತ್ಮಾಪಹಾರ ಚೌರ್ಯಮಡಿಯ [illegible]ತಾಗಾ

ಪಣ್ಣಿ[illegible]ನುಮ್ - ಸಮರ್ಪಿಸಿದನ್ನು ಮಾಡಿರುತ್ತಾರೆಂದು ಹೇಳುವದೂ ಕೂಡ, ಸ್ವರೂಪಾದಿ ವಿವೇಕ ಮನ್ರಿಕ್ಕೇ - ತನ್ನ ಸ್ವರೂಪವೇ ಮೊದಲಾದವುಗಳ ವೈಲಕ್ಷಣ್ಯವನ್ನು ಗ್ರಹಿಸುವ ವಿವೇಕವಿಲ್ಲದೇನೇ, ಇಲ್ಲಿ ಆದಿಶಬ್ದದಿಂದ ಗುಣಾದಿಗಳು ಹೇಳಲ್ಪಟ್ಟವು ಸಮರ್ಪಿಕ್ಕಪ್ಪುಕ್ಕಾಲುಮ್ - ಸಮರ್ಪಿಸಲು ಯತ್ನಿಸಿದರೂ, ತನ್ನುಡೈಯದ್ರವ್ಯತ್ತೈ - ತನ್ನ ದ್ರವ್ಯವನ್ನು, ರಾಜಾವುಕ್ಕು - ರಾಜನಿಗೆ, ಉಪಹಾರಮಾಗ ಕ್ಕೊಡುಪ್ಪಾರೈಪ್ಪೋಲೇ - ಕಾಣಿಕೆಯಾಗಿ ಕೊಡುವವರ ಹಾಗೆ ಎನ್ನದೆನ್ನುಂ ಅಭಿಮಾನತ್ತೋಡು - ನನ್ನದು ಎಂಬ ಅಹಂಕಾರದಿಂದ, ಸಮರ್ಪಿಕ್ಕಿಲ್ - ಸಮರ್ಪಿಸಿದುದಾದರೆ, ಆತ್ಮಾಪಹಾರ ಚೌರ್ಯಂ - ಆತ್ಮಾಪಹಾರವಾದಿದ ಕಳ್ಳತನವು, ಅಡಿಯ[illegible]ದಾಗಾದು - ಸಮೂಲವಾಗಿ ನಾಶವಾದುದಾಗುವದಿಲ್ಲವು, ಎನ್ಗೈಕ್ಕಾಹ ವತ್ತನೇ - ಎಂಬುವದಕ್ಕಾಗಿ ಹೇಳಿದ ಅಭಿಪ್ರಾಯಕ್ಕಾಗಿಯೇ, ಅಲ್ಲದು - ಹೊರತು, ಶಾಸ್ತ್ರ ಚೋದಿತಮಾಯ್ - ಶಾಸ್ತ್ರದಲ್ಲಿ ಪ್ರೇರೇಪಿಸಲ್ಪಟ್ಟ, ಅಂದರೆ ವಿಧಿಸಲ್ಪಟ್ಟ ತಾಮ್ ಅನುಷ್ಠಿತ್ತ ಸಮರ್ಪಣತ್ತೈ - ತಾವು "ನಪುರಾದಿಷು" ಎಂಬ ಶ್ಲೋಕದಲ್ಲಿ ಅನುಷ್ಠಾನಮಾಡಿದ ಆತ್ಮ ಸಮರ್ಪಣೆಯನ್ನು, ಅಜ್ಞಕೃತ್ಯ ಮಾಕ್ಕಿನ ಪಡಿಯನ್ರು - ಅಜ್ಞಾನದಿಂದ ಮಾಡಲ್ಪಟ್ಟಿತೆಂದು ತಿಳಿಸುವದಕ್ಕಾಗಿ ಹೇಳದುವಲ್ಲವು ಹಿಂದಿನ ಶ್ಲೋಕವಾದ "ನಪುರಾದಿಷು" ಎಂಬ ಶ್ಲೋಕದಲ್ಲಿ ಅಹಮದ್ಯೈವ ಮಯಾ ಸಮರ್ಪಿತಃ ಎಂದು ಭರಸಮರ್ಪಣೆಯನ್ನು ಮಾಡಿದರು. ಮುಂದಿನ ಶ್ಲೋಕದಲ್ಲಿ ಮಮ ಯದಸ್ತಿ ಯೋಽಸ್ಮ್ಯಹಂ - ಸಕಲವೂ ತನ್ನದೆನ್ನದೇ ಆಗುತ್ತದೆ; ಹೀಗಿರುವಾಗ, ಅಥವಾ ಕಿನ್ನು ಸಮರ್ಪಯಾಮಿತೇ, ಇನ್ನು ನಿನಗೆ ಸಮರ್ಪಿಸತಕ್ಕದ್ದು ಏನಿರುತ್ತದೆ; ಏಕೆಂದರೆ ಸರ್ವಸ್ವಂ ನಿಯತಸ್ವಂ - ನಿನಗೆ ಸಂಬಂಧಪಟ್ಟವು, ಹೀಗೆ ಪ್ರಬುದ್ಧಧೀಃ ಬಿಟ್ಟೀ ಜ್ಞಾನವು ತಲೆದೋರುತ್ತದೆ ಎಂದು ಹೇಳುತ್ತದೆ. ಇದರ ಅಭಿಪ್ರಾಯವು ಏನೆಂದರೆ, ಈ ಆತ್ಮಸಮರ್ಪಣೆಯು ಶಾಸ್ತ್ರಚೋದಿತವಾದ ಉಪಾಯವಾದುದರಿಂದ ಸ್ವರಕ್ಷಣ ಭಾರದಲ್ಲಿ ಸರ್ವಜ್ಞ ಈಗಲೇ ಅನುಷ್ಠಿಸಲ್ಪಟ್ಟಿತು. ಆದರೆ ಚೆನ್ನಾಗಿ ವಿಮರ್ಶೆಮಾಡಿ ನೋಡಿದರೆ ಸಕಲ ಚಿದಚಿತ್ತುಗಳೂ ನಿನಗೆ ಸಂಬಂಧಪಟ್ಟವುಗಳಾಗಿ ನೀನು ದಯಪಾಲಿಸಿದ ಗ್ರಾಮಗಳು ಪ್ರವ್ಯಗಳು ಪಶು

ದೆನ್ಱು ಕಾಕವತ್ತನ್ಱು, ಅಲ್ಲದು ಶಾಸ್ತ್ರಚೋದಿತಮಾಯ್ ತ್ತಾಮ್ ಅನುಷ್ಠಿತ್ತ ಸಮರ್ಪಣತ್ತುಕ್ಕು ಅಜ್ಞಕೃತ್ಯ ಮಾಕ್ಕಿನ ಪಡಿಯನ್ಱು.

ಪತ್ನಿಪುತ್ರಾದಿಗಳೂ, ನಾನೂ ಸಹ ನಿನ್ನ ಪದಾರ್ಥವೆಂಬ ನಿಶ್ಚಯಜ್ಞಾನ ಹುಟ್ಟಿರುತ್ತದೆಯಾದುದರಿಂದ ಯಾವುದು ತಾನೇ ನನ್ನದು, ಯಾವುದು ತಾನೇ ನಾನು ಸಮರ್ಪಿಸಬಹುದು ಆದುದರಿಂದ ಈ ಆತ್ಮಾವನ್ನು ನಾನು ನಿನ್ನ ಪಾದಕಮಲಗಳಲ್ಲಿ ಸಮರ್ಪಿಸಿದರೂ ಅದು ನಿನ್ನದೇ ಆಗಿರುತ್ತದೆ ಎಂದು ಹೇಳಿದರೇ ವಿನಾ ತಾನು ಮಾಡಿದ ಆತ್ಮ ಸಮರ್ಪಣೆಯು ಅಜ್ಞಾನಕೃತವಾದುದು, ಅಜ್ಞಾನದಿಂದ ಅನುಷ್ಠಿಸಿದೆನೇ ಎಂದು ಶೋಕಿಸಿದರು ಎಂಬ ಕೆಲವರ ಅಭಿಪ್ರಾಯವು ಸರಿಯಾದುದಲ್ಲವೆಂದು ಹೇಳಿರುತ್ತಾರೆ. • ಮೊದಲು ಅಜ್ಞಾನದಿಂದ ಆತ್ಮಸಮರ್ಪಣೆ ಮಾಡಿಬಿಟ್ಟು, ಅನಂತರ ಜ್ಞಾನವುಂಟಾದ ನಂತರ ಶೋಕಿಸಿದರು ಅಥವಾ ಲಜ್ಜಿಸಿದರು ಎಂದು ಅರ್ಥ ಹೇಳಿದರೆ, ಇನ್ನೊಂದು ತುಂಬಾ ಪ್ರಬಲತರವಾದ ದೋಷಪ್ರಾಪ್ತಿಗೆ ಕಾರಣಭೂತವಾಗುತ್ತದೆ. "**ಸ್ವಾತ್ಮಾನಂ ಮಯಿ ನಿಕ್ಷಿಪೇತ್**" ಇತ್ಯಾದಿ ಹಿಂದೆ ೧೦೪ ನೆಯ ಪುಟದಲ್ಲಿ ಉದಾಹರಿಸಿರುವ ವಿಧಿವಾಕ್ಯಗಳನ್ನೆಲ್ಲಾ ಉಲ್ಲಂಘಿಸಿದಹಾಗೆ ಆಗುತ್ತದೆ. ಆದುದರಿಂದ ಆತ್ಮಸಮರ್ಪಣೆಗೆ **ತವಾಹಂ** ನಾನು ನಿನ್ನವನೆಂಬ ಜ್ಞಾನವುಂಟಾಗಿ ತನ್ನ ಕರ್ತೃತ್ವವು ಸರ್ವೇಶ್ವರನಿಗೆ ಅಧೀನವು, ತನ್ನ ಕರ್ತೃತ್ವದಲ್ಲಿ ತನಗೆ ಪ್ರಯೋಜನವಿಲ್ಲವು, ಸರ್ವೇಶ್ವರನಿಗೇನೇ ಪ್ರಯೋಜನವು ಎಂಬ ಅಹಂಕಾರ ಮಮಕಾರ ತ್ಯಾಗಪೂರ್ವಕವಾಗಿ ಅನುಷ್ಠಿಸತಕ್ಕದ್ದೆಂಬುವದು ಸಿದ್ಧಾಂತವೇ ವಿನಾ, ಇತರರು ಹೇಳಿರುವ ಹಾಗೆ ಆತ್ಮಸಮರ್ಪಣೆಯನ್ನು ಅಜ್ಞಾನದಿಂದ ಮಾಡಿ ಬಿಟ್ಟು, ಅನಂತರ ಅದು ತನ್ನದಲ್ಲವೇ ಎಂದು ಲಜ್ಜಿಸಿದರು ಅಥವಾ ಪರಿತಾಪಪಟ್ಟರೆಂಬರ್ಥವಲ್ಲವು. ಪರಿತಾಪ ಯಾವ ಸಂದರ್ಭದಲ್ಲಿ ಎಂದರೆ ಒಬ್ಬ ರಾಜನಿಗೆ ತನ್ನ ದ್ರವ್ಯವನ್ನು ಕಾಣಿಕೆಯಾಗಿ ಕೊಟ್ಟ ಹಾಗೆ, ತನ್ನ ಆತ್ಮಾವನ್ನು ರಾಜಾಧಿರಾಜನಾದ ಸರ್ವೇಶ್ವರನಿಗೆ ಸಮರ್ಪಿಸಿರುತ್ತೇನೆ, ಎಂಬ ಅಭಿಮಾನದಿಂದ ಆತ್ಮಸಮರ್ಪಣೆಮಾಡಿದರೆ ಆಗ ಅದು ಭರನ್ಯಾಸವಾಗದು, ಆಗ ಆತ್ಮಾಪಹಾರ ರೂಪಚೌರ್ಯವೇ ಆಗುತ್ತದೆ ಎಂಬ ಭಾವವು. ಸ್ವಾಮಿ ನಿಗಮಾಂತ ದೇಶಿಕರವರಿಗೆ ಇತರರ ಅಭಿಪ್ರಾಯವು ಸರಿಯಲ್ಲವೆಂದು ಹೇಳಿದರೆ ಅವರಿಗೆ ಖೇದವುಂಟಾದೀತೆಂದು ಭಾವಿಸಿ, ಹಾಗೆ ಭಿನ್ನಾಭಿಪ್ರಾಯಗಳನ್ನು ಹೇಳುವವರ ನಾಮಧೇಯಗಳನ್ನು ತಿಳಿಸುವದಿಲ್ಲವು. ಇದು ಮಹನೀಯರುಗಳ ನಿಯತಸ್ವಭಾವವು. ಇಲ್ಲಿ **ಶಾಸ್ತ್ರಚೋದಿತ ಮಾಯ್** - ಎಂದು ಪ್ರಯೋಗಿಸಿರುವದರಿಂದ, ಜೀವಾತ್ಮನ ಪರಿಪೂರ್ಣ ಸ್ವರೂಪ ಸ್ವಭಾವಾದಿಗಳ ಜ್ಞಾನವಿಲ್ಲ

ದೆಯೂ, ಅಹಂಕಾರ ಮಮಕಾರತ್ಯಾಗಪುರಸ್ಸರವಾಗಿ ಶೇಷತ್ವಾನುಸಂಧಾನದಿಂದ ಭರಸಮರ್ಪಣೆಯು ಸರಿಯಾದ ಉಪಾಯವೇ ಎಂದೂ ನಿಸ್ಸಂದೇಹವಾಗಿ ಮೋಕ್ಷದಾಯಕವೆಂದೂ, ಶಾಸ್ತ್ರಗಳಲ್ಲಿ ಪ್ರಸಿದ್ಧವಿದೆ ಎಂದೂ, ಉಪದೇಶಿಸುತ್ತಾರೆ. ಈ ವಿಷಯದಲ್ಲಿ ಒಂದು ಇತಿಹಾಸವೂ ಉಂಟು. ಮಹಾಪ್ರಾಜ್ಞರಾಗಿ ಒಂಬದನಾಯಿರಪ್ಪಡಿ ಕರ್ತೃವಾದ ಶ್ರೀ ನಂಜೀಯರವರನ್ನು ಕುರಿತು ಅವರನ್ನಾಶ್ರಯಿಸಿದ ಶಿಷ್ಯರೊಬ್ಬರು ಪ್ರಶ್ನಿಸಿದರು; ಏನೆಂದರೆ. "ಸರ್ವೇಶ್ವರನೇ ಸ್ವತಃ ಉಪಾಯವಾಗಿರುವಾಗ ಈ ಪ್ರಪತ್ತಿಮೂಲಕ ಸಮಾಗಾಗತಕ್ಕದ್ದೇನು ತಾನೇ ಇದೆ"? ಎನ್ನಲು; ಇದಕ್ಕೆ ನಂಜೀಯರು ತುಂಬಾ ಪರಿತಾಪದಿಂದ, ಕೃಷ್ಣ ಕೃಷ್ಣನೆಂದು ಕಿವಿಗಳನ್ನು ಮುಚ್ಚಿಕೊಂಡವರಾಗಿ, "ನಾಥಮುನಿಗಳು ಮೊದಲುಮಾಡಿಕೊಂಡು ಇಷ್ಟು ಜನ ಪರಮಾಚಾರ್ಯರುಗಳೂ ಇದನ್ನು ಪರಮ ರಹಸ್ಯವೆಂದು ಭಾವಿಸಿ ತಮ್ಮ ಶಿಷ್ಯರುಗಳಿಗೆ ಉಪದೇಶಿಸುತ್ತಾ ಕ್ರಮವಾಗಿ ಬಂದುದನ್ನು, ಇದರ ಮಾಹಾತ್ಮ್ಯವನ್ನರಿಯದ ಅಜ್ಞಾನಿಯಾದ ನಿನಗೆ ಮಹಾಪಾಪಿಯಾದ ನಾನು ಉಪದೇಶಿಸಬಹುದೇ" ಎಂದು ವಿಷಾದವನ್ನು ಹೊಂದಿದರೆಂದು ಶ್ರೀ ವಡಕ್ಕು ತಿರುವೀಧಿಪಿಳ್ಳೈಯವರು ಈಡಿನಲ್ಲಿ (೬. ೧೦. ೪) ಉಪದೇಶಿಸಿರುತ್ತಾರೆ. ಆದುದರಿಂದ ಪ್ರಪತ್ತಿಯು ಅನಾವಶ್ಯಕವೆಂಬ ಭಾವವು ಈಚೆಗೆ ಉಂಟಾದುದೇ ವಿನಾ ಹಿಂದಿನವರಭಿಪ್ರಾಯವು ಸುತರಾಂ ಅಲ್ಲವು. ಇಲ್ಲಿ **ತಾಂ ಅನುಷ್ಠಿತ್ತ** ಎಂದು ಹೇಳಿರುವದರಭಿಪ್ರಾಯವೇನೆಂದರೆ :— ಶ್ರೀ ಯಾಮುನೇಯರು ಮಹಾಜ್ಞಾನಿಗಳು, ತತ್ವವಿತ್ತುಗಳಲ್ಲಿ ಅಗ್ರೇಸರರು, ಶಾಸ್ತ್ರಗಳನ್ನೆಲ್ಲಾ ಪರಿಶೀಲಿಸಿ ಇದಮಿತ್ಥಂ ಎಂದು ಸ್ಥಾಪಿಸಿ ಸಿದ್ಧಿತ್ರಯಗಳನ್ನು ದಯಪಾಲಿಸಿದವರು, ತತ್ವ ಯಾಥಾರ್ಥ್ಯವನ್ನು ಸಂಗ್ರಹವಾಗಿ ಬೋಧಿಸುವದಕ್ಕಾಗಿ ಅನುಗ್ರಹಿಸಿದ ಸ್ತೋತ್ರರತ್ನವೆಂದು ಕೊಂಡಾಡಲ್ಪಟ್ಟ ಗ್ರಂಥದಲ್ಲಿ ಸಂಶಯಾವಿಷ್ಟಮನಸ್ಕರಾಗಿ, ಮೊದಲು ತಪ್ಪಾಗಿ ಆತ್ಮನಿಕ್ಷೇಪವನ್ನು ಮಾಡಿಬಿಟ್ಟು, ಮುಂದಿನ ಶ್ಲೋಕದಲ್ಲಿ ಅದು ಸರಿಯಾದುದಲ್ಲವೆಂದು ಎಂದಿಗಾದರೂ ಹೇಳಿಯಾರೇ ? ಆದುದರಿಂದ ಇಂತಹ ಮಹನೀಯರು ಶಾಸ್ತ್ರಚೋದಿತವಾಗಿ ಅನುಷ್ಠಿಸಿರುವದೇ ಎಂದು ಪ್ರಮಾಣವಂತೆ ಮುಖ್ಯವಾದುದಲ್ಲವೇ ಎಂಬ ಭಾವವು. ಈ ಅಭಿಪ್ರಾಯವನ್ನು ಸೂಚಿಸುವದಕ್ಕಾಗಿಯೇ ಇಲ್ಲಿ "**ಅಲ್ಲದು**" ಎಂಬು ವಾಕ್ಯವನ್ನು ಪ್ರಾರಂಭಿಸಿರುತ್ತಾರೆ.

ಮುಂದೆ "**ವಪುರಾದಿಷು**" "**ಮಮನಾಥ**" ಎಂಬೀ ಎರಡು ಶ್ಲೋಕಗಳಿಂದಲೂ ನಾವು ಸರಿಯಾಗಿ ಗ್ರಹಿಸತಕ್ಕ ಅಭಿಪ್ರಾಯವೇನೆಂದು ತಿಳಿಸುತ್ತಾರೆ. "**ವಪುರಾದಿಷು**" ಎಂಬ ಶ್ಲೋಕದಲ್ಲಿ ಉಕ್ತವಾಗಿರುವದು, ಶಾಸ್ತ್ರದಲ್ಲಿ ಆತ್ಮವನ್ನು ಸರ್ವೇಶ್ವರನಲ್ಲಿ ಸಮರ್ಪಿಸು ಎಂಬ ವಿಧಿವಾಕ್ಯವಿರುವದ

ಆಕೆ ಇರಣ್ಡು ಶ್ಲೋಕತ್ತಾಲುಮ್ ಯಥಾವಸ್ಥಿತ ಸ್ವರೂಪಾದಿ ವಿವೇಕ ಮಿಲ್ಲೈಯೇ ಯಾಗಿಲುಮ್, "ನಮಃ" ಎನ್ರು ಸ್ವಸಂಬಂಧ ಮರುಕ್ಕೈಯೇ "ಅಹಮಪಿ ತವೈವಾಸ್ಮಿಹಿ ಭರಃ" ಎನ್ನುಮ್ಪಡಿ ಭರಸಮರ್ಪಣ ಪ್ರಧಾನ ಮಾನಶಾಸ್ತ್ರಾರ್ಥತ್ತಿಲ್ ಸಾರಮೆನ್ರದಾಯ್‌ತ್ತು.

ರಿಂದ, ತದನುಗುಣವಾಗಿ ಆತ್ಮಸಮರ್ಪಣೆಯು. ಆದುದರಿಂದ ಆಚಾರ್ಯಪರಂಪರೆಯಲ್ಲಿ ನಿರೂಪಿತವಾಗಿರುವುದು ಇಷ್ಟುಮಾತ್ರವೇ. ಆದರೆ, ತಾವು ಈಗ ಸಾಂಗಪ್ರಪದನ ಅಥವಾ ಭರನ್ಯಾಸವೆಂದು ಹೇಳಿರುವದರಲ್ಲಿ ಆತ್ಮಸ್ವರೂಪ ಭರಸಮರ್ಪಣೆ ಮತ್ತು ಆತ್ಮಾತ್ಮೀಯ ರಕ್ಷಾಫಲಸಮರ್ಪಣೆಗಳಿಂದಲೂ ಸೇರಿರುವುದೆಂದು ಹೇಳುವದಕ್ಕೆ ವಿರುದ್ಧವಾದುದಲ್ಲವೇ ಎಂಬಿವೇ ಮೊದಲಾದ ಆಕ್ಷೇಪಣೆಗಳಿಗೂ ಸಮಾಧಾನವನ್ನೂ ಹಾಗೆಯೇ ಹೇಳುತ್ತಾರೆ. ಈ ಶ್ಲೋಕಗಳಲ್ಲೇ ಭರನ್ಯಾಸವು ಸ್ವರೂಪ ಆತ್ಮರಕ್ಷಾಫಲ ಭರಸಮರ್ಪಣೆಗಳುಳ್ಳದೆಂದು ಉಪಪಾದಿತವಾಗಿದೆ.

ಆಗ - ಹೀಗಿರಲಾಗಿ ಎಂದರೆ ಮೇಲೆ ಹೇಳಿದ **ವಪುರಾದಿಷು "ಮಮ ನಾಥ**"ವೆಂಬೀ ಶ್ಲೋಕಗಳಿಗೆ ಈ ಅಭಿಪ್ರಾಯವೇ ಯುಕ್ತವಾದುದಾದರೆ, **ಇರಣ್ಡು ಶ್ಲೋಕತ್ತಾಲುಮ್** - ಈ ಎರಡು ಶ್ಲೋಕಗಳಿಂದಲೂ, **ಯಥಾವಸ್ಥಿತ ಸ್ವರೂಪಾದಿ ವಿವೇಕ ಮಿಲ್ಲೈಯಾಗಿಲುಮ್** - ತನ್ನ ಸ್ವರೂಪ ಸ್ವಭಾವಾದಿಗಳನ್ನು ಸರಿಯಾಗಿ ತಿಳಿಯುವ ಜ್ಞಾನವಿಲ್ಲದಿದ್ದರೂ ಕೂಡ **"ನಮಃ ಎನ್ರು ಸ್ವಸಂಬಂಧ ಮರುಕ್ಕೈಯೇ** - ನಮಃ ಎಂದು ಹೇಳಿ ತನಗೆ ಯಾವುದರಲ್ಲಿಯೂ ಈಷದಪಿ ಸಂಬಂಧವಿರುವ ಅಹಂಕಾರ ಮಮಕಾರ ಭಾವವನ್ನು ಕಳೆದುಕೊಳ್ಳುವುದೇ, **"ಅಹಮಪಿ ತವೈವಾಸ್ಮಿಹಿ"** "ನಾನೂ ಕೂಡ ನಿನ್ನವನೇ ಸರಿ ಎಂಬ ರಕ್ಷಾಭರಸಮರ್ಪಣೆಯು" **ಎನ್ನುಂಪಡಿ** - ಎಂದು ಹೇಳಿರುವಹಾಗೆ, **ಭರಸಮರ್ಪಣ ಪ್ರಧಾನಮಾನ** - ಹೀಗೆ ಭರಸಮರ್ಪಣೆಯೇ ಮುಖ್ಯೋಪಾಯವೆಂದು ಹೇಳುವ **ಶಾಸ್ತ್ರಾರ್ಥತ್ತಿಲ್** - ಶಾಸ್ತ್ರಗಳಾದ ಕಠಶ್ರುತಿ ಪಾದ್ಮಪುರಾಣ ಭಗವಚ್ಛಾಸ್ತ್ರ ಮುಂತಾದವುಗಳ ಅಭಿಪ್ರಾಯದಲ್ಲಿ, **ಸಾರಮೆನ್ರದಾಯಿತ್ತು** - ಬಹಳ ಸಾರವಾದ ಅಮೋಘವಾದಂಶವು ಎಂಬಭಿಪ್ರಾಯವು. ಇನ್ನು ಅನೇಕ ವಿಷಯಗಳು ಈ ಪ್ರಪತ್ತಿ ಶಾಸ್ತ್ರದಲ್ಲಿ ತಿಳಿಯತಕ್ಕವುಗಳಿರಬಹುದು. ಅವುಗಳಲ್ಲೆಲ್ಲಾ ಇದು ಸಾರವಾದುದೆಂಬ ಭಾವವು, **ಅಹಮದ್ಯೈವ ಮಯಾ ಸಮರ್ಪಿತಃ** ಎಂಬುವದರಿಂದ ಆತ್ಮರಕ್ಷಾಭರಸಮರ್ಪಣವೂ, **ನಿಯುತಸ್ವಂ** ಎಂಬುವದರಿಂದ ಸ್ವರೂಪ ಸಮರ್ಪಣೆಯೂ, **ಸಕಲಂ ತವೈವ** ಎಂಬುವದರಲ್ಲಂತರ್ಗತವಾದ ಫಲಸಮರ್ಪಣೆಯೂ ಮೂರೂ ಈ ಸಾಂಗಪ್ರಪದನವಲ್ಲುಂಟು

ಎಂದು ಹೇಳಲ್ಪಟ್ಟ ಅತ್ಯಂತ ಪಾರತಂತ್ರ್ಯವು ಪ್ರದರ್ಶಿಸಲ್ಪಟ್ಟಿರುವದರಿಂದ **ಸಾರವೆಂಬ** ಭಾವವು.

ಭಗವಚ್ಛಾಸ್ತ್ರಾದಿಗಳಲ್ಲಿ ಉಪಪಾದಿತವಾಗಿರುವ ಹಾಗೆ ಶರಣಾಗತಿಯೂ ಒಂದು ಮುಖ್ಯೋಪಾಯವಾಗಿ ವಿಧಿಸಲ್ಪಟ್ಟಿರುವದರಿಂದ ಆ ಶಾಸ್ತ್ರವಿಧಿಯನ್ನನುಸರಿಸಿ **ವಪುರಾದಿಷು** ಎಂಬ ಶ್ಲೋಕದಲ್ಲಿ ಯಾಮುನೇಯರು ಆತ್ಮಭರಸಮರ್ಪಣೆಯನ್ನು ಮಾಡಿದರು. ಈ ಭರಸಮರ್ಪಣದಲ್ಲಿ ಮುಖ್ಯವಾದ ಸಾರವತ್ತಾದ ಅನುಸಂಧಾನವು ಯಾವುದೆಂದರೆ —ತನಗೆ ಯಾವುದರಲ್ಲೂ ಸಂಬಂಧವಿಲ್ಲವೆಂಬ ತಿಳಿಯುವಿಕೆಯು. ಇದನ್ನು **"ಮಮನಾಥ"** ಎಂಬ ಶ್ಲೋಕದಲ್ಲಿ ಉಪಪಾದನೆ ಮಾಡಿದರು. ಅಹಂಕಾರ ಮಮಕಾರತ್ಯಾಗವು ಇಲ್ಲಿ ತುಂಬಾ ಸಾರವತ್ತಾದುದು ಎಂದು ಹೇಳುವದಕ್ಕಾಗಿ ಹೇಳಿದ ಶ್ಲೋಕವೇ ವಿನಾ, ತಾವು ಅಜ್ಞಾನದಿಂದ ಆತ್ಮಸಮರ್ಪಣೆಮಾಡಿಬಿಟ್ಟೆನಲ್ಲಾ ಎಂಬ ಪಶ್ಚಾತ್ತಾಪದಿಂದ ಹೇಳಿದುದಲ್ಲವು. ಹಾಗೆ ಪಶ್ಚಾತ್ತಾಪದಿಂದ ಹೇಳಿದುದಾದರೆ **"ಅಹಮಪಿ ತವೈವಾಸ್ಮಿಹಿ ಭರಃ"** ಎಂದು ಮುಂದೆ ೬೦ನೇ ಶ್ಲೋಕದಲ್ಲಿ ಪುನಃ ರಕ್ಷಾಭರಸಮರ್ಪಣೆಯನ್ನು ಮಾಡುತ್ತಿರಲಿಲ್ಲವು. ಆದುದರಿಂದ ಭರಸಮರ್ಪಣೆಯೇ ಪ್ರಧಾನವಾದುದು; ಇದು ಸ್ವರೂಪ ಆತ್ಮರಕ್ಷಾ ಫಲಭರಗಳ ನಿಕ್ಷೇಪರೂಪವಾದುದು. ಈ ಭರಸಮರ್ಪಣೆಯನ್ನು ಸ್ವಾಧೀನ ಕರ್ತೃತ್ವ, ಸ್ವತಂತ್ರ ಕರ್ತೃತ್ವತ್ಯಾಗಗಳ ಮೂಲಕ, ಎಂದರೆ ಅಹಂಕಾರ ಮಮಕಾರಗಳೊಂದೂ ಇಲ್ಲದೆ ನಡಿಸತಕ್ಕದ್ದೆಂಬುವದು ಮುಖ್ಯಾಭಿಪ್ರಾಯವು. ಆ ೬೦ನೇ ಶ್ಲೋಕವು ಯಾವುದೆಂದರೆ :---

> **ಪಿತಾತ್ವಂ ಮಾತಾತ್ವಂ ದಯಿತ ತನಯಸ್ತ್ವಂ ಪ್ರಿಯ ಸುಹೃ**
> **ತ್ತ್ವಮೇವ ತ್ವಂ ಮಿತ್ರಂ ಗುರುರಸಿ ಗತಿಶ್ಚಾಸಿ ಜಗತಾಮ್ ।**
> **ತ್ವದೀಯ ಸ್ತ್ವದ್ಭೃತ್ಯ ಸ್ತವ ಪರಿಜನ ಸ್ತ್ವದ್ಗತಿರಹಂ**
> **ಪ್ರಪನ್ನ ಶ್ಚೈವಂ ಸತ್ಯಹ ಮಪಿ ತವೈವಾಸ್ಮಿಹಿ ಭರಃ ॥**

ಇದರರ್ಥವೇನೆಂದರೆ

ತ್ವಮೇವ - ನೀನೇ ನನಗೆ, ಪಿತಾ - ತಂದೆಯು, ತಂದೆಯು ಹೇಗೆ ಸತ್ತಾದಾಯಕನೂ ಆಗಿ, ಹಿತಪ್ರವರ್ತಕನೋ, ಹಾಗೆಯೇ ನೀನೂ ; ನಮ್ಮ ಸ್ವಂತ ತಂದೆಯು ಲೋಕಾಧಿಕ ಪಿತಾ ಎಂಬ ಭಾವವು. ಲಕ್ಷ್ಮಣನು, **ಅಹಂತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ** ಎಂದು ದಶರಥನಲ್ಲಿ ಪಿತೃಭಾವವನ್ನು ಕಾಣಲಿಲ್ಲನೆಂದು ಹೇಳಿಕೊಂಡನು. ಹಾಗಾದರೆ ಪಿತೃಭಾವನೆಲ್ಲಿ ಎಂದರೆ, **ಭರ್ತಾಭ್ರಾತಾ ಚ ಬಂಧುಶ್ಚ ಪಿತಾ ಚ ಮಮ ರಾಘವಃ**, ತಂದೆ ಮೊದಲುಗೊಂಡು ಸರ್ವ ವಿಧ ಬಂಧುವೂ ಪರಮೇಶ್ವರನಾದ ಶ್ರೀರಾಮನೇ ಎಂದು ಭಾವಿಸಿದನು. ಹಾಗೆಯೇ **ಮಾತಾ ತ್ವಮೇವ** – ಪೂರ್ಣವಾತ್ಸಲ್ಯವಿಟ್ಟು ರಕ್ಷಿಸುವ

ತಾಯಿಯೂ ನೀನೇ, **ದಯಿತ ತನಯಸ್ತ್ವಂ**-ಸರ್ವಾನಂದವನ್ನೀಯುವ ಪ್ರಿಯ ಪುತ್ರನು ನೀನೇ, **ಪ್ರಿಯಸುಹೃತ್ತ್ವಮೇವ** - ಕಷ್ಟಕಾಲದಲ್ಲಿ ಸಹಾಯಕನಾಗುವ ಪ್ರಿಯ ಸ್ನೇಹಿತನೂ ನೀನೇ, **ಗುರುರಪಿ ತ್ವಮೇವ** - ಅಜ್ಞಾನವನ್ನು ಹೋಗಲಾಡಿಸುವ ಗುರುವೂ ನೀನೇ, **ಜಗತಾಂ ಗತಿಶ್ಚಾಸಿ** - ಜಗತ್ತಿಗೆಲ್ಲಾ ಉಪಾಯಭೂತನಾಗಿ ಮಾರ್ಗ ತೋರಿಸುವನೂ ನೀನೇ, ನಾನಾದರೋ **ತ್ವದೀಯಃ**-ನಿನ್ನವನು, ನಿನಗೆ ಶೇಷಭೂತನು, **ತ್ವದ್ಭೃತ್ಯಃ**-ನಿನ್ನ ಸೇವಕನು, **ತವಪರಿಜನಃ**-ನಿನಗೆ ಕೈಂಕರ್ಯಮಾಡತಕ್ಕವನು, **ತ್ವದ್ಗತಿಃ**-ನೀನೇಗತಿಯಾಗಿ ಉಳ್ಳವನು, ಎಂದರೆ ನಿನ್ನಲ್ಲದೆ ಬೇರೆಗತಿಯಿಲ್ಲದವನು, **ಪ್ರಪನ್ನಃ**-ನಿನಗೆ ಶರಣಾಗತನು, **ಏವಂ ಸತಿ**-ಹೀಗೆ ನಿನಗೂ ನನಗೂ ಸಂಬಂಧವಿರಲಾಗಿ, **ಅಹಮಪಿ ತವೈವಾಸ್ಮಿ ಹಿ ಭರಃ**-ನಾನೂ ಕೂಡ ನಿನ್ನವನೇ, ನನ್ನ ಕರ್ತೃತ್ವ ಲೇಶಕೂಡ ನಿರಪೇಕ್ಷವಾಗಿ ರಕ್ಷಿಸುವ ಭಾರವು ನಿನ್ನದೆ ಯಾಗಿರುತ್ತದೆಯಲ್ಲವೇ". ಎಂಬ ಪೂರ್ವಾಧಿಕಾರ ಶ್ಲೋಕಗಳಿಂದ ತಾನು ಸರ್ವೇಶ್ವರನ **ನಿಯತಸ್ವಂ** ಎಂಬ ಬುದ್ಧಿಯಿಂದ ಆತ್ಮಸಮರ್ಪಣೆ ಮಾಡಿರುದೇ ಭರನ್ಯಾಸದ ಅಭಿಪ್ರಾಯವು ಎಂಬುವದು ಈ **ಪಿತಾತ್ವಂ** ಎಂಬ ಶ್ಲೋಕದಿಂದವ್ಯಕ್ತವಾಗುತ್ತದೆ. ಆದುದರಿಂದ ಪ್ರಪದನವೆಂದರೆ ಶೇಷತ್ವ ಜ್ಞಾನದಿಂದ ಆತ್ಮರಕ್ಷಾಫಲ ಭರನ್ಯಾಸಮಾಡುವದೇ ಎಂಬ ಭಾವವು. ಇಲ್ಲಿಯೂ **ತ್ವದೀಯಃ**ಮುಂತಾದವುಗಳಿಂದ ಸ್ವರೂಪ ಸಮರ್ಪಣೆಯೂ, **ತವಪರಿಜನಃ** - ಎಂಬುವದರಿಂದ ಫಲಸಮರ್ಪಣೆಯೂ, **ತ್ವದ್ಗತಿಃ, ಅಹಮಪಿತವೈವ** ಎಂಬುವವರಿಂದಲೂ ಆತ್ಮರಕ್ಷಾಸಮರ್ಪಣೆಯೂ, ಹೀಗೆ ಮೂರರ ಭರವೂ ಸರ್ವೇಶ್ವರನಲ್ಲೇ ಎಂಬಪಾರತಂತ್ರ್ಯವೂ ತೋರಿಬರುತ್ತದೆ.

ಹಿಂದೆ ಪ್ರಪದನವೆಂದರೆ ಸ್ವರೂಪ ಆತ್ಮರಕ್ಷಾಫಲಗಳ ಭರನ್ಯಾಸವೆಂದೂ ಎಂದರೆ ಶೇಷತ್ವ ಬುದ್ಧಿಯಿಂದ ಯುಕ್ತವಾದ ರಕ್ಷಾಫಲಗಳ ನ್ಯಾಸಾನುಸಂಧಾನವೆಂದೂ ಹೇಳಲ್ಪಟ್ಟಿತು. ದ್ವಯವು ಅಂತಹ ಪ್ರಪದನಾನುಷ್ಠಾನ ಮಂತ್ರವೆಂದೂ ಸಹ ಇನ್ನೊಂದು ಕಡೆಯಲ್ಲಿ ಬೋಧಿಸಲ್ಪಟ್ಟಿತು. ಹಾಗಾದರೆ ಇಂತಹ ಶೇಷತ್ವಾನುಸಂಧಾನದಿಂದ ಸೇರಿದ ಭರನ್ಯಾಸವು ದ್ವಯದಲ್ಲಿ ಎಲ್ಲಿ ಹೇಳಲ್ಪಟ್ಟಿರುತ್ತದೆ ಎಂಬ ಪ್ರಶ್ನೆಯು ಯುಕ್ತವಾದುದು. ಆದುದರಿಂದ ದ್ವಯದಲ್ಲಿ ಎಲ್ಲಿ ಇವನ್ನು ಗ್ರಹಿಸಬಹುದೆಂಬುವದನ್ನುಪದೇಶಿಸುತ್ತಾರೆ.

ದ್ವಯದಲ್ಲಿ ಶೇಷತ್ವಜ್ಞಾನಪೂರ್ವಕವಾಗಿ ಭರನ್ಯಾಸವನ್ನು ಅನುಸಂಧಾನ ಮಾಡುವ ಸ್ಥಳವು.

ಇಪ್ಪಡಿ - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, ಅದು ಹೇಗೆ ಉಪಪಾದಿಸಲ್ಪಟ್ಟಿತೆಂಬುವದನ್ನು ಇಲ್ಲಿಯೂ **"ಶೇಷತ್ವಾನುಸಂಧಾನ ವಿಶಿಷ್ಟ**

ದ್ವಯೇ ಶೇಷತ್ವ ಜ್ಞಾನಪೂರ್ವಕ ಭರನ್ಯಾಸಾನುಸನ್ಧಾನಂ

ಇಪ್ಪಡಿ ಶೇಷತ್ವಾನುಸನ್ಧಾನ ವಿಶಿಷ್ಟಮಾನ ಸ್ವರಕ್ಷಾ ಭರಸಮರ್ಪಣಂ ದ್ವಯತ್ತಿಲ್ ಉಪಾಯ ಪರಮಾನ ಪೂರ್ವಖಣ್ಡತ್ತಿಲ್ ಮಹಾವಿಶ್ವಾಸ ಪೂರ್ವಕ ಗೋಪ್ತೃತ್ವವರಣ ಗರ್ಭಮಾನ ಶರಣಶಬ್ದೋಪಶ್ಲಿಷ್ಟ ಕ್ರಿಯಾಪದತ್ತಿಲೆ ಶೇರ್ತ್ತು ಅನುಸನ್ಧಿಕ್ಕ ಪ್ರಾಪ್ತಂ.

ಮಾನ ಸ್ವರಕ್ಷಾ ಭರಸಮರ್ಪಣಂ" ಎಂಬುವದರಿಂದ ಸಂಗ್ರಹಿಸಿ ಹೇಳಿದ್ದಾರೆ. **ಶೇಷತ್ವಾ......ಭರಸಮರ್ಪಣಂ** - ತಾನು ಸರ್ವೇಶ್ವರನಿಗೆ ಶೇಷಭೂತನೆಂಬ ತಿಳುವಳಿಕೆಯಿಂದ ಕೂಡಿದ ತನ್ನ ರಕ್ಷಾಭರವನ್ನು ಫಲಾಸಕ್ತಿಯಿಲ್ಲದೆ ಸಮರ್ಪಿಸೋಣವು. ತನ್ನನ್ನು ಸಮರ್ಪಿಸದೇ ತನ್ನ ರಕ್ಷಾಭರವು ಸಾಧ್ಯವಲ್ಲದುದರಿಂದ ತನ್ನ ರಕ್ಷಾಭರಸಮರ್ಪಣದಲ್ಲೇ ತನ್ನ ಆತ್ಮಸಮರ್ಪಣೆಯೂ ಅಂತರ್ಗತವು ; ಈ ಅಭಿಪ್ರಾಯವು ಅರ್ಥವಾಗಿ ತೋರಿಬರುತ್ತದೆ. ಇದೂ ಅಲ್ಲದೆ ಸ್ವರಕ್ಷಣಾಭರಸಮರ್ಪಣವು ಯಾವಾಗ ಮಾಡಲ್ಪಟ್ಟಿತೋ, ಅದರೊಂದಿಗೆ ತನ್ನ ರಕ್ಷಣೆಯಿಂದುಂಟಾಗುವ ಫಲಭರಸಮರ್ಪಣೆಯೂ ಕೂಡ ಅದರಲ್ಲೇ ಅಂತರ್ಗತವು. ಆದುದರಿಂದಲೇ **ಸ್ವರಕ್ಷಾ ಭರಸಮರ್ಪಣ** ವೆಂದು ಹೇಳದೆ **ಸ್ವರಕ್ಷಾಭರಸಮರ್ಪಣಂ** ಎಂದೂ ಇಷ್ಟೇ ಹೇಳಿರುತ್ತಾರೆ, ಆದುದರಿಂದ ಇಂತಹ ಭರನ್ಯಾಸವು, **ದ್ವಯತ್ತಿಲ್** - ದ್ವಯಮಂತ್ರದಲ್ಲಿ, **ಉಪಾಯಪರಮಾನ** - ಉಪಾಯವನ್ನು ಬೋಧಿಸುವ, **ಪೂರ್ವಖಣ್ಡತ್ತಿಲ್** - ಪೂರ್ವಭಾಗದಲ್ಲಿ, ಮಹಾವಿಶ್ವಾಸಪೂರ್ವಕ **ಗೋಪ್ತೃತ್ವವರಣ ಗರ್ಭಮಾನ** - ಮಹಾವಿಶ್ವಾಸದಿಂದ ಕೂಡಿದ ಗೋಪ್ತೃತ್ವವರಣವನ್ನು ಒಳಗೊಂಡಿರುವ, **ಶರಣಶಬ್ದೋಪಶ್ಲಿಷ್ಟ ಕ್ರಿಯಾಪದತ್ತಿಲೆ** - ಶರಣ ಶಬ್ದದಿಂದ ಕೂಡಿದ ಪ್ರಪದ್ಯೇ ಎಂಬ ಕ್ರಿಯಾಪದದಲ್ಲಿ, **ಶೇರ್ತು ಅನುಸನ್ಧಿಕ್ಕ ಪ್ರಾಪ್ತಂ** - ಈ ಮಹಾವಿಶ್ವಾಸ ಗೋಪ್ತೃತ್ವವರಣಗಳನ್ನು ಸೇರಿಸಿ ಅನುಸನ್ಧಾನಮಾಡಬಹುದು. **ಶರಣ** ಶಬ್ದವು ಮಹಾವಿಶ್ವಾಸದಿಂದ ಸರ್ವೇಶ್ವರನೇ ರಕ್ಷಕನಾಗಿ ಆತನೇ ಉಪಾಯಭೂತನೆಂದು ಬೋಧಿಸುತ್ತದೆಂದು ಹಿಂದೆಯೇ ಪರಿಕರ ವಿಭಾಗಾಧಿಕಾರದಲ್ಲಿ ಉಪದೇಶಿಸಲ್ಪಟ್ಟಿತು. **ಶರಣಂ ಪ್ರಪದ್ಯೇ** ಎಂಬಲ್ಲಿ ಶರಣ ಶಬ್ದವು ಉಪಾಯವನ್ನು, ಉಪಾಯವಾದ ಉಪಾಸನಾಸ್ಥಾನದ ಸರ್ವೇಶ್ವರನನ್ನೇ ರಕ್ಷಕನನ್ನಾಗಿ ಇಟ್ಟು ಅನುಸನ್ಧಾನವನ್ನೂ ಸಹ ಬೋಧಿಸುತ್ತದೆಂದು ಹಿಂದೆಯೇ ಹೇಳಲ್ಪಟ್ಟಿತು. **ಪ್ರಪದ್ಯೇ** ಎಂಬ ಕ್ರಿಯಾಪದದ ಧಾತು ಬುದ್ಧ್ಯರ್ಥವಾದುದರಿಂದ **ರಕ್ಷಿಷ್ಯತೀತಿ ವಿಶ್ವಾಸಃ**" ಎಂದರೆ "ಸರ್ವೇಶ್ವರನೇ ರಕ್ಷಿಸದೇ ಬಿಡನು" ಎಂಬ **ಪೂರ್ಣ**

ನಂಬಿಯುಕ್ಕೆನ್ನಿಟ್ಟಿರುವ ಅನುಸಂಧಾನವನ್ನು ಈ ಕ್ರಿಯಾಪದವು ತೋರಿಸುತ್ತದೆ ಅದೂ ಅಲ್ಲದೆ ಈ ಧಾತುವಿಗೆ ಪ್ರ ಎಂಬ ಉಪಸರ್ಗವೂ ಸೇರಿರುವದರಿಂದ ಆ ದೃಢವಿಶ್ವಾಸದ ಆಧಿಕ್ಯವನ್ನು ಎಂದರೆ ಮಹಾವಿಶ್ವಾಸದಿಂದಿಟ್ಟಿರುವ ಸಂಪೂರ್ಣ ಭರವನ್ನು ಈ ಕ್ರಿಯಾಪದವು ತೋರಿಸುತ್ತದೆ. ಆದುದರಿಂದ **ಶರಣಂಪ್ರಪದ್ಯೇ** ಎಂಬುವದರಿಂದ ಸಂಪೂರ್ಣವಾದ ಮಹಾವಿಶ್ವಾಸ ಗೋಪ್ತೃತ್ವವರಣಗಳೊಂದಿಗೆ ಸ್ವರಕ್ಷಾಭರನ್ಯಾಸವು ಬೋಧಿತವಾಯಿತು ಎಂಬಭಿಪ್ರಾಯವು. ಯಾವಾಗ ಸ್ವರಕ್ಷಾಭರನ್ಯಾಸವು ಹೇಳಲ್ಪಟ್ಟಿತೋ, ಆಗ ಸ್ವರೂಪ ಫಲನ್ಯಾಸಗಳೂ ಅದ ರಲ್ಲೇ ಅಂತರ್ಗತವೆಂದು ಹಿಂದೆಯೇ ಉಪಪಾದಿತವಾಗಿರುತ್ತದೆಯಷ್ಟೇ, ಆದುದ ರಿಂದ ಸಾಂಗಪ್ರಪದನರೂಪ ಭರನ್ಯಾಸವು ಇಲ್ಲಿ ಹೇಳಲ್ಪಟ್ಟಿತು. ಆದರೆ ಶೇಷ ತ್ವಾನುಸಂಧಾನವು ಎಲ್ಲಿ ಹೇಳಲ್ಪಟ್ಟಿದೆ ಎಂದರೆ, **ಶರಣಂಪ್ರಪದ್ಯೇ** ಎಂಬಲ್ಲಿ ರಕ್ಷ್ಯರಕ್ಷಕ ಭಾವವು ಯಾವಾಗ ಬೋಧಿತವಾಯಿತೋ, ಆಗ ಶೇಷತ್ವವು ಅರ್ಥ ವಾಗಿ ತೋರಿಬರುತ್ತದೆಂದು ಗ್ರಹಿಸಬಹುದು. ಈ ಪ್ರಕಾರವಾಗಿ **ಶರಣಂ ಪ್ರಪದ್ಯೇ** ಎಂಬಲ್ಲಿ ಸಾಂಗಪ್ರಪದನದ ಸ್ವರೂಪವೆಲ್ಲಾ ತೋರಿಬರುತ್ತದೆಂಬ ಭಾವವು. ದ್ವಯದ ಪೂರ್ವಖಂಡವೇ ಉಪಾಯಾನುಷ್ಠಾನವನ್ನು ಬೋಧಿಸು ವದರಿಂದ, **ಉಪಾಯಪರಮಾನ ಪೂರ್ವಖಂಡತ್ತಿಲ್** ಎಂದು ಪ್ರಯೋಗಿಸಿ ರಕ್ಷಾಭರನ್ಯಾಸವು ಶರಣಂ ಪ್ರಪದ್ಯೇ ಎಂಬಲ್ಲಿ ಅರ್ಥಾತ್ ತೋರಿಬರುತ್ತದೆಂದು ಉಪದೇಶಿಸಿರುತ್ತಾರೆ ಈ ಮೇಲಿನ ವಾಕ್ಯದಲ್ಲಿ ಮಹಾವಿಶ್ವಾಸಪೂರ್ವಕ **ಗೋಪ್ತೃತ್ವವರಣಗರ್ಭಮಾನ** ಎಂಬುವದು ಹೇತುಗರ್ಭ ವಿಶೇಷಣವು. ಹಾಗೆ ಮಹಾವಿಶ್ವಾಸವೂ ಗೋಪ್ತೃತ್ವವರಣವೂ ಸಹ **ಶರಣಂ ಪ್ರಪದ್ಯೇ** ಎಂಬಲ್ಲಿ ತೋರಿಬರುವದರಿಂದಲೇ, ತನಗೆ ಆ ರಕ್ಷಾವಿಷಯದಲ್ಲಿ ಯಾವದೊಂದು ಭರವೂ ಇಲ್ಲವು, ಆ ಸರ್ವೇಶ್ವರನು ರಕ್ಷಿಸದೇ ಎಂದಿಗೂ ಇರಲಾರನೆಂಬ ಮಹಾ ವಿಶ್ವಾಸವೂ ತೋರಿಬರುವದರಿಂದ, ಸ್ವರಕ್ಷಣಾದಿ ಭರಸಮರ್ಪಣವನ್ನೂ ಕೂಡ, ಆ **ಶರಣಂಪ್ರಪದ್ಯೇ** ಎಂಬಲ್ಲಿಯೇ ಅನುಸಂಧಾನಮಾಡಬಹುದೆಂಬ ಭಾವವು.

ಪರಿಕರವಿಭಾಗಾಧಿಕಾರದಲ್ಲಿ ಅಂಗಗಳ ಅನುಸಂಧಾನವೂ, ಈ ಅಧಿಕಾರ ದಲ್ಲಿ ಅಂಗಿಯಾದ ಭರನ್ಯಾಸದ ಅನುಸಂಧಾನವೂ ಉಪದೇಶಿಸಲ್ಪಟ್ಟವು. ಹೀಗೆಲ್ಲಾ ಅನುಸಂಧಾನಕ್ರಮವಿರುವಾಗ, ಯೋಗಾಭ್ಯಾಸದಹಾಗೆ, ಇವುಗಳಾನುಸಂಧಾನವು ಚಿರಕಾಲ ಕರ್ತವ್ಯವೇ ಸಕೃತ್ಕರ್ತವ್ಯವೇ ಎಂಬ ಸಂದೇಹವು ಬಾಧಿಸಬಹುದು. ಆದರೆ ಪ್ರಪತ್ತಿ ಶಾಸ್ತ್ರದಲ್ಲಿ,

“ತಸ್ಮಾತ್ತ್ವತ್ಕೃತ್ಯಕೃತ್ಯೇನೈವ ಕರ್ಮಣಾ ಯೇನ ಮಾನವಃ ।
ಸಕೃಜ್ಜಪ್ತೇನ ಮಂತ್ರೇಣ ಕೃತಕೃತ್ಯಸ್ಸುಖೀಭವೇತ್ ॥
ತಂ ಬ್ರೂಹಿ ಭಗವನ್ಮಂತ್ರಂ ದಯಾರ್ದ್ರ ಹೃದಯೋಹ್ಯಸಿ ।

ಸಾಙ್ಗಸ್ಯ ಅಙ್ಗಿನಃ ಏಕ ಬುದ್ಧ್ಯಾರೂಢತ್ವಂ, ಸಾಙ್ಗ ಪ್ರಪದನಂ ಸಕೃತ್ಕರ್ತವ್ಯಂ.

ಇಪ್ಪಡಿ ಇವ್ವೈ ಆರುಮ್ (ಇವ್ವೈಯನೈತ್ತುಮ್) ಇಮ್ಮನ್ತ್ರತ್ತಿಲ್ ವಿಮರ್ಶದಶೈಯಿಲ್ ತನಿತ್ತನಿಯೇ ಅನುಸನ್ಧಿತ್ತಾಲುಮ್, ವಾಕ್ಯಾರ್ಥ

ಎಂದರೆ ಯಾವ ಮಂತ್ರದ ಜಪವನ್ನು ಸಕೃದನುಷ್ಠಾನಮಾಡುವದರಿಂದ ಕೃತಕೃತ್ಯನಾಗಿ ನಿರತಿಶಯಸುಖವನ್ನು ಹೊಂದುವನೋ, ಅಂತಹ ಮಂತ್ರವನ್ನು ನೀವು ದಯಾರ್ದ್ರಹೃದಯರಾದುದರಿಂದ ನನಗೆ ಉಪದೇಶಿಸಿರಿ ಎಂಬು ಭಗವಂತನು ಚತುರ್ಮುಖನಿಂದ ಪ್ರಾರ್ಥಿಸಲ್ಪಟ್ಟನೆಂದೂ, ಅಂತಹ ಮಾರ್ಗ ಉಂಟೆಂದು,

"ವಿದ್ಯತೇ ಯೇನ ತತ್ಕರ್ಮ ಕೃತಮಾತ್ರೇಣ ಕರ್ಮಣಾ ।
ಮಾಮಾಪ್ನೋತಿ ನರೋ ಬ್ರಹ್ಮನ್ ಮಮಾತ್ಮಾ ಚ ಭವಿಷ್ಯತಿ"

ಪ್ರಪದನವು ಅಂಥಾದ್ದೆಂದು ಸರ್ವೇಶ್ವರನು ಉಪದೇಶಿಸಿರುದರಿಂದ ಭರನ್ಯಾಸವು ಸಕೃದನುಷ್ಠೇಯವೆಂದು ತೋರಿಬರುತ್ತದೆ.

"ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ ।
ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಂ ॥

ಎಂದರೆ "ಪ್ರಪನ್ನನು ಅನುಷ್ಠಿಸುವ ಭರನ್ಯಾಸವು ಸಕೃದೇವ ಒಂದೇ ಸಲ ಮಾತ್ರವೇ ಅನುಷ್ಠಿಸತಕ್ಕದ್ದು, ಹಾಗೆ ಒಂದು ಸಲ ಮಾತ್ರವೇ ಅನುಷ್ಠಿಸಿದ ಭರನ್ಯಾಸವು ಈ ಮನುಷ್ಯನನ್ನು ರಕ್ಷಿಸಿಬಿಡುತ್ತದೆ, ಇದೇಗ ಶಾಸ್ತ್ರಾರ್ಥವು" ಎಂದು ಸಕೃತ್ಕರ್ತವ್ಯವೆಂದು ವಿಧಿಸುತ್ತದೆ. ಅನುಸಂಧಾನವು ಚಿರಕಾಲಸಾಧ್ಯವಾಗುವದಾದರೆ, ಈ ಪ್ರಪತ್ತಿ ಶಾಸ್ತ್ರಕ್ಕೆ ವಿರೋಧವಾದುದಾಗುವದಿಲ್ಲವೇ ? ಎಂಬೀ ಆಕ್ಷೇಪಕ್ಕೆ ಮುಂದಿನ ಎರಡು ವಾಕ್ಯಗಳಿಂದ ಸಮಾಧಾನವನ್ನು ಹೇಳುತ್ತಾರೆ.

ಈ ಅಙ್ಗಾಙ್ಗಗಳೆಲ್ಲವೂ ಏಕಕಾಲದಲ್ಲೇ ಬುದ್ಧಿಗೆ ತೋರುವದರಿಂದ ಸಾಙ್ಗಪ್ರಪದನವು ಸಕೃತ್, ಒಂದು ಕ್ಷಣಕಾಲಮಾತ್ರ, ಅನುಷ್ಠಿಸತಕ್ಕದ್ದು.

ಇಪ್ಪಡಿ - ಹಿಂದಿನ ಪರಿಕರವಿಭಾಗದಲ್ಲೂ ಈ ಅಧಿಕಾರದಲ್ಲೂ ಸಹ ಉಪಪಾದನೆ ಮಾಡಿದ ರೀತಿಯಲ್ಲಿ; ಇವ್ವೈ ಆರುಮ್ - ಈ ಐದು ಅಂಗಗಳೂ ಒಂದು ಅಂಗಿಯೂ ಸೇರಿ ಆರು ಅರ್ಥಗಳು, ಇವ್ವೈಯನೈತ್ತುಮ್ ಎಂಬ ಪಾಠವಾದರೆ

ಪ್ರತಿಪತ್ತಿ ದಶೈಯಿಲ್ ಅಲ್ಲಾದ ವಾಕ್ಯಾರ್ಥಙ್ಗಳ್ ಪೋಲೆ ಸಾಙ್ಗಮಾನ ಪ್ರಧಾನಮ್ ಏಕಬುದ್ಧ್ಯಾರೂಢಮಾಮ್. ಆಕೈಯಾಲೆ ಯಥಾಶಾಸ್ತ್ರಂ ಸಾಙ್ಗಪ್ರಪದನಾನುಷ್ಠಾನಮ್ ಸಕೃತ್ಕರ್ತವ್ಯಮಾಯ್ತ್ತು.

ಇವೆಲ್ಲವೂ ಎಂಬರ್ಥವು ಎಂದರೆ ಈ ಅಂಗಾಂಗಿಗಳೆಲ್ಲವೂ, **ಇಮ್ಮನ್ತ್ರತ್ತಿಲ್** - ಈ ದ್ವಯಮಂತ್ರದಲ್ಲಿ, **ವಿಮರ್ಶ ದಶೈಯಿಲ್** - ಆನುಕೂಲ್ಯಾದಿ ಐದು ಅಂಗಗಳೂ, ಸ್ವರೂಪಫಲ ರಕ್ಷಾಭರನ್ಯಾಸರೂಪ ಅಂಗಿಯೂ ಮಂತ್ರದಲ್ಲಿ ಎಲ್ಲಿ ತೋರಿಬರುತ್ತವೆಂದು ವಿಚಾರ ಮಾಡುವ ದೆಶೆಯಲ್ಲಿ, **ತನಿತ್ತನಿಯೇ ಅನುಸನ್ಧಿತ್ತಾಲುಮ್** - ಬೇರೆ ಬೇರೆಯಾಗಿ ಅವಗಾಹನೆಗೆ ಬಂದರೂ, **ವಾಕ್ಯಾರ್ಥ ಪ್ರತಿಪತ್ತಿದಶೈಯಿಲ್** - ಅವುಗಳೆಲ್ಲಾ ಒಟ್ಟಿಗೆ ಸೇರಿ ಪ್ರಾಪ್ತವಾಗುವ ಮಹಾವಾಕ್ಯಾರ್ಥಬೋಧವುಂಟಾಗುವ ದೆಸೆಯಲ್ಲಿ, **ಅಲ್ಲಾದ ವಾಕ್ಯಾರ್ಥಙ್ಗಳ್ ಪೋಲೆ** - ಇತರ ವಾಕ್ಯಾರ್ಥಂಗಳ ಹಾಗೆ ಅವು ಯಾವುವೆಂದರೆ, ಲೋಕದಲ್ಲಿ ೧. ಪಂಚಾವಯವಗಳುಳ್ಳ ವಾಕ್ಯಾರ್ಥವೂ, ವೇದದಲ್ಲಿ ಅಙ್ಗವಾಕ್ಯದಿಂದ ಕೂಡಿದ ಪ್ರಧಾನವಾಕ್ಯವೂ, ಇವುಗಳ ಹಾಗೆ, **ಸಾಙ್ಗಮಾನ ಪ್ರಧಾನಮ್** - ಅಙ್ಗದಿಂದ ಕೂಡಿದ ಪ್ರಧಾನವಾದ ಅಙ್ಗಿಯೂ, **ಏಕಬುದ್ಧ್ಯಾರೂಢಮಾಮ್** - ಒಂದೇ ಸಲ ಬುದ್ಧಿಗೆ ಹತ್ತಬಹುದು ಎಂದರೆ ಗೋಚರವಾಗಬಹುದು. ಈ ಪ್ರಪದನದ ಅಂಗಗಳನ್ನೆಲ್ಲಾ ಪರಿಕರವಿಭಾಗದಲ್ಲಿ ಬೇರೆ ಬೇರೆಯಾಗಿ ವಿಚಾರಮಾಡಿದುದು, ಅವುಗಳ ಭಾವವೆಲ್ಲಾ ಮನಸ್ಸಿಗೆ ವಿಶದವಾಗಿ ಬೋಧವಾಗಲಿ ಎಂಬ ಉದ್ದೇಶದಿಂದ ಅವುಗಳ ಅನುಸಂಧಾನವು ಉಪದೇಶಿಸಲ್ಪಟ್ಟಿತು. ಬಳಿಕ ಈ ಅಧಿಕಾರದಲ್ಲಿ ಪ್ರಧಾನವಾದ ಅಂಗಿಯ ಸ್ವರೂಪವು ಶೋಧಿಸಲ್ಪಟ್ಟಿತು. ಹೀಗೆಲ್ಲಾ ಪೃಥಕ್ಕಾಗಿ ಹೇಳಿದುದು ಅವುಗಳ ಭಾವವೆಲ್ಲಾ ಚೆನ್ನಾಗಿ ಮನಸ್ಸಿಗೆ ತೋರಲಿ ಎಂಬ ಅಭಿಪ್ರಾಯದಿಂದ. ಆ ವಿಮರ್ಶದೆಶೆ ಕಳೆದು ವಾಕ್ಯಾರ್ಥ ಪ್ರಾಪ್ತವಾದದೆಶೆಯಲ್ಲಿ ಅಂಗಾಂಗಿಗಳ ಅಭಿಪ್ರಾಯವೆಲ್ಲಾ ಒಟ್ಟಿಗೆ ಏಕಕಾಲದಲ್ಲಿ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲವೆಂಬ ಭಾವವು. ಒಂದು ವಾಕ್ಯಕ್ಕೆ ಪಂಚಾವಯವಗಳು ಉಂಟು. ವಿಮರ್ಶ ದೆಶೆಯಲ್ಲಿ ಅವುಗಳನ್ನು ಬೇರೆ ಬೇರೆಯಾಗಿ ಗ್ರಹಿಸಬಹುದು. ಅವುಗಳೆಲ್ಲಾ ತಿಳಿದನಂತರ ವಾಕ್ಯಾರ್ಥದೆಶೆಯಲ್ಲಿ

---

[೧] ಪಂಚಾವಯವಗಳು ಯಾವುವೆಂದರೆ :— [೧] ಪ್ರತಿಜ್ಞಾ-ಸಾಧಿಸುವುದು ಪಕ್ಷದಲ್ಲಿದೆ ಎಂದು ಹೇಳುವುದು, [೨] ಹೇತುವು, ಕಾರಣವು [೩] ಉದಾಹರಣ. ದೃಷ್ಟಾಂತವು [೪] ಉಪನಯ-ದೃಷ್ಟಾಂತ ವಾಕ್ಯಾರ್ಥ ಸಮನ್ವಯವು, [೫] ನಿಗಮನವು-ಉಪಸಂಹಾರವು

ಎಲ್ಲಾ ಒಟ್ಟಿಗೆ ಸೇರಿ ಏಕಬುದ್ಧ್ಯಾರೂಢವಾಗುವದರಲ್ಲಿ ಸಂದೇಹವಿಲ್ಲವು, ಎಂಬ ಭಾವವು. ಹಾಗೆಯೇ ವೇದದಲ್ಲಿ ಉಪಸರ್ಜನವಾಕ್ಯ, ಪ್ರಧಾನವಾಕ್ಯವೆಂದುಂಟು. ಉಪಸರ್ಜನವಾಕ್ಯವು ಪ್ರಧಾನವಾಕ್ಯಕ್ಕೆ ಅಂಗವಾಗಿ ಅಪ್ರಧಾನವಾದುದು. ವಾಕ್ಯಾರ್ಥಬೋಧ ಉಂಟಾಗುವಾಗ ಉಪಸರ್ಜನ ಪ್ರಧಾನವಾಕ್ಯವೆರಡೂ ಏಕ ಬುಧ್ಧ್ಯಾರೂಢವಾಗುತ್ತದೆ ಎಂಬ ತಾತ್ಪರ್ಯವು. **ಆಕ್ಯೈಯಾಲೆ**–ಹೀಗೆ ಏಕಬುದ್ಧ್ಯಾರೂಢವಾಗುವದರಿಂದ, **ಯಥಾ ಶಾಸ್ತ್ರಂ** - ಶ್ರುತಿ ಮೊದಲಾದ ಶಾಸ್ತ್ರಗಳಲ್ಲಿ ವಿಧಿಸಿರುವ ಹಾಗೆ, ಸಾಂಗಪ್ರಪದನಾನುಷ್ಠಾನವು **ಸಕೃತ್ಕರ್ತವ್ಯಮಾಯ್ತ್ತು** - ಒಂದೇ ಸಲ ಮಾಡತಕ್ಕದ್ದು. ಒಂದು ವಾಕ್ಯದಲ್ಲಿ ಅನೇಕ ಪದಗಳಿರುತ್ತವೆ. ಅವುಗಳಿಗೆಲ್ಲಾ ಬೇರೆ ಬೇರೆ ಅರ್ಥಗಳುಂಟು. ಹಾಗಿದ್ದರೂ, ಆಯಾ ಅರ್ಥಗಳ ಸ್ಮರಣದಿಂದುಂಟಾದ ಸಂಸ್ಕಾರಬಲದಿಂದ ವಾಕ್ಯದ ಅರ್ಥವು ಏಕಕಾಲದಲ್ಲೇ ಹೇಗೆ ಉಂಟಾಗುತ್ತದೋ ಹಾಗೆಯೇ, ಆಯಾ ಅಂಗಗಳ ಮತ್ತು ಅಂಗಿಯ ಅಭಿಪ್ರಾಯಗಳ ಸ್ಮರಣದಿಂದ ಏಕಕಾಲದಲ್ಲೇ ಸಾಂಗಪ್ರಪದನಾಭಿಪ್ರಾಯವುಬುದ್ಧಿಗೆ ಒಂದೇ ಸಲ ಉಂಟಾಗಬಹುದಾದುದರಿಂದ ಅದು ಸಕೃತ್ಕರ್ತವ್ಯವು, ಒಂದೇ ಸಲ ಅನುಷ್ಠಿಸತಕ್ಕದ್ದು. ಉಪಾಸನದ ಹಾಗೆ ಅದಕ್ಕೆ ಆವರ್ತಿಯು ಬೇಕಿಲ್ಲ. ಹಾಗೆಯೇ ಶ್ರುತ್ಯಾದಿ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುತ್ತದೆ ಎಂದು ಹೇಳುತ್ತಾರೆ. ಎಲ್ಲಿ ಹೇಳಿದೆ ಎಂದರೆ :—

೧. "ತದ್ದ್ವಯಂ ಸಕೃದುಚ್ಚಾರಸ್ಸಂಸಾರ ವಿಮೋಚನಂ ಭವತಿ"
೨. ದ್ವಯಾತ್ಪರತರೋ ಮನ್ತ್ರೋ ನಾಸ್ತಿ ಸರ್ವಪ್ರದೋ ನೃಣಾಂ।
ಯಸ್ಯೋಚ್ಚಾರಣ ಮಾತ್ರೇಣ ಪರಾಂ ಸಿದ್ಧಿಮವಾಪ್ನುಯಾತ್।
೩. ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ।
ಸಕೃಜ್ಜಪ್ತೇನ ಮಂತ್ರೇಣ ಕೃತಕೃತ್ಯಸ್ಸುಖೀಭವೇತ್।
ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಂ॥
೪ ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥

ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಸಕೃದನುಷ್ಠೇಯವೆಂಬುವದು ಸಿದ್ಧವು.

ಶಾಸ್ತ್ರ ಪ್ರಮಾಣಗಳೇನೋ ಒಂದೇ ಸಲ ಅನುಷ್ಠಿಸತಕ್ಕದ್ದೆಂದು ವಿಧಿಸುತ್ತವೆ, ಮತ್ತು ಅವುಗಳ ಅನುಸನ್ಧಾನವು ಬುದ್ಧ್ಯೈಕರೂಢವಾದುದರಿಂದ, ಒಂದು ಕ್ಷಣಕಾಲ ಮಾತ್ರವೇ ಅನುಷ್ಠಿಸತಕ್ಕದ್ದೆಂದು ಏರ್ಪಡುತ್ತದೆ. ಮುಂದಿನ ವಾಕ್ಯದಿಂದ ಈ ವಿಷಯವನ್ನೇ ತಿಳಿಸುವವರಾಗಿ, ಇಂತಹ ಕ್ಷಣಕಾಲಾನುಷ್ಠೇಯವಾದ ಪ್ರಪದನವು ಹೇಗೆ ಕಾರ್ಯಕಾರಿಯಾದೀತು ಎಂಬ ಸಂದೇಹವ

ಕ್ಷಣಸಾಧ್ಯ ಸಕೃತ್ಕರ್ತವ್ಯೇ ಶ್ರುತಿ ದೃಷ್ಟಾನ್ತಃ

ಅನೇಕ ವ್ಯಾಪಾರ ಸಾಧ್ಯಮಾನ ಧಾನುಷ್ಕನುಡೈಯ ಲಕ್ಷ್ಯವೇಧಾರ್ಥಮಾನ ಬಾಣಮೋಕ್ಷಮ್ ಕ್ಷಣಕೃತ್ಯಮಾಗಿರಾಪ್ಪೋಲೆ ಇವ್ವಾತ್ಮರಕ್ಷಾ ಭರಸಮರ್ಪಣಮಿರುಕ್ಕುಂಪಡಿ ಯೆನ್ರು ಶ್ರುತಿಸಿದ್ಧಮ್.

ಕೆಲವರ ಮನಸ್ಸನ್ನು ಬಾಧಿಸೀತು ಎಂದು ನೆನಸಿ, ಶ್ರುತಿಯು ಉಪಪಾದಿಸಿರುವ ದೃಷ್ಟಾಂತ ಮೂಲಕ ಅಂತಹ ಸಂದೇಹ ನಿವಾರಣವನ್ನು ಮಾಡಿ "ಅನೇಕ ವ್ಯಾಪಾರಸಾಧ್ಯಮಾನ" ಎಂದು ಪ್ರಾರಂಭಿಸಿ, ಸಮಾಧಾನ ಹೇಳುತ್ತಾರೆ.

ಸಾಂಗಪ್ರಪದನವು ಕ್ಷಣಸಾಧ್ಯವಾಗಿ ಸಕೃತ್ಕರ್ತವ್ಯವೆಂಬುವದಕ್ಕೆ ಶ್ರುತಿ ದೃಷ್ಟಾನ್ತವು.

ಅನೇಕ ವ್ಯಾಪಾರ ಸಾಧ್ಯಮಾನ - ಅನೇಕ ವ್ಯಾಪಾರಗಳಿಂದ ಸಾಧ್ಯವಾದ, ಆ ವ್ಯಾಪಾರಗಳು ಯಾವುವೆಂದರೆ:—ಧನುಸ್ಸನ್ನು ಯಾವ ವಿಧವಾಗಿ ಹಿಡಿಯತಕ್ಕದ್ದು, ಅದನ್ನು ಬಗ್ಗಿಸುವ ಕ್ರಮ, ಅದಕ್ಕೆ ಹೆದೆಯನ್ನು ಕಟ್ಟುವದು, ಬಾಣವನ್ನು ಎಳೆದು ಹಿಡಿಯುವದು, ಗುರಿತಾಕುವ ಹಾಗೆ ಬಿಡುವದು, ಇತ್ಯಾದಿ ಅನೇಕ ವ್ಯಾಪಾರಸಾಧ್ಯವಾದ, **ಧಾನುಷ್ಕನುಡೈಯ** - ಧನುರ್ವಿದ್ಯಾ ವಿಶಾರದನ, **ಲಕ್ಷ್ಯವೇಧಾರ್ಥಮಾನ** - ಗುರಿಯನ್ನು ಭೇಧಿಸುವ ಎಂದರೆ ಹೋಗಿ ಗುರಿಗೆ ತಾಕುವ, **ಬಾಣಮೋಕ್ಷಮ್** - ಬಾಣಬಿಡೋಣವು, **ಕ್ಷಣಕೃತ್ಯಮಾಗಿರಾಪ್ಪೋಲೆ** - ಹೇಗೆ ಒಂದು ಕ್ಷಣದ ಕೆಲಸವೋ ಹಾಗೆ, **ಇವ್ವಾತ್ಮರಕ್ಷಾಭರಸಮರ್ಪಣಂ** - ಈ ಸ್ವರೂಪಫಲದಿಂದ ಕೂಡಿದ ತನ್ನ ಆತ್ಮರಕ್ಷಾಭರಸಮರ್ಪಣವೂ ಕೂಡ, **ಇರುಕ್ಕುಂಪಡಿ** - ಇರುವ ಸ್ಥಿತಿಯಾದುದು ಎಂದರೆ ಈ ರಕ್ಷಾಭರ ಸಮರ್ಪಣದ ಕ್ಷಣಕೃತ್ಯ ಸ್ಥಿತಿಯು ; **ಎನ್ರು** - ಎಂಬುವದು, **ಶ್ರುತಿಸಿದ್ಧಮ್** - ಶ್ರುತಿಯಿಂದ ಸಿದ್ಧವಾದುದು. ಆ ಶ್ರುತಿ ಯಾವುದೆಂದರೆ. ಮುಂಡಕದಲ್ಲಿ

ಪ್ರಣವೋ ಧನುಶ್ಶರೋಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥

"ಪ್ರಣವವೇ ಧನುಸ್ಸು, ಆತ್ಮವೇ ಬಾಣವು, ಪರಬ್ರಹ್ಮನೇ ಆ ಬಾಣಕ್ಕೆ ಗುರಿಯು ಎಂದು ಹೇಳಲ್ಪಟ್ಟಿದೆ. ಅದುದರಿಂದ, ಬಾಣಬಿಡುವ ಹಾಗೆ ಜಾಗರೂಕನಾಗಿ ಬಾಣವು ಗುರಿಯನ್ನು ಸೇರುವಹಾಗೆ, ಆತ್ಮನು ಪರಮಾತ್ಮನನ್ನು ಸೇರತಕ್ಕದ್ದು. ಆಗ **ತನ್ಮಯೋಭವೇತ್** - ಪರಮಾತ್ಮ ಸಾಮ್ಯವನ್ನು ಹೊಂದುವನಾಗುತ್ತಾನೆ

ಎಂದರೆ ದೇವತ್ವಮನುಷ್ಯತ್ವಾದಿಗಳು ಹೋಗಿ ಜ್ಞಾನೈಕಾಕಾರತೆಯಿಂದ ಸಾಮ್ಯ ವನ್ನು ಹೊಂದುವನು. **ಶರವತ್** ಎಂದಿರುವದರಿಂದ ಶರಲಕ್ಷ್ಯಗಳ ಹಾಗೆ ಭಿನ್ನ ವಾದುದರಿಂದ ಸಾಯುಜ್ಯವೇ ವಿನಾ ಸ್ವರೂಪೈಕ್ಯವಿಲ್ಲವು. ಇ, ಮುಮುಟ್ ಪ್ರಾಚು ರ್ಯಾರ್ಥದಲ್ಲಿ," ಎಂಬುವದು ಈ ಶ್ರುತಿಯ ಅರ್ಥವು. ಬಾಣಪ್ರಯೋಗದಲ್ಲಿ ಶರವನ್ನು ಬಿಡುವ ಧಾನುಷ್ಕನು ಬೇರೆ ಇದ್ದಾನೆ. ಹಾಗೆಯೇ ಈ ಆತ್ಮಾವನ್ನು ಪರಮಾತ್ಮನಲ್ಲಿ ಸೇರಿಸುವ ಬೇರೊಬ್ಬನು ಯಾರೆಂದು ಪ್ರಶ್ನಿಸಬಹುದು. ದೃಷ್ಟಾಂತಗಳಲ್ಲಿ ಉಪಮಾ ಎಷ್ಟರ ಮಟ್ಟಿಗೆ ಸೇರಿರುತ್ತದೋ ಅಷ್ಟು ಮಾತ್ರವೇ ಗ್ರಹಿಸತಕ್ಕದ್ದು. ಇಲ್ಲಿ ಪ್ರಕೃತವಾದುದು ಪ್ರಣವವೇ ಧನಸ್ಸು, ತನ್ಮೂಲಕವಾಗಿ "**ಓಮಿತ್ಯಾತ್ಮಾನಂ ಯುಞ್ಜೀತ**" ಎಂದು ಹೇಳಿರುವ ಹಾಗೆ ಆತ್ಮಾವಿನ ಪರಮಾತ್ಮನ ಪಾದದಲ್ಲಿ ನಿಕ್ಷೇಪವನ್ನು ಹೇಳುವದಕ್ಕಾಗಿ. ಆತ್ಮಾ ಶರವೆಂದೂ, ಲಕ್ಷ್ಯವು ಪರಬ್ರಹ್ಮ ವೆಂದೂ ಹೇಳಲ್ಪಟ್ಟಿತು. ಇಲ್ಲಿ ಪ್ರಕೃತವಾದ ಆತ್ಮರಕ್ಷಾ ಭರನ್ಯಾಸವು ಕ್ಷಣ ಕೃತ್ಯವೆಂದು ತೋರಿಸುವದಕ್ಕಾಗಿ ಬಾಣಮೋಕ್ಷವು ಹೇಗೆ ಕ್ಷಣಸಾಧ್ಯವಾದುದೋ, ಭರನ್ಯಾಸವೂ ಹಾಗೆ ಕ್ಷಣಸಾಧ್ಯವಾದುದೆಂಬ ಭಾವವು. ಆದರೂ ಬಾಣವನ್ನು ಬಿಡುವ ಧಾನುಷ್ಕನ್ಯಾರು ಎಂಬ ಪ್ರಶ್ನವು ಬಲಾತ್ಕಾರದಿಂದ ಬಾಧಿಸಿದುದಾದರೆ ಆಗ ಸಿದ್ಧೋಪಾಯನಾದ ಭಗವಂತನೇ ಆಗಲಿ, ಆಚಾರ್ಯನಾದರೂ ಆಗಲಿ ಆಗ ಬಹುದು, ಎಂದು ಉತ್ತರ ಹೇಳಬಹುದು. ಶ್ರೀ ನಿಗಮಾಂತ ದೇಶಿಕರವರಿಗೆ ಈ ಪ್ರಪದನವು ಸಾಧಾರಣವಾಗಿ ಗುರುಮುಖೇನವೇ ನಡಿಯುತಕ್ಕದ್ದೆಂಬಭಿಪ್ರಾಯ ವಿರುವದರಿಂದ ಸಂಕಲ್ಪಸೂರ್ಯೋದಯದ ದ್ವಿತೀಯಶ್ಲೋಕದಲ್ಲಿ ಈ ಶ್ರುತ್ಯರ್ಥ ವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ "**ಸತ್ವವದ್ಭಿಃ ಪ್ರಯುಕ್ತಃ**" ಈ "**ಪ್ರತ್ಯಗ್ಬಾಣಃ**", ಈ ಜೀವಾತ್ಮನೆಂಬ ಬಾಣವು ಸತ್ವಗುಣದ ಆಧಿಕ್ಯವುಳ್ಳ ಆಚಾರ್ಯರುಗಳಿಂದ ಪ್ರಯೋಗಿಸಲ್ಪಟ್ಟಿತೆಂದು ಹೇಳಿರುತ್ತಾರೆ. ಆ ಅಮೋಘಶ್ಲೋಕವ್ಯಾವುದೆಂದರೆ:—

> **ಲಕ್ಷ್ಯೇ ಯತ್ರ ಶ್ರುತಿಮಿತಗುಣಾಕೃಷ್ಟಿಲಬ್ಧಾವಧಾನೈಃ**
> **ಪ್ರತ್ಯಗ್ಬಾಣಃ ಪ್ರಣವಧನುಷಾ ಸತ್ವವದ್ಭಿಃ ಪ್ರಯುಕ್ತಃ ।**
> **ಮಧ್ಯೇ ವಕ್ಷಸ್ಸ್ಫುರತಿ ಮಹಸಾ ಪತ್ರಲಃ ಕೌಸ್ತುಭಾತ್ಮಾ**
> **ಪದ್ಮಾಕಾಂತಸ್ಸಭವತು ದಯಾದುಗ್ಧಸಿಂಧುಃ ಶ್ರಿಯೈವಃ ॥**

ಇದರರ್ಥವೇನೆಂದರೆ; ಯಾವ, ಪ್ರಾಪ್ಯಪ್ರಾಪಕನೆಂದು ಪ್ರಸಿದ್ಧಿಹೊಂದಿದ ಲಕ್ಷ್ಮೀ ನಾರಾಯಣನಾದ ಲಕ್ಷ್ಯದಲ್ಲಿ ಬಲಿಷ್ಠರಾದ ಬಾಣ ಬಿಡುವವರು ಹೇಗೆ ಕಿವಿ ತನಕ ಎಳದು ಲಕ್ಷ್ಯದಲ್ಲೇ ಚಿತ್ತವೃತ್ತಿಯುಳ್ಳವರಾಗಿ ಬಾಣಪ್ರಯೋಗಮಾಡುವರೋ, ಹಾಗೆಯೇ ಪ್ರಸಿದ್ಧವಾದ ಜ್ಞಾನಶಕ್ತಿ ಮೊದಲಾದ ಪರಮಾತ್ಮನ ಕಲ್ಯಾಣಗುಣ ಗಳಲ್ಲಿ ಏಕಾಂತ್ಯರೂಪಚಿತ್ತವೃತ್ತಿಯುಳ್ಳವನಾಗಿ, ದೇವತಾಂತರ ಸಂಬಂಧವಿಲ್ಲದೆ ಲಕ್ಷ್ಯದಲ್ಲೇ ಇಟ್ಟ ಮನಸ್ಸುಳ್ಳವನಾಗಿ, ಸತ್ವಗುಣವೇ ಮುಖ್ಯವಾಗಿವುಳ್ಳ ಪರ

ನಾಚಾರ್ಯರಿಂದ ಪ್ರಣವವೆಂಬ ಧನುಸ್ಸಿನ ಮೂಲಕ ಸಮರ್ಪಿಸಲ್ಪಟ್ಟವನಾಗಿ, ಶ್ರೀಮನ್ನಾರಾಯಣನ ವಕ್ಷಸ್ಥಳದ ಮಧ್ಯದಲ್ಲಿ ಕೌಸ್ತುಭಮಣಿಯ ಕಾಂತಿಯಿಂದ ಕಂಕಪತ್ರವನ್ನೂ ಕೂಡ ಹೊಂದಿದಹಾಗೆ ತೋರುವನಾಗಿ, ಕೌಸ್ತುಭಸ್ಥಾನೀಯನಾಗಿ, ಶೋಭಿಸುತ್ತಾನೋ! ಅಂತಹ ದಯೆ ಎಂಬುವದಕ್ಕೆ ಕ್ಷೀರಸಮುದ್ರಪ್ರಾಯನಾದ ಶ್ರಿಯಃಪತಿಯು ನಮಗೆ ಎಂದರೆ ಈ ಸಂಕಲ್ಪಸೂರ್ಯೋದಯ ಪಠನ, ಶ್ರವಣ, ನಟನೆ ಮಾಡುವ ನಮ್ಮೆಲ್ಲರಿಗೂ ಸರ್ವಶ್ರೇಯಃಪ್ರಾಪ್ತಿಗಾಗಿ ಆಗಲಿ ಎಂದು ಮಂಗಳಾಚರಣೆಯನ್ನು ಮಾಡಿರುತ್ತಾರೆ. ಹೀಗೆ ಭರನ್ಯಾಸವು ಕ್ಷಣಕೃತ್ಯವೆಂದು ಹೇಳುವದು ತಮ್ಮ ಅಭಿಪ್ರಾಯಮಾತ್ರವೇ ಅಲ್ಲವೆಂದೂ, ಶ್ರುತಿಪ್ರಮಾಣಪ್ರಾಪ್ತವೆಂದೂ ತಿಳಿಸುವದಕ್ಕಾಗಿ **"ಶ್ರುತಿಸಿದ್ಧಂ"** ಎಂದು ಪ್ರಯೋಗಿಸಿರುತ್ತಾರೆ.

ಆದರೆ ಕೆಲವರು **"ಉಪಾಯ ಇತಿ ವಿಶ್ವಾಸೋ ದ್ವಯಾರ್ಥಶ್ಶರಣಾಗತಿಃ"** ಎಂದರೆ "ಸರ್ವೇಶ್ವರನೇ ನಮಗೆ ಉಪಾಯವು ಎಂಬ ವಿಶ್ವಾಸವೇ ಶರಣಾಗತಿಯೂ, ಅದೇ ದ್ವಯಮಂತ್ರಾರ್ಥವು ಎಂದು ಹೇಳುವದರಿಂದ, ಈ ಸಾಂಗಪ್ರಪದನರೂಪ ಭರನ್ಯಾಸವು ಅವಶ್ಯಕವಿಲ್ಲವು; ತಾಯಿಯೇ ತಾನಾಗಿ ಮಗುವಿನ ಭಾರವನ್ನು ವಹಿಸಲು ಕಂಕಣಬದ್ಧಳಾಗಿರುವ ಹಾಗೆ, ಸರ್ವೇಶ್ವರನು ತಾನೇ ರಕ್ಷಕನಾಗಿ ನಾವು ಮಕ್ಕಳಾಗಿರುವಾಗ, ರಕ್ಷಿಸದೇ ಇರುವನೇ ? ನಾವುಗಳು ಭರಸಮರ್ಪಣೆಯನ್ನು ಮಾಡಬೇಕೋ ? ಎಂದರೆ ಮಾಡಬೇಕೆಂಬ ಸಮಾಧಾನವನ್ನು **"ಇಬ್ಭರಸಮರ್ಪಣವೇ"** ಎಂಬ ವಾಕ್ಯದಿಂದ ಹೇಳುತ್ತಾರೆ ನಮ್ಮಲ್ಲೇ ಕೆಲವರಭಿಪ್ರಾಯವು ಭರಸಮರ್ಪಣವು ಅನಾವಶ್ಯಕವೆಂದೂ, ಆತನೇ ಯಾರಾದರೂ ವಿಶ್ವಾಸ ತೋರಿಸಿದರೆ ಸಾಕೆಂಬ ಅವಸರ ಪ್ರತೀಕ್ಷೆಯಲ್ಲಿರುವದರಿಂದ ತಾನೇ ರಕ್ಷಿಸಿಬಿಡುವನೆಂದೂ ಹೇಳುವರು. ಆದರೆ ಇನ್ನು ಕೆಲವರು ಅವಸರ ಪ್ರತೀಕ್ಷೆಯಲ್ಲಿ ಶ್ರಿಯಃಪತಿಯು ಇರುವದೇನೋ ಸರಿಯೇ ; ಆದರೂ ಇತರ ಅಂಗಗಳಿಂದ ಕೂಡಿದ ರಕ್ಷಾಪೇಕ್ಷಾ ಪ್ರತೀಕ್ಷೆಯನ್ನು ಮಾಡುವನಾಗಿ, ತಾನು ವಿಧಿಸಿರುವಹಾಗೆ ರಕ್ಷಾಭರನ್ಯಾಸರೂಪ ಆತ್ಮನಿಕ್ಷೇಪವನ್ನು ಮಾಡಿದರೇನೇ ಚೇತನನು ಕೃತಕೃತ್ಯನಾಗುವನು, ಅನ್ಯಥಾ ಇಲ್ಲವೆಂದು ಅಭಿಪ್ರಾಯಪಡುತ್ತಾರೆ. ಸ್ವಾಮಿ ನಿಗಮಾಂತ ಮಹಾದೇಶಿಕರವರಿಗೆ ಮೊದಲಿನ ಅಭಿಪ್ರಾಯವು ಸಮಂಜಸವಲ್ಲವೆಂದು ತೋರಿಸುವದಕ್ಕಾಗಿ ಸಾತ್ಯಕಿತಂತ್ರ ವಾಕ್ಯವನ್ನು ಪ್ರಮಾಣವಾಗಿ ಉದಾಹರಿಸುತ್ತಾರೆ.

ಭರನ್ಯಸನಮೇವ ಪ್ರಪತ್ತಿಮಂತ್ರೇಷು ಪ್ರಧಾನಮಿತ್ಯನುಸಂಧೇಯಂ.

ಇಬ್ಭರ ಸಮರ್ಪಣಮೇ ಪ್ರಪತ್ತಿ ಮನ್ತ್ರಙ್ಗಳಿಲ್ ಪ್ರಧಾನಮಾಕ ಅನ ಸಂಧೇಯಮೆನ್ನುಮಿಡತ್ತಿಲ್, "ಅನೇನೈವ ತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿ ನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ" ಎನ್ರು ಸಾತ್ವಕಿತಂತ್ರತ್ತಿಲೆ, ಭರಸ್ವೀಕಾರಮ್ ಪಣ್ಣುಗಿರ ಶರಣ್ಯರ್ ತಾನೇ ತೆಳಿಯ ವರುಳಿಚ್ಚೆಯ್‌ದಾರ್.

ಪ್ರಪತ್ತಿ ಮನ್ತ್ರಗಳಲ್ಲಿ ಈ ಭರನ್ಯಾಸವೇ ಮುಖ್ಯವೆಂಬ ಅನುಸಂಧಾನವು.

ಇಬ್ಭರಸಮರ್ಪಣಮೇ - ಈ ಆತ್ಮರಕ್ಷಾಭರಸಮರ್ಪಣವೇ, **ಪ್ರಪತ್ತಿ ಮನ್ತ್ರಙ್ಗಳಿಲ್** - ಪ್ರಪತ್ತಿ ಮನ್ತ್ರಗಳಲ್ಲಿ, **ಪ್ರಧಾನಮಾಕ** - ತುಂಬಾ ಮುಖ್ಯವಾದುದೆಂದು, **ಅನುಸಂಧೇಯ ಮೆನ್ನುಮಿಡತ್ತಿಲ್** - ಎನ್ನುವ ವಿಷಯದಲ್ಲಿ, **"ಅನೇನೈವತು ಮನ್ತ್ರೇಣ** - ಈ ದ್ವಯಮಂತ್ರದಿಂದಲೇ **ಸ್ವಾತ್ಮಾನಂ** - ತನ್ನ ಆತ್ಮಾವನ್ನು, **ಮಯಿ** - ನನ್ನಲ್ಲಿ, **ನಿಕ್ಷಿಪೇತ್** - ಇಡತಕ್ಕದ್ದು, ಇದರಿಂದ ರಕ್ಷಾಭರನಿಕ್ಷೇಪವೇ ಅನುಷ್ಠಿಸಲ್ಪಡತಕ್ಕದ್ದೆಂದು ಹೇಳಲ್ಪಟ್ಟಿತು. ನಿಕ್ಷಿಪೇತ್ ಶಬ್ದಕ್ಕೆ ಹೀಗೆಯೇ ಅರ್ಥವನ್ನು ಹೇಳತಕ್ಕದ್ದೆಂಬ ಅಭಿಪ್ರಾಯವೇ, ಅನುವಾದಮಾಡಿ ಉತ್ತರಾರ್ಧದಿಂದ ಹೇಳಲ್ಪಟ್ಟಿರುತ್ತದೆ. **ಮಯಿ** - ಪ್ರಪನ್ನನ ವಿಷಯದಲ್ಲಿ ಸರ್ವಭರವನ್ನು ವಹಿಸಬೇಕೆಂದು ಆದರದಿಂದ ನಿರೀಕ್ಷಿಸಿಕೊಂಡಿರುವ ನನ್ನಲ್ಲಿ, **ನಿಕ್ಷಿಪ್ತ ಕರ್ತವ್ಯಃ** - ಹೀಗೆ ರಕ್ಷಾಭರಸಮರ್ಪಣೆಯನ್ನು ಮಾಡಿದವನು, **ಕೃತಕೃತ್ಯಃ** - ಯಾವ ಉಪಾಯವನ್ನನುಷ್ಠಿಸಬೇಕೋ ಅದನ್ನು ಮಾಡಿದವನೂ ಮತ್ತು ಇನ್ನೇನನ್ನು ಮಾಡಬೇಕಾದುದಿಲ್ಲದವನೂ **ಭವಿಷ್ಯತಿ** - ಆಗುವನು" ಎನ್ರು **ಸಾತ್ಯಕಿ ತಂತ್ರತ್ತಿಲೆ** - ಎಂದು ಸಾತ್ಯಕಿ ತಂತ್ರದಲ್ಲಿ, ಭರಸ್ವೀಕಾರವನ್ನು, **ಪಣ್ಣುಗಿರಶರಣ್ಯರ್** - ಮಾಡುವ ಸರ್ವರಕ್ಷಕನಾದ ಪರಮೇಶ್ವರನು, **ತಾನೇ, ತೆಳಿಯ**-ಸಂಶಯಗಳೆಲ್ಲಾ ತೊಲಗುವ ಹಾಗೆ ವಿಶದವಾಗಿ, **ಅರುಳಿಚ್ಚೆಯ್‌ದಾರ್** - ಕೃಪೆಯಾ ಉಪದೇಶಿಸಿದನು. ಸಂಶಯಗಳು ಯಾವುವೆಂದರೆ. ತಾಯಿಯಹಾಗೆ ತಾನಾಗಿಯೇ ನಮ್ಮನ್ನು ರಕ್ಷಿಸಬೇಕೆಂದು ಕಂಕಣಬದ್ಧನಾದವನು ಭರಸಮರ್ಪಣವನ್ನು ಎದುರು ನೋಡುವನೇ ಎಂಬುವದೊಂದು ಸಂಶಯವು. ಮಹಾವಿಶ್ವಾಸವೇ ಮುಖ್ಯವಾದುದರಿಂದ, ಇದೇ ಶರಣಾ

ಸಾಙ್ಗ ಪ್ರಪದನಾನುಷ್ಠಾನಕ್ರಮಃ

ಇದಿಲ್ ಸಾಂಗಾನುಷ್ಠಾನಮಾಯ್ ತ್ತದು:--ಕರ್ತೃತ್ವತ್ಯಾಗ ಮಮತಾತ್ಯಾಗ ಫಲತ್ಯಾಗ ಫಲೋಪಾಯತ್ವತ್ಯಾಗ ಪೂರ್ವಕಮಾನ ಆನುಕೂಲ್ಯ ಸಙ್ಕಲ್ಪಾದ್ಯರ್ಥಾನುಸಂಧಾನತ್ತೋಡೆ ಗುರುಪರಂಪರೋಪಸತ್ತಿ ಪೂರ್ವಕದ್ವಯುವಚನ ಮುಖತ್ತಾಲೆ ಸ್ವರೂಪಫಲನ್ಯಾಸ ಗರ್ಭಮಾನ ಆತ್ಮರಕ್ಷಾ ಭರಸಮರ್ಪಣಂಪಣ್ಣುಗೈ.

ಗತಿಯು ಎಂಬುವದು ಇನ್ನೊಂದು ಸಂಶಯವು, ಇಂತಹ ಯಾವದೊಂದು ಸಂದೇಹಕ್ಕೂ ಕಾರಣವಿಲ್ಲದಹಾಗೆ ಸರ್ವಲೋಕ ಶರಣ್ಯನೇ ತನ್ನಲ್ಲಿ ರಕ್ಷಾಭರವನ್ನಿಡತಕ್ಕದ್ದೆಂದು ಹೇಳಿರುತ್ತಾನೆಂದು ಸಾತ್ಯಕಿತಂತ್ರ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಶೇಷತ್ವಜ್ಞಾನವೇ ಶರಣಾಗತಿಯು, ಮಹಾವಿಶ್ವಾಸವೇ ಶರಣಾಗತಿಯು ಎಂದು ಹೇಳಿಬಿಟ್ಟರೆ, ಅವುಗಳಲ್ಲಿ ಕರ್ತವ್ಯಾಂಶವೇನೂ ಇಲ್ಲದುದರಿಂದ, ಆ ಅಭಿಪ್ರಾಯಗಳು ಈ ಶಾಸ್ತ್ರಪಙ್ಕ್ತಿಗಳಿಗೆ ವಿರುದ್ಧವಾದವು ಎಂಬಭಿಪ್ರಾಯವನ್ನು ಸೂಚಿಸುವದಕ್ಕಾಗಿ "ಮಯಿ ನಿಕ್ಷಿಪ್ತಕರ್ತವ್ಯಃ" ಎಂಬ ಪ್ರಯೋಗವು.

ಇಲ್ಲಿ "ಮಯಿ ನಿಕ್ಷಿಪ್ತಕರ್ತವ್ಯಃ" ಎಂಬುವದಕ್ಕೆ ಆತ್ಮರಕ್ಷಾಭರನ್ಯಾಸವೆಂದು ಅರ್ಥ ಹೇಳಲ್ಪಟ್ಟಿತು. ಹಾಗಾದರೆ ಇದರ ಸಾಂಗಾನುಷ್ಠಾನ ಹೇಗೆ ಎಂಬದಕ್ಕೆ ಸಂಗ್ರಹವಾಗಿ ಅನುಷ್ಠಾನಕ್ರಮವನ್ನುಪದೇಶಿಸುತ್ತಾರೆ.

ಸಾಂಗಪ್ರಪದನಾನುಷ್ಠಾನಕ್ರಮವು.

ಇದಿಲ್ - ಈ ಸಂದರ್ಭದಲ್ಲಿ ಎಂದರೆ ಮುಮುಕ್ಷುವಿಗೆ ವಿಧಿಸಲ್ಪಟ್ಟ ಈ ಅಂಗಿಯ ವಿಷಯದಲ್ಲಿ, **ಸಾಙ್ಗಾನುಷ್ಠಾನಮಾಯ್** - ಸಾಂಗಪ್ರಪದನಾನುಷ್ಠಾನವಾಗಿ, **ಆತ್ತದು** - ನಿಷ್ಕರಿಸಲ್ಪಟ್ಟಿರುವದು, ಯಾವುದೆಂದರೆ, ಕರ್ತೃತ್ವತ್ಯಾಗ, ಮಮತಾತ್ಯಾಗ, ಫಲತ್ಯಾಗ, ಫಲೋಪಾಯತ್ವತ್ಯಾಗ, **ಪೂರ್ವಕಮಾನ** - ಇವುಗಳಿಂದ ಕೂಡಿದ, **ಆನುಕೂಲ್ಯಸಙ್ಕಲ್ಪಾದ್ಯರ್ಥಾನುಸಂಧಾನತ್ತೋಡೆ** - ಆನುಕೂಲ್ಯಸಂಕಲ್ಪ, **ಆದಿಶಬ್ದ**ದಿಂದ ಇನ್ನು ನಾಲ್ಕು ಅಂಗಗಳಾದ ಪ್ರಾತಿಕೂಲ್ಯವರ್ಜನ, ಮಹಾವಿಶ್ವಾಸ, ಕಾರ್ಪಣ್ಯ, ಗೋಪ್ತೃತ್ವವರಣಗಳು ಹೇಳಲ್ಪಟ್ಟವು, ಈ ಐದು ಅಂಗಗಳನ್ನು ದ್ವಯಮಂತ್ರದಲ್ಲಿ ತೋರುವ ಅರ್ಥಾನುಸಂಧಾನದೊಂದಿಗೆ, **ಗುರುಪರಂಪರೋಪಸತ್ತಿಪೂರ್ವ್ವಕ** - ತನ್ನ ಸ್ವಂತ ಗುರುಗಳ ಪರಂಪರೆಯ ಧ್ಯಾನ ಪ್ರಣಾಮಗಳೊಂದಿಗೆ, **ಉಪಸತ್ತಿ** - ಉಪಸದನವು

ಎಂದರೆ ಧ್ಯಾನಪ್ರಣಾಮಗಳು, **ದ್ವಯವಚನಮುಖತ್ತಾಲೆ** - ದ್ವಯೋಚ್ಚಾರಣೆಯ ಮೂಲಕವಾಗಿ, **ಸ್ವರೂಪಫಲನ್ಯಾಸಗರ್ಭಮಾನ** - ಆತ್ಮಸ್ವರೂಪ ನ್ಯಾಸ ಮತ್ತು ಆತ್ಮರಕ್ಷಾಭರಸಮರ್ಪಣೆ ಮಾಡುವದರಿಂದುಂಟಾಗುವ ಫಲದ ನ್ಯಾಸ, ಇವುಗಳಿಂದ ಸೇರಿದ, **ಆತ್ಮರಕ್ಷಾಭರಸಮರ್ಪಣಂ ಪಣ್ಣುಗೈ** - ಆತ್ಮರಕ್ಷಾಭರಸಮರ್ಪಣವನ್ನು ಸರ್ವಲೋಕ ಶರಣ್ಯನ ಪಾದಾರವಿಂದದಲ್ಲಿ ಮಾಡುವಂಥಾದ್ದಾಗಿರುತ್ತದೆ.

ಅನುಷ್ಠಾನ ಮಂತ್ರವಾದ ದ್ವಯೋಚ್ಚಾರಣೆಗೆ ಮುಂಚೆಯೇ ಆನುಕೂಲ್ಯಾದಿ ಅಂಗಗಳ ಅನುಸಂಧಾನವು ಹೇಗೆ ಆವಶ್ಯಕವೋ, ಹಾಗೆಯೇ ಗುರುಪರಂಪರೆಯ ಪ್ರಣಾಮ ಧ್ಯಾನಾದಿಗಳೂ ಆವಶ್ಯಕವು. ಇದು ಅಂಗವಲ್ಲದಿದ್ದರೂ ಅನುಷ್ಠಾನಕ್ಕೆ **ಪೂರ್ವದಲ್ಲಿ** ಗುರುಪರಂಪರಾಧ್ಯಾನವು ಕರ್ತವ್ಯವೆಂದು ತಿಳಿಸುವದಕ್ಕಾಗಿ **ಗುರುಪರಂಪರೋಪಸತ್ತಿ ಪೂರ್ವಕ** ಎಂಬ ಪ್ರಯೋಗವು. ಇಲ್ಲಿ **ದ್ವಯವಚನತ್ತಾಲೆ** ಎಂದು ಪ್ರಯೋಗಿಸದೆ, **ದ್ವಯವಚನಮುಖತ್ತಾಲೇ** ಎಂದು ಪ್ರಯೋಗಿಸಿರುವದರಿಂದ, ಅಧಿಕಾರಭೇದದಿಂದ ಶ್ರೀ ನಿಗಮಾನ್ತ ದೇಶಿಕರವರೇ ನಿಕ್ಷೇಪರಕ್ಷೆ ಎಂಬ ಗ್ರಂಥದಲ್ಲಿ ಉಪದೇಶಿಸಿರುವ ಹಾಗೆ, ಕೆಲವು ಪ್ರಪತ್ತಿ ಪ್ರಯೋಗ ಭೇದಗಳುಂಟೆಂದು ಸೂಚಿಸಿರುತ್ತಾರೆ.

ಆದುದರಿಂದ ಸಾಂಗಾನುಷ್ಠಾನ ಪ್ರಕ್ರಿಯೆ ಹೇಗೆಂಬುವದನ್ನು ಸಾರವಿವರಣೆ ವ್ಯಾಖ್ಯಾತೃವು ವಿವರಿಸಿರುತ್ತಾರೆ, ಹೇಗೆಂದರೆ: ಈ ಪ್ರಪದನಾನುಷ್ಠಾನವು ಮೂರು ವಿಧವು. ಸ್ವನಿಷ್ಠೆ, ಉಕ್ತಿನಿಷ್ಠೆ, ಆಚಾರ್ಯನಿಷ್ಠೆ ಎಂಬದಾಗಿ. ಸ್ವನಿಷ್ಠೆಯ ಕ್ರಮ ಹೇಗೆಂದರೆ. ಆಚಾರ್ಯಾನುಗ್ರಹಪೂರ್ವಕವಾಗಿ, ಗುರುಪರಂಪರೆಯನ್ನನುಸಂಧಾನಮಾಡಿ, ಲಕ್ಷ್ಮೀಪ್ರಪತ್ತಿಯನ್ನು ಮಾಡಿ, "ಅಖಿಲಹೇಯ ಪ್ರತ್ಯನೀಕ" ಎಂಬದಾಗಿ ಶ್ರೀ ಭಾಷ್ಯಕಾರರವರಿಂದ ಹೇಳಲ್ಪಟ್ಟ ಮೇರೆಗೆ, ಭಗವಂತನಲ್ಲಿ ರಕ್ಷಣೆಗೆ ಉಪಯುಕ್ತವಾದ ಸ್ವಾಮಿತ್ವ, ಸೌಶೀಲ್ಯ, ವಾತ್ಸಲ್ಯ, ಸೌಲಭ್ಯ, ಸರ್ವಜ್ಞತ್ವ, ಸರ್ವಶಕ್ತಿತ್ವ, ಸಹಜ ಕಾರಣಿಕತ್ವ ಸತ್ಯಸಂಕಲ್ಪತ್ವ, ಪರಮೋದಾರತ್ವವೇ ಮೊದಲಾದ ಕಲ್ಯಾಣಗುಣಗಳನ್ನು ನಾರಾಯಣ ಶಬ್ದದಲ್ಲಿ ಅನುಸಂಧಾನಮಾಡಿ, ದ್ವಯದ ಶ್ರೀಮಚ್ಛಬ್ದದಲ್ಲಿ ನಾರಾಯಣನು ಲಕ್ಷ್ಮಿಯೊಂದಿಗೆ ಇರುವ ಭಾವವನ್ನು ಅನುಸಂಧಾನಮಾಡಿ, ದ್ವಯದ ಶ್ರೀಮನ್ನಾರಾಯಣ ಎಂಬೆರಡು ಪದಗಳ ಅರ್ಥಸಾಮರ್ಥ್ಯದಿಂದ ಆನುಕೂಲ್ಯ ಮತ್ತು ಪ್ರಾತಿಕೂಲ್ಯ ವರ್ಜನ ಸಂಕಲ್ಪಗಳನ್ನು ಮಾಡಿ, ತಾನು ಮಹಾಪರಾಧಿಯಾದುದರಿಂದ ಅಕಿಂಚನನೆಂದು ಅನುಸನ್ಧಾನಮಾಡಿ, ಮಹಾನುಭಾವನೇ ನಿನಗೆ ಸದಾ ದಾಸಭೂತನಾದ ನನಗೆ ಬೇರೊಬ್ಬರೂ ಗತಿಯಿಲ್ಲದೆ ನೀನೆ ಗತಿಯಾದುದರಿಂದ ನಿನ್ನಿಂದ ಅನುಗ್ರಹಿಸಲ್ಪಟ್ಟ ಜ್ಞಾನಮೂಲಕ **ಚರಣೌ ಶರಣಮಹಂ ಪ್ರಪದ್ಯೇ**

ಎಂಬಲ್ಲಿ ಸೇರಿಲಿನ ಕಾರ್ಪಣ್ಯವನ್ನೂ ಮಹಾವಿಶ್ವಾಸವನ್ನೂ ಗೋಪ್ತೃತ್ವವನ್ನೂ ಅನುಸಂಧಾನಮಾಡುತ್ತಾ ನಿನ್ನ ಪಾದಾರವಿಂದದಲ್ಲಿ ಸಮರ್ಪಿಸಿಕೊಂಡಿರುತ್ತೇನೆ. ನೀನೇ ಉಪಾಯಸ್ಥಾನದಲ್ಲಿ ನಿಂತು ಇದನ್ನು ನಡಿಸಿಕೊಡಬೇಕೇವಿನಾ ನನ್ನ ಯತ್ನವು ಈಪದಸಿ ಇರುವದಿಲ್ಲವು. ನನ್ನ ಮತ್ತು ನನ್ನ ರಕ್ಷಣೆಯು ಮತ್ತು ಆ ರಕ್ಷಣೆಯಿಂದ ಪ್ರಾಪ್ತವಾಗುವ **ಶ್ರೀಮತೇ ನಾರಾಯಣಾಯ ನಮಃ** ಎಂಬಲ್ಲಿ ತೋರಿಬರುವ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳನ್ನು ನಿಮಗಾಗಿ ಎಸಗುವೆನು. ಇದು ನನ್ನ ಪ್ರಯೋಜನಕ್ಕಾಗಿ ಯಲ್ಲವು.

ಉಕ್ತಿನಿಷ್ಠೆ ಹೇಗೆಂದರೆ: ಶ್ರೀರಂಗಾದಿ ದಿವ್ಯದೇಶಗಳಲ್ಲಿ ಸ್ವಾಮಿಸನ್ನಿಧಿಯಲ್ಲಿ, ಆಚಾರ್ಯರಿಂದ ಉಪದೇಶಿಸಲ್ಪಟ್ಟ ರೀತಿಯಲ್ಲಿ, ಸಮುದಾಯಜ್ಞಾನಪೂರ್ವಕವಾಗಿ ಅವರು ಉಚ್ಚರಿಸಿದಹಾಗೆ ಉಚ್ಚರಿಸೋಣವು. ಅವರು ಏನು ಹೇಳುತ್ತಾರೆಂದರೆ: ಪ್ರಥಮತಃ ಪುರುಷಕಾರ ಪ್ರಪದನವನ್ನನುಷ್ಠಿಸಿದನಂತರ ಲಕ್ಷ್ಮೀವಿಶಿಷ್ಟತೆಯನ್ನೂ ಆಕೆಗಿರುವ ಕಲ್ಯಾಣಗುಣಗಳನ್ನೂ ಅನುಸಂಧಾನಮಾಡಿ ಹಾಗೆಯೇ ನಾರಾಯಣಶಬ್ದದಲ್ಲಿ ತೋರುವ ಹೇಯ ಪ್ರತ್ಯನೀಕತ್ವ ಕಲ್ಯಾಣ ಗುಣಾಕರತ್ವಗಳನ್ನನುಸಂಧಾನಮಾಡಿ, ಹೇಳಿಕೊಡುವರೇನೆಂದರೆ. ಸ್ವಾಮಿ! ಇನ್ನು ಮುಂದೆ ಅನುಕೂಲನಾಗಿಯೇ ಇರುವೆನು, ಎಂದಿಗೂ ಪ್ರತಿಕೂಲನಾಗಿರುವದಿಲ್ಲವು. ನೀನು ನಿನ್ನ ದಾಸನನ್ನು ರಕ್ಷಿಸುತ್ತೀ ಎಂಬ ಪೂರ್ಣನಂಬಿಕೆಯುಂಟು. ನಾನು ಮಹಾಪರಾಧಿಯು, ಆದುದರಿಂದ ನೀನಲ್ಲದೆ ನನಗಿನ್ನ್ಯಾರೂ ರಕ್ಷಕರಿಲ್ಲದುದರಿಂದ ರಕ್ಷಿಸು. ಈ ಆತ್ಮಾತ್ಮೀಯವೆಲ್ಲಾ ನಿನ್ನದು, ನನ್ನದಲ್ಲವು, ಅವರುಗಳ ರಕ್ಷಣಭರವನ್ನು ನಿನ್ನಲ್ಲೇ ಇಟ್ಟಿರುವೆನು, ನನಗೆ ಇದರಲ್ಲಿ ಯಾವವಿಧ ಸಂಬಂಧವೂ ಇರುವದಿಲ್ಲವು, ಉಪಾಸನಕ್ಕೆ ಅಶಕ್ತನಾದುದರಿಂದ ಅದರ ಸ್ಥಾನದಲ್ಲಿ ನೀನೇ ನಿಂತು ಸರ್ವವನ್ನೂ ನಿರ್ವಹಿಸುವ ಭರವೂ ನಿನ್ನದೇ ನನ್ನದಲ್ಲವು. ರಕ್ಷಾಫಲವು ಕೂಡ ನಿನ್ನದೇ ನನ್ನದಲ್ಲವು. ಈ ಭರನ್ಯಾಸದ ಕರ್ತೃತ್ವವೂ ನನಗಿಲ್ಲವು. ಈ ಪ್ರಪದನವು ನಿನ್ನ ಕೃಪೆಗೆ ವಶವಾಗುವದಕ್ಕೆ ಮಾತ್ರವೇ ವಿನಾ ಫಲಕ್ಕಾಗಿ ಅಲ್ಲವು. ಹೀಗೆ ಆಚಾರ್ಯರು ಹೇಳಿದುದನ್ನು ಉಚ್ಚರಿಸುವದೇ ಉಕ್ತಿನಿಷ್ಠೆ.

ಆಚಾರ್ಯನಿಷ್ಠೆ - ಇದರಲ್ಲಿ ಆಚಾರ್ಯರೇ ಪ್ರಪದನವನ್ನು ಅನುಷ್ಠಿಸುತ್ತಾರೆ. "**ನಾನು**" ಎಂಬುವದಕ್ಕೆ ಬದಲಾಗಿ ಈ ಮೇಲೆ ಹೇಳಿದುದರಲ್ಲಿ "**ಈತನು**" ಎಂದು ಪ್ರಯೋಗಿಸುವರು. ಅಥವಾ ಅವರೇ "**ಅಹಂ**" ಎಂದು ಪ್ರಪದನವನ್ನನುಷ್ಠಿಸಿ, ಆತ್ಮಾತ್ಮೀಯ ವೆಂದು ಹೇಳುವದರಲ್ಲೇ ಈ ಭರನ್ಯಾಸವನ್ನು ಅಪೇಕ್ಷಿಸುವ ಶಿಷ್ಯನೂ ಸಹ ಅಂತರ್ಗತನು.

ಕರ್ತೃತ್ವ ಮಮತಾಫಲ ಫಲೋಪಾಯತ್ವತ್ಯಾಗಾನಾಂ ಹೇತೂಪನ್ಯಾಸಃ

ಇಕ್ಕರ್ತೃತ್ವತ್ಯಾಗತ್ತುಕ್ಕು ನಿಬಂಧನಮ್, ತನ್ ಕರ್ತೃತ್ವಮುಮ್ ಅವನಡಿಯಾಗ ವನ್ದದೆನ್ರು ತನಕ್ಕು ಯಾವದಾತ್ಮಭಾವಿಯಾನ ಭಗವದೇಕ ಪಾರತನ್ತ್ರ್ಯಮುಣರ್ಗೈ.

ಈ ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳಲ್ಲಿ ಆಚಾರ್ಯರು ಹೇಳಿಕೊಟ್ಟ ಹಾಗೆ ದ್ವಯಮಂತ್ರೋಚ್ಚಾರಣೆಯೂ ಉಂಟು.

ಮೇಲೆ ಹೇಳಿದ ಸಾಂಗಪ್ರಪದನಾನುಷ್ಠಾನವು ಕರ್ತೃತ್ವತ್ಯಾಗ, ಮಮತಾತ್ಯಾಗ, ಫಲತ್ಯಾಗ, ಫಲೋಪಾಯತ್ವತ್ಯಾಗಗಳ ಪೂರ್ವಕವಾಗಿ ಮಾಡತಕ್ಕದ್ದೆಂದು ಹೇಳಲ್ಪಟ್ಟಿತು. ಅವುಗಳಿಗೆ ಕಾರಣವನ್ನು ಮುಂದಿನ ನಾಲ್ಕು ವಾಕ್ಯಗಳಿಂದುಪದೇಶಿಸುತ್ತಾರೆ:—

ಇಕ್ಕರ್ತೃತ್ವತ್ಯಾಗತ್ತುಕ್ಕು - ತನಗೆ ಕರ್ತೃತ್ವವಿಲ್ಲವೆಂಬನುಸಂಧಾನಕ್ಕೆ **ನಿಬಂಧನಂ** - ಕಾರಣವೇನೆಂದರೆ, **ತನ್ ಕರ್ತೃತ್ವಮುಮ್** - ತಾನು ಕರ್ತಾ ಎಂದು ಶಾಸ್ತ್ರಗಳಲ್ಲಿ ಹೇಳಿರುವದು, ಈ ಸಂದರ್ಭದಲ್ಲಿ ಪ್ರಪದನಾನುಷ್ಠಾನರೂಪ ಕರ್ತೃತ್ವವು, ಅವನಡಿಯಾಗವನ್ದದೆನ್ರು - "**ಪರಾತ್ತು ತಚ್ಛ್ರುತೇಃ**" ಎಂಬ ಸೂತ್ರದಲ್ಲಿ ಉಪಪಾದಿಸಿರುವ ಹಾಗೆ ಪರಮ ಪುರುಷನ ಮೂಲಕವಾಗಿ ಬಂದುದೆಂಬುದಾಗಿ, ತನಕ್ಕು - ತನಗೆ, **ಯಾವದಾತ್ಮಭಾವಿಯಾನ** - ಆತ್ಮಸ್ವರೂಪವು ಎಲ್ಲಿಯವರೆಗೆ ಇರುತ್ತದೋ ಅದುವರೆವಿಗೂ ಎಂದರೆ ಸದಾ, **ಭಗವದೇಕಪಾರತನ್ತ್ರ್ಯಮುಣರ್ಗೈ** - ಶ್ರೀಮನ್ನಾರಾಯಣನಿಗೇನೇ ತಾನು ಪರತನ್ತ್ರನೆಂದು ತಿಳಿಯೋಣದು. ಶಾಸ್ತ್ರದ ಚೇತನನ್ನು ಕರ್ತಾನೆಂದು "**ಕರ್ತಾ ಶಾಸ್ತ್ರಾರ್ಥವತ್ತ್ವಾತ್**" ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಅದೂ ಅಲ್ಲದೆ ಶ್ರುತಿಗಳಲ್ಲಿ ವಿಧಿನಿಷೇಧವಾಕ್ಯಗಳಿರುತ್ತವೆ. ಅವುಗಳಿಗೆ ಅನುಸಾರವಾಗಿ ಈತನು ವರ್ತಿಸತಕ್ಕದ್ದು. ಆದ್ದರಿಂದ "ಆಜ್ಞಾಚ್ಛೇದೀ ಮಮದ್ರೋಹೀ" ಎಂದು ಹೇಳಿರುವ ಹಾಗೆ, ಭಗವನ್ನಿಗ್ರಹಕ್ಕೆ ಪಾತ್ರನಾಗುತ್ತಾನೆ. ಹೀಗಿರುವಾಗ ಕರ್ತೃತ್ವತ್ಯಾಗವು ಹೇಗೆ ಎಂದರೆ ಹೇಳುತ್ತಾರೆ - ಶಾಸ್ತ್ರದಲ್ಲಿ ಹೇಳಿರುವ ಹಾಗೆಯೂ, ಸ್ವಾನುಭವಸಿದ್ಧವಾಗಿಯೂ ಈತನ ಕಳೇಬರಾವಸ್ಥೆಯ ಮೂಲಕ ಕರ್ತೃತ್ವವಿದ್ದರೂ ಸರ್ವೇಶ್ವರನು ಲೀಲಾರೂಪವ್ಯಾಪಾರಕ್ಕಾಗಿಯೇ "ಕರಣ ಕಳೇಬರಯೋಗ" ವನ್ನು ದಯಪಾಲಿಸಿ, ಈತನಿಗೆ ಶಕ್ತಿಯನ್ನು ಕೊಟ್ಟು, ಪ್ರವೃತ್ತಿ ಸಮಯದಲ್ಲೂ ತನ್ನ ಸಂಕಲ್ಪ

ಮಮತಾತ್ಯಾಗತ್ತುಕ್ಕುಮ್ ಫಲತ್ಯಾಗತ್ತುಕ್ಕುಮ್ ನಿಬಂಧನಂ:— ಆತ್ಮಾತ್ಮೀಯಙ್ಗಳುಡೈಯ ಸ್ವರೂಪಾನುಬಂಧಿ ಭಗವದೇಕ ಶೇಷತ್ವ ಜ್ಞಾನಮ್.

ಮೂಲಕ ಮಾಡಬೇಕೆಂಬ ಇಚ್ಛಾ, ಪ್ರಯತ್ನ ಮೊದಲಾದವುಗಳ ಮೂಲಕ ಪೂರ್ವ ಸುಕೃತ ದುಷ್ಕೃತಗಳಿಗನುಸಾರವಾಗಿ ಪ್ರೇರಕನಾಗಿಯೂ ಇರುವದರಿಂದ, ಇವನ ಕರ್ತೃತ್ವವು ಯಾವಾಗಲೂ ಭಗವದಧೀನವು, ಆದುದರಿಂದ ತಾನು ಭಗವಂತನಿಗೇನೆ ಪರತನ್ತ್ರನು ಎಂಬ ಜ್ಞಾನದ ಮೂಲಕ ಕರ್ತೃತ್ವತ್ಯಾಗವೆಂದು ಭಾವಿಸತಕ್ಕದ್ದು. ಆದುದರಿಂದ ಈ ಭಗವದೇಕಪಾರತಂತ್ರ್ಯಜ್ಞಾನವೇ ಕರ್ತೃತ್ವತ್ಯಾಗಕ್ಕೆ ಮೂಲಕಾರಣವೆಂಬ ಭಾವವು. ಒಬ್ಬನು ಇನ್ನೊಬ್ಬನಿಗೆ ಪರತನ್ತ್ರನಾಗಿರುವದು, ಲೋಕವ್ಯಾಪಾರದಲ್ಲಿ ಯಾವದಾದರೂ ಒಂದು ಕಾಲದಲ್ಲಿದ್ದು ಇನ್ನೊಂದುಕಾಲದಲ್ಲಿ ಹೀಗೆ ಇಲ್ಲದೆಯೂ ಇರುವದುಂಟು. ಹಾಗಿಲ್ಲದೆ ಈ ಜೀವಾತ್ಮನು ನಿತ್ಯವಾಗಿ ನಿರುಪಾಧಿಕವಾಗಿ ಸರ್ವೇಶ್ವರನಿಗೆ ಮಾತ್ರ ಪರತನ್ತ್ರನಾಗಿರುವದರಿಂದ, **"ಯಾವದಾತ್ಮಭಾವಿ"** ಎಂಬದಾಗಿಯೂ, ಮತ್ತು **"ಭಗವದೇಕ"** ವೆಂಬದಾಗಿಯೂ ಪ್ರಯೋಗಿಸಿರುತ್ತಾರೆ. ಭರನ್ಯಾಸವು ತುಂಬಾ ಅಮೋಘವಾಗಿ ನಿರತಿಶಯಫಲಪ್ರದವಾದುದು. ಹೀಗಿರುವಾಗ ಅಂತಹ ಅನುಷ್ಠಾನದಲ್ಲಿ ಮಮತೆಯು ಹೇಗೆ ದೋಷಾವಹವು? ಮತ್ತು ಮುಮುಕ್ಷುವಿಗೆ ಮೋಕ್ಷ ಬೇಕು, ಹೀಗಿರುವಾಗ ಫಲತ್ಯಾಗವನ್ನು ಏತಕ್ಕೆ ಅನುಸನ್ಧಾನ ಮಾಡಬೇಕು? ಎಂಬೀ ಶಙ್ಕೆಗಳಿಗೆ ಈ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ:—

ಮಮತಾ ತ್ಯಾಗತ್ತುಕ್ಕುಮ್ ಫಲತ್ಯಾಗತ್ತುಕ್ಕುಂ ನಿಬಂಧನಂ - ತನಗೆ ಮಮತೆ ಫಲ, ಇವುಗಳೆರಡರಲ್ಲೂ ಸಂಬಂಧವಿಲ್ಲವೆಂಬನುಸಂಧಾನಕ್ಕೆ ಕಾರಣವೇನೆಂದರೆ:—**ಆತ್ಮಾತ್ಮೀಯಙ್ಗಳುಡೈಯ** - ತನ್ನ ಮತ್ತು ತನಗೆ ಸಂಬಂಧಪಟ್ಟವರ, **ಸ್ವರೂಪಾನುಬಂಧಿ** - ಆತ್ಮಸ್ವರೂಪದೊಂದಿಗೆ ಸೇರಿದ, **ಭಗವದೇಕ ಶೇಷತ್ವ ಜ್ಞಾನಮ್** - ಶ್ರಿಯಃಪತಿಯೊಬ್ಬನಿಗೆ ಮಾತ್ರವೇ ತಾನೂ ಮತ್ತು ಆತ್ಮೀಯಗಳೂ ಸಹ ಪ್ರಯೋಜನವಾದವೆಂಬ ಜ್ಞಾನವಾಗಿರುತ್ತದೆ ಯಾವಾಗ ತನ್ನ ಸ್ವರೂಪವು ಭಗವಂತನ ಪ್ರಯೋಜನಕ್ಕಾಗಿಯೇ ಎಂಬ ಜ್ಞಾನ ಉಂಟಾಯಿತೋ, ಆವಾಗ ತನಗೆ ಯಾವ ವಿಧವಾದ ಫಲದ ಸಂಬಂಧವೂ ಇಲ್ಲವೆಂದು ಏರ್ಪಡುವದರಿಂದ, ಫಲತ್ಯಾಗಕ್ಕೆ ಶೇಷತ್ವಜ್ಞಾನವು ಕಾರಣವಾಯಿತು. ಅದೂ ಅಲ್ಲದೆ ತಾನೂ, ಹಾಗೆಯೇ ತನಗೆ ಸಂಬಂಧಪಟ್ಟ ಎಲ್ಲವೂ ಕೂಡ ಶೇಷಭೂತವಾದುದರಿಂದ ತಾನು ಅನುಷ್ಠಿಸಿದ ಪ್ರಪ

ಫಲೋಪಾಯತ್ವತ್ಯಾಗತ್ತುಕ್ಕು ನಿಬಂಧನಂ :—ಶರಣ್ಯಪ್ರಸಾದನ ಪೂಸವಿವನುಡೈಯ ಅನುಷ್ಠಾನಮ್ ಪ್ರಧಾನ ಫಲತ್ತುಕ್ಕು ವ್ಯವಹಿತ ಕಾರಣಮಾಗೈಯುಮ್, ಅಚೇತನಮಾಗೈಯಾಲೆ ಫಲಪ್ರದಾನ ಸಜ್ಜುಲ್ಲಾತ್ತ್ರಯು ಮುಲ್ಲಾನ್ಮೈಯುಮ್.

ತ್ತಿಯೂ ಕೂಡ ಅದೇ ಪ್ರಕಾರ ಶ್ರಿಯಃಪತಿಗೆ ಶೇಷಭೂತವಾದ ಮೇಲೆ ಆ ಪ್ರಪತ್ತ್ಯನುಷ್ಠಾನದಲ್ಲಿ ಮಮತೆ ಎಲ್ಲಿರುತ್ತದೆ? ಮಮತಾತ್ಯಾಗ ಉಂಟಾಗಲೇ ಬೇಕೆಂಬ ಭಾವವು. ಆದರೆ ಈ ಜೀವಾತ್ಮನು, ಪಿತಾ ಆಚಾರ್ಯ ಮೊದಲಾದವರುಗಳಿಗೂ ಶೇಷಭೂತನಾಗಿದ್ದಾನಲ್ಲಾ, ಭಗವದೇಕ ಶೇಷತ್ವಜ್ಞಾನ ಹೇಗೆ ಎಂದರೆ, ಅದಕ್ಕಾಗಿ **ಸ್ವರೂಪಾನುಬಂಧಿ** ಎಂಬ ಪ್ರಯೋಗವು. ಆ ಶೇಷತ್ವಗಳೆಲ್ಲಾ ಸೋಪಾಧಿಗಳಾದವು; ಶ್ರಿಯಃಪತಿಗೆ ಶೇಷಭೂತನಾಗಿರುವದು ಮಾತ್ರ ನಿರುಪಾಧಿಕವು ಎಂದು ತಿಳಿಸುವದಕ್ಕಾಗಿ **ಸ್ವರೂಪಾನುಬಂಧಿ** ಎಂಬ ಪ್ರಯೋಗವು.

ಆದರೆ ಅನುಷ್ಠಿಸುವನಿಗೆ ಕರ್ಮದಲ್ಲಿ ಫಲೋಪಾಯತ್ವಜ್ಞಾನವು ಆವಶ್ಯಕವು. ಹೀಗಿರುವಲ್ಲಿ ಅದನ್ನು ತ್ಯಾಗಮಾಡಲು ಸಾಧ್ಯವೋ? ಪ್ರಧಾನ ಫಲವಾದ ಪರಿಪೂರ್ಣಾನುಭವಕ್ಕೆ ಸರ್ವೇಶ್ವರನೇ ಉಪಾಯವಾದುದರಿಂದ, ಅಂತಹ ಪ್ರಧಾನ ಫಲಕ್ಕೆ ತಾನು ಅನುಷ್ಠಿಸುವ ಪ್ರಪತ್ತಿ ಕಾರಣವಾಗಲಾರದು ಎಂಬ ಅನುಸಂಧಾನ ಉಂಟಾಗುವದರಿಂದ, ಇಲ್ಲಿ ಉಪಾಯತ್ವತ್ಯಾಗವು ಸರಿಹೋಗುತ್ತದೆ ಎಂದು ಸಮಾಧಾನ ಹೇಳಿದರೂ, ಅಂತಹ ಪರಿಪೂರ್ಣ ಬ್ರಹ್ಮಾನುಭವಕ್ಕೆ ಪ್ರಪತ್ತಿಯು ಸಾಧ್ಯೋಪಾಯವೆಂದು ಶಾಸ್ತ್ರವು ವಿಧಿಸುವಾಗ, ಅದು ಉಪಾಯವೇ ಅಲ್ಲವೆಂಬ ಅನುಸಂಧಾನವು ತಾನೇ ಹೇಗೆ ಸರಿಹೋಗುತ್ತದೆ, ಎಂಬೀ ಶಂಕಾಗಳಿಗೆ ಸಮಾಧಾನವಾಗಿ ಫಲೋಪಾಯತ್ವವು ತನಗಿಲ್ಲವೆಂದೂ, ಈಶ್ವರನೇ ಫಲೋಪಾಯವೆಂದೂ, ಪ್ರಪತ್ತಿಯು ಸಾಕ್ಷಾತ್ತಾಗಿ ಫಲದಾಯಿಕವಲ್ಲವೆಂದೂ, ಸರ್ವೇಶ್ವರನನುಗ್ರಹ ಮೂಲಕ ಸರ್ವೇಶ್ವರನೇ ಫಲಪ್ರದನೆಂದೂ ಉಪದೇಶಿಸುತ್ತಾರೆ.

ಫಲೋಪಾಯತ್ವತ್ಯಾಗತ್ತುಕ್ಕು ನಿಬಂಧನಂ – ಫಲವನ್ನು ಕುರಿತು ಈ ಭರನ್ಯಾಸವು ಉಪಾಯವೆಂಬ ಭಾವದ ತ್ಯಾಗಕ್ಕೆ ಕಾರಣವೇನೆಂದರೆ:— **ಶರಣ್ಯ ಪ್ರಸಾದನಪೂಸ** – ಸರ್ವರಕ್ಷಕನಾದ ಸರ್ವೇಶ್ವರನ ಅನುಗ್ರಹವನ್ನುಂಟುಮಾಡುವ, **ಇವನುಡೈಯ ಅನುಷ್ಠಾನಂ** – ಈತನ ಭರನ್ಯಾಸರೂಪ್ಯ ಅನುಷ್ಠಾನವು, **ಪ್ರಧಾನ ಫಲತ್ತುಕ್ಕು** – ಸರ್ವೇಶ್ವರನ ಅನವಚ್ಛಿನ್ನಕೈಂಕರ

ಭಗವತ ಏವ ಫಲೋಪಾಯತ್ವಂ

ಈಶ್ವರನ್ ಫಲೋಪಾಯಮಾಗಿರದು, (ಎಙ್ಙನೇದು) ಸಹಜ ಸೌಹಾರ್ದತ್ತಾಲೆ ಕರಣ ಕಳೇಬರ ಪ್ರದಾನಂ ತುಡಙ್ಗಿ ದ್ವಯೋಚ್ಚಾರಣ ಪರ್ಯಂತಮಾಗ ಸರ್ವತ್ತುಕ್ಕುಮ್ ಅದಿಕಾರಣಮಾನ ತಾನೇ ಪ್ರಸಾದ

ಪ್ರಾಪ್ತಿ ಪರ್ಯಂತವಾದ ಪರಿಪೂರ್ಣ ಬ್ರಹ್ಮಾನುಭವಕ್ಕೆ, ವ್ಯವಹಿತ ಕಾರಣ ಮಾಕೈಯುಮ್ - ಸಾಕ್ಷಾತ್ತಾಗಿ ಕಾರಣವಾಗದೆ ಪರಂಪರಯಾ ಕಾರಣವಾಗೋಣವೂ ; ಮತ್ತು ಅಚೇತನ ಮಾಗೈಯಾಲೆ - ಭರನ್ಯಾಸವು ಚೇತನವಲ್ಲವಾದುದರಿಂದ, ಫಲಪ್ರದಾನ ಸಙ್ಕಲ್ಪಾಶ್ರಯ ಮಲ್ಲಾಮೈಯುಮ್ - ಫಲವನ್ನು ಕೊಡುತ್ತೇನೆಂಬ ಸಂಕಲ್ಪಕ್ಕೆ ಆಶ್ರಯವಲ್ಲದೇ ಇರೋಣವೂ ಸಹ; ಹೀಗೆ ಇವೆರಡೂ ಆ ಫಲೋಪಾಯತ್ವಾಭಾವಕ್ಕೆ ಕಾರಣಗಳೆಂಬ ಭಾವವು. ಈ ಭರನ್ಯಾಸದ ಮುಖ್ಯೋದ್ದೇಶವು ಸರ್ವಲೋಕ ಶರಣ್ಯನ ಅನುಗ್ರಹವನ್ನು ಸಂಪಾದಿಸುವದಕ್ಕಾಗಿರುವಾಗ, ಪ್ರಧಾನಫಲಕ್ಕೆ ಅದು ಸಾಕ್ಷಾತ್ತಾಗಿ ಕಾರಣವಲ್ಲವು, ಮತ್ತು ಅದು ಚೇತನವಲ್ಲವಾದುದರಿಂದ ಅಂತಹ ಪ್ರಧಾನ ಫಲವನ್ನು ಕೊಡುತ್ತೇನೆಂಬ ಸಂಕಲ್ಪಕ್ಕೂ ಆಶ್ರಯವಲ್ಲವು. ಆದುದರಿಂದ ಭರನ್ಯಾಸದಲ್ಲಿ ಫಲೋಪಾಯವೆಂಬ ಅಭಿಮಾನವಿಲ್ಲದವರಿಂದ ಆ ಫಲೋಪಾಯತ್ವತ್ಯಾಗಪೂರ್ವಕವಾಗಿ ಅನುಷ್ಠಿಸತಕ್ಕದ್ದೆಂದು ಹೇಳಿದಂತಾಯಿತು.

ಹಾಗಾದರೆ, ಫಲೋಪಾಯತ್ವವು ಎಲ್ಲಿ ಎಂದರೆ ಮುಂದಿನ ವಾಕ್ಯದಿಂದ ವಿಶದೀಕರಿಸುತ್ತಾರೆ. ಸರ್ವೇಶ್ವರನೇ ಫಲೋಪಾಯನೆಂದು ಹೇಳಿ, ಹೇಗೆ ಎಂದು ಉಪಪಾದಿಸುತ್ತಾರೆ.

ಫಲೋಪಾಯತ್ವವು ಸರ್ವೇಶ್ವರನಿಗೇ ಸಲ್ಲತಕ್ಕದ್ದು.

ಈಶ್ವರನ್ - ಸರ್ವೇಶ್ವರನು, **ಫಲೋಪಾಯ ಮಾಗಿರದು** - ಫಲವನ್ನು ಕುರಿತು ಉಪಾಯವಾಗಿರೋಣವು, (ಎಙ್ಙನೇದು ಎಂದು ಪಾಠವಾದರೆ ಫಲವನ್ನು ಕುರಿತು ಉಪಾಯವೆಂದು ಹೇಳೋಣವು ಎಂಬರ್ಥವು) :—**ಸಹಜ ಸೌಹಾರ್ದತ್ತಾಲೆ** - ನಿರ್ಹೇತುಕ ಕೃಪೆಯಿಂದ, **ಕರಣ ಕಳೇಬರ ಪ್ರದಾನಂ**- ಪ್ರಳಯದಲ್ಲಿ ಸರ್ವಚೇತನವು ಅಚೇತನ ಪ್ರಾಯವಾಗಿ ಇದ್ದುಬಿಟ್ಟಿತೇ ಎಂಬ ಪರಿತಾಪದಿಂದ ಆ ಚೇತನರುಗಳಿಗೆ ಅವರವರುಗಳ ಪೂರ್ವಕರ್ಮಾನುಸಾರ ಶರೀರೇಂದ್ರಿಯ ಯೋಗವನ್ನು ದಯಪಾಲಿಸಿದುದು, **ತುಡಙ್ಗಿ** - ಮೊದಲುಗೊಂಡು

ಪೂರ್ವಕ ಸಙ್ಕಲ್ಪ ವಿಶೇಷವಿಶಿಷ್ಟನಾಯ್ ಕೊಣ್ಡು ಅವ್ಯವಹಿತ ಕಾರಣಮಾಕೈಯಾಲುಮ್, ಉಪಾಯಾನ್ತರ ಶೂನ್ಯನುಕ್ಕು ಅವ್ವೋ ಉಪಾಯಸ್ಥಾನತ್ತಿಲೆ ನಿವೇಶಿಕ್ಕೈಯಾಲುಮ್.

ದ್ವಯೋಚ್ಚಾರಣ ಪರ್ಯಂತಮಾಗ - ಪ್ರಪತ್ತ್ಯನುಷ್ಠಾನರೂಪಮಂತ್ರವಾದ ದ್ವಯವನ್ನು ಉಚ್ಚರಿಸುವ ಪರ್ಯಂತವಾಗಿ, ಎಂದರೆ ಉಪಾಯಾನುಷ್ಠಾನ ಮಾಡುವವರಿವಿಗೂ ತಾನೇ, **ಸರ್ವತ್ತುಕ್ಕುಂ ಆದಿಕಾರಣಮಾನ** – ಎಲ್ಲಾದಕ್ಕೂ ಮೂಲಕಾರಣ ಭೂತನಾದ ಸರ್ವೇಶ್ವರನಾದ ತಾನೇ, **ಪ್ರಸಾದ ಪೂರ್ವಕ**– ಅನುಗ್ರಹಪೂರ್ವಕವಾದ, **ಸಙ್ಕಲ್ಪ ವಿಶೇಷ ವಿಶಿಷ್ಟನಾಯ್ ಕೊಣ್ಡು** - ಈ ಚೇತನನ ಯಾದೃಚ್ಛಿಕ ಸುಕೃತ ರೂಪವಾದ ಅನುಕೂಲ ಕರ್ಮಾನುಸಾರವಾದ ಸಂಕಲ್ಪವಿಶೇಷದಿಂದ ಯುಕ್ತನಾಗಿ, **ಅವ್ಯವಹಿತ ಕಾರಣ ಮಾಗೈಯಾಲುಮ್** - ಸಾಕ್ಷಾತ್ತಾಗಿಯೇ ತಾನೇ ಕಾರಣವಾಗುವದರಿಂದಲೂ **ಉಪಾಯಾನ್ತರ ಶೂನ್ಯನುಕ್ಕು** - ಉಪಾಸನದಲ್ಲಿ ಪ್ರವರ್ತಿಸುವ ಶಕ್ತಿಯಿಲ್ಲದವನಿಗೆ **ಅವ್ವೋ ಉಪಾಯಸ್ಥಾನತ್ತಿಲೆ** - ಅಂತಹ ಉಪಾಯಸ್ಥಾನದಲ್ಲಿ, **ನಿವೇಶಿಕ್ಕೈಯಾಲುಮ್** - ತಾನೇ ನಿಲ್ಲುವದರಿಂದಲೂ, ಆ ಸರ್ವೇಶ್ವರನೇ ಫಲೋಪಾಯನೆಂದು ತಿಳಿಯತಕ್ಕದ್ದೆಂಬ ಭಾವವು.

ಹಿಂದಿನ ವಾಕ್ಯದಲ್ಲಿ ಭರನ್ಯಾಸವು ಭಗವದನುಗ್ರಹಕ್ಕೆ ಕಾರಣವಾದೀತೇ ವಿನಾ, ಸಾಕ್ಷಾತ್ತಾಗಿ ಪ್ರಧಾನ ಫಲಕ್ಕೆ ಕಾರಣವಲ್ಲವೆಂದೂ, ಫಲಪ್ರಧಾನ ಸಂಕಲ್ಪಕ್ಕೆ ಚೇತನನಲ್ಲದುದರಿಂದ ಆಶ್ರಯವಲ್ಲವೆಂದೂ, ಆ ಕಾರಣದಿಂದ ಫಲೋಪಾಯವಲ್ಲವೆಂದೂ ಹೇಳಲ್ಪಟ್ಟಿತು. ಇವೆರಡೂ ಸರ್ವೇಶ್ವರನಲ್ಲಿರುವದರಿಂದ ಆತನೇ ಫಲೋಪಾಯವು ಹೇಗೆಂದರೆ:—ಈತನ ನಿರ್ಹೇತುಕ ಕೃಪೆಯು ಅನೇಕ ಅನುಕೂಲಗಳನ್ನು ಈ ಚೇತನನಿಗೆ ಕಲ್ಪಿಸಿಕೊಟ್ಟಿರುತ್ತದೆ.

"ಅಚಿದ ವಿಶಿಷ್ಟಾನ್ಪ್ರಳಯೇ ಜನ್ತೂನವಲೋಕ್ಯ ಜಾತನಿರ್ವೇದಾ ।
ಕರಣಕಳೇಬರ ಯೋಗಂ ವಿತರಿಸಿ ವೃಷ ಶೈಲನಾಥ ಕರುಣೇತ್ವಂ" ॥

ಎಂದು ಹೇಳಿರುವ ಹಾಗೆ ಪ್ರಳಯದಲ್ಲಿ ಅಚಿತ್ಪ್ರಾಯವಾಗಿದ್ದ ಚೇತನರಿಗೆ ಅವರವರ ಪೂರ್ವ ಕರ್ಮಾನುಸಾರ ದೇಹೇಂದ್ರಿಯಗಳನ್ನು ಈ ಸರ್ವೇಶ್ವರನ ಕೃಪೆಯು ಒದಗಿಸುತ್ತದೆ. ಅನಂತರ ಆ ಚೇತನರ ಯಾದೃಚ್ಛಿಕ ಸುಕೃತವನ್ನೇ ಅಭಿನಯಿಸಿ ಅವರಿಗೆ ಮಾನುಷಜನ್ಮ ಜ್ಞಾನ ವಿವೇಕಾದಿಗಳನ್ನುಂಟುಮಾಡುತ್ತದೆ. ಸಚ್ಛಾಸ್ತ್ರವನ್ನೂ ಅವುಗಳನ್ನುಪದೇಶಿಸುವ ಜ್ಞಾನಿಗಳನ್ನೂ ಕೊಟ್ಟು ಅವರಿಗೆ ಸತ್ಸಂಗ ಗುರೂಪಸದನಗಳನ್ನುಂಟುಮಾಡುತ್ತದೆ. ಅನಂತರ ಶರಣಾ

ಗತಿ ಮನ್ತ್ರವಾದ ದ್ವಯೋಚ್ಚಾರಣೆ ಮೂಲಕ ಭರನ್ಯಾಸವನ್ನು ಅನುಷ್ಠಿಸುವ ಹಾಗೆ ಮಾಡುತ್ತದೆ. ಹೀಗೆ ಆತನ ನಿರ್ವ್ಯಾಜಕೃಪೆಯೇ ಇದನ್ನೆಲ್ಲಾ ಉಂಟು ಮಾಡುತ್ತದೆ. ಹೀಗೆ ಎಲ್ಲಕ್ಕೂ ಆತನೇ ಸಾಕ್ಷಾತ್ತಾಗಿ ಕಾರಣನು. ಆದುದ ರಿಂದಲೇ **ಅವ್ಯವಹಿತ ಕಾರಣನು** ಎಂದು ಹೇಳಲ್ಪಟ್ಟಿತು. ಇವೆಲ್ಲಕ್ಕೂ ಚೇತನನ ಸುಕೃತವೇ ಕಾರಣವಲ್ಲವೇ ಎಂದರೆ ಅಂತಹ ಸುಕೃತಾನುಷ್ಠಾನಕ್ಕೂ ಕರಣ ಕಳೇಬರ ಯೋಗಾದಿಗಳ ಮೂಲಕವಾಗಿಯೂ ತದನುಸಾರ ನಿಯಮನ ಮೂಲಕವಾಗಿಯೂ ಆತನೇ ಕಾರಣವಾದುದರಿಂದಲೇ **ಆದಿಕಾರಣನೂ ನ ತಾನೇ** ಅವ್ಯಹಿತ ಕಾರಣನೆಂದು ಉಪದೇಶಿಸಿರುತ್ತಾನೆ. ಅದೂ ಅಲ್ಲದೆ ಈತನ ಅಲ್ಪವಾದ ಯಾದೃಚ್ಛಿಕ ಸುಕೃತವನ್ನೇ ವ್ಯಾಜ ಮಾಡಿಕೊಂಡು, ತನ್ನ ಅನುಗ್ರಹಪೂರ್ವಕವಾಗಿ ಹಿತಪ್ರವರ್ತನೆ ಮೊದಲುಗೊಂಡು ಫಲಪ್ರದಾನದವರೆ ವಿಗೂ ಸಂಕಲ್ಪಿಸಿ, ನಿಯಮಿಸಿ ರಕ್ಷಿಸುತ್ತಾನೆ. ಮತ್ತು ಸಾಧ್ಯೋಪಾಯವಾದ ಯೋಗದಲ್ಲಿ ಪ್ರವರ್ತಿಸಲು ಯೋಗ್ಯತೆಯಿಲ್ಲದ ಅಶಕ್ತತೆ ಮುಂತಾದವುಗಳನ್ನು ತಿಳಿದು, ಯೋಗದ ಸ್ಥಳದಲ್ಲಿ ತಾನೇ ನಿಂತು ಈ ಭರನ್ಯಾಸಾನುಷ್ಠಾನವನ್ನು ಪೂರ್ತಿ ಮಾಡಿಸಿ, ಫಲಪ್ರದಾನ ಮಾಡುವದರಿಂದ ಆತನೇ ಫಲೋಪಾಯನೆಂದು ಸ್ಥಾಪಿ ಸಲ್ಪಟ್ಟಿತು. ಹೀಗೆ ಆತನೇ ಸಾಕ್ಷಾತ್ತಾದ ಕಾರಣವಾದುದರಿಂದಲೂ, ಯೋಗದ ಸ್ಥಾನದಲ್ಲಿ ತಾನೇ ನಿಂತು ಫಲ ಕೊಡುವದರಿಂದಲೂ, ಆತನೇ ಫಲೋಪಾಯ ವೆಂಬ ತಾತ್ಪರ್ಯವು.

ಆದರೆ ಜೀವಾತ್ಮನಿಗೆ ಜ್ಞಾನವು ನಿತ್ಯವಾದುದು, ಅದು ವಿಕಾಸವಾಗಿಯೇ ಇರುತ್ತದೆ; ಆದರೆ ಪ್ರಕೃತಿ ಸಂಬಂಧದ ಮೂಲಕ ಅದರ ಪ್ರಕಾಶವು ಮುಚ್ಚಿಹೋಗಿ ರುತ್ತದೆ. ಸ್ವಾಮಿಕೃಪೆ ಯಾವಾಗ ಉಂಟಾಯಿತೋ, ಆಗ ಪ್ರತಿಬಂಧಕ ನಿವೃತ್ತಿ ಮೂಲಕ "**ಯಥಾ ನ ಕ್ರಿಯತೇಜ್ಯೋತ್ಸ್ನಾ**" ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, (೪೯೩ ನೆಯ ಪುಟ ನೋಡಿ) ತನ್ನ ನೈಜವಾದ ಸ್ವರೂಪದ ಆವಿರ್ಭಾವ ಉಂಟಾಗಿ, ಪರಿಪೂರ್ಣಾನುಭವ ಪರ್ಯನ್ತವಾದ ಫಲಪ್ರಾಪ್ತಿಯುಂಟಾಗುತ್ತದೆ; ಹೀಗಿರುವಾಗ ಈಶ್ವರ ಸಂಕಲ್ಪದ ಆವಶ್ಯಕತೆ ಏನು? ಆತನು ಹೇಗೆ ಅವ್ಯ ವಹಿತ ಕಾರಣನು? ದುಷ್ಕರವಾದ ಚಿರಕಾಲದ ಯೋಗಾಭ್ಯಾಸದಿಂದ ಲಭಿಸ ತಕ್ಕ ಫಲವು, ಬಹು ಸುಕರವಾಗಿ ಒಂದು ಕ್ಷಣಕಾಲ ಮಾತ್ರ ಅನುಷ್ಠಿಸತಕ್ಕದ್ದಾಗಿ ರುವ ಭರನ್ಯಾಸದಿಂದ ಉಂಟಾಗಿಲಿ ಯೋಗಕ್ಕೆ ಬದಲಾಗಿ ತಾನೇ ಉಪಾಯವಾಗಿ ನಿಂತು ನಡಿಸಿಕೊಡುವನೆಂಬುವದು ಹೇಗೆ ಸಮಂಜಸವಾದ ಅಭಿಪ್ರಾಯವೆಂದು ಹೇಳಲಾಗುತ್ತದೆ? ಯೋಗದಲ್ಲಿ ಮಾತ್ರ ಸ್ವಸಂಕಲ್ಪಾಧೀನನೆಂದೂ, ಇಲ್ಲಿ ಮಾತ್ರ ಈಶ್ವರ ಸಂಕಲ್ಪಾಧೀನನೆಂದೂ ಹೇಳಲಾಗುತ್ತದೆಯೇ? ಭಗವಂತನಿಗೆ ಸರ್ವ ಕಾರ ಣತ್ವವೆಂಬುವದು ಎಲ್ಲಾದಕ್ಕೂ ಇದ್ದೇ ಇರುತ್ತದೆ. ಹೀಗಿರುವಾಗ

ಇಜ್ಞ ನಿರುಕ್ಕೈಕ್ಕಡಿ ಧರ್ಮಿಗ್ರಾಹಕಮಾನ ಶಾಸ್ತ್ರತ್ತಾಲೆ ಅವಗತಮಾನ ವಸ್ತುಸ್ವಭಾವಂ. ಆಗೈಯಾಲ್ ಇವ್ವರ್ಥಂ ಯುಕ್ತಿಗಳಾಲ್ ಚಲಿಪ್ಪಿಕ್ಕವೊಣ್ಣಾದು.

ಸ್ವಸಂಕಲ್ಪ ವಿಶಿಷ್ಟನಾದ ಸರ್ವೇಶ್ವರನೇ ಅವ್ಯವಹಿತ ಕಾರಣನೆಂದೂ, ಉಪಾಯಾನ್ತರ ಶೂನ್ಯನಿಗೆ ಸರ್ವೇಶ್ವರನೇ ಆ ಉಪಾಯಸ್ಥಾನದಲ್ಲಿ ನಿಂತು ನೆರವೇರಿಸುವನೆಂದೂ ಹೇಳುವದು ಹೇಗೆ ? ಎಂಬ ಆಕ್ಷೇಪಗಳಿಗೆ ಮುಂದಿನ ವಾಕ್ಯದಿಂದ ಸಮಾಧಾನ ಹೇಳುತ್ತಾರೆ.

ಇಜ್ಞ ನಿರುಕ್ಕೈಕ್ಕಡಿ – ಹೀಗಿರುವದಕ್ಕೆ ಮೂಲವು ಎಂದರೆ ಸರ್ವೇಶ್ವರನು ಸಂಕಲ್ಪ ವಿಶಿಷ್ಟನಾಗಿಕೊಂಡು ಸಾಕ್ಷಾತ್ತಾಗಿ ಕಾರಣವಾಗಿರುವದಕ್ಕೂ ಉಪಾಯಾನ್ತರ ಸ್ಥಾನದಲ್ಲಿ ತಾನೇ ನಿಂತು ಉಪಾಯವಾಗಿರುವನೆಂಬುವದಕ್ಕೂ ಮೂಲಕಾರಣವು, **ಧರ್ಮಿಗ್ರಾಹಕಮಾನ ಶಾಸ್ತ್ರತ್ತಾಲೆ** – ಧರ್ಮಿಯೊಂದುಂಟು ಎಂದು ಹೇಳುವ ಶಾಸ್ತ್ರಮೂಲಕವಾಗಿ, ಈ ಪ್ರಕರಣದಲ್ಲಿ ಧರ್ಮಿಯು ಸರ್ವೇಶ್ವರನು, ಆತನ ಸ್ವರೂಪವನ್ನು ಕುರಿತು ಹೇಳುವ ಶಾಸ್ತ್ರಮೂಲಕವಾಗಿಯೇ, **ಅವಗತಮಾನ ವಸ್ತು ಸ್ವಭಾವಂ** - ತೋರಿಬರುವ ಧರ್ಮಗಳೇ ಮೂಲವು ಎಂಬ ತಾತ್ಪರ್ಯವು; ಆ ಶಾಸ್ತ್ರವು ಏನು ಹೇಳುತ್ತದೆಂದರೆ :—ಸರ್ವೇಶ್ವರನೇ ಸರ್ವಕ್ಕೂ ಮೂಲಕಾರಣನೆಂದೂ, **ಸರ್ವಸ್ಯ ಶರಣಂ ಸುಹೃತ್** - ಎಲ್ಲರಿಗೂ ಉಪಾಯಭೂತನಾಗಿ ರಕ್ಷಕನು ಎಂದೂ, ಆತನ ಸಂಕಲ್ಪವಿಲ್ಲದೆ **ತೇನ ವಿನಾ ತೃಣಮಪಿ ನ ಚಲತಿ** ಎಂದೂ ಹೇಳಿರುವ ಹಾಗೆ, ಯಾವ ಕಾರ್ಯವೂ ನಡೆಯುವದಿಲ್ಲವೆಂದೂ, ಅಕಿಂಚನರಾಗಿ ದೀನರಾಗಿ ಇತರೋಪಾಯಗಳಲ್ಲಿ ಅಶಕ್ತರ ವಿಷಯದಲ್ಲಿ ಪರಮ ಕೃಪೆಯುಳ್ಳವನೆಂದೂ ಹೇಳುತ್ತದೆ. **ಆಗೈಯಾಲ್** - ಆದುದರಿಂದ ಎಂದರೆ ಶಾಸ್ತ್ರವೇ ಪ್ರಮಾಣವಾದುದರಿಂದ, **ಇವ್ವರ್ಥಂ** - ಈ ಮೇಲೆ ಹೇಳಿದ ಕಾರಣಗಳಿಂದ ಸರ್ವೇಶ್ವರನೇ ಸಂಕಲ್ಪ ವಿಶೇಷ ವಿಶಿಷ್ಟನಾಗಿ ತಾನೇ ಉಪಾಯವಾಗಿ ನಿಂತು ನೆರವೇರಿಸುವನೆಂಬ ಅಭಿಪ್ರಾಯವನ್ನು, **ಯುಕ್ತಿಗಳಿಂದ ಚಲಿಪ್ಪಿಕ್ಕವೊಣ್ಣಾದು** - ಕದಲಿಸುವದು ಸರಿಯಲ್ಲವು. ಶಾಸ್ತ್ರಾರ್ಥವನ್ನು ಯುಕ್ತಿಗಳಿಂದ ಹೊಡೆದು ಹಾಕುವದು ಎಂದಿಗೂ ಸರಿಯಲ್ಲವೆಂಬ ಭಾವವು. **ಯಥಾ ನ ಕ್ರಿಯತೇ ಜ್ಯೋತ್ಸ್ನಾ** ಎಂಬ ಶ್ಲೋಕದಲ್ಲಿರುವ ಮುಕ್ತನಿಗುಂಟಾಗುವ ಸ್ವಸ್ವರೂಪಾವಿರ್ಭಾವಕ್ಕೆ ರತ್ನಮಾಲಿನ್ಯ ಹೋಗಲು ಚೇತನ ಸಂಕಲ್ಪವು ಹೇಗೆ ಆವಶ್ಯಕವೋ ಹಾಗೆಯೇ ಸರ್ವೇಶ್ವರ ಸಙ್ಕಲ್ಪವೂ ಆವಶ್ಯಕವು. ಶಾಸ್ತ್ರಪ್ರಮಾಣವು, **“ತ್ವೇ ವದನ್ತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಂ”**

ಸಾಙ್ಗಪ್ರಪದನಂ ಪ್ರತಿ ಶ್ರೀ ವಾತ್ಸ್ಯವರದಾಚಾರ್ಯಾಣಾಂ ಸಙ್ಗ್ರಹೋಕ್ತಿಃ

ಇಸ್ಸಾಙ್ಗಾನುಷ್ಠಾನತ್ತುಕ್ಕು ನಡಾದೂರಮ್ಮಾಳರುಳಿಚ್ಚೆಯುಮ್ ಶುರುಕ್ಕು—"ಅನಾದಿಕಾಲಂ ದೇವರೀರುಕ್ಕು ಅನಿಷ್ಟಾಚರಣಂ ಪಣ್ಣು

"ಶರಣ್ಯಂ ಶರಣಂ ಚ ತ್ವಾಮಾಹುರ್ದಿವ್ಯಾ ಮಹರ್ಷಯಃ ।
ಅಮೃತಂ ಸಾಧನಂ ಸಾಧ್ಯಂ ಸಂಪಶ್ಯನ್ತಿ ಮನೀಷಿಣಃ" ॥

(ರಾ. ಯುದ್ಧ ೧೨೦-೧೮)

ಇತ್ಯಾದಿ ವಾಕ್ಯಗಳ ಮೂಲಕವಾಗಿ ದ್ವಯಪೂರ್ವಖಂಡದಲ್ಲಿ ತೋರಿಬರುವ ಉಪಾಯಭಾವವನ್ನೇ ಸ್ಥಾಪಿಸುತ್ತದೆ.

ಹೀಗೆ ಶ್ರೀಮದಾಚಾರ್ಯರವರು, ಭರನ್ಯಾಸವು ಐದು ಅಂಗಗಳಿಂದಲೂ ಒಂದು ಅಂಗಿಯಿಂದಲೂ ಕೂಡಿದುದಾಗಿ ಸಕೃತ್ಕರ್ತವ್ಯವಾಗಿಯೂ, ಅಲ್ಪ ಕಾಲಾನುಷ್ಠಾನ ಉಳ್ಳದ್ದಾಗಿಯೂ, ಆ ಅಂಗಿಯೂ ಮೂರು ವಿಷಯಗಳಿಂದ ಸ್ವರೂಪ ರಕ್ಷಾ ಫಲನ್ಯಾಸ ಉಳ್ಳದ್ದಾಗಿಯೂ, ಶೇಷತ್ವ ಜ್ಞಾನದಿಂದ ಅಹಂಕಾರ ಮಮಕಾರಫಲ ಫಲೋಪಾಯತ್ವ ತ್ಯಾಗಗಳ ಮೂಲಕ ಅನುಷ್ಠಿಸತಕ್ಕದ್ದೆಂದುಪದೇಶಿಸಿದರು. ಹೀಗೆ ಉಪದೇಶಿಸಲು ಶಾಸ್ತ್ರವೇ ಪ್ರಮಾಣವೆಂದೂ ಹೇಳಲ್ಪಟ್ಟಿತು. ಇವು ಶಾಸ್ತ್ರೋಕ್ತವಾದ ಅಭಿಪ್ರಾಯಗಳಾಗಿ ತೋರಿದರೂ ಭಾಗವತರಾದ ಮಹನೀಯರ ಅನುಮತಿಯುಳ್ಳದ್ದಾದರೆ, ಆ ತನ್ನ ಅಭಿಪ್ರಾಯಗಳಿಗೆ ಇನ್ನೂ ಹೆಚ್ಚು ಬಲವೆಂದು ಬಗೆದು, ತಮಗೆ ಪ್ರಾಚಾರ್ಯರಾಗಿಯೂ, ಶ್ರೀ ಭಾಷ್ಯಕಾರರಲ್ಲಿ ಅಧಿಕರಿಸಿದ ನಾಲ್ಕು ಮಂದಿ ಶ್ರೀ ಭಾಷ್ಯ ಸಿಂಹಾಸನಾಧಿಪತಿಗಳಲ್ಲಿ ಒಬ್ಬರ ([illegible]ನೇ ಪುಟ ನೋಡಿ) ಪೌತ್ರರಾಗಿಯೂ, ಮಹಾ ಪ್ರಾಜ್ಞರಾಗಿ ಶ್ರೀ ಭಾಷ್ಯಕಾರರ ಅಭಿಪ್ರಾಯಗಳನ್ನು ಗ್ರಹಿಸಿದವರಾಗಿಯೂ ಇರುವದರಿಂದ, ತಮ್ಮ ಅಭಿಪ್ರಾಯಗಳಿಗೆ ಆ ಮಹಾ ಭಾಗವತಾನುಮತಿಯನ್ನು ತೋರಿಸಿ ಅವುಗಳನ್ನು ದೃಢೀಕರಿಸುತ್ತಾರೆ

ಈ ಸಾಙ್ಗ ಭರನ್ಯಾಸ ವಿಷಯದಲ್ಲಿ ತಮ್ಮ ಪ್ರಾಚಾರ್ಯರ ಸಙ್ಗ್ರಹೋಕ್ತಿಯು:—

ಇಸ್ಸಾಙ್ಗಾನುಷ್ಠಾನತ್ತುಕ್ಕು - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ ಐದು ಅಂಗಗಳೂ, ಮೂರು ವಿಧಗಳುಳ್ಳ ಅಂಗಿಯೂ, ಇರುವ ಭರನ್ಯಾಸವು ಅಹಂಕಾರ ಮಮಕಾರ ಫಲೋಪಾಯತ್ವ ಫಲತ್ಯಾಗಗಳಿಂದ ಅನುಷ್ಠಿಸತಕ್ಕದ್ದೆಂಬುವದಕ್ಕೆ, **ನಡಾದೂರಮ್ಮಾಳ್** - ತಮ್ಮ ಪ್ರಾಚಾರ್ಯರಾದ ಶ್ರೀ ವಾತ್ಸ್ಯ

ಗ್ಯೆಯಾಲೆ ಸಂಸರಿತ್ತು ಪೋನ್ದೇನ್; ಇನ್ರುಮುದಲ್ ಅನುಕೂಲನಾಯ್ ವರ್ತ್ತಿಕ್ಕಕ್ಕಡವೇನ್ ; ಪ್ರತಿಕೂಲಾಚರಣಂ ಪಣ್ಣಕ್ಕಡವೇನಲ್ಲೇನ್ ; ದೇವರೀರ್ರೈಪ್ಪೆರುಗೈಕ್ಕು ಎನ್ಕೈಯಿಲೊರು ಕೈ ಮುದಲಿಲ್ಲೈ ; ದೇವರೀರ್ರೈಯೇ ಉಪಾಯಮಾಗ ವರುದಿಯಿಟ್ಟೇನ್ ; ದೇವರೀರೆ ಉಪಾಯಮಾಗ ವೇಣುಮ್ ; ಅನಿಷ್ಟನಿವೃತ್ತಿಯಿಲಾದಲ್, ಇಷ್ಟಪ್ರಾಪ್ತಿಯಿಲಾದಲ್, ಎನಕ್ಕಿನಿ ಒರು ಭರಮುಣ್ಡೋ ವೆನ್ರು."

ವರದಾಚಾರ್ಯರೆಂಬ ಅಪರ ನಾಮಧೇಯವುಳ್ಳ ನಡಾದೂರಮ್ಮಾಳ್‌ರವರು, **ಅರುಳಿಚ್ಚೆಯ್ಯುಮ್ ಶುರುಕ್ಕು** - ದಯಮಾಡಿ ಉಪದೇಶಿಸಿದ ಸಂಗ್ರಹೋಕ್ತಿಯು ಏನೆಂದರೆ :—ಮುಂದಿನ ವಾಕ್ಯವು ಶ್ರಿಯಃಪತಿಯನ್ನು ಕುರಿತು ಹೇಳುವ ವಾಕ್ಯವಾಗಿರುತ್ತದೆ. "**ಅನಾದಿಕಾಲಂ** - ಅನಾದಿ ಕಾಲದಿಂದಲೂ, **ದೇವರೀರುಕ್ಕು** - ನಿಮಗೆ (ಈಶ್ವರನಿಗೆ) **ಅನಿಷ್ಟಾಚರಣಂ ಪಣ್ಣಗ್ಯೆಯಾಲೆ** - ಇಷ್ಟವಿಲ್ಲದುದನ್ನು ಆಚರಿಸುವದರಿಂದ, ಇಷ್ಟವಿಲ್ಲದುದು ಯಾವುದೆಂದರೆ, ಶಾಸ್ತ್ರದಲ್ಲಿ ಮಾಡಬೇಕೆಂದು ಹೇಳಿದುದನ್ನು ತ್ಯಜಿಸುವದು, ಮಾಡಕೂಡದೆಂದು ಹೇಳಿದುದನ್ನು ಮಾಡುವದು, ಕೃತ್ಯಾಕರಣ ಅಕೃತ್ಯಕರಣಗಳು ಇವುಗಳಿಂದ ಭಗವನ್ನಿಗ್ರಹಕ್ಕೆ ಪಾತ್ರನಾಗಿ, **ಸಂಸರಿತ್ತುಪೋನ್ದೇನ್** - "**ಕ್ಷಿಪಾಮ್ಯಜಸ್ರಂ ಮಶುಭಾನ್ ಆಸುರೀಷ್ವೇವ ಯೋನಿಷು**" (ಗೀ ೧೬. ೧೯) ಎಂದು ಹೇಳಿರುವ ಹಾಗೆ, ಪುನಃ ಪುನಃ ಸಂಸಾರದಲ್ಲೇ ಬಿದ್ದು ಹೋದೆನು ; ಇದರಿಂದ ಆಕಿಂಚನ್ಯವೂ ಅನನ್ಯಗತಿತ್ವವೂ ತೋರಿಬರುವದರಿಂದ ಅಧಿಕಾರಿ ಎಂಬುವದು ಸೂಚಿತವಾಯಿತು, **ಇನ್ರುಮುದಲ್** - ಇನ್ನು ಮುಂದಕ್ಕೆ **ಅನುಕೂಲನಾಯ್ ವರ್ತ್ತಿಕ್ಕಕ್ಕಡವೇನ್** - ಅನುಕೂಲನಾಗಿಯೇ ಇರುವೆನು ಎಂದರೆ, ಶಾಸ್ತ್ರಚೋದಿತನಾದ ಧರ್ಮಗಳನ್ನೇ ಅವಲಂಬಿಸುವೆನು, ಇದರಿಂದ ಆನುಕೂಲ್ಯಸಂಕಲ್ಪವು ತೋರಿಬರುತ್ತದೆ ; **ಪ್ರತಿಕೂಲಾಚರಣಂ** - ಪ್ರತಿಕೂಲಾಚರಣೆಯನ್ನು, **ಪಣ್ಣಕ್ಕಡವೇ ನಲ್ಲೇನ್** - ಮಾಡತಕ್ಕವನೆಂದಿಗೂ ಅಲ್ಲವು ; ಇದರಿಂದ ಪ್ರಾತಿಕೂಲ್ಯವರ್ಜನ ಸಙ್ಕಲ್ಪರೂಪಾಂಗವು ಸೂಚಿಸಲ್ಪಟ್ಟಿತು ; **ದೇವರೀರ್ರೈಪ್ಪೆರುಗೈಕ್ಕು** - ತಮ್ಮನ್ನು ಪ್ರಾಪ್ಯನಾಗಿ ಹೊಂದುವದಕ್ಕೆ, **ಎನ್ ಕೈಯಿಲ್** - ನನ್ನ ಕೈಯಲ್ಲಿ, **ಒರುಕೈಮುದಲಿಲ್ಲೈ** - ಒಂದು ಮೂಲಧನವೂ ಇಲ್ಲವು, ಎಂದರೆ ಕರ್ಮಯೋಗಾದಿ ಉಪಾಸನೆಗಳಿಗೆ ಬೇಕಾದ ಜ್ಞಾನ ಶಕ್ತ್ಯಾದಿಗಳು ಯಾವುವೂ ಇಲ್ಲವು : ಇದರಿಂದ ಆಕಿಂಚನ್ಯವು ತಿಳಿಸಲ್ಪಟ್ಟಿತು. **ದೇವರೀರ್ರೈಯೇ** - ತಮ್ಮನ್ನೇ, **ಉಪಾಯಮಾಗ** - ಉಪಾಯವಾಗಿ, **ಅರುದಿಯಿಟ್ಟೇನ್** - ವಿಶ್ವಾಸದಿಂದ ನಿಶ್ಚಯಿಸಿದೆನು ;

ಇದರಿಂದ ಮಹಾವಿಶ್ವಾಸವು ಸೂಚಿಸಲ್ಪಟ್ಟಿತು. **ದೇವರೀರೆ ಉಪಾಯಮಾಗವೇಣುಮ್** - ತಾವೇ ಉಪಾಯವಾಗಬೇಕು ; ಇಲ್ಲಿ ಗೋಪ್ತೃತ್ವವರಣ ಭರನ್ಯಾಸಗಳು ಅಡಗಿವೆ. **ಅನಿಷ್ಟ ನಿವೃತ್ತಿ ಯಿಲಾದಲ್** - ಪುಣ್ಯ ಪಾಪ ರೂಪಕರ್ಮಗಳ ನಿವೃತ್ತಿಯಲ್ಲಾಗಲಿ, **ಇಷ್ಟಪ್ರಾಪ್ತಿ ಯಿಲಾದಲ್** - ಪುರುಷಾರ್ಥ ಪ್ರಾಪ್ತಿಯಲ್ಲಾಗಲಿ, **ಇನಿ ಒರು ಭರಮುಣ್ಡೋ?** - ಇನ್ನು ಮೇಲೆ ನನಗೆ ಒಂದು ಭರ ಉಂಟೋ ? ಎಂದರೆ ಇಲ್ಲವೇ ಇಲ್ಲವು ಎಂಬ ಭಾವವು ಇದರಿಂದ ಸ್ವರೂಪ ರಕ್ಷಾಫಲಗಳಲ್ಲಿ ತನಗೆ ಸಂಬಂಧವಿಲ್ಲವೆಂದೂ ಸಂಪೂರ್ಣಭರವು ಸರ್ವೇಶ್ವರನಲ್ಲೇ ಎಂದೂ ಹೇಳಲ್ಪಟ್ಟಿತು. **ಎನ್ರು** ಎಂದರೆ ಎಂಬದಾಗಿ ಎಂಬು ಹೇಳಿದುದರಿಂದ ಅಭಿಯುಕ್ತರ ಸಂಗ್ರಹ ವಾಕ್ಯವು ಅಲ್ಲಿಗೆ ಮುಗಿಯಿತು ಎಂಬ ಭಾವವು.

ಸಾಂಗ ಪ್ರಪದನಾನುಷ್ಠಾನದ ಅನುಸಂಧಾನ ಕ್ರಮವನ್ನೂ ಶ್ರೀವಾದಾಚಾರ್ಯವರೇ ನ್ಯಾಸದಶಕವೆಂಬ ಹತ್ತು ಶ್ಲೋಕಗಳಿಂದ ತಾವೇ ಸಂಗ್ರಹಿಸಿರುತ್ತಾರೆ. ನಿತ್ಯವೂ ಭಗವದಾರಾಧನಕಾಲದಲ್ಲಿ ಪಠನೀಯವಾದವು.

ಮೇಲಿನ ಸಂಗ್ರಹವಾಕ್ಯದಲ್ಲಿ ನಡಾದೂರಮ್ಮಾಳ್ರವರು, **ಇನ್ರು ಮುದಲ್ ಅನುಕೂಲನಾಯ್ ವರ್ತಿಕ್ಕಕ್ಕಡವೇ೯** ಎಂದು ಹೇಳಿರುವದರಿಂದ ಯಾವಜ್ಜೀವವೂ ಅನುಕೂಲ ಪ್ರವೃತ್ತಿಯುಳ್ಳವನಾಗಿರುವೆನೆಂದು ಹೇಳಿರುತ್ತಾರೆ. ಹಾಗೆಯೇ ಪ್ರತಿಕೂಲಾಚರಣೆಯನ್ನು ಎಂದಿಗೂ ಮಾಡುವದಿಲ್ಲವೆಂದು ಹೇಳುತ್ತಾರೆ. ಶ್ರೀ ಕೂರೇಶ ವರದಾಚಾರ್ಯರೇ ಮೊದಲಾದ ಮಹನೀಯರುಗಳ ಅಭಿಪ್ರಾಯವೂ ಕೂಡ ಹಾಗೆಯೇ ಆಗಿರುತ್ತದೆ. ಹಾಗಾದರೆ, ಮುಂದಿನ ಪ್ರವೃತ್ತಿಗಳೂ ಕೂಡ ಪ್ರಪದನಕ್ಕೆ ಅಂಗವೇ ? ಇಲ್ಲವೇ ತಾತ್ಕಾಲಿಕ ಸಂಕಲ್ಪ ಮಾತ್ರವೇ ಅಂಗವೇ ? ಮುಂದೆ ಯಾವಜ್ಜೀವವೂ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿಗಳು ಪ್ರಪನ್ನನಿಗೆ ಅವಶ್ಯಕವಲ್ಲವೇ ? ಹಾಗೆ ಉತ್ತರಕಾಲಿಕ ಪ್ರವೃತ್ತಿಗಳೂ ಕೂಡ ಅಂಗವಾದರೆ ಪ್ರಪದನವು ಸಕೃತ್ತಾಗಿ ಅಲ್ಪಕಾಲ ಕರ್ತವ್ಯವೆಂಬ ಪ್ರಮಾಣಕ್ಕೆ ವಿರೋಧವಾಗುವದಿಲ್ಲವೇ ? ಯಾವಜ್ಜೀವವೃತ್ತಿಯಿಂದ ಅಂಗಪೂರ್ಣವಾದರೆ, ಪೂರ್ವಭಾವಿಯಾಗಿ ಅಂಗಗಳು ಇಲ್ಲವಾದುದರಿಂದ ಅಂಗಿ ನಿಷ್ಪತ್ತಿಯೂ **"ಕಾರಣಾಭಾವಾತ್ ಕಾರ್ಯಾಭಾವಃ"** ಎಂದು ಹೇಳಿರುವಹಾಗೆ ಲಭಿಸಲಾರದು ಇತ್ಯಾದಿ ಶಂಕೆಗಳಿಗೆ ಸಮಾಧಾನವನ್ನು ಮುಂದೆ ಹೇಳುತ್ತಾರೆ. ಆದರೆ ಮೇಲಿನ ಮಹನೀಯರುಗಳ ಅಭಿಪ್ರಾಯವು ತಪ್ಪಲ್ಲವು ಪ್ರಪದನವು ಸಕೃತ್ಕರ್ತವ್ಯವೆಂಬ ಶಾಸ್ತ್ರವೂ ತಪ್ಪಲ್ಲವು. ಎರಡನ್ನೂ ಸಮನ್ವಯಿಸಿ ಸಮಂಜಸಾರ್ಥವನ್ನುಪದೇಶಿಸುತ್ತಾರೆ. ಭರನ್ಯಾಸದ ಕಾಲದ ಆನುಕೂಲ್ಯಪ್ರವೃತ್ತಿ ಪ್ರಾತಿಕೂಲ್ಯನಿವೃತ್ತಿಗಳ ಸಂಕಲ್ಪಮಾತ್ರದಿಂದಲೇ ಅಂಗಗಳ ಸಿದ್ಧಿಯೆಂದೂ, ಉತ್ತರ

ಉತ್ತರ ಕಾಲಾನುವೃತ್ತ ಆನುಕೂಲ್ಯ ಸಙ್ಕಲ್ಪಾದೀನಾಂ ಅಙ್ಗತ್ವನಿರಾಸಃ

ಇವ್ವಿಡತ್ತಿಲ್ ಆನುಕೂಲ್ಯ ಸಙ್ಕಲ್ಪಾದಿಗಳ್ ಉಪಾಯ ಪರಿಕರವಾಯ್ ಸಕೃತ್ತಾಯಿರುಕ್ಕುಮ್. ಮೇಲಿವನ್ ಕೋಲಿನವನುಕೂಲವೃತ್ತ್ಯಾದಿಗಳೋಡೆ ಪೋರುಗಿರವಿಡವುಮ್ ಉಪಾಯ ಫಲವಾಯ್ ಯಾವದಾತ್ಮಭಾವಿಯಾಯಿರುಕ್ಕುಮ್.

[illegible]

ಕಾಲಿಕ ಪ್ರವೃತ್ತಿ ನಿವೃತ್ತಿಗಳೂ ಪ್ರಪದನ ಫಲವೆಂಬಭಿಪ್ರಾಯವನ್ನು ಸೂಚಿಸುವದಲ್ಲದೆ, ಅದರ ಮೇಲೂ ಉಂಟಾಗುವ ಪೂರ್ವಪಕ್ಷಗಳಿಗೂ ಸಹ ಸಮಾಧಾನ ಹೇಳುತ್ತಾರೆ.

ಪ್ರಪದನಾನಂತರವೂ ಆನುಕೂಲ್ಯ ಸಂಕಲ್ಪಾದಿಗಳ ಅಙ್ಗತ್ವ ಉಂಟೆಂಬ ಶಂಕಾನಿರಾಸವು.

ಇವ್ವಿಡತ್ತಿಲ್ - ಈ ಸಂದರ್ಭದಲ್ಲಿ ಎಂದರೆ ಸಾಂಗ ಭರನ್ಯಾಸಾನುಷ್ಠಾನ ಸಂದರ್ಭದಲ್ಲಿ, **ಆನುಕೂಲ್ಯ ಸಙ್ಕಲ್ಪಾದಿಗಳ್** - ಇಲ್ಲಿ ಆದಿ ಪದದಿಂದ ಆನುಕೂಲ್ಯಸಂಕಲ್ಪ ಪ್ರಾತಿಕೂಲ್ಯ ವರ್ಜನಗಳೆರಡೂ ಹೇಳಲ್ಪಟ್ಟವು, **ಈ ಉಪಾಯ ಪರಿಕರವಾಯ್** - ಈ ಭರನ್ಯಾಸಕ್ಕೆ ಅಂಗವಾಗಿ, **ಸಕೃತ್ತಾಯಿರುಕ್ಕುಮ್** - ಆ ಭರನ್ಯಾಸ ಕಾಲಿಕಮಾತ್ರವಾಗಿ ಆ ಕ್ಷಣಕಾಲ ಮಾತ್ರ ಅಂಗಗಳಾಗಿರುತ್ತವೆ. ಆನುಕೂಲ್ಯ ಸಂಕಲ್ಪವೂ ಪ್ರಾತಿಕೂಲ್ಯ ವರ್ಜನವೂ ಉತ್ತರಕಾಲದಲ್ಲಿ ಬೇಡವೋ ಎಂದರೆ, ಆವಶ್ಯಕವೇನೋ ಹೌದು; ಆದರೆ ಆಗ ಅವು ಉಪಾಯ ಫಲವಾಗಿ ಪ್ರಾಪ್ತವಾಗುತ್ತವೆಂದು ಹೇಳುತ್ತಾರೆ. **ಮೇಲ್** - ಆ ಭರನ್ಯಾಸಾನಂತರ, ಇವನ್ **ಕೋಲಿನ ವನುಕೂಲವೃತ್ತ್ಯಾದಿಗಳೋಡೆ** - ಈ ಭರನ್ಯಾಸಾನುಷ್ಠಾನ ಮಾಡಿದವನು ಆ ಕಾಲದಲ್ಲಿ ಪ್ರಾರ್ಥಿಸಿದ ಮುಂದಿನ ಕಾಲದಲ್ಲಿ ಅನುಕೂಲ ಪ್ರವೃತ್ತಿ, ಪ್ರತಿಕೂಲ ನಿವೃತ್ತಿಗಳೊಂದಿಗೆ, **ಪೋರುಗಿರವಿಡವುಮ್** ಹೋಗುವ ಸಂದರ್ಭವು, **ಉಪಾಯಫಲವಾಯ್** - ಆ ಭರನ್ಯಾಸದ ಫಲವಾಗಿ, **ಯಾವದಾತ್ಮಭಾವಿಯಾಯಿರುಕ್ಕುಂ** - ಯಾವಜ್ಜೀವವೂ ಇರುವದಾಗಿರುತ್ತದೆ. ಈತನು ಮಾಡಿದ ಭರನ್ಯಾಸಾನುಷ್ಠಾನದ ಉತ್ತರಕಾಲದ ಅನುಕೂಲ ಪ್ರವೃತ್ತಿ, ಪ್ರತಿಕೂಲ ನಿವೃತ್ತಿಗಳೂ ಕೂಡ ಅಂಗವಾದ ಪಕ್ಷದಲ್ಲಿ ಭರನ್ಯಾಸಕಾಲದಲ್ಲಿ ಈ ಅಂಗಗಳು ಪೂರ್ಣತೆಯನ್ನು ಹೊಂದಲಿಲ್ಲವೆಂದು ಏರ್ಪ

ಡುತ್ತಿದೆ. ಹಾಗೆ ಅಂಗಗಳೇ ಇಲ್ಲವಾದರೆ ಅಂಗಿ ನಿಷ್ಪತ್ತಿಯೂ ಸಹ ಇಲ್ಲವಾಗುತ್ತದೆ. ಆದುದರಿಂದ ಭರನ್ಯಾಸ ಕಾಲದಲ್ಲೇ ಈ ಅಂಗಗಳಿವೆಯೆಂದು ಭಾವಿಸಬೇಕಾಗಿರುವದರಿಂದ ಉತ್ತರಕಾಲದ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿಗಳ ಸಂಕಲ್ಪರೂಪ ಅಂಗವು ಆವಶ್ಯಕವೆಂದು ಭಾವಿಸಬಹುದು. ಹೇಗೆಂದರೆ ಉಪನಯನಕಾಲದಲ್ಲಿ ಕುಮಾರನು ಆಚಾರ್ಯನ ಆಜ್ಞೆಯ ಪ್ರಕಾರ, ಬ್ರಹ್ಮಚಾರಿಯಾಗಿರು, ನಿತ್ಯಕರ್ಮಾನುಷ್ಠಾನವನ್ನಾಚರಿಸು. ಭಿಕ್ಷಾಚರಣೆಮಾಡು, ಎಂದರೆ, ಬಾಢಂ ಎಂದು ಸಂಕಲ್ಪಿಸುತ್ತಾನೋ, ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು. ಹೀಗೆ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿಗಳ ಸಂಕಲ್ಪವೇ ಅಂಗಗಳೆಂದು ಭಾವಿಸಿದೇ ಶ್ರೀ ನಡಾದೂರಮ್ಮಾಳ್‌ರವರ ಸಂಗ್ರಹವಾಕ್ಯದಲ್ಲಿ "ಅನುಕೂಲನಾಯ್ ವರ್ತಿಕ್ಕಕ್ಕಡವೇನ್ ಪ್ರತಿಕೂಲಾಚರಣಂ ಪಣ್ಣಕ್ಕಡವೇನಲ್ಲೇನ್" ಎಂಬ ಸಂಕಲ್ಪವು ತೋರಿಬರುತ್ತದೆ.

ಆದರೆ ಆನುಕೂಲ್ಯಸ್ಯ ಸಂಕಲ್ಪಃ ಎಂಬುವದರಲ್ಲಿ, ಸಂಕಲ್ಪವೇ ಅಂಗವಾಗಿರುವದೇನೋ ಸರಿಯೇ. ಪ್ರಾತಿಕೂಲ್ಯಸ್ಯವರ್ಜನಂ ಎಂಬಲ್ಲಿ ಸಂಕಲ್ಪವೇನೂ ತೋರಿಬರುವದಿಲ್ಲವು, ಪ್ರಾತಿಕೂಲ್ಯ ಸ್ವರೂಪ ನಿವೃತ್ತಿ ಮಾತ್ರ ತೋರಿಬರುತ್ತದೆ. ಹಾಗಾದರೆ ಉತ್ತರಕಾಲದಲ್ಲಿ ಪ್ರಾತಿಕೂಲ್ಯ ನಿವೃತ್ತಿಯು ಆವಶ್ಯಕವಿಲ್ಲವೋ ಎಂದರೆ ಆನುಕೂಲ್ಯಪ್ರವೃತ್ತಿ ಹೇಗೆ ಆವಶ್ಯಕವೋ ಹಾಗೆಯೇ ಪ್ರಾತಿಕೂಲ್ಯ ನಿವೃತ್ತಿಯೂ ಆವಶ್ಯಕವು, ಹೀಗಿರುವಲ್ಲಿ ಇದಕ್ಕೆ ಸಕೃತ್ತ್ವ ಹೇಗೆ ಸರಿಹೋಗುತ್ತದೆ? ಹಾಗೆಯೇ ಶ್ರೀ ನಡಾದೂರಮ್ಮಾಳ್ ಮೊದಲಾದವರು ಪ್ರತಿಕೂಲಾಚರಣೆಯನ್ನು ಎಂದಿಗೂ ಮಾಡುವದಿಲ್ಲವೆಂದು ಉತ್ತರಕಾಲಕ್ಕೆ ಅನ್ವಯಿಸುವ ಹಾಗೆ ಹೇಳಿರುವದು ಸರಿಯೋ? ಎಂದರೆ, ಇಲ್ಲಿಯೂ ಕೂಡ ಸಂಕಲ್ಪರೂಪವಾದುದೇ ಎಂಬಭಿಪ್ರಾಯವು ; ಹೇಗೆಂದರೆ :—

ಪ್ರಾತಿಕೂಲ್ಯಂ ಪರಿತ್ಯಕ್ತ ಮಾನುಕೂಲ್ಯಂ ಚ ಸಂಶ್ರಿತಮ್ ।
ಆನುಕೂಲ್ಯೇ ತರಾಭ್ಯಾಂತು ವಿನಿವೃತ್ತಿ ರಪಾಯತಃ ॥

ಎಂಬ ಪ್ರಮಾಣದಲ್ಲಿ ಎರಡರ ಸ್ವರೂಪ ಮಾತ್ರವೇ ತೋರಿಬರುವ ಹಾಗೆ ಹೇಳಿರುವದರಿಂದ. ಅನುಕೂಲ್ಯ ಪ್ರವೃತ್ತಿ ಸ್ವರೂಪವೇ ಇಲ್ಲಿ ತೋರಿಬಂದರೂ ಆನುಕೂಲ್ಯ ಪ್ರವೃತ್ತಿ ಸಂಕಲ್ಪವೇ ಎಂದು ಹೇಗೆ ನಿರ್ಧರಿಸಲ್ಪಟ್ಟಿರುತ್ತದೆಯೋ ಹಾಗೆಯೇ ಪ್ರಾತಿಕೂಲ್ಯವರ್ಜನದ ಸಂಕಲ್ಪವೆಂದು, ಹಿಂದೆ ಸಂಕಲ್ಪ ಶಬ್ದವಿರುವದರಿಂದ ಭಾವಿಸಬಹುದು ಎಂದೂ, ಪ್ರಾತಿಕೂಲ್ಯಸ್ಯವರ್ಜನಂ ಎಂದು ಇಷ್ಟು ಮಾತ್ರವೇ ಅಂಗವಾಗಿ ಹೇಳಿರುವದರಿಂದ, ಸಂಕಲ್ಪವೆಂದು, ಅರ್ಥ ಹೇಳಲಸಾಧ್ಯವೆಂದೂ, ಭಾವಿಸುವದಾದರೂ, ಸಮಾಧಾನವನ್ನು ಹೇಳಬಹುದೆಂದೂ, ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ.

ಇವತ್ತಿಲ್ ಪ್ರಾತಿಕೂಲ್ಯವರ್ಜನಮುಮ್ ಅನ್ಮಾಳ್ ಅರುಳಿಚ್ಚೆಯ್ದ ಪಡಿಯೇ ಆನುಕೂಲ್ಯಸಂಕಲ್ಪಮ್ ಪೋಲೆ ಸಙ್ಕಲ್ಪರೂಪಮಾನಾಲುಮ್ ಸಕೃತ್ಕರ್ತ್ತವ್ಯಮೆನ್ನು ಮಿಡಂ ಸುಸ್ಪಷ್ಟಂ.

ಇವತ್ತಿಲ್ – ಈ ಭರನ್ಯಾಸಕ್ಕೆ ಅಂಗಗಳೆಂದು ಹೇಳಿರುವವುಗಳಲ್ಲಿ, **ಪ್ರಾತಿಕೂಲ್ಯವರ್ಜನವೂ** ಕೂಡ, **ಅನ್ಮಾಳ್ ಅರುಳಿಚ್ಚೆಯ್ದಪಡಿಯೇ** - ನಡಾದೂರಮ್ಮಾಳ್‌ರವರು ಮೇಲಿನ ಸಂಗ್ರಹವಾಕ್ಯದಲ್ಲಿ ಹೇಳಿರುವ ಹಾಗೆ **ಆನುಕೂಲ್ಯ ಸಙ್ಕಲ್ಪಮ್ ಪೋಲೆ ಸಙ್ಕಲ್ಪರೂಪಮಾನಾಲುಮ್** – ಆನುಕೂಲ್ಯಸಂಕಲ್ಪವು ಹೇಗೆ ಸಂಕಲ್ಪರೂಪವೋ ಹಾಗೆಯೇ ಇದೂ ಕೂಡ ಸಂಕಲ್ಪರೂಪವಾದರೂ ಕೂಡ, **ಸಕೃತ್ಕರ್ತ್ತವ್ಯಮೆನ್ನು** – ಆ ಭರನ್ಯಾಸ ಕಾಲಿಕವಾಗಿ, ಉತ್ತರೋತ್ತರಕಾಲಿಕವಾಗದೆ ಒಂದೇ ಸಲ ಮಾಡತಕ್ಕದ್ದು, **ಎನ್ನುಮಿಡಂ** - ಎಂಬುವ ಸಂದರ್ಭವು, **ಸುಸ್ಪಷ್ಟಂ** - ಸುವ್ಯಕ್ತವು. ಉಪನಯನದಲ್ಲಿ ಮುಂದಕ್ಕೆ, ಬ್ರಹ್ಮಚಾರಿಯಾಗಿರುವನೆಂಬ ಸಂಕಲ್ಪವು ಹೇಗೆ ಸರಿಯೋ, ಹಾಗೆಯೇ ಮುಂದಕ್ಕೆ ಅನುಕೂಲಪ್ರವೃತ್ತಿಯುಳ್ಳವನಾಗಿರುವೆನೆಂಬ ಸಂಕಲ್ಪವೂ ಸರಿಯೆಂದು ಹಿಂದೆ ಹೇಳಲ್ಪಟ್ಟಿತು ಅದರ ಹಾಗೆಯೇ ಪ್ರಾತಿಕೂಲ್ಯ ನಿವೃತ್ತಿಯುಳ್ಳವನಾಗಿರುವೆನೆಂಬ ಸಹ ಸರಿಯಾಗಿ ತೋರುವದರಿಂದ, ಶ್ರೀ ನಡಾದೂರಮ್ಮಾಳ್‌ರವರ ಅಭಿಪ್ರಾಯವೂ ಸಂಕಲ್ಪವು ಸಹ ಸರಿಯೇ ಎಂದು ತಮ್ಮ ಪ್ರಾಚಾರ್ಯರವರ ಅಭಿಪ್ರಾಯದಸಾಮಂಜಸ್ಯವನ್ನು ಪ್ರದರ್ಶನಮಾಡಿದರು. ಯಾವಾಗ ಪ್ರಾತಿಕೂಲ್ಯವರ್ಜನಂ ಎಂಬುವದರ ಅಭಿಪ್ರಾಯವೂ ಪ್ರಾತಿಕೂಲ್ಯವರ್ಜನದ ಸಂಕಲ್ಪವೆಂದಾಯಿತೋ ಆಗ ಸಂಕಲ್ಪ ಮಾತ್ರ ಕ್ಷಣಿಕವಾದುದರಿಂದ ಸಕೃತ್ಕರ್ತ್ತವ್ಯತ್ವವು ಉಂಟಾಯಿತು ಎಂಬ ಭಾವವು.

ಅವರೆ ಈ ಪ್ರಾತಿಕೂಲ್ಯವರ್ಜನಕ್ಕೆ ಮೂರು ವಿಧವಾದ ಅಭಿಪ್ರಾಯಗಳನ್ನು ಹೇಳಬಹುದು. ಮೇಲೆ ಶ್ರೀ ನಡಾದೂರಮ್ಮಾಳ್‌ರವರ ಅಭಿಪ್ರಾಯದಂತೆ (೧) ಪ್ರಾತಿಕೂಲ್ಯದಿಂದ ನಿವೃತ್ತಿಯುಳ್ಳವನಾಗಿರುವೆನೆಂಬ ತಾತ್ಕಾಲಿಕ ಸಂಕಲ್ಪವು (೨) ಪ್ರಾತಿಕೂಲ್ಯ ಪ್ರವೃತ್ತಿರೂಪ ಮನೋನಿಶ್ಚಯದಿಂದ ಬಿಡುಗಡೆಯು ಅಥವಾ (೩) ಪ್ರಾತಿಕೂಲ್ಯ ಸ್ವರೂಪದಿಂದಲೇ ನಿವೃತ್ತಿಯು. ಶ್ರೀ ನಡಾದೂರಮ್ಮಾಳ್‌ರವರ ಅಭಿಪ್ರಾಯವು ಹಾಗಾದರೂ, ಪ್ರಾತಿಕೂಲ್ಯ ಸ್ವರೂಪ ನಿವೃತ್ತಿಯೇ ಸರಿಯಾದ ಅಭಿಪ್ರಾಯವೆಂದು ಭಾವಿಸಿ, ದೇಹಾವಸಾನದವರಿವಿಗೂ ಇದರ ಸ್ವರೂಪ ನಿವೃತ್ತಿಯು ಬೇಕಾಗಿರುವದರಿಂದ ಇದಕ್ಕೆ ಸಕೃತ್ಕರ್ತ್ತವ್ಯತ್ವ ಹೇಗೆ? ಎಂಬಾಕ್ಷೇಪಕ್ಕೂ ಸಹ ಸರಿಯಾದ ಸಮಾಧಾನವನ್ನು ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ.

೧. "ಅಪಾಯೇಭ್ಯೋ ನಿವೃತ್ತೋಽಸ್ಮಿ" ಎಂಗಿರಪಡಿಯೇ ಅಭಿಸನ್ಧಿ ವಿರಾಮ ಮಾದಲ್, ಪ್ರಾತಿಕೂಲ್ಯ ಸ್ವರೂಪ ನಿವೃತ್ತಿ ಯಾದಲಾನಾಲುಮ್, ಅದಿಲ್ ಪ್ರಥಮಕ್ಷಣಮಂಗಮಾಯ್ ಮೇಲುಳ್ಳದು ಫಲಮಾಗಕ್ಕಡವದು. ಇಪ್ಪಡಿ ವಿಶ್ವಾಸತ್ತಿಲುಮ್ ಪಾರ್ಪ್ಪದು.

"ಅಪಾಯೇಭ್ಯೋ ನಿವೃತ್ತೋಽಸ್ಮಿ" ಭರನ್ಯಾಸ ವಿಘ್ನಗಳಿಂದ ನಿವೃತ್ತನಾಗಿರುತ್ತೇನೆ, ಎಙ್ಗಿರಪಡಿಯೇ – ಎಂದು ಲಕ್ಷ್ಮೀತನ್ತ್ರದಲ್ಲಿ ಹೇಳಿರುವ ಹಾಗೆ ಅಭಿಸನ್ಧಿವಿರಾಮಮಾದಲ್ – ಪ್ರಾತಿಕೂಲ್ಯವರ್ಜನಂ ಎಂದು ಹೇಳಿರುವದರ ಅಭಿಪ್ರಾಯವು ಪ್ರತಿಕೂಲಾಚರಣೆ ಮಾಡಬೇಕೆಂಬ ಅಭಿಸಂಧಿಯ ನಿವೃತ್ತಿ ಎಂಬದಾಗಿಯಾದರೂ, ಅಥವಾ ಪ್ರತಿಕೂಲ ಭಾವದಿಂದ ನಿವೃತ್ತಿ ಎಂಬಭಿಪ್ರಾಯವಾದರೂ ಸರಿಯೇ, ಅದಿಲ್ ಪ್ರಥಮಕ್ಷಣ ಮಙ್ಗಮಾಯ್ - ಆ ಭರನ್ಯಾಸದ ಕ್ಷಣದ ಪ್ರತಿಕೂಲಾಭಿಸನ್ಧಿವಿರಾಮವನ್ನಾಗಲಿ ಅಥವಾ ಪ್ರಾತಿಕೂಲ್ಯಸ್ವರೂಪ ನಿವೃತ್ತಿಯನ್ನಾಗಲಿ, ಅಂಗವಾಗಿಟ್ಟುಕೊಂಡು, ಮೇಲುಳ್ಳದು – ಉತ್ತರಕಾಲಿಕವಾದುದನ್ನು, ಫಲಮಾಗಕ್ಕಡವದು - ಆ ಭರನ್ಯಾಸ ಫಲವಾಗಿ ಆಗಬಹುದು. ಪ್ರತಿಕೂಲಾಚರಣ ಮನಸ್ಸಿನಿಂದ ನಿವೃತ್ತಿಯಾಗಲಿ, ಅಥವಾ ಪ್ರಾತಿಕೂಲ್ಯದ ನಿವೃತ್ತಿಯಾಗಲಿ, ಆ ಭರನ್ಯಾಸ ಕಾಲದಲ್ಲಿ ಉಂಟಾಗಬಹುದು. ಅದೇ ಅಂಗವಾಗಿ ಭಾವಿಸಬಹುದು. ಆದರ ಉತ್ತರಕಾಲದ ನಿವೃತ್ತಿಗಳನ್ನಾದರೋ ಆ ಭರನ್ಯಾಸದ ಫಲವಾಗಿ ಭಾವಿಸಬಹುದೆಂದು ಅಪ್ಪಣೆ ಕೊಡಿಸಿರುತ್ತಾರೆ.

ಈ ಮೇಲಿನ ಎರಡು ಅಂಗಗಳಿಗೂ ಉಂಟಾದ ಆಕ್ಷೇಪಣೆಗಳಹಾಗೆ ಮಹಾವಿಶ್ವಾಸವೆಂಬ ಅಂಗಕ್ಕೂ ಕೂಡ ಉಂಟು. ಹೇಗೆಂದರೆ, ಸರ್ವೇಶ್ವರನು ರಕ್ಷಿಸೇ ರಕ್ಷಿಸುವನೆಂಬ ಪೂರ್ಣ ನಂಬಿಕೆಯು ಭರನ್ಯಾಸಕಾಲದಲ್ಲಿ ತಾತ್ಕಾಲಿಕವಾಗಿದ್ದರೆ ಮಾತ್ರ ಸಾಕೇ, ಅಥವಾ ಯಾವಜ್ಜೀವವೂ ಇರತಕ್ಕದ್ದೇ, ಎಂದು ವಿಕಲ್ಪಿಸಿ ನೋಡಿದರೆ, "ತಥಾ ಪುಂಸಾ ಮವಿಸ್ರಂಭಾತ್ಪ್ರಪತ್ತಿಃ ಪ್ರಚ್ಯುತಾಭವೇತ್" ಎಂದು ಹೇಳಿರುವದರಿಂದ ಇಂತಹ ಪೂರ್ಣವಿಶ್ವಾಸವಿಲ್ಲದೇ ಹೋದರೆ ಮಾಡಿದ ಪ್ರಪತ್ತಿಯು ವ್ಯರ್ಥವಾಗಬಹುದೆಂಬದಾಗಿ ತೋರಿಬರುತ್ತದೆ. ಹಾಗೆ ಉತ್ತರಕಾಲಿಕ ವಿಶ್ವಾಸವು ಅವಶ್ಯಕವಾದರೆ, ಅದು ಭರನ್ಯಾಸಕಾಲದಲ್ಲಿ ಹೇಗೆ ಅಙ್ಗವಾದೀತೆಂಬ ಪೂರ್ವಪಕ್ಷವು ಒದಗುತ್ತದೆ. ಆದುದರಿಂದ ತಾತ್ಕಾಲಿಕ ಮಹಾ ವಿಶ್ವಾಸವನ್ನು ಅಂಗವಾಗಿ ಭಾವಿಸಿ, ಉತ್ತರಕಾಲಿಕವನ್ನು ಆದರ ಫಲರೂಪವಾಗಿ ಭಾವಿಸ

---

೧. ಲಕ್ಷ್ಮೀತಂತ್ರ ೫೦-೨೧೫

" ಪ್ರವೃತ್ತಿರನುಕೂಲೇಷು ನಿವೃತ್ತಿ ಶ್ಚಾನ್ಯತಃ ಫಲಂ।
ಪ್ರಾರಬ್ಧ ಸುಕೃತಾಚ್ಚ ಸ್ಯಾ ತ್ಸಂಕಲ್ಪೇ ಚ ಪ್ರಪತ್ತಿತಃ ॥"

ತಕ್ಕದ್ದು ನ್ಯಾಯವೆಂಬ ಭಾವದಿಂದ, ಇಪ್ಪಡಿವಿಶ್ವಾಸತ್ತಿಲ್ ಸಾರ್‌ಪ್ಪದು - ಹೀಗೆ ವಿಶ್ವಾಸವೆಂಬ ಅಂಗದಲ್ಲೂ ತಿಳಿಯತಕ್ಕದ್ದು ಎಂದು ಅಪ್ಪಣೆ ಕೊಡಿಸಿರುತ್ತಾರೆ.

ವಿವಾದಾಸ್ಪದವಾದ ಸಂದರ್ಭಗಳಲ್ಲಿ ಶ್ರೀಮದಾಚಾರ್ಯರವರು ವಿವೇಚನ ಮಾಡಿ ಸರ್ವಸಮಂಜಸವಾದ ಸಿದ್ಧಾನ್ತರೂಪ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಅಂತಹ ಸಿದ್ಧಾನ್ತರೂಪಾಭಿಪ್ರಾಯವು ಚೆನ್ನಾಗಿ ಹೃದಯದಲ್ಲಿ ನೆಲಗೊಳ್ಳುವ ಉದ್ದಿಶ್ಯವಾಗಿ ಆ ಅಭಿಪ್ರಾಯಗಳನ್ನು ತಮ್ಮ ಸ್ವಂತ ಕಾರಿಕೆಗಳ ಮೂಲಕ ತಿಳಿಸುವ ಪದ್ಧತಿಯುಂಟು. ಅದನ್ನನುಸರಿಸಿ ಈ ಸಂದರ್ಭದಲ್ಲೂ ಒಂದು ಕಾರಿಕೆಯನ್ನು ಅನುಗ್ರಹಿಸುತ್ತಾರೆ. ಆ ಕಾರಿಕೆಯಲ್ಲಿ ಇನ್ನೊಂದು ಆಕ್ಷೇಪಣೆಗೂ ಸಮಾಧಾನವನ್ನು ಹೇಳುತ್ತಾರೆ ಏನೆಂದರೆ, ಪ್ರಾತಿಕೂಲ್ಯವರ್ಜನದಲ್ಲೂ, ಮಹಾವಿಶ್ವಾಸದಲ್ಲೂ ತಾತ್ಕಾಲಿಕವಾದುದನ್ನು ಅಂಗವಾಗಿ ಭಾವಿಸ ಸಕೃತ್ತ್ವವನ್ನು ಭಾವಿಸಬಹುದೆಂದೂ, ಉತ್ತರಕಾಲಿಕವಾದುದನ್ನು ಈ ಭರನ್ಯಾಸದ ಫಲನೆಂದೂ ತಿಳಿಸುತ್ತಾರೆ. ಆದರೆ ಅನೇಕರು ಭರನ್ಯಾಸವನ್ನನುಷ್ಠಿಸದೆ ಯಾವಜ್ಜೀವವೂ ಪ್ರಾತಿಕೂಲ್ಯವರ್ಜನಾದಿಗಳನ್ನುಳ್ಳವರಾಗಿರುತ್ತಾರಲ್ಲಾ ಆ ಸಂದರ್ಭದಲ್ಲಿ ಹೇಗೆ ಎಂದರೆ, ಅಂಥಾವರಿಗೆ ಪ್ರಾರಬ್ಧ ಸುಕೃತದ ಮೂಲಕ ಅದು ಪ್ರಾಪ್ತವೆಂದುಪದೇಶಿಸುತ್ತಾರೆ.

ಅನುಕೂಲೇಷು - ಪ್ರಪತ್ತ್ಯುತ್ತರಕಾಲಿಕಗಳಾದ ಅನುಕೂಲವಾದ ವ್ಯಾಪಾರಗಳಲ್ಲಿ ಎಂದರೆ ಶಾಸ್ತ್ರದಲ್ಲಿ ಹೇಳಿರುವ ವಿಧಿ ನಿಷೇಧ ವಾಕ್ಯಗಳನ್ನನುಸರಿಸಿರುವ ಪ್ರವೃತ್ತಿ ನಿವೃತ್ತಿಗಳಲ್ಲಿ, **ಅನ್ಯತಃ ನಿವೃತ್ತಿಶ್ಚ** - ಇನ್ನೊಂದಾದ ಎಂದರೆ ಪ್ರತಿಕೂಲ ವ್ಯಾಪಾರಗಳಿಂದ ನಿವೃತ್ತಿಯೂ ಕೂಡ, ಇವೆರಡೂ ಕೂಡ, **ಫಲಂ** - ಫಲಭೂತವಾದವುಗಳೇ ಸರಿ ಈ ಫಲಗಳು ಯಾವ ಕಾರಣಗಳಿಂದುಂಟಾಗಬಹುದೆಂಬುವದನ್ನು ಉತ್ತರಾರ್ಧದಿಂದ ತಿಳಿಸುತ್ತಾರೆ :— ಆ ಫಲವು, **ಪ್ರಾರಬ್ಧ ಸುಕೃತಾಚ್ಚ** – ಪ್ರಾರಬ್ಧ ಸುಕೃತದಿಂದಾಗಲಿ, **ಸ್ಯಾತ್** - ಉಂಟಾಗುತ್ತದೆ, ಅಥವಾ **ಸಙ್ಕಲ್ಪೇ** – ಪ್ರಪದನಕಾಲದಲ್ಲಿ ಈ ಆನುಕೂಲ್ಯ ಪ್ರವೃತ್ತಿ ಪ್ರಾತಿಕೂಲ್ಯ ನಿವೃತ್ತಿಗಳು ಸಂಕಲ್ಪಿಸಲ್ಪಡಲಾಗಿ, **ಪ್ರಪತ್ತಿತಶ್ಚ** - ಪ್ರಪದನದಿಂದಲೂ ಕೂಡ, **ಸ್ಯಾತ್** - ಉಂಟಾಗುತ್ತದೆ. ಯಾವಜ್ಜೀವವೂ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿಗಳಿಂದುಂಟಾಗುವದು ಫಲರೂಪವಾಗಿಯೇ ಪ್ರಾಪ್ತವಾಗು

ಆಕೈಯಾಲ್ ಇರುನ್ದನಾಳಿಲ್ ನಿರಪರಾಧ ಕೈಙ್ಕರ್ಯತ್ತೈಯುಮ್ ಪ್ರಾರಬ್ಧಶರೀರಾನನ್ತರಮ್ ಮೋಕ್ಷತ್ತೈಯುಮ್ ಶೇರ ಫಲಮಾಗ ಕ್ಕೊಳ್ಳಿ ಪ್ರಪತ್ತಿ ಪಣ್ಣುವಾರ್ಗಳ್ ನಿಪುಣರ್.

ತ್ತವೆ. ಈ ಫಲವು ಪ್ರಪದನಾನುಷ್ಠಾನವಿಲ್ಲದವನಿಗೆ ಪ್ರಾರಬ್ಧ ಸುಕೃತ ವಿಶೇಷ ದಿಂದ ದೊರೆಯುತ್ತದೆ. ಪ್ರಪದನಾನುಷ್ಠಾನವಿರುವವನಿಗೆ, ಆ ಕಾಲದಲ್ಲಿ ಮಾಡಿದ ಸಂಕಲ್ಪದ ಫಲವಾಗಿ ಉಂಟಾಗುತ್ತದೆ ಎಂಬ ತಾತ್ಪರ್ಯವು.

ಮೋಕ್ಷಾರ್ಥವಾಗಿ ಪ್ರಪತ್ತಿಮಾಡಿದ ಕಾಲದಲ್ಲಿ ಯಾವಜ್ಜೀವವೂ ನನಗೆ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿಗಳುಂಟಾಗಲೆಂದು ಸಂಕಲ್ಪಿಸಿ ದರೆ ಪ್ರಪತ್ತಿ ಮೂಲವಾಗಿಯೇ ಆ ಫಲಗಳು ದೊರೆಯುತ್ತವೆ, ಒಂದು ವೇಳೆ ಪ್ರಪತ್ತಿಮಾಡಿದ ಕಾಲದಲ್ಲಿ ಅಂತಹ ಸಂಕಲ್ಪವಿಲ್ಲದಿದ್ದರೆ, ಪ್ರಬಲ ಪ್ರಾರಬ್ಧ ಮೂಲಕ ಪ್ರತಿಕೂಲಬುದ್ಧಿಯುಂಟಾದರೆ, ಅಂತಹ ಪ್ರತಿಕೂಲಬುದ್ಧಿ ನಿವೃತ್ತಿ ಗಾಗಿ ಪ್ರಪತ್ತಿಯನ್ನನುಷ್ಠಿಸಿದರೆ, ಆಗಲೂ ಆ ಫಲಗಳು ಪ್ರಪತ್ತಿಯ ಫಲವಾಗಿ ಲಭಿಸುವವು ಪ್ರಪದನವೇ ಇಲ್ಲದಿದ್ದರೆ, ಇವೆರಡು ಫಲಗಳು ಪ್ರಾರಬ್ಧ ಸುಕೃತದಿಂದುಂಟಾಗುತ್ತವೆ ಎಂಬ ತಾತ್ಪರ್ಯವು. ಆದುದರಿಂದ ಪ್ರಪದನಾನು ಷ್ಠಾನಕಾಲದಲ್ಲೇ ಮೋಕ್ಷವನ್ನು ಪ್ರಾರ್ಥಿಸುವಾಗಲೇ ಇವುಗಳನ್ನೂ ಫಲವಾಗಿ ಸಂಕಲ್ಪಿಸೇ ವಿವೇಕಿಗಳು ಪ್ರಪದನವನ್ನು ಮಾಡುವರೆಂದು ಹೇಳಿ ಅಧಿಕಾರ ಪರಿ ಸಮಾಪ್ತಿಯನ್ನು ಮಾಡುತ್ತಾರೆ.

ಆಕೈಯಾಲ್ - ಆ ಕಾರಣದಿಂದ ಎಂದರೆ, ಹಾಗೆ ಸಂಕಲ್ಪಿಸಿ ಪ್ರಪದನ ಮಾಡಿದರೆ ಫಲವಾಗಿ ಯಾವಜ್ಜೀವ ಅನುಕೂಲ ಪ್ರವೃತ್ತಿ ಪ್ರತಿಕೂಲ ನಿವೃತ್ತಿ ಗಳು ಪ್ರಾಪ್ತವಾಗುವದರಲ್ಲಿ ಸಂದೇಹವಿಲ್ಲವಾದುದರಿಂದ, **ಇರುನ್ದನಾಳಿಲ್** - ಜೀವಮಾನವಿರುವತನಕ, **ನಿರಪರಾಧಕೈಂಕರ್ಯತ್ತೈಯುಮ್** – ಪ್ರತಿಕೂಲಾ ಚರಣೆಯಿಲ್ಲದಿರುವ ಅನುಕೂಲ ಪ್ರವೃತ್ತಿರೂಪ ಕೈಂಕರ್ಯವನ್ನು, **ಪ್ರಾರಬ್ಧ ಶರೀರಾನನ್ತರಂ** - ಪ್ರಾರಬ್ಧ ಕರ್ಮವನ್ನು ಕಳೆಯುವದಕ್ಕಾಗಿ ಎತ್ತಿದ ಶರೀರ ಪಾತವಾದನನ್ತರ, **ಮೋಕ್ಷತ್ತೈಯುಮ್** - ಮೋಕ್ಷವನ್ನೂ ಸಹ, **ಶೇರ** - ಎರಡನ್ನೂ ಸೇರಿಸಿ, **ಫಲಮಾಗ** - ಫಲವಾಗಿ, **ಕೊೞಿ** - ಸಂಕಲ್ಪಿಸಿ, **ನಿಪು ಣರ್** - ಪ್ರಜ್ಞಾಶಾಲಿಗಳಾದ ವಿವೇಕಿಗಳು, ಇವರು ಯುಕ್ತಾಯುಕ್ತಗಳನ್ನು ಪರಿಶೀಲಿಸಿ ತಿಳಿಯುವ ಬುದ್ಧಿಯೋಗವುಳ್ಳವರಾದ ಪ್ರಯುಕ್ತ **ನಿಪುಣರ್, ಪ್ರಪತ್ತಿಪಣ್ಣುವಾರ್ಗಳ್** – ಪ್ರಪದನವನ್ನು ಅನುಷ್ಠಿಸುವರು. ಇಲ್ಲಿ **ನಿಪುಣರ್** ಎಂದು ಏತಕ್ಕೆ ಪ್ರಯೋಗಿಸಿದರೆಂದರೆ, ಒಂದು ವೇಳೆ ಭರನ್ಯಾಸಕಾಲದಲ್ಲಿ ಯಾವ

ಅರವೇ ಪರಮೆನ್ರಡೈಕ್ಕಲಮ್ ವೈತ್ತನರನ್ನು ನಮ್ಮೈ
ಪ್ಪೆರವೇ ಕರುತಿ ಪೆರುನ್ತಕವು ಪಿರಾನಡಿಕ್ಕೀಳ್

ಷ್ಟೇಷವೂ ಅನುಕೂಲ ಪ್ರವೃತ್ತಿ ಪ್ರತಿಕೂಲನಿವೃತ್ತಿಗಳಿರಬೇಕೆಂದು ಸಂಕಲ್ಪಿಸಿ ಅನುಷ್ಠಿಸದೇ ಇದ್ದರೂ ಪರಮ ಪುರುಷಾರ್ಥವಾದ ಮೋಕ್ಷಪ್ರಾಪ್ತಿಯಲ್ಲಿ ಯಾವದೊಂದೂ ಸಂದೇಹವೂ ಇರುವದಿಲ್ಲವು ಆಗ ಪ್ರಾರಬ್ಧ ಸುಕೃತವು ಇಲ್ಲದಿದ್ದರೆ ಒಂದು ವೇಳೆ ಈ ಅನುಕೂಲ ಪ್ರವೃತ್ತಿ ಮೊದಲಾದವುಗಳು ನಡಿಯದೇ ಹೋದರೂ ಹೋಗಬಹುದು. ಮೋಕ್ಷಪ್ರಾಪ್ತಿಯನ್ನು ಬಯಿಸುವಾಗ ಇದನ್ನೂ ಸಂಕಲ್ಪಿಸಿ ಪ್ರಪದನಾನುಷ್ಠಾನ ಮಾಡಿದರೆ, ಪ್ರಪತ್ತಿಯ ಫಲವಾಗಿ ಅನುಕೂಲ ಪ್ರವೃತ್ತ್ಯಾದಿಗಳು ಉಂಟಾಗುತ್ತವೆ. ಅಂಥಾವನಿಗೆ ಪ್ರಾರಬ್ಧ ಸುಕೃತವೂ ಇದ್ದರೆ ಇನ್ನೂ ವಿಶೇಷವೇ ಸರಿ. ಆದುದರಿಂದ ಹಾಗೆ ಸಂಕಲ್ಪಿಸದೆ ಪ್ರಪದನ ಮಾಡುವವನಿಗಿಂತಲೂ ಈ ಸಂಕಲ್ಪವನ್ನೂ ಸೇರಿಸಿ ಪ್ರಪದನ ಮಾಡುವವನು ಬುದ್ಧಿಶಾಲಿಯು ಎಂದು **ನಿಪುಣರ್** ಎಂಬದಾಗಿ ಪ್ರಯೋಗಿಸಿರುತ್ತಾರೆ.

ಈ ಅಧಿಕಾರದಲ್ಲಿ ಉಪಪಾದಿತವಾದ ಸಾಂಗಪ್ರಪದನಾನುಷ್ಠಾನವು ವ್ಯಾಜಮಾತ್ರವು, ಸರ್ವಲೋಕಶರಣ್ಯನ ಕೃಪೆಯೂ, ಶೇಷತ್ವರೂಪ ಸಂಬಂಧವೂ ಸಹ ಪ್ರಧಾನ ಕಾರಣಗಳು ; ಆ ಅನುಷ್ಠಾನವು ವ್ಯಾಜಮಾತ್ರವಾದರೂ ಅವಶ್ಯವನುಷ್ಠಿಸತಕ್ಕದ್ದು, ಎಂದಿಗೂ ಮರೆಯತಕ್ಕದ್ದಲ್ಲವು, ಹಾಗೆ ಅನುಷ್ಠಿಸುವದು ಆಚಾರ್ಯಮೂಲಕವಾದ ಪ್ರಯುಕ್ತ, ಆಚಾರ್ಯಸಂಬಂಧವೂ ಕೂಡ ಅತ್ಯಂತ ಪ್ರಧಾನವೆಂದು ಹೇಳಿ, ಹಾಗೆ ಆಚರಿಸಿದನಂತರ ನಾವು ನಿರ್ಭರರಾಗಿ, ನಿಶ್ಶಂಸಯರಾಗಿ ನಿರ್ಭಯರಾಗಿ, ಹೃಷ್ಟಮನಸ್ಕರಾಗಿರತಕ್ಕದ್ದಾದುದರಿಂದ, ಇದರ ಮೂಲಕ ವೇದ ವೇದಾಂತವಿದ್ಯಾಸಾರ್ವಭೌಮರಾದ ತಮ್ಮ ಆಚಾರ್ಯರುಗಳು ತಮ್ಮನ್ನು **ಸರ್ವಶರಣ್ಯನ** ಪಾದದಲ್ಲಿ ಸಮರ್ಪಿಸಿದರು ಎಂದು ಮುಂದಿನ ಪಾಶುರದ ಮೂಲಕವಾಗಿ ತಿಳಿಸುತ್ತಾರೆ :---

ಅರ್ಥ - **ನನ್** - ನಮಗೆ ಉಜ್ಜೀವಕರಾದ, **ಮರೈ ಮುಡಿಶೂಡಿಯ ಮನ್ನವರೇ**, **ಮರೈ** - ವೇದಗಳಲ್ಲಿ, **ಮುಡಿಶೂಡಿಯ** - ಮೂರ್ಧಾಭಿಷಿಕ್ತರಾದ **ಮನ್ನವರೇ** - ರಾಜರುಗಳಾದ ನಮ್ಮ ಆಚಾರ್ಯರುಗಳೂ **ಉರವೇ** - ಚೇತನನಿಗೂ ಸರ್ವೇಶ್ವರನಿಗೂ ಇರುವ ಶೇಷ ಶೇಷಿರೂಪ (ದಾಸತ್ವ ಸ್ವಾಮಿತ್ವ) ಸಂಬಂಧದಿಂದಲೇ, **ಇವನುಯಿರ್** - ಈ ಜೀವಾತ್ಮನ ಸ್ವರೂಪವನ್ನು **ಕಾಕ್ಕಿನ್ರ** - ರಕ್ಷಿಸುತ್ತಿರುವ, **ಓರುಯಿರ್** - ಸರ್ವಕ್ಕೂ ಅಂತರ್ಯಾಮಿಯಾಗಿ ಸರ್ವಕ್ಕೂ ಸತ್ತಾಧಾರಕನಾದ ಸರ್ವೇಶ್ವರನ, **ಉಣ್ಮೈಯೈ** - ಸಹಜ ಕಾರುಣ್ಯರೂಪ ಸ್ವಭಾವ

ಉರವೇ ಇವನುಯಿರ್ ಕ್ಕಾಕ್ಕೆನ್ರು ವೋರು ಯಿರುಣ್ಮೈಯ್ಯೆ ನೀ
ಮರವೇಲೆನ ನಮ್ ಮರ್ರ್ಯಮುಡಿ ಶೂಡಿಯ ಮನ್ನವರೇ ॥ ೧೯ ॥

ವನ್ನು, **ನೀ ಮರವೇಲ್** – ಅಕಿಂಚನನಾದ ನೀನು ಎಂದಿಗೂ ಮರೆಯಬೇಡ, **ಎನ** – ಎಂದು ಎಂದರೆ ಎಂಬದಾಗಿ ಉಪದೇಶಿಸಿ, **ಅನ್ರು** – ಆಗಿನಿಂದ ಎಂದರೆ ಸೃಷ್ಟಿಕಾಲದ ಮೊದಲು ಪ್ರಪದನಕಾಲದವರಿವಿಗೂ, **ನಮ್ಮೈ** – ಜಡಪದಾರ್ಥವಾಗಿದ್ದ ನಮ್ಮನ್ನು, **ಪೆರವೆ** – ತನ್ನ ಪ್ರಯೋಜನಕ್ಕಾಗಿಯೇ, ತನ್ನೊಂದಿಗೆ ಸೇರಿಸಿಕೊಳ್ಳುವದಕ್ಕಾಗಿಯೇ, **ಕರಂದಿ** – ಉಪಾಯಭೂತನಾಗಿ ಕೃಷಿಮಾಡಿ, **ಪೆರುಂ ತಗವು** – ನಿರ್ಹೇತುಕವಾದ ತನ್ನ ಅಧಿಕ ಕೃಪೆಯನ್ನು, **ಉತ್ತ** – ಹೊಂದಿದವನಾದ, **ಪಿರಾನ್** – ಹೀಗೆ ಕರಣ ಕಳೇಬರ ಪ್ರದಾನ, ಶಾಸ್ತ್ರಪ್ರದಾನ ಗುರೂಪಸದನ, ಪ್ರಪತ್ತ್ಯನುಷ್ಠಾನ ಮೊದಲಾದ ಮಹೋಪಕಾರಗಳನ್ನೆಸಗುವ ಸರ್ವಶರಣ್ಯನ, **ಅಡಿಕ್ಕೀೞ್** – ಪಾದಾರವಿಂದದ ಕೆಳಗೆ, **ಪರಂ ಅರವೇ**–ನಮಗೆ ಯಾವುದೊಂದು ಭರವು ಇಲ್ಲದೇ ಇರೋಣವು ಹೇಗೋ ಹಾಗೆ, **ಅಡೈಕ್ಕಲವ್**–ರಕ್ಷ್ಯವಸ್ತುವೆಂದು, **ವೈತ್ತನರ್** – ಇಟ್ಟರಲ್ಲವೇ ?

ತಾತ್ಪರ್ಯ—ಸ್ವಾಮಿಯನ್ನು ಹೊಂದಲು ಎರಡು ಪ್ರಧಾನ ಕಾರಣಗಳು. ಒಂದನೇದು, ಸರ್ವಶರಣ್ಯನ ಸಹಜವಾದ ನಿರ್ಹೇತುಕ ಕೃಪೆಯು, ಎರಡನೇದು ವೇದವೇದಾಂತಾರ್ಥ ನಿರ್ಣಯದಲ್ಲಿ ಸಾರ್ವಭೌಮರಾದ ನಾಥಯಾಮುನ ರಾಮಾನುಜ ಮುನಿಗಳಾದ **ಪೂರ್ವಾಚಾರ್ಯ**ರುಗಳನ್ನನುಸರಿಸಿರುವ ಜ್ಞಾನನಿಷ್ಠೆ ಕರ್ಮನಿಷ್ಠೆಯುಳ್ಳ ನಮ್ಮ ಆಚಾರ್ಯರುಗಳು. ಹಾಗಾದರೆ ಪ್ರಪದನವೇನು, ಸಾಧ್ಯೋಪಾಯವಲ್ಲವೋ ಎಂದರೆ ಅದು ವ್ಯಾಜರೂಪವಾದುದು ಎಂಬಭಿಪ್ರಾಯವು. ವ್ಯಾಜರೂಪವಾದರೂ ಇದನ್ನನುಷ್ಠಿಸಲೇ ಬೇಕೇ ಎಂದರೆ ಆವಶ್ಯಕವಾಗಿ ಅನುಷ್ಠಿಸತಕ್ಕದ್ದೇ ಎಂದು ತಿಳಿಸುವದಕ್ಕಾಗಿ **ಪಿರಾನಡಿಕ್ಕೀೞ್ ವೈತ್ತನರೇ** ಎಂದು ಹೇಳಿರುತ್ತಾರೆ. ತಾಯಿಯೇನೋ ತನ್ನ ಸಹಜಕಾರುಣ್ಯದಿಂದ ತನ್ನ ಮಗುವನ್ನು ಸಂರಕ್ಷಿಸುವದರಲ್ಲಿ ಕಂಕಣಬದ್ಧಳಾಗಿದ್ದಾಳೆ. ಆದರೆ ಮಗುವು ಸ್ತನ್ಯವನ್ನು ಪಾನಮಾಡಬೇಕಷ್ಟೆ. ಮಗುವಿನ ಅಭಿವೃದ್ಧಿಗೆ ಸ್ತನ್ಯಪಾನರೂಪವೃತ್ತಿಯು ಹೇಗೆ ವ್ಯಾಜರೂಪವಾಗಿದ್ದರೂ ಆವಶ್ಯಕವೋ, ಹಾಗೆಯೇ ಸರ್ವೇಶ್ವರನ ಸಹಜ ಕಾರುಣ್ಯವು ಸಂರಕ್ಷಿಸಲು ಸಿದ್ಧವಾಗಿದ್ದರೂ ಈತನು ಭರನ್ಯಾಸವನ್ನು ವ್ಯಾಜರೂಪವಾಗಿ ಆವಶ್ಯಕವಾಗಿ ಅನುಷ್ಠಿಸತಕ್ಕದ್ದು. ಉಯಿರ್ ಕ್ಕಾಕ್ಕೆ**ನ್ರು ವೋರುಯಿರುಣ್ಮೈಯ್ಯೆ** ಎಂದು ಹೇಳಿರುವದರಿಂದ, ಯಾವಾಗ ಜೀವಾತ್ಮನನ್ನು ರಕ್ಷಿಸಲಿ ಎಂದು ಅವಸರ ಪ್ರತೀಕ್ಷೆಯುಳ್ಳರುವ, ಎಲ್ಲಾದಕ್ಕೂ ಅಂತರಾತ್ಮನಾದ,

ಸರ್ವೇಶ್ವರನ ಸ್ವಭಾವವೇ ಪ್ರಧಾನಕಾರಣವೆಂದು ಹೇಳಿರುತ್ತಾರೆ. ಅದು ಹೇಗೆಂದರೆ, ಚೇತನ ಈ ದಿವ್ಯಸ್ವಭಾವವನ್ನು "**ನೀಮರವೇಲ್**" ನೀನು ಎಂದಿಗೂ ಮರೆಯತಕ್ಕದ್ದಲ್ಲವು ಎಂದು ರಹಸ್ಯವಾಗಿ ನಮಗೆ ನಮ್ಮ ಆಚಾರ್ಯರು ಉಪದೇಶಿಸುತ್ತಾರೆ. ಹೀಗೆ ನಮಗೆ ಅತಿ ಮುಖ್ಯವಾದ ಹಿತೋಪದೇಶವನ್ನು ಮಾಡಿ ನಮಗೂ ಸರ್ವೇಶ್ವರನಿಗೂ ಇರುವ ಶೇಷಶೇಷಿ ಭಾವವನ್ನು ನಮ್ಮಹೃದಯದಲ್ಲಿ ಪ್ರತಿಷ್ಠಿತವಾಗಿ ನಿಲ್ಲುವಹಾಗೆ ಮಾಡಿ, ನಮಗಾಗಿ ಸರ್ವೇಶ್ವರನನ್ನು ಪ್ರಾರ್ಥಿಸಿರುವ **ಉದಾರ ಮನಸ್ಕರಾದ** ನಮ್ಮ ಆಚಾರ್ಯರೇ ಎರಡನೇ ಪ್ರಧಾನ ಕಾರಣವು. ಹೀಗೆ ಹಿತೋಪದೇಶಮಾಡಿದವರು ಯಾರೆಂದರೆ—**ಮರೈಮುಡಿ ಶೂಡಿಯ ಮನ್ನವರೇ**- ವೇದವೆಂಬ ಕಿರೀಟವನ್ನು ಧರಿಸಿರುವ ರಾಜರು. ಇಂಥಾವರು ಹೇಳಿದುದು ವಿವಾದಕ್ಕೆ ಕಾರಣವಿಲ್ಲದ ಸಿದ್ಧಾನ್ತವು, ಆದುದರಿಂದ ಅಕಿಂಚನರಾದ ನಮಗೆ ಮಾಡುವ ಆವರುಪದೇಶವು ಪರಮಗ್ರಾಹ್ಯವು.

"ಧರ್ಮಶಾಸ್ತ್ರರಥಾರೂಢಾ ವೇದ ಖಡ್ಗಧರಾ ದ್ವಿಜಾಃ ।
ಕ್ರೀಡಾರ್ಥಮಪಿ ಯದ್ಬ್ರೂಯುಸ್ಸ ಧರ್ಮಃ ಪರಮೋಮತಃ ॥

ಎಂಬಲ್ಲಿ ಧರ್ಮಶಾಸ್ತ್ರವೆಂಬ ರಥವನ್ನು ಆರೋಹಣೆಮಾಡಿ, ವೇದವೆಂಬ ಖಡ್ಗವನ್ನು ಧರಿಸಿರುವ ರಾಜರಾಗಿ ಹೇಳಿರುತ್ತದೆ. ಇಲ್ಲಿ ವೇದವೆಂಬ ಕಿರೀಟವನ್ನು ಧರಿಸಿದವರಾಗಿ ಹೇಳಲ್ಪಟ್ಟಿರುತ್ತದೆ. ಅಥವಾ **ಮರೈಮುಡಿ** – ವೇದಗಳಿಗೆ ಶಿರೋಭೂಷಣವಾಗಿರುವ **ಉಪನಿಷತ್ತುಗಳನ್ನು**, **ಶೂಡಿಯ** - ಅಲಂಕಾರವಾಗಿ ಶಿರಸ್ಸಿನಲ್ಲಿ ಧರಿಸಿದವರು ಎಂಬರ್ಥವನ್ನೂ ಹೇಳಬಹುದು. **ನೀಮರವೇಲೆನ** ಎಂದುಪದೇಶಿಸಿದುದರಿಂದಲೂ, ಆಚಾರ್ಯರ ಮೂಲಕವಾಗಿಯೇ ಇಂತಹ ಹಿತೋಪದೇಶ ಉಂಟಾಗುವದರಿಂದಲೂ, ಅವಸಾನಕಾಲವನ್ನು ಗೊತ್ತಾಗಿ ತಿಳಿಯುವುದು ಸಾಧ್ಯವಿಲ್ಲವಾದುದರಿಂದ, ಈ ಚೇತನನಿಗೆ ಜ್ಞಾನಪ್ರಾಪ್ತವಾದ ಒಡನೆಯೇ ಭರನ್ಯಾಸವನ್ನು ಗುರುಮುಖೇನ ಅನುಷ್ಠಿಸತಕ್ಕದ್ದೆಂದೂ ತೋರಿಬರುತ್ತದೆ. ಇದರಿಂದ ಭರಸಮರ್ಪಣವು ಆಚಾರ್ಯಕೃತ್ಯವೆಂದು ಹೇಳಿದಂತಾಯಿತು. ಆಚಾರ್ಯ ಮಾಹಾತ್ಮ್ಯದಿಂದ ಈ ಚೇತನನಿಗೆ ಪ್ರಬಲಕರ್ಮಬಲದಿಂದ ವಶ್ಯವಲ್ಲದ ಸ್ವಾಮಿಯ ರಕ್ಷಕತ್ವವು ಬಹು ಸುಲಭವಾಗಿ ಲಭಿಸುತ್ತದೆಂಬ ಭಾವವೂ ತೋರಿಬರುತ್ತದೆ. ಈ ಅಭಿಪ್ರಾಯವನ್ನೇ ಸರ್ವಜ್ಞರಾದ ಯಾಮುನ ಮುನಿಗಳು ತಮ್ಮ ಸ್ತೋತ್ರರತ್ನದ ಕೊನೆಯಲ್ಲಿ "**ಪಿತಾ ಮಹಂ ನಾಥಮುನಿಂ ವಿಲೋಕ್ಯ ಪ್ರಸೀದ ಮದ್ವೃತ್ತ ಮಚಿನ್ತಯಿತ್ವಾ**" ಎಂಬಲ್ಲಿ ವ್ಯಕ್ತಪಡಿಸಿರುತ್ತಾರೆ.

"ಸಿದ್ಧಿರ್ಭವತಿ ವಾ ನೇತಿ ಸಂಶಯೋಽಚ್ಯುತ ಸೇವಿನಾಂ ।
ನಸಂಶಯೋಽತ್ರ ತದ್ಭಕ್ತ ಪರಚರ್ಯಾ ರತಾತ್ಮನಾಂ",

ಎಂದರೆ ಅಚ್ಯುತಸೇವೆಮಾತ್ರ ಮಾಡುವವರಿಗೆ ಸಿದ್ಧಿಯುಂಟೋ ಇಲ್ಲವೋ ಎಂಬ ಸಂದೇಹವಾದರೂ ಬಂದು ಸೇರಿ ಇರಬಹುದು; ಆದರೆ ಆ ಅಚ್ಯುತನ ಭಕ್ತರ ಪರಿಚರ್ಯೆಯಲ್ಲಿ ಆಸಕ್ತವಾದ ಮನಸ್ಸುಳ್ಳವರಿಗೆ ಮಾತ್ರ ಸಿದ್ಧಿಯು ನಿಸ್ಸಂದೇಹವೆಂದು ಹೇಳಿರುವಹಾಗೆ, ಆಚಾರ್ಯಪ್ರಸನ್ನತೆಯಿಂದ ಭಗವತ್ಪ್ರಸನ್ನತೆಯು ನಿಸ್ಸಂಶಯವೆಂಬುವದನ್ನು ಈ ಸಂದರ್ಭದಲ್ಲಿ ಗ್ರಹಿಸತಕ್ಕದ್ದಾಗಿರುತ್ತದೆ. ಹಿಂದೆ ಗುರುಪರಂಪರಾಸಾರದಲ್ಲಿ "ಆಚಾರ್ಯವತ್ತಯಾ ಮುಕ್ತೌ" ಎಂದು ಸ್ಮೃತಿಯಲ್ಲೂ ಕೂಡ ಈ ಅಭಿಪ್ರಾಯವೇ ಸಮರ್ಥಿಸಲ್ಪಟ್ಟಿರುತ್ತದೆ. (೬೫ ನೆಯ ಪುಟ ನೋಡಿ) ಇಂತಹ ನಮ್ಮ ಪರಮಾಚಾರ್ಯರು ಏನುಪಕಾರವನ್ನು ಮಾಡಿರುತ್ತಾರೆಂದರೆ ನಮ್ಮನ್ನು ಅವನ ಪಾದಾರವಿಂದದ ಕೆಳಗೆ **ವೈತ್ತನರ್** - ಇಟ್ಟವರು ಎಂದು ಹೇಳಿರುವದರಿಂದ ನಮಗಾಗಿ ತಾವೇ ನಮ್ಮ ಆತ್ಮವನ್ನು ಅಲ್ಲಿರಿಸಿ ಶರಣಾಗತಿ ಮಾಡಿದಂಥಾ ಪರಮೋಪಕಾರರು; ರಕ್ಷ್ಯವಸ್ತು ಎಂಬದಾಗಿ ಸಮರ್ಪಿಸಿದರು ಎಂಬ ಭಾವವು: ಎಂದರೆ ಶ್ರಿಯಃಪತಿಯ ತಿರುವಡಿಯ ಕೆಳಗೆ ಸಮರ್ಪಿಸುವಾಗ ಲಕ್ಷ್ಮಿಗೂ ನಾರಾಯಣನಿಗೂ ಸಹ ಈ ಚೇತನನು ನಿಮ್ಮಿಂದ ರಕ್ಷಿಸಲ್ಪಡಲು ಅರ್ಹನು ಎಂದು ಹೇಳಿ ಬಲವತ್ತರವಾದ ಪುರುಷಕಾರರೂಪ ಪರಮೋಪಕಾರವನ್ನು ಎಸಗಿದವರೆಂಬ ಭಾವವು ಇಲ್ಲಿ ತೋರಿಬರುತ್ತದೆ. ಇಲ್ಲಿ ಮುಖ್ಯವಾಗಿ ಗ್ರಹಿಸತಕ್ಕದ್ದು ಏನೆಂದರೆ:—ಆಚಾರ್ಯಮುಖೇನ ಈ ಭರನ್ಯಾಸವು ವ್ಯಾಜರೂಪವಾದರೂ ಅನುಷ್ಠಿಸಲೇಬೇಕೆಂಬುವದು; ಸರ್ವೇಶ್ವರನೇ ತಾನಾಗಿಯೇ ರಕ್ಷಿಸಿಬಿಡುವನು, ಆದುದರಿಂದ ಈ ವ್ಯಾಜವು ಅನಾವಶ್ಯಕವು ಎಂದು ಭಾವಿಸಕೂಡದೆಂಬುವದು. ಭರಸಮರ್ಪಣವು ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳಲ್ಲೆಲ್ಲಾ ವಿಧಿಸಲ್ಪಟ್ಟಿರುವದರಿಂದ, ಅಂತಹ ಸಂದರ್ಭದಲ್ಲಿ ವಾದವು ನಿರರ್ಥಕವು.

ಇಲ್ಲಿ "**ಅರವೇ ಪರಂ**, ನಮಗೆ ಯಾವದೊಂದು ಭರವೂ ಇಲ್ಲದೆ ಇರೋಣವು ಹೇಗೋ ಹಾಗೆ" ಎಂದು ಹೇಳಿರುವದರಿಂದ, ತಾನು ಈ ಪ್ರಪತ್ತಿಮೂಲಕ ನಿರ್ಭರನಾದನೆಂದೂ, **ಅರವೇ** ಎಂಬಲ್ಲಿ ಅವಧಾರಣವಿರುವದರಿಂದ ಆ ವಿಷಯವು ನಿಸ್ಸಂಶಯವೆಂದೂ, **ಅಡೈಕ್ಕಲಂ** ಎಂದು ಪುರುಷಕಾರತ್ವವು ತೋರುವದರಿಂದ ನಿರ್ಭಯನಾದನೆಂದೂ, **ವೈತ್ತನರ್** ಎಂಬುವದರಿಂದ ತಾವು ಹರ್ಷಾತಿರೇಕವುಳ್ಳವರಾದರೆಂದೂ ಕೃತಕೃತ್ಯರೆಂದೂ ತೋರಿಬರುತ್ತದೆ.

ಅವತಾರಿಕೆ. ಹಿಂದಿನ ಪಾಶುರದಲ್ಲಿ ಸಾಙ್ಗಪ್ರಪದನಾನುಷ್ಠಾನಕ್ಕೆ ಶ್ರುತಿ ಪ್ರಮಾಣಗಳು ಆಚಾರ್ಯಾನುಷ್ಠಾನರೂಪ ಸಂಪ್ರದಾಯವೂ ಉಂಟೆಂದು ಹೇಳಿ ಅದು ವ್ಯಾಜಮಾತ್ರವಾದರೂ, ಆ ವ್ಯಾಜವನ್ನೇ ಸ್ವಾಮಿಯು ನಿರೀಕ್ಷಿಸುತ್ತಿರುವದರಿಂದ ಅನುಷ್ಠೇಯವೆಂದು ಉಪದೇಶಿಸಿದರು. ಈ ಸಂಸ್ಕೃತಶ್ಲೋಕದಿಂದ, ಹಾಗೆ ಜ್ಞಾನ ಕರ್ಮಯೋಗಗಳಿಂದ ಬೆಳಗುತ್ತಿರುವ ಬ್ರಹ್ಮವಿತ್ತಾದ ಪರಮಾಚಾರ್ಯನ

ಯುಗ್ಯಸ್ಯಂದನ ಸಾರಥಿ ಕ್ರಮವತಿ ತ್ರಯ್ಯಂತ ಸಂದರ್ಶಿತೇ
ತತ್ವಾನಾಂ ತ್ರಿತಯೀ ಯಥಾರ್ಹ ವಿವಿಧ ವ್ಯಾಪಾರ ಸಂತಾನನಿ ।

ಮೂಲಕ ಪ್ರಪದನಾನುಷ್ಠಾನ ಮಾಡಿದವನಿಗೇ ನಿರ್ಭರತ್ವಸಿದ್ಧಿಯೆಂದು ಉಪಪಾದಿಸುತ್ತಾರೆ. ಅದರೊಂದಿಗೆ ಪ್ರಾಪ್ತವಾಗುವ ಕೆಲವು ಶಙ್ಕೆಗಳಿಗೂ ಸಮಾಧಾನವನ್ನು ಹೇಳಿ ಅಧಿಕಾರ ಸಮಾಪ್ತಿಯನ್ನು ಮಾಡುತ್ತಾರೆ. ಶಙ್ಕೆಗಳು ಯಾವುವೆಂದರೆ.

೧ ಸಮಸ್ತ ಕಾರ್ಯಗಳಿಗೂ ಸರ್ವೇಶ್ವರನೊಬ್ಬನೇ ಹೇತುವೆಂದು ಪ್ರಮಾಣ ಹೇಳುವಾಗ, ಈ ಪ್ರಪದನವು ಹೇಗೆ ವ್ಯಾಜರೂಪದಲ್ಲಾದರೂ ಹೇತುವಾದೀತು?

೨. ಈತನಿಗೆ ಸಂಪೂರ್ಣ ಪಾರತಂತ್ರ್ಯವು **"ಸ್ವಯಂ ಮೃತ್ಪಿಂಡಭೂತಸ್ಯ ಪರತಂತ್ರಸ್ಯ ದೇಹಿನಃ"** ಎಂದು ಭಾರತ ಶಾನ್ತಿ ಪರ್ವದಲ್ಲಿ ಹೇಳಿರುವ ಹಾಗೆ, ಇರುವಲ್ಲಿ ಹೀಗೆ ಪಾರತಂತ್ರ್ಯವಿರುವವನು ಏನನ್ನು ಸ್ವತಂತ್ರಿಸಿ ಮಾಡಲಾದೀತು? ಈತನು ಮಣ್ಣಿನ ಮುದ್ದೆಯ ಹಾಗೆ ಎಲ್ಲಿದ್ದಾನೆ ಕರ್ತೃತ್ವವಿದೆಯಲ್ಲಾ? ಎಂದರೆ; ಆ ಕರ್ತೃತ್ವದಲ್ಲಿ ಪೂರ್ಣ ಸ್ವಾತಂತ್ರ್ಯವಿಲ್ಲವೇ? ಹಾಗೆ ಪಾರತಂತ್ರ್ಯ ಉಂಟೆಂದು **"ಪರಾತ್ತು ತಚ್ಛ್ರುತೇಃ"** ಎಂಬ ಸೂತ್ರದಲ್ಲೂ, ಶ್ರುತಿಯಲ್ಲೂ, ಇತರ ಶಾಸ್ತ್ರಗಳಲ್ಲೂ ಮೂಲಮಂತ್ರದಲ್ಲೂ ತೋರಿಬರುವದಿಲ್ಲವೇ? ಅಂತಹ ಪಾರತಂತ್ರ್ಯದಲ್ಲಿರುವವನ ಮೂಲಕ ಸರ್ವೇಶ್ವರನು ಭರನ್ಯಾಸಾದಿಗಳನ್ನು ಎದರು ನೋಡಬಹುದೋ? ಇತ್ಯಾದಿ ಶಂಕಾಗಳಿಗೆ ಸಮಾಧಾನವು ಈ ಶ್ಲೋಕದಲ್ಲಿ ದೊರೆಯುತ್ತದೆ.

ಅರ್ಥ - **ಯುಗ್ಯಸ್ಯಂದನ ಸಾರಥಿಕ್ರಮವತಿ, ಯುಗಂ ವಹನ್ತೀತಿ ಯುಗ್ಯಾಃ**, ನೊಗವನ್ನು ಹೊರತಕ್ಕವು ಯುಗ್ಯಾಃ, ಆದುದರಿಂದ **ಯುಗ್ಯವೆಂದ್ರ** ಕುದುರೆಗಳು **ಸ್ಯಂದನ** - ರಥ, **ಸಾರಥಿ**-ರಥನಡಿಸುವವನು, ಇವರುಗಳ **ಕ್ರಮವತಿ** - ರೀತಿಯನ್ನುಳ್ಳ, **ತ್ರಯ್ಯನ್ತಸಂದರ್ಶಿತೇ** - ವೇದಾನ್ತಗಳಿಂದ ಚನ್ನಾಗಿ ವ್ಯಕ್ತಗೊಳಿಸಲ್ಪಟ್ಟ, **ಯಥಾರ್ಹ ವಿವಿಧ ವ್ಯಾಪಾರ ಸಂತಾನನಿ, ಯಥಾರ್ಹ** - ಅವವುಗಳಿಗೆ ಯೋಗ್ಯವಾದ, **ವಿವಿಧ** – ನಾನಾಬಗೆಯಾದ, **ವ್ಯಾಪಾರ** - ವ್ಯಾಪಾರಗಳ, **ಸಂತಾನನಿ** - ಪರಂಪರೆಗಳುಳ್ಳ, **ತತ್ವಾನಾಂ** – ತತ್ವಗಳ, **ತ್ರಿತಯೀ** - ಅಚಿತ್ತು ಚಿತ್ತು ಈಶ್ವರರೆಂಬ ಮೂರರೊಳಗೆ, ಎಂದರೆ ಮೂರನ್ನೂ ಪರಿಶೀಲಿಸಿ ನೋಡಿದುದಾದರೆ, **ತ್ರಿಷು** – ಈ ಮೇಲಿನ ಮೂರು ತತ್ವಗಳಲ್ಲೂ, **ಹೇತುತ್ವಂ** - ಕಾರಣವಾಗಿರುವ ಭಾವವುಂಟು ; **ಉಭಯೋಃ** - ಜೀವಾತ್ಮನಾದ **ಚಿತ್ತಿನಲ್ಲೂ, ಈಶ್ವರನಲ್ಲೂ, ಕರ್ತೃಭಾವಃ** - ಕರ್ತೃತ್ವವುಂಟು ;

ಹೇತುತ್ವಂ ತ್ರಿಷು ಕರ್ತೃಭಾವ ಉಭಯೋಃ ಸ್ವಾತ್ಯಧೀನತ್ವೈಕತ್ರ ತತ್
ಸ್ವಾಮಿಸ್ವೀಕೃತ ಯದ್ಭರೋ ಯಮಲಸಸ್ತತ್ರ ಸ್ವಯಂನಿರ್ಭರಃ॥೬೫॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ

ಸಾಙ್ಗಪ್ರಪದನಾಧಿಕಾರೋ ದ್ವಾದಶಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಏಕತ್ರ – ಒಬ್ಬನಾದ ಈಶ್ವರನಲ್ಲಿ ಮಾತ್ರ, **ಸ್ವಾಧೀನತಾ** – ಆ ಕರ್ತೃತ್ವವು ತನಗೆ ಮಾತ್ರವೇ ಸ್ವಾಧೀನವಾಗಿರುವಿಕೆಯು ಎಂದರೆ ಸ್ವತಂತ್ರ ಕರ್ತೃತ್ವವು ಎಂದರೆ ನಿಯಂತೃತ್ವವು ಉಂಟು; ಇದರಿಂದ ಜೀವಾತ್ಮರಲ್ಲಿರುವ ಕರ್ತೃತ್ವವು ಪರಾಯತ್ತವಾಗಿ ಸರ್ವೇಶ್ವರನಿಗೆ ಅಧೀನವಾದುದೆಂಬ ಭಾವವು. ಮೂರರಲ್ಲೂ ಹೇತುತ್ವವೂ, ಎರಡರಲ್ಲಿ ಎಂದರೆ ಜೀವ ಪರಮಾತ್ಮರಲ್ಲಿ ಕರ್ತೃತ್ವವೂ ಪರಮಾತ್ಮನಲ್ಲಿ ಮಾತ್ರ ಸ್ವತಂತ್ರಕರ್ತೃತ್ವವೂ ಉಂಟೆಂದು ಇವರಿಂದ ಉಪದೇಶಿಸಲ್ಪಟ್ಟಿತು. **ತತ್** – ಆ ಕಾರಣದಿಂದ, **ಅಲಸಃ** – ಪರಾಯತ್ತ ಕರ್ತೃತ್ವ ಉಳ್ಳವನಾದುದರಿಂದ ಅಕಿಂಚನಾದವನು, **ಅಯಂ** – ಈ ಪ್ರಪನ್ನನಾಗಿದ್ದಾನೆ. **ಸ್ವಾಮಿ ಸ್ವೀಕೃತಯದ್ಭರಃ** – ಸರ್ವೇಶ್ವರನಿಂದ ಅಂಗೀಕರಿಸಲ್ಪಟ್ಟ ಯಾವ ವಿಷಯದಲ್ಲಿ ಎಂದರೆ ಪ್ರಪತ್ತಿ ಫಲವಾದ ತನ್ನ ರಕ್ಷಣೆ ಮತ್ತು ತತ್ಫಲ ಇವುಗಳಲ್ಲಿನ ಯಾವ ಭರವುಂಟೋ, **ತತ್ರ** – ಆ ರಕ್ಷಣೆ ಫಲಗಳ ವಿಷಯದಲ್ಲಿ, **ಸ್ವಯಂ** – ತಾನು, **ನಿರ್ಭರಃ** – ಯಾವುದೊಂದು ಭರವನ್ನು ವಹಿಸಬೇಕಾದುದಿಲ್ಲವು, ಎಂದರೆ ತಾನು ಕೃತಕೃತ್ಯನಾದವನಾದುದರಿಂದ ಇನ್ನೇನೂ ಮಾಡತಕ್ಕದ್ದಿರುವದಿಲ್ಲವು ಎಂಬ ಭಾವವು.

ತಾತ್ಪರ್ಯ – ಮೂರು ತತ್ವಗಳುಂಟೆಂದು ಹಿಂದೆ ತತ್ವತ್ರಯಾಧಿಕಾರದಲ್ಲಿ ಸ್ಥಾಪಿಸಿದರು. **"ಅತೋ ಭೋಕ್ತಾ ಭೋಗ್ಯಂ ತದುಭಯನಿಯನ್ತ್ರೇತಿ ನಿಗಮೈರ್ವಿಭಕ್ತಂ"** ಎಂಬುವದರಿಂದ, ಈ ತತ್ವತ್ರಯ ಸಿದ್ಧಾನ್ತವು ಶ್ರೀ ಭಾಷ್ಯಕಾರರಿಂದಾಗಲಿ ತಮ್ಮಿಂದಾಗಲಿ ಕಲ್ಪಿತವಲ್ಲವು, ಶ್ರುತಿಸಿದ್ಧವಾದುದೆಂದು ಹೇಳಿದುದನ್ನು ಇನ್ನೊಂದು ಸಲ ಹೇಳಿದರೆ ಉಪದೇಶವು ಪ್ರತಿಷ್ಠಿತವಾಗಿ ಮನಸ್ಸಿನಲ್ಲಿ ನಿಲ್ಲುವದೆಂದು ಭಾವಿಸಿ, ಮೂರು ತತ್ವಗಳುಂಟೆಂದು ಹೇಳುವದಕ್ಕಾಗಿ **ತತ್ವಾನಾಂ ತ್ರಿತಯೇ** ಎಂದು ಪ್ರಯೋಗಿಸಿರುತ್ತಾರೆ ಉತ್ತರಾರ್ಧದಿಂದ ಚಿತ್ತು ಅಚಿತ್ತುಗಳೆರಡೂ ಸರ್ವೇಶ್ವರನಿಗೆ ವಿಶೇಷಣಗಳಾಗಿ, ಸರ್ವೇಶ್ವರನು ವಿಶೇಷ್ಯವೆಂಬ

ಭಾವವೂ ಸೂಚಿತವಾಗುವದರಿಂದ ವಿಶಿಷ್ಟಾದ್ವೈತ ಸಿದ್ಧಾನ್ತವು ಸರ್ವ ಶ್ರುತಿ ಸಮಂಜಸವಾದುದೆಂಬುವದು ಸಮರ್ಥಿಸಲ್ಪಟ್ಟಿತು.

ಈ ಮೂರು ತತ್ವಗಳೆಂಥಾವುಗಳೆಂದರೆ :— **ಯುಗ್ಯಸ್ಯಂದನ ಸಾರಥಿ ಕ್ರಮವತಿ**, ರಥದ ಹಾಗೆ ಮೂರೂ ಒಟ್ಟಿಗಿರುವಂಥಾವು, **ಕುದುರೆಗಳು** ಅನೇಕ ವಾಗಿ ಬಂಧಿಸಲ್ಪಟ್ಟಿರುವದರಿಂದ ಬದ್ಧ ಜೀವರುಗಳನ್ನು ಹೋಲುತ್ತವೆ. **ರಥವು** ಪ್ರಧಾನ ಅಥವಾ ಅಚಿತ್ತನ್ನು ಹೋಲುತ್ತದೆ, **ಸಾರಥಿ**ಯಾದವನು ರಥವನ್ನೂ ಕುದುರೆಗಳನ್ನೂ ನಡಿಸುವದರಿಂದ ಸರ್ವ ಪ್ರೇರಕನಾದ ಸರ್ವೇಶ್ವರನನ್ನು ಸಾರಥಿ ಶಬ್ದವು ಬೋಧಿಸುತ್ತದೆ. ಇದರಿಂದ ಅಶ್ವವು ಹೇಗೆ ರಥಕ್ಕೆ ಸಾರಥಿಯಿಂದ ಹಗ್ಗದಮೂಲಕ ಕಟ್ಟಲ್ಪಟ್ಟಿರುತ್ತದೋ, ಹಾಗೆಯೇ ಈ ಜೀವಾತ್ಮನೂ ಈ ಶರೀರ ದಲ್ಲಿ ಕರ್ಮಮೂಲಕವಾಗಿ ಈಶ್ವರನಿಂದ ಬದ್ಧನಾಗಿ, ಆ ಈಶ್ವರನೇ ಈತನಿಗೆ ಅಂತ ರ್ಯಾಮಿಯಾಗಿ ಈತನ ಸರ್ವ ವ್ಯಾಪಾರಗಳನ್ನೂ ನಡಿಸುವನೆಂಬ ಭಾವವು. ಇದು "**ಭೋಕ್ತಾಭೋಗ್ಯಂ ಪ್ರೇರಿತಾರಂಚಮತ್ವಾ**" ಎಂಬ ಶ್ರುತಿಯಲ್ಲಿ ಹೇಳಲ್ಪ ಟ್ಟಿರುತ್ತದೆಂದು ಹಿಂದೆಯೇ ಉಪಪಾದಿತವಾಗಿರುತ್ತದೆ. ಆದುದರಿಂದ ಈ ಮೂರು ತತ್ವಗಳೂ ಯುಗ್ಯಸ್ಯಂದನ ಸಾರಥಿಯ ಕ್ರಮವನ್ನು ಹೋಲಿರುತ್ತವೆಂದು ಹೇಳುತ್ತಾರೆ.

ಈ ಕ್ರಮವನ್ನು ಹೋಲಿರುತ್ತವೆಂದು ಹೇಳಿರುವದು ತಾವಲ್ಲವು, ಶ್ರುತಿಯೇ ಹಾಗೆ ಉದ್ಘೋಷಿಸಿ ಹೇಳಿರುತ್ತದೆಂದು **ತ್ರಯನ್ತ ಸಂದರ್ಶಿತೇ** ಎಂಬುವದ ರಿಂದ ಬೋಧಿಸುತ್ತಾರೆ. ಆ ಶ್ರುತಿ ಯಾವುದೆಂದರೆ :— "**ಯಥಾಪ್ರಯೋಗ್ಯ ಆಚರಣೇ ಯುಕ್ತ ಏವ ಮೇವಾಸ್ಮಿನ್ ಶರೀರೇ ಪ್ರಾಣೋಯುಕ್ತಃ**" ಇದ ರರ್ಥವು :— **ಯಥಾ** - ಹೇಗೆ, **ಪ್ರಯೋಗ್ಯಃ** - ಯುಗವೆಂದರೆ ನೊಗ ಆದುದರಿಂದ ಇದಕ್ಕೆ ಕಟ್ಟಿರುವ ಅಶ್ವಗಳು, **ಆಚರಣೇ** - ರಥದಲ್ಲಿ, **ಯುಕ್ತಃ** - ಬಂಧಿಸಲ್ಪಟ್ಟಿವೆಯೋ, **ಏವಮೇವ** - ಹಾಗೆಯೇ, **ಅಸ್ಮಿನ್ ಶರೀರೇ** — ಈ ಶರೀರದಲ್ಲಿ **ಪ್ರಾಣಃ** - ಜೀವಾತ್ಮನು, **ಯುಕ್ತಃ** - ಬದ್ಧನಾಗಿರುತ್ತಾನೆ. ಆದರೆ ಇದರಲ್ಲಿ ಈಶ್ವರನು ಸಾರಥಿ ಎಂದು ಹೇಳಲ್ಪಡಲಿಲ್ಲವು. ಈಶ್ವರನು ಸರ್ವಕ್ಕೂ ಅಂತರ್ಯಾಮಿ ಎಂದು "**ತದನುಪ್ರವಿಶ್ಯ**" ಇತ್ಯಾದಿ ಅನೇಕ ಶ್ರುತಿಗಳಿಂದ **ವ್ಯಕ್ತ**ವಾದುದರಿಂದ ಆತನು ಎಲ್ಲಕ್ಕೂ ಸಾರಥಿಯಹಾಗೆ **ಪ್ರೇರಿತಾ** ಎಂಬು ವದೂ ಸುವ್ಯಕ್ತವು.

ಈ ತತ್ವತ್ರಯವೂ ಇನ್ನೂ ಎಂಥಾದ್ದೆಂದರೆ **ಯಥಾರ್ಹ ವಿವಿಧವ್ಯಾಪಾರ ಸಂತಾನನಿ** - ಅವವುಗಳ ಯೋಗ್ಯತಾನುಸಾರ ವ್ಯಾಪಾರ ಪರಂಪರೆಗಳುಳ್ಳವುಗಳು ಹಿಂದೆಯೇ ಅಚೇತನ, ಚೇತನ, ಈಶ್ವರರ ಪ್ರವೃತ್ತಿಗಳಾವುವು ಎಂದು ತತ್ವತ್ರ ಯಾಧಿಕಾರದಲ್ಲೇ ವಿವರಿಸಲ್ಪಟ್ಟವು. ಮುಖ್ಯವಾಗಿ ಇಲ್ಲಿ ನಾವು ಗ್ರಹಿಸತಕ್ಕ

ವ್ಯಾಪಾರಗಳು ಯಾವುವೆಂದರೆ:—ಅಚೇತನದ ವ್ಯಾಪಾರವು **ಸತತವಿಕ್ರಿಯಾ** ಎಂದು ಹೇಳಿರುವದರಿಂದ ಸತತ ಪರಿಣಾಮಶೀಲವಾದುದಾಗಿ ಸ್ವರೂಪವಿಕಾರ ಉಂಟಾಗಿರುವಂಥಾದ್ದು ([illegible]ನೇ ಪುಟ ನೋಡಿ) "**ಈಶ್ವರನುಡೈಯ ಲೀಲಾರಸತ್ತುಕ್ಕುವಾಕ ಸಮವಾಕವುಮ್ ವಿಷಮವಾಕವುಮ್ ಪರಿಣಾಮಸನ್ತತಿಯುಡೈತ್ತಾಯ್ ದೇಹೇನ್ದ್ರಿಯಾದಿ ರೂಪತ್ತಾಲೆ ಅನ್ಯೋನ್ಯವ್ಯಾಪಾರಙ್ಗಳೈಯುಮ್ ಪಣ್ಣುಗೈ**" ಹೀಗೆ ಅಚೇತನವು ವಿವಿಧ ವ್ಯಾಪಾರ ಸಂತತಿಯುಳ್ಳದ್ದು. ಬದ್ಧಚೇತನನಿಗೆ ಹೀಗೆ ಸ್ವರೂಪ ಪರಿಣಾಮರೂಪ ವ್ಯಾಪಾರವಿಲ್ಲದಿದ್ದರೂ, ಈಶ್ವರಾಧೀನನಾಗಿಯೂ ಈಶ್ವರನಿಗೇ ಪ್ರಯೋಜನವಾಗಿರುವ ಕರ್ತೃತ್ವಾದಿಗಳು ([illegible]ನೆಯ ಪುಟ ನೋಡಿ). ಇವುಗಳು ಪುಣ್ಯ ಪಾಪಾನುಭವರೂಪಗಳಾದ ನಾನಾ ವಿಧ ವ್ಯಾಪಾರಗಳು ([illegible]ನೆಯ ಪುಟ ನೋಡಿ,) ಈಶ್ವರವ್ಯಾಪಾರಗಳು—ಸರ್ವಶಕ್ತನೂ ಆತನು ನಿಯಾಮಕನಾಗಿ ಸತ್ತಾದಾಯಕನಾಗಿ ತನ್ನ ಆನಂದಕ್ಕಾಗಿ ಮಾಡುವ ಜಗತ್ತಿನ ಸೃಷ್ಟಿ, ಸ್ಥಿತಿ, ಅನ್ತಃ, ಪ್ರವೇಶ, ನಿಯಮನ, ಲಯಾದಿಗಳು. ಇವುಗಳಲ್ಲೆಲ್ಲಾ ಈತನಿಗೆ ಸ್ವತಂತ್ರ ಕರ್ತೃತ್ವವುಂಟು. ಹೀಗೆ ತತ್ತ್ವತ್ರಯವೂ ವಿವಿಧವ್ಯಾಪಾರಸಂತತಿಯುಳ್ಳದ್ದು. ಈ ವ್ಯಾಪಾರಗಳು ಈ ತತ್ತ್ವತ್ರಯದಿಂದ ಸದಾ ಪರಂಪರಾರೂಪದಲ್ಲಿ ಉಂಟಾಗುವದರಿಂದಲೇ **ವ್ಯಾಪಾರಸಂತಾನನಿ** ಎಂಬ ಪ್ರಯೋಗವು. ಅಚೇತನವಾದ ಪ್ರಕೃತಿಯಲ್ಲಿ ಯಾವಾಗಲೂ ಪರಿಣಾಮಹೊಂದುವ ವ್ಯಾಪಾರವೂ, ಚೇತನದಲ್ಲಿ ಪರಾಧೀನ ಕರ್ತೃತ್ವವೂ ಸರ್ವೇಶ್ವರನಲ್ಲಿ ಸಂಕಲ್ಪರೂಪ ಸ್ವತಂತ್ರಕರ್ತೃತ್ವಗಳೂ ಇಲ್ಲಿ ವಿವಕ್ಷಿತಗಳು.

ಈಶ್ವರನು ಎಲ್ಲಾದರಲ್ಲೂ ಇರುವನು; ಚಿತ್ತು ಅಚಿತ್ತಿನೊಂದಿಗೆ ಯಾವಾಗಲೂ ಇರುವಂಥಾದ್ದು, ಈಶ್ವರನು ಎಲ್ಲಾದರಲ್ಲೂ ಇರುವದರಿಂದ ಚೇತನಾಚೇತನನೊಂದಿಗೂ ಇರುವನು; ಹೀಗೆ ಸೂಕ್ಷ್ಮ ಚಿದಚಿದ್ವಿಶಿಷ್ಟನಾದ ಈಶ್ವರನು ಕಾರಣವಾಗಿ, ಇವುಗಳೇ ಸ್ಥೂಲರೂಪದಲ್ಲಿ ಕಾರ್ಯವಾಗಿ ಸ್ಥೂಲ ಚಿದಚಿದ್ವಿಶಿಷ್ಟ ಈಶ್ವರನಾಗುವದರಿಂದ ಈ ಮೂರರಲ್ಲೂ ಹೇತುತ್ವ ಉಂಟೆಂದು, **ಹೇತುತ್ವಂ ತ್ರಿಷು** ಎಂಬುವದರಿಂದ ಹೇಳಿರುತ್ತಾರೆ.

ಹೀಗೆ ಮೂರೂ ಕಾರಣದಲ್ಲಿದ್ದುದು ಕಾರ್ಯದಲ್ಲೂ ಇರುವದರಿಂದ **ಹೇತುಭಾವವು ಮೂರಕ್ಕೂ** ಇದ್ದರೂ, ಅಚೇತನವು ಕ್ರಿಯಾ ವಿಷಯದಲ್ಲಿ ಸ್ವಾವಿಷ್ಟ ಸಂಕಲ್ಪ ಮೂಲಕ ಕ್ರಿಯೆಗೆ ಮಾತ್ರ ಆಶ್ರಯವಾಗಿರುವ ವ್ಯಾಪಾರ ಉಳ್ಳದ್ದೇ ವಿನಾ, ಅದಕ್ಕೆ ಕರ್ತೃತ್ವವಿಲ್ಲವು ಎಂದರೆ ಕ್ರಿಯೆಯನ್ನು ಸಂಕಲ್ಪಿಸಿ ಪ್ರಯತ್ನ ಮಾಡಿ ಕಾರ್ಯವನ್ನು ಮಾಡುವ ಶಕ್ತಿರೂಪವಾದ ಕರ್ತೃತ್ವವು ನಿಃಕ್ಕ ಚೇತನರು ಈಶ್ವರನಿಗೆ ಮಾತ್ರವೇ ಎಂದು "**ಕರ್ತೃಭಾವ ಉಭಯೋಃ**" ಎಂಬುದರಿಂದ ಉಪದೇಶಿಸುತ್ತಾರೆ. ಈಶ್ವರನಿಗೇನೋ ಕರ್ತೃತ್ವ ಉಂಟೆಂದು ಆತ

ರೆಲ್ಲರೂ ಅಂಗೀಕರಿಸುವರು, ಶ್ರುತಿಗಳೂ ಹಾಗೆಯೇ ಹೇಳುತ್ತವೆ. ಜೀವನಿಗೂ ಹಾಗೆಯೇ ಕರ್ತೃತ್ವ ಉಂಟೆಂದು "ಕರ್ತಾ ಶಾಸ್ತ್ರಾರ್ಥವತ್ವಾತ್" ಎಂಬ ಬ್ರಹ್ಮ ಸೂತ್ರದಲ್ಲಿ (೨. ೩. ೧) ಹೇಳಲ್ಪಟ್ಟಿರುತ್ತದೆ. ಈತನಿಗೆ ಸರ್ವೇಶ್ವರನು ಕರಣ ಕಳೇಬರಗಳನ್ನು ಕೊಟ್ಟು ಆತನು ದಯಪಾಲಿಸಿದ ಜ್ಞಾನಮೂಲಕ ಶ್ರುತಿಗಳ ವಿಧಿ ನಿಷೇಧಗಳಿಗನುಸಾರವಾಗಿ ಆಚರಿಸಲೆಂದು ಆತನು ಸಙ್ಕಲ್ಪಿಸಿರುವದರಿಂದ ಈ ಕರ್ತೃತ್ವವು ಆತನಿಗೂ ಅಧೀನವು

ಆದರೆ ಈ ಜೀವಾತ್ಮನಿಗೂ ಈಶ್ವರನಿಗೂ ಇರುವ ಕರ್ತೃತ್ವದಲ್ಲಿ ತುಂಬಾ ವ್ಯತ್ಯಾಸ ಉಂಟು. ಜೀವರುಗಳ ಕರ್ತೃತ್ವವು ಸ್ವಾಮಿ ಸಙ್ಕಲ್ಪಕ್ಕಧೀನವಾದುದು ಅವರವರುಗಳ ಸುಕೃತ ದುಷ್ಕೃತಾನುಸಾರ ಸರ್ವೇಶ್ವರನು ಇವರನ್ನು ಪ್ರೇರಿಸು ವದರಿಂದಲೂ, ಅವುಗಳನ್ನು ಸರ್ವೇಶ್ವರನು ಕೊಟ್ಟ ಜ್ಞಾನ ವಿವೇಕ ಮೂಲಕ ಅವರು ಮಾಡುವದರಿಂದಲೂ ಅವರ ಕರ್ತೃತ್ವವು ಪರಾಯತ್ತವಾದುದು. ಸರ್ವೇ ಶ್ವರನ ಸಙ್ಕಲ್ಪವು ಹೀಗೆ ಇನ್ನಾರಿಗೂ ಅಧೀನವಾಗಿರದೆ, ಸರ್ವವೂ ಸರ್ವೇಶ್ವರನ ಸಙ್ಕಲ್ಪಕ್ಕೆ ಅಧೀನವಾಗಿರುವದರಿಂದ ಸ್ವಾಧೀನತ್ರಿಕರ್ತೃ ಎಂದು ಪ್ರಯೋಗಿಸಿ ರುತ್ತಾರೆ. ಈ ಅಭಿಪ್ರಾಯವು "ಪರಾತ್ತು ತಚ್ಛ್ರುತೇಃ" ಎಂಬ ಸೂತ್ರದಲ್ಲಿ ಇವನ ಕರ್ತೃತ್ವವೆಲ್ಲಾ ಅಂತರ್ಯಾಮಿತ್ವೇನನಿರುವ ಸರ್ವೇಶ್ವರನಿಗೆ ಅಧೀನವಾದು ದೆಂದು ಹೇಳುತ್ತದೆ. ಆಗ ಶ್ರುತಿಯಲ್ಲಿ ಹೇಳಿರುವ ವಿಧಿ ನಿಷೇಧವಾಕ್ಯಗಳಿಗೆ ಈತನು ಹೇಗೆ ಬದ್ಧನಾದಾನು, ಶ್ರುತಿಯ ವಿಧಿ ನಿಷೇಧವಾಕ್ಯ ವೈಯರ್ಥ್ಯ ಉಂಟಾಗ ಲಿಲ್ಲವೇ ಎಂಬ ಪೂರ್ವಪಕ್ಷ ಬಂದರೆ ಮುಂದಿನ ಸೂತ್ರವು ಸಮಾಧಾನ ಹೇಳು ತ್ತದೆ :—ಕೃತಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾವೈಯರ್ಥ್ಯಾದಿಭ್ಯಃ, ಈ ಜೀವನ ಕರ್ತೃತ್ವವು ಪರಮಾತ್ಮನಿಗೆ ಅಧೀನವಾದರೂ ಜೀವನ ಸ್ವಬುದ್ಧಿಯಿಂದ ಮಾಡಲ್ಪಟ್ಟ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಇದರಿಂದ ಯಾವಾಗ ವಿಧಿ ನಿಷೇಧರೂಪ ಶಾಸ್ತ್ರವಾಕ್ಯಕ್ಕೆ ವೈಯರ್ಥ್ಯವಿಲ್ಲವೋ, ಆಗ ಈ ಜೀವನ್ನು ಸರ್ವೇಶ್ವರನ ನಿಗ್ರಹಾನುಗ್ರಹಗಳಿಗೂ ಪಾತ್ರನಾದನು. ಹಾಗಿಲ್ಲದ ಪಕ್ಷದಲ್ಲಿ ಸರ್ವೇಶ್ವರನು ಶಾಸ್ತಾವಾಗಲು ಕಾರಣವೇ ಉಂಟಾಗುವದಿಲ್ಲವು ಇದೇ ಅಭಿಪ್ರಾಯವು ಗೀತೆಯಲ್ಲೂ,

ಅಧಿಷ್ಠಾನಂ ತಥಾಕರ್ತಾ ಕರಣಂ ಚ ಪೃಥಗ್ವಿಧಂ ।

ವಿವಿಧಾ ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಂ । (೧೮-೧೪

ಎಂಬಲ್ಲಿ ಉಪಪಾದಿತವಾಗಿರುತ್ತದೆ ಶಾಸ್ತ್ರ ವಿಹಿತವಾದುದೇಯಾಗಲಿ, ಶಾಸ್ತ್ರ ವಿರುದ್ಧವಾದುದೇಯಾಗಲಿ ಇರುವ ಯಾವ ಕರ್ಮವನ್ನೇಯಾಗಲಿ ಮನುಷ್ಯನು ಮಾಡಲುಪಕ್ರಮಿಸಿದರೆ, ಅಂತಹ ಕರ್ಮಕ್ಕೆ ಐದು ಕಾರಣಗಳುಂಟೆಂದು ಇಲ್ಲಿ ಹೇಳ

ಲ್ಪಟ್ಟಿವೆ. (೧) ಜೀವನ ಶರೀರವು (೨) ಕರ್ತೃವಾದ ತಾನು, (೩) ಕರ್ಮನಿಷ್ಪತ್ತಿಗೆ ಬೇಕಾದ ಇಂದ್ರಿಯಗಳು (೪) ಶರೀರದಲ್ಲಿರುವ ಪಂಚವಿಧ ವಾಯುವೂ (೫) ಮತ್ತು ಮುಖ್ಯ ಕಾರಣವಾದ ದೈವಮೇವಚ. ಸರ್ವಾಂತರ್ಯಾಮಿಯಾದ ಪರಮಾತ್ಮನು. ಇಲ್ಲಿಯೂ ಜೀವಾತ್ಮನನ್ನು ಕರ್ತೃವೆಂದು ಹೇಳಿ ಪರಮಾತ್ಮನನ್ನು ಪ್ರಧಾನಕರ್ತೃವೆಂದುಪದೇಶಿಸುತ್ತದೆ. ಇದರಿಂದ ಪರಮಾತ್ಮನಿಗೆ ಸ್ವತಂತ್ರ ಕರ್ತೃತ್ವವೂ ಜೀವಾತ್ಮನಿಗೆ ಈಶ್ವರಾಯತ್ತ ಕರ್ತೃತ್ವವೂ ಉಂಟೆಂದು ವಿಶದಪಟ್ಟಿತು.

ಹೀಗೆ ಈಶ್ವರ ಸಂಕಲ್ಪಾಧೀನನಾಗಿರುವುದರಿಂದಲೇ ಈ ಪ್ರಪನ್ನನೂ ಕೂಡ ಅಲಸನು, ಅಕಿಂಚನನು, ಆದುದರಿಂದ ಸರ್ವೇಶ್ವರನೇ ಗತಿಯಾಗುಳ್ಳವನಾದುದರಿಂದ, ಶಾಸ್ತ್ರದಲ್ಲಿ ಹೇಳಿರುವ ಹಾಗೆ,

"ಸರ್ವಲೋಕಶರಣ್ಯಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥
"ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।"
"ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ
ಮೋಕ್ಷಯಿಷ್ಯಾಮಿ", ಆತ್ಮಾನಂ ಮಯಿ ನಿಕ್ಷಿಪೇತ್ । ಮಯಿ ನಿಕ್ಷಿ
ಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ"

ಇತ್ಯಾದಿ ಪ್ರಮಾಣಗಳಲ್ಲಿ ತೋರುವ ಹಾಗೆ ಸರ್ವೇಶ್ವರನು ಈ ಭರನ್ಯಾಸವನ್ನು ಅಂಗೀಕರಿಸುತ್ತೇನೆಂದು ಹೇಳಿಕೊಂಡಿರುತ್ತಾನೆ. ಯಾವಾಗ ಈ ಭರನ್ಯಾಸವು ಅನುಷ್ಠಿಸಲ್ಪಟ್ಟಿತೋ, ಒಡನೆ ಸರ್ವೇಶ್ವರನು ರಕ್ಷಣಫಲ ಮೊದಲಾದವುಗಳ ಭರವನ್ನೆಲ್ಲಾ ಆತನೇ ವಹಿಸುವದರಿಂದ, ಅವುಗಳ ವಿಷಯದಲ್ಲಿ ಸ್ವಯಂ ನಿರ್ಭರಃ, ತನಗೆ ಮುಂದೆ ಯಾವುದೊಂದು ಭರವೂ ಇರುವದಿಲ್ಲವು ಆದುದರಿಂದ ತಾನು ಆಗ ಕೃತಕೃತ್ಯನಾದವನೆಂಬ ಮುಂದಿನ ಅಧಿಕಾರ ಸೂಚನೆಯು ತೋರಿಬರುತ್ತದೆ.

ಇಂತು ಶ್ರೀಮದ್ರಹಸ್ಯತ್ರಯಸಾರದ ಹನ್ನೆರಡನೆಯ
ಸಾಙ್ಗಪ್ರಪದನಾಧಿಕಾರಕ್ಕೆ
ಶ್ರೀನಾರಾಯಣಪುರಂ ವಿಜಯರಾಘವ ಶರ್ಮನ
ಆಚಾರ್ಯ ಹೃದಯಾನ್ವೇಷಿಣೀ
ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದವು.
ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಶುದ್ಧಾಶುದ್ಧಪತ್ರಿಕೆ

ಪೇಜು	ಪಜ್ತಿ	ಅಶುದ್ಧ	ಶುದ್ಧ
೯೪೭	೭	ವೈಷಷ್ಯ	ವೈಷಮ್ಯ
೯೪೯	೧೯	ಅನಂತರ	ಅನಂತರ
೯೫೩	೨೩	ಸಮುಚ್ಚಯತ್ರಿಲೆ	ಸಮುಚ್ಚಯತ್ರಾಲೆ
೯೫೪	೧೩	ಪರಸ್ಪರೆ	ಪರಸ್ಪರ
೯೫೫	೧೪	ವಾದ	ವಾದವು
೯೫೬	೧೦	ವಿಲ್ಲವು,	ವಲ್ಲವು,
೯೫೮	೧೧	ಸಮುಸ್ಸರ್ಸ	ಸಮುಸ್ಸರ್ವ
೯೫೯	೧೭	ತಸ್ಯಾಧಸಕ್ತ	ತಸ್ಮಾದಸಕ್ತ
೯೬೧	೧೮	ಈ ಸಂದರ್ಭದಲ್ಲಿ	ಇದು ಬೇಕಿಲ್ಲವು,
೯೭೯	೨೩	ಉಂಟೋ ಇಲ್ಲವೋ	ಉಂಟೋ ಇಲ್ಲವೋ ;
೯೭೦	೧೩	ಅಂಶಹ	ಅಂತಹ
,,	೧೮	ಉಂಟದಾವಡು	ಉಂಟುಮಾಡುವ
೯೭೧	೧೨	ಉಪಾಯನಾಗ	ಉಪಾಯನಾಗು
	೨೪	ಲಕ್ಷೀಶಂ	ಲಕ್ಷ್ಮೀಶಂ
೯೭೨	೯	ಹೋಗವ	ಹೋಗುವ
"	೨೩	ಆದಕ್ಕಾಗಿ	ಅದಕ್ಕಾಗಿ
೯೭೫	೩	ರಾಕ್ಷಸಿಗಳುಕ್ಯ	ರಾಕ್ಷಸಿಗಳುಕ್ಕ
೯೭೬	೨೧	ಆದಕಾರಣದಿಂದ	ಆ ಕಾರಣದಿಂದ
,,	೨೩	ಮುಂದಿನು	ಮುಂದಿನ
೯೮೨	೧೯	ಸಹಿತಾ	ಸ್ವಹಿತಾ
೯೮೬	೧೭	ರಾಮುಗೋಷ್ಠಿ	ರಾಮ ಮತ್ತು ರಾಮುಗೋಷ್ಠಿ
೯೯೪	೨೪	ಆನ್ಯಾಯವಾಗಿ	ಅನ್ಯಾಯವಾಗಿ
೯೯೭	೩	ಮಾಡಿದು	ಮಾಡಿದ
೧೦೦೨	೧೦	ಅಭಿಪ್ರಾಯವು	ಅಭಿಪ್ರಾಯವು.
೧೦೦೩	೪	ಆರ್ವ	ಅರ್ವ
೧೦೦೪	೨೫	ಏಂದು	ಎಂದು

೧೦೦೫	೧೬	ಅರ್ಥನಾಗಿ	ಅರ್ಥವಾಗಿ
೧೦೦೬	೧೧	ವಿಶೇಷಣಗಳೇ	ಈ ವಿಶೇಷಣಗಳೇ
,,	೧೨	ಈ ಕಾರಣ	ಕಾರಣ
,,	೨೧	ಶಕ್ತಿಯುವನು	ಶಕ್ತಿಯುಳ್ಳವನು
೧೦೦೭	೨೬	ನಾಲ್ಕನೇ	ನಾಲ್ಕನೆಯ
೧೦೦೮	೧೦	ಆದರ	ಆದರ
೧೦೦೯	೧೧	ಅರ್ಥಳಾಯಾಗಿ	ಅರ್ಥಳಾಗಿ
೧೦೧೮	೨೪	ಅಷ್ಟು	ಅಷ್ಟು
೧೦೧೯	೧೬	ತ ಅಲ್ಪ	ಇಂತಹ ಅಲ್ಪ
೧೦೨೩	೧೪	ಸಙ್ಕಲ್ಪ	ಸಙ್ಕಲ್ಪ
೧೦೨೫	೧೬	ಎಂಬಾರ್ರವರು	ಎಂಬಾರ್ರವರ
೧೦೨೭	೪	ಸದನು ಸಕೃಂಧಾನ	ಸಕೃದನು ಸಂಧಾನ
೧೦೨೬	೧೫	ಕೂಣ್ಡಿಪ್ಪೇರು	ಕೊಣ್ಡೆಪ್ಪೇರು
೧೦೩೨	೧೦	ಹೇಳಿದರು	ಹೇಳಿದರು
೧೦೩೩	೨೨	ಅ ಅಹಂ	ಆ ಅಹಂ
,,	೧೪	ಅಹಿ	ಅಹಿ
೧೦೩೪	೧೮	ಭಾವವು	ಭಾವವು ;
೧೦೩೬	೧	ಉಪಾಯಾರ್ಥಕ	ಉಪಾಯಾರ್ಥೈಕ
,,	೮	ನಿನೇ	ನೀನೇ
೧೦೩೭	೨೩	ಅರ್ಥ	ಅರ್ಥ
,,	೨೭	ಯಿರುಕ್ಕೈಯಿಲುವ್	ಯಿರುಕ್ಕೈಯಾಲುವ್
೧೦೪೧	೩	ನಿಷ್ಪ	ನಿಷ್ಠ
೧೦೪೨	೧೬	ಇಷಾದರೂ	ಇಷ್ಟಾದರೂ
೧೦೪೩	೨೦	ಆಚಾರ್ಯರು	ಆಚಾರ್ಯರು
೧೦೫೧	೪	ಅದ್ದ	ಅದು
೧೦೫೪	೧೫	ತಿಳಿಳಿದರು	ತಿಳಿದರು
೧೦೬೦	೨	ಹೇಳಿದಂತಾಯಿತು	ಹೇಳಿದಂತಾಯಿತು.
೧೦೬೧	೧೧	ತೇಷಿ	ಶೇಷಿ
೧೦೬೩	೧೬	ಕರ್ತ್ರಾವಾಗ್ರಿ	ಕರ್ತ್ರಾವಾಗಿ
೧೦೬೪	೬	ಎನ್ರ	ಎನ್ರು
೧೦೬೫	೧೯	ನಿಯಮಿತ	ನಿಯತ
೧೦೬೬	೧೯	ಸಮಾಯಾ	ಸಮಯಾ

೧೦೭೦	೨೨	ಹೇಳಿರುವದಂದ	ಹೇಳಿರುವದರಿಂದ
೧೦೭೨	೨೭	ಆತ್ಮಾಸಮುಯಾ	ಆತ್ಮಸಮುಯಾ
೧೦೭೭	೫	ಆವೆಲ್ಲವು	ಅವೆಲ್ಲವೂ
೧೦೭೯	೫	ಬ್ರಹ್ಮಣೆ	ಬ್ರಹ್ಮಣಿ
೧೦೮೧	೧೮	ಆತಾ	ಆತ್ಮಾ
೧೦೮೫	೧೦	ತಾತ್ವಾಂ	ತಾಂತ್ವಾಂ
೧೦೮೭	೨೭	ಹಿಂದಿ	ಹಿಂದಿನ
೧೦೯೪	೧೧	ಆರ್ಥವಾಗಿ	ಅರ್ಥವಾಗಿ
"	೧೪	ಸ್ವರಕ್ಷಾಭರ	ಸ್ವರಕ್ಷಾದಿ ಭರ
೧೧೦೦	೨೮	ಭರನ್ಯಾಸರೂಪ್ಯ	ಭರನ್ಯಾಸರೂಪ
"	೨೯	ಕೈಂಕರ	ಕೈಂಕರ್ಯ
೧೧೧೦	೨೫	ಕೃಪೆಯ	ಕೃಪೆಯು
೧೧೨೧	೧೩	ಲಭಿಸುವವು	ಲಭಿಸುವವು.
೧೧೨೬	೨೦	ಯುಗ್ಯವೆಂದು	ಯುಗ್ಯವೆಂದರೆ
೧೧೨೯	೧೨	ಅನ್ತಃ, ಪ್ರವೇಶ	ಅನ್ತಃಪ್ರವೇಶ

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯ ಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ

ಶ್ರೀ ನಿಗಮಾನ್ತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀ ರಂಗನಾಥಸ್ತೋತ್ರವು ೦ ೧೨

೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀ ಸ್ತೋತ್ರವು ೦ ೧೨

೩. ಶ್ರೀಮದ್ರಹಸ್ಯತ್ರಯಸಾರವು :—
ಗುರುಪರಂಪರಾಸಾರವು ೦ ೧೨

೪. ಶ್ರೀಮದ್ರಹಸ್ಯತ್ರಯಸಾರವು :—
ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು ೦ ೯

೫. ಶ್ರೀಮದ್ರಹಸ್ಯತ್ರಯಸಾರವು :—
ಪ್ರಧಾನಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು ೦ ೧೨

೬. ಶ್ರೀಮದ್ರಹಸ್ಯತ್ರಯಸಾರವು :—
ತತ್ವತ್ರಯಾಧಿಕಾರವು ೦ ೧೨

೭. ಶ್ರೀಮದ್ರಹಸ್ಯತ್ರಯಸಾರವು :—
ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು ೦ ೧೦

೮. ಶ್ರೀಮದ್ರಹಸ್ಯತ್ರಯಸಾರವು :—
ಅಧಿಕಾರಿವಿಭಾಗಾಧಿಕಾರವು, ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು ೦ ೯

೯. ಶ್ರೀಮದ್ರಹಸ್ಯತ್ರಯಸಾರವು :—
ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು ೦ ೧೧

೧೦ ಶ್ರೀಮದ್ರಹಸ್ಯತ್ರಯಸಾರವು :—
ಕೃತಕೃತ್ಯಾಧಿಕಾರವು ಪ್ರಿಂಟಾಗುತ್ತಿ

೧೧. ಶ್ರೀ ಯಾಮುನೇಯರವರ ಚತುಶ್ಶ್ಲೋಕೀ ೦ ೮

ಮೂರು ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸುವವರಿಗೆ ಮು
ಅಚ್ಚಾಗುವ ಪುಸ್ತಕಗಳು ಪೋಸ್ಟು ಚಾರ್ಜ ಇಲ್ಲದೆ ಕಳುಹಿಸಲ್ಪಡುವುವು.

ಸಿ. ಎಂ. ವಿಜಯರಾಘವಾಚಾರ್,
ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟ
ಬಸವನಗುಡಿ, ಬೆಂಗಳೂರು ಸಿಟಿ.